
ॐ

卐 सर्वे भवन्तु सुखिनः 卐

श्री गजानन संस्थान, शेगांव.



# ॥ ಶ್ರೀಗಜಾನನ ವಿಜಯ ಗ್ರಂಥ ಪ್ರಾರಂಭ ॥

ಪ್ರಕಾಶಕ
**ಶ್ರೀ ಶಿವಶಂಕರ ಸುಖದೇವ ಪಾಟೀಲ**
ವ್ಯವಸ್ಥಾಪಕೀಯ ವಿಶ್ವಸ್ಥ
ಶ್ರೀ ಗಜಾನನ ಮಹಾರಾಜ ಸಂಸ್ಥಾನ, ಶೇಗಾಂವ್
ಸೆಂಟ್ರಲ್ ರೇಲ್ವೆ (ವಿದರ್ಭ) ಮಹಾರಾಷ್ಟ್ರ

ಮುದ್ರಕ
**ಶ್ರೀ ವಿ. ನಾ. ಭಂಡಾರೆ**
ಸ್ವಾನಂದ ಪ್ರಿಂಟರ್ಸ್
೧೨೦೪/೨೪, ಡೆಕ್ಕನ್ ಜಿಮ್‌ಖಾನಾ
ಪುಣೆ - ೪೧೧ ೦೦೪.


ಈ ಗ್ರಂಥದ ಎಲ್ಲ ಹಕ್ಕುಗಳು ಶ್ರೀ ಗಜಾನನ ಸಂಸ್ಥಾನ, ಶೇಗಾಂವ್ (ವಿದರ್ಭ)
ಇವರ ಸ್ವಾಧೀನ ಇವೆ.

ಕನ್ನಡ ಗ್ರಂಥ ದ್ವಿತೀಯಾವೃತ್ತಿ ಜುಲೈ - ೨೦೦೮

ಬೆಲೆ : ರೂ. ೪೦/-



ಶ್ರೀ ಗಜಾನನ ಮಹಾರಾಜ, ಶೇಗಾಂವ್



ಶ್ರೀ ಗಜಾನನ ಮಹಾರಾಜರು ಎಂಜಲು ಎಲೆಯಲ್ಲಿಯ ಅಗಳುಗಳನ್ನು ಆರಿಸಿ ತಿನ್ನುತ್ತಿದ್ದಾರೆ.

## || ಅಧ್ಯಾಯ ೧ ||

ಶ್ರೀ ಗಣೇಶಾಯನಮಃ । ಜಯ ಜಯಾಜೀ ಹೇ ಗೌರಿಪುತ್ರ, ಗಣಪತಿ ಮಯೂರೇಶ್ವರ । ಪ್ರತಿ ಕಾರ್ಯಾರಂಭದಲ್ಲಿ ಮಹಾನ ವಿದ್ವಾನರು, ಸಾಧುಸಂತರು, ಸತ್ಪುರಷರು, ತಮ್ಮ ಸ್ಮರಣೆ ಮಾಡದೇ ಮುಂದೆ ಸಾಗುವದಿಲ್ಲ। ಏಕೆಂದರೆ, ಯಾವ ತರಹ ಅಗ್ನಿಯ ಸ್ಪರ್ಶದಿಂದಲೇ ಹತ್ತಿಯು ಭಸ್ಮವಾಗತ್ತದೆಯೋ ಅದೇ ರೀತಿ ತಮ್ಮ ಕೃಪೆಯಿಂದಲೇ ಎಲ್ಲ ವಿಪತ್ತಿಗಳು, ಎಲ್ಲ ಅಡೆತಡೆಗಳು ನಷ್ಟವಾಗಿ ಹೋಗುತ್ತವೆ । ಆದ್ದರಿಂದ ನಾನು (ದಾಸಗಣು – ಚರಿತ್ರೆಯ ಲೇಖಕ) ವಿನೀತನಾಗಿ ಪ್ರಾರ್ಥಿಸುವದೆನೆಂದರೇ – ನನಗೆ ನಿನ್ನ ಕೃಪೆ ಹಾಗೂ ಆಶೀರ್ವಾದವನ್ನು ಕೊಡು ಮತ್ತು ಸುರಸ ಪದ್ಯರಚನೆಯನ್ನು ಮಾಡುವ ಶಕ್ತಿಯನ್ನು ದಯಪಾಲಿಸು । ನಾನಾದರೆ ಅಜ್ಞಾನಿ ಹಾಗೂ ಮಂದಮತಿ । ನನ್ನಲ್ಲಿ ಕವಿತ್ವದ ಶಕ್ತಿಯೇ ಇಲ್ಲ। ಆದರೆ ತಮ್ಮ ಕೃಪೆಯಾದರೆ ನನ್ನ ಈ ಕಾರ್ಯವು ನಿಶ್ಚಿತವಾಗಿ ಸಫಲವಾಗುವದು। ಬ್ರಹ್ಮನ ಪ್ರಕೃತಿ ಎನ್ನಿಸಿದ ಮತ್ತು ಕವಿಜನರ ಸ್ಫೂರ್ತಿಸ್ಥಾನಳಾದ ಸರಸ್ವತಿಗೆ ನನ್ನ ಸಾಷ್ಟಾಂಗ ನಮಸ್ಕಾರಗಳು । ನಾನು ನಿನ್ನ ಬಾಲಕನಂತೆ । ನನ್ನ ಲಜ್ಜೆ–ಕಜ್ಜೆ ನಿನ್ನ ಕೈಯಲ್ಲಿದೆ । ನಿನ್ನ ಕೃಪೆಯಿಂದಲೇ ಕುಂಟನು ಮತ್ತು ಹೆಳವನು ಗಿರಿಶಿಖರಗಳನ್ನು ಏರುತ್ತಾನೆ ಮತ್ತು ಮೂಕನು ಮಾತನಾಡುತ್ತಾನೆ । ಇಂಥ ನಿನ್ನ ಅಪಾರ ಮಹಿಮೆಗೆ ನನ್ನಿಂದ ಕಪ್ಪು ಕಲಿ ತಗಲಬಾರದು । ಆದ್ದರಿಂದ ಈ ಗ್ರಂಥವನ್ನು ಬರೆಯಲು ದಾಸಗಣುಗೆ ಸಹಾಯಮಾಡು । ಈ ಪುರಾಣ ಪುರುಷ ಪಾಂಡುರಂಗ, ಪಂಢರೀಶ, ಸಚ್ಚಿದಾನಂದ, ರಮೇಶ! "ಪಾಹಿಮಾಮ್" ದೀನಬಂಧು! ತಾವು ಜಗದಾಧಾರರು, ಚರಾಚರರಲ್ಲಿ ವ್ಯಾಪ್ತರು, ಕರ್ತಾ–ಧರ್ತಾ ತಾವು, ಅಷ್ಟೆ ಅಲ್ಲದೇ, ನೀವು ಸರ್ವವ್ಯಾಪಿ । ಜಗತ್ತಿನಲ್ಲಿ, ಜನತೆ ಮತ್ತು ಜನಾರ್ಧನರಲ್ಲಿ ಕೇವಲ ತಾವೇ ಪರಿಪೂರ್ಣರು । ಸಗುಣ ಹಾಗೂ ನಿರ್ಗುಣದ ಅಭಿನ್ನರೂಪ । ತಮ್ಮ ಅಪಾರ ಮಹಿಮೆಯನ್ನು ಮಹಾನುಭಾವರು ಕೂಡಾ ಅರಿಯರು, ನಾನಾದರೇ ಒಬ್ಬ ಅಜ್ಞಾನಿ ದಾಸಗಣು, ನಾನು ಅದನ್ನು ಹೇಗೆ ಅರಿಯಲ್ಲಿ ? ಶ್ರೀಕೃಷ್ಣನ ಕೃಪೆಯಿಂದ ಗೋಪ ಬಾಲಕರು ಶಕ್ತಿಶಾಲಿಯಾದರು । ತಮ್ಮ ಕೃಪಾಶೀರ್ವಾದಕ್ಕೆ ಧನಸಂಪತ್ತಿಯು ಬೇಕಿಲ್ಲ।
ಯಾವನು ಆಂತರಿಕ ಭಾವನೆಯಿಂದ ತಮಗೆ ಶರಣು ಹೋಗುತ್ತಾನೆ, ಅವನ ಮೇಲೆ ತಮ್ಮ ಕೃಪಾದೃಷ್ಟಿ ಆಗುತ್ತದೆ । || 1 ||

ಈ ವಿಷಯದಲ್ಲಿ ಸಂತ ಮಹಂತರು ಸಹಮತರಾಗಿರುವರು । ಈ ವಿಶ್ವಾಸದಿಂದಲೇ ನಾನು ತಮ್ಮ ಬಾಗಿಲಲ್ಲಿ ಬಂದಿರುವೆ। ರಮಾಕಾಂತನೇ, ನನ್ನ ಮೇಲೆ ಕೃಪೆ ಮಾಡು । ನನ್ನನ್ನು ಬರಿಗೈಯಿಂದ ಹಿಂದಕ್ಕೆ ಕಳುಹಿಸಬೇಡಿರಿ । ಪಂಢರಿರಾಯರೇ, ತಮ್ಮ ಕೃಪಾದೃಷ್ಟಿ ಹಾಗು ಸಹಾಯದಿಂದಲೆ ಈ ಸಂತ ಚರಿತ್ರೆಯು ಪೂರ್ಣವಾಗವದು ಸಾಧ್ಯ । ಹೇ ಭವ–ಭಾವಾಂತಕ , ಭವಾನಿವರ, ನೀಲಕಂಠ, ಗಂಗಾಧರ, ಓಂಕಾರರೂಪ ತ್ರ್ಯಂಬಕೇಶ್ವರ, ತಮ್ಮ ವರದಹಸ್ತವನ್ನು ನನಗೆ ದಯಪಾಲಿಸಿರಿ । ತಮ್ಮ ಕೃಪೆಯಿದ್ದರೆ ಯಮರಾಜನ ಭಯವೂ ನನಗಿಲ್ಲ । ಕಬ್ಬಿಣವು ಸ್ಪರ್ಶಮಣಿಯ ಸ್ಪರ್ಶದಿಂದಲೇ ಬಂಗಾರವಾಗುತ್ತದೆ । ತಮ್ಮ ಕೃಪೆಯು ಸ್ಪರ್ಶಮಣಿಯಂತೆ ಹಾಗೂ ನಾನು ಕಬ್ಬಿಣದಂತೆ । ಆದ್ದರಿಂದ ನನ್ನಂತಹ ಅಬೋಧ – ಅನನುಭವಿಕ ಬಾಲಕನು ಮೇಲೆ ಕೃಪೆಮಾಡಿರಿ । ತಮ್ಮ ಅನುಗ್ರಹಮಾಡದೇ ನನ್ನನ್ನು ಹಿಂದೆ ಕಳುಹಿಸಬೇಡಿ । ತಾವೇ ವಿಶ್ವವ್ಯಾಪಿ ಇರುವದರಿಂದ, ನನಗೆ ಅನುಗ್ರಹ ಮಾಡುವದು ನಿಮ್ಮ ಎಡಗೈ ಆಟ । ಆದ್ದರಿಂದ ನನ್ನ ಈ ಗ್ರಂಥವು ಸುಗಮವಾಗಿ ಪೂರ್ಣವಾಗಲು ತಮ್ಮ ಸಹಾಯವು ಅವಶ್ಯಕ । ಕರವೀರ ನಿವಾಸಿನಿ, ಜಗನ್ಮಾತೆ, ಜಗದಂಬೆಯು ನನ್ನ ಕುಲದೇವತೆ । ನಾನು ಅವಳ ಚರಣಕಮಲಗಳಲ್ಲಿ ನತಮಸ್ತಕನಾಗಿ ನನ್ನ ಕಾರ್ಯವು ಸಫಲವಾಗಲಿ ಎಂದು ಪ್ರಾರ್ಥಿಸುತ್ತೇನೆ । ಎಲ್ಲೇ, ದುರ್ಗಾಭವಾನಿ, ಅಪರ್ಣೆ, ಅಂಬೇ, ಮೃಡಾನಿ ನಿನ್ನ ಕೃಪಾಹಸ್ತವನ್ನು ನನ್ನ ಮಸ್ತಕದ ಮೇಲೆ ಇಡು । ಇನ್ನು ಮೇಲೆ ನಾನು ತ್ರಿಮೂರ್ತಿ ದತ್ತಾತ್ರಯರಿಗೆ ವಂದಿಸಿ ಗಜಾನನ – ಚರಿತ್ರೆಯನ್ನು ಹಾಡಲು ಸ್ಫೂರ್ತಿ ಕೊಡು ಎಂದು ಪ್ರಾರ್ಥಿಸುತ್ತೇನೆ । ಶಾಂಡಿಲ್ಯ ಮೊದಲಾದ ಋಷೀಶ್ವರರು, ವಸಿಷ್ಠ ಗೌತಮ ಪರಾಶ, ಹಾಗು ಜ್ಞಾನಿಧಿ ದೀನಮಣಿ ಶಂಕರಾಚಾರ್ಯ ಮೊದಲಾದವರಿಗೆ ನನ್ನ ವಂದನೆಗಳು । ಈ ಸಂತಮಹಂತರಲ್ಲಿ ದಾಸಗಣುವಿನಿಂದ ಈ ಚರಿತ್ರೆಯನ್ನು ಬರೆಯಿಸಬೇಕೆಂದು ಸವಿನಯ ಪ್ರಾರ್ಥನೆ । ಗಹನಿನಾಥ, ನಿವೃತ್ತಿನಾಥ, ಜ್ಞಾನೇಶ್ವರ ಮಹಾರಾಜ ಹಾಗೂ ತುಕಾರಾಮರು ಭವ–ಬಂಧನದಿಂದ ಮುಕ್ತಿಯನ್ನು ದಯಪಾಲಿಸುತ್ತಾರೆ । ಶ್ರೀ ಸಮರ್ಥ ರಾಮದಾಸರಿಗೆ ನನ್ನ ವಂದನೆಗಳು । ಈ ದಾಸಗಣುಗೆ, ಶಿರ್ಡಿಯ ಸಾಯಿಬಾಬಾ ಹಾಗೂ ಪುಣ್ಯವಂತ ವಾಮನಶಾಸ್ತ್ರೀಯವರ ಅಭಯ ಬೇಕು । ಎಲ್ಲ ಸಂತರ ಕೃಪೆಯೆಯಿಂದಲೇ ನನ್ನ ಕಾರ್ಯವು ಸಫಲವಾಗುವದು । ದಾಸಗಣುವು ತಮ್ಮ ಚಿಕ್ಕ ಬಾಲಕನಂತೆ, ಅವನಿಂದ ಮುಖ ಹೊರಳಿಸಬೇಡಿ । ಬಾಲಕನಿಗೆ ಮಾತನಾಡುವ ಕ್ಷಮತೆ ಕೇವ ಮಮತೆಯಿಂದಲೇ ದೊರಕುತ್ತದೆ । ನಮ್ಮಿಬ್ಬರ ಸಂಬಂದ ತಾಯಿ ಹಾಗೂ ಮಗುವಿನಂತೆ । ಲೆಕ್ಕಣಿಕೆಯಿಂದ





ಅಕ್ಷರವೊಂದನ್ನು ಬರೆದಾಗ, ಅದರ ಹಿಂದೆ ಅಕ್ಷರ ಬರೆಯಿಸುವವನಿರುತಾನೆ । ಲೆಕ್ಕಣಿಕೆಯ ಹಿಂದೆ ಒಬ್ಬ ಸೂತ್ರಧಾರನು ಇರುವದು ಅವಶ್ಯಕ । ಆದ್ದರಿಂದ ದಾಸಗಣುವು ಸಂತ ಮಹಂತರಲ್ಲಿ ಸೂತ್ರಧಾರನಂತೆ ಕಾರ್ಯ ಮಾಡಲು ಭಿನ್ನವಿಸುತ್ತೇನೆ । ಶ್ರೋತೃಗಣರೇ, ಜಾಗ್ರತೆಯಿಂದ ಮತ್ತು ಏಕಾಗ್ರ ಚಿತ್ತದಿಂದ ಸಂತಕಥೆಯನ್ನು ಶ್ರವಣ ಮಾಡಿರಿ, ಅದರಲ್ಲಿಯೇ ತಮ್ಮ ಕಲ್ಯಾಣ ಸಂತ ಮಹಂತರು ಭೂಲೋಕದ ಗೋಚರ ಪರಮೇಶ್ವರ ಸ್ವರೂಪ, ವೈರಾಗ್ಯದ ಸಾಗರ ಮತ್ತು ಅವರಿಂದಲೇ ಈ ನಶ್ವರ ಜಗತ್ತಿನಿಂದ ನಮಗೆ ಮುಕ್ತಿಯು ಸಿಗುವದು ಸಾಧ್ಯ । ಸಂತ ಚರಿತ್ರೆಯ ಮಹಿಮೆಯನ್ನು ಏಕಾಗ್ರಚಿತ್ತದಿಂದ ಕೇಳಿರಿ । ಈವರೆಗೆ ಒಬ್ಬ ಸಂತನು ಇನ್ನೊಬ್ಬ ಸಂತನ ವಿರುದ್ಧ ಒಳಸಂಚನ್ನು ಮಾಡಿಲ್ಲ । ನಿ ಸಾಧಕನಿಗೆ ಪರಮಾರ್ಥ, ಜೀವನದಲ್ಲಿ ಸಾಧು ಸಂತರು, ಜ್ಞಾನಿಜನರು ಸರಿಯಾಗಿ ಮಾರ್ಗದರ್ಶನೆ ಮಾಡುತ್ತಾರೆ, ಯಾವುದರಿಂದ ಸಧಾಕನ ಜೀವನವು ಸಾರ್ಥಕವಾಗುತ್ತದೆ. । ಯಾರು ಸಂತರ ಮೇಲೆ ನಿತಾಂತ ವಿಶ್ವಾಸವನ್ನು ತೋರಿಸುತ್ತಾರೆಯೋ, ಅವರಿಗೆ ಸಾಕ್ಷಾತ ರುಕ್ಮಿಣಿಕಾಂತನೂ ಋಣಿಯಾಗಿರುತ್ತಾನೆ । ಆದ್ದರಿಂದ ಶ್ರೋತೃವೃಂದ ಏಕಾಗ್ರಚಿತ್ತದಿಂದ ಗಜಾನನ ಚರಿತ್ರೆಯನ್ನು ಶ್ರವಣಮಾಡಿರಿ । ವಿಶೇಷವಾಗಿ ಭಾರತರದಲ್ಲಿಯೇ ಅನೇಕ ಸಂತ ಮಹಂತರು ಹುಟ್ಟಿದ್ದಾರೆ । ಈ ಸೌಭಾಗ್ಯ ಬೇರೆ ಯಾವ ದೇಶಕ್ಕೆ ದೊರಕಿರುವದು ವಿರಳ । ಆದ್ದರಿಂದ ಭಾರತದೇಶದ ಒಂದು ಕಾಲಖಂಡದಲ್ಲಿ ಬಂಗಾರದ ಹೊಗೆಯು ಹರಡಿತು । ಇದಕ್ಕೆ ಕಾರಣವು ಒಂದೇ ಸಂತ ಚರಣದ ಸ್ಪರ್ಶ ಈ ಭೂಮಿಯನ್ನು ಪಾವನ ಮಾಡುತ್ತಿವೆ । ನಾರದ, ಧೃವ, ಕಯಾಧುಕುಮಾರ, ಉದ್ಧವ, ಸುದಾಮ, ಸುಭದ್ರಾವರ, ಮಹಾಬಲಿ ಅಂಜನಿಕುಮಾರ, ಅಜಾತಶತ್ರು ಧರ್ಮರಾಜ ಇತ್ಯಾದಿ । ಸಾಧಕರ ಕಲ್ಪತರು, ಮತ್ತು ಅಧ್ಯಾತ್ಮ ವಿದ್ಯೆ ಮೇರು ಪರ್ವತರೆನಿಸಿದ, ಜಗದ್ಗುರು ಶಂಕರಾಚಾರ್ಯರ ಜನ್ಮವು ಈ ಭೂಮಿಯಲ್ಲಿಯೇ ಆಯಿತು । ಮಧ್ವಾಚಾರ್ಯ, ವಲ್ಲಭಾಚಾರ್ಯ ಮತ್ತು ರಾಮಾನುಜಾರಚಾರ್ಯರಿಂದ ಭಾರತಕ್ಕೆ ಅಧ್ಯಾತ್ಮಕ್ಷೇತ್ರದಲ್ಲಿ ವಿಶೇಷ ಸ್ಥಾನವು ಪ್ರಾಪ್ತವಾಗಿದೆ । ನರಸಿ ಮೆಹತಾ, ತುಲಸಿದಾಸ, ಕಬೀರ, ಕಮಾಲ ಸೂರದಾಸ, ಗೌರಾಂಗಪ್ರಭು, ಮೊದಲಾದವರು ಈ ಭೂಮಿಯಲ್ಲಿ ಜನ್ಮ ಹೊಂದಿ ಮಾಡಿದ ಲೀಲೆಗಳನ್ನು ಯಾರಿಂದ ವರ್ಣಿಸಲು ಸಾಧ್ಯ ? ರಾಜಕನ್ಯೆ ಮೀರಾಬಾಯಿಯ ಪ್ರಭುಭಕ್ತಿಯ ವರ್ಣನೆಯನ್ನು ಸಾಧಾರಣ ಬುದ್ಧಿಯಿಂದ ಮಾಡುವದು ಅಸಾಧ್ಯ । ಶೇಷಶಾಹಿ ವಿಷ್ಣು ಭಗವಂತನು ಅವಳ ಪಾಲಿನ ವಿಷವನ್ನು ಕುಡಿದು ಅವಳನ್ನು ಬದುಕಿಸಿದನು । ಗೋರಖನಾಥ, ಮತ್ಸ್ಯೇಂದ್ರನಾಥ ಹಾಗೂ ಜಾಲಂಧರನಾಥರು

ಯೋಗೇಶ್ವರರೆನಿಸುತ್ತಾರೆ । ಅವರ ಲೀಲೆಗಳನ್ನು "ನವನಾಥ ಭಕ್ತಿಸಾರ" ದಲ್ಲಿ ವರ್ಣಿಸಲಾಗಿದೆ । ದುರ್ಗಮ ಸಾಧನೆ ಮಾರ್ಗಗಳ ಬದಲು, ಕೇವ ಭಗವತ್-ಭಕ್ತಿಯಿಂದಲೆ ಭಗವಂತನ ಅನುಗ್ರಹ ಪ್ರಾಪತ ಮಾಡಿದವರಲ್ಲಿ ನಾಮದೇವ, ನರಹರಿ ಸುನಾರ, ಜನಾಬಾಯಿ, ಕಾನ್ಹೋಪಾತ್ರಾ, ಸಂತ ಸಖುಬಾಯಿ, ಚೋಖಾ ಮಹಾರ, ಸಾವತಾಮಾಳಿ, ಕೂರ್ಮದಾಸ, ದಾಮಾಜಿ ಪಂತ ಆದಿ ಪ್ರಮುಖರು । ದಾಮಾಜಿ ಪಂತರಿಗಾಗಿ ದೇವರು ಶೂದ್ರನಾಗಿ ಬೇದರ ರಾಜದರಬಾರದಲ್ಲಿ ಹೋಗಿ ಪಂತರ ಸಾಲವನ್ನು ತೀರಿಸಿ ಅವರನ್ನು ಸಂಕಟದಿಂದ ಬಿಡಿಸಿದನು । ಮುಕುಂದರಾಜ, ಜನಾರ್ದನ, ಬೋಧಲಾ, ನಿಪಟ ನಿರಂಜನ ಮೊದಲಾದ ಸಂತ ಚರಿತ್ರೆಯನ್ನು ಮಹಿಪತಿಯಿಂದ ವರ್ಣಿಸಲ್ಪಟ್ಟಿದೆ । ಹೆಚ್ಚಿನ ವಿವರಣೆಗಾಗಿ 'ಭಕ್ತಿ ವಿಜಯ' ಭಕ್ತಮಾಲೆಯೆಂಬ ಗ್ರಂಥವನ್ನು ಓದಬಹುದು । ತದನಂದರದ ಸಂತರ ಬಗ್ಗೆ ವರ್ಣನೆಯನ್ನು ನಾನು ಮೂರು ಗ್ರಂಥಗಳಲ್ಲಿ ಸಾರಾಂಶ ರೂಪದಲ್ಲಿ ಮಾಡಿದ್ದೇನೆ । ಮೇಲೆ ನಮೂದಿಸಿದ ಮೂವರು ಸಂತರ ಪಂಕ್ತಿಯಲ್ಲಿ ಸಂತ ಗಜಾನನ ಮಹಾರಾಜರ ಸ್ಥಾನವೂ ಇದೆ । ಇವರ ಪ್ರಭಾವವು ಜನಸಾಮಾನ್ಯರ ಮೇಲೆ ನಿರಂತರವಾಗಿ ಇಂದಿಗೂ ಆಗುತ್ತಿದೆ । ನನ್ನ ಭಾಗ್ಯದಿಂದ ಗಜಾನನ ಮಹಾರಾಜರ ಚರಿತ್ರೆ ಗಾನವನ್ನು ಮಾಡುವ ಸೌಭಾಗ್ಯವು ದೊರಕಿದೆ । ಅವರ ಪ್ರಥಮ ದರ್ಶನ ನನಗಾಗಿದ್ದು ಅಕೋಟ ಊರಿನಲ್ಲಿ । ಮೊದಲು ದಾರದಲ್ಲಿ ಮಣಿಗಳನ್ನು ಪೋಣಿಸಿ, ನಂತರ ಮೇರುಮಣಿಯನ್ನು ಪೋಣಿಸುತ್ತಾರೆ । ಇದೇ ಸ್ಥಿತಿ ಈ ಚರಿತ್ರಗಾನದ ವಿಷಯದಲ್ಲಿ ಆಗಿದೆ । ವಿದರ್ಭದ ವರ್ಹಾಡ ಪ್ರಾಂತದ ಖಾಮಗಾಂವ ತಹಸೀಲಿನಲ್ಲಿ ಶೇಗಾಂವ ಎಂಬ ಗ್ರಾಮವಿದೆ । ಗ್ರಾಮವು ಚಿಕ್ಕದಿದ್ದರೂ, ಒಬ್ಬ ಮಹಾತ್ಮರ ವಾಸ್ತವ್ಯದಿಂದ ಈ ಗ್ರಾಮದ ಹೆಸರು ಬಹು ಚಿರಪರಿಚಿತ। ಈ ಶೇಗಾಂವ ರೂಪದ ಸರೋವರದಲ್ಲಿ ಅರಳಿದ ಗಜಾನನರೂಪಿ ಕಮಲದ ಸೌರಭವು ಅಲ್ಪ ಕಾಲದಲ್ಲಿಯೇ ಎಲ್ಲ ದಿಕ್ಕಿನಲ್ಲಿ ಹರಡಿತು । ಗಜಾನನ ಮಹಾರಾಜರು ಮಾಡಿದ ಲೀಲೆಗಳ ವರ್ಣನೆಯನ್ನು ನಾನು ನನ್ನ ಅಲ್ಪ ಬುದ್ಧಿಯಿಂದ ಮಾಡಲು ಪ್ರಯತ್ನಿಸಿದ್ದೇನೆ । ಗಜಾನನರ ಪಾದಕಮಲಗಳಲ್ಲಿ ಶ್ರದ್ಧೆ ಇಟ್ಟು ಈ ಚರಿತ್ರೆಯನ್ನು ಕೇಳಿರಿ, ಅದರಿಂದಲೇ ತಮ್ಮ ಉದ್ಧಾರವಾಗುವದು । ಗಜಾನನ ಚರಿತ್ರೆಯು ಮೇಘವಾಗಿದ್ದರೆ, ಶ್ರೋತೃವು ನವಿಲಿನಂತೆ । ಚರಿತ್ರರೂಪಿ ಮೋಡದಿಂದ ಮಳೆಯಾದಾಗ ನವಿಲು ಆನಂದದಿಂದ ಕುಣಿಯುತ್ತವೆ । ಶೇಗಾಂವ ನಗರವಾಸಿಗಳು ನಿಜವಾಗಿ ಪುಣ್ಯವಂತರು, ಎಂದಾಗಲೆ ಸಂತರತ್ನ ಗಜಾನನರು ಅವರಿಗೆ ದೊರಕಿದರು । ಯಾವಾಗ ಅಪಾರ ಪುಣ್ಯದ





ಸಂಚಯವಾಗುತ್ತದೆಯೋ ಆಗ ಸಂತಚರಣವು ಆ ಊರನ್ನು ಪವಿತ್ರ ಮಾಡುತ್ತದೆ ಎಂದು ಹೇಳಿಕೆಯು ಇದೆ । ಭಗವಂತನಿಗಿಂತಲೂ ಅವನ ಭಕ್ತನು ಶ್ರೇಷ್ಠನೆಂದು ಗಣಿಸಲ್ಪಡುತ್ತಾನೆ, ಎಂಬುದು ನಿಸ್ಸಂದೇಹ । ಕಾರ್ತಿಕಮಾಸದಲ್ಲಿ ಪಂಢರಪುರಕ್ಕೆ ಬಂದು ರಾಮಚಂದ್ರ ಪಾಟೀಲರು ನನಗೆ ಗಜಾನನ ಮಹಾರಾಜರ ಚರಿತ್ರೆಯನ್ನು ಬರೆಯಲು ಬಿನ್ನವಿಸಿದರು । ಗಜಾನನ ಚರಿತ್ರೆಯನ್ನು ಬರೆಯುವ ಇಚ್ಛೆ ಅನೇಕ ದಿನಗಳಿಂದ ನನ್ನ ಮನಸ್ಸಿನಲ್ಲಿ ಮನೆ ಮಾಡಿತ್ತು। ಆದರೆ, ಯಾರ ಚರಿತ್ರೆಯನ್ನು ಬರೆಯಲು, ಅವರ ಸಹವಾಸವು ಅವಶ್ಯಕವೋ, ಅದು ನನ್ನ ದುರ್ಭಾಗ್ಯದಿಂದ ಸಿಗಲಿಲ್ಲ। ಆದರೆ ಸರಿ ಸಮಯ ಬಂದಾಗ ಬೇರೆಯವರ ರೂಪದಿಂದ ಪ್ರಭು ಕೃಪೆಯಾಗುತ್ತದೆ । ಈಗ ಮಹಾರಾಜರು ನನ್ನಿಚ್ಛೆಯನ್ನು ರಾಮಚಂದ್ರ ಪಾಟೀಲರ ರೂಪದಿಂದ ಪೂರ್ತಿ ಮಾಡಿದರು । ಗಜಾನನ ಮಹಾರಾಜರು ವರ್ತಮಾನದ ಸಂತ ಚೂಡಾಮಣಿ ಎನ್ನಿಸುತ್ತಾರೆ । ಮಹಾರಾಜರ ಜನ್ಮಸ್ಥಾನ, ಅವರು ಯಾವ ಊರಿನಿಂದ ಬಂದರು, ಅವರ ಜಾತಿಯಾವದು ಎಂಬುದಾಗಿ ಯಾರಿಗೂ ಗೊತ್ತಿಲ್ಲ। ಈ ಬಗ್ಗೆ ಜನರು ತಿಳಿಯುವದಾದರು ಹೇಗೆ ಸಾಧ್ಯ ? ಬ್ರಹ್ಮನಿಗೆ ಈವರೆಗೆ ಯಾರಾದರು ಅರಿತಿದ್ದಾರೆಯೇ? ವಜ್ರವು ಕಣ್ಣಿನ ಮುಂದೆ ಬಂದಾಗ, ನೋಡುವವರು ಎಲ್ಲ ವಿಷಯಗಳನ್ನು ಮರೆತು ಕೇವಲ ಅದರ ಕಾಂತಿ ಹಾಗೂ ತೇಜದಿಂದ ಮೈಮರೆಯುತ್ತಾರೆ । ಗಜಾನನ ಮಹಾರಾಜರ ವಿಷಯದಲ್ಲಿಯೂ ಹೀಗೆ ಆಯಿತು । ಅವರು ಯಾರು, ಎಲ್ಲಿಂದ ಬಂದರು, ಇತ್ಯಾದಿ ಯಾರಿಗೂ ಗೊತ್ತಿಲ್ಲ। ಯುವಕ ಗಜಾನನ ಮಹಾರಾಜರು ಮಾಘ ವದ್ಯ ಸಪ್ತಮಿ ಶಕೆ ೧೮೦೦ (ದಿ॥ ೨೩&೨&೧೮೭೮) ರಂದು ಅಚಾನಕ ಶೇಗಾಂವ ಊರಿನಲ್ಲಿ ಪ್ರಕಟವಾದರು । ಗಜಾನನ ಮಹಾರಾಜರು ಸಮರ್ಥ ರಾಮದಾಸ ಸ್ವಾಮಿಯ ಮೂಲಸ್ಥಾನ ಸಜ್ಜನಗಡದಿಂದ ಬಂದಿರುವದಾಗಿ ಜನರು ನಂಬಿಕೆ ಇದೆ । ಆದರೆ ಈ ಮಾತುಗಳಿಗೆ ಯಾವ ಆಧಾರವಿಲ್ಲ। ಆದರೇ ಈ ಕೇಳಿ ಹೇಳಿದ ಮಾತುಗಳಲ್ಲಿ ಏನಾದರೂ ಸತ್ಯ ಇರಬಹುದು ಆ ಕಾಲದಲ್ಲಿ ಜನರು ವಿವೇಕಹೀನರು, ಪಥಭ್ರಷ್ಟ ರಾಗಿದ್ದರು । ಅನೇಕ ವಿಪತ್ತಿ-ಸಂಕಟಗಳನ್ನು ಅವರು ಎದುರಿಸುತ್ತಿದ್ದರು । ಜನರ ಆ ದೀನಸ್ಥಿತಿಯನ್ನು ನೋಡಿಯೇ ಭಗವಂತನು ಗಜಾನನ ಮಹಾರಾಜರ ರೂಪದಲ್ಲಿ ಈ ಭೂಲೋಕದ ಮೇಲೆ ಅವತರಿಸಿರಬೇಕು । ಗೋರಖನಾಥರ ಜನ್ಮ ಹೊರಗೆಸೆದ ಕಸದಲ್ಲಿ, ಕಾನಿಫನಾಥರ ಜನ್ಮ ಕಿವಿಯಿಂದ, ಮತ್ತು ಚಾಂಗದೇವರ ಜನ್ಮ ನಾರಾಯಣ ಕುಂಡದಿಂದಾಯಿತು । ಗಜಾನನ ಮಹಾರಾಜರ ಅವತಾರದ ಹಿಂದೆ ಇಂತಹದೇ ರಹಸ್ಯವಿರುಹುದು ।

ಸಿದ್ಧಯೋಗಿಯಲ್ಲಿ ಕಂಡು ಬರುವ ಎಲ್ಲ ಲಕ್ಷಣಗಳು ಗಜಾನನ ಮಹಾರಾಜರಲ್ಲಿ ಸ್ಪಷ್ಟವಾಗಿ ಕಾಣುತ್ತಿದ್ದವು। ಇದರ ಅನುಭೂತಿ ವಾಚಕರಿಗೆ ಗಜಾನನ ಮಹಾರಜಾರ ಲೀಲೆಗಳಲ್ಲಿ ಮುಂದೆ ಕಂಡು ಬರುವದು । ಗಜಾನನ ಮಹಾರಾರು ಮಾಘ ವದ್ಯ ಸಪ್ತಮಿಯ ದಿನ ಶೇಗಾಂವಿಗೆ ಬಂದು ಮಾಡಿದ ಲೀಲಾ ಪ್ರಸಂಗವನ್ನು ನಾನು ವರ್ಣಿಸುತ್ತೇನೆ । ಪಾತೂರಕರ ವಂಶದಲ್ಲಿ ದೇವಿದಾಸ ಎಂಬ ಸಜ್ಜನ ಮಠಾಧಿಪತಿ ಇದ್ದರು ಅವರು ಧಾರ್ಮಿಕರಾಗಿದ್ದರು । ತಮ್ಮ ಪುತ್ರನ ಋತುಶಾಂತಿಯ ಅವಸರದಲ್ಲಿ ಬ್ರಾಹ್ಮಣ ಭೋಜನವನ್ನು ಆಯೋಜಿಸಿದ್ದರು । ಭೋಜನದ ನಂತರ ಎಂಜಲು ಪತ್ರಾವಳಿಗಳನ್ನು ಹೊಸಗೆಸೆದಿದ್ದರು । ಎಂಜಲು ಪತ್ರಾವಳಿಗಳ ಹತ್ತಿರ ಸಮರ್ಥ ಸಿದ್ಧಯೋಗಿ ಗಜಾನನ ಮಹಾರಾಜರು ಕುಳಿತಿದ್ದರು । ಉಪಾಧಿರಹಿತರಿರುವದರಿಂದ ಅವರ ಬಳಿ ಯಾವ ವಸ್ತುವು ಇರಲಿಲ್ಲ । ನೀನು ಕುಡಿಯಲು ಅವರ ಬಳಿ ಒಂದು ಪಾತ್ರೆ ಇತ್ತು। ಅವರ ಕೈಯಲ್ಲಿ ಹಸಿ, ತಮ್ಮ ಕೈಯಿಂದಲೆ ತಯಾರಿಸಿದ ಮಣ್ಣಿನ ಚಿಲುವೆಯ ಹೊರತು ಬೇರೆ ವಸ್ತು ಇರಲಿಲ್ಲ। ಆದರೆ ಶಾಂತ ಹಾಗೂ ಸುಂದರ ಮುಖ, ನಾಸಾಗ್ರ ಸ್ಥಿರ ದೃಷ್ಟಿ ಮತ್ತು ಪ್ರಭಾವ ಸಮಯದ ಸೂರ್ಯನ ರಮಣೀಯ ಕಿರಣದಂತೆ ಇರುವ ತಪೋಬಲ, ಅವರ ಅಂಗ ಪ್ರತ್ಯಂಗದಿಂದ ಹೊರಹೊಮ್ಮುತ್ತಿತ್ತು। ವಿದೇಹಿ ಇರುವದರಿಂದ ಅವರು ನಗ್ನರಾಗಿಯೇ ಸಂಚರಿಸುತ್ತಿದ್ದರು । ಪರ ಹಾಗೂ ಅಪರಭಾವ ಅವರಲ್ಲಿರಲಿಲ್ಲ, ಆದ್ದರಿಂದ ಅವರ ವೃತ್ತಿ ಅಭಿನ್ನವಾಗಿತ್ತು। ನಿರಾಸಕ್ತರಾಗಿದ್ದರಿಂದ ಊಟದಲ್ಲಿ ರುಚಿ ಇರಲಿಲ್ಲ। ಇಂತಹ ನಿರ್ಮೋಹಿಯು ಎಂಜಲು ಪತ್ರಾವಳಿಗಳ ಬಳಿ ಕುಳಿತು ಏನೋ ಹುಡುಕುತ್ತಿದ್ದ । ಪತ್ರಾವಳಿಯಲ್ಲಿ ಎಂಜಲು ಅನ್ನ ಕಾಣುತ್ತಲೇ ಅದನ್ನು ತಿನ್ನುತ್ತಿದ್ದರು । "ಅನ್ನವು ಪರಬ್ರಹ್ಮ" ಎಂಬುದನ್ನು ತೋರಿಸಲೋ ಏನೋ ಅವರು ಹೀಗೆ ಮಾಡುತ್ತಿದ್ದರು । "ಅನ್ನಂ ಬ್ರಹ್ಮೇತಿ" ಎಂದು ಉಪನಿಷತ್ತುಗಳು ಕೂಡಾ ಹೇಳಿವೆ । ಜೀವನದಲ್ಲಿ ಅನ್ನದ ಮಹತ್ವವನ್ನು ಜನಸಾಮಾನ್ಯರಿಗೆ ತಿಳಿಹೇಳಲು ಮಹಾರಾಜರು ಪಾತ್ರಾವಳಿಯಲ್ಲಿ ಎಸೆದ ಅನ್ನಕಣಗಳನ್ನು ತಿನ್ನುತ್ತಿದ್ದರು । ಆದರೆ ಮೂಢ ಜನರಿಗೆ ಅದರ ಮಹತಿ ಏನು ಗೊತ್ತು। ಬಂಕಟಲಾಲ ಅಗರಲಾಲ ಮತ್ತು ಅವರ ಸಹಕಾರಿ ದಾಮೋದರಪಂತ ಕುಲಕರ್ಣಿ ಆ ಸಮಯದಲ್ಲಿ, ಅದೇ ರಸ್ತೆಯಿಂದ ಹೊರಟಿದ್ದರು । ಮಹಾರಾಜರ ಈ ಕೃತಿಯನ್ನು ನೋಡಿ ಅವರಿಬ್ಬರು ಮಂತ್ರಮುಗ್ಧರಾಗಿ ನೋಡುತ್ತಿದ್ದರು । ಅವರಿಬ್ಬರು ತಮ್ಮಲ್ಲಿಯೇ ಮಾತನಾಡುತ್ತಿದ್ದರು । ಈ ಮನುಷ್ಯನ ಕೃತಿಗಳು ಒಬ್ಬ ಹುಚ್ಚನಂತಿವೆ । ಅವನು ಅನ್ನಾರ್ಥಿಯಾಗಿದ್ದರೆ ತಾನೇ ಬೇಡಿ ತಿನ್ನುತ್ತಿದ್ದನು । ದೇವಿದಾಸನಾದರೂ ಸಜ್ಜನ





ಮನುಷ್ಯ, ಅವನು ಅವರಿಗೆ ಅವಶ್ಯವಾಗಿ ಏನಾದರು ಕೊಡುತ್ತಿದ್ದನು । ಮನೆ ಬಾಗಿಲಿಗೆ ಬಂದ ಯಾಚಕನು ಗೃಹಸ್ಥನ ಮನೆಯಿಂದ ವಿಮುಖನಾಗಿ ಹೋಗುವದು ಸಾಧ್ಯವಿಲ್ಲ। ಈ ಸ್ಥಿತಿಯಲ್ಲಿ ಇವನ ಈ ಕೃತಿಯ ಹಿಂದೆ ಏನಾದರು ರಹಸ್ಯ ನಿಶ್ಚಿತವಾಗಿದೆ । ಮಹಾರಾಜರ ಈ ಕೃತಿಯನ್ನು ನೋಡುತ್ತ ಅವರಿಬ್ಬರೂ ಅಲ್ಲಿಯೇ ನಿಂತರು । ಭಾಗವತ ಗ್ರಂಥದಲ್ಲಿ ವ್ಯಾಸರು ವಿರಕ್ತ ಸಾಧುವು ಕೆಲವು ಸಲ ಹುಚ್ಚರಂತೆ ವರ್ತನೆ ಮಾಡುತ್ತಾರೆ ಎಂಬುದಾಗಿ ನಮೂದಿಸಿದ್ದಾರೆ । ಮಹಾರಾಜರ ಕೃತಿಯು ಹುಚ್ಚರಂತೆ ಇದ್ದರೂ, ಅವರ ಸಿದ್ಧ ಸಾಧು ಇರಬಹುದು ಎಂದೆನಿಸುತ್ತಿತ್ತು । ಆಗ ಅದೇ ರಸ್ತೆಯಿಂದ ಅನೇಕ ಜನರು ತಿರುಗಾಡುತ್ತಿದ್ದರು, ಆದರೆ ಅವರಿಬ್ಬರ ಹೊರತು ಬೇರೆ ಯಾರೂ ಮಹಾರಾಜರ ಕೃತಿಯನ್ನು ನೋಡಲಿಲ್ಲ। ಏಕೆಂದರೆ, ಜನಸಾಮಾನ್ಯರ ದೃಷ್ಟಿಯಲ್ಲಿ ಕಾಜು ಹಾಗೂ ರತ್ನ ಎರಡೂ ಒಂದೇ । ಆದರೇ ಅಮೂಲ್ಯವಾದ ರತ್ನವನ್ನು ಕೇವಲ ರತ್ನ ಪರೀಕ್ಷಕನೇ ತಿಳಿಯಬಲ್ಲ ! ಸ್ವಲ್ಪ ಸಮಯ ನೋಡಿ, ಬಂಕಟಲಾಲ ಅಗರವಾಲನು ಮಹಾರಜರ ಸಮೀಪಕ್ಕೆ ಹೋದನು । ಮತ್ತು ವಿನಯದಿಂದ ಕೇಳಿದನು "ಮಹಾರಾಜ, ಪತ್ರಾವಳಿಯ ಮೇಲಿನ ಎಂಜಲು ಅನ್ನವನ್ನು ಏಕೆ ಸೇವಿಸುತ್ತೀರಿ ? ತಮಗೆ ನಿಜವಾಗಿ ಹಸಿವೆಯಾಗಿದ್ದರೆ, ತಮ್ಮ ಊಟದ ವ್ಯವಸ್ಥೆಯು ಆಗುವದು ।" ಆಗ ಮಹಾರಾಜರು 'ಹೌದು' ಅಥವಾ 'ಇಲ್ಲ' ಎಂದು ಉತ್ತರಕೊಡದೆ, ಅವರಿಬ್ಬರನ್ನು ಅವಲೋಕಿಸಿದರು । ಆಗ ಅವರು ಮಹಾರಾಜರ ಅಂಗಕಾಂತಿಯ ತೇಜ ಹಾಗೂ ಆಕರ್ಷಕ, ಸುಂದರವಾದ ಕುತ್ತಿಗೆ, ಧೃಡ ದೇಹ, ಭವ್ಯವಾದ ಎದೆ, ಮತ್ತು ಭ್ರುಕುಟಿಯ ಮೇಲೆ ಸ್ಥಿರವಾದ ದೃಷ್ಟಿಯನ್ನು ನೋಡಿದರು । ಸತ್ಯಾನಂದದಲ್ಲಿ ತಲ್ಲೀನರಾದರ ಸಿದ್ಧಯೋಗಿಯನ್ನು ನೋಡಿ ಅವರಿಬ್ಬರೂ ಆನಂದ ಚಿತ್ತದಿಂದ, ಮನಸ್ಸಿನಲ್ಲಿಯೇ ಮಹಾರಾಜರಿಗೆ ಪ್ರಣಾಮ ಮಾಡಿದರು । ನಂತರ ಅವರು ದೇವಿದಾಸರಿಗೆ ಎಲ್ಲವನ್ನು ತಿಳಿಹೇಳಿ, ಪಾತ್ರವಳಿಯನ್ನು ತರಲು ಹೇಳಿದರು। ದೇವಿದಾಸರು ಒಂದು ತಟ್ಟೆಯಲ್ಲಿ ಎಲ್ಲ ಪಕ್ವಾನ್ನಗಳನ್ನು ಬಡಿಸಿ ಮಹಾರಾಜರ ಮುಂದೆ ಇಟ್ಟರು । ಭೋಜನದ ತಟ್ಟೆಯನ್ನು ನೋಡಿ ಮಹಾರಾಜರು ತಿನ್ನಲು ಆರಂಭಿಸಿದರು । ಅವರಿಗೆ ಊಟದಲ್ಲಿ ರುಚಿ ಇರಲಿಲ್ಲ। ಬ್ರಹ್ಮರಸವನ್ನೇ ಕುಡಿದು ತೃಪ್ತನಾದವನಿಗೆ, ಈ ಸಾಮಾನ್ಯ ಊಟದಲ್ಲಿ ಎಲ್ಲಿಯ ರುಚಿ । ಸಾರ್ವಭೌಮ ರಾಜನಿಗೆ ಯಾವದಾದರು ಜಹಾಗೀರು ದೊರೆತರೆ ಅವನಿಗೇನು ವಿಶೇಷ ? ಮಹಾರಾಜರು ಎಲ್ಲ ಪದಾರ್ಥಗಳನ್ನು ಕಲಿಸಿ, ಯಾವ ವಿಶೇಷ ರುಚಿ ಇಲ್ಲದೇ ಮಧ್ಯಾಹ್ನದ ಜಠರಾಗ್ನಿಯನ್ನು ಆರಿಸಿದರು । ಇದೆಲ್ಲವನ್ನು ನೋಡಿ ಬಂಕಟಲಾಲನು ದಾಮೋದರಪಂತನಿಗೆ

ತಾವು ಮಹಾರಾಜರಿಗೆ ಒಬ್ಬ ಹುಚ್ಚನೆಂದು ಎಣಿಸಿದ್ದು ತಪ್ಪೆಂದು ಹೇಳಿದನು । ಕೃಷ್ಣನ ತಂಗಿ ಸುಭದ್ರೆಯಾಗಿ, ಕೃಷ್ಣನ ಸ್ನೇಹಿ ಅರ್ಜುನನು ಹುಚ್ಚನಾಗಿ ಬಾಯಿಗೆ ಬಂದಿದ್ದನ್ನು ಬೊಗಳುತ್ತಿದ್ದ । ಅದೇ ತರಹ ಈ ಯೋಗಿ ರಾಜರು ಮುಕ್ತಿರೂಪದ ಸುಭದ್ರೆಗಾಗಿ ಹುಚ್ಚರಾಗಿರಬಹುದು । ಮಹಾರಾಜರ ಪಾದಧೂಳಿಯಿಂದ ನಿಜವಾಗಿ ನಮ್ಮ ಶೇಗಾಂವ ಧನ್ಯವಾಗಿದೆ । ಸೂರ್ಯನು ನೆತ್ತಿಗೇರಿರುವದರಿಂದ ಗಾಳಿಯು ತಪ್ತವಾಗಿತ್ತು । ಆದ್ದರಿಂದ ಗಗನದಲ್ಲಿ ವಿಹಾರಮಾಡುವ ಪಕ್ಷಿಗಳು ನೆರಳಿಗಾಗಿ ಮರಗಿಡಗಳ ಮೇಲೆ ಕುಳಿತವು । ಇಂತಹ ಭಯಂಕರ ಬಿಸಿಲಿನಲ್ಲಿ ಮಹಾರಾಜರು ಸತ್ಯಾನಂದದಿಂದ ಕುಳಿತಿದ್ದರು । ನಿಜವಾಗಿಯೂ ಅವರು ಬ್ರಹ್ಮಸ್ವರೂಪವಾಗಿದ್ದರು । ಮಹಾರಾಜರು ಊಟವನ್ನು ಮಾಡಿದರು, ಆದರೆ ಅವರ ತಂಬಿಗೆಯಲ್ಲಿ ನೀರಿಲ್ಲ ಎಂಬುದನ್ನು ಇಬ್ಬರೂ ತಿಳಿದರು । ಆಮೇಲೆ ದಾಮೋದರನು ಮಹಾರಾಜರಿಗೆ ನಿಮ್ಮ ತಂಬಿಗೆಯಲ್ಲಿ ನೀರಿದೆಯೋ ಎಂದು ಕೇಳಿದನು । ತಮ್ಮ ಇಚ್ಛೆ ಇದ್ದರೆ ಈ ಸೇವಕನು ತಮಗೆ ನೀರು ತಂದು ಕೊಡುವನು । ಈ ಮಾತುಗಳನ್ನು ಕೇಳಿ ಮಹಾರಾಜರು ಮುಗುಳ್ನಕ್ಕು ಹೀಗೆ ನುಡಿದರು । ಒಂದು ವೇಳೆ ನಿಮಗೆ ಅವಶ್ಯಕತೆ ಇದ್ದರೆ ನೀರು ತಂದು ಕೊಡಿರಿ । ಒಬ್ಬನೇ ಬ್ರಹ್ಮನು ಜಗತ್ತಿನಲ್ಲಿ ಅನೇಕ ರೂಪಗಳನ್ನು ಧರಿಸಿದ್ದಾನೆ। ಪರ–ಅಪರವೆಂಬ ಭೇದ ಅವನಿಗಿಲ್ಲ । ಆದರೆ ಲೌಕಿಕ ಜಗತ್ತಿನಲ್ಲಿ ದೇಹಧಾರಣೆಗಾಗಿ ಅನೇಕ ವಸ್ತುಗಳ ಅವಶ್ಯಕತೆ ಇದೇ । ಈಗ ಆಹಾರವನ್ನು ಸೇವಿಸಿದ್ದರಿಂದ ನೀರನ್ನು ಕುಡಿಯುವದು ಅತ್ಯಾವಶ್ಯಕ । ಆದ್ದರಿಂದ ತಮಗೆ ಬೇಕಾಗಿದ್ದರೆ ನೀರಿನ ಪ್ರಬಂಧವನ್ನು ಮಾಡಿರಿ । ಈ ಮಾತುಗಳನ್ನು ಕೇಳಿದೊಡನೆ, ಸೇವೆಮಾಡುವ ಸಂಧಿ ದೊರಕಿತೆಂದು ಇಬ್ಬರು ಆನಂದಿತರಾದರು । ಅತಿ ಉತ್ಸಾಹದಿಂದ ದಾಮೋದರ ಪಂತರು ನೀರನ್ನು ತರಲು ದೇವಿದಾಸನ ಮನೆಯ ಕಡೆಗೆ ಧಾವಿಸಿದರು । ಇತ್ತಕಡೆ ಮಹಾರಾಜರು ಬಾವಿಯ ಹತ್ತಿರ ದನಗಳಿಗಾಗಿ ಇಟ್ಟ ನೀರನ್ನು ಕುಡಿದು ತೃಪ್ತಿಯ ಡರಿಕೆಯನ್ನು ಕೊಟ್ಟರು । ಅಷ್ಟರಲ್ಲಿ ಪಂತರು ಶುದ್ಧ ನೀರನ್ನು ತೆಗೆದುಕೊಂಡು ಅಲ್ಲಿ ತಲುಪಿದರು ಮತ್ತು ಹೇಳಿದರು "ಮಹಾರಾಜ, ಯಾವ ನೀರನ್ನು ತಾವು ಸೇವಿಸಿದಿರಿ ಅದು ಹೊಲಸು ನೀರು । ಅದನ್ನು ದನಗಳಿಗಾಗಿ ಉಪಯೋಗಿಸುತ್ತಾರೆ । ಅದನ್ನು ಕುಡಿಯಬೇಡಿ । ನಾನು ತಂದ ನೀರು ಶುದ್ಧ ಹಾಗೂ ತಂಪಾಗಿದೆ । ಅದನ್ನು ಕುಡಿಯಿರಿ ।" ಈ ಮಾತುಗಳನ್ನು ಕೇಳಿ ನಕ್ಕು ಮಹಾರಾಜರು ನುಡಿದರು ।" ಇಂತಹ ವ್ಯವಹಾರಿಕ ಮಾತುಗಳನ್ನು ಆಡಬೇಡಿರಿ । ಬ್ರಹ್ಮನು ಸಂಪೂರ್ಣ ವಿಶ್ವವ್ಯಾಪಿಯಾಗಿದ್ದಾನೆ, ಅಲ್ಲಿ ಶುದ್ಧ, ಅಶುದ್ಧ, ಒಳ್ಳೆಯದು, ಕೆಟ್ಟದ್ದು, ಎಂಬ ಭೇದಭಾವವು ಇರುವದಿಲ್ಲ । ನೀರನಲ್ಲಿ








ಈಶ್ವರನಿದ್ದಾನೆ, ಮತ್ತು ನೀರು ಕುಡಿಯುವವನು ಕೂಡಾ ಅವನೇ। ಆದರೆ ದೇವರ ಲೀಲೆಯು ಅತರ್ಕ್ಯ, ಅದನ್ನು ಜನಸಾಮಾನ್ಯ ನರನಾರಿಯರು ತಿಳಿಯರು । ಆದ್ದರಿಂದ ಭಗವಂತನ ವಿಶ್ವವ್ಯಾಪಕತೆಯನ್ನು ಅರಿಯುವ ಪ್ರಯತ್ನ ಮಾಡಿರಿ ।" ಮಹಾರಾಜರ ಅಮೃತವಾಣಿಯನ್ನು ಕೇಳಿ ಮತ್ತು ಅವರ ವಿದೇಹಿ ವೃತ್ತಿಯನ್ನು ನೋಡಿ, ಇಬ್ಬರು ಮನಸ್ಸಿನಲ್ಲೇ ಅತ್ಯಂತ ಪ್ರಸನ್ನರಾಗಿ ನಮಸ್ಕರಿಸಲು ಹೋಗುವದರಲ್ಲಿದ್ದರು, ಅಷ್ಟರಲ್ಲಿ ಮಹಾರಾಜರು ವಾಯುವೇಗದಿಂದ ಅಲ್ಲಿಂದ ಓಡಿಹೋದರು । ಅವರ ವಾಯುವೇಗವನ್ನು ಯಾರು ತಡೆಯಬಲ್ಲರು ? ದ್ವಿತೀಯ ಅಧ್ಯಾಯದಲ್ಲಿ ಮುಂದಿನ ಕಥೆಯನ್ನು ಹೇಳುವೆ, ಅದನ್ನು ಜಾಗ್ರತೆಯಾಗಿ ಕೇಳಿರಿ । ಈ ದಾಸಗಣು ಗಜಾನನ ವಿಜಯ ಗ್ರಂಥದ ಶ್ರೋತೃಗಳಿಗೆ ಪ್ರಸನ್ನ ಚಿತ್ತವನ್ನು ದಯಪಾಲಿಸುವಂತೆ ದೇವರಲ್ಲಿ ಪ್ರಾರ್ಥಿಸುತ್ತೇನೆ ।

**॥ ಶ್ರೀ ಹರಿಹರಾರ್ಪಣಮಸ್ತು ॥ ಶುಭಂ ಭವತು ॥**

॥ ಇಲ್ಲಿಗೆ ಒಂದನೆಯ ಅಧ್ಯಾಯವು ಮುಗಿಯಿತು ॥





ಶ್ರೀ ಗಜಾನನ ಮಹಾರಾಜರು ಬಂಕಟಲಾಲನ ಮನೆಯಲ್ಲಿ

## ॥ ಅಧ್ಯಾಯ ೨ ॥

ಶ್ರೀ ಗಣೇಶಾಯನಮಃ । ಹೇ ಸರ್ವೇಶ್ವರ, ಚಂದ್ರಭಾಗಾ ತಟವಿಹಾರ, ಪೂರ್ಣ ಬ್ರಹ್ಮ ರುಕ್ಮಿಣೇಶ್ವರ, ದೀನಬಂಧು, ಪಾಹಿಮಾಮ್ ॥ ತಮ್ಮ ಹೊರತು ಈ ಜಗತ್ತಿನಲ್ಲಿ ಚೈತನ್ಯವು ಎಲ್ಲಿಂದ ಬಂದೀತು ? ಶರೀರದಲ್ಲಿ ಪ್ರಾಣವಿರದ ಹೆಣಕ್ಕೆ ಯಾರು ಕೇಳುತ್ತಾರೆ ? ನೀರಿನಿಂದ ತುಂಬಿದ್ದರೇ ಮಾತ್ರ ಸರೋವರ ಸುಂದರವಾಗಿ ಕಾಣುತ್ತದೆ। ಹೆಣ್ಣಿನ ಒಳಗಿರುವ ಅಮನ್ಯತಮಯ ರಸದಿಂದಲೆ, ಮೇಲಿರುವ ಸಿಪ್ಪೆಗೆ ಶೋಭೆ । ಶರಣಾಗತನ ಮೇಲೆ ತಮ್ಮ ಕೃಪೆಯಾದಾಗಲೇ ಅವನು ಸಮರ್ಥನಾಗುವದು ಸಾಧ್ಯ । ಆದ್ದರಿಂದ ನಮ್ಮ ಎಲ್ಲ ಪಾಪಗಳನ್ನು ಹಾಗೂ ದುರ್ಬಲತೆಯನ್ನು ನಾಶಮಾಡಿದರೆಂದು ತಮ್ಮಲ್ಲಿ ಪ್ರಾರ್ಥನೆ। ಮಹಾರಾಜರು ಹೇಗೆ ವಾಯು ವೇಗದಿಂದ ಓಡಿದರು ಎಂಬುದರ ವರ್ಣನೆಯನ್ನು ಹಿಂದಿನ ಅಧ್ಯಾಯದಲ್ಲಿ ಮಾಡಿದ್ದೇನೆ। ಮಹಾರಾಜರು ಹೋಗಿದ್ದರಿಂದ ಬಂಕಟಲಾಲನು – ಮಹಾರಾಜರು ಹೋಗುವಾಗ ಅವನ ಸುಖ, ಶಾಂತಿಯನ್ನು ವಂಚಿಸಿದಂತೆ – ವ್ಯಥಿತನಾದನು। ಮಹಾರಾಜರ ಮೂರ್ತಿಯು ಅವನ ಕಣ್ಣಿನ ಮುಂದೆನಿಂತಿತು। ಒಂದು ದಿನದಲ್ಲಿಯೇ ಅವನ ಅನ್ನ – ನೀರಿನ ಮೇಲಿನ ಆಶೆಯು ಕಡಿಮೆ ಆಯಿತು । ಜಲ, ಸ್ಥಲ ಹಾಗೂ ಕಾಷ್ಠದಲ್ಲಿಯೂ ಮೂರ್ತಿ ಕಾಣುವದಕ್ಕೆ ಧ್ಯಾನವೆನ್ನುತ್ತಾರೆ । ಅವರಿಗೆ ಮಹಾರಾಜರ ಧ್ಯಾನವಾಯಿತು । ಕರುವು ತಮ್ಮ ತಾಯಿಯಿಂದ ತಪ್ಪಿಸಿಕೊಂಡಾಗ, ತಾಯಿಯ ಸ್ಥಿತಿಯಾದಂತೆ, ಮಹಾರಾಜರು ಹೋಗಿದ್ದರಿಂದ ಬಂಕಟಲಾಲನ ಸ್ಥಿತಿಯಾಗಿತ್ತು। ತಮ್ಮ ಮನಸ್ಸಿನ ವ್ಯಥೆಯನ್ನು ವ್ಯಕ್ತಮಾಡಲು, ನಿಜವಾದ ಮಿತ್ರನು ಇರಲಿಲ್ಲ। ಇಂತಹ ಮಾತನ್ನು ತಮ್ಮ ತಂದೆಗೆ ಹೇಳುವದೂ ಸಾಧ್ಯವಿರಲಿಲ್ಲ। ಈ ಸ್ಥಿತಿಯಲ್ಲಿ ಬಂಕಟಲಾಲನು ಶೇಗಾಂವನ್ನು ಹುಡುಕಿದನು, ಆದರೆ ಎಲ್ಲಿಯೂ ಮಹಾರಾಜರ ಸುಳಿವು ಸಿಗಲಿಲ್ಲ। ಈ ಸ್ಥಿತಿಯಲ್ಲಿ ಮನೆಗೆ ಬಂದ ತಮ್ಮ ಪುತ್ರನ ಮುಖವನ್ನು ನೋಡಿ ತಂದೆ ಭವಾನಿರಾಮನು ಪ್ರಶ್ನಿಸಿದನು – "ಮಗನೇ, ನಿನ್ನ ಮುಖವು ಏಕೆ ಕಳೆಗುಂದಿದೆ ? ನಿನ್ನ ಆರೋಗ್ಯವು ಸರಿ ಇದೆ ತಾನೇ ? ನೀನು ಬಹಳ ತೊದರೆಯಲ್ಲಿದ್ದಂತೆ ಕಾಣುತ್ತಿದ್ದೆ। ನಿನ್ನ ಉದಾಸೀನತೆಯ ಕಾರಣವೇನು। ನೀನು ಇನ್ನೂ ತರುಣ। ದೇವರ ಕೃಪೆಯಿಂದ ಯಾವ ವಿಷಯದ ಬಗ್ಗೆ ಚಿಂತಿಸುವ ಸ್ಥಿತಿ ನಿನ್ನ ಮೇಲೆ ಬಂದಿಲ್ಲ। ನನಗೆ ನಿನ್ನ ಚಿಂತೆಯ ಕಾರಣವನ್ನು ಹೇಳು। ನಿನಗೆ ಯಾವ ಶಾರೀರಿಕ ತೊಂದರೆ ಇಲ್ಲ

ತಾನೇ ? ಮಗನು ತಂದೆಯಿಂದ ಯಾವ ಮಾತನ್ನು ಮುಚ್ಚಿಡಬಾರದು" । ಇಷ್ಟು ನುಡಿದರೂ ಬಂಕಟಲಾಲನು ತನ್ನ
ಮಾನಸಿಕ ವ್ಯಥೆಯನ್ನು ತಂದೆಗೆ ಹೇಳಲಿಲ್ಲ। ಅಲ್ಲಿ ಇಲ್ಲಿಯ ಸಣ್ಣ ಮಾತುಗಳನ್ನು ಹೇಳಿ ಬಂಕಟಲಾಲನು ತಂದೆಯಿಂದ
ಬಿಡುಗಡೆ ಹೊಂದಿದನು । ಮತ್ತು ಮರಳಿ ಶೇಗಾಂವದಲ್ಲಿ ಮಹಾರಾಜರಿಗೆ ಹುಡುಕಲಾರಂಭಿಸಿದನು । ಬಂಕಟಲಾಲನ
ಮನೆಯ ಬಳಿ ಒಬ್ಬ ವೃದ್ಧ ಜಮೀನುದಾರರು ವಾಸಿಸುತ್ತಿದ್ದರು । ಅವರು ಸದಾಚಾರಿಯಾಗಿದ್ದರು । ಅವರಿಗೆ ತಮ್ಮ
ಹಿರಿಮೆಯ ಬಗ್ಗೆ ಎಳ್ಳಷ್ಟು ಗರ್ವವಿರಲಿಲ್ಲ। ಅವರ ಹೆಸರು – ರಾಮಜಿಪಂತ ದೇಶಮುಖ। ಕೊನೆಗೆ ಮಹಾರಾಜರ
ಬಗ್ಗೆ ಎಲ್ಲ ಮಾತುಗಳನ್ನು ಬಂಕಟಲಾಲನು ರಾಮಜಿಪತರಿಗೆ ಹೇಳಿದನು । ಅವರು ಬಂಕಟಲಾಲನ ಮಾತುಗಳನ್ನು
ಕೇಳಿ ನೀನು ಯಾವ ಯೋಗಿ ಪುರುಷರ ಬಗ್ಗೆ ಹೇಳುತ್ತಿರುವೆಯೋ ಅವರು ಅವಶ್ಯವಾಗಿ ಸಿದ್ಧ ಪುರುಷರಿದ್ದಾರೆ ಂದು
ನುಡಿದರು । ನಿಶ್ಚಿತವಾಗಿ ಸಿದ್ಧ ಪುರುಷರಲ್ಲಿ ಮಾತ್ರ ಈ ಎಲ್ಲ ಗುಣಗಳು ಕಂಡು ಬರುತ್ತವೆ । ಭಾಗ್ಯವಂತರಿಗೆ ಮಾತ್ರ
ಇಂತಹ ಸಿದ್ಧಯೋಗಿಗಳ ದರ್ಶನವಾಗುತ್ತದೆ । ನಂತರ ಅವರು ತಮ್ಮ ಮನಸ್ಸಿನಲ್ಲಿರುವ ವಿಚಾರಗಳನ್ನು ಈ ಪ್ರಕಾರ
ನುಡಿದರು । ಎಲೈ ಬಂಕಟ ! ನಿನಗೆ ಇಂತಹ ಯೋಗಿರಾಜರ ದರ್ಶನ ಪಡೆಯುವ ಸೌಭಾಗ್ಯ ದೊರಕಿರುವದರಿಂದ
ನಿನ್ನ ಮಾನವೀ ಜೀವನವು ನಿಶ್ಚಿತವಾಗಿ ಸಾರ್ಥಕವಾಗಿದೆ । ಒಂದು ವೇಳೆ ಇಂತಹ ಸಂಧಿ ಮತ್ತೊಮ್ಮೆ ದೊರಕಿದರೆ
ನನಗೆ ಕೂಡಾ ಅವರ ಬಳಿ ಕರೆದುಕೊಂಡು ಹೋಗು । ಈ ಂಚಿತೆಯಲ್ಲಿಯೇ ನಾಲ್ಕು ದಿನಗಳು ಕಳೆದವು । ಆದರೆ
ಮಹಾರಾಜರಿಗಾಗಿ ಬಂಕಟಲಾಲನ ಮೋಹವು ಕಡಿಮೆಯಾಗಲಿಲ್ಲ। ಗೋವಿಂದ ಬುವಾ ಟಾಕಳಿಕರ ಎಂಬ ಹೆಸರಿನ
ಪ್ರಸಿದ್ಧ ಕೀರ್ತನಕಾರರಿದ್ದರು । ಯಾರ ಕೀರ್ತನೆಯ ಮೇಲೆ ಸ್ವಯಂ ಶಾರ್ಙ್ಗಧರ (ದೇವರು) ಪ್ರಸನ್ನನಾಗಿದ್ದನು ।
ವರ್ಹಾಡ ಪ್ರಾಂತದಲ್ಲಿ ಅವರ ಕೀರ್ತನೆಯ ಪ್ರಸಿದ್ಧಿಯು ನಾಲ್ಕು ದಿಕ್ಕಿನಲ್ಲಿ ಕೇಳಿ ಬರುತ್ತಿತ್ತು। ಆ ದಿನಗಳಲ್ಲಿ ಅವರು
ಕೀರ್ತನೆ ಮಾಡಲು ಶೇಗಾಂವಿಗೆ ಬಂದಿದ್ದರು । ಭಗವಾನ ಶಂಕರನ ಮಂದಿರದಲ್ಲಿ ಅವರ ಕೀರ್ತನೆಯ ಸಿದ್ಧತೆಯು
ನಡೆದಿತ್ತು । ಊರ ಜನರು ಅವರ ಕೀರ್ತನೆಯನ್ನು ಕೇಳಲು ಅಲ್ಲಿ ನೆರೆದಿದ್ದರು । ಬಂಕಟಲಾಲನು ಅಲ್ಲಿಯೇ
ಹೊರಟಿದ್ದನು, ಆಗ ರಸ್ತೆಯಲ್ಲಿ ಅವನಿಗೆ ಪೀತಾಂಬರ ಎಂಬ ಹೆಸರಿನ ಸಿಂಪಿಗೆ ಜಾತಿಯ ಮಿತ್ರನು ಭೆಟ್ಟಿಯಾದನು ।
ಪೀತಾಂಬರನು ಭಾವಿಕನು ಹಾಗೂ ಸಜ್ಜನನು ಇದ್ದನು । ಮಾತು–ಮಾತಿನಲ್ಲಿ ಬಂಕಟಲಾಲನು ಮಹಾರಾಜರ ಬಗ್ಗೆ 
ಅವನಿಗೆ ಹೇಳಿದನು । ಅವರು ಮಾತನಾಡುತ್ತ ಮುಂದೆ ಸಾಗಿದಾಗ, ಮಂದಿರದ ಹಿಂದೆ ಕುಳಿತ ಮಹಾರಾಜರು ಕಂಡು





ಬಂದರು । ಮಹಾರಾಜರನ್ನು ಕಂಡ ಕೂಡಲೆ ನಿರ್ಧನನು ಧನಕಲಶದ ಹಿಂದೆ ಮೈ ಮೈರೆತು ಓಡಿದಂತೆ ಮಹಾರಾಜರ
ಕೆಗೆ ಓಡಿಹೋದರು । ಚಕೋರವು ಚಂದ್ರನನ್ನು ನೋಡಿ, ಹಾಗೂ ನವಿಲು ಮೋಡಗಳನ್ನು ಕಂಡು ಆನಂದಿತರಾದಂತೆ
ಅವರಿಬ್ಬರ ಸ್ಥಿತಿ ಮಹಾರಾಜರನ್ನು ನೋಡಿದಾಗ ಆಗಿತ್ತು। ಮಹಾರಾಜರ ಸಮೀಪಕ್ಕೆ ಹೋಗಿ ವಿನಯದಿಂದ ನುಡಿದರು।
"ಮಹಾರಾಜ ತಮಗೆ ತಿನ್ನಲು ಏನಾದರು ತಂದು ಕೊಡಲೆ ?" ಮಹಾರಾಜರು ನುಡಿದರು – "ನಿಮಗೆ ಬೇಕಿದ್ದರೆ
ತೋಟಿಗನ ಹೆಂಡತಿಯಿಂದ ಜೋಳದ ರೊಟ್ಟಿ ಮತ್ತು ಕಡಲೆಹಿಟ್ಟಿನ ಝುಣಕವನ್ನು ತಂದು ಕೊಡಿ ।" ಬಂಕಟಲಾಲನು
ಓಡಿಹೋಗಿ, ಸ್ವಲ್ಪ ಸಮಯದಲ್ಲಿ ಅರ್ಧ ರೊಟ್ಟಿ ಮತ್ತು ಝುಣಕವನ್ನು ತಂದು ಮಹಾರಾಜರ ಕೈಯಲ್ಲಿಟ್ಟನು ।
ರೊಟ್ಟಿಯನ್ನು ತಿನ್ನುತ್ತ ಮಹಾರಾಜರು ಪೀತಾಂಬರನಿಗೆ ಕಮಂಡಲದಲ್ಲಿ ನೀರನ್ನು ತರಲು ಹೇಳಿದರು ।
ಸಮೀಪದಲ್ಲಿಯೇ ಒಂದು ನೀರಿನ ಹಳ್ಳವಿದೆ, ಅಲ್ಲಿಂದ ನೀರನ್ನು ತಂದು ಕೊಡು । ಅವರ ಮಾತುಗಳನ್ನು ಕೇಳಿ,
ಪೀತಾಂಬರನು ನುಡಿದನು. "ಮಹಾರಾಜ, ಆ ನೀರು ಬಹಳ ಹೊಲಸು, ಮತ್ತು ಅದರಲ್ಲಿ ಈ ಕಮಂಡಲು ಕೂಡಾ
ಮುಳುಗುವದಿಲ್ಲ । ಇಷ್ಟೇ ಅಲ್ಲದೆ ಆ ನೀರನ್ನು ದನಗಳು ಕೆಡಿಸಿರುವದರಿಂದ, ಕುಡಿಯಲು ಯೋಗ್ಯವಿಲ್ಲ । ತಮ್ಮ
ಇಚ್ಛೆಯಿದ್ದರೆ, ಬೇರೆ ಕಡೆಯಿಂದ ಶುದ್ಧ ನೀರನ್ನು ತಂದು ಕೊಡುತ್ತೇನೆ । ಮಹಾರಾಜರು ಹೇಳಿದರು, "ಬೇರೆ ಸ್ಥಳದಿಂದ
ನನಗೆ ನೀರು ಬೇಡ । ನಾನು ಹೇಳಿದಂತೆ ಮಾಡು । ಕೈಯಿಂದ ಕಮಂಡಲದಲ್ಲಿ ನೀರನ್ನು ತುಂಬದೆ, ಅದನ್ನು ನೀರಿನಲ್ಲಿ
ಮುಳಿಗಿಸಿ ತಂದುಕೊಡು ।" ಕಮಂಡಲು ತೆಗೆದುಕೊಂಡು ಪೀತಾಂಬರನು ಹಳ್ಳದ ಸಮೀಪಕ್ಕೆ ಬಂದನು । ಆದರೆ
ಕಮಂಡಲು ತುಂಬುವಷ್ಟು ನೀರು ಎಲ್ಲಿಯೂ ಕಂಡು ಬರಲಿಲ್ಲ। ಏಕೆಂದರೆ ಹಳ್ಳದಲ್ಲಿ ಪಾದ ಮುಳಗುವಷ್ಟು ಮಾತ್ರ
ನೀರಿತ್ತು । ಈ ಸ್ಥಿತಿಯಲ್ಲಿ ಕಮಂಡಲುದಲ್ಲಿ ನೀರನ್ನು ಹೇಗೆ ತುಂಬುವದು ಸಾಧ್ಯ ? ಪೀತಾಂಬರನು ವಿಚಾರ
ಮಗ್ನನಾದನು । ಕೊನೆಗೆ ಮಹಾರಾಜರ ಆಜ್ಞೆಯನ್ನು ಪಾಲಿಸುವ ವಿಚಾರದಿಂದ ನೀರಿನ ಮೇಲೆ ಕಮಂಡಲುವನ್ನು
ಇಟ್ಟನು । ಆಗ ಒಂದು ಆಶ್ಚರ್ಯವಾಯಿತು, ಕಮಂಡಲು ನೀರಿನಲ್ಲಿ ಮುಳುಗತೊಡಗಿತು । ಅಷ್ಟೇ ಅಲ್ಲದೆ, ಹಳ್ಳದಲ್ಲಿ
ನೀರು ಹೊಲಸು ಕಾಣುತ್ತಿತ್ತು, ಆದರೆ ಕಮಂಡಲುನಲ್ಲಿ ಸ್ಫಟಿಕದಂತೆ ಶುಭ್ರ ಶುದ್ಧ ನೀರಿತ್ತು । ಪೀತಾಂಬರನು
ಆಶ್ಚರ್ಯಚಕಿತನಾದನು । ಇಂತಹ ಚಮತ್ಕಾರ, ಸಿದ್ಧಯೋಗಿಯ ಹೊರತು ಯಾರಿಂದ ಸಾಧ್ಯ ? ಪೀತಾಂಬರನು 
ಕಮಂಡಲು ಮಹಾರಾಜರ ಮುಂದೆ ಇಟ್ಟನು । ಮಹಾರಾಜರು ಊಟ ಮಾಡು ಕಮಂಡಲುದಿಂದ ನೀರನ್ನು ಕುಡಿದರು।

ನಂತರ ಮಹಾರಾಜರು ಬಂಕಟಲಾಲನಿಗೆ ನುಡಿದರು – "ಏನು ! ಕೇವಲ ತೋಟಿಗನ ಮನೆಯಿಂದ ಊಟವನ್ನು
ತಂದುಕೊಟ್ಟು ಸೇವೆ ಮಾಡುವ ವಿಚಾರ ಇದೆಯೇ ? ಕಿಸೆಯಿಂದ ಅಡಿಕೆಯನ್ನು ತೆಗೆದು, ಅದನ್ನು ಕತ್ತರಿಸಿ ನನಗೆ
ಕೊಡು।" ಇದನ್ನು ಕೇಳಿ ಬಂಕಟಲಾಲನು ಆನಂದಿತನಾದನು ಅವನು ಅಡಿಕೆಯ ಜೊತೆಗೆ ಎರಡು ಪೈಸೆಯನ್ನು
ಮಹಾರಾಜ ಕೈಯಲ್ಲಿ ಇಟ್ಟನು । ಹಣವನ್ನು ನೋಡಿ ಮಹಾರಾಜರು ಮುಗುಳ್ನಕ್ಕು ನನಗೆ ವ್ಯಾಪಾರಿಯೆಂದು ತಿಳಿದು
ನೀನು ಈ ತುಂಡುಗಳನ್ನು ಏಕೆ ಕೊಡುತ್ತಿರುವಿ ಎಂದು ಪ್ರಶ್ನಿಸಿದರು । ನನಗೆ ಇದರ ಅವಶ್ಯಕತೆ ಇಲ್ಲ। ನಾನು ಭಕ್ತನ
ಭಾವ–ಭಕ್ತಿಯ ಮೇಲೆ ಸಂತುಷ್ಟನಾಗುತ್ತೇನೆ । ನಿನ್ನ ಬಳಿ ಭಕ್ತಿಭಾವ ಇರುವದರಿಂದಲೇ ಇಂದು ನಮ್ಮ ಭೆಟ್ಟಿಯಾಗಿದೆ।
ಈಗ ಇಬ್ಬರೂ ಹೋಗಿ ಕೀರ್ತನೆಯನ್ನು ಕೇಳಿರಿ । ನಾನು ಬೇವಿನ ಮರದ ಅಡಿಯಲ್ಲಿ ಕುಳಿತು ಕೀರ್ತನೆಯನ್ನು
ಕೇಳುತ್ತೇನೆ । ಇಬ್ಬರೂ ಎದ್ದು ಹೋದರು, ಮತ್ತು ಮಹಾರಾಜರು ಮರದಡಿಯಲ್ಲಿ ಕುಳಿತರು । ಕೀರ್ತನೆಯು ಆರಂಭ
ವಾಯಿತು । ಕೀರ್ತನೆಯ ಪೂರ್ವಾರ್ಧವು ಮುಗಿದೊಡನೆ ಅದರ ಉತ್ತರಾರ್ಧವನ್ನು ಮಹಾರಾಜರು ನುಡಿದರು ।
ಗೋವಿಂದ ಬುವಾ ಮನದಲ್ಲಿ ವಿಚಾರಮಗ್ನರಾದರು । ಉತ್ತರಾರ್ಧವನ್ನು ಸರಿಯಾಗಿ ಹೇಳುವ ಇವರು ಅವಶ್ಯವಾಗಿ
ಮಹಾತ್ಮರು ಇರಬಹುದು । ಆದ್ದರಿಂದ ಅವರು ಮಹಾರಾಜರಿಗೆ ಮಂದಿರದಲ್ಲಿ ತರುವ ಇಚ್ಛೆಯನ್ನು ತೋರಿಸಿದರು।
ಬಂಕಟಲಾಲ, ಪೀತಾಂಬರ ಹಾಗೂ ಇನ್ನಿತರ ಸಜ್ಜನರು ಮಹಾರಾಜರ ಬಳಿಗೆ ಬಂದು ಮಂದಿರದಲ್ಲಿ ಬರಲು
ಬಿನ್ನವಿಸಿದರು । ಆದರೆ ಮಹಾರಾಜರು ಮಂದಿರದ ಒಲಗೆ ಹೋಗಲು ನಿರಾಕರಿಸಿದರು । ಕೊನೆಗೆ ಗೋವಿಂದಬುವಾ
ಸ್ವತಃ ಮಹಾರಾಜರ ಬಳಿಗೆ ಹೋಗಿ ಮಂದಿರದ ಒಳಗೆ ಬರಲು ವಿನಮ್ರನಾಗಿ ಪ್ರಾರ್ಥಿಸಿ "ಮಹಾರಾಜರೇ, ತಾವು
ಸಾಕ್ಷಾತ ಶಿವಶಂಕರ । ಮಂದಿರದ ಹೊರಗೆ ಕೂಡ್ರುವದು ತಮಗೆ ಶೋಭಿಸುವದಿಲ್ಲ। ಮಾಲಿಕನಿಲ್ಲದೆ ಮನೆಯ ಬಿಕೋ
ಎನಿಸುತ್ತದೆ । ನನ್ನ ಪರಮ ಭಾಗ್ಯದಿಂದಲೇ ಇಂದು ಶ್ರೀ ಚರಣಗಳ ದರ್ಶನ ಸೌಭಾಗ್ಯವು ಪ್ರಾಪ್ತವಾಗಿದೆ । ಈ ದಿನದ
ವರೆಗೆ – ನನಗೆ ಸಾಧ್ಯವಾದಷ್ಟು ಸೇವೆಯನ್ನು ಕೀರ್ತನೆಯ ರೂಪದಲ್ಲಿ ಮಾಡಿದ್ದೇನೆ, ಅದರ ಫಲವು ಇಂದು
ದೊರಕಿತು । ಆದ್ದರಿಂದ ಗುರುಮಹಾರಾಜರೇ, ದೇವಾಲಯದಲ್ಲಿ ಬಂದು ನನಗೆ ಕೃತಾರ್ಥಮಾಡಿರಿ । ಆಗ
ಮಹಾರಾಜರು ಹರಿದಾಸರು ನುಡಿದಂತೆ ನಡೆಯಬೇಕು ಎಂದು ಹೇಳಿದರು । ಈಗತಾನೆ ಕೀರ್ತನೆ – ಮಾಡುವಾಗ ॥ 14 ॥
ತಾವು ಈಶ್ವರನು ಸರ್ವವ್ಯಾಪಿಯೆಂದು ಹೇಳಿದಿರಿ । ಒಳಗೆ ಹಾಗೂ ಹೊರಗೆ ಅವನೇ ವಾಸಿಸಿದ್ದಾನೆ । ಇಂತಹ ಸ್ಥಿತಿಯಲ್ಲಿ




ನೀವು ನನಗೆ ಮಂದಿರದಲ್ಲಿ ಬರಲು ಏಕೆ ಒತ್ತಾಯ ಮಾಡುತ್ತಿರುವಿರಿ ? ನುಡಿದಂತೆ ನಡೆಯುವದು ಮಾನವಧರ್ಮ।
ಸಾಧಕನಿಗೆ ಈ ನಿಯಮದ ಪಾಲನೆಯು ಅವಶ್ಯಕ । ಭಾಗವತ ಗ್ರಂಥದ ಶ್ಲೋಕದ ಮೇಲೆ ವಿತರಣೆ ಕೊಡುವಾಗ
ತಮ್ಮ ವರ್ತನೆಯು ಅದರ ವಿರುದ್ಧವಿರಬಾರದು । ಕೀರ್ತನಕಾರನ ನುಡಿ ಹಾಗೂ ನಡೆ ಒಂದಾಗಿರಬೇಕು। ಕೇವಲ
ಹೊಟ್ಟೆಯನ್ನು ತುಂಬಲು ಹರಿಕಥೆಯನ್ನು ಹಾಡಬೇಡಿರಿ । ಈಗ ಮಂದಿರದಲ್ಲಿ ಹೋಗಿ ಕೀರ್ತನೆಯನು ಮುಗಿಸಿರಿ,
ನಾನು ಇಲ್ಲಿಂದಲೇ ಕೇಳುತ್ತೇನೆ । ಮಹಾರಾಜರ ವಾಣಿಯಿಂದ ಕೀರ್ತನಕಾರರು ಪ್ರಭಾವಿತರಾಗಿ ಎಲ್ಲ ಉಪಸ್ಥಿತಿಯಲ್ಲಿ
ನುಡಿದರು "ಶೇಗಾಂವಿಗೆ ಒಂದು ಅಮೂಲ್ಯವಾದ ರತ್ನವು ಪ್ರಾಪ್ತವಾಗಿದೆ । ನುಡಿ–ನಡೆಯುವ ಪಾಂಡುರಂಗನು
ನಮಗೆ ದೊರಕಿದ್ದಾನೆ । ಆಂತರಿಕ ಭಾವನೆಯಿಂದ ಅವರ ಸೇವೆಯನ್ನು ಮಾಡಿರಿ । ಅವರ ಒಂದೊಂದು ವಾಕ್ಯವನ್ನು
ವೇದವಾಕ್ಯದಂತೆ ತಿಳಿಯಿರಿ । ಹೀಗೆ ಮಾಡುವದರಲ್ಲೇ ನಿಮ್ಮ ಕಲ್ಯಾಣ । ತಮಗೆ ದೊರೆತ ಅಮೂಲ್ಯವಾದ ರತ್ನವನ್ನು
ಕಳೆಯದಿರಿ ।" ಮಹಾರಾಜರ ಸನ್ನಿಧಿಯಲ್ಲಿ ಕೀರ್ತನೆಯು ಹರ್ಷೋಲ್ಲಾಸದಲ್ಲಿ ಮುಗಿಯಿತು ಮತ್ತು ಎಲ್ಲ ಜನರು
ಪ್ರಫುಲ್ಲಿತರಾಗಿ ಮನೆಗೆ ಹೋದರು । ಬಂಕಟಲಾಲನು ಅಲ್ಲಿ ನಡೆದ ಮಾತುಗಳನ್ನು ತಂದೆಗೆ ಹೇಳಿ, ಮಹಾರಾಜರನ್ನು
ಮನೆಗೆ ತರಲು ಅಪ್ಪಣೆಯನ್ನು ಕೇಳಿದನು । ತಂದೆಯು ತಮ್ಮ ಪುತ್ರನ ಮಾತುಗಳನ್ನು ಕೇಳಿ ಆನಂದಿತವಾಗಿ
ಮಹಾರಾಜರಿಗೆ ತಮ್ಮ ಮನೆಗೆ ತರಲು ಅಪ್ಪಣೆಯನ್ನು ಕೊಟ್ಟನು । ತಂದೆಯ ಅನುಮತಿಯಿಂದ ಆನಂದಿತನಾಗಿ
ಬಂಕಟಲಾಲನು ಮಹಾರಾಜರನ್ನು ಆದರದಿಂದ ಮನೆಗೆ ತರಲು ಅವರ ದರ್ಶನವು ಯಾವಾಗ ಆಗುವದೋ ಎಂದು
ವಿಚಾರಮಗ್ನನಾದನು । ನಾಲ್ಕು ದಿನಗಳ ನಂತರ ಒಂದು ದಿನ ಸಂಜೆಗೆ ಮಾಣಿಕ ಚೌಕದಲ್ಲಿ ಬಂಕಟಲಾಲನಿಗೆ
ಮಹಾರಾಜ ಭೆಟ್ಟಿಯಾಯಿತು । ಆ ಸಮಯವು ಬಹಳ ಸುಂದರವಾಗಿತ್ತು, ಒಂದು ಕಡೆ ಸೂರ್ಯನು ಮುಳುಗುತ್ತಿದ್ದನು
ಮತ್ತು ಒಂದು ಕಡೆ ಬೋಧ ಸೂರ್ಯನು ಬಂಕಟಲಾಲನ ಸೌಭಾಗ್ಯದಿಂದ ಮಾಣಿಕಚೌಕದಲ್ಲಿ ಪ್ರಕಟರಾದರು ।
ಗೋಧೂಳಿಯ ಸಮಯದಲ್ಲಿ ದನಗಳು ತಿರುಗಿ ಮನೆಗೆ ಹೊರಟಿದ್ದವು । ಮಹಾರಾಜರನ್ನು ಕಂಡು ಸಾಕ್ಷಾತ
ಶ್ರೀಕೃಷ್ಣನನ್ನು ಕಂಡಂತೆ ಆಕಳುಗಳು ಮಹಾರಾಜರ ಬಳಿಗೆ ನೆರೆದವು । ಗಿಡಮರಗಳು ಹಕ್ಕಿಗಳು ಆನಂದದಿಂದ
ಹಾಡತೊಡಗಿದವು । ಸಂಜೆಯಾಗಿದ್ದರಿಂದ ಅಂಗಡಿ ಮಾಲಕರು ದೀಪಗಳನ್ನು ಹಚ್ಚುವದರಲ್ಲಿದ್ದರು ಇಂತಹ ಸಮಯ ॥ 15 ॥
ದಲ್ಲಿ ಬಂಕಟಲಾಲನು ಮಹಾರಾಜರನ್ನು ಕರೆದುಕೊಂಡು ಮನೆಗೆ ತಲುಪಿದನು । ಅವನ ತಂದೆಗೆ ಮಹಾರಾಜರನ್ನು

ನೋಡಿ ಅತ್ಯಾನಂದವಾಯಿತು । ನಂತರ ಅವರು ಮಹಾರಾಜರಿಗೆ ಸಾಷ್ಟಾಂಗ ನಮಸ್ಕಾರಮಾಡಿ, ಆದರದಿಂದ
ಮಹಾರಾಜರಿಗೆ ಸುಖಾಸನದ ಮೇಲೆ ಕೂಡ್ರಿಸಿ ತಮ್ಮ ಮನೆಯಲ್ಲಿಯೇ ಪ್ರಸಾದ ಸೇವಿಸಲು ಬಿನ್ನವಿಸಿದರು ।
ಪ್ರದೋಷದ ಶುಭ ಸಮಯಕ್ಕೆ ಬಂದ ತಾವು ಸಾಕ್ಷಾತ್ ಪಾರ್ವತಿ ಕಾಂತ । ಸ್ಕಂದ ಪುರಾಣದಲ್ಲಿ ಪ್ರದೋಷ ಸಮಯಕ್ಕೆ
ಪೂಜೆಮಾಡುವರು (ಶಿವನ) ಭಾಗ್ಯವಂತರು ಎಂದು ನಮೂದಿಸಿದೆ । ಹೀಗೆ ನುಡಿಯುತ್ತ ಅವರು ಒಳಗೆ ಹೋಗಿ,
ಬಿಲ್ವಪತ್ರಿಯನ್ನು ತಂದು ಆದರದಿಂದ ಮಹಾರಾಜರ ಚರಣದಲ್ಲಿ ಅರ್ಪಿಸಿದರು । ಭವಾನಿರಾಮರಿಗೆ ಒಂದು ಚಿಂತೆ,
ನಾನಾದರೋ ಇವರಿಗೆ ಊಟಕ್ಕೆ ಆಮಂತ್ರಿಸಿದೆ, ಆದರೆ ಊಟವು ಸಿದ್ಧವಾಗುವದರಲ್ಲಿ ಸಮಯವಿದೆ । ಅಲ್ಲಿಯವರೆಗೆ,
ಮಹಾರಾಜರು ನಿಲ್ಲದೆಹೋದರೆ, ಪ್ರದೋಷದ ಸಮಯದಲ್ಲಿ ಪಾರ್ವತಿಕಾಂತನಿಗೆ ಉಪವಾಸ ಮಾಡಿಸಿದ ಪಾಪವೂ
ತಮ್ಮ ಪಾಲಿಗೆ ಬಂದಿತು ಎಂದು ಚಿಂತಿಸಿದರು । ಬಂಕಟಲಾಲನ ಮನೆಗೆ ಮಹಾರಾಜರು ಬಂದಿರುವ ಸುದ್ದಿಯು ಹಬ್ಬಿತು
ಮತ್ತು ಮಹಾರಾಜರನ್ನು ನೋಡಲು ಜನಸಮುದಾಯವು ನೆರೆಯಿತು । ಊಟವು ಸಿದ್ಧವಾಗಲು ಸಮಯವಿತ್ತು, ಮತ್ತು
ಮಹಾರಾಜರು ಊಟಮಾಡದೇ ಹೋಗದಿರುವಂತೆ ಭವಾನಿರಾಮನಿಗೆ ಒಂದು ಉಪಾಯವು ಹೊಳೆಯಿತು ।
ಮಧ್ಯಾಹ್ನದಲ್ಲಿ ಮಾಡಿದ ಪೂರಿಗಳನ್ನೇ ಮಹಾರಾಜರಿಗೆ ನೀಡಬೇಕು । ಅವನೆಣಿಶಿದನು, ಹೀಗೆ ಮಾಡವದರಲ್ಲಿ ನಿನ್ನ
ಮನಸ್ಸಿನಲ್ಲಿ ಪಾಪದ ಭಾವನೆಯು ಇಲ್ಲ ಎಂದು । ಶಿವನು ನಿಜವಾದ ಆಂತರಿಕ ಭಾವಭಕ್ತಿಯಿಂದಲೇ ಪ್ರಸನ್ನನಾಗುತ್ತಾನೆ।
ನಾನು ಹಳಸಿದ ಅನ್ನವನ್ನು ಅವರಿಗೆ ನೀಡುತ್ತಿಲ್ಲ। ಏಕೆಂದರೆ ಪಕ್ವಾನ್ನವನ್ನು ಹಳಸಿದ ಅನ್ನವೆಂದು ಹೇಳುವದು ಅಸಾಧ್ಯ।
ತಮ್ಮ ಮನಸ್ಸಿನಲ್ಲಿ ನಿಶ್ಚಯಮಾಡಿದೊಡನೆ ಭವಾನಿರಾಮನು ಮಹಾರಾಜರ ಮುಂದೆ ಊಟದ ತಟ್ಟೆಯನ್ನು ಇಟ್ಟನು।
ಆ ತಟ್ಟೆಯಲ್ಲಿ ಪೂರಿ, ಉತ್ತತ್ತಿ, ಬಾಳೆಹಣ್ಣು, ಮೊದಲಾದವು ಇದ್ದವು । ಅವನು ಮಹಾರಾಜರಿಗೆ ಕುಂಕುಮ ತಿಲಕವನ್ನು
ಇಟ್ಟು ಹೂಮಾಲೆಯನ್ನು ಅರ್ಪಿಸಿದನು । ಗುರುಗಳು ಪ್ರಸನ್ನ ಚಿತ್ತದಿಂದ ನೀಡಿದ್ದನ್ನು, ಸಂಪೂರ್ಣವಾಗಿ ತಿಂದು
ಮುಗಿಸುತ್ತಿದ್ದರು । ಸುಮಾರು ಮೂರು ಶೇರು ಅನ್ನವನ್ನು ಮಹಾರಾಜರು ತಿಂದು ಮುಗಿಸಿದರು । ಆ ರಾತ್ರಿ
ಮಹಾರಾಜರು ಅಲ್ಲಿಯೇ ತಂಗಿದರು । ಬಂಕಟಲಾಲನು ಮರುದಿನ ಸಡಗರದಿಂದ ಮಹಾರಾಜರಿಗೆ ಮಂಗಲಸ್ನಾನವನ್ನು
ಮಾಡಿಸಿದನು, ಅದರ ವರ್ಣನೆಯನ್ನು ಮಾಡುವದು ಹೇಗೆ ಸಾಧ್ಯ । ಮಹಾರಾಜರಿಗೆ ಪ್ರಫುಲ್ಲ ಚಿತ್ತದಿಂದ ಮೊದಲು ॥ 16 ॥
ಸುಗಂಧಿತ ತೈಲದಿಂದ ಮಾಲಿಸುವಮಾಡಿ, ಕೇಶರ, ಕಸ್ತೂರಿಯುಕ್ತ ಲೇಪವನ್ನು ಹಚ್ಚಿದರು । ಕೆಲವರು ಪ್ರೇಮದಿಂದ



ಮಹಾರಾಜರ ಪಾದಕಮಲಗಳನ್ನು ಮಾಲಿಸು ಮಾಡುತ್ತಿದ್ದರು । ಈ ತರಹ ನೂರಕ್ಕೆ ಮೇಲೆ ಕೂಡ ಉಷ್ಣೋದಕದಿಂದ
ಅನೇಕ ನರನಾರಿಯರು ಮಹಾರಾಜರಿಗೆ ಸ್ನಾನ ಮಾಡಿಸಿದರು । ಆ ಸ್ನಾನವಿಧಿಯ ವರ್ಣನೆಯು ಅಸಾಧ್ಯ । ಏಕೆಂದರೆ
ಬಂಕಟಲಾಲನ ಮನೆಯಲ್ಲಿ ಯಾವದೇ ವಸ್ತುವು ಕಡಿಮೆ ಇರಲಿಲ್ಲ। ಸ್ನಾನದ ನಂತರ ಮಹಾರಾಜರಿಗೆ ಪೀತಾಂಬರವನ್ನು
ಉಡಿಸಿ, ಸನ್ಮಾನದಿಂದ ಸುಖಾಸನದ ಮೇಲೆ ಕೂಡಿಸಿದರು । ಅವರ ಹಣೆಯ ಮಲೇ ಕೇಶರಿಮಿಶ್ರಿತ ತಿಲಕವನ್ನು
ಇಟ್ಟರು। ಅವರ ಕೊರಳು ಅನೇಕ ಪ್ರಕಾರದ ಹಾರಗಳಿಂದ ಸುಶೋಭಿಸುತ್ತಿತ್ತು। ಅನೇಕ ಪ್ರಕಾರದ ಪ್ರಸಾದಗಳನ್ನು
ಅರ್ಪಿಸಲಾಯಿತು । ಬಂಕಟಲಾಲನ ಭಾಗ್ಯವೇ ಅನೇಕ ರೂಪಗಳಲ್ಲಿ ಕಂಡುಬಂದಂತೆ ಇತ್ತು। ಆದಿನ ಶಿವನ ಪವಿತ್ರ
ಸೋಮವಾರ । ಆ ದಿನ ಶ್ರೀಕೃಷ್ಣನ ದ್ವಾರಕೆಯು ಬಂಕಟಲಾಲನ ಮನೆಯಲ್ಲಿ ಅವರಿಸಿದಂತಿತ್ತು। ನೆರೆದ ಜನರಲ್ಲಿ
ಇಚ್ಛಾರಮನೆಂಬ ಒಬ್ಬ ಸಜ್ಜನನಿಗೆ ಅವನು ಬಂಕಟಲಾಲನ ಕಕ್ಕನ ಮಗನಾಗಿದ್ದನು – ಸೋಮವಾರದ
ಉಪಾವಾಸವಿದ್ದರಿಂದ ಪ್ರಸಾದವನ್ನು ಸೇವಿಸುವದು ಸಾಧ್ಯವಿರಲಿಲ್ಲ । ಅವನು ಸಂಜೆಗೆ ಶಿವನ ರೂಪದಲ್ಲಿ
ಮಹಾರಾಜರ ಪೂಜೆಯನ್ನು ಮಾಡುವ ಮತ್ತು ನಂತರ ಪ್ರಸಾದ ಸೇವಿಸುವ ಇಚ್ಛೆಯಿಂದ ಅನಶನವಿದ್ದನು । ಸಂಜೆಗೆ
ನಿಶ್ಚಿತ ವೇಳೆಗೆ ಸ್ನಾನವನ್ನು ಮಾಡಿ ಯಥಾಸಾಂಗ ಮಹಾರಾಜರ ಪೂಜೆಯನ್ನು ಮಾಡಿದನು । ಆನಂತರ ವಿನಯದಿಂದ
ಮಹಾರಾಜರಿಗೆ ವಿನಂತಿಸಿದನು "ಮಹರಾಜರೇ, ತಾವು ಮಧ್ಯಾಹ್ನ ಪ್ರಸಾದವನ್ನು ಸೇವಿಸಿರುವಿರಿ; ಆದರೆ ಈಗ ತಮಗೆ
ಸ್ವಲ್ಪವಾದರೂ ಸೇವಿಸಲೇಬೇಕು । ತಾವು ಸ್ವಲ್ಪವಾದರು ಸೇವಿಸಿದ ಹೊರತು ನಾನು ನನ್ನ ಉಪವಾಸವನ್ನು
ಮುಗಿಸಲಾರೆ । ಎಲ್ಲರ ಮನೋಕಾಮನೆಯನ್ನು ಪೂರ್ಣಮಾಡಿರಿ । ಅನಿಮಿಷ ನೇತ್ರಗಳಿಂದ ಎಲ್ಲ ಸಜ್ಜನರು
ಮಹಾರಾಜರು ಯಾವ ಲೀಲೆಯನ್ನು ಮಾಡುವರೋ ಎಂದು ನೋಡುತ್ತಿದ್ದರು । ಇಚ್ಛಾರಾಮನು ಒಂದು ದೊಡ್ಡ
ತಟ್ಟೆಯಲ್ಲಿ ಪ್ರಸಾದವನ್ನು ಮಹಾರಾಜರಿಗೆ ಅರ್ಪಿಸಿದನು । ಅನ್ನ ಹಾಗೂ ಪಲ್ಯೆಗಳ ಜೊತೆಗೆ ಅನೇಕ ಪ್ರಕಾರದ
ಪಕ್ವಾನ್ನಗಳು ಇದ್ದವು । ಜಿಲೇಬಿ, ರಘವದಾಸ, ಮೋತಿಚೂರಿನ ಉಂಡೆ, ಆಪೂಪ ಆದಿ ಪಕ್ವಾನ್ನಗಳನ್ನು ಮಾಡಿದ್ದರು,
ಅವುಗಳ ವರ್ಣನೆ ಮಾಡಲು ಹೇಗೆ ಸಾಧ್ಯ ? ಅನೇಕ ಪ್ರಕಾರದ ವಸ್ತುಗಳಿಂದ ತುಂಬಿದ ಪ್ರಸಾದದ ತಟ್ಟೆಯನ್ನು
ನೋಡಿ ಮಹಾರಾಜರು ತಮ್ಮಲ್ಲಿಯೇ ನುಡಿದರು – "ತಿನ್ನುವ ಹಂಬ ತಾನೇ ! ಈಗ ಈ ಎಲ್ಲ ವಸ್ತುಗಳನ್ನು ತಿಂದು ॥ 17 ॥
ಬಿಡು ।" ಆ ಮೇಲೆ ಮಹಾರಾಜರು ನೀಡಿದ ಎಲ್ಲ ವಸ್ತುಗಳನ್ನು ತಿಂದರು, ಉಪ್ಪು ಹಾಗೂ ಲಿಂಬೆಹಣ್ಣನ್ನೂ ಕೂಡ

ಬಿಡಲಿಲ್ಲ । ಒತ್ತಾಯ ಮಾಡುವ ಪರಿಣಾಮ ಏನಾಗುವದು ಎಂದು ಮಹಾರಾಜರು ಉಪಸ್ಥಿತರಿಗೆ ತೋರಿಸಿದರು । ಮಹಾರಾಜರು ವಾಂತಿಮಾಡಿ ಎಲ್ಲ ಊಟವನ್ನು ಹೊರಗೆ ಹಾಕಿದರು । ಇಂತಹ ಚಮತ್ಕಾರವನ್ನು ಸಜ್ಜನಗಡದ ರಾಮದಾಸಸ್ವಾಮಿ ಮಾಡಿದ್ದರು । ಸಾಧಕನಿಗೆ ಯಾವದೇ ಪ್ರಕಾರದ ಆಶೆಯು ಹಾನಿಕಾರಕ । ಆದ್ದರಿಂದ ರಾಮದಾಸರು ಪಾಯಸವನ್ನು ಮೇರೆಬಿಟ್ಟು ತಿಂದರು, ಅದರಿಂದ ಅವರಿಗೆ ವಾಂತಿಯಾಯಿತು । ವಾಂತಿಯಾದಿದ್ದನ್ನು, ಅವರು ಮತ್ತೇ ಸೇವಿಸಿದರು । ಈ ತರಹ ಅವರಿಗೆ ಪಾಯಸದ ಬಗ್ಗೆ ಘೃಣೆಯಾಯಿತು । ಊಟವನ್ನು ಅರಗಿಸುವ ಶಕ್ತಿ ಇದ್ದರೂ, ಮಹಾರಾಜರು ವಾಂತಿಮಾಡಿ ಜನರಿಗೆ ವತ್ತಾಯ ಮಾಡಿದರೆ ಪರಿಣಾಮ ಒಳ್ಳೆಯದಾಗುವದಿಲ್ಲ ಎಂದು ತೋರಿಸಿದರು । ಪ್ರಾಕೃತಿಕ ಧರ್ಮವನ್ನು ಸತ್ಪುರುಷರು ಪಾಲಿಸುತ್ತಾರೆ, ಆದರೆ ಜನಸಾಮಾನ್ಯರಿಗೆ ಅದು ತಿಳಿಯುವದು ಅವಶ್ಯಕ । ವಾಂತಿಯಾದ ಸ್ಥಳವನ್ನು ಸ್ವಚ್ಛಮಾಡಿ, ಮಹಾರಾಜರಿಗೆ ಸ್ನಾನ ಮಾಡಿಸಿ ಅದೇ ಸ್ಥಳದಲ್ಲಿ ಕೂಡ್ರಿಸಿದರು । ಮಹಾರಾಜರು ನಿಜಾನಂದದಲ್ಲಿ ಮಗ್ನರಾಗಿದ್ದರು । ಅಷ್ಟರಲ್ಲಿ ಭಜನಿ ಮಂಡಳಿಯ ಎರಡು ತಂಡಗಳು ಅಲ್ಲಿ ತಲುಪಿದವು । ಭಜನೆ ಮಾಡುವವನ ಕಂಠವು ಮಧುರವಾಗಿತ್ತು ಅವರ ಆನಂದದಿಂದ ವಿಠ್ಠಲ ಸ್ಮರಣೆಯನ್ನು ಆರಂಭಿಸಿದರು । ಭಜನೆಯನ್ನು ಕೇಳಿ ಮಹಾರಾಜರು ಆನಂದದಿಂದ "ಗಣ ಗಣ ಗಣಾತ ಬೋತೆ" ಎಂಬ ತಮ್ಮ ಭಜನೆಯನ್ನು ಹಾಡಲಾರಂಭಿಸಿದರು। ಈ ತರಹ ಸಂಪೂರ್ಣರಾತ್ರಿ ಇಲ್ಲಿ ಆನಂದದ ಸಂತೆಯು ನೆರೆದಿತ್ತು। "ಗಣ ಗಣ" ಎಂಬ ಅವರ ಅಖಂಡ ಭಜನೆಯನ್ನು ಕೇಳಿ, ಜನರು ಅವರ ಹೆಸರನ್ನು "ಗಜಾನನ" ಎಂದು ಇಟ್ಟರು । ಯಾವನು ಬ್ರಹ್ಮನೋ ಅವನಿಗೆ ನಾಮರೂಪದ ಅವಶ್ಯಕತೆಯೇ ಇಲ್ಲ । ನಾಮರೂಪದ ಅವಶ್ಯಕತೆ, ಕೇವಲ ಪ್ರಕೃತಿಯ ಆಧಾರದ ಮೇಲೆ ಇರುವವರಿಗೆ ಮಾತ್ರ । ಯೋಗೇಶ್ವರರು ಯಾವಾಗಲೂ ನಿಜಾನಂದದಲ್ಲಿ ಮಗ್ನರಾಗಿರುತ್ತಾರೆ । ಆಷಾಢಮಾಸದಲ್ಲಿ ಪಂಢರಪುರದಲ್ಲಿ ಸಿಂಹಿಸ್ಥರ ಶುಭ ಅವಸರದಲ್ಲಿ ಗೋದಾವರಿ ತೀರದಲ್ಲಿ ಕುಂಭಮೇಳದಲ್ಲಿ ಹರಿದ್ವಾರದಲ್ಲಿ ಜನರ ಗದ್ದಲವಿರುತ್ತದೆ । ಇದೇ ರೀತಿ, ಗಜಾನನ ಮಹಾರಾಜರ ಆಗಮನದಿಂದ ಶೇಗಾಂವದ ಬಂಕಟಲಾಲನ ಮನೆಯೂ ಒಂದು ತೀರ್ಥಸ್ಥಾನವಾಯಿತು । ಅಲ್ಲಿ ಯಾವಾಗಲೂ ಜನರು ಗದ್ದಲ ಆರಂಭವಾಯಿತು । ಸ್ವಾಮಿ ಸಮರ್ಥ ಗಜಾನನ ಮಹಾರಾಜರು ಪಂಢರಪುರದ ಪಾಡುರಂಗನ ಅಭಿನ್ನರೂಪವೆಂದು ಗಣಿಸಲ್ಪಟ್ಟರು । ಬಂಕಟಲಾಲನ ಮನೆಯು ವಿಠ್ಠಲನ ಮಂದಿರವೆನಿಸಿತು । ದೂರ ದೂರದಿಂದ ಜನರು ಗಜಾನನ ಮಹಾರಾಜರ ದರ್ಶನಕ್ಕೆ ಬಂದು ಪ್ರಸಾದವನ್ನು ಅರ್ಪಿಸುತ್ತಿದ್ದರು । ಇದರ






ವರ್ಣನೆಯನ್ನು ಮಾಡುತ್ತ ಶೇಷನೂ ದಣಿದು ಹೋಗುವಾಗ, ನನ್ನಂತಹ ಮೂಢವ್ಯಕ್ತಿಯಿಂದ ಹೇಗೆ ಸಾಧ್ಯ ? ನಾನು ಒಂದು ಕೀಟಕದ ಸಮಾನ । ನಾನು ನುಡಿಯುವದೆಲ್ಲ ಗಜಾನನ ಮಹಾರಾಜರ ಕೃಪೆಯಿಂದಲೇ । ನಾನು ಮಹಾರಾಜರ ದಿನಚರಿಯನ್ನು ಹೇಳುವ ಪ್ರಯತ್ನ ಮಾಡುತ್ತಿದ್ದೇನೆ । ಏಕೆಂದರೆ ಅವರ ಚರಿತ್ರೆಯನ್ನು ಹಾಡುವ ಕ್ಷಮತೆ ನನ್ನಲ್ಲಿ ಇಲ್ಲ ಕೆಲವು ಸಲ ಅವರು ಮಂಗಲಸ್ನಾನ ಮಾಡುತ್ತಿದ್ದರು, ಕೆಲವು ಸಲ ಖಾಲಿ ಸ್ಥಳದಲ್ಲಿ ಕೂಡುತ್ತಿದ್ದರು, ಮತ್ತು ಕೆಲವು ಸಲ ಕೊಳಚೆ ನೀರನ್ನು ಸೇವಿಸುತ್ತಿದ್ದರು । ಗಾಳಿಯ ವೇಗವನ್ನು ಯಾವ ರೀತಿ ಅರಿಯುವದು ಸಾಧ್ಯವಿಲ್ಲವೋ, ಅದೇ ರೀತಿ ಅವರ ದಿನಚರಿಯಾಗಿತ್ತು। ಚಿಲುಮೆಯ ಮೇಲೆ ಅವರು ಆನಂದಿತರಿದ್ದರು । ಜನರಿಗೆ ತೋರಿಸಲು ಮಾತ್ರ ಅದನ್ನು ಉಪಯೋಗಿಸುತ್ತಿದ್ದರು, ಆದರೆ ಅವರಿಗೆ ಅದರ ಚಟವು ಇರಲಿಲ್ಲ। ಈಗ ಮುಂದಿನ ಅಧ್ಯಾಯವನ್ನು ಮನಸ್ಸುಕೊಟ್ಟು ಕೇಳಿರಿ । ಇದು ಶ್ರೀ ಗಜಾನನ ಚರಿತ್ರೆಯನ್ನು ಕೇಳುವವರಿಗೆ ಮಂಗಲದಾಯಕವಾಗಲಿ ಎಂದು ಈ ದಾಸಗಣು ದೇವರಲ್ಲಿ ಪ್ರಾರ್ಥಿಸುತ್ತಾನೆ ॥

**॥ ಶ್ರೀ ಹರಿಹರಾರ್ಪಣಮಸ್ತು । ಶುಭಂ ಭವತು ॥**

॥ ಇಲ್ಲಿಗೆ ಎರಡನೆಯ ಅಧ್ಯಾಯವು ಮುಗಿಯಿತು ॥





ಶ್ರೀ ಗಜಾನನ ಮಹಾರಾಜರ ತೀರ್ಥದಿಂದ ಜಾನರಾವ್ ದೇಶಮುಖರು ಮರಣೋನ್ಮುಖ ಸ್ಥಿತಿಯಿಂದ ಆರಾಮ ಆದರು

## || ಅಧ್ಯಾಯ ೩ ||

ಶ್ರೀ ಗಣೇಶಾಯನಮಃ । ಜಯ ಜಯ ಸಚ್ಚಿದಾನಂದ ಶ್ರೀ ಹರಿ । ಕೂಡಲೇ ನನ್ನ ಮೇಲೆ ಕೃಪೆ ಮಾಡಿರಿ । ತಾವು ಶರಣಾರ್ಥಿಗಳ ಜೊತೆಗೆ ಕಠೋರತೆಯಿಂದ ವರ್ತಿಸುವದಿಲ್ಲ। ತಾವು ಹೀನದೀನರ ರಕ್ಷಕರು । ಭಕ್ತನ ಕಲ್ಪತರು ಅಥವಾ ಚಿಂತಾಮಣಿ । ತಮ್ಮ ಮಹಿಮೆಯನ್ನು ಸಂತ ಸಜ್ಜನರು ಹಾಡಿ ದಣಿಯರು । ಆದ್ದರಿಂದಲೇ ಈ ದಾಸಗಣುವು ತಾವು ಕೃಪೆ ಮಾಡಿರೆಂದು ಪ್ರಾರ್ಥಿಸುತ್ತಾನೆ । ಹೀನದೀನರ ಸಮರ್ಥಕ, ಸಾಕ್ಷಾತ್ಕಾರಿ ಶ್ರೀ ಗಜಾನನ ಮಹಾರಾಜರು ಬಂಕಟಲಾಲನ ಮನೆಯಲ್ಲಿ ವಾಸಿಸಿದ್ದಾರೆ । ಈ ಸಂಚಾರವು ತಿಳಿದೊಡನೆ ದೂರದೂರದಿಂದ ಜನರು ಮಹಾರಾಜರ ದರ್ಶನಕ್ಕಾಗಿ ಬಂದು ಹೋಗುತ್ತಿದ್ದರು । ಮಧುಕೋಶದ ವಾರ್ತೆ ತಿಳಿದೊಡನೆ ಜೇನುಹುಳಗಳು ಆಮಂತ್ರಿಸದೇ ಬಂದಂತಿತ್ತು। ಒಂದು ದಿನ ನಡೆದ ಘಟನೆಯನ್ನು ನಾನು ಈಗ ವರ್ಣಿಸುತ್ತೇನೆ । ಮಹಾರಾಜರು ನಿಜಾನಂದದಲಿ ಮುಳುಗಿದ್ದರು । ಅದು ಅರುಣೋದಯದ ಸಮಯವಿತ್ತು । ಪೂರ್ವ ದಿಕ್ಕಿನಲ್ಲಿ ಸೂರ್ಯನ ಆಗಮನವಾಗುತ್ತಿತ್ತು । ಮರಗಿಡಗಳ ಮೇಲೆ ಹಕ್ಕಿಗಳ ಕಲರವ ಕೇಳಿಸುತ್ತಿತ್ತು। ಮಂದವಾಗಿ ಸೂಸುವ ಗಾಳಿಯು ಶೀತಲ ಸ್ಪರ್ಶ ಮಾಡುತ್ತಿತ್ತು ಸೂರ್ಯನ ಉದಯವಾಗುತ್ತಲೇ ಕತ್ತಲು ತನ್ನ ಮುಖವನ್ನು ಮುಚ್ಚಿಕೊಂಡಿತು । ಗೃಹಿಣಿಯರು ಅಂಗಳವನ್ನು ಸಾರಿಸಿ ರಂಗೋಲಿ ಹಾಕುತ್ತಿದ್ದರು । ಕರುಗಳು ತಾಯಿಯ ಕಡೆಗೆ ಹೋಗಲು ಆತುರಿಸುತ್ತಿದ್ದವು। ಇಂತಹ ಸುಂದರ ಗಳಿಗೆಯಲ್ಲಿ ಕಾಶಿನಗರದ ಒಬ್ಬ ಸಂನ್ಯಾಸಿಯು ಮಹಾರಾಜರ ದರ್ಶನಕ್ಕಾಗಿ ಶೇಗಾಂವಿಗೆ ಬಂದನು । ಅವನು ಸರ್ವಸಂಗ ಪರಿತ್ಯಾಗಿಯಾಗಿದ್ದನು । ಧನ ಸಂಪತ್ತಿನಿಂದ ಅಥವಾ ಯಾವ ಸಮಾಜ ಕಾರ್ಯದಿಂದ ಪ್ರತಿಷ್ಠೆ ಪಕಡೆದ ಜನರಲ್ಲಿ ಅವನಿಗೆ ಯಾವ ಸ್ಥಾನವೂ ಇರಲಿಲ್ಲ। ತಲೆಗೆ ಒಂದು ಕಾವಿ ಬಣ್ಣದ ಚಿಂದೆ, ಬಗಲಿನಲ್ಲಿ ಜೋಳಿಗೆ, ಹರಿದ ಲಂಗೋಟಿ ಹಾಗೂ ಬೆನ್ನಿಗೆ ಮೃಗಾಜಿನವನ್ನು ಧರಿಸಿದ ಆ ಸಂನ್ಯಾಸಿ ಒಂದು ಮೂಲೆಯಯಲ್ಲಿ ಕುಳಿತಿದ್ದನು । ಮಹಾರಾಜರ ದರ್ಶನಕ್ಕಾಗಿ ಯಾವಾಗಲೂ ಗದ್ದಲವಿರುತ್ತಿತ್ತು। ಇಂತಹ ಸ್ಥಿತಿಯಲ್ಲಿ ಆ ಸಂನ್ಯಾಸಿಗೆ ದರ್ಶನ ಸಿಗುವದು ಹೇಗೆ ಸಾಧ್ಯ ? ಅವನು ಕುಳಿತಲ್ಲಿಯೇ ಪ್ರಭು ಚಿಂತನೆಯಲ್ಲಿ ಮಗ್ನನಾಗಿದ್ದನು । ಅವನು ಸಮರ್ಥರ ದರ್ಶನ ಹೇಗೆ ಸಾಧ್ಯ ಎಂದು ಯೋಚಿಸುತ್ತಿದ್ದನು । ಸಮರ್ಥರ ಮಹಿಮೆಯನ್ನು ಕಾಶಿಯಲ್ಲಿ ಕೇಳಿ, ಮನಸ್ಸಿನಲ್ಲಿಯೇ ಶೇಗಾಂವಿಗೆ ಹೋಗಿ

ಸಮರ್ಥರಿಗೆ ಗಾಂಜಾ ಅರ್ಪಿಸುವದಾಗಿ ಬೇಡಿಕೊಂಡಿದ್ದೆ। ಆದರೆ ಇಲ್ಲಿಯ ಈ ಗದ್ದಲ ಹಾಗೂ ವಾತಾವರಣವನ್ನು ನೋಡಿ ನನ್ನ ಇಚ್ಛೆ ಸಫಲವಾಗುವ ಸಾಧ್ಯತೆ ಕಂಡು ಬರುವದಿಲ್ಲ। ಉಪಸ್ಥಿತ ಸಜ್ಜನರ ಮುಂದೆ ನನ್ನ ಇಚ್ಛೆಯನ್ನು ವ್ಯಕ್ತಪಡಿಸುವದು ಅಸಾಧ್ಯ । ಏಕೆಂದರೆ ನನ್ನ ಮುಖದಿಂದ ಗಾಂಜಾದ ಹೆಸರನ್ನು ಕೇಳುತ್ತಲೆ ಜನರು ನನಗೆ ಲತ್ತೆಹಾಕುವರು । ಮತ್ತು ನಾನಾದರೋ ಶೇಗಾಂವಿಗೆ ಗಾಂಜಾ ಅರ್ಪಣೆ ಮಾಡುವದಕ್ಕೆ ಬಂದಿರುವೆ । ಉಪಸ್ಥಿತ ಸಜ್ಜನರಲ್ಲಿ ಶಾಂಭವಿ ಭಕ್ತನು ಇರುವ ಶಕ್ಯತೆ ಬಹಳ ಕಡಿಮೆ। ಈ ಸ್ಥಿತಿಯಲ್ಲಿ ನನ್ನ ಮನದಲ್ಲಿಯ ಮಾತನ್ನು ಯಾರಿಗೆ ಹೇಳಲಿ ? ಯಾರಿಗೆ ಯಾವ ವಸ್ತುವು ಪ್ರೀಯವೋ, ಅದನ್ನೇ ಅವನು ಭಗವಂತನಿಗೆ ಅರ್ಪಿಸುತ್ತಾನೆ। ಈ ಚಿಂತೆಯಲ್ಲಿ ಆ ಸಂನ್ಯಾಸಿಯ ವ್ಯಥೆಯನ್ನು ಅರಿತರು। ಮತ್ತು ಉಪಸ್ಥಿತ ಜನರಲ್ಲಿ ಒಬ್ಬನಿಗೆ ಹೊರಗೆ ಒಂದು ಮೂಲೆಯಲ್ಲಿ ಕುಳಿತ ಕಾಶಿಯಿಂದ ಬಂದ ಸಂನ್ಯಾಸಿಗೆ ತನ್ನ ಬಳಿಗೆ ತರಲು ಹೇಳಿದರು । ಮಹಾರಾಜರ ಸಂದೇಶವನ್ನು ಕೇಳಿ, ತನ್ನ ಇಚ್ಛೆ ಪೂರ್ತಿಯಾಗುವ ಆಶೆಯಿಂದ ಆನಂದಿತನಾದನು । ಅವನು ಸಂತರು ನಿಜವಾಗಿ ತ್ರಿಕಾಲ ಜ್ಞಾನಿಯಾಗಿರುವರು ಎಂಬುದನ್ನು ನಂಬಿದನು। ನನ್ನ ಮನಸ್ಸಿನಲ್ಲಿಯ ಇಚ್ಛೆಯನ್ನು ಅವರು ತಿಳಿದಿರುವರು। ಎಲ್ಲ ಜಗತ್ತು ಮಾತ್ರವಲ್ಲದೇ, ಸ್ವರ್ಗಲೋಕದಲ್ಲಿ ನಡೆಯುವ ಘಟನೆಯನ್ನೂ ಸಿದ್ಧಯೋಗಿಗಳು ತಮ್ಮ ಸ್ಥಾನದಿಂದಲೇ ಅರಿಯುತ್ತಾರೆ ಎಂದು ಜ್ಞಾನೇಶ್ವರಿಯ ಆರನೆಯ ಅಧ್ಯಾಯದಲ್ಲಿ ಬರೆಯಲಾಗಿದೆ। ಇದರ ಪ್ರಚೀತಿ ನನಗೆ ಬಂದಿದೆ। ತ್ರಿಕಾಲಜ್ಞ ಮಹಾತ್ಮರಿಗೆ ಜಯವಾಗಲಿ ! ನನ್ನ ಇಚ್ಛೆಯನ್ನು ಈಗ ಅವರೇ ತಿಳಿದುಕೊಳ್ಳುವರು। ಸಂನ್ಯಾಸಿ ಮಹಾರಾಜರ ಮುಂದೆ ನಿಂತನು। ಆಗ ಮಹಾರಾಜರು ತನ್ನ ಚೀಲದಲ್ಲಿ ಇಟ್ಟಿರುವ ವಸ್ತುವನ್ನು ಹೊರತೆಗೆಯಲು ಆ ಸಂನ್ಯಾಸಿಗೆ ಅಜ್ಞಾಪಿಸಿದರು। ಮೂರು ತಿಂಗಳುಗಳಿಂದ ಚೀಲದಲ್ಲಿಟ್ಟಿರುವ ವಸ್ತುವನ್ನು ಹೊರಗೆ ತೆಗೆದು, ನನಗೆ ಕೊಟ್ಟು ವ್ರತವನ್ನು ಪೂರ್ಣ ಮಾಡು । ಮಹಾರಾಜರು ತಮ್ಮ ಅಂತರಂಗವನ್ನು ತಿಳಿದಿರುವದನ್ನು ನೋಡಿ ಸಂನ್ಯಾಸಿಯು ಮಹಾರಾಜರಿಗೆ ಅಶ್ರುಪೂರ್ಣ ನೇತ್ರಗಳಿಂದ ಸಾಷ್ಟಾಂಗ ನಮಸ್ಕಾರ ಮಾಡಿ ಬಾಲಕನಂತೆ ಹೊರಳಾಡಿದನು । ಸಂನ್ಯಾಸಿಯ ಸ್ಥಿತಿಯನ್ನು ನೋಡಿ ಮಹಾರಾಜರು ಅವನಿಗೆ ಏದ್ದೇಳಲು ಹೇಳಿ. ತಮ್ಮ ಜೋಳಿಗೆಯಿಂದ ಗಾಂಜಾವನ್ನು ಹೊರತೆಗೆಯಲು ಅಜ್ಞಾಪಿಸಿದರು।
ನಿನಗೆ ಹರಕೆ ಹೊರಲು ಅಜ್ಜೆಯಾಗಲಿಲ್ಲ ಮತ್ತು ಈಗ ಅದನ್ನು ಅರ್ಪಿಸಲು ಏಕೆ ಹೆದರುತ್ತಿರುವಿ ? ಸಂನ್ಯಾಸಿಯು ಕೂಡಾ ॥ 22 ॥
ತುಂಬಾ ಜಾಣನಿದ್ದನು। ಅವನು ಬಹು ನಮ್ರತೆಯಿಂದ ಕೈ ಜೋಡಿಸಿ ನುಡಿದನು, "ಮಹಾರಾಜರೇ ನನ್ನ ಹರಕೆಯನ್ನು



ಪೂರೈಸಲು ಗಾಂಜಾ ಹೊರತೆಗೆಯುತ್ತೇನೆ । ಅದರೇ, ಅದರ ಮೊದಲು ತಾವು ಗಾಂಜಾ ಸೇವಿಸುವದಾಗಿ ವಚನಕೊಡಬೇಕು। ಇದು ನನ್ನ ಇಚ್ಛೆ, ಇದನ್ನು ಪೂರ್ಣ ಮಾಡಿರಿ।" ಭಕ್ತರ ಇಚ್ಛೆಯನ್ನು ಸಂತ ಮಹಂತರು ಮತ್ತು ದೇವರು ಪೂರೈಸುತ್ತಾರೆ। ಆಂಜನಿಯ (ಭಕ್ತ ಹನುಮಂತನ ತಾಯಿಯ) ವೃತ್ತಾಂತವನ್ನು ಜ್ಞಾಪಿಸಬೇಕು। ಅಂಜನಿಯು ಒಂದು ವಾನರ। ಅವಳು ಶಂಕರನಿಗೆ, ಪುತ್ರರೂಪದಿಂದ ತಮ್ಮ ಮನೆಯಲ್ಲಿ ಬರಬೇಕೆಂದು ಪ್ರಾರ್ಥಿಸಿದಳು। ಅವಳ ಇಚ್ಛೆಯನ್ನು ತ್ರಿಪುರಾರಿಯು ಪೂರೈಸಿದನು । ವಾನರಿಯು ಇಚ್ಛೆಯನ್ನು ಪೂರ್ಣಗೊಳಿಸಲು ಶಂಕರನಿಗೆ ಯಾವ ತೊಂದರೆಯಾಗಲಿಲ್ಲ। ನನ್ನ ಇಚ್ಛೆಯಾದರೂ ಬಹಳ ಚಿಕ್ಕದು, ಅದನ್ನು ತಾವು ಸಹಜವಾಗಿ ಪೂರ್ತಿಗೊಳಿಸುವಿರಿ। ತಾವಾದರೋ ಕರ್ಪೂರ ಗೌರಿ ಶಂಕರ। ನನ್ನ ಗಾಂಜಾದ ಅನಾದರ ಮಾಡದಿರಿ। ಶಿವನು ಗಾಂಜಾವನ್ನು "ಜ್ಞಾನವಲ್ಲಿ" ಎಂದು ವರ್ಣಿಸಿದ್ದಾನೆ । ಇದನ್ನು ಉಪಯೋಗಿಸಿ, ಇತರರಿಗೆ ಹಾನಿಯಾಗುವದು, ಆದರೆ ಇದು ತಮಗೆ ಶೋಭೆ ನೀಡುವದು। ಸಂನ್ಯಾಸಿಯ ಮಾತನ್ನು ಕೇಳಿ, ಮಹಾರಾಜರು ಒಂದು ಕ್ಷಣ ಆಲೋಚನೆ ಮಾಡಿ, ನಂತರ ಒಪ್ಪಿದರು। ತಾಯಿಯು ತಮ್ಮ ಮಗುವಿನ ಎಲ್ಲ ಇಚ್ಛೆಗಳನ್ನು ಪೂರ್ಣಮಾಡುವಂತೆ । ಸಂನ್ಯಾಸಿ ಜೋಳಿಗೆಯಿಂದ ಗಾಂಜಾ ಹೊರತಗೆದು, ತಮ್ಮ ಅಂಗೈಯಲ್ಲಿ ಹಸನುಮಾಡಿ, ಚಿಲುಮೆಯಲ್ಲಿ ಹಾಕಿ, ಗಜಾನನ ಮಹಾರಾಜರಿಗೆ ಅರ್ಪಿಸಿದನು। ಈ ತರಹ ಗಾಂಜಾದ ಕಥೆಯನ್ನು ಹೇಳಿ ಆಯಿತು, ಯಾವುದರ ಬಗ್ಗೆ ವಿಚಾರ ಮಾಡುವದು ಅವಶ್ಯಕ । ನಂತರ ಸಂನ್ಯಾಸಿಯು ಕೆಲವು ದಿನ ಶೇಗಾಂವದಲ್ಲಿದ್ದು, ಮಹಾರಾಜರ ಸೇವೆ ಮಾಡಿ, ಅವರ ಕೃಪೆಯಿಂದ ಭಾಗ್ಯವಂತನೆಂದು ತಿಳಿದು ರಾಮೇಶ್ವರಕ್ಕೆ ಹೊರಟನು । ಮಹಾರಾಜರು ಅಂದಿನಿಂದ ಗಾಂಜಾ ಸೇವನೆ ಆರಂಭಿಸಿದರು ಅದು ವ್ಯಸನವೆಂದರಲ್ಲ ಆದರೆ ಜನರಿಗೆ ತಮ್ಮ ಲೀಲೆಯನ್ನು ತೋರಿಸಲೆಂದು । ಅವರು ಪದ್ಮಪತ್ರದ ವೃತ್ತಿಯನ್ನು ಧರಿಸಿ, ನಿರಾಸಕ್ತರಾಗಿ ನಿಜಾನಂದದಲ್ಲಿ ಮುಳುಗಿರುತ್ತಿದ್ದರು । ಸಾಮಾನ್ಯ ಜನರು ಸಿದ್ಧಯೋಗಿಯ ತುಲನೆಯನ್ನು ಹೇಗೆ ಮಾಡಬಲ್ಲರು ? ಕೆಲವು ಬಾರಿ ಗಜಾನನ ಮಹಾರಾಜರು ವೇದಋಚಿಯನ್ನು ಶಾಸ್ತ್ರಶುದ್ಧ ರೀತಿಯಿಂದ ನುಡಿಯುತ್ತಿದ್ದರು । ವೇದಗಳನ್ನು ಕೇಳಿ ಸುಪ್ರಸಿದ್ಧ ವೈದಿಕರೂ ಆಶ್ಚರ್ಯ ವ್ಯಕ್ತಪಡಿಸುತ್ತಿದ್ದರು । ಇದರಿಂದ ಜನರು
ಮಹಾರಾಜರು ಬ್ರಾಹ್ಮಣರೆಂದು ಅನುಮಾನಿಸುತ್ತಿದ್ದರು। ಕೆಲವು ಸಲ ಮಹಾರಾಜರು ಗಾಯಕನಂತೆ ಒಂದೇ ಪದವನ್ನು ॥ 23 ॥
ಅನೇಕ ರಾಗಗಳಲ್ಲಿ ಹಾಡುತ್ತಿದ್ದರು। ಕೆಲವ ಸಲ 'ಗಣ ಗಣಾತ' ಎಂಬ ಅವರ ಭಜನೆಯನ್ನು ಹಾಡುತ್ತಿದ್ದರೇ, ಕೆಲವು

ಸಲ ಮೌನವಾಗಿರುತ್ತಿದ್ದರು, ಮತ್ತು ಕೆಲವು ಸಲ ಮಲಗಿರುತ್ತಿದ್ದರು । ಅವರು ಕೆಲವು ಸಲ ಮೂರ್ಖನಂತೆ, ಕೆಲವು ಸಲ ಏಕಾಂತವಾಸ, ಮತ್ತು ಕೆಲವು ಸಲ ಒಮ್ಮೆಲೇ ಯಾರ ಮನೆಯಲ್ಲಾದರೋ ಹೋಗತ್ತಿದ್ದರು । ಈ ತರಹ ಅವರ ದಿನಚರಿ ಇತ್ತು। ಶೇಗಾಂವಿಯಲ್ಲಿ ಜಾನರಾವ ದೇಶಮುಖನೆಂಬ ಸಜ್ಜನನು ವಾಸಿಸುತ್ತಿದ್ದನು । ಅವನು ವ್ಯಾಧಿಗ್ರಸ್ತನಾಗಿ ಕೊನೆಯುಸಿರನ್ನೆಳೆಯುತ್ತಿದ್ದನು । ರೋಗದಿಂದಾಗಿ ಅವನು ಸೊರಗಿದ್ದನು । ವೈದ್ಯರಾಜನು ಅವನಿಗೆ ಬದುಕಿಸಲು ಎಲ್ಲ ಪ್ರಯತ್ನಗಳನ್ನು ಮಾಡಿ ಹತಾಶಾಗಿದ್ದನು । ಕೊನೆಗೆ ಅವನು, 'ರೋಗಿಯು ಕೊನೆಯುಸಿರನ್ನೆಳೆಯುತ್ತಿದ್ದಾನೆ', ಅವನಿಗೆ ನೆಲದ ಮೇಲೆ ಕಂಬಳಿಯನ್ನು ಹಾಸಿ ಮಲಗಿಸಿರಿ'' ಎಂದು ನುಡಿದನು। ವೈದ್ಯನ ಮಾತನ್ನು ಕೇಳಿ ರೋಗಿಯ ಆಪ್ತಜನರು ದುಃಖಿತರಾದರು ಮತ್ತು ಎದೆಬಡೆದು ಕೂಗುತ್ತಿದ್ದರು – ಜಾನರಾವ, ನಮನ್ನು ಬಿಟ್ಟು ಹೋಗಬೇಡ । ತಮ್ಮ ಆರೋಗ್ಯವು ಸುಧಾರಿಸಲೆಂದು ದೇವರಲ್ಲಿ ಹರಕೆ ಹೊತ್ತೆವು ಆದರೆ ನಮ್ಮ ದುರ್ಭಾಗ್ಯದಿಂದ ಅಸಫಲರಾದೆವು । ವೈದ್ಯರಾಜರ ಪ್ರಯತ್ನವು ಅಸಫಲವಾಗಿದ್ದರಿಂದ ನಾವು ಈಗ ಕೊನೆಯ ಪ್ರಯತ್ನ ಮಾಡುತ್ತೇವೆ । ಬಂಕಟಲಾಲನ ಮನೆಯಲ್ಲಿ ಸಾಕ್ಷಾತ ಮಹಾತ್ಮರು ತಂಗಿದ್ದಾರೆ। ಅವರ ವಾಸ್ತವ್ಯದಿಂದ ಶೇಗಾಂವಿಯು ಪಂಢರಪುರವಾಗಿದೆ। ಸಾಕ್ಷಾತ್ಕಾರಿ ಮಹಂತರು ಇಚ್ಛಿಸಿದರೆ ಎಲ್ಲವೂ ಸಾಧ್ಯ । ಜ್ಞಾನೇಶ್ವರ ಮಹಾರಾಜರು ತಮ್ಮ ಯೋಗಬಲದಿಂದ ಮೃತನಾದ ಸಚ್ಚಿದಾನಂದ ಬಾಬಾಗೆ ಜೀವನ ದಯಪಾಲಿಸಿದರು । ಜಾನರಾವರು ಈಗ ಸ್ವಲ್ಪ ಸಮಯದ ಅತಿಥಿ । ಆದ್ದರಿಂದ ಯಾರಿಗಾದರೋ ಮಹಾರಾಜರ ಬಳಿಗೆ ಕಳುಹಿಸಿ ಜಾನರಾವರಿಗಾಗಿ ಪ್ರಾರ್ಥಿಸಲು ಹೇಳಿರಿ । ಕೂಡಲೇ ಅವರ ನೆಂಟರಲ್ಲಿ ಒಬ್ಬನು ಬಂಕಟಲಾಲನ ಮನೆಗೆ ಹೋಗಿ ಜಾನರಾವನ ಸ್ಥಿತಿಯನ್ನು ತಿಳಿಹೇಳಿ, ಮಹಾರಾಜರ ಚರಣ ತೀರ್ಥ, ಯಾವದು ಅಮೃತ ಸಮಾನವೋ ಅದನ್ನು ಬೇಡಿದನು । ಆಗ ಬಂಕಟಲಾಲನು ತಮ್ಮ ಅಸಹಾಯತೆಯನ್ನು ದರ್ಶಿಸಿ, ತಮ್ಮ ತಂದೆಯನ್ನು ಭೆಟ್ಟಿಯಾಗಲು ಹೇಳಿದನು । ಆ ನೆಂಟನು ಎಲ್ಲ ಮಾತುಗಳನ್ನು ಭವಾನಿರಾಮನಿಗೆ ಹೇಳಿ, ಸಮರ್ಥರ ತೀರ್ಥವನ್ನು ಕೇಳಿದನು । ಸಜ್ಜನ ಭವಾನಿರಾಮನಿಂದ ಬೇರೆಯವರ ದುಃಖ ನೋಡಲಾಗಲಿಲ್ಲ । ಜಾನರಾವನ ಸ್ಥಿತಿಯನ್ನು ಕೇಳಿ ಒಂದು ಲೋಟದಲ್ಲಿ ನೀರನ್ನು ತುಂಬಿ ಅದನ್ನು ಮಹಾರಾಜರ ಚರಣಗಳಿಗೆ ಸ್ಪರ್ಷಿಸಿ ಅದನನು ಜಾನರಾವಗೆ ಕೊಡುವದಾಗಿ ಮಹಾರಾಜರಿಗೆ ಹೇಳಿದನು । ಮಹಾರಾಜರು ಸಮ್ಮತಿಸಿದರು । ಜರಣತೀರ್ಥವನ್ನು ಜಾನರಾವನಿಗೆ ಕೊಟ್ಟರು । ಚರಣ ತೀರ್ಥದ ಪ್ರಭಾವವು ಕೂಡಲೆ ಕಂಡು ಬಂದಿತು ।





ಕಂಠದಲ್ಲಿಯ ಸಪ್ಪಳವು ನಿಂತಿತು ಮತ್ತು ಕೈ ಅಲ್ಲಾಡಿಸಿ ಕಣ್ಣು ತೆರೆದನು। ಇದನ್ನು ನೋಡಿ ಎಲ್ಲ ಜನರು ಆನಂದಿತರಾದರು। ಸತ್ಪುರುಷರ ಮಹಿಮೆ ಹಾಗೂ ಅದ್ಭುತಗಳನ್ನು ಎಲ್ಲರೂ ಅನುಭವಿಸುತ್ತಿದ್ದರು । ಆನಂತರ ಎಲ್ಲ ಔಷಧಿಗಳನ್ನು ನಿಲ್ಲಿಸಿ ಸಮರ್ಥರ ತೀರ್ಥದ ಮೇಲೆ ಭರವಸೆ ಇಟ್ಟರು । ಸಮರ್ಥರ ಪ್ರಭಾವದಿಂದ ಜಾನರಾವನು ಆರೋಗ್ಯ ಮರಳಿ ಪಡೆದನು। ಎಂಟು ದಿನಗಳ ನಂತರ ಭವಾನಿರಾಮನ ಮನೆಗೆ ಮಹಾರಾಜರ ದರ್ಶನ ಅಭಿಲಾಷಿಯಾಗಿ ಜಾನರಾವನು ಬಂದನು । ಸಂತ ಚರಣ ತೀರ್ಥವು ಜಾನರಾವನಿಗೆ ಅಮೃತವಾಯಿತು । ಇಂತಹ ಸಂತರು ಕಲಿಯುಗ ಸಾಕ್ಷಾತ್ ಭಗವಂತನಂತೆ । ಈ ನಿಜ ಘಟನೆಯ ಪ್ರಚೀತಿಯಿಂದ, ಮಹಾರಾಜರು ಶೇಗಾಂವಿನಲ್ಲಿ ಬಂದಂದಿನಿಂದ ಯಾರಿಗೂ ಮೃತ್ಯುವು ಬಂದಿರಲಾರದು ಎಂಬ ಶಂಕೆಯು ಇರಬಹುದು । ಆದರೆ ಇದು ಮೂಢನಂಬಿಕೆ । ಸಂತರು ಯಾರ ಮೃತ್ಯುವನ್ನು ಪಡೆಯಲಾರರು। ಅವರು ವಿಧಿಲಿಖಿತವನ್ನು ಎಂದೂ ತಪ್ಪಿಸುವದಿಲ್ಲ। ಅವರು ಬೇಕಾದರೆ ಆಕಸ್ಮಿಕವಾಗಿ ಬಂದು ಸಂಕಟಗಳನ್ನು ಕೆಲವು ಸಮಯದವರೆಗೆ ತಡೆಯಬಹುದು । ಜ್ಞಾನೇಶ್ವರ ಮಹಾರಾಜರು ನಿಧನರಾದ ಸಚ್ಚಿದಾನಂದ ಬಾಬಾಗೆ ನೇವಾಸಿನಲ್ಲಿ ಜೀವದಾನ ಕೊಟ್ಟರೂ, ಅವರು ಮಾಡಬೇಕಾದ ಕಾರ್ಯವು ಮುಗಿದೊಡನೆ ಆಳಂದಿಯಲ್ಲಿ ನಿಧನರಾದರು। ಸಂತ ಮಹಂತರು ಅವರ ಇಚ್ಛೆಯಿಂದಲೇ, ಭಕ್ತರ ಮೇಲೆ ಬಂದ ಸಂಕಟಗಳನ್ನು ಕೆಲವು ಸಮಯದವರೆಗೆ ತಡೆಮಾಡಬಹುದು ಎಂಬುದೇ ಇದರ ಭಾವಾರ್ಥ । ವಾಸ್ತವಿಕವಾಗಿ ಮೃತ್ಯುಲೋಕದಲ್ಲಿ ಮೃತ್ಯುವು ಮೂರು ಪ್ರಕಾರ। ಒಂದು ಅಧ್ಯಾತ್ಮಿಕ, ಎರಡು ಆದಿ ಭೌತಿಕ ಮತ್ತು ಮೂರು ಆದಿದೈವಿಕ। ಈ ಮೂರರಲ್ಲಿ ಅಧ್ಯಾತ್ಮಿಕ ಮೃತ್ಯುವು ಶ್ರೇಷ್ಠ । ನಾವು ಆದಿ ಭೌತಿಕ ಮೃತ್ಯುವಿನ ಅವಸ್ಥೆಯನ್ನು ಸ್ವಯಂ ಸಂಯಮವಿರಹಿತ ಜೀವನದಿಂದ ಪಡೆಯುತ್ತೇವೆ । ಶರೀರದಲ್ಲಿ ಅನೇಕ ರೋಗಗಳು ನಿರ್ಮಾಣವಾಗುತ್ತವೆ । ಈ ರೀತಿ ರೋಗಪೀಡಿತ ಶರೀರವನ್ನು ತ್ಯಾಗಿಸುವದು ಅವಶ್ಯವಾಗುತ್ತದೆ । ಆದರೆ ಸರಿ ಸಮಯಕ್ಕೆ ಉಪಾಯಗಳನ್ನು ಮಾಡಿದರೆ ಮೃತ್ಯುವನ್ನು ತಡೆಯ ಬಹುದು । ಆದರೆ ಅಂತಹ ಉಪಾಯಗಳನ್ನು ಮಾಡುವ ವೈದ್ಯರಾಜರು ಅಥವಾ ಡಾಕ್ಟರರು ತಮ್ಮ ಶಾಸ್ತ್ರಗಳಲ್ಲಿ ಸಿದ್ಧಹಸ್ತರಾಗಿರುವದು ಅವಶ್ಯಕ । ಆದಿದೈವಿಕ ಮೃತ್ಯುವನ್ನು ಹೆರಕೆ ಹೊತ್ತು ತಪ್ಪಿಸಬಹುದು, ಆದರೆ ಅದು ಕೂಡಾ ಅನಾಹುತವಿದ್ದರೆ। ಈ ಮೃತ್ಯುವು ಎರಡು ಪ್ರಕಾರದ್ದು – ಭೌತಿಕ ಹಾಗೂ ದೈವಿಕ। ಮೂರನೆಯದ್ದು ಆಧ್ಯಾತ್ಮಿಕ ಮೃತ್ಯು। ಅದನ್ನು ಯಾರಿಂದಲೂ ತಡೆಯುವದು ಸಾಧ್ಯವಿಲ್ಲ । ಸ್ವಯಂ ಶ್ರೀಕೃಷ್ಣ ಪರಮಾತ್ಮನು ಉಪಸ್ಥಿತರಿದ್ದರೂ

ಅರ್ಜುನಪುತ್ರ ಅಭಿಮನ್ಯುವಿಗೆ ರಣಾಂಗಣದಲ್ಲಿ ಮೃತ್ಯು ತಪ್ಪಲಿಲ್ಲ। ಜಾನರಾವನ ಮೃತ್ಯು ಆದಿದೈವಿಕವಿತ್ತು ಆದ್ದರಿಂದ ಸಮರ್ಥರ ಚರಣತೀರ್ಥದಿಂದ ತಪ್ಪಿಸುವದು ಸಾಧ್ಯವಾಯಿತು । ಆದಿಭೌತಿಕ ಮೃತ್ಯುವನ್ನು ತಜ್ಞ ಡಾಕ್ಟರಿಂದ ತಪಿಸಬಹುದು ಮತ್ತು ಆದಿ ದೈವಿಕ ಮೃತ್ಯುವನ್ನು ಸಂತ ಕೃಪೆಯಿಂದ ಕೆಲವು ಕಾಲದ ವರೆಗೆ ತಪ್ಪಿಸಬಹುದು । ಆದರೆ ಇವೆರಡರ ಹಿಂದೆ ನಿತಾಂತ ಶೃದ್ಧೆಯ ಅವಶ್ಯಕತೆ ಇದೆ । ಮತ್ತು ಸಾಧುವು ಅಷ್ಟೊಂದು ಶ್ರೇಷ್ಠ ಮಟ್ಟದವನಿರಬೇಕು। ಸಾಧುಗಳಲ್ಲಿ ಎರಡು ಪ್ರಕಾರ – ಅಸಲಿ ಹಾಗೂ ನಕಲಿ । ನಕಲಿ ಸಾಧುವಿನಿಂದ ಯಾವ ಚಮತ್ಕಾರವೂ ಸಾಧ್ಯವಿಲ್ಲ। ಏಕೆಂದರೆ ಮಣ್ಣಿನಲ್ಲಿ ಕಸ್ತೂರಿಯು ಹುಟ್ಟುವದು ಸಾಧ್ಯವಿಲ್ಲ। ಎಲ್ಲ ವಿಕಾರಗಳ ಮೇಲೆ ಸಂಯಮವಿರುವ ಸಾಧುವಿನಿಂದ ಮಾತ್ರ ಅಘಟಿತ ಕಾರ್ಯವು ಸಾಧ್ಯ । ಆದ್ದರಿಂದ ಜನರು ನಿಜ ಸಾಧುವನ್ನು ಗುರುತಿಸಬೇಕು । ಏಕೆಂದರ ಹಿತ್ತಾಳೆಯು ಬಂಗಾರವಾಗುವದಿಲ್ಲ । ಗಜಾನನ ಮಹಾರಾಜರು ನಿಜಾದ ವಜ್ರದಂತೆ ಇದ್ದರು । ಆದ್ದರಿಂದ ಅವರ ಚರಣತೀರ್ಥದಿಂದ ಜಾನರಾವನು ವ್ಯಾಧಿಮುಕ್ತನಾದು । ಗಜಾನನ ಮಹಾರಾಜರ ಚರಣತೀರ್ಥದಿಂದ ಜಾನರಾವನು ಪೂರ್ಣವಾಗಿ ಆರೋಗ್ಯ ಪಡೆದ ಆನಂದದಲ್ಲಿ, ಬಂಕಟಲಾಲನ ಮನೆಯಲ್ಲಿ ಒಂದು ಭಂಡಾರ ಅನ್ನದಾನವನ್ನು ಆಯೋಜಿಸಿದನು । ಚರಣತೀರ್ಥದಿಂದ ಜಾನರಾಮನು ಬದುಕಿದನು, ಆದರೆ ಮಹಾರಾಜರ ಮುಂದೆ ಒಂದು ಸಮೆಸ್ಯ ಉಂಟಾಯಿತು । ಈ ತರಹ ಜನರಿಗೆ ಸಂಕಟಗಳಿಂದ ಮುಕ್ತಿಗೊಳಿಸಿದರೆ ಪ್ರಾಪಂಚಿಕರು ಇದರ ಅನುಚಿತ ಲಾಭವನ್ನು ಪಡೆಯಬಹುದು ಇದೇ ರೀತಿ ನಡೆದರೆ, ಜನರ ಗದ್ದಲ ಬೆಳೆಯದಿರದು, ಆದ್ದರಿಂದ ಸ್ವಲ್ಪ ಕಠಿಣ ವೃತ್ತಿಯನ್ನು ತೋರಿಸಬೇಕು ಠ ಮರುದಿನದಿಂದ ಮಹಾರಾಜರು ಬಹಳ ಉಗ್ರರೂಪವನ್ನು ಧರಿಸಿದರು । ಅವರ ಈ ಉಗ್ರರೂಪವು ಇತರರಿಗೆ ಅಸಹ್ಯವಾಯಿತು, ಆದರೆ ಅವರ ನಿಜ ಭಕ್ತರ ಮೇಲೆ ಪರಿಣಾಮವಾಗಲಿಲ್ಲ । ಭಗವಂತನ ನರಸಿಂಹ ಅವತಾರವನ್ನು ನೋಡಿ, ಎಲ್ಲ ಜನರು ಹೆದರಿದರು, ಆದರೆ ಭಕ್ತ ಪ್ರಲ್ಹಾದನಿಗೆ ಎಲ್ಲಿಯ ಭಯ । ಹುಲಿಗೆ ಇತರರು ಹೆದರುತ್ತಾರೆ, ಆದರೆ ಅದರ ಮರಿಯು ದಿನರಾತ್ರಿ ಅದರ ಬಳಿಯೇ ಚಲ್ಲಾಟವಾಡುತ್ತದೆ । ಇರಲಿ, ಈಗ ಮತ್ತೊಂದು ಕಥೆಯನ್ನು ಕೇಳಿರಿ । ಚಂದನದ ಸ್ಪರ್ಷದಿಂದ ಮಂಜಿನ ಮೇಲೆ ಪ್ರಭಾವವಾಗುತ್ತದೆ । ಆದರೆ ಮಂಜು ಸ್ವತಃ ಚಂದನವೆಂದು ನಂಬಿದರೆ ನಿಶ್ಚಿತವಾಗಿ ಫಜೀತಿಯಾಗುವದು । ಕಬ್ಬಿನ ಜೊತೆಗೆ ಕಳ್ಳಿಗಿಡವು ಹುಟ್ಟುತ್ತದೆ । ಮಲ್ಲಿಗೆಯ ॥ 26 ॥
ಜೊತೆಗೆ ಶಮಿ ಗಿಡವು ಹುಟ್ಟುತ್ತದೆ । ಇದೇ ರೀತಿ ಎಲ್ಲಿ ಸಾಧು ಪುರುಷರೊ, ಅಲ್ಲಿ ಸಾಧುಗಳು ಇರುವದು





ಸಂಯೋಗವೇ । ವಜ್ರ ಮತ್ತು ಗಾಜು ಒಂದೇ ಗಣಿಯಲ್ಲಿ ಸಿಗುತ್ತವೆ । ಆದರೆ ಒಂದೇ ಸ್ಥಳದಲ್ಲಿ ಇದ್ದರೂ ಅವುಗಳ ಮೂಲ್ಯವು ಒಂದು ಇರುವದಿಲ್ಲ। ವಜ್ರದ ತೇಜವು ಕಾಚಿಗೆ ಶೋಭೆ ನೀಡುತ್ತದೆ । ಆದರೆ ಕಾಜು–ಕಾಜೇ, ಅದನ್ನು ಕಾಲಡಿಯಲ್ಲಿ ತುಳಿಯಲಾಗುತ್ತದೆ । ಆದರೆ ವಜ್ರವು ರಾಜಮುಗುಟದಲ್ಲಿ ಶೋಭಿಸುತ್ತದೆ । ಗಜಾನನ ಮಹಾರಾಜರ ಬಳಿಯಲ್ಲಿ ಇಂತಹ ಒಬ್ಬ ಜಂಭದ ಕೋಳಿ ಮತ್ತು ಸ್ವಾರ್ಥಿ ಮನುಷ್ಯನು ಇರುತ್ತಿದ್ದನು । ಸಂತರ ಸೇವೆ ಮಾಡುವ ಜಂಭದಲ್ಲಿ ಇದ್ದನು । ಅವನ ಅಂತರಂಗದ ಇಚ್ಛೆಯೇ ಬೇರೆ ಇತ್ತು। ಪೇಢೆ ಹಾಗೂ ಮಿಠಾಯಿಗಳನ್ನು ಮಹಾರಾಜರ ಹೆಸರಿನಲ್ಲಿ ತಿನ್ನುತ್ತಿದ್ದನು । ಬೇರೆಯವರಿಗೆ ತಾನೇ ಮಹಾರಾಜರ ನಿಜ ಸೇವಕನಿದ್ದಂತೆ ತೋರಿಸುತ್ತಿದ್ದನು । ತಾನಿಲ್ಲದೆ ಮಹಾರಾಜರ ಯಾವ ಕೆಲಸವು ಆಗದು । ಅವನು ಯಾವಾಗಲೂ ತನ್ನನ್ನು ಬಿಟ್ಟು ಬೇರೆ ಯಾರಿಂದಲೂ ಮಹಾರಾಜರ ಸೇವೆ ಸಾಧ್ಯವಿಲ್ಲ ಎಂದು ಬಢಾಯಿ ಕೊಚ್ಚುತ್ತಿದ್ದನು । ನಾನು ಸ್ವಾಮಿ ಸಮರ್ಥ, ರಾಮದಾಸರ ಕಲ್ಯಾನಂತೆ ಇರುವೆನು। ನಾನು ಹೇಳಿದ್ದನ್ನೇ ಮಹಾರಾಜರು ಕೇಳುತ್ತಾರೆ । ನಾನು ಮಹಾರಾಜರ ಚಿಲುಮಿಯನ್ನು ತುಂಬುತ್ತೇನೆ ಮತ್ತು ಅವರ ಊಟದ ವ್ಯವಸ್ಥೆ ಮಾಡುತ್ತೇನೆ । ಒಟ್ಟಿನಲ್ಲಿ, ನಾನಾ ಮಹಾರಾಜರೇನೋ ಸಾಕ್ಷಾತ ಶಿವ । ಆದರೆ ಅವನು ತಮಗೆ ನಂದಿಯೆಂದು ತಿಳಿದಿದ್ದ। ನಂದಿಯ ದರ್ಶನ ಮಾಡದ ಹೊರತು ಶಂಕರನ ದರ್ಶನವು ಸಾಧ್ಯವಿಲ್ಲ। ಆದ್ದರಿಂದ ಅವನು ಬರುಹೋಗುವ ಜನರಿಗೆ ಬೆದರಿಸುತ್ತಿದ್ದನು। ಅವನ ಈ ಆಟವನ್ನು ಬಹುದಿನಗಳಿಂದ ಮಹಾರಾಜರು ನಿರೀಕ್ಷಿಸುತ್ತಿದ್ದರು। ಒಮ್ಮೆ ಮಹಾರಾಜರು ಅವನಿಗೆ ಪಾಠ ಕಲಿಸಲು ನಿಶ್ಚಯಿಸಿದರು । ಒಂದು ದಿನ ಬೇರೆ ಊರಿನಿಂದ ಕೆಲ ಜನರು ಮಹಾರಾಜರ ದರ್ಶನಕ್ಕಾಗಿ ಶೇಗಾಂವಿಗೆ ಬಂದರು । ಆಗ ಮಹಾರಾಜರು ಮಂಚದ ಮೇಲೆ ವಿರಮಿಸುತ್ತಿದ್ದರು । ಮಹಾರಾಜರನ್ನು ಎಬ್ಬಿಸುವ ಎದು ಯಾರಲ್ಲಿರಲಿಲ್ಲ । ಮತ್ತು ಬಂದ ಜನರಿಗೆ ಮುಂದಿನ ಸ್ಥಾನಕ್ಕೆ ಹೋಗುವ ಅವಸರವಿತ್ತು। ಆದ್ದರಿಂದ ಅವರು ವಿಚಾರ ಮಗ್ನರಾದರು । ನಂತರ ಅವರು ವಿಠೋಬಾನಿಗೆ ತಮಗೆ ಬೇಗ ಮುಂದೆ ಹೋಗುವದಿದೆ ಎಂದು ವಿನಂತಿಸಿದರು । ಆಜಕೆ ಮಹಾರಾಜರು ಈಗ ನಿದ್ದೆ ಮಾಡುತ್ತಿದ್ದಾರೆ । ಮಹಾರಾಜರ ದರ್ಶನ ಪಡೆಯದೆ ಮುಂದೆ ಹೋಗುವ ಇಚ್ಛೆಯೂ ಇಲ್ಲ । ಈ ಸ್ಥಿತಿಯಲ್ಲಿ ತಾವೇ ನಮಗೆ ಸಹಾಯಮಾಡಬಹುದು । ಈ ಸ್ತುತಿಯನ್ನು ಕೇಳಿ ವಿಠೋಬನ ಆನಂದ ಗಗನ ಮುಟ್ಟಿತು । ಅವನು ಒಳಗೆ ಹೋಗಿ ಮಹಾರಾಜರಿಗೆ ಎಬ್ಬಿಸಿದನು । ॥ 27 ॥
ಇದರಿಂದ ಬಂದ ಭಕ್ತರ ಇಚ್ಛೆ ಪೂರ್ಣವಾಯಿತು ಆದರೆ ವಿಠೋಬಾನು ಸಂಕಟದಲ್ಲಿ ಸಿಕ್ಕಿಹಾಕಿಕೊಂಡನು । ಬಿತ್ತಿದಂತೆ

ಬೆಳೆ । ಆ ಸಮಯ ಮಹಾರಾಜರ ಕೈಯಲ್ಲಿ ಒಂದು ಬಡಿಗೆ ಇತ್ತು। ಆದರಿಂದಲೇ ಮಹಾರಾಜರು ವಿಠೋಬನಿಗೆ ಹೊಡೆಯಲಾರಂಭಿಸಿದರು । ಮತ್ತು ಕೂಗುತ್ತಿದ್ದರು ಇವನು, ಗರ್ವಿಷ್ಠನಾಗಿ ತನ್ನ ಸ್ಥಿತಿಯನ್ನು ಮರೆತಿದ್ದಾನೆ । ಇವನು ವ್ಯಾಪಾರ ಆರಂಭಿಸಿದ್ದಾನೆ। ಮಠದಲ್ಲಿ ನನಗೆ ಕೆಲವು ಘಂಟೆ ಒಂದು ಸ್ಥಳದಲ್ಲಿ ಕೂಡಿಸುತ್ತಾನೆ। ಕೆಲವು ಸಲ ಭೂತ ಸಂಚರಿಸಿದಂತೆ ಅವಿರ್ಭಾವ ಮಾಡುತ್ತಾನೆ । ಇವನ ದುಷ್ಟ ಕಾರ್ಯಗಳು ಮೇರೆ ತಪ್ಪಿವೆ । ಇದರ ಫಲವು ಅವವಿಗೆ ದೊರಕಲೇಬೇಕು । ಒಂದು ಕಡೆ ಈ ರೀತಿ ನುಡಿಯುತ್ತ ಮತ್ತೊಂದು ಕಡೆ ಹೊಡೆಯುತ್ತಿದ್ದರು । ವಿಷವನ್ನು ಎಂದೂ ಸಕ್ಕರೆಯೆಂದು ತಿಳಿಯಬಾರದು, ಮತ್ತು ಕಳ್ಳನನ್ನು ಹತ್ತಿರ ಮಾಡಬಾರದು । ಮಹಾರಾಜರ ಹೊಡೆತವನ್ನು ಸಹಿಸಲಾರದೇ ವಿಠೋಬನು ಅಲ್ಲಿಂದ ಕಾಲುಕಿತ್ತಿದನು। ಅನಂತರ ಅವನು ಮತ್ತೆ ಕಾಣಿಸಲಿಲ್ಲ। ನಿಜ ಸಂತರು ಇಂತಹ ದುಷ್ಟ, ಹಾಗೂ ಗರ್ವಿಷ್ಠ ಭಕ್ತರ ಜಾಲದಲ್ಲಿ ಸಿಗುವದಿಲ್ಲ। ನಕಲಿ ಸಾಧುಗಳು ಕಿಡಿಗೇಡಿ ಭಕ್ತರ ಜೊತೆಗೆ ಒಂದಾಗಿ, ಸಾಮಾನ್ಯರನ್ನು ಮಳ್ಳುಮಾಡಿ ಆನಂದ ಪಡೆಯುತ್ತಾರೆ। ಹೀಗೆ ಮಾಡುವದು ಅಪಾಯಕ್ಕೆ ಕೈ ನೀಡಿ ಜನ ಸಾಮಾನ್ಯರ ಕಣ್ಣುಗಳಲ್ಲಿ ಮಣ್ಣು ಹಾಕಿದಂತೆ । ನಿಜ ಸಂತರು ದೇವರ ಮೇಲೆ ನಿತಾಂತ ಶ್ರದ್ಧೆಯನ್ನು ಇಡುತ್ತಾರೆ । ಭಗವಂತನೇ ಅವರಿಗೆ ಎಲ್ಲ ವಿಶ್ವ। ಅವರು ಜನರಿಗೆ ಮೋಸಮಾಡುವದು ಪಾಪವೆಂದು ತಿಳಿಯುತ್ತಾರೆ। ಅವರು ಇಂತಹ ಪಾಖಂಡಿ ಸಂತನಿಗೆ ತಮ್ಮ ಹತ್ತಿರ ಬರಲು ಕೊಡುವದಿಲ್ಲ। ಏಕೆಂದರೆ ಪತಿವ್ರತೆಗೆ ವೇಶ್ಯೆಯ ಸಮೀಪ ಹೇಗೆ ಆನಂದವಾಗ ಬಹುದು ? ತಾಮ್ರವನ್ನು ಬಂಗಾರದಲ್ಲಿ ಬೆರೆಸಿದರೆ ಬಂಗಾರಕ್ಕೆ ಶೋಭೆ ಬರುವದಿಲ್ಲ। ನಿಜ ಸಾಧುವು ಧೂರ್ತ ಜನರಿಗೆ ತಮ್ಮ ಬಳಿ ಬರಗೊಡುತ್ತಾರೆ ಆದರೆ ಅವರ ಕುಬುದ್ಧಿಯನ್ನು ಮರೆಯುವದಿಲ್ಲ । ಅವನು ಪೂರ್ವ ಜನ್ಮದ ಕುಕರ್ಮಗಳನ್ನು ಭೋಗಿಸಲು ಬಂದಿದ್ದಾನೆ, ಎಂಬುದು ತಿಳಿದುಕೊಂಡು ಅವರಿಗೆ ಮಹತ್ವ ಕೊಡುವದಿಲ್ಲ। ಮಲ್ಲಿಗೆ ಹಾಗೂ ಕಳ್ಳಿಗಳು ಒಂದೇ ಭೂಮಿಯಿಂದ ನಿರ್ಮಾಣವಾಗುತ್ತವೆ । ಆದರೆ ಅವುಗಳ ಗುಣಗಳಂತೆ ಬೆಲೆಯನ್ನು ಕೊಡಲಾಗುತ್ತದೆ । ಮಲ್ಲಿಗೆಯನ್ನು ಸುರಕ್ಷಿತವಿಡಲು ಪಾಪಾಸುಕಳ್ಳಿಯನ್ನು ಸುಡುತ್ತಾರೆ । ಮತ್ತು ಗುಂಗಾಡುಗಳಿಂದ ರಕ್ಷಣೆಯನ್ನು ಪಡೆಯಲು ಕಳ್ಳಿಯನ್ನು ಬಾಗಿಲಲ್ಲಿ ಕಟ್ಟುತ್ತಾರೆ । ಸಂತ ಮಹಾತ್ಮರ ಅವತಾರವು ಜನಕಲ್ಯಾಣಕ್ಕಾಗಿ
ಇರುತ್ತದೆ। ಅವರ ಸುತ್ತಲು ನೆರೆದ ಜನರ ಬೆಲೆಯನ್ನು ಅವರ ಪ್ರಕೃತಿ ಧರ್ಮಕ್ಕೆ ಅನುಸರಿಸಿ ಮಾಡುತ್ತಾರೆ। ವಿಠೋಬನು ॥ 28 ॥
ಬಹಳ ದುರ್ದೈವಿ । ಸಂತ ಕೃಪೆಯನ್ನು ಪಡೆದರೂ ಅವನು ತನ್ನ ಕುಕರ್ಮಗಳಿಂದ ದೂರಕ್ಕೆ ತಳ್ಳಲ್ಪಟ್ಟನು । ಒಂದು






ವೇಳೆ ಅವನು ಸದ್ ವರ್ತನೆ ಮಾಡಿದ್ದರೆ ಸಂತರ ಕೃಪೆಯಿಂದ ಕೃತಾರ್ಥನಾಗುತ್ತಿದ್ದನು । ಅವನ ದುರ್ದೈವ, ಕಲ್ಪವೃಕ್ಷದಡಿ ಕುಳಿತು, ಚಕಮಕಿಯ ಕಲ್ಲಿನ ಅಪೇಕ್ಷೆ ಮಾಡಿದಂತಿತ್ತು। ಅಥವಾ ಕಾಮಧೇನುವಿನಿಂದ ತೆಂಗಿನಕಾಯಿ ಕೇಳಿದಂತೆ। ಆದ್ದರಿಂದ ಸಂತ ಕೃಪೆಯಾದರೇ, ಭಕ್ತನು ತನ್ನ ಮಾನವೀ ಜೀವನವು ಸಾರ್ಥಕವಾಗುವಂತೆ ಏನಾದರೂ ಮಾಡಬೇಕು। ದಾಸಗಣು ವಿರಚಿತ ಶ್ರೀ ಗಜಾನನ ವಿಜಯ ಗ್ರಂಥವು ವಾಚಕನ ರಕ್ಷೆಯನ್ನು ಸದೈವ ಮಾಡಲಿ।

॥ ಶ್ರೀ ಹರಿಹರಾರ್ಪಣಮಸ್ತು॥ ಶುಭಂ ಭವತು ॥

॥ 29 ॥

॥ ಇಲ್ಲಿಗೆ ಮೂರನೆಯ ಅಧ್ಯಾಯವು ಮುಗಿಯಿತು ॥





ಶ್ರೀ ಗಜಾನನ ಮಹಾರಾಜರ ಚಿಲಿಮೆಯ ಹತ್ತಿರ ಬಂಕಟಲಾಲನು ಕಡ್ಡಿಯನ್ನು ಹಿಡಿಯುತ್ತಲೇ ಚಿಲಿಮೆ ಹೊತ್ತಿಕೊಂಡಿತು.

## ॥ ಅಧ್ಯಾಯ ೪ ॥

ಶ್ರೀ ಗಜಾನನ । ಶ್ರೀ ಗಣಾಶಾಯನಮಃ । ಏಲ್ಕೈ, ಸರ್ವಸಾಕ್ಷಿ, ಸರ್ವೇಶ್ವರ, ನೀಲಕಂಠ, ಗಂಗಾಧರ, ಮಹಾಕಲಾ ತ್ರೈಂಬಕೇಶ್ವರ । ಶ್ರೀ ಓಂಕಾರ, ನನ್ನ ಮೇಲೆ ಕೃಪೆ ಮಾಡಿರಿ । ನೀನು ಹಾಗೂ ರುಕ್ಮಿಣೇಶ ಇಬ್ಬರೂ ಅಭಿನ್ನರು । ನೀರನ್ನು, ಜಲವೆಂದು ಕರೆದರೂ ಅದರ ಗುಣಧರ್ಮಗಳಲ್ಲಿ ಬದಲಾವಣೆಯಾಗುವದಿಲ್ಲ। ಅದೇ ರೀತಿ ತಾವಿಬ್ಬರೂ ಇರುವಿರಿ । ಪ್ರತಿಯೊಬ್ಬನು ತನ್ನ ಮನೋವೃತ್ತಿಯಂತೆ, ತಮಗೆ ಇಷ್ಟವಾದ ಆರಾಧ್ಯದೇವತೆಯನ್ನು ಭಜಿಸುತ್ತಾನೆ । ಅನನ್ಯ ಭಕ್ತಿಯಿಂದ ಶರಣಾದರೆ ತಾವು ಭಕ್ತರನ ಮೇಲೆ ಕೃಪೆಮಾಡುವಿರಿ । ತಾಯಿಯು ತಮ್ಮ ಮಗುವಿನೊಡನೆ ಎಂದಿಗೂ ಕಠೋರ ನಿಷ್ಠುರಗಳಾಗುವದಿಲ್ಲ। ನಾನಾದರೂ ತಮ್ಮ ಅಜ್ಞಾನಿ ಬಾಲಕ, ನನ್ನ ಮೇಲೆ ಕೃಪೆ ಮಾಡಿರಿ । ತಾವು ಸಾಕ್ಷಾತ್ ಕಲ್ಪತರು । ಕಲ್ಪತರು ಎಲ್ಲರ ಇಚ್ಛೆಯನ್ನು ಪೂರ್ತಿಗೊಳಿಸುತ್ತದೆ । ಬಂಕಟಲಾಲನ ಮನೆಯಲ್ಲಿ ಮಹಾರಾಜರು ತಂಗಿದಾಗ, ಒಂದು ಅದ್ಭುತ ಘಟನೆಯು ಆಯಿತು । ಅಂದು ವೈಶಾಖ ಶುದ್ಧ ಅಕ್ಷಯ ತೃತಿಯಾ । ಆ ದಿನ ತಮ್ಮ ಪೂರ್ವಜರಿಗೆ ಉದಕವನ್ನು ಕೊಟ್ಟು ಶ್ರಾದ್ಧ ಮಾಡುವ ಪ್ರಥೆ ಇದೆ। ವರ್ಹಾಡ ಪ್ರಾಂತದಲ್ಲಿ ಅಕ್ಷಯ ತೃತಿಯಾ ಪವಿತ್ರದಿನವೆಂದು ಗಣಿಸಲ್ಪಡುತ್ತದೆ । ಜನರು ಆ ದಿನವನ್ನು ಒಂದು ಪರ್ವವೆಂದು ಗಣಿಸುತ್ತಾರೆ । ಆ ದಿನ ನಡೆದ ಘಟನೆಯನ್ನು ಕೇಳಿರಿ । ಮಹಾರಾಜರು ಬಂಕಟಲಾಲನ ಮನೆಯ ಮುಂದೆ ಮಕ್ಕಳೊಡನೆ ಮಾತನಾಡುತ್ತ ಆಟವಾಡುತ್ತಿದ್ದರು । ಅಚಾನಕ ಮಹಾರಾಜರಿಗೆ ಲೀಲೆಯನ್ನು ಮಾಡುವ ಇಚ್ಛೆಯಾಯಿತು । ಮಹಾರಾಜರು ಮಕ್ಕಳಿಗೆ ಚಿಲುಮಿಯಲ್ಲಿ ತಂಬಾಕನ್ನು ತುಂಬಿ, ಬೆಂಕಿಯನ್ನು ತರಲು ಹೇಳಿದರು । ಮುಂಜಾನೆಯಿಂದ ಚಿಲುಮಿಯನ್ನು ಶೇದಿಲ್ಲ, ಆದ್ದರಿಂದ ಬೇಜಾರಾಗಿದೆ। ಆದ್ದರಿಂದ ಈಗ ಚಿಲುಮೆಯನ್ನು ತಂದು ಕೊಡಿರಿ। ಮಹಾರಾಜರ ಆಜ್ಞೆಯನ್ನು ಮಕ್ಕಳು ಹೇಗೆ ಧಿಕ್ಕರಿಸಬಲ್ಲರು । ಬಹು ಆನಂದದಿಂದ ಚಿಲುವಿಯಲ್ಲಿ ತಂಬಾಕನ್ನು ತುಂಬಿದರು । ಆದರೆ ಅದನ್ನು ಹೊತ್ತಿಸಲು ಕೆಂಡದ ಅವಶ್ಯಕತೆ ಇತ್ತು। ಮನೆಯೆಲ್ಲ ಹೋಗಿ ನೋಡಿದರೆ ಇನ್ನೂ ಒಲೆಯನ್ನು ಹೊತ್ತಿಸಿರಲಿಲ್ಲ ಮಕ್ಕಳು ಚಿಲುಮಿಗೆ ಬೇಕಾದ ಕೆಂಡವನ್ನು ಎಲ್ಲಿಂದ ತರಬೇಕೆಂದು ಚಿಂತ್ರಾಕ್ರಾಂತರಾದರು । ಮಕ್ಕಳ ಚಿಂತೆಯನ್ನು ನೋಡಿ ಬಂಕಟಲಾಲನು ನುಡಿದನು, "ನೀವೇಕೆ ಬೆಂಕಿಯ ಬಗ್ಗೆ ಚಿಂತಿಸುವಿರಿ । ನಮ್ಮ ಓಣೆಯಲ್ಲಿರುವ ಅಕ್ಕಸಾಲಿಗ

ಜಾನಕಿರಾಮನ ಮನೆಯಿಂದ ಅಗ್ನಿಯನ್ನು ತನ್ನಿರಿ । ಅಕ್ಕಸಾಲಿಗನ ದಿನವು ಅಗಿಷ್ಟಿಕೆಯಲ್ಲಿ ಬೆಂಕಿಹಾಕದೇ ಆರಂಭವಾಗದು । ಪ್ರಜ್ವಲಿತವಾದ ಅಗ್ನಿಗೆ ನಮಸ್ಕರಿಸಿಯೇ ಅಕ್ಕಸಾಲಿಗನ ದಿನದ ಆರಂಭ । ಈ ಮಾತನ್ನು ಕೇಳಿ, ಮಕ್ಕಳು ಅಕ್ಕಸಾಲಿಗನ ಮನೆಗೆ ಹೋಗಿ, ಚಿಲುಮೆಗಾಗಿ ಬೆಂಕಿಯನ್ನು ಕೊಡಲು ಪ್ರಾರ್ಥಿಸಿದರು । ಅಗ್ನಿಯ ಮಾತನ್ನು ಕೇಳಿದೊಡನೆ ಜಾನಕಿರಾಮನು ಕೋಪಾವಿಷ್ಟನಾಗಿ ನುಡಿದನು ಅಕ್ಷಯ ತ್ರಿತಿಯಾದ ದಿನ ನಾನು ಯಾರಿಗೂ ಅಗ್ನಿ ಕೊಡುವದಿಲ್ಲ" ಎಂಬುದಾಗಿ, ಆದರೂ ಮಕ್ಕಳು ವಿನಯದಿಂದ ಜಾನಕಿರಾಮನಿಗೆ ಮಹಾರಾಜರ ಚಿಲುಮಿಗಾಗಿ ಬೆಂಕಿ ಬೇಕು ಎಂದು ಪ್ರಾರ್ಥಿಸಿದರು । ತಮಗೆ ಗೊತ್ತಿದ್ದಂತೆ, ಮಹಾರಾಜರು ದೇವೋತ್ತಮರು, ಅವರಿಗಾಗಿ ಬೆಂಕಿ ಬೇಕು। ಸಾಧುವಿಗಾಗಿ ಕೇಳಿ ವಸ್ತುವನ್ನು ಕೊಡುವದರಲ್ಲಿ ಅಶುಭವೇನು ? ಆ ದಿನವು ಎಷ್ಟೇ ಮಂಗಲಮಯವಾಗಿದ್ದರೇನು? ವ್ಯವಹಾರಿಕ ಮಾತುಗಳನ್ನು ನಮಗೆ ಹೇಳಬೇಡಿರಿ । ನಾವು ತಮಗಿಂತ ಚಿಕ್ಕವರು । ಆದರೆ ದೊಡ್ಡವರಾಗಿಯೂ ತಮಗೆ ಈ ಮಾತು ಹೇಗೆ ತಿಳಿಯದು ? ತಮ್ಮಿಂದ ದೊರೆತ ಅಗ್ನಿಯಿಂದ ಚಿಲುಮಿಯನ್ನು ಹೊತ್ತಿಸಬಹುದು ಮತ್ತು ಮಹಾರಾಜರು ಪ್ರಸನ್ನರಾದರೇ ನಿಮ್ಮ ಧನ ಹಾಗೂ ಸಂಪ್ತಿನಲ್ಲಿ ವೃದ್ಧಿಯಾಗುವದು । ಈ ಮಾತುಗಳನ್ನು ಕೇಳಿಯೂ ಜಾನಕಿರಾಮನ ಮನಸ್ಸು ಕರಗಲಿಲ್ಲ । ಹೊರತು ಅವನು ಬಾಯಿಗೆ ಬಂದದ್ದನ್ನು ನುಡಿದನು । ಜನನಂಬಿಕೆಯಂತೆ ಬುದ್ಧಿಭ್ರಷ್ಟನು ಮುಳುಗುವಾಗ ಆಳು ನೀರಿನ ಕಡೆಗೆ ಹೋಗುತ್ತಾನೆ । ಜಾನಕಿರಾಮನು ನೆರೆದ ಮಕ್ಕಳಿಗೆ ನಿಮ್ಮ ಗಜಾನನನ ದೊಡ್ಡಸ್ತಿಕೆ ನನಗೆ ಗೊತ್ತು ಎಂದು ಬೆದರಿಸಿದನು । ಯಾವಾಗಲೂ ಚಿಲುವಿಯನ್ನು ಕುಡಿಯುವ ಆ ಹುಚ್ಚನಿಗೆ ನೀವು ಸಾಧು ಎಂದು ಏಕೆ ಕರೆಯುತ್ತೀರಿ ? ಅವನು ಯಾವಾಗಲೂ ಗಾಂಜಾ, ತಂಬಾಕು ಸೇವಿಸುತ್ತಾನೆ, ನಗ್ನನಾಗಿ ತಿರುಗುತ್ತಾನೆ, ಹುಚ್ಚರಂತೆ ವರ್ತಿಸುತ್ತಾನೆ ಮತ್ತು ಕೊಳಚೆ ನೀರನ್ನು ಕುಡಿಯುತ್ತಾನೆ । ಯಾವ ಜಾತಿಯೂ ಗೊತ್ತಿಲ್ಲ, ಅಂಥ ಹುಚ್ಚನನ್ನು ನಾನು ಸಾಧು ಎಂದು ನಂಬಲಾರೆ । ಬಂಕಟಲಾಲನಾದರೋ ಒಬ್ಬ ವೃದ್ಧ, ಅವನು ಭಜನೆಯಲ್ಲಿ ಮಗ್ನನಾಗಿರುತ್ತಾನೆ । ನಾನಾದರೋ ಅವನಿಗೆ ಯಾವ ಸ್ಥಿತಿಯಲ್ಲಿಯೂ ಧೂಮ್ರಪಾನಕ್ಕಾಗಿ ಅಗ್ನಿಕೊಡುವದಿಲ್ಲ । ಯೂರು, ಸ್ವಂತ ಸಾಕ್ಷಾತ್ಕಾರಿಯೂ ಅವನಿಗೆ ಅಗ್ನಿಯ ಅವಶ್ಯಕತೆ ಏನು? ತಮ್ಮ ದೈವಿಶಕ್ತಿಯಿಂದ ಅವನು ಅಗ್ನಿಯನ್ನು ನಿರ್ಮಿಸಲಾರನೇ ? ಸಾಧು ಜಲಂಧರನಾಥರು ಚಿಲುಮಿ ಕಡಿಯುತ್ತಿದ್ದರು. ಆದರೆ ಅವರು ಅಗ್ನಿಗಾಗಿ ಯಾರ ॥ 32 ॥
ಮನೆಯಲ್ಲಿ ಭಿಕ್ಷೆಯನ್ನು ಬೇಡಲಿಲ್ಲ । ಆದ್ದರಿಂದ ಬಾಲಕರೇ ತಾವು ಹಿಂತಿರುಗಿರಿ, ನನ್ನಿಂದ ತಮಗೆ ಬೆಂಕಿ ದೊರಕದು।



ನನ್ನ ದೃಷ್ಟಿಯಲ್ಲಿ ಆ ಹುಚ್ಚನಿಗೆ ಯಾವ ಸ್ಥಾನವೂ ಇಲ್ಲ । ಮಕ್ಕಳು ನಿರಾಶರಾಗಿ ಹಿಂತಿರುಗಿ ಬಂದು ಮಹಾರಾಜರಿಗೆ ನಡೆದ ವೃತ್ತಾಂತವನ್ನು ಹೇಳಿದರು । ಮಹಾರಾಜರು ಮಂದಸ್ಮಿತಮಾಡಿ, ಈಗ ಬೆಂಕಿಯ ಅವಶ್ಯಕತೆ ಇಲ್ಲ ಎಂದು ನುಡಿದರು । ಚಿಲುಮಿಯನ್ನು ಕೈಯಲ್ಲಿ ಹಿಡಿದು, ಬಂಕಟಲಾಲನಿಗೆ ಒಂದು ಕಡ್ಡಿಯನ್ನು ಮೇಲೆ ಹಿಡಿಯಲು ಅಜ್ಞಾಪಿಸಿದರು । ಬಂಕಟಲಾಲನು ಮಹಾರಾಜರಿಗೆ ತಾನು ಬೆಂಕಿಕಡ್ಡಿಯಿಂದ ಬೆಂಕಿಯನ್ನು ಹಚ್ಚುವದಾಗಿ ಹೇಳಿದನು। ಆಗ ಮಹಾರಾಜರು ಆದರ ಅವಶ್ಯಕತೆ ಇಲ್ಲ ಎಂದರು । ನಾನು ಹೇಳಿದಂತೆ ಮಾಡು । ಮಹಾರಾಜರ ಅಜ್ಞೆಯನ್ನು ನಂಬಿ ಬಂಕಟಲಾಲನು ಹಾಗೆ ಮಾಡಿದನು । ಆಗ ಏನಾಶ್ಚರ್ಯ, ಬೆಂಕಿಕಡ್ಡಿ ಇಲ್ಲದೇ, ಅಗ್ನಿಯು ಪ್ರಕಟವಾಗಿ, ಚಿಲುಮಿಯು ಸಿಲುಗಿತು । ಇದೆಲ್ಲ ಮಹಾರಾಜರ ಶಕ್ತಿಯ ಪ್ರದರ್ಶನ । ಕಡ್ಡಿಯು ಹಾಗೆ ಇತ್ತು, ಆದರೆ ಚಿಲುಮೆಯು ಹೊತ್ತಿತ್ತು । ನಿಜ ಸಾಧುವಿಗೆ ಭೌತಿಕ ವಸ್ತುಗಳ ಅವಶ್ಯಕತೆ ಇರುವದಿಲ್ಲ । ಮಹಾರಾಜರು ಮಾಡಿದ ಚಮತ್ಕಾರಕ್ಕೆ ಸಾಧುತ್ವವೆನ್ನುತ್ತಾರೆ। ಅದು ಪಾಖಂಡಿಯಾಗಿರಲಿಲ್ಲ । ಅಲ್ಲಿ ಅಕ್ಕಸಾಲಿಗನ ಮನೆಯಲ್ಲಿ ಅನರ್ಥವಾಯಿತು । ಅಕ್ಷಯ ತೃತಿಯಾದಂದು "ಚಿಚವಣಿ" ಎಂಬ ಸಾರನ್ನು, ಹುಣಸೆಹಣ್ಣು ಹಾಗೂ ಬೆಲ್ಲ ಇತ್ಯಾದಿ ವಸ್ತುಗಳನ್ನು ಉಪಯೋಗಿಸಿ ಮಾಡುತ್ತಾರೆ । ನಾಡಹಬ್ಬದ ದಿನ ಬೇವಿನ ಹೂವಿನ ಮಹತ್ವವಿದ್ದಂತೆ, ಅಕ್ಷಯ ತೃತಿಯಾ ದಿನ ಹುಣಸೆ ಸಾರಿನ ಚಿಚವಣಿಗೆ ಮಹತ್ವವಿದೆ । ಜಾನಕಿರಾಮನ ಮನೆಯಲ್ಲಿ ಹುಣಿಸೆಯ ಚಿಚವಣಿ ಸಾರನ್ನು ಮಾಡಿದ್ದರು । ಅನೇಕ ಜನರು ಭೋಜನಕ್ಕಾಗಿ ನೆರೆದಿದ್ದರು । ಎಲ್ಲರು ಊಟ ಮಾಡಲು ಕುಳಿತರು । ಇತರ ವಸ್ತುಗಳ ಜೊತೆಗೆ ಹುಣಸೆಸಾರನ್ನು ಬಡಿಸಿದರು । ಜನರು ನೋಡಿದರೆ ಅದರಲ್ಲಿ ಸಾವಿರಾರು ಕ್ರಿಮಿಗಳು, ಜಂತುಗಳು, ಹುಳಗಳಿದ್ದವು । ಇದರಿಂದ ಜನರ ಮನಸ್ಸಿನಲ್ಲಿ ಘ್ರಣೆಯುಂಟಾಯಿತು । ಊಟವನ್ನು ಬಿಟ್ಟು ಜನರು ಹೊರಟು ಹೋದರು । ಈ ಘಟನೆ ಹೇಗೆ ಆಯಿತು ಎಂದು ಜಾನಕಿರಾಮನು ವಿಚಾರ ಮಾಡತೊಡಗಿದನು । ಹುಣಸೆಸಾರು ಕೆಟ್ಟಿದ್ದರಿಂದ ಎಲ್ಲ ಅನ್ನವೂ ಕೆಟ್ಟು ಹೋಯಿತು। ಇದಕ್ಕಾಗಿ ನಾನೇ ಜವಾಬುದಾರ, ಎಂಬುದನ್ನು ಅರಿಯಲು ತಡವಾಗಲಿಲ್ಲ । ನಾನು ಸಾಧುವಿಗೆ ಅಗ್ನಿಯನ್ನು ಕೊಡಲಿಲ್ಲ. ಮಾತ್ರವಲ್ಲದೇ ಕೆಟ್ಟದ್ದನ್ನು ನುಡಿದೆ । ನಾನು ಅದರ ಪರಿಣಾಮವನ್ನು ನೋಡುತ್ತಿದ್ದೇನೆ । ಇದು ಗಜಾನನ ಮಹಾರಾಜರ ಲೀಲೇಯಿಂದಲೇ ಆಗಿರಬಹುದು । ಗಜಾನನ ಮಹರಾಜರು ಪವಿತ್ರ ತೀರ್ಥದಂತೆ, ಆದರೆ ನಾನು ಅವರನ್ನ ಕೊಳಚೆ ॥ 33 ॥
ನೀರು ಎಂದು ತಿಳದೆ । ಗಜಾನನರು ರಾಜರಾಜೇಶ್ವರರು, ಆದರೆ ನಾನು ಅವರನ್ನು ಭಿಕಾರಿ ಎಂದು ತಿಳಿದೆ । ಕಲ್ಪತರುಗೆ

ನಾನು ಜಾಲಿಗಿಡವೆಂದು ತಿಳಿದೆ । ಕೈವಲ್ಯಪದವನ್ನು ಕೊಡುವ ಗಜಾನನ ಮಹಾರಾಜರನ್ನು ನಾನು ಠಕ್ಕನೆಂದು ತಿಳಿದೆ। ನನ್ನ ದುರ್ದೈವದಿಂದ ನನಗೆ ಈ ಸ್ಥಿತಿ ಉಂಟಾಯಿತು । ಸಂತ ಸೇವೆಯನ್ನು ಮಾಡುವ ಸಂಧಿ ನನ್ನ ಕೈಗೆ ಬಂದಿತ್ತು, ಆದರೇ ಅದನ್ನು ನಾನು ದುರ್ದೈವದಿಂದ ಕಳೆದುಕೊಂಡೆ । ನನ್ನ ಈ ಪಶುತುಲ್ಯ ಜೀವನದ ಮೇಲೆ ಧಿಕ್ಕಾರವಾಗಲಿ । ಜನ್ಮ ತಾಳಿ ನಾನು ಭೂಮಿಗೆ ಭಾರವಾದೆನು, ಮತ್ತು ಎರಡು ಕಾಲಿನ ಪಶುವಾದೆನು । ಮನೆಯವರೆಗೆ ನಡೆದು ಬಂದ ನನ್ನ ಭಾಗ್ಯವನ್ನು ಬುದ್ಧಿಭ್ರಷ್ಟನಾಗಿ ಕಾಲಡಿ ತುಳಿದೆನು । ನನ್ನ ಭಾಘ್ಯೋದಯದ ದಿನವು ಬಂದಿತ್ತು, ಆದರೆ ನಾನೇ ಅದರಿಂದ ದೂರಹೋದೆನು । ಈಗ ಆಗಿದ್ದು ಆಗಿ ಹೋಯಿತು । ನಾನು ಈಗ ಮಹಾರಾಜರ ಬಳಿಗೆ ಹೋಗಿ, ಅವರ ಕಾಲಡಿ ಬಿದ್ದು, ಆಂತರಿಕ ಭಾವದಿಂದ ಕ್ಷಮೆಯಾಚಿಸುವೆ । ಈ ರೀತಿ ವಿಚಾರಮಾಡಿ, ಜಾನಕಿರಾಮನು 'ಹುಣಸೆ ಸಾರು' ತೆಗೆದುಕೊಂಡು, ಬಂಕಟಲಾಲನ ಮನೆಗೆ ತಲುಪಿ, ನಡೆದ ಮಾತುಗಳನ್ನು ಹೇಳಿ, ಬಂಕಟಲಾಲ ಶೇಠಜಿ ನನಗೆ ಘಾತವಾಯಿತು ಎಂದನು । ಆ ಹುಣಸೆ ಸಾರಿನಲ್ಲಿ ಕ್ರಿಮಿ ಹಾಗೂ ಜಂತುಗಳನ್ನು ನೋಡಿ, ಎಲ್ಲರೂ ಉಣ್ಣದೇ ಹೋದರು। ನನ್ನ ಪೂರ್ವಜರಿಗೆ ಊಟ ಸಿಗದೆ ಶ್ರಾದ್ಧಾಘಾತವಾಯಿತು । ಈ ಘಟನೆಗೆ ನಾನೇ ಜವಾಬದಾರನು । ಇಂದು ಮುಂಜಾನೆ ಮಕ್ಕಳು ಮಹಾರಾಜರ ಚಿಲುವಿಗಾಗಿ ಬೆಂಕಿಯನ್ನು ಕೇಳುತ್ತಿದ್ದರು । ಆದರೆ ನಾನು ಕೊಡಲಿಲ್ಲ । ನಾನು ಇಲ್ಲವೆಂದಿದ್ದರಿಂದ ಈ ಸ್ಥಿತಿ ಬಂದಿದೆ । ಇದನ್ನು ಕೇಳಿ ಬಂಕಟಲಾಲನು, ಹುಣಸಿಪಕ್ಕ ಕೆಟ್ಟದ್ದರಿಂದ ಹೀಗಾಗಿರಬಹುದು ಎಂದನು । ಅಕ್ಕಸಾಲಿಗನು, ಇಂತಹ ಶಂಕೆತೋರದಿರಿ, ಹುಣಸೆಹಣ್ಣು ಹೊಸತಾಗಿತ್ತು ಎಂದನು । ಅದನ್ನು ತಾವು ಕೂಡ ನಿರೀಕ್ಷಿಸಬಹುದು । ಶೇಠಜಿ, ಈಗ ನನ್ನನ್ನು ಮಹಾರಾಜರ ಬಳಿಗೆ ಕೊಂಡು ಹೋಗಿರೆಂದು ವಿನಂತಿ । ನನಗೆ ಅವರಲ್ಲಿ ಆಂತರಿಕ ಭಾವದಿಂದ ಕ್ಷಮೆಯಾಚನೆ ಮಾಡಬೇಕಾಗಿದೆ । ಏಕೆಂದರೆ ಸಾಧು ಪುರುಷರು ದಯಾಸಾಗರ । ಕೊನೆಗೆ ಭಯ ಪೀಡಿತನಾಗಿ ಜಾನಕಿರಾಮನು ಮಹಾರಾಜರ ಚರಣಕಮಲಗಳಲ್ಲಿ ಬಿದ್ದು ನುಡಿದನು "ಎಲೈ ದಯಾಘನಾ, ನನ್ನ ಮೇಲೆ ದಯೆತೋರಿ । ನಿಮ್ಮಲ್ಲಿ ನನ್ನಿಂದಾದ ವರ್ತನೆಯ ಬಗ್ಗೆ ನಾನು ಕ್ಷಮೆ ಯಾಚಿಸುತ್ತೇನೆ । ತಾವು ಸ್ವತಃ ಉಮಾನಾಥ, ಶೇಗಾಂವಿನಲ್ಲಿದ್ದು, ನಾನು ದುರ್ಭಾಗ್ಯದಿಂದ ತಮ್ಮ ಮಹಿಮೆಯನ್ನು ಅರಿಯಲಿಲ್ಲ । ತಮ್ಮ
ಕೃಪಾಶೀರ್ವಾದ ರೂಪದ ಅಗ್ನಿಯಿಂದ ನನ್ನ ಅಪರಾಧ ತೃಣವನ್ನು ಭಸ್ಮಗೊಳಿಸಿರಿ । ಮಹಾರಾಜ, ನಾನು ಇಂದಿನಿಂದ ॥ 34 ॥
ತಮ್ಮ ನಿಂದೆಯನ್ನು ಮಾಡೆನು । ನನ್ನ ಕೆಟ್ಟ ಕೆಲಸಕ್ಕಾಗಿ ತಾವು ಕೊಟ್ಟ ಶಿಕ್ಷೆಯು ನನಗೆ ಸಾಕು । ತಾವು ಅನಾಥರ ನಾಥರು।



ತಾವು ಸರಿಯಾಗಿ ಅವಲೋಕಿಸಿರಿ । ಜಾನಕಿರಾಮ, ಸುಳ್ಳು ಹೇಳಬೇಡ । ಹುಣಸೆ ಸಾರಿನಲ್ಲಿ ಏನೂ ದೋಷವಿಲ್ಲ । ನೀನು ಸರಿಯಾಗಿ ನೋಡು ಎಂದರು ಮಹಾರಾಜರು । ಜಾನಕಿರಾಮ ಮತ್ತು ಇನ್ನಿತರ ಉಪಸ್ಥಿತರು ನೋಡಿದರೆ ಹುಣಸೆ ಸಾರಿನಲ್ಲಿ ದೋಷವಿರಲಿಲ್ಲ। ಎಲ್ಲರು ಆಶ್ಚರ್ಯ ಚಕಿತರಾದರು । ಮಹಾರಾಜರು ಮಾಡಿದ ಚಮತ್ಕಾರವು ನಾಲ್ಕು ದಿಕ್ಕಿನಲ್ಲಿ ಕ್ಷಣಾರ್ಧದಲ್ಲಿ ಹಬ್ಬಿತು । ಕಸ್ತೂರಿಯ ಸುವಾಸನೆಯನ್ನು ಮುಚ್ಚಿಡುವದು ಸಾಧ್ಯವೇ ? ಶೇಗಾಂವಿಯ ಚಂದು ಮಕೀನನು ಮಹಾರಾಜರ ಪ್ರಿಯ ಭಕ್ತರಲ್ಲಿ ಒಬ್ಬನು । ಶ್ರೋತೃಗಳೇ ಅವನ ಬಗ್ಗೆ ಒಂದು ಕಥೆಯನ್ನು ಕೇಳಿರಿ । ಜ್ಯೇಷ್ಠಮಾಸದಲ್ಲಿ ಮಹಾರಾಜರ ಸಮೀಪದ ಭಕ್ತರು ಕೈಮುಗಿದು ಅವರ ಪಾದಗಳಲ್ಲಿ ದೃಷ್ಟಿ ಇಟ್ಟು ಕುಳಿತಿದ್ದರು । ಭಕ್ತರಲ್ಲಿ ಕೆಲವರು ಅವರಿಗೆ ಮಾವಿನಹಣ್ಣನ್ನು ಹೆಚ್ಚಿ ತಿನ್ನಿಸುತ್ತಿದ್ದರು. ಕೆಲವರು ಗಾಳಿ ಹಾಕುತ್ತಿದ್ದರು, ಕೆಲವರು ಸಕ್ಕರೆಯ ಪ್ರಸಾದವನ್ನು ಇತರರಿಗೆ ಹಂಚುತ್ತಿದ್ದರು, ಕೆಲವರು ಮಹಾರಾಜರಿಗೆ ಹೂಮಾಲೆಯನ್ನು ಅರ್ಪಿಸುತ್ತಿದ್ದರು, ಮತ್ತಿತರರು ಮಹಾರಾಜರಿಗೆ ಚಂದನದ ಲೇಪವಿಡುತ್ತಿದ್ದರು । ಅಷ್ಟರಲ್ಲಿ ಮಹಾರಾಜರು ಚಂದುವಿಗೆ ನನಗೆ ಆ ಮಾವಿನಹಣ್ಣನ್ನು ಕೊಡಬೇಡ ಎಂದರು । ಅಕ್ಷಯತೃತೀಯಾ ದಿನ ಕರ್ಚಿಕಾಯಿಗಳನ್ನು ಮಾಡಿದ್ದಿ, ಅದರಲ್ಲಿ ಎರಡನ್ನು ಮುಚ್ಚಿಟ್ಟಿರುವಿರಿ, ಅವುಗಳನ್ನು ತಂದು ಕೊಡು । ಈ ಬಗ್ಗೆ ಚಂದುಗೆ ಗೊತ್ತಿರಲಿಲ್ಲ । ಆದ್ದರಿಂದ ಅವನು ಮಹಾರಾಜರೆ ನಾನು ಅಲ್ಲಿಂದ ಕರ್ಚಿಕಾಯಿ ತರಲಿ । ತಮಗೆ ಬೇಕಿದ್ದರೆ ಹೊಸತಾಗಿ ಮಾಡಿಸುತ್ತೇನೆ ಎಂದು ನುಡಿದನು । ಆಗ ಮಹಾರಾಜರು ನನಗೆ ಹೊಸತು ಬೇಕಿಲ್ಲ ಮಡಿಕೆಯಲ್ಲಿ ಮುಚ್ಚಿಟ್ಟಿರುವ ಕರ್ಚಿಕಾಯಿ ನನಗೆ ಬೇಕು ಎಂದರು । ಗುರುವಿನೆದರು ಎಂದಿಗೂ ಸುಳ್ಳು ಆಡಬಾರದು । ಯಾವದೇ ನವ ಹೇಳದೇ ನನಗೆ ತಂದು ಕೊಡು । ಉಪಸ್ಥಿತ ಭಕ್ತಗಣರು ಚಂದುಗೆ ಸನ್ನೆಯಿಂದ ಮಹಾರಾಜರು ಹೇಳುವದರಲ್ಲಿ ಅವಶ್ಯವಾಗಿ ಏನಾದರೂ ಸತ್ಯವಿರಲೇಬೇಕು ಎಂದರು । ಚಂದು ಮನೆಗೆ ಹೋಗಿ ಹೆಂಡತಿಗೆ ಮಡಿಕೆಯಲ್ಲಿ ಮುಚ್ಚಿಟ್ಟ ಎರಡು ಕರ್ಚಿಕಾಯಿಗಳು ಮಹಾರಾಜರಿಗೆ ಬೇಕು ಎಂದು ಹೇಳಿದನು । ಪತ್ನಿಯು ಕರ್ಚಿಕಾಯಿ ಮಾಡಿ ಒಂದು ತಿಂಗಳ ಮೇಲೆ ಆಯಿತು ಎಂದಳು । ಈಗ ಅವುಗಳನ್ನು ಎಲ್ಲಿಂದ ತರಲಿ । ಹೇ ನಾಥ, ಅಕ್ಷಯ ತೃತೀಯಾದ ದಿನ ಮಾಡಿದ ಕರ್ಚಿಕಾಯಿ ಆ ದಿನವೇ ಮುಗಿದು ಹೋದವು । ತಮಗೆ ಬೇಕಿದ್ದರೆ,
ಸಮರ್ಥರಿಗಾಗಿ ಹೊಸತಾಗಿ ಮಾಡಿ ಕೊಡುವೆನು । ಇಲ್ಲಿ ನೋಡಿ, ಕಡಾಯಿಯನ್ನು ಒಲೆಯ ಮೇಲೆ ಇಡುವೆನು । ॥ 35 ॥
ಮನೆಯಲ್ಲಿ ಎಲ್ಲ ಸಾಮಾನು ಇದೆ, ತಾವು ಕೆಲವು ಕ್ಷಣ ತಡೆಯಿರಿ । ಹೆಂಡತಿಯನ್ನು ತಡೆದು, ಚಂದು ನುಡಿದನು,

ಮಹಾರಾಜರಿಗೆ ಹೊಸತಾಗಿ ಮಾಡಿದ ಕರ್ಚಿಕಾಯಿ ಬೇಕಿಲ್ಲ ಎಂದು । ಒಳಗೆ ಮಡಿಕೆಯಲ್ಲಿ ಮುಚ್ಚಿಟ್ಟ ಎರಡು ಕರ್ಚಿಕಾಯಿಗಳೇ ಮಹಾರಾಜರಿಗೆ ಬೇಕು ನೆನಪಿಸಿ ನೋಡು, ನಿಜವಾಗಿ ಮುಚ್ಚಿಟ್ಟಿರಬಹುದು । ಪತಿವಚನಗಳನ್ನು ಕೇಳಿ, ಪತ್ನಿಯು ಅಂತರ್ಮುಖಿಳಾಗಿ ಯೋಚಿಸಿ, ಮಹಾರಾಜರು ಹೇಳುವದರಲ್ಲಿ ಏನಾದರೂ ಸತ್ಯವಿರಬಹುದು ಎಂದಳು । ಮತ್ತು ಮಡಿಕೆಗಳಲ್ಲಿ ಹುಡುಕಲಾರಂಭಿಸಿದಳು । ಒಂದು ಮಡಿಕೆಯಲ್ಲಿ ನಿಜವಾಗಿ ಎರಡು ಕರ್ಚಿಕಾಯಿಗಳು ದೊರೆತವು । ಅವುಗಳನ್ನು ಪತಿಗೆ ಕೊಟ್ಟು, ತಾನು ಅವುಗಳನ್ನು ಇಟ್ಟಿರುವದು ನೆನಪಿಲ್ಲ ಎಂದಳು । ಕರ್ಚಿಕಾಯಿಗಳು ಒಂದು ತಿಂಗಳ ಹಿಂದೆ ಮಾಡಿದ್ದರೂ, ತಿನ್ನಲು ಯೋಗ್ಯವಾಗಿದ್ದವು । ಸಂತ ವಚನ ಸುಳ್ಳಾಗುವದು ಸಾಧ್ಯವಿಲ್ಲ । ಕರ್ಚಿಕಾಯಿಗಳನ್ನು ನೋಡಿ ಅವರಿಬ್ಬರು ಆನಂದಿತರಾಗಿ ಮನದಲ್ಲಿಯೇ ಧನ್ಯ ಸಾಧು ಗಜಾನನ ಅಂದರು । ಮಹಾಸಮರ್ಥ ಸಿದ್ಧಯೋಗಿಗೆ ಜಯವಾಗಲಿ । ಚಂದು ಕರ್ಚಿಕಾಯಿಗಳನ್ನು ತಕ್ಕೊಂಡು ಹೋಗಿ ಮಹಾರಾಜರಿಗೆ ಅರ್ಪಿಸಿದರು । ಮಹಾರಾಜರು ನುಡಿದ ಮಾತು ಸತ್ಯವಾಯಿತು । ಇದನ್ನು ನೋಡಿ ಅಲ್ಲಿ ನೆರೆದ ಜನರು ಬೆರಗಾದರು। ಆಂತರಿಕ ಭಕ್ತಿಯಿಂದ ಜನರು ನಿಜವಾಗಿ ಗಜಾನನ ಮಹಾರಾಜರು ತ್ರಿಕಾಲಜ್ಞರು, ಅವರು ಭೂತ, ಭವಿಷ್ಯ ಹಾಗೂ ವರ್ತಮಾನಗಳನ್ನು ಕುಳಿತಲ್ಲಿಂದಲೇ ಅರಿಯುವರು ಎಂದು ಹೇಳತೊಡಗಿದರು । ಶಬರಿಯು ಕೊಟ್ಟ ಬಾರಿ ಹಣ್ಣುಗಳನ್ನು ಶ್ರೀರಾಮನು ಆನಂದದಿಂದ ಸೇವಿಸಿದಂತೆ, ಚಂದುವು ಕೊಟ್ಟ ಕರ್ಚಿಕಾಯಿಗಳನ್ನು ಮಹಾರಾಜರು ಸೇವಿಸಿದರು । ಶೇಗಾಂವಿಯ ದಕ್ಷಿಣಕ್ಕೆ ಚಿಂಚೋಲಿ ಎಂಬ ಗ್ರಾಮವಿದೆ, ಅಲ್ಲಿ ಒಬ್ಬ ಬ್ರಾಹ್ಮಣನು ಇರುತ್ತಿದ್ದನು । ಅವನ ಹೆಸರು ಮಾಧವ । ಅವನ ವಯಸ್ಸು ಅರವತ್ತು ಮೀರಿ ಹೋಗಿತ್ತು । ಎಲ್ಲ ಶರೀರವು ಕ್ಷೀರವಾಗಿತ್ತು । ತಾರುಣ್ಯದಲ್ಲಿ ಪ್ರಪಂಚವೇ ಅವನ ವಿಶ್ವವಾಗಿತ್ತು । ಕಾಲಗತಿಯ ಮುಂದೆ ಎಲ್ಲರಿಗೆ ಶರಣವಾಗಲೇಬೇಕು । ಬ್ರಹ್ಮದೇವನು ಹಣೆ ಬರಹದಲ್ಲಿ ಬರೆದಂತೆ ಜೀವನವನ್ನು ನಡೆಸಲೇಬೇಕು । ಸಮಯ ಕಳೆದಂತೆ ಅವನ ಹೆಂಡತಿ ಹಾಗೂ ಪುತ್ರನ ದೇಹಾವಸಾನವಾಯಿತು ಮತ್ತು ಮಾಧವನು ಒಬ್ಬಂಟಿಗನಾದನು । ಆದ್ದರಿಂದ ಅವನ ಮನಸ್ಸಿನಲ್ಲಿ ವೈರಾಗ್ಯ ಹುಟ್ಟಿತು, ಅದಕ್ಕೆ ಸ್ಮಶಾನ ವೈರಾಗ್ಯವೆನ್ನುತ್ತಾರೆ । ಮನೆಯಲ್ಲಿಯ ವಸ್ತುಗಳನ್ನು ಮಾರಿ ಕೆಲವು ದಿನಗಳನ್ನು ಕಳೆದನು । ಆನಂತರ ಅವನು ದೀನನಾಗಿ ಭಗವಂತನ ಪ್ರಾರ್ಥನೆಯನ್ನು ಆರಂಭಿಸಿದನು । ಹೇ ಪ್ರಭು ಈಗ ನಾನೇನು ಮಾಡಲಿ । ॥ 36 ॥
ಸಂಸಾರವನ್ನೇ ಪರಮಾರ್ಥವೆಂದು ತಿಳಿದೆ ಮತ್ತು ಈಗ ಅದನ್ನು ಕೂಡಾ ಕಳೆದುಕೊಂಡ್ದೇನೆ, ಹೇ ದೀನ ಬಂಧು ನಾನು



ಒಂದು ಕ್ಷಣವು ಕೂಡಾ ನಿನ್ನ ನಾಮಸ್ಮರಣೆಯನ್ನು ಮಾಡಲಿಲ್ಲ । ಈಗ ನನ್ನ ರಕ್ಷಣೆಯನ್ನು ಯಾರು ತಾನೆ ಮಾಡುವರು। ತಮ್ಮ ಹೊರತು ನನಗೆ ಬೇರೆ ಯಾವ ಆಧಾರವೂ ಇಲ್ಲ । ನನ್ನ ಈ ಅರಣ್ಯರೋಧನೆಯನ್ನು ತಮ್ಮ ಹೊರತು ಯಾರು ಕೇಳುವರು ? ಕೊನೆಗೆ ಅವನು ಜೀರ್ಣಾವಸ್ಥೆಯಲ್ಲಿ ಶೇಗಾಂವಿಗೆ ಬಂದು ಮಹಾರಾಜರ ಚರಣಗಳನ್ನು ಹಿಡಿದು ಅವರ ಮುಂದೆ ಕುಳಿತನು । ಮಾಧವನು ಊಟವನ್ನು ಬಿಟ್ಟು, ಅಖಂಡ ಪ್ರಭುವಿನ ನಾಮಸ್ಮರಣೆಯಲ್ಲಿ ಮೈಮರೆತನು । ಈ ರೀತಿ ಒಂದು ದಿನ ಕಳೆದರೂ ಅವನು ಕುಳಿತಲ್ಲಿಂದ ಏಳಲಿಲ್ಲ । ಆಗ ಮಹಾರಾಜರು ಈ ರೀತಿ ಹಟ ಹಿಡಿಯುವದು ಒಳ್ಳೆಯದಲ್ಲ ಎಂದು ತಿಳಿಹೇಳಿದರು । ದೇವರಲ್ಲಿ ನೀನು ಈಗ ಪ್ರಾರ್ಥನೆ ಮಾಡುತ್ತಿರುವಿ ಆದರೆ ಅದರ ನೆನಪು ಕೂಡಾ ನಿನಗೆ ಈವರೆಗಿರಲಿಲ್ಲ । ಶರೀರದಿಂದ ಪ್ರಾಣವು ಹೋದ ಮೇಲೆ, ವೈದ್ಯರನ್ನು ಕರೆದು ಏನು ಪ್ರಯೋಜನ ? ಇದು ವೃದ್ಧಾವಸ್ಥೆಯಲ್ಲಿ ಮದುವೆ ಮಾಡಿ ಶರೀರ ಸುಖ ಪಡೆದಂತೆ ಆಗಿದೆ । ಸಮಯಕ್ಕೆ ಅನುಸಾರವಾಗಿ ಎಲ್ಲ ಮಾತುಗಳನ್ನು ಮಾಡಬೇಕು ಈಗ ಮನೆಯಲ್ಲಿ ಬೆಂಕಿ ಹತ್ತಿದ ಮೇಲೆ ಬಾವಿಯನ್ನು ಅಗಿಯನ್ನು ನೀನು ಹೊರಟಿರುವಿ । ಯಾವ ಪುತ್ರಾದಿಗಳಿಗಾಗಿ ನೀನು ಜೀವನವನ್ನು ವ್ಯರ್ಥಗೊಳಿಸಿದೆಯೋ ಅವರೆಲ್ಲರೂ ನಿನಗೆ ಬಿಟ್ಟು ಹೋದರು । ನೀನು ಯಾವದು ಕ್ಷಣಭಂಗುರವೋ, ಅಶಾಶ್ವತವೊ ಅದನ್ನೇ ಹೃದಯಕ್ಕೆ ಅವಚಿಕೊಂಡಿರುವಿ ಮತ್ತು ಯಾವದು ಶಾಶ್ವತವೊ ಅದರಿಂದ ದೂರ ಹೋಗಿರುವಿ । ಈಗ ಎಲ್ಲವೂ ನಿರರ್ಥಕ, ಏಕೆಂದರೆ ನಿನ್ನ ಕರ್ಮದ ಫಲವನ್ನು ನೀನು ಅನುಭವಿಸಲೇಬೇಕು, ಅದರ ಹೊರತು ನಿನಗೆ ಮುಕ್ತಿಯು ಇಲ್ಲ । ಆದ್ದರಿಂದ ಹಟಮಾರಿತನವನ್ನು ಬಿಟ್ಟು ವಿವೇಕದಿಂದ ಇರು । ಮಹಾರಾಜರು ಹೇಳಿದರೂ ಅವನು ಬಗ್ಗಲಿಲ್ಲ । ಜನರ, ವಿಶೇಷವಾಗಿ ಶೇಗಾಂವಿಯ ಕುಲಕರ್ಣಿಯವರ ಊಟ ಮಾಡುವ ವಿನಂತಿಯನ್ನು ಅವನು ಕೇಳದೆ; ಮಹಾರಾಜರ ಹತ್ತಿರ ದೇವರ ನಾಮಸ್ಮರಣೆಯನ್ನು ಮಾಡುತ್ತ ಕುಳಿತನು। ನಡುರಾತ್ರಿ ಆಗಿ ಹೋಗಿತ್ತು ಮತ್ತು ದಟ್ಟ ಕತ್ತಲೆಯ ಸಾಮ್ರಾಜ್ಯವು ಇತ್ತು । ಸಮೀಪದಲ್ಲಿ ಯಾರೂ ಇಲ್ಲ ಎಂಬುದನ್ನು ನೋಡಿ, ಮಹಾರಾಜರು ತಮ್ಮ ಲೀಲೆಯನ್ನು ತೋರಿಸಿದರು । ಮಹಾರಾಜರು ಭಯಂಕರ ರೂಪವನ್ನು ಧರಿಸಿದರು। ಸಾಕ್ಷಾತ್ ಯಮ ರಾಜನಂತೆ, ಅವರು ಕೂಗಿ ಮಾಧವನ ಮೈಮೇಲೆ ಓಡಿ ಹೋದರು । ಮಾಧವನು ಸಾಕ್ಷಾತ್ ಯಮರಾಜನು ತಮಗೆ ಕೊಂಡು ಹೋಗಲು ಬಂದಿದ್ದಾನೆ ಎಂದು ತಿಳಿದು, ಹೆದರಿಕೆಯಿಂದ ಅವನ ಮುಖದಿಂದ ॥ 37 ॥
ಶಬ್ದವೂ ಕೂಡಾ ಹೊರ ಬರಲಿಲ್ಲ । ಅವನು ಎದ್ದು ಓಡತೊಡಗಿದನು । ಅವನ ಈ ಸ್ಥಿತಿಯನ್ನು ನೋಡಿ ಮಹಾರಾಜರು

ಸೌಮ್ಯರೂಪ ಧರಿಸಿದರು ಮತ್ತು ಏನು ಇದೆ ನಿನ್ನ ಧೈರ್ಯವೊ । ನೀನು ಏನೇ ಮಾಡಿದರೂ, ನಿನ್ನನ್ನು ಕಾಲಪುರುಷನು ಅವಶ್ಯವಾಗಿ ಭಕ್ಷಿಸುವನು । ಮುಂದೆ ಏನಾಗಬಹುದು ಎಂಬುದರ ಉದಾಹರಣೆಯನ್ನು ನಿನಗೆ ತೋರಿಸಿದ್ದೇನೆ । ಯಮಲೋಕದಲ್ಲಿ ನೀನು ಎಲ್ಲಿರುವಿ । ಆಗ ಮಾಧವನು ದುಃಖಿತನಾಗಿ ಮಹಾರಾಜರೇ ಆ ಯಮಲೋಕದ ಬಗ್ಗೆ ಮಾತನಾಡದಿರಿ ಎಂದನು । ನಾನು ಕೊನೆಯ ಪ್ರಾರ್ಥನೆ ಮಾಡುವದೇನೆಂದರೆ, ನನಗೆ ಯಮಲೋಕದ ಬದಲು ವೈಕುಂಠಕ್ಕೆ ಕಳುಹಿಸಿರಿ । ಏಕೆಂದರೆ ಯಮಲೋಕದಲ್ಲಿ ನನ್ನ ಮೇಲೆ ಬರುವ ಸಂಕಟಗಲ ಉದಾಹರಣೆಯನ್ನು ನಾನು ಈಗಲೇ ನೋಡಿದ್ದೇನೆ । ನಾನು ಮಹಾ ಪಾಪಿ । ನನ್ನ ಪಾಪಕ್ಷಾಲನೆಯನ್ನು ಕೇವಲ ತಾವು ಮಾಡಬಲ್ಲಿರಿ । ನನ್ನ ಹಿಂದಿನ ಜನ್ಮದ ಕರ್ಮವು ಒಳ್ಳೆಯದಾಗಿದ್ದರಿಂದ ತಮ್ಮ ಪಾದಪದ್ಮಗಳಲ್ಲಿ ಬರುವ ಸೌಭಾಗ್ಯವು ನನಗೆ ಪ್ರಾಪ್ತವಾಗಿದೆ । ಸಂತರ ಸಹವಾಸ ಹಾಗೂ ಸೇವೆಯ ಲಾಭದೊರೆತರೆ ಅವನು ಯಮಲೋಕಕ್ಕೆ ಹೋಗುವದಿಲ್ಲ । ಆಂತರಿಕ ಭಾವದಿಂದ ಹೊರಸೂಸಿದ ಮಾತುಗಳನ್ನು ಕೇಳಿ ಮಹಾರಾಜರು ಮುಗುಳ್ನಕ್ಕರು । ಮಹಾಪಾತಕಿಯನ್ನು ಸಾಧುವೇ ಪಾಪಮುಕ್ತಮಾಡಿ ಪಾವನಗೊಳ್ಳಿಸುತ್ತಾರೆ । ಮಹಾರಾಜರು ಅವನಿಗೆ 'ಶ್ರೀ ಮನ್ನಾರಾಯಣ, ನಾರಾಯಣ ಈ ಪ್ರಭು ನಾಮಸ್ಮರಣೆಯನ್ನು ಮಾಡಲು ಹೇಳಿದರು । ನಿನ್ನ ಮೃತ್ಯುವು ಈಗ ಸಮೀಪಿಸಿದೆ । ಈಗ ಸಾವಧಾನ ಚಿತ್ತದಿಂದಿರು । ನಿನಗೆ ಇನ್ನೂ ಸ್ವಲ್ಪ ಕಾಲ ಜೀವಿಸುವ ಇಚ್ಛೆಯಿದ್ದರೇ ಅದನ್ನು ನೆರವೇರಿಸುತ್ತೇನೆ । ಆದ್ದರಿಂದ ನಿನ್ನ ಇಚ್ಛೆಯೇನು । ಮಾಧವನು ನಮ್ರನಾಗಿ ಈಗ ಬದುಕುವ ಇಚ್ಛೆಯಿಲ್ಲ ಎಂದನು । ಪ್ರಪಂಚವು ಒಂದು ಮಾಯಾಜಾಲ । ನನಗೆ ಈ ಮಾಯಾಜಾಲದಲ್ಲಿ ಸಿಕ್ಕಿಹಾಕುವ ಇಚ್ಛೆ ಇಲ್ಲ । ಮಹಾರಾಜರು 'ತಥಾಸ್ತು' ಎಂದು ಹೇಳಿ ಅವನ ಮೇಲೆ ಕೃಪಾಹಸ್ತವಿಟ್ಟು, ನಿನ್ನ ಇಚ್ಛೆಯನ್ನು ನಾನು ಪೂರೈಸಿದ್ದೇನೆ ಎಂದರು । ಈಗ ನಿನಗೆ ಜನ್ಮ ಮೃತ್ಯುಗಳಿಂದ ಮುಕ್ತಿದೊರಿಕಿದೆ । ಈ ಗುಪ್ತ ಮಾತುಕತೆ ಕೇವಲ ಅವರಿಬ್ಬರ ನಡುವ ನಡೆದವು । ಅದರ ವರ್ಣನೆಯನ್ನು ಮಾಡುವದು ನನ್ನಿಂದ ಅಸಾಧ್ಯ । ಸಮಯ ಬಂದಾಗ ಮಾಧವನ ಮೃತ್ಯುವಾಯಿತು । ಸತ್ಯವು ತಿಳಿಯದಿದ್ದರಿಂದ ಮಾಧವನ ಮೃತ್ಯುವಿನ ಕಾರಣವನ್ನು ತಮ್ಮ ತಮ್ಮ ಪ್ರಕೃತಿಯಂತೆ ಅರಿದರು । ಅದರ ವರ್ಣನೆಯನ್ನು ಮಾಡುವದು ಅನಾವಶ್ಯಕ । ಮಾಧವನ ಮೃತ್ಯುವು ಸಮರ್ಥರ ಸಾನಿಧ್ಯದಲ್ಲಿ ಆಯಿತು । ಗಜಾನನ ಮಹಾರಾಜರ ಕೃಪೆಯಿಂದ ಅವನಿಗೆ ಜನನ–ಮರಣದಿಂದ ಮುಕ್ತಿ ಸಿಕ್ಕಿತು । ಒಮ್ಮೆ ಮಹಾರಾಜರು ತಮ್ಮ ಇಚ್ಛೆಯನ್ನು ವ್ಯಕ್ತಪಡಿಸಿದರು । ಅದೇನೆಂದರೆ, ಬ್ರಾಹ್ಮಣರಿಂದ ವೇದ ಜಾಗರ






ಮಾಡಿರಿ ಏಕೆಂದರೆ ವೇದ ಶ್ರವಣದಿಂದ ಭಗವಂತನು ಪ್ರಸನ್ನನಾಗುತ್ತಾನೆ । ಪೇಢೆ, ಬರ್ಫಿ, ಪುಠಾಣೆ, ಇತ್ಯಾದಿ ವಸ್ತುಗಳನ್ನು ಒಂದು ರೂಪಾಯಿ ದಕ್ಷಿಣೆ ಬ್ರಾಹ್ಮಣರಿಗೆ ಕೊಡುವ ವ್ಯವಸ್ಥೆ ಮಾಡಿರಿ । ಇದನ್ನು ಕೇಳಿ ಭಕ್ತರು ಶೇಗಾಂವಿಯಲ್ಲಿ ವೇದಗಳನ್ನು ಬಲ್ಲ ಬ್ರಾಹ್ಮಣರು ಇಲ್ಲ ಎಂದು ಅಸಮರ್ಥತೆಯನ್ನು ಪ್ರಕಟಿಸಿದರು । ಇತರ ಪ್ರಬಂಧವು ಸಾಧ್ಯವಿದೆ । ನೀವು ಎಲ್ಲ ಸಿದ್ಧತೆಗಳನ್ನು ಮಾಡಿರಿ, ವಸಂತ ಪೂಜೆಗಾಗಿ ಬ್ರಾಹ್ಮಣರನ್ನು ದೇವರು ಕಳುಹಿಸುತ್ತಾನೆ ಎಂದು ಮಹಾರಾಜರು ನುಡಿದರು । ಮಹಾರಾಜರ ಅಭಯ ಪಡೆದು ಭಕ್ತರು ಹರ್ಷಿತರಾಗಿ ಸಿದ್ಧತೆಗೆ ತೊಡಗಿದರು । ಜನರು ನೂರು ರೂಪಾಯಿಗಳನ್ನು ಕೂಡಿಸಿದರು । ನಂತರ ಎಲ್ಲ ಸಾಮಗ್ರಿಗಳನ್ನು ತಂದರು । ಕೇಸರವನ್ನು ಕೂಡಿಸಿ, ಚಂದನದ ಗಂಧವನ್ನು ತಯಾರಿಸಿ ಬ್ರಾಹ್ಮಣರ ದಾರಿ ಕಾಯತೊಡಗಿದರು ಎರಡು ಪ್ರಹರಕ್ಕೆ ಸರಿಯಾಗಿ ವೆ2ದಿಕ ಬ್ರಾಹ್ಮಣರು ಶೇಗಾಂವಿಗೆ ಬಂದರು । ಅವರೆಲ್ಲರೂ ಶಾಸ್ತ್ರ ಶುದ್ಧ ಋಚೆಗಳನ್ನು ಮಾಡುವದರಲ್ಲಿ ಸಿದ್ಧಹಸ್ತರಿದ್ದರು । ಬಹು ಆನಂದದಿಂದ ವಸಂತ ಪೂಜೆಯು ನೆರವೇರಿತು । ವೈದಿಕ ಬ್ರಾಹ್ಮಣರು ಆನಂದದಿಂದ ದಕ್ಷಿಣೆ, ಪ್ರಸಾದ ಮೊದಲಾದವುಗಳನ್ನು ಪಡೆದು ತಮ್ಮ ಊರಿಗೆ ಹೊರಟು ಹೋದರು । ಸಂತರ ಇಚ್ಛೆಯನ್ನು ದೇವರು ಪೂರ್ತಿಮಾಡುತ್ತಾರೆ । ಏಕೆಂದರೆ ಭಗವಂತನ ಮೇಲೆ ಸಂತರ ಪ್ರಭಾವವೇ ಹಾಗಿರುತ್ತದೆ । ವಸಂತ ಪೂಜೆಯ ವ್ರತವು ಅಂದಿನಿಂದ ಬಂಕಟಲಾಲನ ಮನೆಯಲ್ಲಿ ಆರಂಭವಾಗಿದ್ದು, ಅವನ ಮಕ್ಕಳು, ಮರಿಮಕ್ಕಳು ಅದನ್ನು ಇಂದಿಗೂ ನಡೆಸಿದ್ದಾರೆ । ಈ ದಾಸಗಣುವಿರಚಿತ ಶ್ರೀ ಗಜಾನನ ವಿಜಯಗ್ರಂಥವು ಸಾಧಕನಿಗೆ ಹರಿಭಕ್ತಿಯಲ್ಲಿ ಲೀನಗೊಳಿಸಲಿ ಎಂಬ ಪ್ರಾರ್ಥನೆ ।

**॥ ಶ್ರೀ ಹರಿಹರಾರ್ಪಣಮಸ್ತು ॥ ಶುಭಂ ಭವತು ॥**

॥ ಇಲ್ಲಿಗೆ ನಾಲ್ಕನೆಯ ಅಧ್ಯಾಯವು ಮುಗಿಯಿತು ॥





ಶ್ರೀ ಗಜಾನನ ಮಹಾರಾಜರು ಬತ್ತಿದ ಬಾವಿಯಲ್ಲಿ ನೀರು ತರಿಸಿದರು ಭಾಸ್ಕರ ಪಾಟೀಲನು ಕ್ಷಮೆ ಬೇಡುತ್ತಾನೆ.

## ॥ ಅಧ್ಯಾಯ ೫ ॥

ಶ್ರೀ ಗಣಾಶಾಯನಮಃ। ಅಜ, ಅಜೀತ, ಅದ್ವಯ। ಸಚ್ಚಿದಾನಂದ ಕರುಣಾಲಯ। ಶರಣಾಗತ ದಾಸ ಗಣುಗೆ ಅಭಯ ಕೊಡಿ। ಹೇ ಪ್ರಭು, ನಾನು ಹೀನ, ದೀನ ಮಾತ್ರವಲ್ಲದೆ ಪಾತಕಿಯು ಇರುವೆನು। ನನಗೆ ಯಾವ ಅಧಿಕಾರವೂ ಇಲ್ಲ। ಪ್ರತಿಕೂಲ ಪರಿಸ್ಥಿತಿಯಿಂದ ನಾನು ಅಸಾಹಾಯಕನಾಗಿದ್ದೇನೆ । ಹೀನ ದೀನರ ಮೇಲೆ ಯಾವಾಗಲೂ ತಮ್ಮ ಕೃಪಾಹಸ್ತವಿರುತ್ತದೆ । ಭಗವಂತ ಶ್ರೀ ಶಂಕರನು ಸಂಪೂರ್ಣ ದೇಹದ ಮೇಲೆ ವಿಭೂತಿಯನ್ನು ಹಚ್ಚಿದ್ದಾನೆ । ಹೀನರ ಅಸಾಹಾಯಕತೆ ಹಿರಿಯರಿಗೆ ಮಾನಹಾನಿ ಮಾಡುವದಿಲ್ಲ। ಈ ಮಾತನ್ನು ಜ್ಞಾಪಕದಲ್ಲಿಟ್ಟು, ಹೇ ನಾರಾಯಣಾ, ಈ ದಾಸಗಣುಗೆ ತಮ್ಮ ಸಮೀಪದಲ್ಲಿಡಿರಿ। ತಾಯಿ ಮಗುವಿನ ಎಲ್ಲ ಬೇಡಿಕೆಗಳನ್ನು ಪೂರೈಸುತ್ತಾಳೆ। ದಾಸಗಣುವಿನ ಭಾರವು ತಮ್ಮ ಹೆಗಲ ಮೇಲಿದೆ । ತಾವು ಮನ ಬಂದಂತೆ ಮಾಡಿ ಆದರೆ ನನ್ನಿಂದ ಮುಖ ಮರೆಸದಿರಿ । ಏಕೆಂದರೆ ಈ ದಾಸಗಣುವಿನ ಚೆಲ್ಲಾಟವು ತಮ್ಮ ಆದಾರದ ಮೇಲೆಯೇ ಇದೆ । ಶೇಗಾಂವಿಯ ಬಂಕಟಲಾಲನ ಮನೆಯಲ್ಲಿ ಮಹಾರಾಜರ ದರ್ಶನಕ್ಕಾಗಿ ಬರುವ ಜನರು ಗದ್ದಲವನ್ನು ವರ್ಣಿಸುವದು ಅಸಾಧ್ಯ । ಈ ತಲೆನೋವಿನಿಂದ ದೂರ ಹೋಗಲು ಮಹಾರಾಜರು ಅರಣ್ಯದಲ್ಲಿದ್ದರು । ಅವರು ಎಲ್ಲಿ ಇದ್ದರು ಎಂಬುದು ಯಾರಿಗೂ ತಿಳಿಯುತ್ತಿರಲಿಲ್ಲ। ಯಾರಿಗೂ ತಿಳಿಸದೆ ಮಹಾರಾಜರು ಪಿಂಪಳಗಾಂವಿಗೆ ಬಂದರು । ಅಲ್ಲಿ ನಡೆದ ಘಟನೆಯನ್ನು ಈಗ ಕೇಳಿರಿ । ಪಿಂಪಳಗಾಂವಿನ ಸೀಮೆಯ ಮೇಲಿರುವ ಅರಣ್ಯದಲ್ಲಿ ಒಂದು ಪುರಾತನ ಶಿವಾಲಯವಿತ್ತು । ಆ ಮಂದಿರದಲ್ಲಿ ಸಾಕ್ಷಾತ್ಕಾರಿ ಮಹಾರಾಜರು ಹೋಗಿ, ಪದ್ಮಾಸನ ಹಾಕಿ ಕುಳಿತು ಧ್ಯಾನಮಗ್ನರಾದರು। ಆ ಊರಿನ ದನಕಾಯುವವರು ಸಂಜೆಯ ಸಮಯ ತಮ್ಮ ದನಗಳನ್ನು ಕೊಂಡು ಮನೆಗೆ ಹೊರಟಿದ್ದರು। ಮಂದಿರದ ಹತ್ತಿರ ಒಂದು ಸಣ್ಣ ಹೊಳೆಯಿತ್ತು ದನಗಳಿಗೆ ನೀರುಣಿಸಲು ಅವರು ಅಲ್ಲಿ ಬಂದರು । ಕೆಲವು ದನಕಾಯುವವರು ಶ್ರೀ ಶಂಕರನ ದರ್ಶನಕ್ಕಾಗಿ ಒಳಗೆ ಹೋದಾಗ ಮಹಾರಾಜರನ್ನು ಅಲ್ಲಿ ನೋಡಿ ಚಕಿತರಾದರು । ಇಲ್ಲಿಯವರೆಗೆ ಆ ದೇವಾಲಯದಲ್ಲಿಅ ಅವತು ಅಪರಿಚಿತನಿಗೆ ಕಂಡಿರಲಿಲ್ಲ। ಒಳಗಿದ್ದವರು ಹೊರಗಿನ ತಮ್ಮ ಮಿತ್ರರಿಗೆ ಒಳಗೆ ಕರೆದರು ಮತ್ತು ಎಲ್ಲರು ಮಹಾರಾಜರ ಸುತ್ತಲು ಕುಳಿತರು । ಮಹಾರಾಜರು ಸಮಾಧಿ ಅವಸ್ಥೆಯಲ್ಲಿದ್ದರಿಂದ ನಿಶ್ಚಲವಾಗಿದ್ದರು । ಅವರು ಮಾತನಾಡುತ್ತಿರಲಿಲ್ಲ

ಶ್ರೀಗಜಾನನ || ೪೨ ||

ಹಾಗೂ ಕಣ್ಣು ತೆರೆಯುತ್ತಿರಲಿಲ್ಲ। ಇದರ ಕಾರಣವು ದನಗಾಯಿಗಳಿಗೆ ಗೊತ್ತಿರಲಿಲ್ಲ। ಕೆಲವರು ಮಹಾರಾಜರು ದಣಿದಿರಬಹುದು ಹಾಗೂ ಹಸಿದಿರಬಹುದು ಎಂದೆಣಿಸಿದರು। ಆದ್ದರಿಂದ ಅವರಲ್ಲಿ ಮಾತನಾಡುವ ಶಕ್ತಿ ಇಲ್ಲ। ಮಹಾರಾಜರು ಹಸಿದಿರಬೇಕು ಎಂದು ನಂಬಿ ಕೆಲವರು ರೊಟ್ಟಿಯನ್ನು ಕೊಡಲು ಯೋಚಿಸಿದರು। ಒಬ್ಬನು ಮಹಾರಾಜರ ಬಾಯಿಯ ಮುಂದೆ ರೊಟ್ಟಿಯನ್ನು ಹಿಡಿದು ಅವರನ್ನು ಎಬ್ಬಿಸುವ ಪ್ರಯತ್ನ ಮಾಡಿದನು। ಈ ರೀತಿ ಪ್ರಯತ್ನ ಮಾಡಿದರೂ ಮಹಾರಾಜರು ಏಳಲಿಲ್ಲ ಅಥವಾ ಮಾತನಾಡಲಿಲ್ಲ, ಅದರಿಂದ ದನಗಾಯಿಗಳಿಗೆ ಆಶ್ಚರ್ಯವಾಯಿತು। ಮಹಾರಾಜರ ಬಗ್ಗೆ ನಿಶ್ಚಿತವಾಗಿ ಹೇಳುವದು ಅಸಾಧ್ಯವೆಂದು ತಮ್ಮಲ್ಲಿಯೇ ಆಡತೊಡಹಿದರು। ಇವರಲ್ಲಿ ಜೀವವಿಲ್ಲ ಎಂದರೆ ಅವರು ಕುಳಿತಿರುವರು ಮತ್ತು ಉಸಿರು ನಡೆದಿದೆ। ಶರೀರವು ಬಿಸಿಯಾಗಿದೆ। ಆದ್ದರಿಂದ ಅವರು ನಿಶ್ಚಿತವಾಗಿ ಜೀವಂತರಿರುವರು। ಕೆಲವರು ಇವರು ಮಾಯಾವಿ ಭೂತ ಇರಬಹುದೆಂದರು। ಅದರ ಮೇಲೆ ಒಬ್ಬನು ಇವರು ಭೂತವಿದ್ದರೆ ಶಂಕರನ ಮಂದಿರದ ಒಳಗೆ ಬರುವದು ಹೇಗೆ ಸಾಧ್ಯ ? ಎಂದು ಪ್ರಶ್ನೆಯನ್ನು ಮಾಡಿದನು। ಕೆಲವರು ಇವರು ದೇವರೇ ಇರಬಹುದು – ನಮ್ಮ ಭಾಗ್ಯದಿಂದ ಇಲ್ಲಿ ಬಂದಿರುವರು। ಈಗ ನಾವೆಲ್ಲರೂ ಸೇರಿ ಅವರ ಪೂಜೆ ಮಾಡೋಣ। ಯಾವನೋ ಹೋಗಿ ಹಳ್ಳದಿಂದ ನೀರನ್ನು ತಂದು ಮಹಾರಾಜರ ಚರಣಗಳನ್ನು ತೊಳೆದನು। ಯಾವನೋ ಅರಣ್ಯದಲ್ಲಿಯ ಹೂವುಗಳನ್ನು ತಂದು ಅದರ ಮಾಲೆಯನ್ನು ಮಾಡಿ ಮಹಾರಾಜರ ಕೊರಳಿನಲ್ಲಿ ಹಾಕಿದನು। ಒಬ್ಬನು ಪತ್ರಾವಳಿಯ ಮೇಲೆ ರೊಟ್ಟಿ ಹಾಗೂ ಉಳ್ಳಾಗಡ್ಡಿಯನ್ನು ಇಟ್ಟು ಮಹಾರಾಜರಿಗೆ ಅರ್ಪಿಸಿದನು। ಮಹಾರಾಜರ ಪೂಜೆ ಮಾಡಿ, ಅವರ ಮುಂದೆ ಕುಳಿತು ಬಹು ಆನಂದದಿಂದ ಭಜನೆಯನ್ನು ಮಾಡುತ್ತ ಮಗ್ನರಾದರು। ಆಗ ಒಬ್ಬ ದನಾಗಾಯಿಯು ಈಗ ಸಂಜೆಯಾಗಿದೆ, ನಮಗೆ ಮನೆಗೆ ಹೋಗಲೆಬೇಕು ಎಂದನು। ಸೂರ್ಯನು ಮುಳುಗಿದ ಮೇಲೆಯೂ ನಾವು ಮನೆಗೆ ಮರಳದಿದ್ದರೆ ಎಲ್ಲರೂ ಚಿಂತಿಸಬಹುದು। ನಮ್ಮನ್ನು ಹುಡುಕಲು ಅರಣ್ಯದಲ್ಲಿಯೂ ಬರಬಹುದು। ತಾಯಿಗಾಗಿ ಕರುಗಳು ಚಡಪಡಿಸುತ್ತಿರಬಹುದು। ಮಹಾರಾಜರ ಬಗ್ಗೆ ನಾವು ಮನೆಯಲ್ಲಿ ಎಲ್ಲರಿಗೆ ತಿಳಿಸೋಣ, ಅಂದರೆ ಅವರು ಮಹಾರಾಜರ ಬಗ್ಗೆ ವಿಚಾರ ಮಾಡಬಹುದು। ಈ ಮಾತು ಎಲ್ಲರಿಗೆ ಸರಿ ಎನಿಸಿ ಎಲ್ಲರೂ ಮನೆಗೆ ಹೋದೊಡನೆ ಮಹಾರಾಜರ ಬಗ್ಗೆ ಎಲ್ಲ ವೃತ್ತಾಂತವನ್ನು ತಿಳಿಸಿದರು। ಮುಂಜಾನೆ ಊರಿನ ಎಲ್ಲ ಜನರು ದನಗಾಯಿಗಳ ಜೊತೆಗೆ ಮಹಾರಾಜರಿಗೆ ನೋಡಲು ಶಿವಮಂದಿರದಲ್ಲಿ ಬಂದರು। ಮಂದಿರದಲ್ಲಿ

ವಿಜಯ ಅ.|| ೫ ||



ಶ್ರೀಗಜಾನನ || ೪೩ ||

ನೋಡಿದರೆ, ಮಹಾರಾಜರು ಅದೇ ಸ್ಥಿತಿಯಲ್ಲಿ ಕುಳಿತ್ತಿದ್ದರು ಮತ್ತು ಸಂಜೆ ಇಟ್ಟರೊಟ್ಟಿಯು ಹಾಗೇ ಇತ್ತು। ಶಿವಮಂದಿರದಲ್ಲಿ ಕುಳಿತ ಈ ಸಂನ್ಯಾಸಿಯು ನಿಜವಾಗಿ ಸಿದ್ಧಯೋಗಿ ಇರಬಹುದು ಎಂದು ಕೆಲವರು ನುಡಿದರು। ಕೆಲವರು ಸಾಕ್ಷಾತ್ ಶಂಕರನು ತಮಗೆ ದರ್ಶನಕೊಡಲು ಹೊರಗೆ ಬಂದು ಕುಳಿತಿದ್ದಾನೆ ಎಂದರು। ಸಮಾಧಿ ಭಂಗವಾದ ಮೇಲೆಯೇ ಇವರು ಮಾತನಾಡಬಹುದು। ಅಲ್ಲಿಯವರೆಗೆ ಅವರಿಗೆ ಕಷ್ಟಕೊಡಬಾರದು। ಬಂಗಾಲದಲ್ಲಿ ಜಾಲಂಧರನಾಥರು ಹನ್ನೆರಡು ವರ್ಷ ಸಮಾಧಿಯಲ್ಲಿದ್ದರು। ಕೊನೆಗೆ ಜನರು ಮಹಾರಾಜರನ್ನು ಪಲ್ಲಕ್ಕಿಯಲ್ಲಿ ಕೂಡಿಸಿ ಊರಿನಲ್ಲಿ ತರುವ ನಿರ್ಧಾರವನ್ನು ಮಾಡಿದರು। ಒಂದು ಪಲ್ಲಕ್ಕಿಯನ್ನು ತಂದು, ಮಹಾರಾಜರನ್ನು ಪಲ್ಲಕ್ಕಿಯಲ್ಲಿ ಕೂಡ್ರಿಸಿ ಊರಿನ ಕಡೆಗೆ ಹೊರಟರು। ಗ್ರಾಮದ ಎಲ್ಲ ಸ್ತ್ರೀ–ಪುರುಷರು ಪಲ್ಲಕ್ಕಿಯ ಜೊತೆಗೆ ಇದ್ದರು। ಸನಾದಿ, ಜಾಗಟೆಗಳು ನುಡಿಯುತ್ತಿದ್ದವು ಮತ್ತು ಜನರ ಉತ್ಸಾಹಕ್ಕೆ ಮೇರೆ ಇರಲಿಲ್ಲ ಆ ವರ್ಣನೆಯನ್ನು ಮಾಡುವದು ಅಸಾಧ್ಯ। ಜನರು ನಡು ನಡುವೆ ಮಹಾರಾಜರ ಮೇಲೆ ತುಲಸಿಪತ್ರ, ಹೂವು ಮತ್ತು ಅಬೀರ ಗುಲಾಲ ಆದಿಗಳನ್ನು ಹಾಕುತ್ತಿದ್ದರು। ಗುಲಾಲಿನಿಂದ ಮಹಾರಾಜರ ದೇಹವು ಕೆಂಪಾಗಿತ್ತು ಘಂಟೆ, ನಗಾರಿಗಳು ಬಡಿಯುತ್ತಿದ್ದವು, 'ಜಯ ಜಯ ಯೋಗಿರಾಜ' ಭಜನವು ನಡೆದಿತ್ತು ಮತ್ತು ಅದರ ಪ್ರತಿಧ್ವನಿಯಿಂದ ಆಕಾಶವು ತುಂಬಿ ಹೋಗಿತ್ತು। ಬಹಳ ಸಡಗರದಿಂದ ಮೆರವಣಿಗೆ ಹನುಮಂತನ ಮಂದಿರವನ್ನು ತಲುಪಿತು। ಬಹಳ ಆದರದಿಂದ ಮಹಾರಾಜರನ್ನು ಒಂದು ತಟ್ಟೆಯ ಮೇಲೆ ಮಂದಿರದಲ್ಲಿ ಕೂಡಿಸಲಾಯಿತು। ಆ ದಿನವೂ ಮಹಾರಾಜರ ಸಮಾಧಿ ಇಳಿಯಲಿಲ್ಲ। ಜನರು ಊಟ ಹಾಗೂ ನೀರನ್ನು ಬಿಟ್ಟು ಮಹಾರಾಜರ ಮುಂದೆ ಕುಳಿತು ಅವರ ಭಜನೆಯನ್ನು ಮಾಡುವ ನಿರ್ಧಾರ ಮಾಡಿದರು। ಜನರು ಹಾಗೆ ಮಾಡುವದರಲ್ಲಿದ್ದರು, ಆಗ ಮಹಾರಾಜರ ಸಮಾಧಿಯು ಭಂಗವಾಯಿತು ಮತ್ತು ಶ್ರೀ ಸದ್ ಗುರುಮೂರ್ತಿ, ಜನರ ಮುಕಟಮಣಿ, ಗಜಾನನರು ಎದ್ದರು। ಆಗ ಜನರು ಅತ್ಯಾನಂದದಿಂದ ಕುಣಿಯತೊಡಗಿದರು। ಅತ್ಯಾನಂದದಿಂದ ಅವರಿಗೆ ಹುಚ್ಚು ಹಿಡಿದಂತಾಯಿತು। ಪ್ರತಿಯೊಬ್ಬನು ಮಹಾರಾಜರ ಕಾಲು ಬಿದ್ದು ಅವರ ಕೃಪಾಶೀರ್ವಾದದ ಅಪೇಕ್ಷೆ ಮಾಡತೊಡಗಿದನು। ಮಹಾರಾಜರಿಗೆ ಪ್ರಸಾದ ಅರ್ಪಿಸಲು ಜನರಲ್ಲಿ ಸ್ಪರ್ಧೆಯೇ ಆರಂಭವಾಯಿತು। ಪ್ರತಿಯೊಬ್ಬನು ತಮ್ಮ ಪರಿಸ್ಥಿತಿಗೆ ಅನುಸಾರವಾಗಿ ತಟ್ಟೆಯನ್ನು ಅಲಂಕರಿಸಿ ಹನುಮಂತನ ಗುಡಿಯ ಕಡೆ ಓಡತೊಡಹಿದನು। ಮಹಾರಾಜರು ಪ್ರತಿಯೊಂದು ತಟ್ಟೆಯಿಂದ ಸ್ವಲ್ಪ ಭಾಗವನ್ನು ಸ್ವೀಕರಿಸಿ ಎಲ್ಲ

ವಿಜಯ ಅ.|| ೫ ||

ಇಚ್ಛೆಯನ್ನು ಪೂರೈಸಿದರು । ಮನೆಯಲ್ಲಿಯ ಎಲ್ಲರೂ ಶ್ರದ್ಧೆಯಿಂದ ಪ್ರಸಾದ ಸ್ವೀಕರಿಸಿ ಧನ್ಯರಾದರು । ಈ
ಮಂಗಲಮಯ ಸುದ್ದಿ ಕಾಳ್‌ಗಿಚ್ಚಿನಂತೆ ಎಲ್ಲ ಕಡೆಗೆ ಹಬ್ಬಿತು। ಮಂಗಳವಾರ ಸಂತೆಯ ದಿನ, ಅಂದು ಪಿಂಪಳಗಾಂವಿನ
ಜನರು ಶೇಗಾಂವಿಗೆ ಬರುತ್ತಾರೆ. ಮಾತಾಡುವಾಗ ಕೆಲವರು ತಮ್ಮ ಪಿಂಪಳಗಾಂವಿನಲ್ಲಿಯೂ ಒಬ್ಬ ಮಹಾತ್ಮರು
ಬಂದಿರುವರು ಎಂದು। ಅವರು ಸಿದ್ಧಯೋಗಿ। ಸಾಕ್ಷಾತ್ ಶ್ರೀ ಹರಿಯು ನಮ್ಮ ಗ್ರಾಮದಲ್ಲಿ ಬಂದಂತೆ ಆಗಿದೆ। ಅವರ
ಚರಣಧೂಳಿಯಿಂದ ನಮ್ಮ ಗ್ರಾಮವು ಪವಿತ್ರವಾಗಿದೆ। ನಾವು ಈಗ ಅವರನ್ನು ಬೇರೆ ಕಡೆಗೆ ಹೋಗಲು ಬಿಡಲಾರೆವು।
ಕೈಗೆ ಬಂದ ಧನರಾಶಿಯನ್ನು ಯಾರು ತಾನೇ ಕಳಿದು ಕೊಳ್ಳುವರು। ಶೇಗಾಂವಿಯ ಸಂತೆಯಲ್ಲಿ ಈ ಮಾತು ಹಬ್ಬಿತು।
ಬಂಕಟಲಾಲನಿಗೂ ಈ ಸುದ್ಧಿ ತಿಳಿಯಿತು । ಬಂಕಟಲಾಲನು ತನ್ನ ಪತ್ನಿಯ ಜೊತೆಗೆ ಪಿಂಪಳಗಾಂವಿಗೆ ಹೋಗಿ
ಮಹಾರಾಜರ ಮುಂದೆ ಕೈ ಮುಗಿದು ಅತಿ ವಿನಯದಿಂದ ಮಹಾರಾಜರೇ ಈಗ ಹೋಗಿ ಬರುವೆನೆಂದು ಹೇಳಿ ತಾವು
ಹೊರಟು ಹೋದಿರಿ ಮತ್ತು ಹದಿನೈದು ದಿನಗಳ ನಂತರ ತಮ್ಮ ದರ್ಶನವಾಗುತ್ತಿದೆ ಎಂದು ನುಡಿದನು । ನೀವಿಲ್ಲದೆ
ಮನೆಯಲ್ಲಿ ಸ್ಮಶಾನಶಾಂತತೆ ಇದೆ, ಅಷ್ಟೇ ಅಲ್ಲದೆ ಶೇಗಾಂವಿಯು ಚಿಂತಾಕ್ರಾಂತವಾಗಿದೆ । ತಮಗಾಗಿ ನಾನು
ಗಾಡಿಯನ್ನು ತಂದಿರುವೆ ಆದ್ದರಿಂದ ಜ್ಞಾನರಾಜ ಈಗ ಶೇಗಾಂವಿಗೆ ಮರಳಿರಿ। ತಾಯಿ ಹಾಗೂ ಮಗು ಇಬ್ಬರು ಬಿಟ್ಟು
ಇರುವದು ಒಳ್ಳೆಯದಲ್ಲ । ಶೇಗಾಂವಿಯಲ್ಲಿ ದಿನನಿತ್ಯ ತಮ್ಮ ದರ್ಶನ ಪಡಿಯುವ ಭಕ್ತರು ತಾವು ಹೊರಟು
ಹೋಗಿದ್ದರಿಂದ ಅನ್ನ-ನೀರನ್ನು ಬಿಟ್ಟಿದ್ದಾರೆ। ತಾವು ಶೇಗಾಂವಿಗೆ ಮರಳದಿದ್ದರೆ ನಾನು ದೇಹತ್ಯಾಗಮಾಡುವದಾಗಿ
ನಿಶ್ಚಯಿಸಿದ್ದೇನೆ । ಹೇ ಗುರುರಾಜ, ಕೊನೆಗೆ ನಮ್ಮ ವಿನಂತಿಯನ್ನು ತಾವೆಲ್ಲದೆ ಬೇರೆ ಯಾರು ಕೇಳಬಲ್ಲರು?
ಬಂಕಟಲಾಲನ ಧೃಡ ನಿರ್ಧಾರವನ್ನು ನೋಡಿ ಮಹಾರಾಜರು ಶೇಗಾಂವಿಗೆ ಮರಳಲು ಗಾಡಿಯಲ್ಲಿ ಕುಳಿತರು। ಕೃಷ್ಣನ
ಸಂಗಡಿನ ಅಕ್ರುರನಷ್ಟು ಕ್ರೂರ ರೂಪದಲ್ಲಿ ಮಹಾರಾಜರನ್ನು ಕೊಂಡು ಹೋಗುವ ಬಂಕಟಲಾಲನನ್ನು ಕಂಡರು
ಪಿಂಪಳಗಾಂವಿನ ಜನರು । ಮಹಾರಾಜರು ಹೋಗುವ ದುಃಖದಲ್ಲಿರುವ ಜನರಿಗೆ, ತಾವು ಶೋಕ ಮಾಡದಿರಿ,
ಮಹಾರಾಜರಾದರೊ ಶೇಗಾಂವಿನಲ್ಲೇ ಇರುವರು, ತಮಗೆ ಇಚ್ಛೆಯಾದಾಗ ಅವರ ದರ್ಶನವನ್ನು ಪಡೆಯಬಹುದು
ಎಂದು ಬಂಕಟಲಾಲನು ಸಮಾಧಾನಪಡಿಸಿದನು। ಯಾವ ವಸ್ತುವು ಎಲ್ಲ ಶೋಭೆ ಕೊಡುವದೋ ಅದನ್ನು ಅಲ್ಲಿಯೇ ॥ 44 ॥
ಇಡಬೇಕು । ಪಿಂಪಳಗಾಂವಿನ ಜನರು ಬಂಕಟಲಾಲನಿಂದ ಸಾಲವನ್ನು ಪಡೆಯುತ್ತಿದ್ದರು । ಆದ್ದರಿಂದ ಸಾಹುಕಾರನ



ಎದುರಿಗೆ ಹೆಚ್ಚು ಮಾತನಾಡುವ ಎದೆಯಾಗಲಿಲ್ಲ। ಗಾಡಿಯಲ್ಲಿ ಕುಳಿತು ಹೋಗುವ ಮಹಾರಾಜರನ್ನು ನೋಡಿ ಅವರು
ಮನದಲ್ಲಿಯೇ ಮಂದಿಗೆ ತಿನ್ನುತ್ತಿದ್ದರು । ಮಹಾರಾಜರು ಬಂಕಟಲಾಲನಿಗೆ ಸಾಹುಕಾರನ ಈಪದ್ಧತಿಯೇ ವಿಚಿತ್ರ
ಎಂದರು । ಇದು ಕಳ್ಳನೇ ಕೊತವಾಲನಿಗೆ ಬೆದರಿಸಿದಂತಾಗಿದೆ ! ನಿನ್ನ ಮನೆಗೆ ಬರಲು ನನಗೆ ಹೆದರಿಕೆಯಾಗುತ್ತದೆ
ಎಂದರು । ಏಕೆಂದರೆ, ಲೋಕಮಾತೆ, ಮಹಾವಿಷ್ಣುವಿನ ಧರ್ಮಪತ್ನಿ ಯಾರ ಅಗಾಧ ಶಕ್ತಿಗೆ ಸೀಮೆ ಇಲ್ಲ, ಇಂತಹ
ಲಕ್ಷ್ಮಿಗೆ ಕೂಡಾ ನೀನು ಮನೆಯಲ್ಲಿ ಕೈದಿಯಾಗಿ ಇಟ್ಟಿರುವಿ। ಲೋಕಮಾತೆಗೆ ಈ ಸ್ಥಿತಿಯನ್ನು ನೀನು ತಂದಿರುವಾಗ,
ನನ್ನ ಕಥೆಯೇನು। ಈ ಹೆದರಿಕೆಯಿಂದಲೇ ನಾನು ನಿನ್ನ ಮನೆಯಿಂದ ಓಡಿಹೋದೆ। ಮಹಾರಾಜರ ಈ ಮಾತನ್ನು
ಕೇಳಿ ಬಂಕಟಲಾಲನು ಮುಗುಳ್ನಕ್ಕು ನಂತರ ವಿನಯದಿಂದ ನುಡಿದದ್ದನ್ನು ಜಾಗ್ರತೆಯಾಗಿ ಕೇಳಿರಿ । ಮಹಾರಾಜ,
ಲಕ್ಷ್ಮಿಯು ನನ್ನ ಮನೆಯಲ್ಲಿ ನಿವಾಸ ಮಾಡಲು ಒಂದು ಕಾರಣವಿದೆ । ನೀನು ನನ್ನ ಮನೆಯಲ್ಲಿ ನಿವಾಸ ಮಾಡಲು
ಒಂದು ಕಾರಣವಿದೆ। ನೀವು ನನ್ನ ಮನೆಯಲ್ಲಿರುವಿರಿ। ಆದ್ದರಿಂದ ಲಕ್ಷ್ಮಿಯು ನನ್ನ ಮನೆಯಲ್ಲಿರುವಳು। ಮತ್ತು ಎಲ್ಲಿ
ಬಾಲಕನ ವಾಸವೊ ಅಲ್ಲಿ ಮಾತೆಯು ಇರುವದು ಅನಿವಾರ್ಯವಿದೆ। ನನ್ನಂತಹ ಸಾಮಾನ್ಯ ಮಾನವನು ಲಕ್ಷ್ಮಿಯನ್ನು
ಬಂದಿಮಾಡುವದು ಹೇಗೆ ಸಾಧ್ಯ ? ನಂತರ ಬಂಕಟಲಾಲನು ತನ್ನ ಮನಸ್ಸಿನಲ್ಲಿಯ ಮಾತನ್ನು ಮಹಾರಾಜರಲ್ಲಿ
ನುಡಿದನು। ನಿಮ್ಮ ಮುಂದೆ ನನ್ನ ಆಸ್ತಿಯು ಹುಲ್ಲಿನ ಸಮಾನ। ತಾವೇ ನನ್ನ ಸರ್ವಸ್ವ ಆದ್ದರಿಂದ ಯಾವದು ನನ್ನದೋ
ಅದೆಲ್ಲ ಈಗ ತಮಗೆ ಅರ್ಪಿಸುತ್ತೇನೆ। ನಾನು ಈಗ ಧನಹೀನನಾಗಿರುವೆನು। ತಾವು ಈಗ ನನ್ನ ಮನೆಯ ಮಾಲಿಕರು,
ಹಾಗೂ ನಾನು ತಮ್ಮ ನೌಕರನು। ತಾವು ಮನಸ್ಸು ಬಂದಂತೆ ಸಂಚಾರ ಮಾಡಿರಿ। ಆದರೆ ತಾವು ಶೇಗಾಂವಿಯನ್ನು
ತಮ್ಮ ಕೇಂದ್ರ ಮಾಡಿರಿ ಎಂಬುದೇ ನಮ್ಮ ಇಚ್ಛೆ। ಆಕಳು ಇಡಿ ದಿನ ಅರಣ್ಯದಲ್ಲಿ ಹೋದರೂ, ಸಂಜೆ ತಮ್ಮ ಕರುವಿಗಾಗಿ
ಮನೆಗೆ ತಿರುಗಿ ಬರುತ್ತದೆ । ಅದೇ ರೀತಿ ಜಗದೋದ್ಧಾರಕ್ಕಾಗಿ ತಾವು ಯಾವದೇ ಸ್ಥಾನಕ್ಕೆ ಹೋದರೂ ನಡುವೆ
ಶೇಗಾಂವಿಗೆ ಬಂದು ಹೋಗುವ ಕೃಪೆ ಮಾಡಿರಿ, ಇದೇ ನಮ್ಮ ಪ್ರಾರ್ಥನೆ। ಬಂಕಟಲಾಲನ ಜೊತೆಗೆ ಮಹಾರಾಜರು
ಶೇಗಾಂವಿಗೆ ಬಂದರು। ಶೇಗಾಂವಿಯಲ್ಲಿ ಕೆಲವು ದಿನವಿದ್ದು ಮಹಾರಾಜರು ಎಲ್ಲಿಯೋ ಹೊರಟು ಹೋದರು। ಅವರೆಲ್ಲಿ
ಹೋದರು। ಎಂಬುದನ್ನು ಈಗ ಹೇಳುವೆನು। ವರ್ಹಾಡ ಪ್ರಾಂತದಲ್ಲಿ ಅಡಗಾಂವ ಎಂಬ ಗ್ರಾಮವಿದೆ। ಶೇಗಾಂವಿನ ॥ 45 ॥
ಜನರಿಗೆ ತಿಳಿಸದೆ ಮಹಾರಾಜರು ಒಂದು ದಿನ ಕಣ್ಣು ತಪ್ಪಿಸಿ ಆ ಗ್ರಾಮಕ್ಕೆ ಹೊರಟರು । ಮಹಾರಾಜರು

ವಾಯುವೇಗದಿಂದ ಹೊರಟಿದ್ದರು। ಅಂಜನಿ ತನಯ ಹನುಮಂತನು ಅವತಾರತಾಳಿ ಹೊರಟಂತಿತ್ತು। ಅದು ವೈಶಾಖ
ತಿಂಗಳಿತ್ತು। ಭಯಂಕರ ಬಿಸಿಲಿನಿಂದ ಎಲ್ಲರೂ ಅಸ್ವಸ್ಥರಾಗಿದ್ದರು। ಸೂರ್ಯನು ನೆತ್ತಿಗೇರಿದಾಗ ಮಹಾರಾಜರು ಅಕೋಲಿ
ಗ್ರಾಮದ ಸಮೀಪಕ್ಕೆ ತಲುಪಿದರು । ಮಹಾರಾಜರಿಗೆ ಬಾಯಾರಿಕೆಯಾಗಿತ್ತು। ಎಲ್ಲೆಡೆಗೆ ಹುಡುಕಿದರೂ ನೀರಿನ
ಹನಿಯೂ ಕಂಡು ಬರುತ್ತಿರಲಿಲ್ಲ। ದೇಹದಿಂದ ಬೆವರು ಸುರಿಯುತ್ತಿತ್ತು, ಮತ್ತು ಮಹಾರಾಜರು ಬಾಯಾರಿಕೆಯಿಂದ
ಬಳಲುತ್ತಿದ್ದರು । ನೀರಿಲ್ಲದೆ ಅವರ ತುಟಿಗಳು ಒಣಗಿದವು । ಈ ಭಯಂಕರ ಬಿಸಿಲಿನಲ್ಲಿ ಭಾಸ್ಕರನೆಂಬ ರೈತನು
ಹೊಲದಲ್ಲಿ ಕೆಲಸಮಾಡುತ್ತಿದ್ದನು। ರೈತನು ಇಡಿ ದಿನ ಹೊಲದಲ್ಲಿ ದುಡಿದಾಗಲೇ ಇತರರು ಸಮಾಧಾನದಿಂದ ಊಟ
ಮಾಡುತ್ತಾರೆ । ಆದ್ದರಿಂದಲೇ ರೈತನಿಗೆ ಅನ್ನದಾತಾ ಎನ್ನುವರು । ಸ್ವಯಂ ಅನ್ನದಾತಾ ಇದ್ದರೂ ಅವನಿಗೆ
ದುಡಿಯಬೇಕಾಗುತ್ತದೆ ಹಾಗೂ ಮಳೆ, ಚಳಿ ಹಾಗೂ ಬಿಸಿಲನ್ನು ಸಹಿಸಬೇಕಾಗುತ್ತದೆ । ಅಕೋಲಿಯ ಭಾಗದಲ್ಲಿ
ಬರಗಾಲವಿತ್ತು । ಕೇಳಿದರೆ ತುಪ್ಪ ಸಿಗಬಹುದಾಗಿತ್ತು ಆದರೆ ನೀರಿನ ಹನಿಯು ಪ್ರಯತ್ನಮಾಡಿ ದೊರಕುವದು
ಅಸಾಧ್ಯವಾಗಿತ್ತು। ಭಾಸ್ಕರನು ನೀರನ್ನು ಮನೆಯಿಂದಲೇ ತುಂಬಿ ತರುತ್ತಿದ್ದನು। ಮಧ್ಯಾಹ್ನದ ರೊಟ್ಟಿ ಹಾಗೂ ತಲೆಯ
ಮೇಲೆ ನೀರಿನ ಕೊಡವನ್ನು ಹೊತ್ತುಕೊಂಡೇ ರೈತನಿಗೆ ಹೊಲಕ್ಕೆ ಹೋಗಬೇಕಾಗುತ್ತದೆ। ಭಾಸ್ಕರನು ನೀರಿನ ಕೊಡವನ್ನು
ಗಿಡದ ಬುಡದಲ್ಲಿಟ್ಟಿದನು। ಮಹಾರಾಜರು ಕೊಡದ ಬಳಿ ನಿಂತು ನನಗೆ ಬಹಳ ನೀರಡಿಕೆಯಾಗಿದೆ ಎಂದು ಭಾಸ್ಕರನಿಗೆ
ಹೇಳಿದರು । ನನಗೆ ಸ್ವಲ್ಪ ನೀರನ್ನು ಕುಡಿಸು, ನೀರು ಕುಡಿಸಿದರೆ ಬಹಳ ಪುಣ್ಯವು ಸಿಗುವದು । ನೀರಿಲ್ಲದೆ ಪ್ರಾಣ
ಉಳಿಯುವದು ಅಸಾಧ್ಯ । ಧನಿಕರು ರಸ್ತೆಯಲ್ಲಿ ನೀರು ಸಿಗುವ ವ್ಯವಸ್ಥೆ ಮಾಡುವದು ಅದಕ್ಕಾಗಿಯೇ । ಭಾಸ್ಕರನು
ಬೇಸತ್ತು ನೀನು ನಗ್ನನಾಗಿದ್ದು, ಪುಕ್ಕಟೆಯಾಗಿ ತಿನ್ನುತ್ತ ತಿರುಗಾಡುತ್ತಿ ಎಂದನು । ನೀನು ಯಾವ ಕೆಲಸವನ್ನು
ಮಾಡುವದಿಲ್ಲ, ನಿನಗೆ ನೀರನ್ನು ಕೊಟ್ಟು, ನನಗೆ ಯಾವ ಪುಣ್ಯವು ದೊರಕುವದು। ಅನಾಥ, ಅಂಗವಿಕಲ, ಅಸಮರ್ಥ
ಹಾಗೂ ಸಮಾಜ ಕಾರ್ಯದಲ್ಲಿ ತೊಡಗಿರುವವರಿಗೆ ಸಹಾಯ ಮಾಡುವದು ಪುಣ್ಯಕರ್ಮವೆಂದು ಶಾಸ್ತ್ರಗಳಲ್ಲಿ ಹೇಳಿದೆ।
ಆದರೆ ನಿನ್ನಂತಹ ಪಾಖಂಡಿಗೆ ಸಹಾಯ ಮಾಡಿ ಪುಣ್ಯದ ಬದಲು ಪಾಪವೇ ಪಾಲಿಗೆ ಬರುವದು। ಭೂತದಯೆಯಿಂದ
ಹಾವನ್ನು ಯಾರು ಸಾಕುವರು । ದರೋಡೆಖೋರರಿಗೆ ಯಾರಾದರು ಮನೆಯಲ್ಲಿ ಪ್ರವೇಶಕೊಡಬಹುದೆ । ॥ 46 ॥
ನೀನಾದರೊ ಭಿಕ್ಷೆ ಬೇಡಿ ದೇಹವನ್ನು ಬೆಳೆಸಿದೆ। ನಿನ್ನ ಕೃತಿಯಿಂದ ನೀನು ಭೂಮಿಗೆ ಭಾರವಾಗಿರುವಿ। ನನಗಾಗಿ ನೀರನ್ನು



ಮುಂಜಾನೆ ಬರುವಾಗಲೆ ತಂದಿರುವೆನು । ಬೇರೆಯವರ ಹಣದ ಮೇಲೆ ಸುಖ ಪಡೆಯುವವನಿಗೆ ನಾನು ನೀರನ್ನು
ಎಂದಿಗೂ ಕೊಡಲಾರೆ। ಈಗ ಇಲ್ಲಿಂದ ಕಾಲು ಕಿತ್ತು। ಎಲ್ಯೆ ಚಾಂಡಾಲ, ಮೋರೆ ಮುಚ್ಚಿಕೊಂಡು ಇಲ್ಲಿಂದ ಹೋಗು।
ನಿನ್ನಂತಹ ಆಲಸಿ ಜನರಿಂದಲೇ ನಮ್ಮ ದೇಶಕ್ಕೆ ಈ ಬರಗಾಲ ಬಂದಿದೆ । ಭಾಸ್ಕರನ ಈ ಮಾತುಗಳನ್ನು ಕೇಳಿ
ಮಹಾರಾಜರು ಮಂದ ಹಾಸಮಾಡಿ ಅಲ್ಲಿಂದ ಹೊರಟರು। ಸಮೀಪದಲ್ಲಿ ಒಂದು ನೀರಿಲ್ಲದೆ ಒಣಗಿದ ಬಾವಿ ಇತ್ತು।
ಮಹಾರಾಜರು ಆ ಬಾವಿಯ ಕಡೆಗೆ ಹೊರಟರು। ಅವರನ್ನು ಅಲ್ಲಿಗೆ ಹೋಗುವದನ್ನು ನೋಡಿ ಭಾಸ್ಕರ ಪಾಟೀಲನು
ಕೂಗಿದನು – ಎಲ್ಯೆ ಮೂರ್ಖಾ ಅಲ್ಲಿ ಎಕೆ ಹೋಗುತ್ತಿರುವಿ। ಅನೇಕ ವರ್ಷಗಳಿಂದ ಈ ಬಾವಿಯು ಬರಿದಾಗಿದೆ।
ಬಾವಿಗಳಿವೆ, ಆದರೆ ಒಂದು ಮೈಲು ದೂರದವರೆಗೆ ನಿನಗೆ ನೀರಿನ ಹನಿಯು ದೊರಕದು । ಆಗ ಮಹಾರಾಜರು
ಬಾವಿಯಲ್ಲಿ ನೀರಿಲ್ಲ ಎಂಬ ಮಾತು ನಿಜವಾಗಿದೆ। ಆದರೆ ನಾನು ಒಮ್ಮೆ ಪ್ರಯತ್ನಿಸುತ್ತೇನೆ। ಯಾವಾಗಲೂ ಪರಿಶ್ರಮ
ಮಾಡುವ ನಿನ್ನಂತಹ ಜನರು ಚಿಂತೆಯಲ್ಲಿದ್ದಾರೆ । ಈ ಸ್ಥಿತಿಯನ್ನು ನೋಡಿಯೂ ನಾನು ಪ್ರಯತ್ನಿಸದಿದ್ದರೆ ಸಮಾಜ
ಹಿತದಿಂದ ನಾನು ಮುಖ ಮರೆಯಿಸಿದಂತಾಗುವದು। ಯಾರು ಪವಿತ್ರ ಭಾವನೆಯಿಂದ ಪ್ರಯತ್ನ ಮಾಡುವರೋ,
ಅವರಲ್ಲಿ ದೇವರು ಸಹಾನುಭೂತಿ ತೋರಿಸುತ್ತಾನೆ । ಮಹಾರಾಜರು ಬಾವಿಯ ಬಳಿಗೆ ತಲುಪಿದರು, ಅಲ್ಲಿ
ನಿಜವಾಗಿಯು ನೀರಿನ ಹನಿಯೂ ಕಾಣಲಿಲ್ಲ। ಮಹಾರಾಜರು ನಿರಾಶರಾಗಿ ಗಿಡದ ಕೆಳಗೆ ಕುಳಿತರು। ಅವರು ಕಣ್ಣು
ಮುಚ್ಚಿ ನಾರಾಯಣ, ಸಚ್ಚಿದಾನಂದ, ದಯಾಘನ, ದೀನೊದ್ಧಾರಕ, ಜಗದ್ಗುರುವಿನ ಧ್ಯಾನ್ಯ ಮಾಡತೊಡಗಿದರು ।
ಅವರು ನಮ್ರತೆಯಿಂದ ಭಗವಂತನಲ್ಲಿ ಪ್ರಾರ್ಥಿಸಿದರು, ಹೇ ವಾಮನ, ವಾಸುದೇವ, ಪ್ರದ್ಯುಮ್ನ ರಾಘವ, ವಿಠ್ಠಲ,
ಈ ಅಕೋಲಿ ಗ್ರಾಮವು ನೀರಿಲ್ಲದೆ ಕಷ್ಟದಲ್ಲಿದೆ। ಬಾವಿಯಲ್ಲಿ ನೀರಿನ ಒಂದು ಹನಿಯೂ ಇಲ್ಲ। ಮಾನವನ ಎಲ್ಲ
ಪ್ರಯತ್ನಗಳು ವಿಫಲವಾಗಿವೆ। ಆದ್ದರಿಂದ ಈ ಬಾವಿಯಲ್ಲಿ ನೀರು ಬರಲಿ ಎಂದು ನಾನು ಪ್ರಾರ್ಥಿಸುತ್ತಿದ್ದೇನೆ। ತಮ್ಮ
ಕೃಪೆಯಿದ್ದರೆ ಯಾವದು ಅಸಂಭವ। ಹೇ ಪಾಂಡುರಂಗ ತಾವು ಬೆಂಕಿಯಿಂದ ಬೆಕ್ಕನ್ನು ಬದುಕಿಸಿದಿರಿ। ಪ್ರಲ್ಹಾದನಿಗಾಗಿ
ತಾವು ಸ್ತಂಭದಿಂದ ಪ್ರಕಟರಾದಿರಿ। ಹೇ ಮುರಾರಿ, ತಾವು ಬೆರಳಿನ ಮೇಲೆ ಪರ್ವತವನ್ನು ಎತ್ತಿ ಹಿಡಿದು ಜನರನ್ನು
ಉಳಿಸಿದಿರಿ । ಜಗತ್ತಿನಲ್ಲಿ ಕೃಪೆಯ ಸಾಗರರು ತಾವೆ । ದಾಮಾಜಿಪಂತನಿಗಾಗಿ ತಾವು ಹೊಲೆಯರಾದಿರಿ । ॥ 47 ॥
ಚೋಖೋಬಾನಿಗಾಗಿ ದನಗಳನ್ನು ಎಳೆದಿರಿ, ಸಾವತಾಮಾಳಿಯ ಹೊಲವನ್ನು ಪಕ್ಷಿಗಳಿಂದ ರಕ್ಷಿಸಿದಿರಿ ।

ಉಪಮನ್ಯುನಿಗಾಗಿ ತಾವು ಕ್ಷೀರ ಸಮುದ್ರವನ್ನು ನಿರ್ಮಿಸಿದಿರಿ, ನಾಮದೇವನಿಗೆ ನೀರನ್ನು ಕುಡಿಸುವ ನೆವದಿಂದ ನಿರ್ಜಲ ಮಾರವಾಡ ಪ್ರಾಂತವನ್ನು ಜಲ ಪೂರ್ಣ ಮಾಡಿದಿರಿ । ಇತ್ತ ಮಹಾರಾಜರು ಭಗವಂತನ ಪ್ರಾರ್ಥನೆ ಮಾಡುತ್ತಿದ್ದರು ಮತ್ತು ಅತ್ತಕಡೆ ಕೆಲವು ಕ್ಷಣಗಳಲ್ಲಿ ಬಾವಿಯು ನೀರಿನಿಂದ ತುಂಬಿತು । ದೇವರು ಸಹಾಯ ಮಾಡಿದರೆ, ಯಾವ ಕಾರ್ಯವು ಅಸಾಧ್ಯ ? ಈಶ್ವರನ ಶಕ್ತಿಯು ತಿಳಿಯದು, ಅದರಿಂದ ಅಸಂಭವವೂ ಸಂಭವವಾಗುತ್ತದೆ । ಮಹಾರಾಜರು ನೀರು ಕುಡಿದು ಬಾಯಾರಿಕೆಯನ್ನು ತೀರಿಸಿದರು । ಈ ಘಟನೆಯನ್ನು ನೋಡಿ ಭಾಸ್ಕರ ಪಾಟೀಲನು ಬೆರಗಾದನು । ಹಿಂದಿನ ಹನ್ನೆರಡು ವರ್ಷಗಳಲ್ಲಿ ಈ ಬಾವಿಯಲ್ಲಿ ನೀರಿನ ಒಂದು ಹನಿಯೂ ಇರಲಿಲ್ಲ । ಆದರೆ ಈ ಸಾಧುವಿನ ಕೃಪೆಯಿಂದ ಕೆಲವು ಕ್ಷಣಗಳಲ್ಲಿ ಬಾವಿಯು ನೀರಿನಿಂದ ತುಂಬಿತು । ಈ ಸಾಧುವು ನಿಜಾಗಿ ಸಾಕ್ಷಾತ್ಕಾರಿ । ಜನರಿಂದ ದೂರವಿರಲು ಇವನು ಹುಚ್ಚನ ರೂಪಧರಿಸಿದ್ದಾನೆ ಎಂಬುದು ಈಗ ತಿಳಿದಿದೆ । ಭಾಸ್ಕರನು ತಮ್ಮ ಕೆಲಸವನ್ನು ಬಿಟ್ಟು, ಮಹಾರಾಜರ ಬಳಿ ಓಡಿಹೋಗಿ ಅವರ ಚರಣಗಳಲ್ಲಿ ಬಿದ್ದು ಸ್ತುತಿಮಾಡಲಾರಂಭಿಸಿದನು । ಹೇ ನರವೇಷಧಾರಿ ಪರಮೇಶ್ವರ, ಹೇ ದಯಾಸಾಗರ, ನಾನು ನಿನ್ನ ಬಾಲಕ । ನನ್ನ ಮೇಲೆ ಕೃಪೆ ಮಾಡಿರಿ । ತಮ್ಮ ಮಹಿಮೆಯನ್ನು ತಿಳಿಯದೆ, ಬಾಯಿಗೆ ಬಂದಿದ್ದನ್ನು ನುಡಿದೆ, ಅದಕ್ಕಾಗಿ ನನಗೆ ಕ್ಷಮಿಸಿರಿ । ನಾನು ತಮ್ಮ ಅಪಮಾನ ಮಾಡಿದ್ದೇನೆ । ಗೋಕುಲದ ನಾರಿಯರು ತಮ್ಮ ಬಗ್ಗೆ ಒಳ್ಳೆಯದು – ಕೆಟ್ಟದ್ದನ್ನು ನುಡಿಯುತ್ತಿದ್ದರು, ಆದರೆ ಅದನ್ನು ಮರೆತು ತಾವು ಕೃಪಾಹಸ್ತವನ್ನು ಇಟ್ಟಿರಿ । ಹೇ ದಯಾಘನ ಪ್ರಭು. ತಮ್ಮ ಬಾಹ್ಯರೂಪದಿಂದ ನಾನು ವಂಚಿತನಾದೆನು । ಚಮತ್ಕಾರವನ್ನು ಮಾಡಿ, ತಾವು ನನ್ನ ಭ್ರಮೆಯನ್ನು ದೂರಗೊಳಿಸಿದಿರಿ ಯ ಭಗವಂತನ ನಿಜರೂಪವನ್ನು ಚಮತ್ಕಾರಮಾಡಿ ತೋರಿಸಿ ನನ್ನ ಕಣ್ಣು ತೆರೆಯಿಸಿದಿರಿ । ಬಾವಿಯಲ್ಲಿ ನೀರನ್ನು ನಿರ್ಮಿಸಿ ತಾವು ನನ್ನ ಕಣ್ಣುಗಳಲ್ಲಿ ಅಂಜನ ಹಾಕಿದಿರಿ । ಮಹಾರಾಜ, ನನ್ನಿಂದ ತಪ್ಪಾಗಿದೆ । ಹೇ ಸದ್ಗುರುನಾಥ, ನಾನು ತಮ್ಮ ಚರಣಗಳಿಂದ ಎಂದಿಗೂ ದೂರವಿರಲಾರ । ತಾಯಿಯನ್ನು ಭೆಟ್ಟಿಯಾದ ಮೇಲೆ ಬಾಲಕನು ದೂರವಿರಬಲ್ಲನು । ಈ ಪ್ರಪಂಚವು ಮಿಥ್ಯ ಎಂಬುದು ನನ್ನ ಮಂದಬುಗ್ಧಿಗೆ ಇಂದು ತಿಳಿಯಿತು । ಈಗಿನ ಹೀನ–ದೀನ ಬಾಲಕನಿಗೆ ತಮ್ಮ ಚರಣಗಳಿಂದ ಅಂತರ ಕೊಡಬೇಡಿರಿ । ಭಾಸ್ಕರನ ಆಂತರಿಕ ಭಾವಗಳನ್ನು ಅರಿತು ಮಹಾರಾಜರು ಈಗ ದುಃಖಪಡುವ ಅವಶ್ಯಕತೆ ಇಲ್ಲ ಎಂದರು । ತಲೆಯ ಮೇಲೆ ಕೊಡವನ್ನು ಹೊತ್ತುಕೊಂಡು ಬರುವ ಅವಶ್ಯಕತೆ ಇಲ್ಲ । ನಿನಗಾಗಿ ಬಾವಿಯಲ್ಲಿ








ಯಾವಾಗಲೂ ನೀರಿರುವ ವ್ಯವಸ್ಥೆ ಮಾಡಿದ್ದೇನೆ । ಈಗ ನಿನಗೆ ಯಾವ ವಿಷಯದಲ್ಲಿ ಚಿಂತೆ ಮಾಡುವ ಅವಶ್ಯಕತೆ ಇಲ್ಲ । ಆದ್ದರಿಂದ ಈಗ ಸಂಸಾರ ಅಥವಾ ಪ್ರಪಂಚ ಏಕೆ ಬಿಡುತ್ತಿರುವಿ ? ನೀರು ಬಂದಿದೆ, ಈಗ ಆನಂದದಿಂದ ಹೊಲದಲ್ಲಿ ಉನ್ನತಿಯನ್ನು ಮಾಡು । ಮಹಾರಾಜರೇ ನನಗೆ ಸುಳ್ಳು ಆಶೆ ತೋರಿಸದಿರಿ ಎಂದು ಭಾಸ್ಕರನು ನುಡಿದನು। ನನ್ನ ನಿಶ್ಚಯವು ಈ ಬರಿದಾದ ಬಾವಿಯಂತಿದೆ । ಈ ದಿನದವರೆಗೆ ಅದು ಬರಿದಾಗಿತ್ತು, ಅದಕ್ಕೆ ಸಾಕ್ಷಾತ್ಕಾರದ ಸುರಂಗವಿಟ್ಟು ಭಕ್ತಿ–ಭಾವದ ನೀರನ್ನು ಉಪಲಬ್ಧ ಮಾಡಿರುವಿರಿ, ಈಗ ಭಕ್ತಿಪಂಥದ ಸುಂದರ ಹೂದೋಟವನ್ನು ಮಾಡಿ, ನಿಜ ವೃತ್ತಿಯ ಮಣ್ಣಿನಿಂದ ನೀತಿಯ ಗಿಡವನ್ನು ಹಚ್ಚುವೆನು । ಹೇ ಶ್ರೋತೃಗಳೇ, ಸ್ವಲ್ಪ ಸತ್‌ಸಂಗದಿಂದ ಭಾಸ್ಕರನಲ್ಲಿ ಉಂಟಾದ ಪರಿವರ್ತನೆಯನ್ನು ವರ್ಣಿಸುವದು ಅಸಾಧ್ಯ । ಸಂತ ದರ್ಶನವು, ಇತರ ಸಾಧನಾ ಮಾರ್ಗಗಳಿಂದ ಬೇರೆಯದು । ಸಂತರ ಪಾದಧೂಳಿಯ ಚಮತ್ಕಾರವನ್ನು ತುಕಾರಾಮ ಮಹಾರಾಜರು ತಮ್ಮ ಅಭಂಗದಲ್ಲಿ ವರ್ಣಿಸಿದ್ದಾರೆ । ತಮ್ಮ ಹಿತಕ್ಕಾಗಿ ಹಾಗೂ ಕಲ್ಯಾಣಕ್ಕಾಗಿ ನಾವು ಅಭಂಗವನ್ನು ಓದಿ ಅದರ ಆನಂದವನ್ನು ಅನುಭವಿಸೋಣ । ಬಾವಿಯಲ್ಲಿ ನೀರು ತುಂಬಿದ ವಾರ್ತೆಯನ್ನು ಕೇಳಿ ಜನರು ಮಹಾರಾಜರ ದರ್ಶನಕ್ಕಾಗಿ ಧಾವಿಸಿದರು । ಮಕರಂದದ ಬಳಿಗೆ ಜೇನುಹುಳಗಳು ಧಾವಿಸಿದಂತೆ । ಅಲ್ಲಿ ಜನರ ಗದ್ದಲವಾಯಿತು । ಎಲ್ಲರು ನೀರು ಕುಡಿದು ತೃಪ್ತರಾದರು । ಆ ನಿರ್ಮಲ, ಶೀತಲ ಜಲವು ಅಮೃತದಂತೆ ಸಿಹಿಯಾಗಿತ್ತು । ಎಲ್ಲರೂ ಸೇರಿ ಗಜಾನನ ಮಹಾರಾಜರ ಜಯಜಯಕಾರ ಮಾಡಿದರು । ಅದರ ಪ್ರತಿಧ್ವನಿಯಿಂದ ಆಕಾಶವು ತುಂಬಿಹೋಯಿತು । ನಂತರ ಸಿದ್ಧಯೋಗಿ ಗಜಾನನ ಮಹಾರಾಜರು ಅಡಗಾಂವಿನಲ್ಲಿರದೇ ಭಾಸ್ಕರನನ್ನು ಕರೆದುಕೊಂಡು ಶೇಗಾಂವಿಗೆ ಬಂದರು । ಸ್ವಸ್ತಿ ಶ್ರೀ ದಾಸಗಣು ವಿರಚಿತ ಈ ಗಜಾನನ ವಿಜಯ ಗ್ರಂಥವು ಸಂತರ ಮಹಿಮೆಯನ್ನು ಅರಿಯಲು ದಿವ್ಯ ಆದರ್ಶವಾಗುವದು ।

॥ ಶುಭಂ ಭವತು ॥ ಶ್ರೀ ಹರಿಹರಾರ್ಪಣಮಸ್ತು ॥

॥ ಇಲ್ಲಿಗೆ ಐದನೆಯ ಅಧ್ಯಾಯವು ಮುಗಿಯಿತು ॥





ಶ್ರೀ ಗಜಾನನ ಮಹಾರಾಜರ ಹತ್ತಿರ ಗೋವಿನ ಜೋಳದ ತೆನೆಗಳನ್ನು ಎಸೆದು ಜೇನ್ನೊಣಗಳಿಗೆ ಭಯಪಟ್ಟು ಓಡುತ್ತಿರುವ ಜನರು

## || ಅಧ್ಯಾಯ ೬ ||

ಶ್ರೀ ಗಣಾಶಾಯನಮಃ । ಹೇ ಪರಮಮಂಗಲ ಶ್ರೀಹರಿ, ತಮ್ಮ ಕೃಪೆಯಿದ್ದರೆ ಎಲ್ಲ ಅಶುಭವು ಸಮಾಪ್ತವಾಗುವದರಲ್ಲಿ ಸಂಶಯವಿಲ್ಲ ಎಂಬುದನ್ನು ಸಂತರೇ ತಿಳಿದಿರುವರು । ಸಂತವಚನದಲ್ಲಿ ವಿಶ್ವಾಸವಿಟ್ಟು, ಹೇ ಶ್ರೀನಿವಾಸ, ನಾನು ಮಂಗಲಮಯನಾಗುವ ಆಶೆಯಿಂದ ತಮ್ಮ ದ್ವಾರಕ್ಕೆ ಬಂದಿರುವೆನು । ತಾವು ನನಗೆ ಬರಿಗೈಯಿಂದ ಕಳುಹಿಸಿದರೆ, ತಮಗೆ ಕಪ್ಪು ಕಲೆ ತಗಲುವದು ಮಾತ್ರವಲ್ಲದೆ, ಸಂತ ವಚನವು ಸುಳ್ಳು ಎಂದು ಸಿದ್ಧವಾಗುವದು । ಆದ್ದರಿಂದ ಹೇ ಮಾಧವ ! ನನ್ನನ್ನು ಸ್ವೀಕಾರ ಮಾಡಿರಿ ಮತ್ತು ಈ ಮುಗ್ಧ ಬಾಲಕನ ಮೇಲೆ ಸಿಟ್ಟಾಗಬೇಡಿ । ಬಾಲಕನಲ್ಲಿಯ ಅಸಾಹಾಯಕತೆಯು, ಕೊರತಿಯು, ತಾಯಿಯ ಜಬಾಬುದಾರಿ ಎನಿಸುತ್ತದೆ । ಈ ಮಾತನ್ನು ಜ್ಞಾಪಕದಲ್ಲಿಟ್ಟು, ತಮಗೆ ಮನಸ್ಸಿಗೆ ಬಂದಿದ್ದನ್ನು ಮಾಡಿರಿ । ಬಂಕಟಲಾಲನ ಮನೆಯಲ್ಲಿ ಮಹಾರಾಜರು ಇರುವಾಗ ಒಂದು ಚಮತ್ಕಾರವಾಯಿತು । ಶೇಗಾಂವಿಯ ದಕ್ಷಿಣಕ್ಕೆ ಒಂದು ದಿನ ಇತರರ ಜೊತೆಗೆ ಮಹಾರಾಜರು ಬಂಕಟಲಾಲನ ಹೊಲದಲ್ಲಿ ಗೊಂಜಾಳದ ತೆನೆಯನ್ನು ತಿನ್ನಲು ಹೋದರು । ಹೊಲದಲ್ಲಿ ಒಂದು ದೊಡ್ಡ ಭಾವಿಯು ಇತ್ತು ಮತ್ತು ಹತ್ತಿರದಲ್ಲಿ ಒಂದು ಹುಣಸೆ ಮರವಿತ್ತು। ಮರದ ನೆರಳಿನಲ್ಲಿ ಎಲ್ಲರು ತೆನೆಯನ್ನು ಸುಡಲು ಕುಳಿತರು । ಬೆಂಕಿಯ ಝಳ ಹಾಗೂ ಹೊಗೆಯು ಮರಕ್ಕೆ ತಗುಲಿದೊಡನೆ, ಜೇನುಹುಳಗಳು ಜನರ ಮೇಲೆ ನುಗ್ಗಿವು । ಎಲ್ಲ ಕಡೆ ಜೇನುಹುಳಗಳನ್ನು ನೋಡಿ ಜನರು ದಿಕ್ಕಾಪಾಲಾದರು । ಸಂಕಟ ಬಂದಾಗ ಎಲ್ಲರಿಗೆ ತಮ್ಮ ಪ್ರಾಣವು ಪ್ರಿಯವಾಗುವದು । ಎಲ್ಲರೂ ಓಡಿಹೋದರೂ, ಮಹಾರಾಜರು ತಮ್ಮ ಆಸನದ ಮೇಲೆ ನಿಶ್ಚಿಂತರಾಗಿ ಕುಳಿತಿದ್ದರು । ಅವರು ಕುಳಿತಲ್ಲಿಂದ ಅಲುಗಾಡಲಿಲ್ಲ । ಅವರು ಶಾಂತಚಿತ್ತದಿಂದ ಹುಳಗಳ ಬಗ್ಗೆ ವಿಚಾರ ಮಾಡುತ್ತಿದ್ದರು । ನಿಜವಾಗಿ ನೋಡಿದರೆ, ಜೇನುಹುಳ, ಬೆಂಕಿ, ತೆನೆ ಹಾಗೂ ನಾನು ಎಲ್ಲವೂ ಒಂದೇ । ಅನೇಕ ರೂಪಗಳನ್ನು ಧರಿಸಿದ ಅವನು (ದೇವರು) ಒಬ್ಬನೆ । ದೇವರ ಲೀಲಾನಾಟ್ಯವನ್ನು ನೋಡುವದರಲ್ಲಿ ಮಹಾರಾಜರು ನಿಜಾನಂದದಲ್ಲಿ ತಲ್ಲೀನರಾದರು । ಇತ್ತ ಎಲ್ಲ ಜೇನುಹುಳಗಳು ಮಹಾರಾಜರ ಮೇಲೆ ಮುಗಿದು ಬಿದ್ದವು । ಅದು ಮಹಾರಾಜರ ಮೇಲೆ ಜೇನುಹುಳಗಳ ಕಂಬಳಿ ಮುಚ್ಚಿದಂತೆ ಕಾಣಸುತ್ತಿತ್ತು । ಸಿದ್ಧಯೋಗಿಯ ಮಹತಿಯನ್ನು ಯಾರು ಅರಿಯಬಲ್ಲರು । ಜೇನುಹುಳಗಳು

ಮಹಾರಾಜರನ್ನು ಅನೇಕ ಕಡೆಯಲ್ಲಿ ಕಡಿದವು । ಆದರೆ ಮಹಾರಾಜರು ಶಾಂತವಾಗಿ ಕುಳಿತಿದ್ದರು ಏಕೆಂದರೆ ಅನೇಕತೆಯಲ್ಲಿ ಏಕತೆಯ ಚಿರಂತನ ಸತ್ಯವನ್ನು ಅವರು ತಿಳಿದಿದ್ದರು । ಈ ರೀತಿ ಒಂದು ಘಂಟೆ ಕಳೆಯಿತು । ಸುರಕ್ಷಿತ ಸ್ಥಳದಲ್ಲಿ ಕುಳಿತ ಭಕ್ತರಿಗೆ ಈಗ ಮಹಾರಾಜರ ನೆನಪು ಬಂದಿತು । ಬಂಕಟಲಾಲನು ದುಃಖದಿಂದ ದೀನನಾದನು । ಅವನು, ತಾನು ಮಹಾರಾಜರಿಗೆ ಇಲ್ಲಿ ತಂದಿದ್ದರಿಂದ ಹೀಗಾಯಿತು । ಎಂದು ಪರಿತಪಿಸತೊಡಗಿದನು । ನನ್ನಿಂದಲೇ ಮಹಾರಾಜರ ಮೇಲೆ ಈ ವಿಪತ್ತಿ ಬಂದಿತು । ನನ್ನ ದುರ್ದೈರ್ವಕ್ಕೆ ಮೇರೆ ಇಲ್ಲ । ಕೊನೆಗೆ ಸಂಕಟಕ್ಕೆ ಎದುರು ಹೋಗುವ ನಿಶ್ಚಯನ್ನು ಬಂಕಟಲಾಲನು ಮಾಡಿದನು । ಬಂಕಟಲಾಲನ ಮನಸ್ಸಿನಲ್ಲಿಯ ವಿಚಾರವನ್ನು ಅರಿತು ಮಹಾರಾಜರು ಲೀಲೆಯನ್ನು ಮಾಡಿದರು । ಅವರ ಜೇನು ಹುಳಗಳಿಗೆ ಹೋಗಲು ಆಜ್ಞಾಪಿಸಿದರು । ನನ್ನ ಪ್ರಿಯ ಭಕ್ತ ಬಂಕಟಲಾಲನು ನನ್ನ ಕಡೆಗೆ ಬರುತ್ತಿದ್ದಾನೆ, ಅವನಿಗೆ ಕಷ್ಟವಾಗಬಾರದು ಎಂದರು । ನೆರೆದ ಎಲ್ಲ ಭಕ್ತರಲ್ಲಿ, ಬಂಕಟಲಾಲನು ನಿಜ ಭಕ್ತ ಯಾವನು ವ್ಯಾಕುಳನಾಗಿ ನನ್ನೆಡೆಗೆ ಬರುತ್ತಿದ್ದಾನೆ । ಮಹಾರಾಜರು ಹೀಗೆ ನುಡಿಯುತ್ತಲೆ ಎಲ್ಲ ಜೇನುಹುಳಗಳು ಗೂಡನ್ನು ಸೇರಿದವು । ಈ ಲೀಲೆಯನ್ನು ಬಂಕಟಲಾಲನು ಸ್ವಯಂ ನೋಡಿದನು । ಬಂಕಟಲಾಲನು ಮುಂದೆ ನಿಂತಿದ್ದನ್ನು ನೋಡಿ, ಮಹಾರಾಜರು ನಕ್ಕು ಬಂಕಟ, ಒಳ್ಳೆಯದು ಮಾಡಿದಿ, ನೀನು ನನಗೆ ಒಳ್ಳೆಯ ಔತಣವನ್ನು ಕೊಟ್ಟಿರುವಿ ಎಂದರು । ಎಲ್ಲ ಹುಳಗಳು ನನ್ನ ಮೈ ಮೇಲೆ ಬಂದಾಗ, ಉಂಡಿ ಭಕ್ತರು ಓಡಿಹೋದರು । ಆದ್ದರಿಂದ ಬಂಕಟ, ಸಂಕಟ ಬಂದಾಗ ದೇವರ ಹೊರತು ಬೇರೆ ಯಾರೂ ಸಹಾಯ ಮಾಡುವದಿಲ್ಲ । ಜಿಲೇಬಿ, ಪೇಢೆ, ಹಾಗೂ ಬರ್ಫಿ ಸಿಗುವಾಗ ಎಲ್ಲರು ಕೈ ಮುಂದೆ ಮಾಡುವರು ಮತ್ತು ಸಂಕಟ ಸಮಯದಲ್ಲಿ ಓಡಿಹೋಗುವವರಿಗೆ, ಸ್ವಾರ್ಥಿ ಭಕ್ತರೆನ್ನುತ್ತಾರೆ । ಸ್ವಲ್ಪ ಸಮಯದನಂತರ ಬಂಕಟಲಾಲನು ವಿನಮ್ರನಾಗಿ ನುಡಿದನು, ಮಹಾರಾಜ, ನಾನು ಅಕ್ಕಸಾಲಿಗನಿಗೆ ಕರೆದುಕೊಂಡು ಬರುವೆನು । ಅವನು ಜೇನುಹುಳಗಳ ಮುಳ್ಳನ್ನು ತೆಗೆಯುವನು । ಹೇ ಗುರುರಾಜ, ನಾನೇ ಮಹಾಪಾಪಿ, ನಾನೇ ನಿಮ್ಮನ್ನು ಸಂಕಟಕ್ಕೆ ಎಡೆಮಾಡಿರುವೆನು । ಮುಳ್ಳುಗಳು ಬಹುಸಂಖ್ಯೆಯಲ್ಲಿ ತಮ್ಮ ಶರೀರದಲ್ಲಿ ನುಗ್ಗಿವೆ । ಮಹಾರಾಜ, ಈಗ ಈ ವಿಪತ್ತಿಯನ್ನು ಹೇಗೆ ನಿವಾರಿಸಬಹುದು ? ಬಂಕಟಲಾಲನ ಅಪರಾಧಿ ಸ್ವರವನ್ನು ಕೇಳಿ ಮಹಾರಾಜರು ಇದರಲ್ಲಿ ಭಯಪಡುವ ಕಾರಣವೇನು ? ಎಂದರು । ಕಡಿಯುವದು ಜೇನುಹುಳಗಳ ಸ್ವಭಾವಧರ್ಮ। ಆದರಿಂದ ನನಗೆ ಯಾವ ಕಷ್ಟವು ಇಲ್ಲ । ಏಕೆಂದರೆ, ಜೇನುಹುಳಗಳು ಕೂಡಾ ಈಶ್ವರನ ಒಂದು ಅಭಿನ್ನ







ರೂಪವೆಂಬುದನ್ನು ನಾನು ಅರಿತಿದ್ದೇನೆ । ಜೇನುಹುಗಳಲ್ಲಿ ಸ್ಥಿತ ಭಗವಂತನು, ನನ್ನ ದೇಹದಲ್ಲಿಯೂ ಸ್ಥಿತನು । ಒಂದು ನೀರು ಬೇರೆ ನೀರಿಗೆ ದುಃಖಕೊಡುವದು ಸಾಧ್ಯವೇ ? ಈ ಚಿರಂತನ ಸತ್ಯವನ್ನು ಕೇಳಿ ಬಂಕಟಲಾಲನು ಮೌನ ತಾಳಿದನು । ಇಷ್ಟಾದರೂ ಕೆಲ ಸಮಯದ ನಂತರ ಅಕ್ಕಸಾಲಿಗನು ಬಂದಿರುವದಾಗಿ ಮಹಾರಾಜರು ನೋಡಿದರು । ಅವನನ್ನು ನೋಡಿ ಮಹಾರಾಜರು ನಿನ್ನ ಚಿಮ್ಮಟಿಗೆಯು ಏನು ಕೆಲಸದ್ದು । ಮುಳ್ಳುಗಳನ್ನು ತಗೆಯಲು ನಾನು ಏನು ಮಾಡುವೆನು ಎಂಬುದನ್ನು ನೋಡು । ಇಷ್ಟು ನುಡಿದು ಮಹಾರಾಜರು ಉಸಿರನ್ನು ನಿಲ್ಲಿಸಿದರು । ಒಂದು ಕ್ಷಣದ ನಂತರ ನೋಡಿದರೆ ಎಲ್ಲ ಮುಳ್ಳುಗಳು ಹೊರಗೆ ಬಂದಿದ್ದವು ಈ ಚಮತ್ಕಾರವನ್ನು ನೋಡಿದ ಎಲ್ಲ ಜನರಿಗೆ ಮಹಾರಾಜರ ದೈವಿ ಸಾಮರ್ಥ್ಯದ ಬಗ್ಗೆ ಎಳ್ಳಷ್ಟು ಶಂಕೆ ಉಳಿಯಲಿಲ್ಲ । ಸ್ವಲ್ಪ ಸಮಯದ ನಂತರ ಎಲ್ಲರಿಗೆ ತೆನೆಯನ್ನು ಹುರಿದು ಕೊಡಲಾಯಿತು ಮತ್ತು ಸಂಜೆಗೆ ಎಲ್ಲರೂ ತಮ್ಮ ತಮ್ಮ ಮನೆಗೆ ಮರಳಿದರು । ಒಮ್ಮೆ ಮಹಾರಾಜರು ತಮ್ಮ ಗುರುಬಂಧು ಶ್ರೀ ನರಸಿಂಗನನ್ನು ಭೆಟ್ಟಿಯಾಗಲು ಅಕೋಟಿಗೆ ಹೋದರು । ನರಸಿಂಗಜಿ ಕೊತಶ್ಯಾ ಅಲಿ ಎಂಬ ಮಹಾಪುರುಷರ ಶಿಷ್ಯರಿದ್ದರು । ಅವರು ಜಾತಿಯಿಂದ ಮರಾಠಾ ಇದ್ದರೂ ಭಗವದ್–ಭಕ್ತಿಯ ಬಲದಿಂದ ಶ್ರೀ ವಿಠ್ಠಲನ ಕಂಠಮಣಿಯಾಗಿದ್ದರು । ಆ ನರಸಿಂಗಜಿಯವರ ಚರಿತ್ರೆಯನ್ನು ನಾನು ವಿಸ್ತಾರವಾಗಿ "ಭಕ್ತಿಲೀಲಾಮೃತ"ದಲ್ಲಿ ವರ್ಣಿಸಿದ್ದೇನೆ ಈಗ ಅದನ್ನು ಇಲ್ಲಿ ನಮೂದಿಸುವ ಇಚ್ಛೆಯಲ್ಲ । ಅಕೋಟ ನಗರವು ಶೇಗಾಂವಿಯಿಂದ ಹದಿನೆಂಟು ಮೈಲಿ ದೂರವಿದೆ । ಕಲ್ಪತರು ಶ್ರೀ ಗಜಾನನ ಮಹಾರಾಜರು ಮನೋವೇಗರೂಪಿ ರಥದಿಂದ ಅಕೋಟಿಗೆ ಹೋದರು। ಆಕೋಟಿ ನಗರದ ಹತ್ತಿರದ ಕಾಡಿನಲ್ಲಿ ನರಸಿಂಗಜಿ ಇರುತ್ತಿದ್ದರು । ಅವರು ಸಾಧನೆಗಾಗಿ ಜನ ಸಂಪರ್ಕದಿಂದ ದೂರವಿರಲು ಏಕಾಂತವಾಸದಲ್ಲಿ ಇರುವದನ್ನು ಬಯಸುತ್ತಿದ್ದರು । ನಿರ್ಜನವಾಗಿದ್ದರಿಂದ ಆ ಕಾಡು ಭಯಂಕರವೆನಿಸುತ್ತಿತ್ತು । ಅಲ್ಲಿ ಬೇವು, ಅಶ್ವತ್ಥ ಆದಿ ಮರಗಳಿದ್ದವು । ವೃಕ್ಷಗಳ ಆಧಾರದಿಂದ ಅನೇಕ ಬಳ್ಳಿಗಳು ಹಬ್ಬಿದ್ದವು । ಅನೇಕ ಪ್ರಕಾರದ ಹಾವುಗಳು ಹಾಗೂ ನಾಗಸರ್ಪಗಳು ಮುಕ್ತಸಂಚಾರ ಮಾಡುತ್ತಿದ್ದವು । ಇಂತಹ ದೂರ ಅರಣ್ಯದಲ್ಲಿ ವಾಸಿಸುವ ಗುರುಬಂಧುವನ್ನು ಭೆಟ್ಟಿಯಾಗಲು ಮಹಾರಾಜರು ಅಲ್ಲಿ ತಲುಪಿದರು । ಒಂದೇ ತರಹದ ಪ್ರಕೃತಿಯ ಜನರು ಒಂದು ಕಡೆ ಕೂಡುತ್ತಾರೆ । ನೀರೇ ನೀರಿನೊಡನೆ ಸೇರುವದು । ವಿಜಾತೀಯ ದ್ರವಗಳು ಸೇರುವದು ಅಸಾಧ್ಯ । ಸ್ವಾಮಿ ನರಸಿಂಗಜಿ ಗಜಾನನ ಮಹಾರಾಜರನ್ನು ನೋಡಿ ಆನಂದಿತರಾದರು, ಅದರ ವರ್ಣನೆ ಅಸಾಧ್ಯ ।

ಶ್ರೀಗಜಾನನ ॥ ೫೪ ॥

ವಿಜಯ ಅ. ॥ ೬ ॥

ಒಬ್ಬನು ಹರಿ (ವಿಷ್ಣು), ಹಾಗೂ ಎರಡನೆಯವನು ಹರ (ಶಿವಶಂಕರ) : ಇಬ್ಬರೂ ಭ್ರಮಣ ಮಾಡುವ ದೇವರಂತೆ। ಒಬ್ಬನು ದಶರಥ ಪುತ್ರ ಶ್ರೀರಾಮ ಹಾಗೂ ಎರಡನೆಯವನು ವಸುದೇವ–ದೇವಕಿ ಪುತ್ರ ಶ್ರೀಕೃಷ್ಣ। ಒಬ್ಬರು ಮುನಿ ವಸಿಷ್ಠ, ಹಾಗೂ ಎರಡನೆಯವರು ಋಷಿ ಶ್ರೇಷ್ಠ ಪರಾಶರ । ಒಬ್ಬರು ಗಂಗೆಯ ದಂಡೆ, ಎರಡನೆಯವರು ಗೋದಾವರಿಯ ದಂಡೆ । ಒಬ್ಬರು ಕೋಹಿನೂರ ವಜ್ರ ಹಾಗೂ ಎರಡನೆಯವರು ಕೌಸ್ತುಭ । ಒಬ್ಬರು ವೈನತೇಯ, ಎರಡನೆಯವರು ಅಂಜನಿಯ ಪುತ್ರ । ಇಬ್ಬರಿಗೂ ಅತ್ಯಾನಂದವಾಯಿತು ಮತ್ತು ಇಬ್ಬರೂ ಆಸನದ ಮೇಲೆ ಕುಳಿತು ಮಾತುಕತೆ ಆರಂಭಿಸಿದರು । ತಮ್ಮ ತಮ್ಮ ಅನುಭವಗಳನ್ನು ಹೇಳತೊಡಗಿದರು । ಗಜಾನನ ಮಹಾರಾಜರು "ನರಸಿಂಗಜೀ ಪ್ರಪಂಚದಲ್ಲಿ ಇದ್ದು ಕೂಡಾ ತಮ್ಮಿಂದ ಜನಕಲ್ಯಾಣವಾಯಿತು ಎಂಬುದು ಆನಂದದ ವಿಷಯ" ಎಂದರು । ನಾನಾದರೋ ಎಲ್ಲವನ್ನು ತ್ಯಾಗಮಾಡಿ ಯೋಗ ವಿದ್ಯೆಯ ಆಧಾರದಿಂದ ಸಚ್ಚಿದಾನಂದ ತತ್ವವನ್ನು ಅರಿಯುವ ಯತ್ನ ಮಾಡಿರುವೆನು । ಅನೇಕ ಆಶ್ಚರ್ಯಜನಕ ಘಟನೆಗಳು ನಡೆಯುತ್ತವೆ । ಅವುಗಳ ಅರ್ಥ ತಿಳಿಯುವದು ಸಾಮಾನ್ಯ ಜನರಿಗೆ ಸಾಧ್ಯವಿಲ್ಲ ಏಕೆಂದರೆ ಯೋಗವಿದ್ಯೆಯು ಅರಿಯಲು ಅಸಾಧ್ಯ । ಈ ಯೋಗವಿದ್ಯೆಯಲ್ಲಿ ಅಡಗಿದ ಚಿರಂತನ ತತ್ವವನ್ನು ಉಳಿಸಲು ನನಗೆ ಹುಚ್ಚನ ವೇಷ ಧರಿಸಬೇಕಾಯಿತು । ಸಾಮಾನ್ಯ ಜನರಿಂದ ದೂರಿವಿರಲು ನಾನು ಹುಚ್ಚನಾದೆ । ಈಶ್ವರಿ ತತ್ವದ ಜ್ಞಾನವನ್ನು ಪಡೆಯಲು ಶಾಸ್ತ್ರಗಳಲ್ಲಿ ಮೂರು ಮಾರ್ಗಗಳನ್ನು ಹೇಳಲಾಗಿದೆ ಕರ್ಮ, ಭಕ್ತಿ ಹಾಗೂ ಯೋಗ । ಮಾರ್ಗಗಳು ಭಿನ್ನವಾಗಿದ್ದರೂ ಅವುಗಳ ಫಲವು ಒದೇ – ಆ ಪರಮ ಕೃಪಾಳು ಭಗವಂತನ ಪ್ರಾಪ್ತಿ। ಯೋಗಿಯು ತನ್ನ ಯೋಗವಿದ್ಯೆಯ ಬಗ್ಗೆ ಅಹಂಕಾರವಿಟ್ಟರೆ ಅವನಿಗೆ ನಿಜಸತ್ಯವನ್ನು ತಿಳಿಯುವದು ಅಸಾಧ್ಯ । ಕಮಲ ಪತ್ರದಂತೆ ಯೋಗಿಯು ನಿರಾಸಕ್ತನಾದರೆ ಅವನಿಗೆ ಅಂತಿಮ (ಕೊನೆಯ) ಸತ್ಯವು ತಿಳಿಯುವದರಲ್ಲಿ ಯಾವ ಸಂದೇಹವು ಇಲ್ಲ। ಹೇ ನರಸಿಂಗ, ಪ್ರಪಂಚದಲ್ಲಿಯೂ ಇದೇ ಸ್ಥಿತಿಯಿರುತ್ತದೆ । ಪತಿ, ಪತ್ನಿ, ಮಗ, ಮಗಳು ಹಾಗೂ ಎಲ್ಲ ಸ್ವಕೀಯರ ಬಗ್ಗೆಯೂ ನಿರಾಸಕ್ತನಿರಬೇಕು । ಮಿಂಚು, ಹರಳು, ಯಾವ ರೀತಿ ನೀರಿನಲ್ಲಿದ್ದರೂ, ನೀರನ್ನು ಒಳ ಪ್ರವೇಶಿಸಲು ಬಿಡುವದಿಲ್ಲವೋ, ಅದೇ ರೀತಿ ಪ್ರಪಂಚದಲ್ಲಿ ನಿರಾಸಕ್ತರಾಗಿರಬೇಕು । ಈ ರೀತಿ ನೀವು ಪ್ರಪಂಚದಲ್ಲಿ ಯಾವ ಅಪೇಕ್ಷೆಯು ಇಲ್ಲದೆ ದೇವರು ತಮ್ಮ ಮನಸ್ಸಿನಿಂದ ವಿಚಲಿತನಾಗದಂತೆ ಇರಬೇಕು । ಆಗ ನಿಮಗಾಗಿ ಯಾವ ಮಾತೂ ಅಸಂಭವವಿಲ್ಲ। ನೀನು, ನಾನು ಹಾಗೂ ಶೇಷಶಾಹಿ ಭಗವಂತನು ಒಂದೇ, ಎಲ್ಲರೂ

॥ 54 ॥

ಶ್ರೀಗಜಾನನ ॥ ೫೫ ॥

ವಿಜಯ ಅ. ॥ ೬ ॥

ಅಭಿನ್ನರು । ಅದ್ವೈತ ಜ್ಞಾನದಿಂದ ಜನತೆ ಹಾಗೂ ಜನಾರ್ದನರು ಯಾವಾಗಲೂ ಒಂದು ಎಂದು ತಿಳಿಯುವದು । ಈ ಗುಟ್ಟಿನ ಮಾತುಗಳನ್ನು ಕೇಳಿ, ಹೇ ಬಂಧು, ನನ್ನನ್ನು ಭೆಟ್ಟಿಯಾಗಲು ತಾವು ಸ್ವಂತ ಇಲ್ಲಿ ಬಂದಿರುವದು ನನ್ನ ಭಾಗ್ಯ ಎಂದುರ ನರಸಿಂಗ । ತಾವು ನನ್ನ ಮೇಲೆ ಮಾಡಿದ ಉಪಕಾರವನ್ನು ವ್ಯಕ್ತಗೊಳಿಸಲು ನನ್ನ ಬಳಿ ಶಬ್ದಗಳಿಲ್ಲ। ಅಶಾಶ್ವತವು ನಷ್ಟವಾಗುವದೇ ಪ್ರಪಂಚದ ನಿಜ ರೂಪ । ಇದಕ್ಕೆ ಬೆಲೆ ಇಲ್ಲ। ಮಧ್ಯಾಹ್ನದ ನೆರಳು ನಿಜವಲ್ಲ। ತಾವು ನುಡಿದಂತೆ ನಾನು ನಡೆಯುವೆನು । ನಡು ನಡುವೆ ಇಲ್ಲಿ ಬಂದು ಹೋಗುವ ಕೃಪೆಮಾಡಬೇಕು ಎಂದು ನನ್ನ ಪ್ರಾರ್ಥನೆ । ಈ ಜಗತ್ತಿನಲ್ಲಿ ದೇಹದ ಪ್ರಾರಬ್ಧ ಅಥವಾ ವಿಧಿಲಿಖಿತದಂತೆ ಪ್ರತಿಯೊಬ್ಬನಿಗೆ ಒಳ್ಳೆಯ ಹಾಗೂ ಕಷ್ಟಕರವಾದ ಫಲವನ್ನು ಅನುಭವಿಸಬೇಕಾಗುತ್ತದೆ । ತಮಗೆ ಹಾಗೂ ನನಗೆ ಭಗವಂತನು ಯಾವ ಕಾರ್ಯಕ್ಕಾಗಿ ಕಳುಹಿಸಿರುವನೋ ಅದನ್ನು ಅವಶ್ಯವಾಗಿ ಮಾಡೋಣ । ನಿಮ್ಮ ಈ ರೀತಿಯ ಭೆಟ್ಟಿಯು ಮೇಲಿಂದ ಮೇಲೆ ಆಗುವದು ಎಂಬ ಆಶ್ವಾಸನೆಯನ್ನು ಕೊಡಿರೆಂದು ನಿಮ್ಮ ತಮ್ಮನಾಗಿ ನಾನು ಬೇಡಿಕೊಳ್ಳುತ್ತಿದ್ದೇನೆ । ಶ್ರೀರಾಮನು ಮರಳಿ ಬರುವ ಹಾದಿ ಕಾಯುತ್ತ ಕುಳಿತ ಭರತನಂತೆ, ನಾನು ಆಕೋಟಿನಲ್ಲಿ ತಮ್ಮ ಹಾದಿ ಕಾಯುತ್ತೇನೆ । ಯೋಗಕ್ರಿಯೆಯ ಪ್ರಭಾವದಿಂದ ಒಂದು ಕ್ಷಣದಲ್ಲಿ ತಾವು ನನ್ನನ್ನು ಭೆಟ್ಟಿಯಾಗಲು ಬರಬಹುದು । ಯೋಗ ಪ್ರಭಾವದಿಂದ, ಯೋಗಿಯು ನೀರಿಗೆ ಕಾಲನ್ನು ತಗುಲಿಸದೇ ಕ್ಷಣ ಮಾತ್ರದಲ್ಲಿ ತ್ರಿಭುವನವನ್ನು ಸುತ್ತಿಬರಹುದು । ಈ ರೀತಿ ಧರ್ಮ ಚರ್ಚೆ ಹಾಗೂ ಮಾತುಕತೆಯಲ್ಲಿ ಇಬ್ಬರೂ ರಾತ್ರಿಯನ್ನು ಕಳೆದರು । ಇಬ್ಬರೂ ಪ್ರಸನ್ನ ಚಿತ್ತದಿಂದಿದ್ದರು । ನಿಜ ಸಂತರ ನಡುವೆ ಮಾತ್ರ ಇಂತಹ ಮಾತುಕತೆಗಳು ಸಾಧ್ಯ । ನಕಲಿ ಸಾಧುಗಳು ಒಂದು ಕಡೆ ಬಂದೊಡನೆ ವಾದ ವಿವಾದಗಲಲ್ಲಿ, ಜಗಳದಲ್ಲಿ ಸಮಯ ಕಳೆಯುವರು । ಆದ್ದರಿಂದ ನಕಲಿ ಸಾಧುಗಳಿಂದ ಹತ್ತು ಮೈಲಿ ದೂರವಿರಬೇಕು । ಏಕೆಂದರೆ ತಮ್ಮ ಸುಳ್ಳನ್ನು ಸತ್ಯದಲ್ಲಿ ಪರಿವರ್ತಿಸಲು ಅನುಯಾಯಿಗಳ ಜಾತ್ರೆಯನ್ನು ಕೂಡಿಸಿರುತ್ತಾರೆ । ಒಡೆದ ನೌಕೆಯು, ಅದರಲ್ಲಿರುವ ಜನರಿಗೆ ದಂಡೆ ತೋರಿಸುವದು ಸಾಧ್ಯವೆ ? ಆದರೆ ಸತ್ಯವನ್ನು ಬಿಟ್ಟು ಅಸತ್ಯದ ಕಡೆಗೆ ಜನಸಾಮಾನ್ಯರು ಆಕರ್ಷಿಸಲ್ಪಡುತ್ತಾರೆ । ಸಂತ ತತ್ವವು ಮಠದಲ್ಲಿ, ಜ್ಞಾನದಲ್ಲಿ ಅಥವಾ ಕವಿಯತ್ವದಲ್ಲಿರದೇ ಸ್ವಾನುಭೂತಿಯಲ್ಲಿ ಇದೆ । ಯಾವನು ನಿಜ ಅನುಭೂತಿಯನ್ನು, ಅಥವಾ ಪ್ರಚೀತಿಯನ್ನು ಪಡೆದಿರುವನೋ, ಅವನು ನಕಲಿ ಬಂಗಾರವನ್ನು ಸ್ವೀಕರಿಸಲಾರ । ಅವನು ವೇಶ್ಯೆಯನ್ನು ಗೃಹಿಣಿ ಪದದ ಮೇಲೆ ಕೂಡಿಸಲಾರನು । ಮಹಾರಾಜರು ಹಾಗೂ ನರಸಿಂಗಜಿ ಇಬ್ಬರೂ ಸಾಕ್ಷಾತ್ಕಾರಿಯಾಗಿರುವದ

॥ 55 ॥

ರಿಂದ ಡಾಂಭಿಕತೆಯ ಬಗ್ಗೆ ತಿರಸ್ಕಾರ ಹೊಂದಿದ್ದರು । ಒಬ್ಬ ದನಗಾಯಿಯಿಂದ ಜನರಿಗೆ ಮಹಾರಾಜರು ನರಸಿಂಗಜಿಗೆ ಭೆಟ್ಟಿಯಾಗಲು ಅಕೋಟಿಗೆ ಬಂದಿರುವದು ಹೊತ್ತಾಯಿತು । ಜನರು ಆನಂದಿಂದ ಹೂ, ಹಣ್ಣುಗಾಯಿಗಳನ್ನು ತೆಗೆದುಕೊಂಡು ಮಹಾರಾಜರ ದರ್ಶನಕ್ಕಾಗಿ ಧಾವಿಸಿದರು । ಅವರು ತಮ್ಮಲ್ಲಿಯೇ ನಾವು ಬೇಗ ನಡೆಯಬೇಕು ಏಕೆಂದರೆ ಗೋದಾ ಹಾಗೂ ಭಾಗೀರಥಿಯ ಸಂಗಮವು ಅರಣ್ಯದಲ್ಲಿ ಆಗಿದೆ ಎಂದು ನುಡಿಯುತ್ತಿದ್ದರು । ಆ ಮಿಲನರೂಪಿ ಪ್ರಯಾಗದಲ್ಲಿ ಸ್ನಾನಮಾಡಿ ನಾವು ಪವಿತ್ರರಾಗುವೆವು । ಈ ಮಹಾಪರ್ವವನ್ನು ನಾವು ಕಳೆದುಕೊಳ್ಳಬಾರದು । ಆದರೆ ಜನರು ದುರ್ಭಾಗ್ಯದಿಂದ ಅವರು ಅಲ್ಲಿ ತಲುಪುವ ಮುಂಚೆಯೇ ಮಹಾರಾಜರು ನರಸಿಂಗಜಿಯವರಿಗೆ ಬೀಳ್ಕೊಟ್ಟು ಹೊರಟು ಹೋಗಿದ್ದರು । ಒಮ್ಮೆ ಗಜಾನನ ಮಹಾರಾಜರು ಭ್ರಮಣಮಾಡುತ್ತ ತಮ್ಮ ಶಿಷ್ಯರ ಜೊತೆಗೆ ದರ್ಯಾಪುರ ಎಂಬ ಊರಿಗೆ ತಲುಪಿದರು । ಹತ್ತಿರದಲ್ಲಿ ಶಿವರ ಎಂಬ ಸಣ್ಣ ಹಳ್ಳಿಯಿದೆ, ಯಾವದು ಚಂದ್ರಭಾಗಾ ನದಿಯ ತೀರದಲ್ಲಿದೆ । ಅಲ್ಲಿ ಬ್ರಜಭೂಷಣನೆಂಬ ಸಜ್ಜನನು ಇರುತ್ತಿದ್ದನು । ಶ್ರೋತೃಗಳೇ ಇದು ಪಂಢರಪುರ ಚಂದ್ರಭಾಗಾ ನದಿಯಲಿಲ್ಲ। ಇದು ಆ ಊರಿಗೆ ಸೀಮಿತವಾದ ನದಿ । ವಿದರ್ಭ ಪ್ರಾಂತದಲ್ಲಿ ತಮ್ಮ ನಾಲ್ಕು ಭಾಷೆಗಳ ಮೇಲಿನ ಪ್ರಭುತ್ವದಿಂದ ಬ್ರಜಭೂಷಣನ ಕೀರ್ತಿಯು ಹಬ್ಬಿತ್ತು । ಬ್ರಜಭೂಷಣನು ಸೂರ್ಯನ ಉಪಾಸಕ । ಅವನು ದಿನನಿತ್ಯ ಚಂದ್ರಭಾಗಾ ನದಿಯ ತೀರದಿ ಸ್ನಾನ ಹಾಗೂ ಸೂರ್ಯನಿಗೆ ಅರ್ಘ್ಯವನ್ನು ಕೊಡುತ್ತಿದ್ದನು ಉಷಃಕಾಲದಿ, ಬ್ರಜಭೂಷಣನು ತನ್ನ ಪ್ರಾತರ್ವಿಧಿಗಳನ್ನು ಮುಗಿಸಿ ಸ್ನಾನ ಮಾಡುತ್ತಿದ್ದನು । ಅವನು ಸ್ನಾನವನ್ನು ತಣ್ಣೀರಿನಿಂದ ಮಾಡುತ್ತಿದ್ದನು । ಅವನು ಅತ್ಯಂತ ಕರ್ಮಠನಾಗಿದ್ದರೂ, ವಿದ್ವಾನರಲ್ಲಿ ಅವನಿಗೆ ಮಾನ್ಯತೆ ಇತ್ತು । ಮಹಾರಾಜರು ನದಿಯ ಮಧ್ಯದಲ್ಲಿ ನೀರಿಲ್ಲದೆ ಖಾಲಿ ಬಿದ್ದಿರುವ ಸ್ಥಳದಲ್ಲಿ ಸುಮ್ಮನೆ ಕುಳಿತರು । ಸರಿಯಾದ ಸಮಯಕ್ಕೆ ಬ್ರಜಭೂಷಣನು ಸ್ನಾನಕ್ಕಾಗಿ ಅಲ್ಲಿ ಬಂದನು । ಅದು ಮುಂಜಾನೆಯ ಸಮಯ, ನಾಲ್ಕು ದಿಕ್ಕಿನಲ್ಲಿ ಅರುಣೋದಯದ ಪ್ರಕಾಶವು ಹಬ್ಬಿತ್ತು। ಹುಂಜದ ಕೂಗು ಕೇಳಿ ಬರುತ್ತಿತ್ತು। ಚಾತಕ, ಭರದ್ವಾಜ ಪಕ್ಷಿಗಳು ಪೂರ್ವ ದಿಕ್ಕಿನಲ್ಲಿ ಸೂರ್ಯನ ಸ್ವಾಗತಕ್ಕಾಗಿ ಓಡುತ್ತಿದ್ದವು । ಅರುಣೋದಯವಾದೊಡನೆ, ಅಂಧಕಾರವು ತನ್ನ ಮುಖ ಮುಚ್ಚಿಕೊಂಡಿತ್ತು, ಯಾವ ರೀತಿ ಸಭೆಯಲ್ಲಿ ಪಂಡಿತರ ಆಗಮನವಾದೊಡನೆ ಮೂರ್ಖರು ಕಾಲುಕಿತ್ತುವರು । ಈ ಪ್ರಭಾತದ ಸಯಮದಲ್ಲಿ ಮಹಾರಾಜರು ಬ್ರಹ್ಮಾನಂದಲ್ಲಿ ಮಗ್ನರಾಗಿ ನದಿಯ ತೀರದಲ್ಲಿ ಕುಳಿತಿದ್ದರು । ಅವರ ಶಿಷ್ಯರು ವರ್ತುಳಾಕಾರದಲ್ಲ





ಕುಳಿತಿದ್ದರು । ಆ ಶಿಷ್ಯರು ಗಜಾನನ–ಭಾಸ್ಕರನ ಕಿರಣಗಳಂತೆ ಕಾಣುತ್ತಿದ್ದರು । ಬ್ರಜಭೂಷಣ ಸೂರ್ಯನಿಗೆ ಅರ್ಘ್ಯಕೊಡಲು ಹೋಗವಾಗ ಮುಂದೆ ಜ್ಞಾನಸೂರ್ಯನನ್ನು ಕಂಡನು । ಮಹಾರಾಜರ ಸೂರ್ಯರಂತೆ ಸುಂದರ ಕಾಂತಿ, ಅಜಾನುಬಾಹು ದೇಹ, ನಾಸಿಕಾಗ್ರದಲ್ಲಿ ಸ್ಥಿರವಾದ ದೃಷ್ಟಿಯನ್ನು ಅವನು ನೋಡಿದನು । ಇಂತಹ ಮಹಾಪುರುಷರನ್ನು ನೋಡಿ ಬ್ರಜಭೂಷಣನು ಆನಂದಿತನಾಗಿ, ತಮ್ಮ ಪೂಜಾ ಸಾಹಿತ್ಯವನ್ನು ತೆಗೆದುಕೊಂಡು ಮಹಾರಾಜರ ಕಡೆಗೆ ಓಡಿದನು । ಅವನು ಮಹಾರಾಜರ ಚರಣಗಳಲ್ಲಿ ಅರ್ಘ್ಯವನ್ನು ಕೊಟ್ಟು ಪ್ರದಕ್ಷಿಣೆಯನ್ನು ಹಾಕಿದನು । ಮಿತ್ರಾಯನಮಃ, ಸೂರ್ಯಾಯ ನಮಃ । ಭಾನವೇನಮಃ, ಖಗಾಯನಮಃ ಈ ರೀತಿ ಸೂರ್ಯನ ಸ್ತವನ ಮಾಡಿ ಅವನು ಹನ್ನೆರಡು ಬಾರಿ ನಮಸ್ಕರಿಸಿದನು । ನಂತರ ಮಹಾರಾಜರ ಮಂಗಳಾರತಿ ಮಾಡಿ, ಸಾಷ್ಟಾಂಗ ನಮಸ್ಕಾರ ಮಾಡಿ, ಅವನು ಮಹಾರಾಜರ ಸ್ತವನವನ್ನು ಆರಂಭಿಸಿದನು । ಅವನು ನಮ್ರತೆಯಿಂದ, ನಾನು ಇಲ್ಲಿಯವರೆಗೆ ಸ್ವಲ್ಪ ಪೂಜೆಪಾಠವನ್ನು ಮಾಡಿರುವ ಫಲಸ್ವರೂಪವಾಗಿ ನನಗೆ ಇಂದು ತಮ್ಮ ದರ್ಶನವಾಯಿತು ಎಂದನು । ನನ್ನ ಜೀವನವು ಕೃತಾರ್ಥವಾಯಿತು । ಈ ದಿನದವರೆಗೆ ನಾನು ಸೂರ್ಯ ಮಂಡಲದ ಸೂರ್ಯನಿಗೆ ಅರ್ಘ್ಯ ಕೊಟ್ಟೆನು, ಈ ಸೂರ್ಯ ಭಗವಂತನಿಗೆ, ಜ್ಞಾನನಿಧಿ ಯೋಗೇಶ್ವರನಿಗೆ ಇಂದು ಸಾಕ್ಷಾತ್ ಅರ್ಘ್ಯ ಕೊಡುವ ಭಾಗ್ಯ ನನಗೆ ದೊರಕಿದೆ । (ಶೋಕ್ಲ) – ಹೇಗೆ ಪೂರ್ಣ ಬ್ರಹ್ಮ ಜಗಚಾಲಕ ಜ್ಞಾನರಾಶಿ । ಈ ರೀತಿ ಯುಗ–ಯುಗದಲ್ಲಿ ಎಷ್ಟು ಸಲ ತಮಗೆ ಅವತರಿಸಬೇಕಾಗುತ್ತದೆ ? ಯಾರಿಗೆ ತಮ್ಮ ದರ್ಶನ ಸಿಗುವ ಸೌಭಾಗ್ಯವಿದೆಯೋ, ಅವನು ರೋಗ, ಚಿಂತೆಗಳಿಂದ ಮುಕ್ತನಾಗುವನು । ಹೇ ಗಜಾನನ ಗುರು, ಪ್ರಸನ್ನರಾಗಿ ನನಗೆ ಕೃಪಾಶೀರ್ವಾದ ಕೊಡಿರಿ । ಈ ರೀತಿ ಪ್ರಾರ್ಥನೆ ಮಾಡಿ ಅವನು ಸ್ತವನವನ್ನು ಮುಗಿಸಿ ಮಹಾರಾಜರ ಚರಣಗಳನ್ನು ಹಿಡಿದನು । ಮಹಾರಾಜರು ಅವನನ್ನು ಎಬ್ಬಿಸಿ ಆಲಿಂಗಿಸಿದರು । ಯಾವ ರೀತಿ ತಾಯಿಯು ಮಗುವನ್ನು ಅಪ್ಪಿಕೊಳ್ಳುವಳೋ, ಅದೇ ರೀತಿ ಮಹಾರಾಜರು ಬ್ರಜಭೂಷಣನನ್ನು ಹೃದಯಕ್ಕೆ ಹಚ್ಚಿಕೊಂಡರು । ಅವನ ತಲೆಯ ಮೇಲೆ ಕೈ ಇಟ್ಟು ಮಹಾರಾಜರು, ಬ್ರಜಭೂಷಣ, ಯಾವಾಗಲೂ ನಿನ್ನ ಜಯಜಯಕಾರವಾಗುವದು ಎಂದರು । ನೀನು ಕರ್ಮಮಾರ್ಗವನ್ನು ಎಂದಿಗೂ ತ್ಯಾಗ ಮಾಡಬೇಡ, ಅದೇ ರೀತಿ ಕರ್ಮವಿಧಿಗಳನ್ನು ನಿರರ್ಥಕವೆಂದು ತಿಳಿಯಬೇಡ । ಆದರೆ ನಿನಗೆ ಕಮಲದ ಎಲೆಯಂತೆ ಆಸಕ್ತಿವಿರಹಿತನಾಗಿರಬೇಕು ಎಂಬುದು ನೆನಪಿರಲಿ । ಕರ್ಮವನ್ನು ಮಾಡಿ ಅದರ ಫಲವನ್ನು ತ್ಯಾಗಿಸುವವನಿಗೆ ದೇವರ

ಪ್ರಾಪ್ತಿಯಾಗುತ್ತದೆ। ನಿರಾಸಕ್ತನಾಗಿ ಕರ್ಮ ಮಾಡುವದರಿಂದ ಕರ್ಮದ ಫಲ ಭೋಗಿಸಬೇಕಾಗುವದಿಲ್ಲಿ। ಈಗ ನೀನು ನಿನ್ನ ಮನೆಗೆ ಹೋಗು । ನಾನು ನುಡಿದಿದ್ದನ್ನು ಶ್ರದ್ಧೆಯಿಂದ ಜ್ಞಾಪಕದಲ್ಲಿಡು । ನೀನು ಆಂತರಿಕಭಾವದಿಂದ ನನ್ನನ್ನು ಕರೆದರೆ ನನ್ನ ದರ್ಶನವು ನಿನಗಾಗುವದು । ಈ ರೀತಿ ಉಪದೇಶಮಾಡಿ ಮಹಾರಾಜರು ಬ್ರಜಭೂಷಣನಿಗೆ ಶ್ರೀಫಲವನ್ನು ಪ್ರಸಾದವಾಗಿ ಕೊಟ್ಟು, ಶೇಗಾಂವಿಗೆ ಮರಳಿದರು । ಶೇಗಾಂವಿಯ ನಿಜ ಹೆಸರು 'ಶಿವಗಾಂವ' ಇತ್ತು। ಅದು ಕಾಲಾಂತರದಿಂದ ಬದಲಿಯಾಗಿ ಶೇಗಾಂವಿಯಾಗಿದೆ। ಅದೇ ಹೆಸರು ವಿದರ್ಭ ಪ್ರಾಂತದಲ್ಲಿ ಪ್ರಚಲಿತವಾಗಿದೆ। ಆ ಒಂದೇ ಊರಿನಲ್ಲಿ ಹದಿನೇಳು ಪಾಟೀಲರಿದ್ದರು। ಮಹಾರಾಜರು ಶೇಗಾಂವಿಗೆ ಬಂದರೂ, ಸ್ಥಾನಿಕರಾಗಿ ಎಂದಿಗೂ ಇರಲಿಲ್ಲ। ಯಾವಾಗಲೂ ಸ್ವೇಚ್ಛೆಯಿಂದ ಸಂಚರಿಸುತ್ತಿದ್ದರು । ಅಕೋಟಿ, ಅಕೋಲಾ, ಮಲಕಾಪುರ ಹೆಸರುಗಳು ಅಗಣಿತ। ನಕ್ಷತ್ರಗಳ ಗಣನೆಯು ಸಾಧ್ಯವೇ ಜ್ಯೇಷ್ಠ ಮಾಸವು ಮುಗಿಯಿತು । ಶ್ರಾವಣ ಮಾಸದಲ್ಲಿ ಹನುಮಂತನ ಗುಡಿಯಲ್ಲಿ ಉತ್ಸವವು ಆರಂಭವಾಯಿತು। ಶೇಗಾಂವಿಯ ಈ ಮಂದಿರವು ಅತಿ ವಿಶಾಲ ಹಾಗೂ ಪುರಾತನ। ಊರಿನ ಪಾಟೀಲರು ಹನುಮಂತನ ಭಕ್ತರು । ಪಾಟೀಲರು ಊರಿನ ಪ್ರಮುಖರಾಗಿದ್ದರಿಂದ ಊರಿನ ಮೇಲೆ ಅವರ ಪ್ರಭಾವವಿತ್ತು। ಪಾಟೀಲರ ಇಚ್ಛೆಯಂತೆ ಊರಿನ ಜನರಿಗೆ ನಡೆಯಬೇಕಾಗುತ್ತಿತ್ತು। ಈ ಉತ್ಸವವು ಒಂದು ತಿಂಗಳು ನಡೆಯುತ್ತಿದೆ । ಪ್ರತಿದಿನ ಅಭಿಷೇಕ, ಗ್ರಂಥ ಪಠಣ, ಕಥೆ, ಕೀರ್ತನೆ, ಅನ್ನದಾನ ಆದಿ ಧಾರ್ಮಿಕ ಕೃತ್ಯಗಳು ನಡೆಯುತ್ತಿದ್ದವು; ಯಾವುದರಿಂದ ಜನರು ತೃಪ್ತರಾಗುತ್ತಿದ್ದರು । ಈ ಉತ್ಸವದ ವ್ಯವಸ್ಥಾಪಕನು–ಖಂಡು ಪಾಟೀಲನು। ಅವನು ಸಜ್ಜನನು । ಈ ಊರ ಪಾಟೀಲನ ಉಪಾಧಿಯೆಂದರೇ ಹುಲಿಯ ಚರ್ಮ ಹೊದ್ದುಕೊಂಡಂತೆ । ಆದ್ದರಿಂದ ಊರಿನ ಜನರು ಪಾಟೀಲನಿಗೆ ಹೆದರುತ್ತಿದ್ದರು । "ಊರಿನಿಂದ ಆಗಿದ್ದು ರಾವನಿಂದಲೂ ಸಾಧ್ಯವಿಲ್ಲ" ಎಂದು ಮರಾಠಿಭಾಷೆಯಲ್ಲಿ ಗಾದೆ ಮಾತಿದೆ । ಶ್ರಾವಣ ತಿಂಗಳಿನಲ್ಲಿ ಉತ್ಸವವನ್ನು ನೋಡಲು ಮಹಾರಾಜರು ಬಂದರು । ಮಹಾರಾಜರು ನಾನೀಗ ಈ ಮಂದರಿದಲ್ಲಿಯೇ ಇರುವದಾಗಿ ಬಂಕಟಲಾಲನಿಗೆ ಹೇಳಿದರು । ಇದರಿಂದ ದುಃಖಿತನಾಗಬೇಡ । ಏಕೆಂದರೆ, ಸಾಧು, ಸಂನ್ಯಾಸಿಗಳಿಗೆ ಪ್ರಾಪಂಚಿಕರ ಜೊತೆಗೆ ಯಾವಾಗಲೂ ಇರುವದು ಒಳ್ಳೆಯದಲ್ಲಿ। ನಾನಾದರೋ ಪರಮಹಂಸ ಸಂನ್ಯಾಸಿ, ನಾನು ಹನುಮಂತನ ಮಂದಿರದಲ್ಲಿಯೇ ಇರುವೆನು । ತಾವು ಕರೆಕಳುಹಿಸಿದಾಗ ನಾನು ಬರುವೆನು। ಈ ಆಂತರಿಕ ಭೇದವನ್ನು ನಾನು ಹೇಳಿರುವೆನು। ಜಗದ್ಗುರು ಶಂಕರಾಚಾರ್ಯರು






ಲೋಕ ಕಲ್ಯಾಣಕ್ಕಾಗಿ ಯಾವಾಗಲೂ ಭ್ರಮಣ ಮಾಡುತ್ತಿದ್ದರು । ಮಚ್ಛಿಂದ್ರನಾಥ, ಜಾಲಂಧರನಾಥರು ಯಾವಾಗಲೂ ಅರಣ್ಯದಲ್ಲಿಯೇ ವಾಸಿಸುತ್ತಿದ್ದರು। ವೀರ ಬಹಾದ್ದೂರ ರಾಜಾ ಶಿವಾಜಿ, ಪರಕೀಯರ ಗೂಡ ಯುದ್ಧ ಮಾಡಿ ಹಿಂದೂಗಳ ರಾಜ್ಯವನ್ನು ಸ್ಥಾಪಿಸಿದರು । ಶಿವಾಜಿಯ ಗುರು ಸಮರ್ಥ ರಾಮದಾಸರು ಅವನನ್ನು ಬಹಳ ಪ್ರೀತಿಸುತ್ತಿದ್ದರು । ಅಷ್ಟಾದರೂ ಅವರು ಶಿವಾಜಿಯಿಂದ ದೂರವಿರುತ್ತಿದ್ದರು ಸಜ್ಜನಗಡದ ಮೇಲೆ ಈ ಈ ನನ್ನ ಮಾತುಗಳನ್ನು ಜ್ಞಾಪಕದಲ್ಲಿಟ್ಟು, ನನ್ನನ್ನು ಕರೆದುಕೊಂಡು ಹೋಗುವ ಹಟ ಹಿಡಿಯಬೇಡ। ನಾನು ಹೇಳುವದೆಲ್ಲ ನಿನ್ನ ಒಳ್ಳೆಯದಕ್ಕಾಗಿ । ವಿವಶನಾಗಿ ಬಂಕಟಲಾಲನು ಮಹಾರಾಜರ ಮಾತನ್ನು ಒಪ್ಪಿದನು । ಮಹಾರಾಜರನ್ನು ಮಂದಿರದಲ್ಲಿ ನೋಡಿ ಎಲ್ಲರೂ ಆನಂದಿತರಾದರು । ಭಾಸ್ಕರ ಪಾಟೀಲನು ಮಹಾರಾಜರ ಬಳಿಯಿದ್ದು ಅವರ ಸೇವೆಯನ್ನು ಮಾಡುತ್ತಿದ್ದನು। ಈ ದಾಸಗಣು ವಿರಚಿತ ಶ್ರೀ ಗಜಾನನ ವಿಜಯ ಗ್ರಂಥವು ವಾಚಕನಿಗೆ ಸಂತಚರಣಗಳ ಸೇವೆಮಾಡುವ ಮಾರ್ಗವನ್ನು ತೋರಿಸುವದು ।

**॥ ಶುಭಂ ಭವತು ॥ ಶ್ರೀ ಹರಿ ಹರಾರ್ಪಣಮಸ್ತು॥**

॥ ಇಲ್ಲಿಗೆ ಆರನೆಯ ಅಧ್ಯಾಯವು ಮುಗಿಯಿತು ॥





ಶ್ರೀ ಗಜಾನನ ಮಹಾರಾಜರಿಗೆ ಮಕ್ಕಳು ಕಬ್ಬಿನಿಂದ ಹೊಡೆಯುತ್ತಿದ್ದಾರೆ.

## ॥ ಅಧ್ಯಾಯ ೨ ॥

ಶ್ರೀ ಗಣಾಶಾಯನಮಃ । ಜಯ ಜಯಾಜಿ ರಾಘವ ರಾಮು । ಜಯಜಯಾಜಿ ಮೇಘಶ್ಯಾಮ । ಸಂತ ಜನರ ವಿಶ್ರಾಮ । ಸೀತಾಪತಿ ದಾಶರಥಿ । ತಮ್ಮ ಕಪೆಯಿಂದ, ದೈತ್ಯರಾಜ ರಾವಣನನ್ನು ವಧಿಸುವ ಶಕ್ತಿ ಭೂಮಿಯ ಮೇಲಿನ ವಾನನರಿಗೆ ದೊರಕಿತು । ತಮ್ಮ ಕೃಪೆಯಾದರೆ, ಎಲ್ಲ ಕಾರ್ಯಗಳು ಯಶಸ್ವಿಯಾಗುತ್ತವೆ । ಭಕ್ತರ ಎಲ್ಲ ಅಭಿಲಾಷೆಗಳು ಪೂರ್ಣವಾಗುತ್ತವೆ । ಹೇ ಭಗವಂತ, ಯಾರ ಮೇಲೆ ರಾಜನ ಕೃಪಾ ದೃಷ್ಟಿಯಾಗುವದೋ, ಅವನು ದಿವಾಣನಿಗೆ (ಮಂತ್ರಿಗೆ) ಕೂಡಾ ಆದರಣೀಯನು । ಅವನು ಎಷ್ಟೇ ದುಷ್ಟನಾಗಿದ್ದರೂ ಕೂಡಾ । ನಾನು ತಮ್ಮ ಕೃಷಾದೃಷ್ಟಿ ನನ್ನ ಮೇಲಾಗುವದೋ ಎಂದು ಯೋಚಿಸಿದಾಗ, ನನ್ನ ಬಳಿ ಜ್ಞಾನ ಹಾಗೂ ಭಕ್ತಿ ಎರಡೂ ಇಲ್ಲ ಎಂದು ತಿಳಿದು ಬರುತ್ತದೆ। ಹೇ ಶ್ರೀಪತಿ, ನನ್ನ ಸ್ಥಿತಿಯು ನಿಜವಾಗಿಯೂ ದಯನೀಯವಾಗಿದೆ । ಮನಸ್ಸು ಯಾವಾಗಲೂ ಆಶೆಯ ಸಮುದ್ರದಲ್ಲಿ ಮುಳುಗಿರುವದು । ಅದು ಸ್ಥಿರವಾಗಿರದೇ ಯಾವಾಗಲೂ ಅನೇಕ ವಿಕಲ್ಪಗಳು, ವಿಪರೀತ ವಿಚಾರಗಳು ಇರುತ್ತವೆ । ಇಂತಹ ಪಾತಕಿಗೆ ಮನುಷ್ಯನೇ ಸಮೀಪಿಸಲಾರನು, ಇನ್ನು ದೇವರ ಮಾತು ದೂರವೇ । ಆದರೆ ಈ ಮಾತು ಭೌತಿಕ ದೃಷ್ಟಿಯಿಂದ ನೋಡಿದಂತಾಯಿತು । ಹೇ ದೀನ ಬಂಧು, ಶಾಸ್ತ್ರ ಗ್ರಂಥಗಳ ಆಧಾರದಿಂದ ನೋಡಿದರೆ ತಮಗೆ ಪಾಪಿ ಮನುಷ್ಯರೇ ಪ್ರಿಯರು । ಪುಣ್ಯವಂತರ ಉದ್ಧಾರವೇನು ಆಗುವದೇ, ಅದರಲ್ಲಿ ಆಶ್ಚರ್ಯವಿಲ್ಲ। ಆದರೆ ಪಾಪಿ ಜನರ ಉದ್ಧಾರ ಮಾಡುವದೇ ಮುಖ್ಯ । ಈ ಜಗತ್ತಿನಲ್ಲಿ ತಮಗಿಂತ ದೊಡ್ಡವರು ಯಾರಿಲ್ಲ। ಹೇ ಪ್ರಭು, ಆದ್ದರಿಂದ ನನ್ನ ಪಾಪಗಳ ಕಡೆಗೆ ನೋಡದಿರಿ । ಶರಣಾಗತ ದಾಸಗಣುವಿನ ಮೇಲೆ ಕೃಪೆಮಾಡಿ ತಮ್ಮ ದೊಡ್ಡಿಸ್ತನದ ರಕ್ಷೆ ಮಾಡಿರಿ । ಹನುಮಾನ ಮಂದಿರದ ಉತ್ಸವವು ಜನಸಾಮಾನ್ಯರಿಂದ ನೆರವೇರುತ್ತಿದ್ದರೂ, ಅದರ ಮುಖ್ಯಸ್ಥರು ಗಣೇಶ ಕುಲದ ಖಂಡೇರಾವ ಪಾಟೀಲನಿದ್ದನು । ಪಾಟೀಲನ ಮನೆತನ ಬಹುಪುರಾತನ । ದೊಡ್ಡ ಹೊಲವಿದ್ದದ್ದರಿಂದ ಮನೆಯು ಧನ ಸಂಪತ್ತಿಯಿಂದ ತುಂಬಿತ್ತು। ಸಂತ ಸೇವೆಯು ಅವರ ಪ್ರಾಚೀನ ಪದ್ಧತಿಯಾಗಿತ್ತು। ಪಾಟೀಲರು ಊರಿನ ಪ್ರಮುಖರಾದ ಮೇಲೆ ಅವರ ಕೈ ಹಿಡಿಯುವರು ಯಾರು ? ಮಹಾದಾಜಿ ಪಾಟೀಲನಿಗೆ ಇಬ್ಬರು ಮಕ್ಕಳು। ಹಿರಿಯನ ಹೆಸರು ಕಡಕಾಜಿ ಚಿಕ್ಕವನ ಹೆಸರು ಕುಕಾಜಿ, ಅವನು ಪಂಢರಪುರದ ವಿಠ್ಠಲನ ಭಕ್ತ। ಪಾಟೀಲ ಪರಿವಾರಕ್ಕೆ ಸಂತ ಗೋಮಾಜಿಯಿಂದ

ಉಪದೇಶ ದೊರಕಿತ್ತು। ಪಾಟೀಲ ಕಡತಾಜಿಗೆ ಆರು ಮಕ್ಕಳು, ಆದರೆ ಕುಕಾಜಿಗೆ ಮಕ್ಕಳಿರಲಿಲ್ಲ । ಕಡತಾಜಿಯ ಮರಣದ ನಂತರ ಅವನ ಆರು ಮಕ್ಕಳ ಲಾಲನೆ ಪಾಲನೆಯ ಭಾರ ಕುಕಾಜಿಯ ಮೇಲೆ ಬಿತ್ತು। ಕುಕಾಜಿಯ ಶುದ್ಧ ಆಚರಣೆ ಹಾಗೂ ಭಾವ ಭಕ್ತಿಯಿಂದ ಧನ ಹಾಗೂ ವೈಭವವು ಬೆಳೆಯಿತು । ಪಾಟೀಲನ ಮನೆಯಲ್ಲಿ ಅಷ್ಟ ಸಿದ್ಧಗಳು ನೆಲೆಸಿದಂತಿತ್ತು। ಕುಕಾಜಿ ಪಾಟೀಲನ ಮರಣದ ನಂತರ ಮನೆಯ ಜವಾಬುದಾರಿ ಖಂಡು ಪಾಟೀಲನ ಮೇಲೆ ಬಂದಿತ್ತು, ಅವನು ಸಿಡುಕು ಸ್ವಭಾವದಿಂದಾಗಿ ಯಾರೂ ಹೇಳುವದನ್ನು ಕೇಳುತ್ತಿರಲಿಲ್ಲ। ಖಂಡು ಪಾಟೀಲನಿಗೆ ಐದು ತಮ್ಮಂದಿರು ಗಣಪತಿ, ನಾರಾಯಣ, ಮಾರುತಿ, ಹರಿ ಹಾಗೂ ಕೃಷ್ಣಾಜಿ। ಖಂಡು ಪಾಟೀಲನ ಬಳಿ ಸಂಪತ್ತಿನ ಜೊತೆಗೆ ಅಧಿಕಾರವೂ ಬಂದಿದ್ದರಿಂದ, ಎಲ್ಲರೂ ಅಹಂಕಾರಿ ಆದರು । ಎಲ್ಲರೂ ವ್ಯಾಯಾಮ ಮಾಡುತ್ತಿದ್ದರು । ಅವರಿಗೆ ಕುಸ್ತಿ ಮೊದಲಾದವುಗಳನ್ನು ಆಡುವ ಹವ್ಯಾಸವಿತ್ತು। ಹರಿ ಪಾಟೀಲನು ಕುಸ್ತಿಯಲ್ಲಿ ಪ್ರಸಿದ್ಧಿ ಪಡೆದಿದ್ದನು । ಪ್ರತಿ ವರ್ಷ ಹನುಮಂತನ ಉತ್ಸವವೇನೋ ನೆರವೇರುತ್ತಿತ್ತು, ಆದರೆ ಜಯಜಯಕಾರ ಮಾತ್ರ ಪಾಟೀಲ ಪರಿವಾರದ್ದು ! ಪಾಟೀಲನ ವಿರುದ್ಧ ಮಾತನಾಡುವ ಶಕ್ತಿಯಾರಿಗಿರಲಿಲ್ಲ। ಸೊಕ್ಕಿನ ಪಾಟೀಲ ಪರಿವಾರದಿಂದಾಗಿ ಶೇಗಾಂವಿಯಲ್ಲಿ ಯಾವಾಗಲೂ ಜಗಳವಾಗುತ್ತಿದ್ದವು । ಅವನ ಕಣ್ಣಿಲ್ಲಿ ಎಲ್ಲರೂ ಸಮಾನರು । ಯಾರೂ ದೊಡ್ಡವರಿಲ್ಲ, ಸಣ್ಣವರಿಲ್ಲ। ಧನಿಕ, ದರಿದ್ರ, ಬ್ರಹ್ಮಚಾರಿ–ಗ್ರಹಸ್ಥ, ಸಾಧು–ಸಂತ ಆದಿ ಎಲ್ಲರನ್ನೂ ಒಂದೇ ತಕ್ಕಡಿಯಲ್ಲಿ ಅಳೆಯುತ್ತಿದ್ದರು. ಮತ್ತು ಬಾಯಿಗೆ ಬಂದಿದ್ದನ್ನು ಮಾತಾಡುತ್ತಿದ್ದರು । ಈಗ ಪಾಟೀಲ ಬಂಧುಗಳು ಮಹಾರಾಜರ ಜೊತೆಗೆ ಕುಚೇಷ್ಟೇ ಆರಂಭಿಸಿದರು । ಒಬ್ಬನು ಎಲ್ಯೆ ಹುಚ್ಚ ಗಣ್ಯಾ, ಏನು ತಿನ್ನುವಿ ? ಕಲ್ಲು–ಮಣ್ಣು ? ಹುಚ್ಚನಿಗೆ ಜನರು ಬಾಯಿಗೆ ಬಂದದ್ದನ್ನು ನುಡಿಯುವಂತೆ ಪಾಟೀಲ ಬಂಧುಗಳು ಮಹಾರಾಜರ ಚೇಷ್ಟೆ ಆರಂಭಿಸಿದರು । ಒಬ್ಬನು ಗಣ್ಯಾ ನನ್ನ ಜೊತೆಗೆ ಕುಸ್ತಿ ಆಡು ಎಂದನು । ನಿನಗೆ ಎಲ್ಲ ಜನರು ಯೋಗೇಶ್ವರನೆಂದು ಕರೆಯುತ್ತಾರೆ । ಅದರ ಅನುಭವ ನಮಗೆ ಬರಲಿ । ಇಲ್ಲದಿದ್ದರೆ ನಾನು ನಿನಗೆ ಬಡೆಯುವೆವು । ಈ ತರಹದ ಅವರ ಮಾತುಗಳನ್ನು ಕೇಳಿಯೂ ಮಹಾರಾಜರು ಸುಮ್ಮನಿರುತ್ತಿದ್ದರು । ಅವರ ಮೇಲೆ ಕ್ರೋಧ ಮಾಡದೇ ಕೇವಲ ಮಂದಹಾಸ್ಯ ಸೂಸುತ್ತಿದ್ದರು । ಈ ರೀತಿಯ
ಘಟನೆಗಳು ಮಂದಿರದಲ್ಲಿ ನಡೆಯುತ್ತಿದ್ದವು। ಮಹಾರಾಜರ ಸೇವೆ ಮಾಡುವ ಭಾಸ್ಕರ ಪಾಟೀಲನಿಗೆ ಈ ಮಾತುಗಳನ್ನು ॥ 62 ॥
ಸಹಿಸಲಾಗಲಿಲ್ಲ। ಮಹಾರಾಜರೆ ಈಗ ಇಲ್ಲಿ ಇರಬೇಡಿರಿ ಎಂದನು । ನಾವು ತಿರುಗಿ ಅಕೋಲಿಗೆ ಹೋಗೋಣ । ಈ





ಪಾಟೀಲ ಬಂಧುಗಳಿಗೆ ಸೊಕ್ಕು ಹಾಗೂ ಅಹಂಕಾರ ಬಂದಿದೆ । ಇವರಿಂದ ದೂರವಿರುವದೇ ಒಳ್ಳೆಯದು । ಇವರಿಗೆ ಯಾರ ಬಗ್ಗೆ ಆದರವಿಲ್ಲ । ತಮ್ಮ ಶಕ್ತಿಯ ಬಗ್ಗೆ ಅವರಿಗೆ ಗರ್ವ ಉಂಟಾಗಿದೆ । ಲಕ್ಷ್ಮಿಯು ಅವರನ್ನು ಕುರುಡು ಮಾಡಿದ್ದಾಳೆ । ಶಕ್ತಿ, ಧನ ಹಾಗೂ ಅಧಿಕಾರಗಳಿಂದ ಅವರು ಯಾವದು ಒಳ್ಳೆಯದು ಅಥವಾ ಕೆಟ್ಟದ್ದು ಎಂಬುದನ್ನು ಅರಿಯುವ ಬುದ್ಧಿಯನ್ನು ಕಳೆದು ಕೊಂಡಿದ್ದಾರೆ। ಆಗ ಮಹಾರಾಜರು ಅರೇ ಭಾಸ್ಕರ, ಸ್ವಲ್ಪ ತಾಳ್ಮೆಯಿಂದಿರು ಎಂದರು। ಈ ಪಾಟೀಲ ಪರಿವಾದವರು ನನ್ನ ಭಕ್ತರು। ಒಂದು ಮಾತು ನಿಜ, ಸೊಕ್ಕಿನಿಂದ ಅವರಲ್ಲಿಯ ನಮ್ರತೆಯು ನಾಶವಾಗಿದೆ। ಆದರೂ ಅವರ ಅಂತರಂಗದ ಅನ್ವೇಷಣೆಯನ್ನು ಮಾಡಿದರೆ ಪಾಟಲ ಪರಿವಾರದ ಜನರು ನನಗೆ ನನ್ನ ಮಕ್ಕಳಂತೆ ಕಂಡು ಬರುವರು । ಇವರ ಮೇಲೆ ಸಂತ ಕೃಪೆಯ ವರದಹಸ್ತವಿದೆ । ಆದರೆ ಅಧಿಕಾರದಿಂದ ಉನ್ಮತ್ತರಾಗಿರುವರು । ಹುಲಿಯ ಸ್ವಭಾವ ಧರ್ಮವು ಆಕಳಿನಲ್ಲಿ ಹೇಗೆ ಬರುವದು ಸಾಧ್ಯ ? ಖಡ್ಗವು ಹರಿತವಾಗಿದ್ದರೆ ಮಾತ್ರ ಅದಕ್ಕೆ ಶೋಭೆ ಬರುವದು । ಅಗ್ನಿಯಲ್ಲಿ ಶೀಲತೆಯು ಹೇಗೆ ಸಾಧ್ಯ ? ಕೆಲವು ಸಯಮದ ನಂತರ ಅವರ ಅಹಂಕಾರಿ ಸ್ವಭಾವವು ಬದಲಿಯಾಗುವದು। ಮಳೆಗಾಲದ ಮಲಿನ ನೀರು ಚಳಿಗಾಲದಲ್ಲಿ ಸ್ವಚ್ಛವಾಗುವದು। ಒಂದು ದಿನ ವಿಚಿತ್ರ ಪ್ರಸಂಗ ಉಂಟಾಯಿತು । ಹರಿ ಪಾಟೀಲನು ಮಂದಿರದಲ್ಲಿ ಒಂದು ಮಹಾರಾಜರ ಕೈ ಹಿಡಿದು ನನ್ನ ಜೊತೆಗೆ ಕುಸ್ತಿ ಆಡಲು ನಡೆ ಎಂದನು । ಗಣ ಗಣ ಗಣಾತ ಬೊಲೆ ಎಂಬ ನಿರರ್ಥಕ ಮಾತುಗಳನ್ನು ನಿಲ್ಲಿಸು । ನಿನ್ನ ಹೆಸರಿನ ಬಗ್ಗೆ ಬಹಳ ಆಡಂಬರವಾಗಿದೆ । ಅದರ ನಿಜ ಸ್ವರೂಪವನ್ನು ಇಂದು ನೋಡುತ್ತೇನೆ । ಕುಸ್ತಿಯಲ್ಲಿ ನೀನು ವಿಜಯ ಸಂಪಾದಿಸಿದರೆ ನಿನಗೆ ಬಹುಮಾನವನ್ನು ಕೊಡುವೆನು । ಮಹಾರಾಜರು ಪಾಟೀಲನ ಆವ್ಹಾನವನನ್ನು ಸ್ವೀಕರಿಸ ಕುಸ್ತಿಯ ಕಣದಲ್ಲಿ ಇಳಿದರು । ಮಹಾರಾಜರು ಮಾಡಿದ ಚಮತ್ಕಾರವನ್ನು ಈಗ ಕೇಳಿರಿ । ಕಣದಲ್ಲಿ ಮಹಾರಾಜರು ಕುಳಿತರು ಮತ್ತು ಹರಿಗೆ ನುಡಿದರು 'ನೀನು ದೊಡ್ಡ ಮಲ್ಲನವಲ್ಲವೇ ? ನನಗೆ ಕೈ ಹಿಡಿದು ಎಬ್ಬಿಸಿದರೆ ನಾವು ಕುಸ್ತಿ ಆಡುವೆವು। ಅದನ್ನು ಸಣ್ಣ ಮಾತೆಂದು ತಿಳಿದು ಹರಿ ಪಾಟೀಲನು ಮುಂದೆ ಸರಿದು ಮಹಾರಾಜರನ್ನು ಎಬ್ಬಿಸತೊಡಗಿದನು। ಆದರೆ ಅವನಿಗೆ ಅದು ಸಾಧ್ಯವಾಗಲಿಲ್ಲ । ಮಹಾರಾಜರು ಕುಳಿತಲ್ಲಿಂದ ಮಿಸಕಾಡಲಿಲ್ಲ । ಹರಿ ಪಾಟೀಲನ ಮೈಯಿಂದ ಬೆವರು
ಸುರಿಯುತ್ತಿತ್ತು। ಅವನು ತನ್ನ ಎಲ್ಲ ಸಾಮರ್ಥ್ಯದಿಂದ ಪ್ರಯತ್ನ ಮಾಡಿದರೂ ಯಶಸ್ಸು ಸಿಗಲಿಲ್ಲ। ಹರಿ ಪಾಟೀಲನು ॥ 63 ॥
ವಿಚಾರ ಮಗ್ನನಾದನು 'ಮಹಾರಾಜರು ಎಷ್ಟು ಶಕ್ತಿಶಾಲಿ ? ಪರ್ವತವು ಕೂಡಾ ಇವರ ಮುಂದೆ ತಲೆ ಬಾಗುವದು।

ಅವರು ತೆಳ್ಳಗಿದ್ದರೂ, ಅವರಲ್ಲಿ ಆನೆಯ ಭಲವಿದೆ। ಇಷ್ಟು ಶಕ್ತಿಯಿದ್ದರೂ ಅವರು ನಮ್ಮೆಲ್ಲರ ಚೇಷ್ಟೆಯನ್ನು ಸಹಿಸಿದರು। ಅವರು ಆನೆಯಂತೆ ಬಲಶಾಲಿ ಇರುವದರಿಂದ ನಮ್ಮಂತಹ ನಾಯಿಗಳ ಕಡೆಗೆ ನೋಡುವದಿಲ್ಲ। ನಾಯಿಯ ಬೊಗಳು ಆನೆಗೆ ಏನು ? ಹರಿ ಪಾಟೀಲನ ಮುಂದೆ ಒಂದು ವಿಪತ್ತಿ ಉಂಟಾಯಿತು, ಏಕೆಂದರೆ ಈ ವರೆಗೆ ಅವನು ಯಾರೆದರೂ ತಲೆ ಬಾಗಿರಲಿಲ್ಲ। ಈ ಪರಾಜಿತನಾಗಿ ಮಹಾರಾಜರ ಮುಂದೆ ತಲೆ ಬಗ್ಗಿಸಬೇಕಾಯಿತು ಮತ್ತು ಅವರ ಕಾಲುಗಳನ್ನು ಹಿಡೆಯಬೇಕಾಯಿತು । ಮಹಾರಾಜರು ಹರಿ ಪಾಟೀಲನಿಗೆ ನುಡಿದರು, 'ನನಗೆ ಬಹುಮಾನ ಕೊಡು ಅಥವಾ ಕುಸ್ತಿಯಲ್ಲಿ ಸೋಲಿಸು ಕುಸ್ತಿಯು ಪುರುಷರ ಆಟ । ಅದು ಎಲ್ಲ ಆಟಗಳಲ್ಲಿ ಶ್ರೇಷ್ಠವೆನಿಸಿದೆ । ಬಲರಾಮ ಹಾಗೂ ಶ್ರೀಕೃಷ್ಣರು ಬಾಲಕರಿದ್ದಾಗ ಕುಸ್ತಿಯನ್ನು ಆಡುತ್ತಿದ್ದರು । ಮುಷ್ಟಿಕ ಹಾಗೂ ಚಾಣುರ, ಕಂಸನ ಅಂಗರಕ್ಷಕರು, ತಮ್ಮ ಮಲ್ಲವಿದ್ಯೆಯ ಬಲದಿಂದ ಭಗವಂತನನ್ನು ಎದುರಿಸಿದರು । ಮೊದಲನೆಯದು ಶರೀರ ಸಂಪತ್ತು, ಎರಡನೆಯದು ಮನೆತನ ಹಾಗೂ ಮೂರನೆಯದು ಧನಮಾನ ಇತ್ಯಾದಿ । ನಿನ್ನಂತಹ ಬಲಶಾಲಿ ಪಾಟೀಲನು ಯಮುನಾ ನದಿಯ ತೀರದಲ್ಲಿದ್ದನು । ಅವನು ಗೋಕುಳದ ಎಲ್ಲ ಬಾಲಕರಿಗೆ ಶಕ್ತಿಶಾಲಿ ಮಾಡಿದನು । ಅದೇ ರೀತಿ ನೀನು ಕೂಡಾ ನಡೆಯಬೇಕು । ಬಡ ಜನತೆಯು ಶರೀರ ಬಲವನ್ನು ಬೆಳೆಸಲು ನೀನು ಸಹಾಯ ಮಾಡಬೇಕು । ಇಲ್ಲದಿದ್ದರೆ ನಿನಗೆ ಈ ಪಾಟೀಲ ಹೆಸರನ್ನು ಬಿಡಬೇಕಾಗುವದು । ನನಗೆ ಇದೆ ಬಹುಮಾನ ರೂಪದಲ್ಲಿ ಬೇಕು । ಈ ರೀತಿ ಮಹಾರಾಜರು ಪಾಟೀಲನ ಸೊಕ್ಕನ್ನು ಮುರಿದರು । ವಿನಮ್ರತೆಯಿಂದ ಹರಿ ಪಾಟೀಲನು ಮಹಾರಾಜರಿಗೆ ತಮ್ಮ ಅನುಗ್ರವಾದರೇ ಶೇಗಾಂವಿನ ಹುಡುಗರು ಬಲಶಾಲಿಯಾಗುವದರಲ್ಲಿ ಸಂದೇಹವಿಲ್ಲ ಎಂದನು । ಹರಿಯು ಬುದ್ಧಿವಂತನಾಗಿದ್ದನು । ಇಂತಹ ಜಾಣತನ ಶಾಲೆಯಲ್ಲಿ ಹೋಗಿ ಕಲಿಯುವದು ಸಾಧ್ಯವಿಲ್ಲ, ಅದು ತಾನಾಗಿಯೇ ಬರುವದು । ಈ ಘಟನೆಯ ನಂತರ ಹರಿ ಪಾಟೀಲನು ಮಹಾರಾಜರನ್ನು ಕಾಡಿಸುವದನ್ನು ಬಿಟ್ಟನು । ಹರಿಯಲ್ಲಿ ಆದ ಪರಿರ್ವತನೆ ಅವನ ತಮ್ಮಂದಿರರಿಗೆ ಸರಿಯೆನಿಸಲಿಲ್ಲ। ಅವನಿಗೆ ಬೈಗಳವಿಟ್ಟು ಅವರು ನುಡಿದರು, ನೀನು ಆ ಹುಚ್ಚ ಸಾಧುಗೆ ಏಕೆ ಹೆದರುವಿರಿ ಇದರ ಕಾರಣವನ್ನು ನಾವು ಅರಿಯಲಿಲ್ಲ ? ನಾವು ಊರಿನ ಪ್ರಮುಖರು । ಜನರು ನಮ್ಮ ಕಾಲಡಿಗೆ ಬಿದ್ದಿರಬೇಕು । ಆದರೆ ಎಲ್ಲವೂ ವಿರುದ್ಧ ದಿಕ್ಕಿನಲ್ಲಿ ನಡೆದಿದೆ । ನೀನು ಸ್ವಂತ ಆ ನಗ್ನ ಸಾಧುವಿನ ಕಾಲು ಹಿಡಿಯುವದು ನಿನಗೆ ಶೋಭೆ ಕೊಡುವದಿಲ್ಲ। ಆ ಹುಚ್ಚನ ದೊಡ್ಡಿಸ್ತನ ಬೆಳೆಯುತ್ತಿದೆ । ಸಾಮಾನ್ಯ ಜನರಿಗೆ ಸತ್ಯವನ್ನು ತೋರಿಸಲು, ಅವನ ದಾಂಭಿಕ





ರೂಪವನ್ನು ಜನರಿಗೆ ತೋರಿಸುವದು ಅವಶ್ಯಕ । ನಾವು ಈ ರೀತಿ ಮಾಡದಿದ್ದರೆ ಎಲ್ಲ ಜನರು ಆ ಹುಚ್ಚನ ಕೈಗೊಂಬೆಗಳಾಗುವರು । ಮತ್ತು ನಂತರ, ಊರಿನ ಮುಖ್ಯಸ್ಥನು ತನ್ನ ಕೆಲಸವನ್ನು ಸರಿಯಾಗಿ ಮಾಡಲಿಲ್ಲ ಎಂದು ಆರೋಪ ಮಾಡುವರು । ಮೋಸಗಾರರು ಸಾಧುವಿನ ವೇಷಧರಿಸಿ ಸಾಮಾನ್ಯ ಜನರನ್ನು ವಶಪಡಿಸಿಕೊಳ್ಳುವರು । ಹೆಂಗಸರಿಗೆ ಮೋಸ ಮಾಡಿ ತಮ್ಮ ಕಾರ್ಯ ಸಾಧಿಸುವರು । ಬಂಗಾರದ ನಿಜರೂಪವನ್ನು ಒರೆಗೆ ಹಚ್ಚಿ ತಿಳಿಯುವದು । ಕಬ್ಬಿನಿಂದ ತುಕಾರಮ ಮಹಾರಾಜರನ್ನು ಬಡಿದಾಗಲೇ, ಅವರ ಶಾಂತ ಸ್ವಭಾವದ ಪರಿಚಯವಾಯಿತು । ಕೋಣದ ಮುಖದಿಂದ ವೇದಗಳನ್ನು ಕೇಳಿದಾಗಲೆ ಮಹಾರಾಜ ಜ್ಞಾನೇಶ್ವರರ ಸಾಧುತ್ವವನ್ನು ಪಂಡಿತರು ಒಪ್ಪಿದರು । ಸರಿಯಾಗಿ ಪರೀಕ್ಷಿಸದೇ ಯಾರ ದೊಡ್ಡಸ್ತನವನ್ನು ಒಪ್ಪಿಕೊಳ್ಳಬಾರದು । ಆದ್ದರಿಂದ ಎಲ್ಲ ತಮ್ಮಂದಿರು ಸ್ವಾಮಿಜಿಯವರ ಸಾಮರ್ಥ್ಯವನ್ನು ಪರೀಕ್ಷಿಸುವದಾಗಿ ನಿರ್ಧರಿಸಿದರು । ಮತ್ತು ಒಂದು ಕಬ್ಬಿನ ಹೊರೆಯನ್ನು ತೆಗೆದುಕೊಂಡು ಮಂದಿರದಲ್ಲಿ ಎಲ್ಲರೂ ತಲುಪಿದರು । ಹರಿ ಪಾಟೀಲನು ಸುಮ್ಮನೆ ನಡೆಯುವ ಘಟನೆಯನ್ನು ನೋಡುತ್ತಿದ್ದನು । ಪಾಟೀಲ ಬಂಧುಗಳು ಮಹಾರಾಜರಿಗೆ ಸಂಬೋಧಿಸಿದರು 'ಎಲೈ ಹುಚ್ಚ, ನಿನಗೆ ಕಬ್ಬನ್ನು ತಿನ್ನುವ ಆಶೆಯಿದೆ ಏನು ? ಆಶೆಯಿದ್ದರೆ ನಮ್ಮ ಒಂದು ಪಣವನ್ನು ನೀನು ಒಪ್ಪಲೇಬೇಕು । ನಮ್ಮ ಪಣವೆಂದರೆ ಈ ಕಬ್ಬಿನಿಂದ ನಾವು ನಿನ್ನ ಬೆನ್ನಿನ ಮೇಲೆ ಹೊಡೆಯುವೆವು, ಆದರೆ ಇದರ ಗುರುತು ನಿನ್ನ ಬೆನ್ನಿನ ಮೇಲೆ ಕಾಣಬಾರದು, ಅಂದರೆ ನಾವು ನಿನಗೆ ಸಾಧು ಎನ್ನುವೆವು । ಏನು ಈ ಪಣವನ್ನು ನೀನು ಒಪ್ಪಲೇಬೇಕು ? ಪಣವನ್ನು ಕೇಳಿ ಮಹಾರಾಜರು ಹೌದು ಅಥವಾ ಇಲ್ಲ ಎಂದು ಹೇಳಲಿಲ್ಲ। ಅವರು ಸುಮ್ಮನೆ ಕುಳಿತಿದ್ದರು । ಬಾಲಕರ ಕುಚೇಷ್ಟೆಗೆ ದೊಡ್ಡವರು ಮಹತ್ವ ಕೊಡುವದಿಲ್ಲ। ಆಗ ಮಾರುತಿಯು ಹೊಡೆತದ ಹೆದರಿಕೆಯಿಂದಲೇ ಇವನು ಸುಮ್ಮನಾಗಿದ್ದಾನೆ । ನಂತರ ಗಣಪತಿಯು ಇವನ ಮೌನವನ್ನು ಸುಮ್ಮತಿಯೆಂದು ತಿಳಿದು, ಈಗ ಬಡಿಯಲು ತಡವೇಕೆ ? ಎಲ್ಲರೂ ಕೂಡಿ ಮಹಾರಾಜರ ಮೇಲೆ ನುಗ್ಗಿದರು, ಮತ್ತು ಅಲ್ಲಿ ನೆರೆದ ಸಜ್ಜನರು ಕಾಲುಕಿತ್ತಿದರು । ಭಾಸ್ಕರ ಪಾಟೀಲನು ಅಲ್ಲಿ ಮೈಮರೆಯಿಸಿದ್ದನು। ಭಾಸ್ಕರನು ಮಕ್ಕಳಿಗೆ ಕಬ್ಬಿನಿಂದ ಮಹಾರಾಜರಿಗೆ ಹೊಡೆಯದಿರಿ ಎಂದನು । ಈ ವರ್ತನೆ ನಿಮಗೆ ಶೋಭಿಸುವದಿಲ್ಲ। ತಾವೆಲ್ಲರೂ ಸದಾಚಾರಿ ಗುಣಸಂಪನ್ನ ಪಾಟೀಲರ ಕುಲದಲ್ಲಿ ಹುಟ್ಟಿರುವಿರಿ । ನಿಮ್ಮ ಅಂತಃಕರಣದಲ್ಲಿ ದಯೆ ಇರುವದು ಅವಶ್ಯಕ। ಮಹಾರಾಜರ ಮಹಾನತೆಯನ್ನು ತಾವು ಒಪ್ಪಿಕೊಳ್ಳದಿದ್ದರೆ ಸರಿ, ಅವರನ್ನು ಹೀನ ದೀನರೆಂದು ತಿಳಿದು ಬಿಟ್ಟು

ಬಿಡುವದೇ ಒಳ್ಳೆಯದು । ಶೂರರು ಹುಲಿಯೊಡನೆ ಯುದ್ಧ ಮಾಡುವರು, ಕ್ಷುದ್ರ ಪ್ರಾಣಿಗಳೊಡನೆ ಅಲ್ಲಿ । ಮಹಾಬಲಿ ಹನುಮಂತನು ರಾವಣನ ಲಂಕೆಯನ್ನು ಸುಟ್ಟಿದ್ದನು, ಬಡವರ ಗುಡಿಸಲು ಅಲ್ಲ । ಇದನ್ನು ಕೇಳಿ ಮಕ್ಕಳು ತಾವು ಹೇಳಿರುವದನ್ನು ನಾವು ಕೇಳಿದ್ದೇನೆ ಎಂದರು । ಊರಿನ ಜನರು ಇವನಿಗೆ ಯೋಗ ಯೋಗೇಶ್ವರ ಎನ್ನುವರು । ನಾವು ಇಂದು ಅವನ ಪರೀಕ್ಷೆಯನ್ನು ಮಾಡುವೆವು । ಒರೆಗೆ ಹಚ್ಚಿ ನಿಜವಾದ ಬಂಗಾರದ ಪರೀಕ್ಷೆ ಮಾಡುವೆವು । ಆದ್ದರಿಂದ ನಡುವೆ ಬಂದು ನಮ್ಮ ಕಾರ್ಯದಲ್ಲಿ ವಿಘ್ನ ತರಬೇಡಿರಿ । ನಡೆಯುವದನ್ನು ಸುಮ್ಮನೆ ನೋಡಿರಿ । ಕೈಯಲ್ಲಿ ಕಬ್ಬನ್ನು ತೆಗೆದುಕೊಂಡು ಎಲ್ಲರೂ ಮಹಾರಾಜರನ್ನು ಬಡಿಯತೊಡಗಿದರು । ಯಾವ ರೀತಿ ರೈತನು, ಭತ್ತವನ್ನು ಬಡಿಯುವನು ಆ ರೀತಿ ಮಕ್ಕಳ ಈ ಮರ್ಕಟ ಲೀಲೆಯನ್ನು ನೋಡಿ ಮಹಾರಾಜರು ನಗುತ್ತಿದ್ದರು । ಅವರು ಕುಳಿತಲ್ಲಿಂದ ಮಿಸಕಾಡಲಿಲ್ಲ । ಕೊನೆಗೆ ಆ ಪಾಟೀಲ ಬಂಧುಗಳು ಮಹಾರಾಜರ ಸಹನಶೀಲತೆಯನ್ನು ನೋಡಿ ಬೆರಗಾಗಿ ಅವರನ್ನು ಬಡಿಯುವದು ನಿಲ್ಲಿಸಿದರು । ಆ ಮೇಲೆ ನೋಡಿದರೆ ಮಹಾರಾಜರ ಮೈಮೇಲೆ ಒಂದು ಗುರುತುಕೂಡ ಕಾಣಲಿಲ್ಲ । ಇದನ್ನು ನೋಡಿ ಹೆದರಿ, ಹಾಗೂ ನಾಚಿಕೆಯಿಂದ ಮಹಾರಾಜರ ಕಾಲುಗಳನ್ನು ಹಿಡಿದು ಶರಣಾಗತರಾದರು । ಅವರು ಮಹಾರಾಜರು ನಿಜವಾಗಿ ಯೋಗ ಯೋಗೇಶ್ವರರಾಗಿರುವದಾಗಿ ಒಪ್ಪಿಕೊಂಡರು । ಮಕ್ಕಳ ಈ ಸ್ಥಿತಿಯನ್ನು ನೋಡಿ ಮಹಾರಾಜರು ನಕ್ಕು ನುಡಿದರು, ತಾವು ನನಗೆ ಹೊಡೆದು ದಣಿದಿರಬಹುದು, ತಮ್ಮ ಕೈಗಳು ಸೋತು ಹೋಗಿರಬಹುದು । ತಮ್ಮ ಶ್ರಮ ಪರಿಹಾರಕ್ಕಾಗಿ ನಾನು ಕಬ್ಬಿನ ರಸವನ್ನು ನಿಮಗೆ ಕುಡಿಸುವೆನು । ನನ್ನ ಹತ್ತಿರ ಕುಳಿತುಕೊಳ್ಳಿರಿ । ಇಷ್ಟು ನುಡಿದು ಮಹಾರಾಜರು ಒಂದು ಕಬ್ಬನ್ನು ಮುರಿದು, ಕೈಯಿಂದ ಅರಿದು ಯಂತ್ರವಿಲ್ಲದೆ ರಸವನ್ನು ತಗೆದು ಅವರಿಗೆ ಕೊಟ್ಟರು । ಅವರ ಈ ಕೃತ್ಯವನ್ನು ನೋಡಿ ಪಾಟೀಲ ಬಂಧುಗಳು ಆಚ್ಚರ್ಯಚಕಿತರಾದರು। ಮಹಾರಾಜರ ಪ್ರತಿ ಅವರ ಮನಸ್ಸಿನಲ್ಲಿರುವ ಸಂಶಯವು ಹೋಯಿತು । ಯೋಗಶಕ್ತಿಯ ಈ ಪ್ರಭಾವವು ಸುಳ್ಳಿಲ್ಲ । ಯೋಗದ ಪ್ರಭಾವದಿಂದ ಯೋಗಿಯ ಶಕ್ತಿಯು ಅಗಣಿತವಿರುತ್ತದೆ । ಪೌಷ್ಟಿಕ ಆಹಾರ ಸೇವಿಸಿ ಶಾರೀರಿಕ ಬಲವು ಬೆಳೆಯುವದು, ಆದರೆ ಅದು ಶಾಶ್ವತವಲ್ಲ । ಆದರೆ ಯೋಗವಿದ್ಯೆಯ ಸಾಮರ್ಥ್ಯವು ಶಾಶ್ವತವು ಹಾಗೂ ಅಗಣಿತವು। ಮಕ್ಕಳಿಗೆ ಈ ಚಿರಂತನ ತತ್ವವನ್ನು ತಿಳಿಸಲೆಂದೇ ಮಹಾರಾಜರು ಆ ಚಮತ್ಕಾರವನ್ನು ಮಾಡಿದ್ದರು । ಮಕ್ಕಳು ನಮಸ್ಕರಿಸಿ ಮಹಾರಾಜರಿಂದ ಬೀಳ್ಕೊಟ್ಟರು । ಖಂಡು ಪಾಟೀಲನಿಗೆ ಎಲ್ಲ ಮಾತುಗಳನ್ನು ಹೇಳಿದರು । ಮಹಾರಾಜರು







ನಿಜವಾಗಿ ಅಲೆದಾಡುವ ಈಶ್ವರರು, ಇದರ ಅನುಭವ ನಮಗೆ ಬಂದಿದೆ ಎಂದರು । ಖಂಡು ಪಾಟೀಲನು ನಂತರ ಮಹಾರಾಜರ ದರ್ಶನಕ್ಕಾಗಿ ಹೋಗಿ ಬರುತ್ತಿದ್ದನು । ಆದರೆ ಅವನ ವಾಣಿಯಲ್ಲಿ ಮೃದುತ್ವವಿರಲಿಲ್ಲ । ಮಹಾರಾಜರಿಗೆ ಪಾಟೀಲನು 'ಗಣ್ಯಾ', 'ಗಜಾ' ಎಂದು ಸಂಬೋಧಿಸುತ್ತಿದ್ದನು । ಏಕಾರಾಂತ ಅಥವಾ ಏಕವಚನದಲ್ಲಿ ಸಂಬೋದನೆ ಎರಡು ಕಡೆ ಉಪಯೋಗಿಸಲಾಗುತ್ತದೆ । ಒಂದು, ಎಲ್ಲಿ ಅತ್ಯಧಿಕ ಪ್ರೇಮವಿರವದೋ ಅಲ್ಲಿ । ತಾಯಿ ಹಾಗೂ ಮಹುವಿನ ನಡುವೆ ಏಕವಚನದ ಭಾಷೆಯಿರುವದು । ಮತ್ತೊಂದು ಏಕವಚನದ ಸಂಬೋಧನೆಯಾಗುವದು ಎಲ್ಲಿ ಅಂದರೇ, ವಯಸ್ಸಿನಿಂದ, ಅಥವಾ ಅಧಿಕಾರದಿಂದ, ಸಂಪತ್ತಿನಿಂದ ದೊಡ್ಡ ಜನರು, ತಮ್ಮ ಸೇವಕರಿಗೆ, ಹೀನ ದೀನರಿಗೆ ಸಂಭೋದಿಸುವಾಗ ಏಕವಚನದ ಪ್ರಯೋಗ ಮಾಡುವರು । ಪಾಟೀಲನು ಊರಿನ ಮುಖ್ಯಸ್ಥನಾಗಿದ್ದರಿಂದ ಎಲ್ಲರಿಗೆ ಏಕವಚನದಲ್ಲಿ ಸಂಬೋಧಿಸುವ ರೂಢಿಯಾಗಿತ್ತು । ಮಹಾರಾಜರಿಗೂ ಅವನು 'ಗಣ್ಯಾ' ಎಂಬ ಹೆಸರಿನಿಂದ ಕರೆಯುತ್ತಿದ್ದನು । ಅದು ಕೇವಲ ರೂಢಿಯ ಪರಿಣಾಮವಾಗಿತ್ತು ಮಾತ್ರವಲ್ಲದೇ ಬೇರೆ ಕಾರಣವಿರಲಿಲ್ಲ । ಅವನು ಮಹಾರಾಜರನ್ನು 'ಗಣ್ಯಾ' 'ಗಣ್ಯಾ' ಎಂದು ಕರೆಯುತ್ತಿದ್ದರೂ, ಅವರ ಪ್ರತಿ ಅವನ ಮನಸ್ಸಿನಲ್ಲಿ ಆದರವಿತ್ತು । ತೆಂಗಿನಕಾಯಿಯ ಮೇಲಿನ ಕವಚವು ಕಠಿಣವಾಗಿದ್ದರೂ, ಅದು ಒಳಗಿನಿಂದ ಮೃದುವಾಗಿರುವದು । ಅದೇ ರೀತಿ ಪಾಟೀಲನ ಸ್ಥಿತಿಯಾಗಿತ್ತು । ಕುಕಾಜಿಯು ವೃದ್ಧನಾದ ಮೇಲೆ ಖಂಡು ಪಾಟೀಲನು ಕಾರುಬಾರು ನೋಡುತ್ತಿದ್ದನು । ಕುಕಾಜಿಯು ಖಂಡು ಪಾಟೀಲನಿಗೆ ಒಂದು ದಿನ ನೀನು ಮಹಾರಾಜರ ದರ್ಶನಕ್ಕೆ ದಿನಾಲು ಹೋಗುವಿ । ಅವರ ಸಾಕ್ಷಾತ್ಕಾರಿ ಪುರುಷರು ಎಂದು ಹೇಳುವಿ । ಆದರೂ ಅವರ ಮುಂದೆ ನೀನು ಸುಮ್ಮನಕೇ ಕೂಡುವಿ ? ನಿನಗೆ ಯಾವ ಸಂತಾನವಿಲ್ಲ ಮತ್ತು ನಾನು ಮುದುಕನಾಗಿದ್ದೇನೆ । ನನಗಾಗಿ ಮೊಮ್ಮಗನನ್ನು ಏಕೆ ಬೇಡಿಕೊಳ್ಳುವದಿಲ್ಲ ? ಆದ್ದರಿಂದ ಇಂದು ಸಮರ್ಥ ಗಜಾನನರಲ್ಲಿ ಒಬ್ಬ ಪುತ್ರನನ್ನು ಕೊಡುವಂತೆ ಪ್ರಾರ್ಥನೆ ಮಾಡು । ಅವರು ನಿಜವಾದ ಸಂತರಾಗಿದ್ದರೆ ನಿನ್ನೆ ಇಚ್ಛೆಯು ಹಾಗೂ ನನ್ನ ಇಚ್ಛೆಯೂ ಪೂರ್ಣವಾಗುವವು । ಸಾಧು ಮಹಾತ್ಮರ ಇಚ್ಛೆಯಿದ್ದರೆ ಯಾವದೂ ಅಸಂಭವವಿಲ್ಲ । ಸೌಭಾಗ್ಯದಿಂದ ದೊರೆತ ಸಾಧು ಸಂತರ ಸಹವಾಸದ ಲಾಭ ಮಾಡಿಕೊ । ಖಂಡುವಿನ ಮನಸ್ಸಿನಲ್ಲಿ ಈ ಮಾತು ಮನೆ ಮಾಡಿತು । ಒಂದು ದಿನ ಹನುಮಂತನ ಗುಡಿಯಲ್ಲಿ ಅವನು ಮಾತೆತ್ತಿದನು । ಖಂಡು ಪಾಟೀಲನು ತನ್ನ ರೂಢಿಯ ಅನುಸಾರ ನುಡಿದನು, 'ಏ ಗಣ್ಯಾ', ನನ್ನ ಕಕ್ಕನು ದಿನ ಕಳೆದಂತೆ ಮುದುಕನಾಗುತ್ತಿದ್ದಾನೆ, ಅವನಿಗೆ ಮೊಮ್ಮಗನನ್ನು ನೋಡುವ ಇಚ್ಛೆಯಾಗಿದೆ । ನಿನಗೆ ಜನರು ಸಾಧು ಎನ್ನುವರು । ನಿನ್ನ ದರ್ಶನದಿಂದ ತಮ್ಮ

ಇಚ್ಛೆಯು ಪೂರ್ಣವಾಗುವದೆಂದು ಜನರ ವಿಶ್ವಾಸ । ಅದರ ಪ್ರಚೀತಿ ನನಗೆ ತೋರಿಸು । ನನ್ನ ತಿರವು ನಿನ್ನ ಚರಣಗಳಲ್ಲಿರುವಾಗ ನಾನು ಬಂಜಾಗುವದು ಹೇಗೆ ಸಾಧ್ಯ । ಖಂಡುವಿನ ಆತ್ಮ ನಿವೇದನವನ್ನು ಕೇಳಿ ಮಹಾರಾಜರು ಹೇಳಿದರು, ನೀನು ನನ್ನಲ್ಲಿ ಯಾಚನೆ ಮಾಡಿದ್ದು ಒಳ್ಳೆಯದಾಯಿತು । ಧನ ಹಾಗೂ ಅಧಿಕಾರದ ನೀನು ಪ್ರಯತ್ನವಾದಿ ಇರುವಿ । ಆದ್ದರಿಂದ ನೀನು ನಿನ್ನ ಇಚ್ಛೆಗಾಗಿ ನನ್ನಲ್ಲಿ ಏಕೆ ಪ್ರಾರ್ಥನೆ ಮಾಡುವಿ ? ನೀನು ಧನ ಸಂಪತ್ತಿಯ ಮುಂದೆ ಎಲ್ಲ ವಸ್ತುಗಳು ಕೊಳಚೆಯ ಸಮಾನ ಎಂದು ಹೇಳುವಿ । ಧನ ಬಲವನ್ನು ನೀನು ಸರ್ವಸ್ವವೆಂದು ತಿಳಿಯುವಿ । ಹಾಗಿದ್ದಾಗ, ನನ್ನ ಹರಕೆಯನ್ನು ಧನ ಬಲದಿಂದ ಏಕೆ ಪೂರ್ಣಗೊಳಿಸಲಾರೆ । ನಿನ್ನ ಬಳಿ ಹೊಲವಿದೆ, ಉದ್ಯೋಗ, ವ್ಯಾಪಾರವಿದೆ । ಸಂಪೂರ್ಣ ವಿದರ್ಭ ಪ್ರಾಂತದಲ್ಲಿ ನಿನ್ನ ಬಾಯಿಂದ ಬಂದ ಶಬ್ದವು ವ್ಯರ್ಥವಾಗುವದಿಲ್ಲ । ಈ ಸಾಮರ್ಥ್ಯದ ಮೇಲೆ ನೀನು ಭಗವಂತನಿಂದ ಎಲ್ಲವನ್ನು ಪಡೆಯಬಹುದು ? ಇಷ್ಟು ಸಣ್ಣ ಮಾತಿನ ಕಾರಣವೇನು ಎಂಬುದು ನನಗೆ ತಿಳಿದಿಲ್ಲ! ಆಗ ಖಂಡು ನುಡಿದನು ಈ ಮಾತು ನನ್ನ ಪ್ರಯತ್ನದ ಹೊರಗಿದೆ । ಅದಕ್ಕಾಗಿ ಭಗವಂತನ ಕೃಪೆಯು ಬೇಕು । ಜಗತ್ತಿನಲ್ಲಿ ನೀರಿದ್ದರೆ ಮಾತ್ರ ಪ್ರಯತ್ನ ಹಾಗೂ ಕಷ್ಟದಿಂದ ಧಾನ್ಯದ ನಿರ್ಮಾಣವು ಸಾಧ್ಯ । ಆದರೆ ನೀರನ್ನು ಕೊಡುವದು ಮಾನವನ ಕೈಯಲ್ಲಿ ಇಲ್ಲ । ಬರಗಾಲದ ಸಮಯದಲ್ಲಿ ಧಾನ್ಯದ ನಿರ್ಮಾಣವು ಅಸಾಧ್ಯ । ಆದ್ದರಿಂದ ನೀರಿದ್ದಾಗ, ಮಾನವನ ಪ್ರಯತ್ನಗಳಿಗೆ ಯಶಸ್ಸು ದೊರಕುವದು । ಇದೇ ಮಾತು ನನ್ನ ಹರಕೆಯ ಬಗ್ಗೆ ಇದೆ । ಆದ್ದರಿಂದ ಮಾನವನ ಪ್ರಯತ್ನಗಳ ಜೊತೆಗೆ ಭಗವಂತನ ಕೃಪೆಯು ಅವಶ್ಯಕ । ಖಂಡು ಪಾಟೀಲನ ಮನದ ಮಾತನ್ನು ಕೇಳಿ ಮಹಾರಾಜರು ನಕ್ಕು ನುಡಿದರು ಪುತ್ರನಿಗಾಗಿ ನೀನು ನನ್ನಲ್ಲಿ ಯಾಚನೆ ಮಾಡಿರುವಿ । ಯಾಚನೆ ಎಂದರೆ ಒಂದು ಪ್ರಕಾರದ ಭಿಕ್ಷೆ ಬೇಡಿದಂತೆ – ಅದನ್ನು ನೀನು ಮಾಡಿರುವಿ । ನಿನಗೆ ಒಬ್ಬ ಪುತ್ರನಾಗುವನು; ಅವನ ಹೆಸರು ಭಿಕಾ ಎಂದು ಇಡು । ಆದರೆ ಪುತ್ರ ಪ್ರಾಪ್ತಿ ನನ್ನ ಕೈಯಲ್ಲಿದೆ ಎಂಬುದು ನಂಬಬೇಡ । ನಾನು ನಿನಗಾಗಿ ದೇವರಲ್ಲಿ ಪ್ರಾರ್ಥನೆ ಮಾಡುವೆನು । ಭಗವಂತನು ನನ್ನ ಪ್ರಾರ್ಥನೆಯನ್ನು ಕೇಳುವನು, ಏಕೆಂದರೆ ಅವನಿಗೆ ಯಾವದೂ ಅಸಾಧ್ಯವಿಲ್ಲ । ನಿನ್ನ ಮನೆಯ ಸ್ಥಿತಿ ಒಳ್ಳೆಯದಿದೆ । ಆದ್ದರಿಂದ ಬ್ರಾಹ್ಮಣರಿಗೆ ಮಾವಿನ ಸೀಕರಣೆ ಹಾಗೂ ಪೂರಿಯ ಭೋಜನ ಮಾಡಿಸು । ನಿನಗೆ ಪುತ್ರ ಪ್ರಾಪ್ತಿಯಾಗುವದರಲ್ಲಿ ಸಂದೇಹವಿಲ್ಲ । ಆದರೆ ಪ್ರತಿವರ್ಷ ಬ್ರಾಹ್ಮಣರಿಗೆ ಮಾವಿನ ಸೀಕರಣೆ ಭೋಜನ ಹಾಕಬೇಕು । ಮಹಾರಾಜರು ಮಂದಿರದಲ್ಲಿ ನುಡಿದಿದ್ದನ್ನು, ಖಂಡು ಪಾಟೀಲನು ಮನೆಗೆ ಬಂದು ಹೇಳಿದನು । ಕುಕಾಜಿಯು ಆ ಶುಭ ವಾರ್ತೆಯನ್ನು ಕೇಳಿ ಆನಂದಿತನಾದನು । ಕೆಲವು ದಿನಗಳ ನಂತರ ಮಹಾರಾಜರ





ಅಮೃತವಾಣಿಯು ಸತ್ಯವಾಯಿತು । ಖಂಡು ಪಾಟೀಲನ ಹೆಂಡತಿ ಗಂಗುಬಾಯಿಗೆ ನವಮಾಸಗಳು ಪೂರ್ಣವಾದವು ಪುತ್ರರತ್ನವಾಯಿತು । ಖಂಡು ಪಾಟೀಲ, ಕುಕಾಜಿ ಹಾಗೂ ಸಂಪೂರ್ಣ ಪಾಟೀಲ ಪರಿವಾರವು ಆನಂದಿತವಾಯಿತು । ಖಂಡು ಪಾಟೀಲನು ಇದರ ದ್ಯೋತಕವಾಗಿ ದಾನಧರ್ಮ, ಬಡವರಿಗೆ ಗೋದಿ ಹಾಗೂ ಬೆಲ್ಲವನ್ನು ಹಂಚಿದನು । ಊರಿನ ಸಣ್ಣ ಬಾಲಕರಿಗೆ ಪೇಢೆ, ಬರ್ಫಿಗಳನ್ನು ಕೊಟ್ಟನು । ಸಡಗರದಿಂದ ನಾಮಕರಣ ಸಮಾರಂಭವು ನೆರವೇರಿತು। ಪುತ್ರನ ಹೆಸರು ಭಿಕಾ ಎಂದು ಇಡಲಾಯಿತು । ಶುಕ್ಲ ಪಕ್ಷದ ಚಂದ್ರನಂತೆ ಮಗನು ಬೆಳೆಯತೊಡಗಿದನು । ಬ್ರಾಹ್ಮಣರಿಗೆ ಮಾವಿನ ಸೀಕರಣೆಯ ಭೋಜನ ಕೊಡಲಾಯಿತು । ಶೇಗಾಂವಿಯ ಪಾಟೀಲರ ಮನೆಯಲ್ಲಿ ಇಂದಿಗೂ ಆ ಪ್ರಥೆಯಿದೆ। ಪುಣ್ಯ ಪುರುಷರ ಮಾತು ಸುಳ್ಳಾಗುವದು ಸಾಧ್ಯವೆ ? । ಪುತ್ರನ ಕೃಷ್ಣ ಲೀಲೆಯಿಂದ ಮನೆಯು ತುಂಬಿ ತುಳುಕುತ್ತಿತ್ತು ಖಂಡು ಪಾಟೀಲನ ಈ ಸಮೃದ್ಧಿ ದೇಶಮುಖನಿಂದ ನೋಡಲಾಗಲಿಲ್ಲ । ಶೇಗಾಂವಿಯಲ್ಲಿ ಎರಡು ಪಕ್ಷಗಳು ಮೊದಲಿನಿಂದ ಇದ್ದವು । ಒಂದು ಪಕ್ಷ ದೇಶಮುಖನದು ಹಾಗೂ ಎರಡನೆಯದು ಪಾಟೀಲನದು । ಇಬ್ಬರ ಮನಸ್ಸು ದ್ವೇಷದಿಂದ ತುಂಬಿತ್ತು । ಇಬ್ಬರೂ, ಎರಡನೆಯವನ ಮೇಲೆ ಕೈ ಮಾಡಲು ಹವಣಿಸುತ್ತಿದ್ದರು । ಇಬ್ಬರಲ್ಲಿ ಪ್ರೇಮದ ಅಂಶವೂ ಇರಲಿಲ್ಲ । ಇಬ್ಬರು ಶಾಸ್ತ್ರಿಗಳು ಮಾಂತ್ರಿಕರು ಶೂರರು, ತಾಂತ್ರಿಕರು ಅಥವಾ ನಾಯಿಗಳು ಹತ್ತಿರ ಬಂದಾಗ ಜಗಳವಾಗುವದು ಸಹಜ । ಅದೇ ರೀತಿ ಶೇಗಾಂವಿಯಲ್ಲಿ ಪಾಟೀಲ ಹಾಗೂ ದೇಶಮುಖರ ನಡುವಿನ ದ್ವೇಷ ಎಂದೂ ಕಡಿಮೆಯಾಗಲಿಲ್ಲ । ಮೊಮ್ಮಗನ ಮುಖ ನೋಡಿ ಕುಕಾಜಿಯ ನಿಧನ ಪಂಢರಪೂರದ ಭೀಮಾನದಿ ತೀರದ ಮೇಲೆ ಆಯಿತು । ಕುಕಾಜಿಯ ಮರಣದಿಂದ ಖಂಡು ದುಃಖಿತನಾದನು, ಏಕೆಂದರೆ ಅವನ ಆಧಾರದಿಂದಲೇ ಕಾರುಭಾರು ನಡೆಸಿದ್ದನು । ಈಗ ಕುಕಾಜಿಯ ಛತ್ರವು ಕಳೆದು ಹೋಯಿತು । ಅವನು ದೇವರಲ್ಲಿ, ಯಾರ ಆಧಾರದಿಂದ ನಾನು ಜೀವನವನ್ನು ಕಳೆಯುತ್ತಿದ್ದೆನೋ, ಆ ಆಧಾರವನ್ನು ಏಕೆ ತೆಗೆದುಕೊಂಡಿರುವಿ ? ಪಾಟೀಲನ ವಿವಶತೆಯ ಲಾಭ ದೇಶಮುಖನು ತೆಗೆದುಕೊಳ್ಳುವದಾಗಿ ನಿಶ್ಚಯಿಸಿದನು । ಇದರ ವರ್ಣನೆಯನ್ನು ಮುಂದಿನ ಅಧ್ಯಾಯದಲ್ಲಿ ಮಾಡುವೆನು । ವಿದ್ವೇಷವು ವಿನಾಶಕ್ಕೆ ಕಾರಣ । ಈ ದಾಸಗಣು ವಿರಚಿತ ಶ್ರೀ ಗಜಾನನ ವಿಜಯ ಎಂಬ ಗ್ರಂಥವನ್ನು ಸಾವಧಾನ ಚಿತ್ತದಿಂದ ಕೇಳಿರಿ ।

॥ ಶ್ರೀ ಹರಿಹರಾರ್ಪಣಮಸ್ತು ॥ ಶುಭಂ ಭವತು ॥

॥ ಇಲ್ಲಿಗೆ ಏಳನೆಯ ಅಧ್ಯಾಯವು ಮುಗಿಯಿತು ॥





ಶ್ರೀ ಗಜಾನನ ಮಹಾರಾಜರಿಗೆ ಭೆಟ್ಟಿಯಾಗಲು ಸನ್ಯಾಸಿಗಳು ಬಂದಿದ್ದಾರೆ.

## ॥ ಅಧ್ಯಾಯ ೮ ॥

ಶ್ರೀ ಗಣಾಶಾಯನಮಃ । ಹೇ ವಾಸುದೇವ, ದೇವಕಿ ನಂದನ, ಹೇ ಗೋಪಿಗಳ ಮನರಂಜಕ, ಹೇ ದುಷ್ಟ ದಾನವ ಮರ್ದನ । ಶ್ರೀಹರಿ ನನ್ನ ಮೇಲೆ ಪ್ರಸನ್ನನಾಗು । ತಮ್ಮ ಕೃಪೆಯಾಗಲು ಅವಶ್ಯವಿರುವ, ಆಧ್ಯಾತ್ಮಿಕ ಸಾಧನ ಕರ್ಮಯೋಗ, ಪರಾಭಕ್ತಿ ಆದಿ ನನ್ನಲ್ಲಿಲ್ಲ। ಜ್ಞಾನಯೋಗದಿಂದ ಜ್ಞಾನ ಪಡೆಯುವ ಇಚ್ಛೆಯಿದ್ದರೂ ಶಾಸ್ತ್ರ ಗ್ರಂಥಗಳೆಲ್ಲ ಸಂಸ್ಕೃತದಲ್ಲಿವೆ । ನಾನು ಮಂದಮತಿಯಾಗಿದ್ದರಿಂದ ನನಗೆ ಸಂಸ್ಕೃತದ ಗಂಧವಿಲ್ಲ । ಅರಳಿದ ಕಮಲದಲ್ಲಿಯ ಮಕರಂದವು ಕಪ್ಪೆಗೆ ಹೇಗೆ ಸಿಗಬಹುದು । ಕಪ್ಪೆಯಾದರೆ ಹುಳಗಳ ಮೇಲೆ ಸಂತುಷ್ಟವಿರುವದು । ಜನರಿಗೆ ಅನ್ನದಾನ ಮಾಡಿ ತಮ್ಮ ಬಳಿಗೆ ಬರಬೇಕೆಂದರೆ, ನಾನು ದರಿದ್ರನಿರುವದರಿಂದ ಸಾಧ್ಯವಿಲ್ಲ। ಹಣವಿಲ್ಲದೆ ಮನುಷ್ಯನು ತನ್ನ ಯಾವ ಇಚ್ಛೆಯನ್ನು ಪೂರೈಸುವದು ಸಾಧ್ಯವಿಲ್ಲ। ತೀರ್ಥಯಾತ್ರೆ ಮಾಡಿ ಪುಣ್ಯಗಳಿಸಬೇಕೆಂದರೆ, ನನ್ನ ದೇಹವು ಶಿಥಿಲವಾಗಿದೆ ಹಾಗೂ ಜೊತೆಗೆ ಅಂಧತ್ವ ಬಂದಿದೆ। ಹೇ ಚಕ್ರಪಾಣಿ, ನಾನು ಎಲ್ಲ ಕಡೆಯಿಂದ ವಿಪತ್ತಿಯಲ್ಲಿ ಸಿಕ್ಕಿರುವೆನು। ಧನಹೀನನ ಎಲ್ಲ ಇಚ್ಛೆಗಳು ಹಾಗೆಯೇ ಉಳಿಯುತ್ತವೆ । ಈ ಮಾತುಗಳು ಲೌಕಿಕ ದೃಷ್ಟಿಯಿಂದ ನಿಜವೆನಿಸುತ್ತವೆ । ಆದರೆ ತಮ್ಮ ಕೃಪಾಶೀರ್ವಾದವಿದ್ದರೆ ಎಲ್ಲ ಅಡೆತಡೆಗಳು – ಆಪತ್ತಿಗಳು ದೂರವಾಗುತ್ತವೆ । ತಮ್ಮ ಕೃಪೆಯ ಮಹಿಮೆಯು ವಿಶೇಷವೇ। ಮುಗಿಲಿನಿಂದ ಬಿದ್ದ ನೀರಿಗೆ ಹಣಕೊಡುವದಿಲ್ಲ। ಮೋಡಗಳ ಇಚ್ಛೆಯಿದ್ದರೆ, ಎಲ್ಲ ನದಿ, ಹಳ್ಳ, ಬಾವಿಗಳು ನೀರಿನಿಂದ ತುಂಬುತ್ತವೆ। ಅಷ್ಟೇ ಅಲ್ಲದೇ ಕಲ್ಲಿನಿಂದಲೂ ನೀರು ಬರುತ್ತದೆ। ಇಂತಹ ಕೃಪಾಸಾಗರರು ತಾವು। ಹಸಿದ ಹಾಗೂ ಬಾಯಾರಿಕೆಯಿಂದ ಪೀಡಿತ ಈ ದಾಸಗಣು ತಮ್ಮ ಕಡೆ ಕಣ್ಣಿಟ್ಟು ಕುಳಿತಿದ್ದಾನೆ। ಭಗವಂತ, ಕೃಪೆಮಾಡಿ ಅವನ ಬಾಯಿಯಲ್ಲಿ ಕೊನೆ ಪಕ್ಷ ಒಂದು ತುತ್ತನ್ನು ಹಾಕಿರಿ । ಒಂದು ತುತ್ತಿನಿಂದ ನಾನು ಸಂತುಷ್ಟನಾಗುವೆನು । ಅದರಲ್ಲಿಯೇ ನನಗೆ ಎಲ್ಲವೂ ಸಿಗುವದು। ಏಕೆಂದರೆ ಅಮೃತದ ಒಂದು ಗುಟುಕಿನಿಂದ ಭವ–ಬಂಧನದಿಂದ ಮುಕ್ತಿ ದೊರಕುವದು। ಇರಲಿ, ಹಿಂದಿನ ಆಧ್ಯಾಯದಲ್ಲಿ, ಶೇಗಾಂವಿನಲ್ಲಿಯ ದೇಶಮುಖ ಹಾಗೂ ಪಾಟೀಲನ ನಡುವೆ ನಡೆದ ಜಗಳಗಳ ಬಗ್ಗೆ ವಾಚಕನಿಗೆ ಹೇಳಲಾಗಿದೆ । ಎಲ್ಲಿ ಈ ತರಹದ ಜಗಳಗಳು ನಡೆಯುವವೊ, ಅಲ್ಲಿ ಎರಡೂ ಪಕ್ಷಗಳ ಸುಖ ಶಾಂತಿಯು ನಾಶವಾಗುವದು । ಕ್ಷಯ ರೋಗವು ಶರೀರವನ್ನು, ಹಾಗೂ ಅಂತಃಕಲಹ ಸಮಾಜವನ್ನು ಯಮಸದನಕ್ಕೆ ಅಟ್ಟುತ್ತದೆ।

ಆಗ ಬಾಹ್ಯ ಪ್ರಯತ್ನಗಳಿಗೆ ಯಶಸ್ಸು ದೊರಕುವದಿಲ್ಲ । ಖಂಡು ಪಾಟೀಲನು ಮರ್ಯಾ ಹೊಲೆಯನಿಗೆ ಕೆಲಸ ಮಾಡಲು ಹೇಳಿದನು। ಆದರೆ ಅವನು ಮಾತನ್ನು ಕೇಳಲಿಲ್ಲ। ಪಾಟೀಲನು ಊರಿನ ಅಧಿಕಾರಿ ಆಗಿದ್ದನು। ಅವನಿಗೆ ಎಲ್ಲ ಜನರಿಗೆ ಜೊತೆಗೆ ಕೆಲಸವಿರುತ್ತಿತ್ತು। ಮರ್ಯಾ ಹೊಲೆಯನು ಕೆಲಸ ಮಾಡಲು ಒಪ್ಪದಿರಲು, ಸಿಡುಕು ಸ್ವಭಾವದ ಖಂಡು ಪಾಟೀಲನು ಕೆಂಡದಂತಾದನು । ಮರ್ಯಾ ಹೊಲೆಯನು ದೇಶಮುಖನ ಪಕ್ಷದಲ್ಲಿರುವದರಿಂದ, ಪಾಟೀಲನ ಕೆಲಸ ಮಾಡಲು ಹಿಂದೆ ಮುಂದೆ ನೋಡುತ್ತಿದ್ದನು। ಪಾಟೀಲನು ನೀನು ನಡೆಯುವದು ಒಳ್ಳೆಯದಲ್ಲ ಎಂದನು। ಬಡವರು, ದೊಡ್ಡವರ ಮುಂದೆ ಕಣ್ಣೆತ್ತಿ ನೋಡಬಾರದು। ಪ್ರತಿ ಪ್ರಶ್ನೆ ಮಾಡುವ ಅಧಿಕಾರ ಪಾಟೀಲ ದೇಶಮುಖರಿಗೆ ಇರುತ್ತದೆ, ನಿನ್ನಂತಹ ಕನಿಷ್ಠನಿಗೆ ಇಲ್ಲ! ಆದರೂ ಆ ಹೊಲೆಯನು ಕೇಳಲಿಲ್ಲ। ಹೊರತು ಪಾಟೀಲನಿಗೆ ಧಿಃಕ್ಕರಿಸಿದನು। ಅವನ ವರ್ತನೆ ಪಾಟೀಲನಿಂದ ಸಹಿಸಲಾಗಲಿಲ್ಲ। ಜಗಳದ ಕಾರಣವು ಸಣ್ಣದಾಗಿತ್ತು। ಅಕೋಲಿನ ತಹಸೀಲದಾರನ ಕಚೇರಿಗೆ ಕೊಂಡು ಹೋಗಲು ಕೆಲವು ಕಾಗದ ಪತ್ರಗಳನ್ನು ಖಂಡು ಪಾಟೀಲನು ಹೊಲೆಯನಿಗೆ ಕೊಡುತ್ತಿದ್ದನು । ಆಗ ಹೊಲೆಯನು ನನ್ನಿಂದ ಈ ಕೆಲಸವಾಗುವದಿಲ್ಲ ಎಂದನು। ನಾನು ದೇಶಮುಖರ ಆಶ್ರಿತನು। ನಿಮಗೆ ಕೆಲಸ ಕೊಡಲು ಏನೂ ಅಧಿಕಾರವಿಲ್ಲ, ಎಷ್ಟಾದರೂ ಇಂದು ಈ ಕೆಲಸ ನಾನು ಮಾಡಲಾರೆ । ನೀನು ನುಡಿಯುವದು ಹೋಳಿ ಹುಣ್ಣಿಮೆಯ ಗದ್ದಲದಂತೆ। ಜೊತೆಗೆ ಅವನು ಬೊಬ್ಬೆ ಹೊಡೆಯುವಂತೆ ಸನ್ನೆ ಮಾಡಿದನು। ಹೊಲೆಯನ ಮಾತು ಹಾಗೂ ಕೃತಿಯನ್ನು ನೋಡಿ ಸಿಟ್ಟಿನಿಂದ ಪಾಟೀಲನು ಕೈಯಲ್ಲಿದ್ದ ಕಟ್ಟಿಗೆಯಿಂದ ಆ ಹೊಲೆಯನ ಮೇಲೆ ಪ್ರಹಾರ ಮಾಡಿದನು । ಆ ಏಟಿನಿಂದ ಹೊಲೆಯನ ಕೈ ಮುರಿಯಿತು ಹಾಗೂ ಅವನು ಎಚ್ಚರ ತಪ್ಪಿದನು । ಆ ನಂತರ ಆ ಕೆಲಸವನ್ನು ಬೇರೆ ಹೊಲೆಯನು ಮಾಡಿದನು। ಇತ್ತ ಕಡೆ ನಡೆದ ಕಥೆಯನ್ನು ಕೇಳಿರಿ। ಎಚ್ಚರ ತಪ್ಪಿ ಬಿದ್ದ ಹೊಲೆಯನನ್ನು ಅವನ ಸಂಬಂಧಿಗಳು ದೇಶಮುಖನ ಸದನಕ್ಕೆ ತಲುಪಿಸಿದರು । ಹೊಲೆಯನ ಮುರಿದ ಕೈಯನ್ನು ನೋಡಿ ದೇಶಮುಖನು ಆನಂದಿತನಾದನು । ಅವನು ಈಗ ನಡೆದು ಬಂದ ಸಂಧಿಯ ಪೂರ್ಣ ಲಾಭ ಪಡೆಯುವದಾಗಿ ಯೋಚಿಸಿದನು । ದೇಶಮುಖನಿಗೆ ಜಗಳಕ್ಕಾಗಿ ಒಂದು ಒಳ್ಳೆಯ ಸಂಧಿಯ ದೊರಕಿತು । ದೇಶಮುಖರನು, ಹೊಲೆಯನಿಗೆ ಪೋಲಿಸ್ ಸ್ಟೇಷನ್‌ಗೆ ಕೊಂಡು ಹೋಗಿ ಸುಳ್ಳು ರಿಪೋರ್ಟ್ ಬರೆಸಿದನು। ಎರಡು ಗುಂಪುಗಳ ನಡುವೆ ಜಗಳವಿದ್ದರೆ ಘಟನೆಗಳು ವಿಕೋಪಕ್ಕೆ ಹೋಗುವವು। ಹೊಲೆಯನ ಫಿರ್ಯಾದಿಯ ಆಧಾರದ ಮೇಲೆ ಪಾಟೀಲನಿಗೆ





ಹಿಡಿದು ತರುವ ಆಜ್ಞೆಯನ್ನು ಮಾಡಲಾಯಿತು । ಈ ಸಮಾಚಾರವು ಶೇಗಾಂವಿಯಲ್ಲಿ ಹಬ್ಬಿತು । ಜನರು ಖಂಡು ಪಾಟೀಲನಿಗೆ ಬೇಡಿ ಹಾಕುವರು ಎಂದು ನುಡಿಯ ತೊಡಗಿದರು । ಖಂಡು ಪಾಟೀಲನಿಗೆ ಸುದ್ದಿ ತಿಳಿದು ಹೆದರಿಕೆಯಾಯಿತು। ಅವನು ಚಿಂತಾಕ್ರಾಂತನಾದನು। ಅವನು ಮನಸ್ಸಿನಲ್ಲಿ, ನಾನು ಇಲ್ಲಿಯವರೆಗೆ ಶೇಗಾಂವಿಯಲ್ಲಿ ಸಿಂಹನಂತೆ ಇದ್ದೆ, ಈಗ ಬೇಡಿ ಬೀಳುವ ಸ್ಥಿತಿ ಉಂಟಾಗಿದೆ ಎಂದು ವಿಚಾರ ಬಂದಿತು । ಒಬ್ಬ ಪ್ರತಿಷ್ಠಿತ ವ್ಯಕ್ತಿಗೆ ಅಪಮಾನ ಮೃತ್ಯುಗಿಂತ ಬಲು ಭಯಂಕರ । ಎಲ್ಲ ತಮ್ಮಂದಿರು ಹೆದರಿದರು । ಯಾರಿಗೂ ಯಾವ ಉಪಾಯವೂ ಹೊಳೆಯಲಿಲ್ಲ। ಖಂಡು ನಿರಾಶನಾದನು। ಅವನಿಗೆ ಮಹಾರಾಜರ ನೆನಪು ಬಂದಿತು। ಮಹಾರಾಜರೇ ಏನಾದರೂ ಉಪಾಯ ಹೇಳಬಲ್ಲರು। ಏಕೆಂದರೆ ಇಡೀ ವಿದರ್ಭ ಪ್ರಾಂತದಲ್ಲಿ ಮಹಾರಾಜರನ್ನು ಬಿಟ್ಟು ಬೇರೆ ಯಾರಿಲ್ಲ। ಲೌಕಿಕ ಪ್ರಯತ್ನಗಳನ್ನು ಮಾಡಲು ಅವನ ತಮ್ಮಂದಿರು ಅಕೋಲಿಗೆ ಹೋದರು। ಮತ್ತು ರಾತ್ರಿಯ ಸಮಯ ಪಾಟೀಲನು ಮಹಾರಾಜರ ಬಳಿ ತಲುಪಿದನು। ಮಹಾರಾಜರಿಗೆ ಪ್ರಣಾ ಮಾಡಿ ನಮ್ರತೆಯಿಂದ ನುಡಿದನು, ಮಹಾರಾಜ ನನ್ನ ಮೇಲೆ ಸಂಕಟವು ಬಂದಿದೆ । ಶಾಸನದ ಕೆಲಸವನ್ನು ಮಾಡಲು ನಿರಾಕರಿಸಿದ್ದರಿಂದ ನಾನು ಮರ್ಯಾ ಹೊಲೆಯನಿಗೆ ಕಟ್ಟಿಗೆಯಿಂದ ಹೊಡೆದೆ ಮತ್ತು ಅವನ ಕೈ ಮುರಿಯಿತು । ಇದರ ಪರಿಣಾಮ ಸ್ವರೂಪ ನನ್ನ ವೈರಿ ದೇಶಮುಖನು ಲಾಭ ಪಡೆದನು। ನಾಳೆ ನಾನು ಬಂದಿಯಾಗುವೆನು। ಮಹಾರಾಜ, ನನ್ನ ಪ್ರತಿಷ್ಠೆ ತಮ್ಮ ಕೈಯಲ್ಲಿದೆ। ತಮ್ಮ ಹೊರತ ನನ್ನ ರಕ್ಷಣೆ ಯಾರಿಂದ ಸಾಧ್ಯ ? ನಾಳೆ ರಾಜದೂತರು ನನಗೆ ಕೈಬೇಡಿ ಹಾಕಿಕೊಂಡು ಹೋಗಲು ಬರುವದಾಗಿ ಕೇಳುವೆನು। ಮಹಾರಾಜ, ಈ ಖಡ್ಗದಿಂದ ನನ್ನನ್ನು ಕೊಂದು ಬಿಡಿರಿ। ಗೃಹಸ್ಥನಿಗೆ ಅಪ್ರತಿಷ್ಠೆಯು ಮೃತ್ಯುವಿನ ಸಮಾನ। ನನ್ನ ಅಪರಾಧವು ಭಯಂಕರವಿಲ್ಲ, ಆದರೆ ಸಾಸಿವೆಯ ಪರ್ವತ ಮಾಡಿದ್ದಾರೆ। ಮಹಾರಾಜ, ನನ್ನ ಪ್ರತಿಷ್ಠೆಯ ರಕ್ಷಣೆ ತಮ್ಮ ಕೈಯಲ್ಲಿದೆ । ಅಭಿಮನ್ಯುವು ರಣಾಂಗಣದಲ್ಲಿ ವೀರ ಮರಣ ಪಡೆದಾಗ, ಅರ್ಜುನನು ಜಯದ್ರಥನ ವಧಿಸದಿದ್ದರೆ, ಚಿತೆಯಲ್ಲಿ ಭಸ್ಮನಾಗಿ ಹೋಗುವ ಪ್ರತಿಜ್ಞೆ ಮಾಡಿದನು । ಆಗ ಭಗವಂತ, ತಾವೇ ಅವನ ರಕ್ಷಣೆ ಮಾಡಿದರು । ಪ್ರಭು, ಸತಿ ದ್ರೌಪದಿಯ ರಕ್ಷಣೆಗಾಗಿ ತಾವು ಧಾವಿಸಿದಿರಿ । ನನ್ನ ಪ್ರತಿಷ್ಠೆ ರೂಪಿ ಪಾಂಚಾಲಿಯನ್ನು ಸಭೆಯಲ್ಲಿ ನಗ್ನಗೊಳಿಸಲು ಕೌರವ ರೂಪಿ ದೇಶಮುಖನು ಆತುರಿಸಿದ್ದಾನೆ। ಈಗ ಕೇವಲ ತಾವೇ ನನ್ನ ರಕ್ಷಣೆ ಮಾಡಲು ಸಮರ್ಥರು। ಪಾಟೀಲನು ಒಂದು ಕಡೆ ಮಹಾರಾಜರಲ್ಲಿ ವಿನಂತಿಸುತ್ತಿದ್ದನು ಮತ್ತು ಅವನ ಕಣ್ಣುಗಳಿಂದ ಅಶ್ರುಗಳು

ಹರಿಯುತ್ತಿದ್ದವು। ಪಾಟೀಲ ಪರಿವಾರದ ಎಲ್ಲರೂ ಶೋಕಮಗ್ನರಾಗಿದ್ದರು ಮತ್ತು ಅದರ ವರ್ಣನೆ ಅಸಾಧ್ಯ। ಖಂಡು ಪಾಟೀಲನ ಆ ಹತಾ ಸ್ಥಿತಿಯನ್ನು ನೋಡಿ ಮಹಾರಾಜರು ಅವನನ್ನು ಹೃದಯದ ಬಳಿ ಸೆಳೆದು, ಅವನ ಬೆನ್ನಿನ ಮೇಲೆ ಕೈಸವರಿ, ಸಾಂತ್ವನಗೊಳಿಸಿದರು। ನಂತರ ನುಡಿದರು, ಕೆಲಸ ಮಾಡುವವರು ಮಾತ್ರ ಸಂಕಟಗಳಿಗೆ ಎಡೆಯಾಗುತ್ತಾರೆ! ಇದರಿಂದ ಧೈರ್ಯಗುಂದಬಾರದು । ನೀನು ಚಿಂತೆ ಮಾಡಬೇಡ । ಸ್ವಾರ್ಥಿ ವೃತ್ತಿಯ ಉದಯವಾದಾಗ, ಕಠಿಣ ಪ್ರಸಂಗಗಳು ನಿರ್ಮಾಣವಾಗುತ್ತವೆ । ಸ್ವಾರ್ದಿ ವೃತ್ತಿಯು ನೀತಿಯನ್ನು ಅರಿಯದು । ಪಾಟೀಲ ಹಾಗೂ ದೇಶಮುಖರಿಬ್ಬರೂ ಒಂದೇ ಜಾತಿಯವರಾಗಿದ್ದು, ಸಂಪನ್ನರಾಗಿದ್ದು, ಕೇಲ ಪರಸ್ಪರ ವೈರದಿಂದ ಈ ಸ್ಥಿತಿಗೆ ಬಂದಿರುವದು ಅನಿಷ್ಟ ಚಿನ್ಹೆಯಾಗಿದೆ। ಕೌರವ–ಪಾಂಡವರ ನಡುವಿನ ಜಗಳವೇ ಅವರನ್ನು ರಣಾಂಗಣದ ಮೇಲೆ ಎಳೆದು ತಂದಿತು। ಆದರೂ ಪಾಂಡವರ ಪಕ್ಷಕ್ಕೆ ವಿಜಯ ದೊರಕಿತು। ಏಕೆಂದರೆ ದೇವರು ಸತ್ಯದ ಪಕ್ಷಕ್ಕೆ ಸಹಾಯ ಮಾಡವರು । ಅಸತ್ಯ ಪಕ್ಷದ ಕೌರವರನ್ನು ಭಗವಂತನು ನಾಶ ಮಾಡಿದನು । ಇಷ್ಟು ನುಡಿದು ಮಹಾರಾಜರು ಪಾಟೀಲನಿಗೆ ನಿಶ್ಚಿಂತನಾಗಿ ಮನೆಗೆ ಹೋಗಲು ಹೇಳಿದರು। ನಿನಗೆ ಬೇಡಿ ಹಾಕಲಾರರು – ದೇಶಮುಖನ ಮನಸ್ಸಿನಲ್ಲಿ ಎಷ್ಟೇ ಇಚ್ಛೆ ಇದ್ದರೂ। ಕೊನೆಗೆ ಆ ಮಾತು ನಿಜವಾಯಿತು ಮತ್ತು ಪಾಟೀಲನು ನಿರ್ದೋಷನಾಗಿ ಸಿದ್ಧವಾದನು। ಅವನ ಮೇಲೆ ಯಾವ ಕೇಸು ನಡೆಯಲಿಲ್ಲ। ಸಂತ ವಚನವು ಎಂದಿಗೂ ಸುಳ್ಳಾಗುವದಿಲ್ಲ। ಈ ಘಟನೆಯ ನಂತರ ಪಾಟೀಲ ಪರಿವಾರವು ತನುಮನದಿಂದ ಮಹಾರಾಜರ ಸೇವೆ ಆರಂಭಿಸಿದರು । ಅಮೃತದ ಸೇವನೆ ಯಾರು ಮಾಡಲಾರರು ? ಬಹಳ ಒತ್ತಾಯ ಮಾಡಿ ಖಂಡು ಪಾಟೀಲನು ಮಹಾರಾಜರನ್ನು ಮನೆಗೆ ಕೊಂಡು ಹೋದನು। ಮಹಾರಾಜರು, ಪಾಟೀಲನ ಮನೆಯಲ್ಲಿದ್ದಾಗ ಎಲ್ಲಿಂದಲೋ ಹತ್ತು–ಹದಿನೈದು ಬ್ರಾಹ್ಮಣರು ಅಲ್ಲಿ ಬಂದರು। ಅವರು, ವಿದ್ವಾನರು ಹಾಗೂ ವೇದಪಾಠಿಯಿದ್ದರೂ, ಅವರ ಮನದಲ್ಲಿ ಧನದ ಪ್ರತಿ ಮೋಹವಿತ್ತು। ಧನ ಲಾಭದ ಆಶೆಯಿಂದ ಅವರು ಪಾಟೀಲನ ಮನೆಗೆ ಬಂದಿದ್ದರು। ಆ ಸಮಯದಲ್ಲಿ ಮಹಾರಾಜರು ಕಂಬಳಿ ಹೊತ್ತು ಮಲಗಿದ್ದರು। ಅವರನ್ನು ಎಬ್ಬಿಸಲು ಆ ಬ್ರಾಹ್ಮಣರು ಜೋರಾಗಿ ವೇದ ಮಂತ್ರಗಳನ್ನು ಪಠಿಸತೊಡಗಿದರು। ತಾಳಬದ್ಧವಾಗಿ ಅವರು ಜಟಾ ಮಂತ್ರವನ್ನು ನುಡಿಯುತ್ತಿದ್ದರು । ಮಂತ್ರ ಹೇಳುವಾಗ ತಪ್ಪಾದರೆ – ಅದನ್ನು ಅವರು ಸುಧಾರಿಸಲಿಲ್ಲ । ಆಗ ಮಹಾರಾಜರು ಆಸನದ ಮೇಲೆ ಕುಳಿತು, ಆ ಬ್ರಾಹ್ಮಣರಿಗೆ ತಾವು ವೈದಿಕರು ಹೇಗೆ ಇರುವಿರಿ ? ಎಂದು ಪ್ರಶ್ನಿಸಿದರು।





ಮಂತ್ರವನ್ನು ತಪ್ಪು ನುಡಿದು ವೇದ ವಿದ್ಯೆಗೆ ಹಾನಿ ತಲುಪಿಸದಿರಿ । ಹೊಟ್ಟೆ ಹೊರೆಯಲು ವೇದ ವಿದ್ಯೆಯನ್ನು ಅವಲಂಬಿಸದಿರಿ। ಇದು ಮೋಕ್ಷವನ್ನು ದೊರಕಿಸಿ ಕೊಡುವ ಮಹಾನ್ ವಿದ್ಯೆ। ತಾವು ಹಣೆಯ ಮೇಲೆ ಇಟ್ಟ, ಗಂಧದ ತಿಲಕ ಲಜ್ಜೆ ಉಳಿಸಿರಿ । ನಂತರ ನಾನು ನುಡಿದಂತೆ, ನುಡಿಯಿರಿ ಎಂದು ಮಹಾರಾಜರು ಹೇಳಿದರು । ಹೇಳುವಾಗ ಸ್ಪಷ್ಟ ಹಾಗೂ ಸರಳ ಉಚ್ಚಾರ ಮತ್ತು ಸ್ವರದ ಕಡೆಗೆ ಲಕ್ಷ ಕೊಡಿರಿ। ಢೋಂಗಿಯಂತೆ ವೇಷ ಧರಿಸಿ ಸರಳ ಭಕ್ತರನ್ನು ಮರುಳ ಮಾಡದಿರಿ । ಬ್ರಾಹ್ಮಣರು ಯಾವ ಋಚೆಯನ್ನು ನುಡಿಯುತ್ತಿದ್ದರೋ ಅಲ್ಲಿಂದ ಮುಂದೆ ಮಹಾರಾಜರು ಮಂತ್ರವನ್ನು ಹೇಳತೊಡಹಿದರು। ಅವರ ಗಾನದಲ್ಲಿ ಯಾವ ತೊಡಕು ಇರಲಿಲ್ಲ। ಅದು ಸಾಕ್ಷಾತ್ ವಶಿಷ್ಟದೇವರೇ ಮಂತ್ರ ನುಡಿದಂತಿತ್ತು। ಮಹಾರಾಜರು ವೇದ ಋಚೆಗಳನ್ನು ನುಡಿಯುವಾಗ, ಅವರ ಶಬ್ದ ಉಚ್ಚಾರಗಳ ಶುದ್ಧತೆ ಹಾಗೂ ವಿಲಕ್ಷಣ ಸ್ಮರಣಶಕ್ತಿಯನ್ನು ನೋಡಿ, ಆ ಬ್ರಾಹ್ಮಣರು ಬೆರಗಾಗಿ ತಲೆ ಕೆಳಗೆ ಹಾಕಿ ಕುಳಿತರು । ಕಣ್ಣೆತ್ತಿ ಮಹಾರಾಜರ ಕಡೆಗೆ ನೋಡುವ ಧೈರ್ಯ ಅವರಲ್ಲಿರಲಿಲ್ಲ । ಸೂರ್ಯನ ಉದಯವಾದ ಮೇಲೆ ದೀಪಗಳ ಜಯಜಯಕಾರವನ್ನು ಯಾರು ಮಾಡುವರು ? ಅವುಗಳ ಅವಶ್ಯಕತೆ ಕತ್ತಲೆಯಾದಾಗ ಮಾತ್ರ । ಅವರು ಮನಸ್ಸಿನಲ್ಲಿಯೇ ಯೋಚಿಸತೊಡಗಿದರು – ನಾವು ಇವರಿಗೆ ಹುಚ್ಚನೆಂದು ತಿಳಿದಿದ್ದೆವು, ಆದರೆ ಇವರು ಮಹಾಜ್ಞಾನಿ! ನಾಲ್ಕೂ ವೇದಗಳು ಇವರಿಗೆ ಬರುವವು । ಇವರು ದೇವರಾಗಿರುವದರಲ್ಲಿ ಎಳ್ಳಷ್ಟೂ ಸಂದೇಹವಿಲ್ಲ । ಇವರು ಬ್ರಾಹ್ಮಣರಿರಬಹುದು। ಪರಮಹಂಸರಾಗಿರುವದರಿಂದ ಬಂಧನ ಮುಕ್ತರಾಗಿರುವರು ; ಜೀವನ ಮುಕ್ತ ಸಿದ್ಧಯೋಗಿ ಯಂತೆ ! ನಮ್ಮ ಹಿಂದಿನ ಜನ್ಮದ ಕರ್ಮವು ಒಳ್ಳೆಯದಿರುವದರಿಂದ ಇವರ ದರ್ಶನವಾಗಿದೆ। ಇವರಿಗೆ ವಾಮದೇವ ಎನ್ನುವದೇ ಉಚಿತ। ಇರಲಿ, ಮಹಾರಾಜರು ಖಂಡು ಪಾಟೀಲನಿಂದ ಬ್ರಾಹ್ಮಣರ ಸ್ವಾಗತ ಮಾಡಿಸಿ ಅವರಿಗೆ ಒಂದು ರೂಪಾಯಿ ದಕ್ಷಿಣೆಯಲ್ಲಿ ಕೊಡಿಸಿದರು । ಸಂತುಷ್ಟರಾಗಿ ಬ್ರಾಹ್ಮಣರು ಬೇರೆ ಕಡೆಗೆ ಪ್ರಯಾಣ ಮಾಡಿದರು । ಮಹಾರಾಜರ ಊರಿನ ಕಿತಾಪತಿಗಳಿಂದ ಬೇಸತ್ತಿದ್ದರು । ಹೇ ಶ್ರೋತೃಗಳೇ, ನಿಜ ಸಂತರು ಜನರು ಕಾಟದಿಂದ ಬೇಸರಗೊಳ್ಳುತ್ತಾರೆ। ಆದರೆ ನಕಲಿ ಸಂತರು ಅದನ್ನು ಭೂಷಣವೆಂದು ತಿಳಿಯುತ್ತಾರೆ। ಶೇಗಾಂವಿಯ ಉತ್ತರ ದಿಕ್ಕಿನಲ್ಲಿ ಒಂದು ಸುಂದರ ತೋಟವಿತ್ತು। ಅಲ್ಲಿ ಅನೇಕ ಗಿಡಗಳು – ಹಣ್ಣು ಹಂಪಲುಗಳು ಇದ್ದವು। ಒಂದು ಮೂಲೆಯಲ್ಲಿ ಸುಂದರ ಶಿವ–ಮಂದಿರವಿತ್ತು। ಬೇವಿನ ಮರಗಳಿಂದಾಗಿ ನೆರಳು ದಟ್ಟವಾಗಿತ್ತು। ಆ ತೋಟ ಖಂಡುವಿನ ತಮ್ಮ

ಕೃಷ್ಣಾಜಿ ಪಾಟೀಲನದಾಗಿತ್ತು। ಒಂದು ದಿನ ಆ ತೋಟಕ್ಕೆ ಬಂದು ಬೇವಿನ ಮರದಡಿಯಲ್ಲಿರುವ ಶಿವ–ಮಂದಿರದ ಕಟ್ಟೆಯ ಮೇಲೆ ಮಹಾರಾಜರು ಕುಳಿತರು। ಮಹಾರಾಜರು ಕೃಷ್ಣಾಜಿಗೆ ನನಗೆ ಕೆಲವು ದಿನ ಈ ಶಿವ–ಮಂದಿರದಲ್ಲಿರುವ ಇಚ್ಛೆಯಾಗಿದೆ ಎಂದರು । ಈ ಭೋಲೆನಾಥನು, ಕರ್ಪೂರಗೌರನು । ಅವರು ನಿನ್ನ ತೋಟದಲ್ಲಿ ಆನಂದದಿಂದ ಇರುವರು। ಆದ್ದರಿಂದಲೇ ನಾನೂ ಇಲ್ಲಿ ಕೆಲವು ದಿನ ಇರುವ ವಿಚಾರ ಮಾಡಿದ್ದೇನೆ। ನನಗೆ ಇರುವದಕ್ಕೆ ಮಂದಿರದ ಹತ್ತಿರ ನೆರಳು ಮಾಡಿಕೊಡು। ಇದನ್ನು ಕೇಳಿ ಕೃಷ್ಣಾಜಿ ಪಾಟೀಲನು ಆನಂದಿತನಾಗಿ, ಕಟ್ಟೆಯ ಮೇಲೆ ಒಂದು ಛತ್ತನ್ನು ಮಾಡಿಸಿದನು । ಮಹಾರಾಜರು ಅಲ್ಲಿರತೊಡಗಿದರು, ಮತ್ತು ಆ ತೋಟವು ಒಂದು ಕ್ಷೇತ್ರವಾಯಿತು । ರಾಜನು ಎಲ್ಲಿಯೋ ಅಲ್ಲಿಯೇ ರಾಜನಗರಿ । ಮಹಾರಾಜರ ಜೊತೆಗೆ ಸೇವೆ ಮಾಡಲು ಭಾಸ್ಕರ ಪಾಟೀಲನಿದ್ದನು । ಮತ್ತು ಎರಡನೆಯವನು ತುಕಾರಾಮ ಕೊಕಟ್ಯಾ । ಊಟದ ವ್ಯವಸ್ಥೆ ಸ್ವಯಂ ಕೃಷ್ಣಾಜಿ ಪಾಟೀಲನು ಮಾಡುತ್ತಿದ್ದನು । ಮಹಾರಾಜರು ಊಟ ಮಾಡಿದ ಮೇಲೆ ಅವನು ಪ್ರಸಾದ ಸೇವಿಸುತ್ತಿದ್ದನು । ಇರಲಿ, ಒಂದು ದಿನ ಚಮತ್ಕಾರ ವಾಯಿತು । ಆ ತೋಟದಲ್ಲಿ ಒಂದು ದಿನ ಹತ್ತಿಪ್ಪತ್ತು ಸಾಧುಗಳು ಬಂದು ತಂಗಿದರು । ಮಹಾರಾಜರ ಬಗ್ಗೆ ತಿಳಿದಿರುವದರಿಂದ, ಅವರು ಅಲ್ಲಿಗೆಯ ಹಾಸಿಗೆ ಬಿಚ್ಚಿದರು। ಸಾಧುಗಳು ಕೃಷಾಣಿಜಿಗೆ ತಾವು ತೀರ್ಥ ಯಾತ್ರೆಗಾಗಿ ಹೊರಟಿರುವದಾಗಿ ಹೇಳಿದರು । ಆಗಿರಥಿಯ ನೀರನ್ನು ಕೊಂಡು ರಾಮಶ್ವೇರಕ್ಕೆ ಹೊರಟಿರುವೆವು । ಗಂಗೋತ್ತರಿ, ಜಮುನೋತ್ತರಿ, ಕೇದಾರ, ಹಿಂಗಲಾಜ, ಗಿರನಾ, ಡಾಕೋರಾ, ಆದಿ ಪವಿತ್ರ ಕ್ಷೇತ್ರಗಳನ್ನು ನಾವು ಪದಭ್ರಮಣದಿಂದ ನೋಡಿದ್ದೇವೆ। ಬ್ರಹ್ಮಗಿರಿ ಸಾಧುವಿನ ಶಿಷ್ಯರು ನಾವು। ಗುರುದೇವರೂ ನಮ್ಮ ಜೊತೆಗೆ ಇರುವರು। ಮಹಾಸಾಧು ಬ್ರಹ್ಮಗಿರಿಯವರು ತಮ್ಮ ಮಹಿಮೆಯಿಂದ ಸ್ವಯಂ ಭಗವಂತನನ್ನು ಬಂದಿ ಮಾಡಿ ಗುಲಾಮನಾಗಿ ಮಾಡಿರುವರು। ಇಂತಹ ಶ್ರೇಷ್ಠ ಸಾಧುಗಳು ತಮ್ಮ ಭಾಗ್ಯದಿಂದ ಬಂದಿರುವರು। ನೀವು ನಮಗೆ ಶಿರಾ–ಪುರಿಯ ಭೋಜನ ಕೊಟ್ಟು ಪುಣ್ಯವನ್ನು ಪಡೆದುಕೊಳ್ಳಿರಿ। ನಾವು ಸ್ವಲ್ಪ ಗಾಂಜಾ ಸೇವಿಸುತ್ತೇವೆ, ಅದನ್ನು ತಂದು ಕೊಡು, ನಾವು ಇಲ್ಲಿ ಮೂರು ದಿನ ತಂಗಿ, ನಂತರ ಹೊರಟು ಹೋಗುವೆವು। ಪಾಟೀಲ, ನಮ್ಮ ಮೇಲೆ ಸಿಟ್ಟು ಏಕೆ ? ಇಂತಹ ಸಂಧಿ ಭಾಗ್ಯದಿಂದಲೇ ಸಿಗುತ್ತದೆ। ನಿಜ ಹೇಳಬೇಕೆಂದರೆ, ನೀನು ಒಬ್ಬ ಹುಚ್ಚ ನಗ್ನನ ಪಾಲನೆ ಪೋಷಣೆ ಮಾಡಿರುವಿ ಮತ್ತು ನಮಗೆ ಒಂದು ಊಟವನ್ನು ಕೊಡಲು ಹಿಂದೆ ಮುಂದೆ ನೋಡುತ್ತಿರುವಿ । ನೀನು ಕತ್ತೆಯ ಲಾಲನೆ–ಪಾಲನೆ ಮಾಡಿ ಆಕಳಿಗೆ





ಒದೆಯುತ್ತಿರುವಿ। ನಿನ್ನ ಈ ವರ್ತನೆ ಸರಿಯೋ, ತಪ್ಪದ್ದೋ, ಎಂಬುದನ್ನು ನೀನೆ ವಿಚಾರ ಮಾಡು। ನಾವು ವೈರಾಗ್ಯ ಸಂಪನ್ನ, ವೇದ ವಿದ್ಯೆಯಿಂದ ಭೂಷಿತ ಸಾಧುಗಳು। ನಿಮ್ಮ ಇಚ್ಛೆಯಿದ್ದರೆ, ನಮ್ಮ ಬಳಿ ಕಥೆಯನ್ನು ಕೇಳಲು ಬನ್ನಿರಿ। ಈ ಮಾತುಗಳನ್ನು ಕೇಳಿ, ಕೃಷಾಣಿಜಿಯು ನುಡಿದನು, ನಾನು ನಾಳೆ ತಮಗೆ ಶಿರಾಪುರಿ ತಿನ್ನಿಸುತ್ತೇನೆ, ಇಂದು ಜೋಳದ ರೊಟ್ಟಿಯ ಮೇಲೆ ಸಮಾಧಾನ ತಾಳಿರಿ । ಗಾಂಜಾದ ವ್ಯವಸ್ಥೆಯಾಗುವದು, ಏಕೆಂದರೆ ಭಗವಾನ ನೀಲಕಂಠರು ಸಮೀಪದಲ್ಲೇ ಇರುವರು । ಮಧ್ಯಾಹ್ನ ಸಾಧುಗಳು ರೊಟ್ಟಿ ಹಾಗೂ ಝುಣಕವನ್ನು ತಿಂದು ಹಸಿವೆ ಹಿಂಗಿಸುದರು । ಮಹಾರಾಜರ ಮುಂದೆ ಸಾಧುಗಳು ತಮ್ಮ ಬಿಡಾರ ಮಾಡಿದ್ದರು । ಅವರ ಬ್ರಹ್ಮಗಿರಿ ಎಂಬ ಮಹಂತನು ಸಂಜೆ ಭಗವತ್ ಗೀತೆಯ ಮೇಲೆ ಪ್ರವಚನ ಆರಂಭಿಸಿದನು । ಬ್ರಹ್ಮಗಿರಿಯ ಢೋಂಗಿಯಾಗಿದ್ದನು । ಸಾಧಕನಾಗಿದ್ದರೂ, ಅವನಿಗೆ ಪ್ರತೀತಿ ಇರಲಿಲ್ಲ। ಅವನ ಪ್ರವಚನ ಕೇಳಿ ನೆರೆದವರು, ಇದು ಕೇವಲ ಶಬ್ದಗಳ ಭಂಡಾರ ಇದರಲ್ಲಿ ಅನುಭವದ ಮಾತುಗಳಿಲ್ಲ। ಸ್ವಲ್ಪ ಪ್ರವಚನವನ್ನು ಕೇಳಿ ಜನರು ಎದ್ದು ಮಹಾರಾಜರ ಮುಂದೆ ಕುಳಿತರು। ಜನರು ತಮ್ಮ ತಮ್ಮಲ್ಲಿ ನುಡಿಯ ತೊಡಗಿದರು, ಅದು ಬರಿ ಶಬ್ದಗಳ ಭಂಡಾರ ಮತ್ತು ಇಲ್ಲಿ ಸಾಕ್ಷಾತ್ ಸ್ವಾನುಭವವು ಕುಳಿತಿದೆ। ಅಲ್ಲಿ ಇತಿಹಾಸ ಕೇಳಿದರೆ, ಇಲ್ಲಿ ಸತ್ಯ ಘಟನೆ ನೋಡಿದ್ದೇವೆ । ಜನರ ಈ ವರ್ತನೆಯನ್ನು ನೋಡಿ ಮಹಂತನು ಕ್ರುಧಿತನಾದನು । ಎಲ್ಲ ಸಾಧುಗಳು ಗಾಂಜಾ ಕುಡಿದು ಮೈಮರೆತಿದ್ದರು – ಅವರಿಗೆ ಸಾಧನೆಗಿಂತ, ಗಾಂಜಾ ಸರ್ವಸ್ವವಾಗಿತ್ತು। ಮಹಾರಾಜರು ಮಂಚದ ಮೇಲೆ ಕುಳಿತು ಚಿಲುಮೆಯನ್ನು ಸೇದುತ್ತಿದ್ದರು। ಚಿಲುಮೆಯನ್ನು ತುಂಬಿ ಹೊತ್ತಿಸುವ ಕೆಲಸವನ್ನು ಭಾಸ್ಕರ ಪಾಟೀಲನು ಮಾಡುತ್ತಿದ್ದನು । ಆಗ ಒಮ್ಮೆಲೆ ಒಂದು ಕಿಡಿಯು ಮಂಚದ ಮೇಲೆ ಬಿತ್ತು, ಮತ್ತು ಅದನ್ನು ಯಾರೂ ನೋಡಲಿಲ್ಲ। ಸ್ವಲ್ಪ ಸಮಯದಲ್ಲೇ, ಮಂಚವು ನಾಲ್ಕು ಕಡೆಯಿಂದ ಸುಡತೊಡಗಿತು। ಇದನ್ನು ನೋಡಿ ಭಾಸ್ಕರನು ಮಹಾರಾಜರಿಗೆ ಮಂಚದಿಂದ ಕಳಗಿಳಿಯಲು ಬಿನ್ನವಿಸಿದನು । ಮಂಚವು ಸಾಗದ ಕಟ್ಟಿಗೆಯಿಂದ ಮಾಡಲಾಗಿದೆ । ಕಟ್ಟಿಗೆಯು ನೀರನ್ನು ಸುರಿಯದೆ ಆರುವದಿಲ್ಲ। ಆಗ ಮಹಾರಾಜರು ಬೆಂಕಿಯನ್ನು ಆರಿಸುವ ಪ್ರಯತ್ನ ಮಾಡಬೇಡಿರಿ। ಆದ್ದರಿಂದ ನೀರನ್ನು ತರಬೇಡಿರಿ। ಮಹಂತರ ಕಡೆಗೆ ಸನ್ನೆ ಮಾಡಿ ಮಹಾರಾಜರು ನುಡಿದರು, ಬ್ರಹ್ಮಗಿರಿ ಮಹಾರಾಜ, ಈ ಮಂಚದ ಮೇಲೆ ಕುಳಿತುಕೊಳ್ಳಿರಿ। ತಾವು ಭಗವತ್ ಗೀತೆಯನ್ನು ಅರಿತಿರುವಿರಿ। ಜನರಿಗೆ ತಾವು ಹೇಳಿದ್ದನ್ನು, ಸಿದ್ಧ ಮಾಡಿ ತೋರಿಸುವ ಸದವಕಾಶ ಈಗ ಬಂದಿದೆ। ಬ್ರಹ್ಮನಿಗೆ ಅಗ್ನಿಯು ಸುಡುವದಿಲ್ಲ

ಎಂಬುದನ್ನು ಸಿದ್ಧ ಮಾಡಿ ತೋರಿಸಿರಿ । 'ನೈನಂ ಛಿಂದಂತಿ । ಎಂಬ ಶ್ಲೋಕದ ಮೇಲೆ ತಾವು ಒಂದು ಘಂಟೆ ಪ್ರವಚನ ಮಾಡಿರುವಿರಿ, ಮತ್ತು ಈಗ ಸುಡುವ ಮಂಚದ ಮೇಲೆ ಕುಳಿತುಕೊಳ್ಳಲು ಭಯವೇಕೆ ? ಮಹಾರಾಜರು, ಭಾಸ್ಕರನಿಗೆ ಆ ಬ್ರಹ್ಮಗಿರಿಯನ್ನು ಹಿಡಿದು ತಂದು ಮಂಚದ ಮೇಲೆ ಕೂಡ್ರಿಸಲು ಆಜ್ಞಾಪಿಸಿದರು । ಆಜ್ಞೆಯನ್ನು ಕೇಳಿ ಭಾಸ್ಕರನು ಮಹಂತನನ್ನು ಹಿಡಿದು, ಸುಡುವ ಮಂಚದ ಕಡೆಗೆ ಕೊಂಡು ಹೊರಟನು । ಭಾಸ್ಕರನ ಬಲಿಷ್ಠ ಶರೀರದ ಮುಂದೆ ಮಹಂತನು ನೊಣದಂತೆ ಕಾಣುತ್ತಿದ್ದನು । ಮಹಂತನು ನೋಡಿದರೆ ನಾಲ್ಕೂ ದಿಕ್ಕಿನಿಂದ ಮಂಚವು ಸುಡುತ್ತಿದ್ದೆ ಮತ್ತು ಮಹಾರಾಜರು ನಿಜ ಆನಂದದಲ್ಲಿ ಮುಳಿಗಿದ್ದಾರೆ । ಶ್ರೀ ವ್ಯಾಸರು ಪುರಾಣದಲ್ಲಿ ಕಯಾಧು ಪುತ್ರ ಪ್ರಲ್ಹಾದನಿಗೆ ಸುಡುವ ಎಣ್ಣೆಯಲ್ಲಿ ಕೂಡ್ರಿಸಿರುವ ವರ್ಣನೆ ಮಾಡಿದ್ದಾರೆ । ಪುರಾಣದಲ್ಲಿ ಬರೆದ ಘಟನೆಯನ್ನು ಮಹಾರಾಜರು ಕೃಷ್ಣಾಜಿಯ ತೋಟದಲ್ಲಿ ಜನರಿಗೆ ಪ್ರತ್ಯಕ್ಷವಾಗಿ ತೋರಿಸಿದರು । ಬೆದರಿದ ಬ್ರಹ್ಮಗಿರಿಯು ಭಾಸ್ಕರನಿಗೆ ಮಂಚದ ಬಳಿ ಕೊಂಡು ಹೋಗದಂತೆ ಬಿನ್ನವಿಸಿದನು । ನಾನು ಮಹಾರಾಜರ ಮಹಿಮೆಯನ್ನು ಅರಿತಿರಲಿಲ್ಲ । ಮಹಂತನ ಮಾತನ್ನು ಕೇಳದೇ ಭಾಸ್ಕರನು ಅವನು ಮಹಾರಾಜರ ಹತ್ತಿರ ತಂದು ನಿಲ್ಲಿಸಿದನು । "ನೈನಂ ದಹತಿ ಪಾವಕಃ" ಎಂಬುದನ್ನು ನಿಜಮಾಡಿ ತೋರಿಸು ಎಂದು ಮಹಾರಾಜರು ಆಜ್ಞಾಪಿಸಿದಾಗ ಮಹಂತನು ಬೆದರಿದನು । ಬ್ರಹ್ಮಗಿರಿ ಬೆದರಿದ ಧ್ವನಿಯಿಂದ ನುಡಿದನು, ನಾನು ಸ್ವಾರ್ಥಿ ಸಂತನು । ಶಿರಾ–ಪುರಿಯ ಆಶೆಯಿಂದ ಸಾಧು ಆಗಿರುವೆನು । ನನ್ನಿಂದ ಆದ ಅನಂತ ಅಪರಾಧಗಳನ್ನು ತಾವು ಕ್ಷಮಿಸಬೇಕು ಎಂದು ಯಾಚಿಸುತ್ತಿದ್ದೇನೆ । ನಾನು ಭಗವತ್ ಗೀತೆಯನ್ನು ಕೇವಲ ನುಡಿದೆನು ಆದರೆ ಅದರಲ್ಲಿರುವ ಚಿರಂತನ ಸತ್ಯವನ್ನು ಅರಿಯುವ ಪ್ರಯತ್ನ ಮಾಡಲಿಲ್ಲ । ನಾನು ತಮಗೆ ಹುಚ್ಚನೆಂದು ತಿಳಿದೆ। ಆದರೆ ಈಗ ನಿಮ್ಮ ಅಧಿಕಾರದ ಪರಿಚಯವಾಗಿದೆ । ನನಗೆ ಈಗ ಪಶ್ಚಾತ್ತಾಪವಾಗಿದೆ । ನಾನು ತಮ್ಮಲ್ಲಿ ಕ್ಷಮೆ ಯಾಚಿಸುತ್ತೇನೆ । ಶರಣು ಬಂದವನಿಗೆ ಹೇ ಪ್ರಭು ಅಭಯ ನೀಡಿರಿ । ಶೇಗಾಂವಿನ ಜನರು ಮಹಾರಾಜರಿಗೆ ಪ್ರಾರ್ಥಿಸಿದರು, 'ಮಹಾರಾಜ ಅಗ್ನಿಯಿಂದ ತಮಗೆ ಯಾವ ಭಯವಿಲ್ಲ । ಆದರೆ ನಮಗೆ ಭಯವಾಗುವದರಿಂದ, ತಾವು ಮಂಚದಿಂದ ಕೆಳಗಿಳಿಯಿರಿ । ಸಾಧುವು ಮುಖ ಮರೆಯಿಸಿ ಕುಳಿತಿದ್ದನು । ಜನರ ಪ್ರಾರ್ಥನೆಯನ್ನು ಕೇಳಿ ಮಹಾರಾಜರು ಕೆಳಗೆ ಇಳಿದರು । ಮತ್ತು ಮಂಚವು ಮುರಿಯಿತು । ಒಂದು ಕ್ಷಣದ ವಿಲಂಬವಿರಲಿಲ್ಲ । ಈಗ ಮಂಚವು ಸಂಪೂರ್ಣ ಸುಟ್ಟು ಹೋಗಿತ್ತು । ಜನರು ಅದರ ಉಳಿದ ಭಾಗವನ್ನು ನೀರಿನಿಂದ ಆರಿಸಿದರು । ಬ್ರಹ್ಮಗಿರಿಯು







ಮಹಾರಾಜರ ಮುಂದೆ ನತಮಸ್ತಕನಾದನು । ಅವನ ಅಹಂಕಾರವು ಪುಡಿ ಪುಡಿಯಾಯಿತ್ತು । ಗುರುವಿನ ಸ್ಪರ್ಶವಾದೊಡನೆ ಕೊಳಚೆ ಉಳಿಯುವದು ಸಾಧ್ಯವೆ । ಮಧ್ಯರಾತ್ರಿಯ ಏಕಾಂತದಲ್ಲಿ ಮಹಾರಾಜರು ಬ್ರಹ್ಮಗಿರಿಗೆ ಉಪದೇಶಿಸಿದರು । ಇಂದಿನಿಂದ ಜನರಿಗೆ ಮೋಸ ಮಾಡಬೇಡ । ಯಾವನು ಶರೀರದಲ್ಲಿ ಭಸ್ಮ ಹಚ್ಚಿಕೊಳ್ಳುವನೋ, ಅವನು ಬಿರುದುಗಳಿಂದ ದೂರವಿರಬೇಕು । ಸ್ವಯಂ ಅನುಭವಿವವಿಲ್ಲದೆ, ನಿರರ್ಥಕ ಮಾತುಗಳನ್ನು ಆಡಬೇಡ । ಈ ದಿನ ಶಬ್ದ ಪಾಂಡಿತ್ಯಕ್ಕೆ ಮಹತ್ವ ಕೊಡಲಾಗುತ್ತಿದೆ । ಇದರಿಂದ ನಮ್ಮ ಸಂಸ್ಕೃತಿಯ ಅಧಃಪತನವಾಗುತ್ತಿದೆ । ಮಚ್ಛಿಂದ್ರನಾಥ ಜಾಲಂದರ, ಗೋರಖ, ಗಹಿನಿ ಹಾಗೂ ಜ್ಞಾನೇಶ್ವರ ಮಹಾರಾಜರ ಮಹಿಮೆಯನ್ನು ಯಾರು ತಿಳಿಯರು ? ಶ್ರೀ ಶಂಕರಾಚಾರ್ಯರು ಸ್ವಾನುಭವದ ಯಂತಿ ಎನಿಸಿದ್ದರು । ಪ್ರಪಂಚ ಮಾಡಿದರೂ ಏಕನಾಥರು ಬ್ರಹ್ಮಸ್ಥಿತಿಯ ಅನುಭವ ಪಡೆದಿದ್ದರು । ಸಮರ್ಥ ರಾಮದಾಸ ಸ್ವಾಮಿಗಳು ಬ್ರಹ್ಮಚಾರಿಯಾಗಿದ್ದು ಬ್ರಹ್ಮ ಸಾಕ್ಷಾತ್ಕಾರಿಯಾಗಿದ್ದರು । ಇಂತಹ ಅನೇಕ ಸಂತರು ಈ ಭೂಮಿಯ ಮೇಲೆ ಹುಟ್ಟಿರುವರು । ಅವರ ಅಮೂಲ್ಯ ಚರಿತ್ರೆಯನ್ನು ಎಲ್ಲಿಯವರೆಗೆ ಹಾಡಬಹುದು ? ಶಿರಾ–ಪುರಿ ತಿಂದು ಈ ಭೂಮಿಯ ಮೇಲೆ ವ್ಯರ್ಥ ಜೀವನ ಕಳೆಯದಿರಿ । ಕೈಯಲ್ಲಿ ಏನೂ ಉಳಿಯದೆ ಜೀವನವು ವ್ಯರ್ಥವಾಗುವದು । ಮಹಾರಾಜರ ಉಪದೇಶ ಕೇಳಿ ಬ್ರಹ್ಮಗಿರಿಯಲ್ಲಿ ನಿಜವಾಗಿ ವಿರಕ್ತಿ ಉಂಟಾಯಿತು । ಮುಂಜಾನೆ ಯಾವ ಶಿಷ್ಯನಿಗೆ ತಿಳಿಸದೆ ಬ್ರಹ್ಮಗಿರಿಯು ಹೊರಬಿದ್ದನು। ಈ ಮಾತು ವಾಯು ವೇಗದಿಂದ ಹಬ್ಬಿತು । ಪ್ರತಿಯೊಬ್ಬನು, ತೋಟದಲ್ಲಿ ಸುಟ್ಟಿರುವ ಮಂಚವನ್ನು ನೋಡಲು ಓಡತೊಡಗಿದನು । ಈ ದಾಸಗಣು ವಿರಚಿತ ಶ್ರೀ ಗಜಾನನ ವಿಜಯವೆಂಬ ಗ್ರಂಥವು ಭಾವಿಕರಿಗೆ ಭವಸಾಗರವನ್ನು ದಾಟಿ ಹೋಗಲು ಸಹಾಯಕವಾಗುವದು ಎಂದು ದಾಸಗಣುವಿನ ಇಚ್ಛೆಯಿದೆ ।

॥ ಶುಭಂ ಭವತು ॥ ಶ್ರೀ ಹರಿಹರಾರ್ಪಣಮಸ್ತು ॥

॥ ಇಲ್ಲಿಗೆ ಎಂಟನೆಯ ಅಧ್ಯಾಯವು ಮುಗಿಯಿತು ॥





ಶ್ರೀ ಗಜಾನನ ಮಹಾರಾಜರು ಕುದುರೆಯ ನಾಲ್ಕು ಕಾಲುಗಳ ಮಧ್ಯೆ ಮಲಗಿದ್ದಾರೆ. ಇದರಿಂದಾಗಿ ಕುದುರೆ ಶಾಂತವಾಯಿತು.

## ॥ ಅಧ್ಯಾಯ ೯ ॥

ಶ್ರೀ ಗಣೇಶಾಯನಮಃ । ಹೇ ಸಗುಣ ಸ್ವರೂಪ ರುಕ್ಮಿಣಿಪತಿ, ಹೇ ಚಂದ್ರಭಾಗಾತಟವಿಹಾರ, ಶ್ರೀಸಂತವರದ ಶಾರಂಗಧರ । ಪತಿತಪಾವನ ದಯಾನಿಧಿ । ಚಿಕ್ಕವರಿಲ್ಲದೆ ದೊಡ್ಡವರ ದೊಡ್ಡಿಸ್ತನಕ್ಕೆ ಬೆಲೆಯೇನು । ಜಗತ್ತಿನಲ್ಲಿ ಹೀನ ದೀನ ಪಾಪಿಗಳು ಇರುವದರಿಂದ ಭಗವಂತನನ್ನು ಹೊಗಳಲಾಗುತ್ತದೆ । ನಾವು ಪಾಪಿಗಳು ಆದ್ದರಿಂದ ಪಾವನಕರ್ತಾ ರುಕ್ಮಿಣಿಕಾಂತ । ಹೇ ಪ್ರಬು ನಮ್ಮನ್ನು ಮರೆಯದಿರಿ ಎಂದು ಬಿನ್ನವಿಸುತ್ತೇವೆ । ಕಬ್ಬಿಣಕ್ಕೆ ಅಲ್ಪ ಬೆಲೆಯಿದೆ । ಇಲ್ಲದಿದ್ದರೆ ಪಾರಸಕ್ಕೆ ಏನು ಮಹತ್ವ! ಹಳ್ಳದ ನೀರನ್ನು ತನ್ನಲ್ಲಿ ಸೇರಿಸಿಕೊಳ್ಳುವದರಿಂದಲೇ ಗೋದಾವರಿಯು ತೀರ್ಥ ಸ್ವರೂಪವಾಗಿದೆ । ಹೇ ಮಾಧವ, ಈ ಮಾತುಗಳನ್ನು ಜ್ಞಾಪಕದಲ್ಲಿಟ್ಟು, ಈ ದಾಸಗಣುವು ಮುಳುಗದಂತೆ ನೋಡಿಕೊಳ್ಳಿರಿ । ಇರಲಿ, ಗೋವಿಂದಬುವಾ ಟಾಕಳೀಕರರು ಹರಿದಾಸರಿದ್ದರಿಂದ ಕೀರ್ತನೆಯನ್ನು ಮಾಡಲು ಶೇಗಾಂವಿಗೆ ಬಂದರು । ಅಲ್ಲಿ ಒಂದು ಪುರಾತನ ಶಿವಮಂದಿರವಿತ್ತು। ಅದರ ಜೀರ್ಣೋದ್ದಾರವನ್ನು ಮೋಟೆ ಎಂಬ ಸಾಹುಕಾರನ ಮಾಡಿದ್ದನು ಇತ್ತೀಚೆಗೆ ಧನಿಕರಿಗೆ ದೇವಾಲಯಗಳ ಬಗ್ಗೆ ದ್ವೇಷ ಉಂಟಾಗಿದೆ । ಆದರೆ ಮೋಟೆ ಸಾಹುಕಾರನು ಅಪವಾದ। ಧನಿಕನಾಗಿದ್ದರೂ ಅವನಲ್ಲಿ ಭಕ್ತಿಯು ನೆಲೆಸಿತ್ತು। ಅವನು ಶಿವಮಂದಿರದ ಜೀರ್ಣೋದ್ಧಾರ ಮಾಡಿದನು । ಆದ್ದರಿಂದ ಜನರು ಅದನ್ನು ಮೋಟೆ–ಮಂದಿರ ಎಂದು ಕರೆಯುತ್ತಿದ್ದರು । ಈಗ ಮುಂದಿನ ಕಥೆಯನ್ನು ಕೇಳಿರಿ । ಆ ಮೋಟೆ ಮಂದಿರಲ್ಲಿ ಟಾಕಳಿಕರರು ತಂಗಿದ್ದರು । ಮಂದಿರದ ಮುಂದೆ ಕುದುರೆಯನ್ನು ಕಟ್ಟಿದ್ದರು । ಅವರ ಕುದುರೆ ಬಲು ತುಂಟವಾಗಿತ್ತು । ಅದು ಸೂಕ್ಕಿನಿಂದ, ಬರುಹೋಗುವವರಿಗೆ ಒದೆಯುತ್ತಿತ್ತು, ನಾಯಿಯಂತೆ ಕಡಿಯುತ್ತಿತ್ತು ಮತ್ತು ಕೆಲವ ಸಲ ಹಗ್ಗವನ್ನು ಹರಿದುಕೊಂಡು ಕಾಡಿನಲ್ಲಿ ಓಡಿ ಗೋಗುತ್ತಿತ್ತು । ಕುದುರೆಯ ಈ ದುರ್ವತನೆಯಿಂದ ಜನರು ಬೇಸತ್ತಿದ್ದರು । ಕಾಡಿನಲ್ಲಿ ಓಡಿ ಗೋಗುತ್ತಿತ್ತು। ಕುದುರೆಯ ಈ ದುವರ್ತನೆಯಿಂದ ಜನರು ಬೇಸತ್ತಿದ್ದರು । ಟಾಕಳಿಕರರು ಕುದುರೆಗಾಗಿ ಕಬ್ಬಿಣದ ಬೇಡಿಗಳನ್ನು ಹಾಗೂ ಸರಪಳಿಯನ್ನು ಮಾಡಿಸಿದ್ದರು, ಆದರೆ ಅದನ್ನು ತರಲು ಮರೆತಿದ್ದರು । ಆದ್ದರಿಂದ ಹಗ್ಗದಿಂದ ಅದನ್ನು ಒಂದು ಮರಕ್ಕೆ ಕಟ್ಟಿ ಅವರು ಮಂದಿತದಲ್ಲಿ ಮಲಗಿದರು । ರಾತ್ರಿಯ ಎರಡು ಘಂಟೆಯಾಗಿತ್ತು, ಗೂಗೆಯು ಕೂಗುತ್ತಿತ್ತು, ಮರದ ಮೇಲೆ ಕುಳಿತು ಪಿಂಗಳ ಎಂಬ

ಜಾತಿಯ ಗೂಬೆಗಳು ಒದರುತ್ತಿದ್ದವು, ತೊಗಲುಬಾವಲಿಗಳು ತಮ್ಮ ಭಕ್ಷ್ಯವನ್ನು ಹುಡುಕುತ್ತಿದ್ದವು, ಎಲ್ಲೆಡೆಗೆ ಕತ್ತಲೆಯ ಸಾಮ್ರಾಜ್ಯವಿತ್ತು। ಎಲ್ಲೆಡೆಗೆ ಶಾಂತತೆ ಇತ್ತು ಮತ್ತು ಎಲ್ಲ ಮನೆಗಳ ಬಾಗಿಲುಗಳು ಮುಚ್ಚಿದ್ದವು । ರಸ್ತೆಯ ಮೇಲೆ ಯಾರೂ ಇರಲಿಲ್ಲ। ಆ ಸಮಯದಲ್ಲಿ ಕುದುರೆಯನ್ನು ಕಟ್ಟಿದ ಸ್ಥಳಕ್ಕೆ ಒಮ್ಮೆಲೇ ಮಹಾರಾಜರು ಬಂದು ತಲುಪಿದರು। ಉಡಾಳರನ್ನು, ಪುಂಡರನ್ನು ಸರಿಹಾದಿಗೆ ತರಲು ಈಶ್ವರನ ಆಜ್ಞೆಯಂತೆ ಸಾಧು ಮಹಾರಾಜರ ಜನ್ಮವಾಗುತ್ತದೆ । ರೋಗದ ನಿವಾರಣೆಯಾಗಲೆಂದೇ ಔಷಧಿಯ ಉಪಯೋಗ ಮಾಡುತ್ತಾರೆ । ಅದೇ ರೀತಿ ಸಾಧುಸಂತರು ಪುಂಡರಿಗೆ ಔಷಧಿ ಇದ್ದಂತೆ। ರಾತ್ರಿ ಸಮಯ ಮಹಾರಾಜರು ಕುದುರೆಯ ಬಳಿ ಬಂದು ಅದರ ಕಾಲುಗಳ ನಡುವೆ ಆನಂದದಿಂದ ಮಲಗಿದರು। ಮುಖದಿಂದ 'ಗಣ ಗಣ ಗಣಾತ ಬೋಲೆ' ಎಂಬ ಅವರ ಮಂತ್ರವನ್ನು ಜಪಿಸುತ್ತಿದ್ದರು। ಈ ಸಾಂಕೇತಿಕ ಭಜನದ ಅರ್ಥವನ್ನು ಯಾರು ಅರಿಯಬಲ್ಲರು। ಈ ಸೂತ್ರರೂಪದ ಭಜನೆಯ ಅರ್ಥವು ಹೀಗೆ ಇದೆ। 'ಗಣಿ' ಎಂದರೆ ಎಣಿಸುವದು। 'ಗಣ' ಎಂದರೆ ಬ್ರಹ್ಮನಿಗಿಂತ ಭಿನ್ನವಲ್ಲದ ಜೀವಾತ್ಮ। ಇದನ್ನು ತಿಳಿಸಲೇಂದೇ 'ಗಣಾತ್' ಎಂಬ ಶಬ್ದ ಉಪಯೋಗ ಮಾಡಿರಬಹುದು। 'ಬೋತೆ' ಇದು 'ಬಾತೇ' (ಹಿಂದಿ) ಎಂಬ ಶಬ್ದದ ಅಪಭ್ರಂಶವಿರಬಹುದು। 'ಬಾತೆ' ಎಂಬುದೇ ಶಬ್ದವಾಗಿರಬಹುದು । 'ಬಾ' ಈ ಅಕ್ಷರದಿಂದ ಮನಸ್ಸನ್ನೇ ಸಂಬೋಧಿಸಿದಂತಿದೆ । "ತೇ" (ತತ್) ಸರ್ವನಾಮದ ಸಂಜ್ಞಾರ್ಥವಾಗಿ ಬಂದಿದೆ । ನೀನು ಜೀವವನ್ನು ಬ್ರಹ್ಮವೆಂದು, ಮನಸ್ಸನ್ನು ಅದೇ ರೀತಿ ತಿಳಿ। 'ಗಿಣ ಗಿಣ ಗಿಣಾತ ಬೋತೆ' । ಕೆಲವರು 'ಗಣಿ ಗಣ ಗಣಾತ ಬೋತೆ' ಎಂದು ಕೂಡಾ ತಿಳಿಯುವರು । ಈ ಭಜನದ ವಿಷಯದಲ್ಲಿ ಶೇಗಾಂವಿಯಲ್ಲಿ ಎರಡು ವಿಭಿನ್ನ ವಿಚಾರಸರಣಿಗಳಿವೆ। ಇದರಲ್ಲಿ ಸರಿಯಾವದು, ತಪ್ಪು ಯಾವದು ಎಂದು ವಾದ ಮಾಡುವದು ನಿರರ್ಥಕ । ನಮಗೆ ಕೇವಲ ಈಗ ನಡೆದಿರುವ ಪ್ರಸಂಗದ ಬಗ್ಗೆ ವಿಚಾರ । ಮಹಾರಾಜರು ಕುದುರೆಯ ಕಾಲಗಳ ನಡುವೆ ಮಲಗಿದ್ದರು । 'ಗಣಿ ಗಣ ಗಣಾತ ಬೋತೆ' ಎಂಬ ಭಜನವನ್ನು ಆನಂದದಿಂದ ನುಡಿಯುತ್ತಿದ್ದರು। ಅದು ಭಜನರೂಪಿ ಬೇಡಿಯಿಂದ ಕುದುರೆಯನ್ನು ಕಟ್ಟಿ ಇಟ್ಟಂತೆ ಇತ್ತು। ಕುದುರೆಯ ಎಲ್ಲ ಚಟಗಳು ಗೊತ್ತಿದ್ದರಿಂದ ಗೋವಿಂದ ಬುವಾ ನಡುವೆ ಎದ್ದು ನೋಡುತ್ತಿದ್ದರು । ಒಮ್ಮೆ ಎದ್ದು ನೋಡಿದರೆ ಕುದುರೆಯು ಶಾಂತವಾಗಿ ನಿಂತಿತ್ತು। ಅದನ್ನು ನೋಡಿ ಅವರಿಗೆ ಆಶ್ಚರ್ಯವಾಯಿತು । ಕುದುರೆಯ ಆರೋಗ್ಯವು ಸರಿಯಾಗಿದೆಯೋ ಇಲ್ಲವೋ ಎಂಬ ಚಿಂತೆ ಉಂಟಾಯಿತು । ಈ ರೀತಿ ನಿಶ್ಚಲ ಹಾಗೂ ಶಾಂತ ನಿಲ್ಲುವದು ಅದರ ಸ್ವಭಾವದ ವಿರುದ್ಧ





ಇತ್ತು। ನಿಶ್ಚಿತವಾಗಿ ಏನಾದರು ವಿಶೇಷವಿರಬಹುದು। ಆದ್ದರಿಂದ ಅವರು ಕುದುರೆಯ ಸಮೀಪಕ್ಕೆ ಬಂದರು। ಅವರು ಅಲ್ಲಿ ಒಬ್ಬ ಮನುಷ್ಯನು ಕುದುರೆಯ ಕಾಲುಗಳ ನಡುವೆ ಮಲಗಿರುವದನ್ನು ಕಂಡರು । ಹತ್ತಿರ ಹೋಗಿ ಗೋವಿಂದ ಬುವಾ ನೋಡಿದರೆ ಅಲ್ಲಿ ಸ್ವಯಂ ಕೈವಲ್ಯಧ್ಯಾನಿ ಗಜಾನನ ಮಹಾರಾಜರಿದ್ದರು। ಕುದುರೆಯು ಶಾಂತತೆಯ ಕಾರಣವನ್ನು ಗೋವಿಂದ ಬುವಾ ಈಗ ಅರಿತರು। ಸಮರ್ಥರ ಸಹವಾಸದಿಂದ ಕುದುರೆಯು ಶಾಂತ ವೃತ್ತಿಯದಾಯಿತು। ಕಸ್ತೂರಿಯ ಸುವಾಸ ಹಬ್ಬಿದಲ್ಲಿ ಹೊಲಸು ವಾಸನೆ ಎಲ್ಲಿಂದ ತಾನೆ ಬಂದೀತು ? ಗೋವಿಂದ ಬುವಾ ಮಹಾರಾಜರ ಚರಣಗಳ ಸ್ಪರ್ಷ ಮಾಡಿದರು । ಅವರ ಅಷ್ಟಭಾವಗಳು ಉದಯವಾದವು । 'ಮಹಾರಾಜ, ತಾವು ವಿಘ್ನಹರ್ತರು ಎಂಬುದರ ಅನುಭವ ನನಗೆ ಬಂದಿತು' ಎಂದು ವರ್ಣನೆ ಮಾಡತೊಡಗಿದರು। ನನ್ನ ಕುದುರೆ ಬಲು ತುಂಟ। ಎಲ್ಲ ಜನರು ಅದಕ್ಕೆ ಹೆದರುತ್ತಾರೆ । ಹೇ ಗುರುಮೂರ್ತಿ, ಅದನ್ನು ಸರಿ ಹಾದಿಗೆ ತರಲು ತಾವು ಸ್ವಂತ ಬಂದಿರಿ । ಈ ಕುದುರೆಯ ದುವರ್ತನೆಯ ವರ್ಣನೆಯ ಅಸಾಧ್ಯ । ನಡೆಯುವಾಗ ಒಮ್ಮೆಲೆ ಜಿಗಿಯುತ್ತದೆ, ನಡುನಡುವೆ, ಎರಡೂ ಹಿಂಗಾಲುಗಳನ್ನು ಹಾಕುತ್ತದೆ । ಮಹಾರಾಜ ಇದರಿಂದ ಬೇಸತ್ತು ನಾನು ಪೇಟೆಯಲ್ಲಿ ಮಾರಲು ಹೋದೆ । ಆದರೆ ಯಾರು ಇದನ್ನು ಕೊಳ್ಳಲಿಲ್ಲ। ಇದನ್ನು ಪುಕ್ಕಟೆಯಾಗಿ ಕೊಟ್ಟರೂ ಯಾರು ತೆಗೆದುಕೊಳ್ಳಲಿಲ್ಲ। ಕೊನೆಗೆ ತಾವು ಇದರ ಮೇಲೆ ದಯೆ ತೋರಿಸಿದಿರಿ । ಇದು ಒಳ್ಳೆಯದಾಯಿತು । ನನ್ನಂತಹ ಕೀರ್ತನಕಾರನ ಕುದುರೆಯು ಸಾಧುವಾಯಿತು। ಜಡ ಜೀವಗಳ ಉದ್ಧಾರಕ್ಕಾಗಿಯೇ ಮಹಾರಾಜರ ಆಗಮನವಾಗಿತ್ತು। ಮಹಾರಾಜರು ಕುದುರೆಯ ಬೆನ್ನಿನ ಮೇಲೆ ಕೈ ಸವರಿ ನುಡಿದರು – 'ಮಿತ್ರ', ಕೆಟ್ಟ ಚಟಗಳನ್ನು ಬಿಟ್ಟು ಬಿಡು । ನೀನು ಶಂಕರನ ಮುಂದೆ ನಿಂತಿರುವದನ್ನು ಮರೆಯಬೇಡ । ಎತ್ತು, ತಲೆತಗ್ಗಿಸಿ ಮಾಲಿಕನ ಸೇವೆಯಲ್ಲಿರುವಂತೆ, ನೀನೂ ಮಾಡು । ಯಾರಿಗೂ ಕಾಡಿಸ ಬೇಡ । ಹೀಗೆ ನಡಿದು ಮಹಾರಾಜರು ಹೊರಟು ಹೋದರು । ಕೃಪಾದೃಷ್ಟಿಯಿಂದ ಅವರು ಪಶುವಿನಲ್ಲಿಯೂ ಪರಿವರ್ತನೆ ಮಾಡಿದರು । ಮರುದಿನ ಮಹಾರಾಜರ ದರ್ಶನಕ್ಕಾಗಿ ಗೋವಿಂದ ಬುವಾ ಕುದುರೆಯ ಮೇಲೆ ಕುಳಿತು ಬಂದರು । ಕುದುರೆಯ ಕೆಟ್ಟ ಚಟಗಳು ಶೇಗಾಂವಿನ ಜನರಿಗೆ ಗೊತ್ತಿದ್ದವು। ಕುದುರೆಯು ದುಶ್ಚಟಗಳ ಭಂಡಾರದಂತಿತ್ತು। ಆದ್ದರಿಂದ ಎಲ್ಲರೂ ಆ ಕುದುರೆಗೆ ಹೆದರುತ್ತಿದ್ದರು। ಕುದುರೆಯನ್ನು ಅಲ್ಲಿ ನೋಡಿ ಜನರು, ಗೋವಿಂದಬುವಾಗೆ ಆ ಕುದುರೆಯನ್ನು ಇಲ್ಲಿ ಏಕೆ ತಂದಿರಿ ? ಎಂದು ಕೇಳಿದರು। ಇಲ್ಲಿ ಹೆಂಗಸರು, ಮಕ್ಕಳು ಇರುವರು। ನಿಮ್ಮ ಕುದುರೆ ಎಲ್ಲರಿಗೂ ಕಾಡಿಸುವದು।

ನಿಮ್ಮ ಮಾತು ನಿನ್ನೆಯವರೆಗೆ ನಿಜವಾಗಿತ್ತು ಎಂದರು ಗೋವಿಂದಬುವಾ । ಆದರೆ ಈಗ ಮಹಾರಾಜರ ಕೃಪೆಯಿಂದ ಕುದುರೆಯು ಜಾಣವಾಗಿದೆ । ಅದು ಎಲ್ಲ ದುಶ್ಚಟಗಳನ್ನು ಬಿಟ್ಟಿದೆ । ಈಗ ಅದು ಶಾಂತರೂಪಿ ಆಕಳವಾಗಿದೆ । ಈಗ ಹೆದರುವ ಕಾರಣವಿಲ್ಲ । ಗೋವಿಂದ ಬುವಾ ಕುದುರೆಯನ್ನು ಹುಣಸೆಮರದ ಕೆಳಗೆ ನಿಲ್ಲಿಸಿದರು । ಯಾವ ಬಂಧನವಿಲ್ಲದೆ (ಹಗ್ಗ) ಕುದುರೆಯು ಒಂದು ಘಂಟೆ ಅಲ್ಲಿ ನಿಂತಿತು । ಹಚ್ಚ ಹಸಿರು ಕಾಯಿಪಲ್ಲೆಗಳು ಅಲ್ಲಿದ್ದರೂ ಕುದುರೆಯು ಮುಖವೆತ್ತಿ ಆ ಕಡೆ ನೋಡಲಿಲ್ಲ। ಸಂತ ಶಕ್ತಿಯು ಅವರ್ಣನೀಯ । ಪಶುಗಳು ಕೂಡಾ ಅವರ ಆಜ್ಞೆಯ ಉಲ್ಲಂಘನೆ ಮಾಡುವದಿಲ್ಲ। ಗುಡಿಸಲಲ್ಲಿ ಗೋವಿಂದಬುವಾ ಮಹಾರಾಜರ ಸ್ತುತಿಗಾನವನ್ನು ಆರಂಭಿಸಿದರು ।

ಹೇ ಅಚಿಂತ್ಯ ಪ್ರಭು, ಜಗತ್ ರೂಪಿ ನಿನ್ನ ಪ್ರತಿಕೃತಿಯನ್ನು ಯಾರು ತಿಳಿಯಬಲ್ಲರು ।

ಯಾವ ಪರಿಸೀಮೆಗೆ ತಲುಪಿದ್ದರೂ, ದುಷ್ಟನು ನಿನ್ನ ಕೃಪೆಯಿಂದ ಸನ್ಮಾರ್ಗದಿಂದ ನಡೆಯುವನು ।

ನಿಮ್ಮ ಮುಂದೆ ಪೃಥ್ವಿಯ ಮೇಲಿನ ರತ್ನಗಳ ತೇಜ, ಸ್ವರ್ಗದ ಚಿಂತಾಮಣಿಯ ತೇಜವು ಕೂಡ ಕಳೆಗುಂದಿದಂತಿರುತ್ತದೆ ।

ನಿಮ್ಮ ವರದಹಸ್ತ ನನ್ನ ಮೇಲಿರಲಿ ಎಂದು ಪ್ರಾರ್ಥನೆ ॥ ೧ ॥

ಈ ರೀತಿ ಸ್ತುತಿಯನ್ನು ಮಾಡಿ ಮಹಾರಾಜರ ಆಶೀರ್ವಾದ ಪಡೆದು ಗೋವಿಂದಬುವಾ ಕುದರೆಯ ಮೇಲೆ ಕುಳಿತು ಟಾಕಳಿ ಗ್ರಾಮದ ಕಡೆಗೆ ಹೊರಟರು। ಶೇಗಾಂವಿಗೆ ದಿನನಿತ್ಯ ಮನಸ್ಸಿನಲ್ಲಿ ಇಚ್ಛೆಯನ್ನಿಟ್ಟುಕೊಂಡು ಅನೇಕರು ಬಂದು ಹೋಗುತ್ತಿದ್ದರು । ಅವರಲ್ಲಿ ಬಾಲಾಪುರದ ಇಬ್ಬರು ಸಜ್ಜನರು ಮನಸ್ಸಿನಲ್ಲಿ ಇಚ್ಛೆಯಿಟ್ಟು ಮಹಾರಾಜರ ದರ್ಶನಕ್ಕಾಗಿ ಬಂದರು । ಮಾರ್ಗವನ್ನು ಪರಿಕ್ರಮಿಸುವಾಗ ಅವರು ಮುಂದಿನ ಬಾರಿ ಬಂದಾಗ ಮಹಾರಾಜರಿಗೆ ಗಾಂಜಾ ತರುವದಾಗಿ ನುಡಿದರು। ಏಕೆಂದರೆ ಗಾಂಜಾ ಮೇಲೆ ಮಹಾರಾಜರಿಗೆ ಪ್ರೀತಿ ಇದೆ। ಮಹಾರಾಜರು ಯಾವ ವಸ್ತುವನ್ನು ಪ್ರೀತಿಸುವರೋ, ಅದನ್ನು ಅರ್ಪಿಸಿದರೆ ಅವಶ್ಯವಾಗಿ ಅವರ ಕೃಪೆಯಾಗುವದು । ಇತರರು ಅವರಿಗೆ ಭಿರ್ಫಿ, ಲಾಡು ಅಪಿಸುವರು ನಾವು ಅವರಿಗೆ ಗಾಂಜಾ ಅರ್ಪಿಸೋಣ। ಇಬ್ಬರೂ ಮರೆಯದೇ ಇರೋಣ, ಎಂದು ನುಡಿದು ಊರನ್ನು ತಲುಪಿದರು। ಮುಂದಿನ ಸಲ ಮಹಾರಾಜರ ದರ್ಶನಕ್ಕೆ ಬಂದಾಗ, ಇಬ್ಬರೂ ಗಾಂಜಾ ಮರೆತು ಬಂದರು । ಮಹಾರಾಜರ ಚರಣಗಳ ಮೇಲೆ ತಲೆ ಇಟ್ಟಾಗ ಅವರಿಗೆ ನೆನಪು ಬಂದಿತು । ಈಗ ಮುಂದಿನ ಬಾರಿ





ಮರೆಯದೇ ಎರಡು ಪಟ್ಟು ಗಾಂಜಾ ತರೋಣ। ಈ ರೀತಿ ನಿರ್ಧಾರ ಮಾಡಿ ಮಹಾರಾಜರ ದರ್ಶನ ಪಡೆದು ಮನೆಗೆ ಬಂದರು । ಮುಂದಿನ ಸಲವೂ ಅದೇ ರೀತಿ ಆಯಿತು । ಗಾಂಜಾ ತರುವದನ್ನು ಮರೆತರು । ತಲೆ ತಗ್ಗಿಸಿ ಇಬ್ಬರೂ ಮಹಾರಾಜರ ಮುಂದೆ ಕುಳಿತರು। ಅವರ ಕಡೆ ಸನ್ನೆ ಮಾಡಿ ಮಹಾರಾಜರು ಭಾಸ್ಕರ ಪಾಟೀಲನಿಗೆ ನುಡಿದರು, ಈ ಜಗತ್ತಿನ ರೀತಿಯನ್ನು ನೋಡು । ಮರೆಯದಿರುವಂತೆ ಗಂಟು ಕಟ್ಟಿದರೂ, ಇಚ್ಛಿತ ವಸ್ತುವನ್ನು ತರಲು ಜನರು ಮರೆಯುತ್ತಾರೆ। ಜಾತಿಯಿಂದ ಬ್ರಾಹ್ಮಣರಿದ್ದರೂ, ತಮ್ಮ ವಚನವನ್ನು ಪೂರ್ಣ ಮಾಡಲಿಲ್ಲ। ಬ್ರಾಹ್ಮಣನ ಮುಖದಿಂದ ಹೊರಟ ಶಬ್ದವು ವ್ಯರ್ಥವಾಗಬಾರದು । ಚಾಂಡಾಲರು ಈ ಸತ್ಯವನ್ನು ಅರಿಯಲು । ಬ್ರಾಹ್ಮಣರು ತಮ್ಮ ನಿಜಧರ್ಮವನ್ನು ಬಿಟ್ಟಿರುವದರಿಂದಲೇ ಶ್ರೇಷ್ಠತ್ವವನ್ನು ಕಳೆದು ಕೊಂಡಿರುವರು । ಅವರಿಬ್ಬರೂ ಮನಸ್ಸಿನಲ್ಲಿ ಹರಕೆ ಹೊತ್ತು ಯಾವ ವಸ್ತುವನ್ನು ಕೊಡುವ ವಚನ ನೀಡುವರೋ ಅದನ್ನು ಮರೆಯುತ್ತಾರೆ। ಇದರಿಂದ ಅವರ ಇಚ್ಛೆಯೂ ಪೂರ್ತಿಗೊಳ್ಳುವದು ಅಸಾಧ್ಯ । ಸತ್ಯ ವರ್ತನೆ ಹಾಗೂ ನಿರ್ಮಲ ಚಿತ್ತದಿಂದಲೇ, ಘನನೀಹರ ಕೃಪೆಯು ಸಾಧ್ಯ । ಭಾಸ್ಕರನಿಗೆ ನುಡಿದ ಆ ಶಬ್ದಗಳು ಅವರ ಮನಸ್ಸಿನಲ್ಲಿ ನೆಟ್ಟಿದವು । ಅವರು ಆಶ್ಚರ್ಯದಿಂದ ನೋಡಿದರು ಅವರು ಮನಸ್ಸಿನಲ್ಲಿಯೇ ಮಹಾರಾಜರು ನಮ್ಮ ಮಾತುಗಳನ್ನು ಹೇಗೆ ತಿಳಿದುಕೊಂಡರು ಎಂದು ಆಶ್ಚರ್ಯಗೊಂಡರು। ಅವರು ನಿಜವಾಗಿಯೂ ಅಂತರ್‌ಜ್ಞಾನಿ । ಜಗತ್ ಚಕ್ಷು ಗಜಾನನ ಮಹಾರಾಜರು ಸೂರ್ಯನಂತೆ ತೇಜಸ್ವಿ । ನಾವು ಹೊತ್ತ ಹರಕೆಯನ್ನು ಮಹಾರಾಜರು ಅರಿತಿರುವರು। ಆದ್ದರಿಂದ ನಾವು ಈ ಶೇಗಾಂವಿಗೆ ಹೋಗಿ ಗಾಂಜಾ ತರೋಣ। ಈ ರೀತಿ ವಿಚಾರ ಮಾಡಿ ಅವರು ಹೊರಗೆ ಹೊರಟರು ಆಗ ಮಹಾರಾಜರು ಮಾತನಾಡಿದರು। ಈಗ ತಂಗಳು ಸಾರನ್ನು ಬಿಸಿ ಮಾಡುವ ಅಪಶ್ಯಕತೆಯಿಲ್ಲ। ನನಗೆ ಗಾಂಜಾದ ಅವಶ್ಯಕತೆ ಇಲ್ಲ, ಅಥವಾ ನಾನು ಅದಕ್ಕಾಗಿ ಚಪಡಿಸುತ್ತಿಲ್ಲ। ಈಗ ಮಾರುಕಟ್ಟೆಗೆ ಹೋಗಬೇಡಿರಿ । ನುಡಿದಂತೆ ನಡೆಯುವದು ಅವಶ್ಯಕ ಎಂಬುದನ್ನು ಮರೆಯದಿರಿ । ಮೋಸಗಾರನ ಇಚ್ಛೆ ಎಂದಿಗೂ ಪೂರ್ತಿಯಾಗುವದಿಲ್ಲ, ಎಂಬುದನ್ನು ಸದೈವ ಜ್ಞಾಪಕದಲ್ಲಿಡಿರಿ । ನಿಮ್ಮ ಕೆಲಸಫಾದ ಮೇಲೆ; ನಿಮ್ಮ ಇಚ್ಛೆಯಿದ್ದರೆ ಗಾಂಜಾ ತನ್ನಿರಿ । ಮುಂಧಿನ ವಾರದಲ್ಲಿ ನಿಮ್ಮ ಕೆಲಸವಾದರೆ, ಮುಂದಿನ ಐದು ವಾರ

ತಪ್ಪಿಸದೇ ಇಲ್ಲಿ ಬನ್ನಿರಿ । ಏಕೆಂದರೆ, ಇಲ್ಲಿ ಸಾಕ್ಷಾತ್ ಮೃಡಾನಿಪತಿ ಕರ್ಪೂರಗೌರನು ಇರುವನು, ಯಾರ ಕೃಪೆಯಿಂದ ಕುಬೇರನು ಶ್ರೀಮಂತನಾದನು । ಶಂಕರನ ದರ್ಶನ ಮಾಡಿ ಹೋಗಿರಿ । ಗಾಂಜಾ ತರಲು ಮರೆಯದಿರಿ । ಪರಮಾರ್ಥದಲ್ಲಿ ಸಾಧಕನು ಸುಳ್ಳು ವಚನ ಆಡಬಾರದು । ಈ ಅಮೃತವಚನ ಕೇಳಿ ಅವರಿಬ್ಬರೂ ಮಹಾರಾಜರ ಚರಣಗಳಲ್ಲಿ ನತಮಸ್ತಕರಾದರು । ಮಹಾರಾಜರ ದರ್ಶನ ಮಾಡಿ ಅವರು ತಮ್ಮ ಬಾಲಾಪುರಕ್ಕೆ ಮರಳಿದರು । ಮಹಾರಾಜರು ನುಡಿದಂತೆ ಮುಂದಿನ ಸಪ್ತಾಹದಲ್ಲಿ ಅವರ ಇಚ್ಛೆ ನೆರವೇರಿತು ಮತ್ತು ಅವರು ಗಾಂಜಾ ಅರ್ಪಣ ಮಾಡಿ ತಮ್ಮ ಹರಕೆಯನ್ನು ಪೂರೈಸಿದರು । ಹೇ ಶ್ರೋತೃಗಳೇ, ಆ ಬಾಲಾಪುರ ಊರಿನ ಒಂದು ಕಥೆ ಕೇಳಿರಿ । ಬಾಲಕೃಷ್ಣ ಎಂಬ ಹೆಸರಿನ ರಾಮದಾಸಿ ಬಾಳಾಪುರದಲ್ಲಿದ್ದರು । ಅವರ ಪತ್ನಿಯ ಹೆಸರು ಪುತಲಾಬಾಯಿ । ಇಬ್ಬರೂ ಭಗವತ್–ಭಕ್ತರು । ಪ್ರತಿವರ್ಷ ಪಾದಯಾತ್ರೆ ಮಾಡಿ ಸಜ್ಜ ಗಡಕ್ಕೆ ಹೋಗುವ ನಿಯಮ ಮಾಡಿದ್ದರು । ಪತಿ–ಪತ್ನಿ ಇಬ್ಬರು ಸಮ ವಿಚಾರಿಗಳಿದ್ದರು । ಪೌಷ್ಯ ಮಾಸದಲ್ಲಿ ಸಜ್ಜನಗಡಕ್ಕಾಗಿ ಹೊರಡುತ್ತಿದ್ದರು । ಜೊತೆಗೆ ಸಾಮಾನು ಹೊರಯಲು ಒಂದು ಕುದುರೆ ಇರುತ್ತಿತ್ತು। ಉರುಗೋಲು, ಕಂಬಳಿ, ದಾಸಬೋಧ ಆದಿ ವಸ್ತುಗಳು ಇರುತ್ತಿದ್ದವು । ಸಾಧುವಿನಂತೆ ಶುದ್ಧ ಆಚರಣವಿದ್ದರೂ ಅವರಿಗೆ ಸಾಧುತ್ವದ ಗರ್ವವಿರಲಿಲ್ಲ। ಪದಕ್ರಮಣ ಮಾಡುವಾಗ ಸಂಜೆಯಲ್ಲಿ ಯಾವ ಹಳ್ಳಿಯಲ್ಲಿ ತಂಗುವರೊ ಅಲ್ಲಿ ಭಿಕ್ಷೆ ಬೇಡಿ ಉದರ ನಿರ್ವಾಹ ಮಾಡುತ್ತಿದ್ದರು । ಪಾಲಿಗೆ ಬಂದಿದ್ದರಿಂದಲೇ ಶ್ರೀರಾಮನಿಗೆ ನೈವೇದ್ಯ ಅರ್ಪಿಸಿ, ನಂತರ ಪ್ರಸಾದ ಸೇವಿಸುತ್ತಿದ್ದರು । ಪೌಷ್ಯ ಮಾಸದ ಕೃಷ್ಣ ಪಕ್ಷದಲ್ಲಿ ಅವರು ತಮ್ಮ ಪತ್ನಿಯನ್ನು ಕರೆದುಕೊಂಡು ಬಾಳಾಪುರವನ್ನು ಬಿಡುತ್ತಿದ್ದರು। ಬಾಲಕೃಷ್ಣಬುವಾರ ಕೈಯಲ್ಲಿ ಚಂದನದ ಕರತಾಳ ಹಾಗೂ ಪುತಳಾಬಾಯಿ ಚಕ್ರತಾಳವನ್ನು ಹಿಡಿದು ಇಬ್ಬರೂ ನಡೆಯುತ್ತಿದ್ದರು । ನಡೆಯುವಾಗ ಸದೈವ ಮುಖದಿಂದ ರಘುಪತಿಯ ನಾಮ ಕೀರ್ತನೆಯು ಆಗುತ್ತಿತ್ತು। ಶೇಗಾಂವ, ಖಾಮಗಾಂವ, ಮೆಹೇಕರ, ಮತ್ತು ದೇವುಲಗಾಂವ ರಾಜಾ ಮಾರ್ಗವಾಗಿ, ಜಾಲನಾದಲ್ಲಿ ಆನಂದಸ್ವಾಮಿಗೆ ವಂದಿಸಿ ಜಾಂಬ ಗ್ರಾಮಕ್ಕೆ ತಲುಪುತ್ತಿದ್ದರು । ಅಲ್ಲಿ ಅವರು ಮೂರು ದಿನ ತಗುತ್ತಿದ್ದರು । ಏಕೆಂದರ ಅಲ್ಲಿ ಸಮರ್ಥ ರಾಮದಾಸ ಸ್ವಾಮಿಗಳ ಜನ್ಮವಾಗಿತ್ತು। ಮುಂದೆ 'ದಿವರಾ'ಗೆ ಬಂದು ಗೋದಾವರಿ ನದಿಯಲ್ಲ ಸ್ನಾನ ಮಾಡುತ್ತಿದ್ದರು । ನಂತರ ಬೀಡ, ಅಂಬೆಜೋಗಾಯಿ ಮಾರ್ಗವಾಗಿ ಬೆಲೆಶ್ಕರ ಮಹಾರಾಜರ ದರ್ಶನಕ್ಕಾಗಿ ಮಾಹೋರಿಗೆ ತಲುಪುತ್ತಿದ್ದರು । ಡೋಮಗಾಂವದಲ್ಲಿ ಸ್ವಾಮೀಜಿಯ ಪಟ್ಟಶಿಷ್ಯ







ಕಲ್ಯಾಣರ ನಿವಾಸವಿತ್ತು । ನರಸಿಂಗಪುರ, ಪಂಢರಪುರ, ನಾತೆಪುತೆ, ಶಿಂಗಣಾಪುರ, ವಾಯಿ ಹಾಗೂ ಸಾತಾರಾ ಮಾರ್ಗವಾಗಿ ಸಜ್ಜನಗಡದ ಸಮೀಪಕ್ಕೆ ಬರುತ್ತಿದ್ದರು । ನವಮಿಯ ಉತ್ಸವಕ್ಕಾಗಿ ಮಾಘವದ್ಯ ಪ್ರತಿಪದೆಗೆ ಇಬ್ಬರೂ ಸಜ್ಜನಗಡಕ್ಕೆ ತಲುಪುತ್ತಿದ್ದರು । ಬಾಳಕೃಷ್ಣಬುವಾ ಯಥಾಶಕ್ತಿ ಬ್ರಾಹ್ಮಣರಿಗೆ ಭೋಜನ ಮಾಡಿಸಿ, ಅನ್ನದಾನ ಮಾಡುತ್ತಿದ್ದರು । ಅವರು ನಿಜವಾಗಿ ರಾಮದಾಸರಂತೆ ತೋರುತ್ತಿದ್ದರು । ಇಂತಹ ರಾಮದಾಸಿ ಮುಂದೆ ನಿರ್ಮಾಣವಾಗುವದು ಅಸದಳ । ದಾಸನವಮಿಯ ಉತ್ಸವ ಮುಗಿದೊಡನೆ ಅವರಿಬ್ಬರೂ ಬಂದು ಮಾರ್ಗದಿಂದ ಹಿಂದಕ್ಕೆ ಮರಳುತ್ತಿದ್ದರು। ಈ ರೀತಿಯ ಕಾರ್ಯಕ್ರಮ ಅನೇಕ ವರ್ಷಗಳಿಂದ ನಡೆದಿತ್ತು। ಈಗ ಅವರ ವಯಸ್ಸು ಅವರತ್ತು ಆಗಿತ್ತು। ಮಾಘ ವದ್ಯ ದ್ವಾದಶಿಗೆ ಅವರು ಬಾಲಾಪುರಕ್ಕೆ ಮರಳಲು ಸಜ್ಜನಗಡದಿಂದ ಹೊರಡುವವರಿದರು। ಇರಲಿ, ಏಕಾದಶಿಯ ದಿನ ಬಾಲಕೃಷ್ಣಾಬುವಾ ಸಮರ್ಥ ಸಮಾಧಿಯ ಬಳಿ ಕುಳಿತಿದ್ದರು । ಕಣ್ಣುಗಳು ನೀರಿನಿಂದ ತುಂಬಿದ್ದವು, ಮತ್ತು ಮುಖದಿಂದ ಶಬ್ದಗಳು ಹೊರಡುತ್ತಿರಲಿಲ್ಲ। ಕೆಲವು ನಿಮಿಷ ಸುಮ್ಮನೆ ಕುಳಿತು ಅವರ ನುಡಿದರು, ಹೇ ಸಮರ್ಥ ರಾಮದಾಸ ಸ್ವಾಮಿ ! ಹೇ ಗುರುರಾಜ ! ಹೇ ಪುಣ್ಯವಂತ ನನ್ನ ಶರೀರವು ಈಗ ಶಕ್ತಿಹೀನವಾಗುತ್ತಿದೆ । ನನ್ನಿಂದ ಈಗ ಕಾಲ್ನಡಿಗೆಯಿಂದ ಈ ಯಾತ್ರೆಯನ್ನು ಮಾಡುವದು ಸಾಧ್ಯವಿಲ್ಲ । ಯಾವದಾದರೂ ವಾಹನ ಉಪಯೋಗಿಸ ಇಲ್ಲಿ ಬರುವದು ಸರಿಯಲ್ಲ। ಈವರೆಗೆ ಇಲ್ಲಿ ಬರಲು ಪಾಲಿಸುವ ನಿಯಮಗಳಂತೆ ನಡೆದಿದ್ದೇನೆ । ಈಗ ಇದರಲ್ಲಿ ವ್ಯತ್ಯಯ ಉಂಟಾಗುವದು। ಪರಮಾರ್ಥವನ್ನು ಮಾಡಲು ಶರೀರವು ಒಳ್ಳೆಯದಿರಬೇಕು । ಆಗಲೇ ಏನಾದರೂ ಸಾಧ್ಯ । ಹೇ ಸ್ವಾಮಿ, ತಾವು ನನ್ನ ತಾಯಿ । ಈ ಮಾತುಗಳನ್ನು ನುಡಿಯುವ ಅವಶ್ಯಕತೆ ಇಲ್ಲ। ಏಕೆಂದರೇ ತಾವು ಸರ್ವಜ್ಞಾನಿ ಈ ರೀತಿ ಪ್ರಾರ್ಥನೆ ಮಾಡಿ ಮಲಗಿದನು । ನಸುಕಿನಲ್ಲಿ ಅವರಿಗೆ ಸ್ವಪ್ನವು ಬಿದ್ದಿತು । ಕನಸಿನಲ್ಲಿ ರಾಮದಾಸ ಸ್ವಾಮಿ ನೀನು ಈ ರೀತಿ ನಿರಾಶನಾಗಬೇಡ ಎಂದರು । ಶರೀರದ ದುರ್ಬಲತೆಯಿಂದ ನೀನು ಇಲ್ಲಿ ಬರದಿದ್ದರೂ ಸರಿ । ನನ್ನ ಕೃಪೆ ಸದೈವ ನಿನ್ನ ಮೇಲೆ ಇದೆ । ನನ್ನ ಉತ್ಸವವನ್ನು ನೀನು ಬಾಳಾಪುರದಲ್ಲಿ ಆಚರಿಸು । ನಾನು ನವಮಿಯ ದಿನ ನಿನಗೆ ದರ್ಶನಕೊಡಲು ಅವಶ್ಯವಾಗಿ ಬರುವೆನು । ನನ್ನ ಈ ಮಾತನ್ನು ಮರೆಯಬೇಡ । ಸಾಧಕನು ಎಲ್ಲಿಯವರೆಗೆ ಸಾಧ್ಯವೊ

ಅಲ್ಲಿಯವರೆಗೆ ಪರಮಾರ್ಥ ಮಾಡಬೇಕು । ಮಹಾರಾಜರ ಕನಸಿನಲ್ಲಿಯ ಆದೇಶವನ್ನು ನಂಬಿ ಬಾಲಕೃಷ್ಣಬುವಾ ಆನಂದದಿಂದ ತಮ್ಮ ಪತ್ನಿಯ ಜೊತೆಗೆ ಬಾಳಾಪುರಕ್ಕೆ ಮರಳಿದರು । ಮುಂದಿನ ವರ್ಷ ಕೃಷ್ಣ ಮಾಘ ಮಾಸದಲ್ಲಿ ಬಾಳುಪುರದಲ್ಲಿ ನಡೆದ ಘಟನೆಯನ್ನು ಈಗ ಕೇಳಿರಿ । ಮಾಘ ವದ್ಯ ಪ್ರತಿಪದೆಗೆ ಬಾಲಕೃಷ್ಣಬುವಾ ಸಮರ್ಥರ ಉತ್ಸವವನ್ನು ಆರಂಭಿಸಿದರು । ದಿನವಿಡಿ । ದಾಸಬೋಧದ ಪಠಣ, ಮಧ್ಯಾಹ್ನ ಬ್ರಾಹ್ಮಣ ಭೋಜನ, ಸಂಜೆಗೆ ಆರತಿ ಮತ್ತು ರಾತ್ರಿ ಹರಿ ಕೀರ್ತನೆಯ ಕಾರ್ಯಕ್ರಮವಿರುತ್ತಿತ್ತು। ಸ್ವಾಮಿ ಸಮರ್ಥರು ಹೇಗೆ ಬರಬಹುದು ? ಈ ವಿಚಾರವು ಬಾಳಕೃಷ್ಣಬುವಾರ ಮನಸ್ಸಿನಲ್ಲಿ ಮನೆ ಮಾಡಿತ್ತು। ಊರಿನಲ್ಲಿ ನಡೆಯುವ ಈ ಉತ್ಸವಕ್ಕೆ ಜನರಿಂದ ಆರ್ಥಿಕ ಹಾಗೂ ಶಾರೀರಿಕ ಸಹಾಯವು ಒದಗಿತ್ತು । ಈ ರೀತಿ ಬಲು ಉತ್ಸಾಹದಿಂದ ಬಾಳಾಪುರದಲ್ಲಿ ಉತ್ಸವವು ನಡೆದಿತ್ತು । ಒಂಭತ್ತನೆಯ ದಿನ ಎರಡು ಪ್ರಹರಕ್ಕೆ ಒಂದು ಅಘಟಿತ ಘಟನೆ ನಡೆಯಿತು । ಆಗ ಶ್ರೀ ಗಜಾನನ ಮಹಾರಾಜರು ಸ್ವಯಂ ಅಲ್ಲಿ ಉಪಸ್ಥಿತರಾದರು । ಬಾಳಕೃಷ್ಣಬುವಾರ ಮನೆಯಲ್ಲಿ ರಾಮಾಭಿಷೇಕ ನಡೆದಿತ್ತು । ಗಜಾನನ ಮಹಾರಾಜರನ್ನು ಅಲ್ಲಿ ನೋಡಿ ಎಲ್ಲರಿಗೂ ಆಶ್ಚರ್ಯವಾಯಿತು । ನೆರೆದ ಜನರು ಯಜಮಾನರಿಗೆ ನುಡಿದರು, ಗಡಿಬಿಡಿ ಮಾಡಿರಿ, ದಾಸನವಮಿಯ ಶುಭ ಅವಸರದ ಮೇಲೆ ಗಜಾನನ ಮಹಾರಾಜರು ಮನೆಗೆ ಬಂದಿರುವರು । ಬಾಳಕೃಷ್ಣಬುವಾ ನುಡಿದರು, "ಈ ಶುಭ ಅವಸರದಲ್ಲಿ ಮಹಾರಾಜರು ಬಂದಿದ್ದು ಒಳ್ಳೆಯದಾಯಿತು ।" ಇಂದು ನನ್ನ ಮನೆಗೆ ಸಂತರ ಪಾದ ಧೂಳಿಯು ತಗಲಿತು । ಆದರೆ ನಾನು ಇಂದು ಸಮರ್ಥ ಸ್ವಾಮಿಗಳ ದಾರಿ ಕಾಯುತ್ತಿದ್ದೇನೆ, ಯಾರು ಸಜ್ಜನಡನಿವಾಸಿಗಳು । ಅವರು ನನಗೆ ನವಮಿಯ ದಿನ ಬರುವೆನೆಂದಿರುವರು । ಸಮರ್ಥವಾಣಿಯು ಎಂದಿಗೂ ಸುಳ್ಳಾಗದು, ಸುಳ್ಳಾಗದು, ಇದರಲ್ಲಿ ನನಗೆ ನವಮಿಯ ದಿನ ಬರುವೆನೆಂದಿರುವರು । ಸಮರ್ಥವಾಣಿಯು ಎಂದಿಗೂ ಸುಳ್ಳಾಗದು, ಇದರಲ್ಲಿ ನನಗೆ ಸಂದೇಹವಿಲ್ಲ ।' ಇತ್ತಕಡೆ ಸ್ವಾಮಿ ಗಜಾನನ ಮಹಾರಾಜರು ಬಾಗಿಲಲ್ಲಿ ನಿಂತು 'ಜಯ ಜಯ ರಘುವೀರ ಸಮರ್ಥ' ಎಂದು ಶ್ಲೋಕ ನುಡಿಯತೊಡಗಿದರು ।ಆ ಶ್ಲೋಕವು – ಅಹಿಲ್ಯೆಯು ಶಿಲೆಯಾಗಿದ್ದಳು, ಅವಳನ್ನು ಶ್ರೀರಾಮನು ಮುಕ್ತಗೊಳಿಸಿದನು । ಶ್ರೀರಾಮನ ಪಾದಕಮಲಗಳ ಸ್ಪರ್ಶಮಾತ್ರದಿಂದ ಅವಳು ಧನ್ಯಳಾದಳು । ಈ ಮಧುರವಾಣಿಯನ್ನು ಕೇಳಿ ಬಾಳಕೃಷ್ಣಬುವಾ ಕುಳಿತಲ್ಲಿಂದ ಎದ್ದು ಬಾಗಿಲ ಬಳಿ ಬಂದರು । ನೋಡಿದರೆ ಗಜಾನನ ಮಹಾರಾಜರ ಮೂರ್ತಿಯನ್ನು ಕಂಡರು । ಅಜಾನುಬಾಹು ದೇಹವು ಕಂಡಿತು । ತಲೆ ತಗ್ಗಿಸಿ






ನಮಸ್ಕರಿಸಿದರೆ ಸಮರ್ಥ ರಾಮದಾಸ ಸ್ವಾಮಿಗಳು ಕಂಡರು । ಕೈಯಲ್ಲಿ ಊರುಗೋಲು, ಬೆನ್ನಿನ ಮೇಲೆ ಜಟಾಸಂಭಾರ। ಹಣೆಯ ಮೇಲೆ ಚಂದನದ ತ್ರಿಪುಂಡ್ರ, ಲಂಗೋಟಿಯನ್ನು ಧರಿಸಿದ್ದರು, ಯಾವುದರ ಬಣ್ಣ ಕೇಸರಿಯಾಗಿತ್ತು। ಸಮರ್ಥ ರಾಮದಾಸ ಸ್ವಾಮಿಗಳ ರೂಪವನ್ನು ನೋಡಿ ಅವರ ಕಣ್ಣುಗಳಿಂದ ಆನಂದಾಶ್ರುಗಳು ಹರಿಯತೊಡಗಿದವು । ಮರುಕ್ಷಣದಲ್ಲಿ ಸಮರ್ಥ ಸ್ವಾಮಿಗಳ ಬದಲು ಗಜಾನನ ಮಹಾರಾಜರು ಕಾಣತೊಡಗಿದರು। ಸಮರ್ಥ ಸ್ವಾಮಿಗಳು ಕಾಣದಿದ್ದಾಗ ಅವರು ನಿರಾಶರಾಗುತ್ತಿದ್ದರು, ಆಗ ಮತ್ತೇ ಸಮರ್ಥರ ದರ್ಶನವಾಗುತ್ತಿತ್ತು । ಒಮ್ಮೆ ಸಮರ್ಥರು, ಒಮ್ಮೆ ಗಜಾನನ ಮಹಾರಾಜರು । ಅವರು ನಿಜರೂಪ ಯಾವದು ಎಂದು ಸಂಭ್ರಮದಲ್ಲಿ ಬಿದ್ದರು। ಅವರ ಈ ಅಸಹಾಯ ಸ್ಥಿತಿಯನ್ನು ನೋಡಿ ಗಜಾನನ ಮಹಾರಾಜರು ನುಡಿದರು । ಸಮರ್ಥರ ದರ್ಶನವಾಗಲಿಲ್ಲ ಎಂದು ದುಃಖಿತನಾಗಬೇಡ । ನಾನೇ ನಿನ್ನ ಸಮರ್ಥ ರಾಮದಾಸ । ನನ್ನ ಮೊದಲಿನ ಸ್ಥಾನವು ಸಜ್ಜನಗಡವಾಗಿತ್ತು । ಈಗ ಶೇಗಾಂವಿಯಲ್ಲಿ ಬಂದು ತಂಗಿರುವೆನು । ಸಜ್ಜನಗಡದಲ್ಲಿ ನಿನಗೆ ದಾಸನವಮಿಗೆ ಬಂದು ಭೆಟ್ಟಿಯಾಗುವೆನೆಂದು ವಚನ ಕೊಟ್ಟಿದ್ದೆ। ಏನು ನಿನಗೆ ಅದು ಜ್ಞಾಪಕವಿದೆಯೇ ? ಆ ವಚನ ಪೂರ್ತಿಗಾಗಿ ನಾನು ಇಂದು ಇಲ್ಲಿಗೆ ಬಂದಿರುವೆನು। ಮನಸ್ಸಿನಲ್ಲಿಯ ಸಂದೇಹವನ್ನು ಬಿಟ್ಟು ಬಿಡು । ನಾನೇ ರಾಮದಾಸ ಸ್ವಾಮಿ । ಆತ್ಮವನ್ನು ಮರೆತು ಶರೀರ ರೂಪಿ ವಸ್ತ್ರವನ್ನು ನಿಜವೆಂದು ತಿಳಯಬೇಡ । ಭಗವದ್ ಗೀತೆಯಲ್ಲಿ 'ವಾಸಾಂಸಿ ಜೀರ್ಣಾನಿ' ಎಂಬ ಶ್ಲೋಕವಿದೆ ಅದರ ಪಠಣಮಾಡಿರಿ । ಭ್ರಮದಿಂದ ಮತಿಭ್ರಷ್ಟ ನಾಗಬೇಡಿರಿ । ಯಾವ ಶಂಕೆಯಿಲ್ಲದೆ ನನ್ನನ್ನು ಆಸನದ ಮೇಲೆ ಕೂಡ್ರಿಸಿರಿ। 'ಹೀಗೆ ನುಡಿದ ಬಾಳಕೃಷ್ಣರ ಕೈಹಿಡಿದು ಮಹಾರಾಜರು ಒಳಗೆ ಬಂದರು । ಒಂದು ಸುಂದರ ಆಸನದ ಮೇಲೆ ಕುಳಿತರು। ಈ ಮಾತು ಬಾಳಾಪುರದಲ್ಲಿ ಹಬ್ಬಿತು । ಮಹಾರಾಜರ ದರ್ಶನಕ್ಕಾಗಿ ಜನರ ಗದ್ದಲವಾಯಿತು । ಮಹಾರಾಜರು ಇಷ್ಟು ತಿಳಿಹೇಳಿದರೂ ಬಾಳಕೃಷ್ಣಬುವಾರ ಸಮಾಧಾನವಾಗಲಿಲ್ಲ । ಕೊನೆಗೆ ರಾತ್ರಿ ಬಾಳಕೃಷ್ಣಬುವಾರಿಗೆ ಕನಸು ಬಿತ್ತು । ಕನಸಿನಲ್ಲಿ ಸಮರ್ಥ ರಾಮದಾಸ ಸ್ವಾಯಿಗಳು ವರ್ಹಾಡ ಪ್ರಾಂತದ ಗಜಾನನ ಮಹಾರಾಜರು ನನ್ನ ಅವತಾರ ಎಂದು ಹೇಳಿದರು । ಈ ಬಗ್ಗೆ ನಿನಗೆ ಶಂಕೆ ಉಂಟಾದರೆ ಅಘಾತವಾಗುವದು । ನಾನೇ ಗಜಾನನ ಮಹಾರಾಜರೆಂದು ತಿಳಿದು

ಪೂಜಿಸು । ಭಗವದ್‌ಗೀತೆಯ ಶ್ಲೋಕ 'ಸಂಶಯಾತ್ಮಾ ವಿಸಶ್ಯತಿ'ಯನ್ನು ಜ್ಞಾಪಕರದಲ್ಲಿಡು । ಸಮರ್ಥರ ಸ್ವಪ್ನ ಸಾಕ್ಷಾತ್ಕಾರದಿಂದ ಬಾಳಕೃಷ್ಣಬುವಾ ಸಂಶೆಯ ವಿರಹಿತರಾಗಿ ಆನಂದಿತರಾದರು । ಕೂಡಲೇ ಅವರು ಅತಿ ಆದರದಿಂದ ಮಹಾರಾಜರ ಚರಣಗಳನ್ನು ಮುಟ್ಟಿ ನುಡಿದರು, ಮಹಾರಾಜ ತಮ್ಮ ಲೀಲೆಯನ್ನು ತಿಳಿಯಲು ನಾನು ಅಸಮರ್ಥನು। ಆದರೆ ಕನಸಿನಲ್ಲಿಯ ತಮ್ಮ ದರ್ಶನದಿಂದ ನನ್ನ ಎಲ್ಲ ಪ್ರಶ್ನೆಗಳಿಗೆ ಉತ್ತರ ದೊರಕಿದೆ । ನನ್ನ ನವಮಿಯ ಉತ್ಸವವು ಪೂರ್ಣವಾಯಿತು । ಈಗ ಅದರಲ್ಲಿ ಯಾವ ಕೊರತೆ ಇಲ್ಲ। ನನ್ನಂತಹ ಬಾಲಕನ ಮೇಲೆ ಕೃಪೆಮಾಡಿದ್ದರಿಂದ ನಾನು ಧನ್ಯನಾದೆ । ಮುಂದೆ ಹೋಗಿ ಕೆಲವು ದಿನ ಬಾಳಾಪುರದಲ್ಲಿ ತಂಗುವ ಕೃಪೆ ಮಾಡಿರೆಂದರು । ಆಗ ಮಹಾರಾಜರು ನಾನು ಈಗ ಇಲ್ಲಿ ಇರಲಾರೆ। ಕೆಲವು ದಿನಗಳ ನಂತರ ಮರಳಿ ಬಾಳಾಪುರಕ್ಕೆ ಬರುವೆನು। ಊಟ ಮಾಡಿ ಮಹಾರಾಜರು ಶೇಗಾಂವಿಗೆ ಮರಳಿದರು। ದಾರಿಯಲ್ಲಿ ಯಾರೂ ಅವರನ್ನು ನೋಡಲಿಲ್ಲ। ವಾಯು ವೇಗದಿಂದ ಅವರು ಶೇಂಗಾವಿಗೆ ತಲುಪಿದರು । ಸ್ವಸ್ತಿಶ್ರೀ ದಾಸಗಣುವಿರಚಿತ ಈ ಶ್ರೀ ಗಜಾನನವಿಜಯವೆಂಬ ಗ್ರಂಥವು ಭಾವಿಕರಿಗೆ ಸುಖ ಶಾಂತಿ ಕೊಡಲಿ, ಇದೇ ದಾಸಗಣುವಿನ ಇಚ್ಛೆ ।

॥ ಶ್ರೀ ಹರಿಹರಾರ್ಪಣಮಸ್ತು ॥ ಶುಭಂ ಭವತು ॥





ಶ್ರೀ ಗಜಾನನ ಮಹಾರಾಜರ ದರ್ಶನವಾಗುತ್ತಲೇ ಆಕಳು ಸಭ್ಯವಾಯಿತು.

## ॥ ಅಧ್ಯಾಯ ೧೦ ॥

ಶ್ರೀ ಗಣೇಶಾಯನಮಃ । ಹೇ ಅರೂಪ, ಅವ್ಯಯ, ಪೂರ್ಣಬ್ರಹ್ಮ ಪಂಢರಿರಾಯಾ । ತಮ್ಮ ಬಳಿ ಆಶ್ರಿತನಾಗಿ ಬಂದವನಿಗೆ ಹಿಂದೆ ಕಳುಹಿಸದಿರಿ । ಭಗವನ್, ಈ ದಾಸಗಣುಗೆ ಬೇರೆಯವನೆನಿಸದಿರಿ । ಹೇ ನಾರಾಯಣ, ನನ್ನ ಪಾಪಗಳ ಬಗ್ಗೆ ಮನಸ್ಸಿನಲ್ಲಿ ವಿಚಾರವನ್ನು ಕೂಡಾ ತರಬೇಡಿರಿ । ನನಗೆ ಗೊತ್ತಿದೆ, ನನ್ನಿಂದ ಯಾವ ಪುಣ್ಯಕರ್ಮವಾಗಿಲ್ಲ ಅಷ್ಟೇ ಅಲ್ಲದೆ, ನಾನು ತಮಗೆ ಮುಖವನ್ನು ತೋರಿಸಲಾರೆ । ಹೀಗಿದ್ದರೂ, ಹೇ ನಾಥ, ನನ್ನ ಮೇಲೆ ಕೃಪೆ ಮಾಡಿರಿ ಏಕೆಂದರೆ, ಹಳ್ಳದ ನೀರು ಕೊಳಚೆಯಾಗಿದ್ದರೂ, ಗೋದಾವರಿಯು ತನ್ನಲ್ಲಿ ಸೇರಿಸಿಕೊಳ್ಳುತ್ತಾಳೆ । ಅದೇ ರೀತಿ ತಾವು ನನ್ನ ಮೇಲೆ ದಯೆ ತೋರಿದರೆ ನನ್ನ ಪಾಪಗಳು ಮುಗಿದು ನಾನು ದುಃಖ ಮುಕ್ತನಾಗುವೆನು । ತಾವು ಮನಸ್ಸು ಮಾಡಿದರೆ ಎಲ್ಲವೂ ಸಾಧ್ಯ । ತಮ್ಮ ಕೃಪೆಯಾದರೆ ಭಿಕ್ಷುಕನು ಅರಸನಾಗುತ್ತಾನೆ । ಇರಲಿ; ಒಮ್ಮೆ ಪುಣ್ಯರಾಶಿ ಮಹಾರಾಜರು ಅಮರಾವತಿಗೆ ಹೋಗಿ, ಆತ್ಮಾರಾಮ ಭಿಕಾಜಿಯ ಮನೆಯಲ್ಲಿ ತಂಗಿದರು । ಈ ಆತ್ಮಾರಾಮನು ಅಮರಾವತಿಯ ಪ್ರಾಂತೀಯ ಅಧಿಕಾರಿಯಾಗಿದ್ದನು । ಅಧಿಕಾರಯಾಗಿದ್ದರಿಂದ ಅವನ ಕೈಯಲ್ಲಿ ಎಲ್ಲ ಅಧಿಕಾರವಿತ್ತು ಅವನದು ಕಾಯಸ್ಥ ಪ್ರಭು ಜಾತಿ । ಅವನು ಸದಾಚಾರ ಸಂಪನ್ನ ಗೃಹಸ್ಥಾಶ್ರಮಿಯಾಗಿದ್ದರೂ, ಸಂತ–ಮಹಂತರ ಬಗ್ಗೆ ಪ್ರೇಮ ಹಾಗೂ ಆದರ ಭಾವವನ್ನು ಇಡುತ್ತಿದ್ದನು । ಗಜಾನನ ಮಹಾರಾಜರು ಅಲ್ಲಿ ಬಂದೊಡನೆ ಅವನು ಉಚಿತ ಆದರೆ ಸತ್ಕಾರ ಮಾಡಿದನು । ನಂತರ ಮಹಾರಾಜರಿಗೆ ಅಭ್ಯಂಗ ಸ್ನಾನ ಮಾಡಿಸಿದನು । ಸಂತ ಸಹವಾಸ ಹಾಗೂ ಸೇವೆಯಲ್ಲಿ ಅವನು ಮಗ್ನನಾದನು । ಭರ್ಜರಿ ಧೋತರವನ್ನು ಉಡಿಸಿ, ಹಣೆಯ ಮೇಲೆ ತಿಲಕವಿಟ್ಟನು । ಧೂಪ ದೀಪಗಳಿಂದ ಆರತಿ ಮಾಡಿ, ಪುಷ್ಪಾಂಜಲಿಯನ್ನು ಸಮರ್ಪಿಸಿದನು । ಮಹಾರಾಜರ ಈ ಪೂಜೆಯನ್ನು ನೋಡಲು ಅಮರಾವತಿ ನಿವಾಸಿಗಳು ಗದ್ದಲ ಮಾಡಿದರು । ಮಹಾರಾಜರ ಪ್ರಸನ್ನ ವೃತ್ತಿಯನ್ನು ನೋಡಿ ಎಲ್ಲರೂ ಮಹಾರಾಜರು ತಮ್ಮ ಮನೆಗೆ ಬಂದು ನಮ್ಮ ಸೇವೆಯನ್ನು ಸ್ವೀಕರಿಸಬೇಕು ಎಂದು ಯೋಚಿಸುತ್ತಿದ್ದರು । ಆದರೆ ಎಲ್ಲರ ಇಚ್ಛೆ ನೆರವೇರುವದು ಹೇಗೆ ಸಾಧ್ಯ ? ಯಾವನು ಪುಣ್ಯವಂತನೋ, ಅವನ ಮನಗೆ ಸಂತರ ಪಾದಧೂಳ ತಗಲುವದು ಸಾಧ್ಯ । ಸಾಧುಗಳು ಅಂತರಜ್ಞಾನಿಗಳು । ಆದ್ದರಿಂದ ಯಾರ ಇಚ್ಛೆಯು ಪ್ರಬಲವಾಗಿತ್ತೋ, ಅವರ ಮನೆಗೆ ಮಹಾರಾಜರು ಹೋದರು । ಅಮರಾವತಿಯಲ್ಲಿ ಗಣೇಶ ಶ್ರೀಕೃಷ್ಣ ಖಾಪರ್ಡೆ ಎಂಬ ಸಜ್ಜನ ಗೃಹಸ್ಥರಿದ್ದರು । ಅವರು

ಶ್ರೀಗಜಾನನ ॥ ೯೨ ॥

ವಿಜಯ ಅ.॥ ೧೦ ॥

ವಕೀಲರಿದ್ದು, ತಮ್ಮ ಬುದ್ಧಿ ಚಾತುರ್ಯದಿಂದ ಸಾವಿರಾರು ರೂಪಾಯಿಗಳನ್ನು ಗಳಿಸುತ್ತಿದ್ದರು । ವರ್ಹಾಡ ಪ್ರಾಂತದಲ್ಲಿ ಅವರು 'ದಾದಾಸಾಹೇಬ' ಎಂದು ಪ್ರಸಿದ್ಧಿ ಪಡೆದಿದ್ದರು । ಅವರು ಸಜ್ಜನ ಹಾಗೂ ಭಾವಿಕರಿದ್ದರು ಯ ಅವರು ಶುಕ್ಲ ಯಜುರ್ವೇದಿ ಶಾಖೆಯ ಬ್ರಾಹ್ಮಣರಿದ್ದರು । ಅವರು ಮಹಾರಾಜರನ್ನು ಮನೆಗೆ ಬರಲು ಆಮಂತ್ರಿಸಿದಂತೆ, ಮಹಾರಾಜರು ಮನೆಗೆ ಹೋದರು । ಅವರ ಮನೆಯಲ್ಲಿಯೂ ಮಹಾರಾಜರ ಷೋಡಶೋಪಚಾರ ಪೂಜೆ ಮಾಡಿದರು । ಅಮರಾವತಿಯಲ್ಲಿ ಗಣೇಶ ಅಪ್ಪಾ ಎಂಬ ಲಿಂಗಾಯತ ವ್ಯಾಪಾರಿ ಇದ್ದನು । ಅವನ ಹೆಂಡತಿಯ ಹೆಸರು ಚಂದ್ರಾಬಾಯಿ । ಅವಳು ಶ್ರದ್ಧಾಳು ಆಗಿದ್ದಳು । ಚಂದ್ರಾಬಾಯಿಯು ಮಹಾರಾಜರನ್ನು ತಮ್ಮ ಮನೆಗೆ ಕರೆದುಕೊಂಡು ಬರುವಂತೆ ಪತಿಗೆ ಬಿನ್ನವಿಸಿದಳು । ಅವರಿಗೆ ಮನೆಗೆ ಬರುವಂತೆ ಪ್ರಾರ್ಥಿಸಿದರು । ಮಹಾರಾಜರು ಭಕ್ತರ ಕಲ್ಪತರು ಇರುವದರಿಂದ ಅವರ ಚರಣಧೂಳಿ ನಮ್ಮ ಮನೆಯನ್ನು ಮಂಗಲ ಮಾಡುವದು । ನಿನಗೆ ಹುಚ್ಚು ಹಿಡಿದಿದೆ ಏನು?। ಮಹಾರಾಜರನ್ನು ಮನೆಗೆ ಕರೆತರುವದು ಬಹಳ ಕಠಿಣ ಎಂದು ಗಣೇಶ ಅಪ್ಪಾ ತಮ್ಮ ಹೆಂಡತಿಗೆ ಹೇಳಿದನು । ಅದಕ್ಕೆ ಸಹಿ ಹಾಗೂ ಶಿಫಾರಸಿನ ಅವಶ್ಯಕತೆ ಇದೆ । ದಾದಾಸಾಹೇಬ ಖಾಪರ್ಡೆಯವರ ಮನೆಗೆ ಬಲು ಕಷ್ಟದಿಂದ ಮಹಾರಾಜರು ಬಂದಿರುವರು । ಆದ್ದರಿಂದ ಮಹಾರಾಜರನ್ನು ಮನೆಗೆ ತರುವ ಹಟ ಹಿಡಿಯಬೇಡ । ನಾಥ, ನೀವು ನುಡಿಯುವದು ನಾನು ಒಪ್ಪಲಾರೆ ಎಂದಳು ಚಂದ್ರಾಬಾಯಿ । ನನ್ನ ಮನೋದೇವತೆ ನನಗೆ ಹೇಳುತ್ತಿದ್ದಾಳೆ, ಅವರು ಅವಶ್ಯವಾಗಿ ನಮ್ಮ ಮನೆಗೆ ಬರುವರೆಂದು । ತಾವು ಒಮ್ಮೆ ಅವರಿಗೆ ಪ್ರಾರ್ಥಿಸಿ ನೋಡಿರಿ ಏಕೆಂದರೆ ಸಂತರ ದೃಷ್ಟಿಯು ವಿಶೇಷವಾಗಿ ಬಡವರ ಮೇಲಿರುತ್ತದೆ । ಅಪ್ಪಾ ಹೊರಗೆ ಹೊರಟನು ಆದರೆ ಮಹಾರಾಜರನ್ನು ಮನೆಗೆ ಕರೆಯುವ ಧೈರ್ಯ ಮಾಡಲಿಲ್ಲ । ಮಹಾರಾಜರ ಮುಂದೆ ಸುಮ್ಮನೆ ಕುಳಿತನು । ಮಹಾರಾಜರು ಅವನ ಮನದ ಇಂಗಿತವನ್ನು ಅರಿತು, ಅವನ ಕೈ ಹಿಡಿದು ಪ್ರಶ್ನಿಸಿದರು, ಎಲೈ ಅಪ್ಪಾಜಿ, ನಿನ್ನ ಮನೆ ಇಲ್ಲಿಂದ ಎಷ್ಟು ದೂರವಿದೆ ? ನಿನ್ನ ಮನೆಗೆ ಹೋಗಿ ಸ್ವಲ್ಪ ವಿಶ್ರಮಿಸುವ ಇಚ್ಛೆ ಇದೆ । ತಮ್ಮ ಮನಸ್ಸಿನಲ್ಲಿಯ ಇಚ್ಛೆಯನ್ನು ವ್ಯಕ್ತಪಡಿಸಬೇಕು । ಮನದಲಿದದ್ದನ್ನು ಮುಚ್ಚಿಡುವದು ಒಳ್ಳೆಯದಲ್ಲ । ಮಹಾರಾಜರು ತಮ್ಮ ಮನದಲ್ಲಿಯ ಮಾತನ್ನು ಅರಿತಿರುವದನ್ನು ನೋಡಿ ಅಪ್ಪಾಜಿ ಆನಂದಿತನಾದನು । ಆನಂದಾತಿರೇಕದಿಂದ ಅವನ ಬಾಯಿಂದ ಶಬ್ದಗಳು ಹೊರಡಲಿಲ್ಲ । ಅಪ್ಪಾಜಿ, ಮಹಾರಾಜರನ್ನು ಜೊತೆಗೆ ಕರೆದುಕೊಂಡು ಮನೆಗೆ ಬಂದನು । ಪತಿ ಪತ್ನಿ ಇಬ್ಬರೂ ಸೇರಿ ಮಹಾರಾಜರ ಪೂಜೆ ಮಾಡಿದರು । ಮತ್ತು



ಶ್ರೀಗಜಾನನ ॥ ೯೩ ॥

ವಿಜಯ ಅ.॥ ೧೦ ॥

ದಕ್ಷಿಣೆಯ ರೂಪದಲ್ಲಿ ತನ್ನ ಸರ್ವಸ್ವವನ್ನು ಮಹಾರಾಜರ ಚರಣಗಳಲ್ಲಿ ಅರ್ಪಿಸಿದನು । ಇರಲಿ ! ಈ ರೀತಿ ಮಹಾರಾಜರ ಆ–ಸತ್ಕಾರವು ಅಮರಾವತಿಯಲ್ಲಿ ಅನೇಕ ಸ್ಥಳಗಳಲ್ಲಿ ನಡೆಯಿತು । ಪ್ರತಿಯೊಂದು ಪೂಜೆಯ ಸಮಯದಲ್ಲಿ ಒಬ್ಬ ಸಜ್ಜನನು ಇರುತ್ತಿದ್ದನು । ಅವನು ಆತ್ಮರಾಮ ಭಿಕಾಜಿಯ ಸೋದರಳಿಯನಾಗಿದ್ದನು । ಅವನು ಮುಂಬಾಯಿಯಲ್ಲಿ ಪೋಸ್ಟ ಮಸ್ತರನ ನೌಕರಿ ಮಡುತ್ತಿದ್ದನು । ಅವನು ರಜೆಯನ್ನು ಪಡೆದು ತಮ್ಮ ಕಕ್ಕನಿಗೆ ಭೆಟ್ಟಿಯಾಗಲು ಅಮರಾವತಿಗೆ ಬಂದಿದ್ದನು । ಅವನ ಹೆಸರು ಬಾಳಾಭಾವು । ಮಹಾರಾಜರ ಪ್ರಭಾವದಿಂದ ಬಾಳಾಭಾವು ಆಕರ್ಷಿತನಾದನು । ಅವರ ಮಹಿಮೆಯನ್ನು ನೋಡಿ, ಅವರ ಬಳಿ ಇದ್ದು ಅವರ ಸೇವೆ ಮಾಡಬೇಕು ಎಂಬ ವಿಚಾರ ಬಂದಿತು । ಪ್ರಪಂಚವು ಅಶಾಶ್ವತ । ಅದರಲ್ಲಿ ಮುಳುಗಿ ಹೋಗುವದು ವ್ಯರ್ಥ । ಇಲ್ಲಿಯವರೆಗೆ ಪ್ರಪಂಚದ ಭಾರವನ್ನು ಹೊತ್ತಿರುವೆನು । ಈಗ ಪ್ರಪಂಚದಿಂದ ಮುಖ ಮರೆಯಿಸುವದೇ ಒಳ್ಳೆಯದು । ಇಲ್ಲಿಯವರೆಗೆ ನಡೆದದ್ದನ್ನು ಬ್ರಹ್ಮಾರ್ಪಣವೆಂದು ಮಹಾರಾಜರ ಶ್ರೀ ಚರಣಗಳನ್ನು ಹಿಡಿಯುವದೇ ಲೇಸು । ಅಮೃತವು ದೊರಕಿದಾಗ, ವಿಷಯವನ್ನು ಯಾರು ಸೇವಿಸುವರು । ಈ ನಿಶ್ಚಯದಿಂದ ಬಾಳಾಭಾವು ಪ್ರತಿಯೊಂದು ಪೂಜಾ ವಿಧಿಯನ್ನು ಪ್ರತಿನಿಧಿಸತೊಡಗಿದನು । ಮಹಾರಾಜರು ಕೆಲವು ದಿನಗಳ ನಂತರ ಶೇಗಾಂವಿಗೆ ಮರಳಿದರು । ಈ ಸಲ ಮನೆಗೆ ಹೋಗದೆ ಮೋಟೆ ಮಂದಿರಕ್ಕೆ (ಹನುಮಂತನ ಮಂದಿರಕ್ಕೆ) ಹೋದರು । ಆ ಮಂದಿರದ ಪೂರ್ವ ದಿಕ್ಕಿನಲ್ಲಿ ಒಂದು ಕಾಲಿ ಜಾಗೆ ಇತ್ತು । ಗಜಾನನ ಮಹಾರಾಜರು ಅಲ್ಲಿಯೇ ಹೋಗಿ ಕುಳಿತರು । ಮನೆಯನ್ನು ಬಿಟ್ಟು ಮಹಾರಾಜರು ಮಂದಿರದಲ್ಲಿ ನೆಲೆಸಿರುವ ಸುದ್ದಿ ಕೃಷ್ಣಾ ಪಾಟೀಲನಿಗೆ ತಿಳಿಯಿತು । ಅವನು ಕೂಡಲೆ ಅಲ್ಲಿ ತಲುಪಿದನು । ಮಹಾರಾಜರಿಗೆ ಸಾಷ್ಟಾಂಗ ನಮಸ್ಕಾರ ಮಾಡಿ ಅಧೋಮುಖನಾಗಿ ಕುಳಿತನು । ಕಣ್ಣೀರಿನಿಂದ ಎದೆಯ ಮೇಲಿನ ಅಂಗಿಯ ಭಾಗವು ಹಸಿಯಾಯಿತು । ಅವನ ಈ ಸ್ಥಿತಿಯನ್ನು ನೋಡಿ ಮಹಾರಾಜರು ಪ್ರಶ್ನಿಸಿದರು, ಎಲೈ ಕೃಷ್ಣಾ ನೀನು ಅಳುವದೇಕೆ । ಶೋಕಾಕುಲನಾಗುವ ಕಾರಣವೇನು ? ನನಗೆ ಏನಾದರೂ ತಿಳಿಸು । ಪಾಟೀಲನು ಕೈ ಮುಗಿದು ನುಡಿದನು, ಮಹಾರಾಜ ನೀವು ಮನೆಯನ್ನು ಬಿಡುವ ಕಾರಣವೇನು ? ನನ್ನಿಂದ ಅದೆಂತಹ ಅಪರಾಧವಾಗಿದೆ ? ಮಹಾರಾಜ, ನಾನು ತಮ್ಮ ಬಾಲಕ । ಈ ಸ್ಥಳವು ದೇಶಮುಖನ ಪಕ್ಷಪಾತಿಯನದು । ಆದ್ದರಿಂದ ತಾವು ಇಲ್ಲಿ ಇರುವದು ಉಚಿತವಲ್ಲ । ತಾವು ಅಲ್ಲಿ ಇರಲು ಒಪ್ಪದಿದ್ದರೆ ತಾವು ನನ್ನ ಮನೆಯಲ್ಲಿ ನಿಲ್ಲಿರಿ । ಏಕೆಂದರೆ ತಾವೇ ನನ್ನ ಸರ್ವಸ್ವ । ಈ ವಾರ್ತೆ ಪಾಟೀಲ ಪರಿವಾಕ್ಕೆ

ತಿಳಿದೊಡನೆ ಅವರು ಅಲ್ಲಿ ಉಪಸ್ಥಿತರಾದರು । ಹರಿ ಹಾಗೂ ನಾರಾಯಣ ಪಾಟೀಲರೂ ಮಹಾರಾಜರಿಗೆ ಮನೆಗೆ
ಬರುವಂತೆ ಪ್ರಾರ್ಥಿಸಿದರು । ಎಲ್ಲರ ಮಾತುಗಳನ್ನು ಕೇಳಿ ಮಹಾರಾಜರು ನಾನು ಇಲ್ಲಿ ಇರಲು ಬಂದಿರುವದು
ತಮ್ಮೆಲ್ಲರ ಒಳ್ಳೆಯದಕ್ಕಾಗಿಯೇ। ನಾನು ಇಲ್ಲಿ ವಾಸಿಸುವ ಕಾರಣ ತಮಗೆ ನಂತರ ತಿಳಿಯುವದು। ಈಗ ಈ ವಿಷಯದಲ್ಲಿ
ವಾದ ವಿವಾದವು ವ್ಯರ್ಥ । ಈ ಸ್ಥಳದ ಪ್ರಭಾವದಿಂದ ತಮ್ಮ ಕಲಹಗಳು ಮುಗಿಯುವವು । ಜಗತ್ತಿನ ಯಾವದೇ
ಜಮೀನುದಾರನು ಆಳವಾಗಿ ವಿಚಾರ ಮಾಡುವದಿಲಲ। ಭವಿಷ್ಯದ ಬಗ್ಗೆ ದೂರದೃಷ್ಟಿಯಿಂದ ವಿಚಾರ ಮಾಡುವದಿಲ್ಲ।
ಹೋಗಿ ಬಂಕಟಲಾಲನನ್ನು ಕರೆದುಕೊಂಡು ಬನ್ನಿರಿ । ಅವನ ಮನೆಯನ್ನು ಬಿಟ್ಟಾಗ ಅವನು ಸಿಟ್ಟಾಗಲಿಲ್ಲ । ಏಕೆ
ಸಿಟ್ಟಾಗಲಿಲ್ಲ? ಇದರ ನಿಜ ಕಾರಣವನ್ನು ಅವನಿಗೆ ಕೇಳಿರಿ। ನನ್ನ ಕೃಪೆ ತಮ್ಮೆಲ್ಲರ ಮೇಲೆ ಇದೆ। ಅದು ಕಡಿಮೆಯಾಗದಂತೆ
ಪ್ರಯತ್ನಮಾಡಿರಿ । ಅಷ್ಟರಲ್ಲಿ ಬಂಕಟಲಾಲನು ಅಲ್ಲಿ ಉಪಸ್ಥಿತನಾದನು । ಅವನು ಎಲ್ಲರಿಗೆ ಮಹಾರಾಜರ ಇಚ್ಛೆಯ
ವಿರುದ್ಧ ತಮ್ಮ ಮನೆಗೆ ಕರೆದುಕೊಂಡು ಹೋಗಬಾರದು ಎಂದು ತಿಳಿಹೇಳಿದನು । ನನ್ನ ಮನೆಯಿಂದ ಮಹಾರಾಜರು
ಹೋದಾಗ ನಾನು ಅವರನ್ನು ತಡೆಯಲು ಅಸಮರ್ಥನಾದೆನು । ನಾನು ಅವರಿಗೆ ಹೋಗಲು ಸಮ್ಮತಿಸಬೇಕಾಯಿತು।
ಕೊನೆಗೆ ನಾವೆಲ್ಲರೂ ಅವರ ಮಕ್ಕಳೇ ಅವರಿಗೆ ಎಲ್ಲರೂ ಸಮಾನರು । ಸಖಾರಾಮ ಅಸೋಲಕರನು ಸದ್‌ಗೃಹಸ್ಥನು।
ಅವನು ಮಹಾರಾಜರಿಗೆ ಅವಶ್ಯವಾಗಿ ಈ ಜಾಗೆಯನ್ನು ಕೊಡುವನು । ಸಖಾರಾಮನು ಜಾಗೆಯನ್ನು ಕೊಡುವನು,
ಮತ್ತು ಮುಂದಿನದೆಲ್ಲವನ್ನು ನಾವು ನೋಡೋಣ ಯಾವುದರಿಂದ ನಮ್ಮೆಲ್ಲರಿಗೂ ಸಹಾಯ ಮಾಡುವ ಸಂಧಿ
ದೊರಕುವದು । ಕೊನೆಗೆ ಎಲ್ಲರೂ ಸೇರಿ, ವಿಶೇಷವಾಗಿ ಪರಶರಾಮ ಸಾವಜಿಯ ಸಹಾಯದಿಂದ ಮಠವನ್ನು
ಸ್ಥಾಪಿಸಿದರು । ಈಗ ಮಹಾರಾಜರ ಜೊತೆಗೆ ಅವರ ನಿಸ್ಸೀಮ ಭಕ್ತರಿದ್ದರು – ಭಾಸ್ಕರ, ಬಾಳಾಭಾವು, ಪಿತಾಂಬರ,
ಹಾಗೂ ಅಮರಾವತಿಯ ಗಣೇಶ ಅಪ್ಪಾ । ರಾಮಚಂದ್ರ ಗುರವನು ಅವರೊಡನೆ ಇರುತ್ತಿದ್ದನು । ಎಲ್ಲರೂ ಸೇರಿ
ಗಜಾನನ ಮಹಾರಾಜರ ಪಂಚ ಪಾಂಡವರಂತೆ ಕಾಣುತ್ತಿದ್ದರು । ಮಹಾರಾಜರ ಸಹವಾಸದಿಂದ ಬಾಳಾಭಾವು
ಪ್ರಪಂಚದಿಂದ ವಿರಕ್ತನಾದನು । ಮನೆಗೆ ಹಿಂದಿರುಗುವಂತೆ ಕರೆ ಕಳುಹಿಸಿದರೂ, ಬಾಳಾಭಾವು ಹೋಗುತ್ತಿರಲಿಲ್ಲ ।
ಅವನ ಈ ವೃತ್ತಿಯನ್ನು ನೋಡಿ ಭಾಸ್ಕರ ಪಾಟೀಲನು ನುಡಿದನು, ಹೇ ಗುರುರಾಜ, ಬಾಳಾಭಾವು ಪೇಢೆಯ ॥ 94 ॥
ಮೋಹದಿಂದ, ಹಿಂತಿರುಗಿ ಹೋಗುವ ಮಾತೆತ್ತುವದಿಲ್ಲ। ತಾವು ಅವನನ್ನು ಚೆನ್ನಾಗಿ ಬಾರಿಸಿದರೆ, ಅವನು ಮನೆಗೆ





ಹೋಗುವನು। ಅವನು ತುಪ್ಪವನ್ನು ಕಂಡಿರುವನು, ಆದರೆ ಅದರ ಹಿಂದೆ ಅಡಗಿದ ಕೂದಲನ್ನು ಕಂಡಿಲ್ಲ। ಆದ್ದರಿಂದ
ಅವನು ಹಿಂತಿರುಗಿ ಹೋಗುತ್ತಿಲ್ಲ। ವಜ್ರದ ಪ್ರಭಾವದಿಂದ ಪರ್ವತಗಳು ಕೂಡಾ ನಡುಗುತ್ತವೆ । ಮಹಾರಾಜರ
ಅಪ್ಪಣೆ ಇಲ್ಲದೆ, ಒಮ್ಮೆ ಭಾಸ್ಕರನು ಬಾಳಾಭಾವುನನ್ನು ಮಠದಿಂದ ಹೊರಗೆ ಅಟ್ಟಿದನು, ಆದರೆ ನೌಕರಿಗೆ ರಾಜೀನಾಮೆ
ಕೊಟ್ಟು, ಬಾಳಾಭಾವು ಹಿಂತಿರುಗಿ ಮಠಕ್ಕೆ ಬಂದನು । ಬಾಳಾಭಾವುವನ್ನು ಮತ್ತೊಮ್ಮೆ ಶೇಗಾಂವಿಯಲ್ಲಿ ನೋಡಿ
ಭಾಸ್ಕರನು ಸಿಟ್ಟಿನಿಂದ ಏನೋ, ಇಲ್ಲಿ ಹಗಲೆಲ್ಲ ಬಂದು ನಮಗೆ ಏಕೆ ಕಾಡಿಸುವಿ ? ಹಸಿರು ಹುಲ್ಲನ್ನು ನೋಡಿ ಎತ್ತು
ಹಗಲೆಲ್ಲ ಅಲ್ಲಿ ಬರುತ್ತದೆ ಎಷ್ಟೇ ಹೊಡೆದರೂ ಏನು । ಅದೇ ರೀತಿ ನಿನ್ನ ಸ್ಥಿತಿಯಾಗದೆ । ಯಾರಿಗೆ ನಿಜವಾಗಿ
ಸಂಸಾರದಿಂದ ವಿರಕ್ತಿಯಾಗಿದೆ, ಅವರಿಗೆ ಮಾತ್ರ ಇಲ್ಲಿ ಸ್ಥಾನವಿದೆ । ಭಾಸ್ಕರನ ಈ ಅಹಂಕಾರ ಮಹಾರಾಜರಿಗೆ
ಸರಿಯೆನಿಸಲಿಲ್ಲ। ಭಾಸ್ಕರನ ಅಜ್ಞಾನವನ್ನು ದೂರಗೊಳಿಸಲು ಮಹಾರಾಜರು ಚಮತ್ಕಾರ ಮಾಡಿದರು। ಒಬ್ಬ ಸಜ್ಜನನ
ಕೈಯಲ್ಲಿಯ ಕೊಡೆ ಇತ್ತು। ಅದರಿಂದ ಮಹಾರಾಜರು ಬಾಳಾಭಾವುವನ್ನು ಹೊಡೆಯಲಾರಂಬಿಸಿದರು। ಆ ಹೊಡೆತದ
ಜೋರಿನಿಂದ ಆ ಕೊಡೆಯು ಮುರಿಯಿತು । ನಂತರ ಒಂದು ಕಟ್ಟಿಗೆಯಿಂದ ಅವರು ಬಾಳಾಭಾವುವನ್ನು
ಹೊಡೆಯಲಾರಂಬಿಸಿದರು। ನಡೆದ ಪ್ರಕಾರವನ್ನು ನೋಡಿ ಹೆದರುಪುಕ್ಕರು ಮಠದಿಂದ ಕಾಲು ಕಿತ್ತಿದರು। ಬಾಳಾಭಾವು
ಅವಿಚಲನಾಗಿ ಮಹಾರಾಜರ ಮುಂದೆ ಬಿದ್ದಿದ್ದನು। ಮಹಾರಾಜರ ಹೊಡೆತದಿಂದ ಅವನು ಸತ್ತಿರಬಹುದು ಎಂಬ ಶಂಕೆ
ಕೆಲವರ ಮನಸ್ಸಿನಲ್ಲಿ ಉಂಟಾಯಿತು । ಬಾಳಾಭಾವುನ ಈ ಸ್ಥಿತಿಯನ್ನು ನೋಡಿ ಭಾಸ್ಕರನು ಚಿಂತಾಕ್ರಾಂತನಾದನು ।
ಆದರೆ ಅವನು ಏನೂ ನುಡಿಯಲಾರ, ಏಕೆಂದರೆ ಅವನೇ ಇದನ್ನು ಆರಂಭಿಸಿದ್ದನು । ಅವನನ್ನು ಹೊಡೆಯುವ
ಕಟ್ಟಿಗೆಯು ಮುರಿಯಿತು । ಆದ್ದರಿಂದ ಮಹಾರಾಜರು ಅವನನ್ನು ತುಳಿಯಲಾರಂಭಿಸಿದರು । ಯಾವ ರೀತಿ
ಕುಂಭಾರನು ಮಣ್ಣನ್ನು ತುಳಿಯುವನೋ ಅದೇ ರೀತಿ ಬಾಳಾಭಾವುವಿನ ಸ್ಥಿತಿಯಾಗಿತ್ತು। ಮಠದಲ್ಲಿ ನಡೆಯುವ ಈ
ಪ್ರಕಾರದಿಂದ ಭಕ್ತರು, ಶಿಷ್ಯಗಣರು ಓಡತೊಡಗಿದರು । ಕೆಲವರು ಮಹಾರಾಜರ ಪ್ರೀಯ ಭಕ್ತರನ್ನು
ಕರೆಯತೊಡಗಿದರು। ಸಮಾಚಾರ ತಿಳಿದೊಡನೆ ಬಂಕಟಲಾಲನು ಮಠದಲ್ಲಿ ಬಂದು ನೋಡಿದರೆ ಮಹಾರಾಜರ ಕೈ
ಹಿಡಿಯುವ ಶಕ್ತಿಯಾರಲ್ಲಿಲ್ಲ। ಕೊನೆಗೆ ಬಂಕಟಲಾಲನು ಹೆದರುತ್ತ ನುಡಿದನು ಮಹಾರಾಜ ಬಾಳಾಭಾವು ನಿಮ್ಮ ಭಕ್ತನು। ॥ 95 ॥
ಅವನನ್ನು ಹೊಡೆಯದಿರಿ । ಬಂಕಟಲಾಲನ ಮಾತನ್ನು ಕೇಳಿ ಮಾಹಾರಾಜರು ನಕ್ಕು ನುಡಿದರು, ಈ ರೀತಿ ಅಸಂಬದ್ಧ

ಮಾತನಾಡಬೇಡ। ನಾನು ಬಾಳಾಗೆ ಹೊಡೆಯಲಿಲ್ಲ ಅಥವಾ ತುಳಿಯಲಿಲ್ಲ। ಸ್ವಲ್ಪ ಸರಿಯಾಗಿ ಅವನ ಕಡೆಗೆ ನೋಡು,
ಅಂದರೆ ನಿನಗೆ ತಿಳಿಯುವದು । ಮಹಾರಾಜರು ಬಾಳಾಭಾವು ನುಡಿದರು, ಬಾಲಕನೇ ಎದ್ದೇಳು ಹಾಗೂ ತಮ್ಮ
ಶರೀರಿವನ್ನು ನೆರೆದ ಜನರಿಗೆ ತೋರಿಸು । ಆಜ್ಞೆಯಂತೆ ಬಾಳಾಭಾವು ಜನರೆದುರಿಗೆ ಎದ್ದು ನಿಂತನು । ಎಲ್ಲ ಜನರು
ಕಣ್ಣಿಟ್ಟು, ನೋಡತೊಡಗಿದರು। ಜನರು ಆಶ್ಚರ್ಯಚಕಿತರಾದರು ಏಕೆಂದರೆ, ಅವನ ಶರೀರದ ಮೇಲೆ ಯಾವ ಕಲೆಯೂ
ಇರಲಿಲ್ಲ। ಅವನು ನಿಜಾನಂದದಲ್ಲಿ ಮಗ್ನನಾಗಿದ್ದನು । ಬಾಳಾಭಾವುನಲ್ಲಿರುವ ವಿರಕ್ತತೆ, ಅವನ ಅಧಿಕಾರ ಇತ್ಯಾದಿ
ಭಾಸ್ಕರನು ತಮ್ಮ ಕಣ್ಣಿಂದಲೇ ನೋಡಿದನು । ಅವನು ನಾಚಿಕೆಯಿಂದ ತಲೆ ತಗ್ಗಿಸಿದನು ಮತ್ತು ಅಂದಿನಿಂದ
ಬಾಳಾಭಾವುನ ಬೆನ್ನು ಹತ್ತುವದನ್ನು ಬಿಟ್ಟನು। ಬಂಗಾರವನ್ನು ವರೆಗೆ ಹಚ್ಚಿದಾಗಲೇ ಅದರ ಬೆಲೆಯು ತಿಳಿಯುತ್ತದೆ।
ಈ ಚುಮತ್ಕಾರವನ್ನು ನೋಡಿ ಎಲ್ಲರೂ ಬೆರಳು ಕಚ್ಚಿದರು । ಬಾಳಾಪುರದಲ್ಲಿ ಸುಕಲಾಲ ಅಗರವಾಲನೆಂಬ
ಸಜ್ಜನನಿದ್ದನು। ಅವನ ಮನೆಯಲ್ಲಿ ಒಂದು ತುಂಬ ಆಕಳವಿತ್ತು। ಅದು ಊರಲ್ಲಿ ಮನಸ್ಸಿಗೆ ಬಂದಂತೆ ತಿರುಗುತ್ತಿತ್ತು।
ಊರಿನ ಮಕ್ಕಳಿಗೆ, ಹಿರಿಯರಿಗೆ ಅದು ಒದೆಯುತ್ತಿತ್ತು । ಯಾರು ಬಲವಂತರೋ ಅವರೊಡನೆ ಕೊಂಬಿನಿಂದ
ಕಾದಾಡುತ್ತಿತ್ತು। ಯಾರದೆ ಅಂಗಡಿಯಲ್ಲಿ ಹೊಕ್ಕು ಧಾನ್ಯದ ಚೀಲಗಳಲ್ಲಿ ಮೋರೆ ಸೇರಿಸುತ್ತಿತ್ತು। ಹೊಟ್ಟೆ ತುಂಬ ತಿಂದು
ನಂತರ ಎಲ್ಲ ವಸ್ತುಗಳನ್ನು ಚಿಲ್ಲಾ ಪಿಲ್ಲಿ ಮಾಡುತ್ತಿತ್ತು। ಕೊಂಬಿನಿಂದ ಕಾದಾಡುತ್ತಿತ್ತು। ಯಾರದ ಅಂಗಡಿಯಲ್ಲಿ ಹೊಕ್ಕು
ಧಾನ್ಯದ ಚೀಲಗಳಲ್ಲಿ ಮೋರೆ ಸೇರಿಸುತ್ತಿತ್ತು । ಹೊಟ್ಟೆ ತುಂಬ ತಿಂದು ನಂತರ ಎಲ್ಲ ವಸ್ತುಗಳನ್ನು ಚಿಲ್ಲಾ ಪಿಲ್ಲಿ
ಮಾಡುತ್ತಿತ್ತು। ಕೊಂಬಿನಿಂದ ಎಣ್ಣೆಯ ಡಬ್ಬಿಗಳನ್ನು ತಿವಿಯುತ್ತಿತ್ತು। ನುಗಿಸಿ ಕಪಾಟುಗಳನ್ನು ಬೀಳಿಸುತ್ತಿತ್ತು। ಹಗ್ಗದಿಂದ
ಕಟ್ಟಿ ಹಾಕಿದರೆ ಹಗ್ಗವನ್ನು ಹರಿಯುತ್ತಿತ್ತು। ಅನೇಕ ಸರಪಳಿಗಳನ್ನು ಮುರಿದಿತ್ತು। ಬಾಳಾಪುರದ ಜನರಿಗೆ ಅದು
ಆಕಳಲ್ಲದೇ ಹುಲಿಯನಿಸುತ್ತಿತ್ತು। ಜನರು ಆ ಆಕಳಿನ ಕಾಟದಿಂದ ಬೇಸತ್ತು ಹೋಗಿದ್ದರು। ಕರು ಇರಲಿಲ್ಲ ಆದ್ದರಿಂದ
ಹಾಲನ್ನು ಕೊಡುತ್ತಿರಲಿಲ್ಲ। ಅದನ್ನು ಕಟ್ಟಿ ಇಡುವದು ಒಂದು ದೊಡ್ಡ ಸಮಸ್ಯೆಯಾಗಿತ್ತು। ಜನರು ಸುಕಲಾಲನಿಗೆ ಆ
ಆಕಳನ್ನು ಕಟುಕನಿಗೆ ಕೊಡಲು ಅಥವಾ ಸ್ವಯಂ ಗುಂಡು ಹಾಕಲು ಹೇಳುತ್ತಿದ್ದರು। ಸುಕಲಾಲನು ಜನರಿಗೆ ಅವರೇ
ಹೇಗಾದರೂ ಮಾಡಿ ಅದನ್ನು ಕೊಲ್ಲಲು ಪ್ರಾರ್ಥಿಸುತ್ತಿದ್ದನು। ನನಗೆ ಅದರಲ್ಲಿ ಏನೂ ದುಃಖವಿಲ್ಲ। ಒಂದು ದಿನ ಒಬ್ಬ ॥ 96 ॥
ಪಠಾಣನು ಅದನ್ನು ಕೊಲ್ಲುವ ಪ್ರಯತ್ನ ಮಾಡಿದನು । ಅವನು ಗುರಿಯಿಟ್ಟು ಕುಳಿತನು । ಅವನು ಗಂಡು



ಹೊಡೆಯುವದರಲ್ಲಿದ್ದನು ಅಷ್ಟರಲ್ಲಿ ಆಕಳಿಗೆ ಅದು ಗೊತ್ತಾಗಿ, ಪಠಾಣನ ಮೈ ಮೇಲೆ ಓಡಿ ಹೋಗಿ ಕೊಡುಗಳಿಂದ
ಎಬ್ಬಿಸಿ ಅವನನ್ನು ಎಸೆಯಿತು। ಒಂದು ದಿನ ಸುಕಲಾಲನು ಆಕಳನ್ನು ಬೇರೆ ಊರಿನಲ್ಲಿ ಬಿಟ್ಟು, ಮರಳಿದರೆ, ಸ್ವಲ್ಪ ಹೊತ್ತಿನ
ನಂತರ ಅದು ಬಾಳಾಪುರಕ್ಕೆ ಮರಳಿ ಬಂದಿತು। ಈ ಸ್ಥಿತಿಯಲ್ಲಿ ಏನು ಮಾಡುವದು ಸಾಧ್ಯ ? ಈ ಮಾತುಗಳನ್ನು ಕೇಳಿ
ಯಾರೋ ಸಲಹೆ ಕೊಟ್ಟರು । ಮಹಾರಾಜರು ಗೋವಿಂದಬುವಾನ ಕುದುರೆಯನ್ನು ಹಾದಿಗೆ ತಂದಿರುವರು ಎಂದು
ಕೇಳಿರುವೆವು। ನೀವು ಕೂಡಾ ಶೇಗಾಂವಿಗೆ ಹೋಗಿ ಮಹಾರಾಜರಿಗೆ ಈ ಆಕಳನ್ನು ದಾನ ಮಾಡಿರಿ। ಇದರಿಂದ ಒಂದು
ಕಲ್ಲಿನಿಂದ ಎರಡು ಪಕ್ಷಿಗಳನ್ನು ಹೊಡೆದಂತಾಗವದು । ಸಾಧುವಿಗೆ ಆಕಳು ದಾನ ಮಾಡುವ ಪುಣ್ಯ ಹಾಗೂ ಒಂದು
ತಲೆಬೇನೆಯಿಂದ ಮುಕ್ತಿ। ಈ ಮಾತು ಎಲ್ಲರಿಗೂ ಸರಿಯೆನಿಸಿತು । ಆಕಳನ್ನು ಶೇಗಾಂವಿಗೆ ಕೊಂಡು ಹೋಗುವದು
ನಿಶ್ಚಿತವಾಯಿತು। ಆಕಳನ್ನು ಹಿಡಿದು, ಜಾಲದಲ್ಲಿ ಹಾಕಿ, ಸರಪಳಿಯಿಂದ ಬಿಗಿದರು। ನಂತರ ಅದನ್ನು ಎತ್ತಿನಗಾಡಿಯಲ್ಲಿ
ಹಾಕಿಕೊಂಡು ಶೇಗಾಂವಿಗೆ ಹೊರಟರು । ಶೇಗಾಂವಿ ಹತ್ತಿರ ಬಂದಂತೆ ಆಕಳಿನ ಸ್ವಭಾವದಲ್ಲಿ ಪರಿವರ್ತನೆಯಾಗ
ತೊಡಗಿತು । ಶೇಗಾಂವಿಯಲ್ಲಿ ಮಹಾರಾಜರ ಮುಂದೆ ಆಕಳನ್ನು ನಿಲ್ಲಿಸಿದಾಗ, ಅವರಿಗೆ ಆಕಳು ಬಹು ಶಾಂತ
ಸ್ವಭಾವದ ಹಾಗೂ ಕಣ್ಣೀರು ಸುರಿಸುವ ಸ್ಥಿತಿಯಲ್ಲಿ ಕಂಡು ಬಂದಿತು। ಆಕಳ ಸ್ಥಿಯನ್ನು ನೋಡಿ ಮಹಾರಾಜರು ಸಿಟ್ಟಿನಿಂದ
ನುಡಿದರು। ಇದೇನು ಮೂರ್ಖರೆ ! ಆಕಳಿನಂತಹ ಸಾಧು ಪ್ರಾಣಿಗೆ ಕಾಡಿಸುವದು ಒಳ್ಳೆಯದಲ್ಲ। ಎಂತಹ ದಯನೀಯ
ಸ್ಥಿತಿಯಲ್ಲಿ ಇದೆ। ನಾಲ್ಕು ಕಾಲುಗಳನ್ನು ಕಟ್ಟಲಾಗಿದೆ, ಕೊರಳಿನಲ್ಲಿ ಸರಪಳಿ ಹಾಗೂ ಕೋಡುಗಳನ್ನು ಕೂಡಾ ಕಟ್ಟಲಾಗಿದೆ।
ಈ ಪ್ರಕಾರದ ವ್ಯವಸ್ಥೆ ಹುಲಿಗೆ ಶೋಭಿಸುತ್ತದೆ । ಆಕಳಿನಂತಹ ಸಾಧು ಪ್ರಾಣಿಗೆ ಈ ರೀತಿ ಬಂಧನದಲ್ಲಿಡುವದು
ಶೋಭಿಸುವದಿಲ್ಲ। ಬಂಧುಗಳೇ ! ವಿಚಾರ ಮಾಡಿರಿ। ಆಕಳು ಜಗನ್ಮಾತೆಯ ಸಮಾನ। ಅದಕ್ಕೆ ಈ ಸ್ಥಿತಿಯನ್ನು ಉಂಟು
ಮಾಡುವದು ಒಳ್ಳೆಯದಲ್ಲ। ಇದನ್ನು ಕೂಡಲೆ ಬಿಟ್ಟುಬಿಡಿರಿ । ಈಗ ಅದು ಗದ್ದಲ ಮಾಡಲಾರದು । ಆದರೂ
ಹೆದರಿಕೆಯಿಂದ ಯಾರೂ ಮುಂದೆ ಹೋಗಲಿಲ್ಲ । ಎಲ್ಲರೂ ಹಿಂದೆ ಸರಿಯತೊಡಗಿದರು । ಇದನ್ನು ನೋಡಿ
ಮಹಾರಾಜರು ಸ್ವಯಂ ಮುಂದೆ ಸರಿದು ತಮ್ಮ ಕೈಗಳಿಂದ ಆಕಳನ್ನು ಬಂಧನಮುಕ್ತ ಮಾಡಿದರು। ಆಕಳು ಗಾಡಿಯಿಂದ
ಕೆಳಗೆ ಇಳಿಯಿತು । ಇಳಿದೊಡನೆ ಅದು ಮಹಾರಾಜರನ್ನು ವಂದಿಸಲು ತಮ್ಮ ಮುಂಗಾಲುಗಳನ್ನು ಬಗ್ಗಿಸಿತು । ನಂತರ ॥ 97 ॥
ತಲೆ ತಗ್ಗಿಸಿ ಮಹಾರಾಜರಿಗೆ ಮೂರು ಪ್ರದಕ್ಷಿಣೆಗಳನ್ನು ಹಾಕಿ ಅವರ ಕಾಲುಗಳನ್ನು ನಕ್ಕತೊಡಗಿತು। ಈ ಘಟನೆಯನ್ನು

ನೆರೆದ ಜನರ ನೋಡುತ್ತಿದ್ದರು । ಅದರ ವರ್ಣನೆ ಮಾಡುವದು ಅಸಾಧ್ಯ । ಮಹಾರಾಜರು ನಂತರ ಆಕಳಿಗೆ ಹೇ
ಧೇನುಮಾತೆ ಇನ್ನು ಮೇಲೆ ಯಾರಿಗೂ ಕಾಡಿಸಬೇಡ । ಈ ಮಠವನ್ನು ಬಿಟ್ಟು ಬೇರೆ ಎಲ್ಲಿಯೂ ಹೋಗಬೇಡ । ಈ
ಚಮತ್ಕಾರದಿಂದ ಪ್ರಭಾವಿತರಾಗಿ ಜನರು ಮಹಾರಾಜರ ಜಯಜಯಕಾರ ಮಾಡಿದರು । ಬಾಳಾಪುರದ ಜನರು
ಮರಳಿಹೋದರು । ಆಕಳು ಶೇಗಾಂವಿಯ ಮಠದಲ್ಲಿ ಉಳಿಯಿತು । ಆ ದಿನದಿಂದ ಆಕಳಿಗೆ ಕಟ್ಟುವ ಅವಶ್ಯಕತೆ
ಉಳಿಯಲಿಲ್ಲ । ಒಳ್ಳೆಯ ಆಕಳಿನಲ್ಲಿರುವ ಎಲ್ಲ ಗುಣಗಳು ಅದರಲ್ಲಿ ಕಾಣತೊಡಗಿದವು ಆ ಆಕಳಿನಿಂದ ಉಂಟಾದ
ಸಂತತಿಯು ಇಂದಿಗೂ ಶೇಗಾಂವಿಯಲ್ಲಿದೆ । ಶಾಸ್ತ್ರಗ್ರಂಥಗಳಲ್ಲಿ ಬರೆದ ಸ್ವಾನುಭವ ಮಾತುಗಳ ಸಾಕ್ಷಾತ್ ಅನುಭವ
ಶೇಗಾಂವಿಯಲ್ಲಿ ಬರುವದು । ಕಾರಂಜಿಯಲ್ಲಿ ಲಕ್ಷುಮಣ ಘುಗುಡೆ ಎಂಬ ವಾಜಸೇನೆಯ ಬ್ರಾಹ್ಮಣನಿದ್ದನು । ಅವನು
ಧನಿಕನು ಹಾಗೂ ಸಜ್ಜನನು ಇದ್ದನು । ಅವನಿಗೆ ಹೊಟ್ಟೆ ನೋವಿತ್ತು ಅನೇಕ ಉಪಾಯಗಳನ್ನು ಮಾಡಿದರೂ
ಲಾಭವಾಗಲಿಲ್ಲ । ಹೊಟ್ಟೆನೋವನ್ನು ಕಡಿಮೆ ಮಾಡಲು ಸಾವಿರಾರು ರೂಪಾಯಿ ಖರ್ಚು ಮಾಡಿದನು । ಅವನು
ಮಹಾರಾಜರ ಮಹಿಮೆಯನ್ನು ಜನರಿಂದ ತಿಳಿದುಕೊಂಡನು । ಕೊನೆಗೆ ತನ್ನ ಪತ್ನಿಯ ಸಹಿತ ಶೇಗಾಂವಿಗೆ ಬಂದನು ।
ರೋಗದಿಂದ ಜರ್ಜರನಾಗಿ ಲಕ್ಷುಮಣನು ನಡೆಯಲಾಗದೇ, ಇಬ್ಬರು ಅವನನ್ನು ಹಿಡಿದು ಮಠದಲ್ಲಿ ತಂದರು ।
ಅವನು ವಿಕಲಾಂಗನಾಗಿದ್ದರಿಂದ ಮಹಾರಾಜರಿಗೆ ನಮಸ್ಕಾರ ಕೂಡಾ ಮಾಡಲಿಲ್ಲ । ಪತಿಯ ಬದಲಿಗೆ, ಪತ್ನಿಯು
ಮಹಾರಾಜರಿಗೆ ನಮಸ್ಕರಿ ನುಡಿದಳು, ಹೇ ದಯಾಘನ, ಪ್ರಭು, ನನ್ನನ್ನು ತಮ್ಮ ಧರ್ಮಕನ್ಯೆಯೆಂದು ತಿಳಿದು, ನನ್ನ
ಪತಿಯ ಹೊಟ್ಟೆ ನೋವನ್ನು ನಿಲ್ಲಿಸಿ ಅವರನ್ನು ಬದುಕಿಸಿರಿ । ಅಮೃತದ ದರ್ಶನವಾದ ಮೇಲೆ ಮೃತ್ಯು ಬರುವದು
ಹೇಗೆ ಸಾಧ್ಯ ? ನನ್ನ ಸೌಭಾಗ್ಯವನ್ನು ರಕ್ಷಿಸಿರಿ । ಇದು ನನ್ನ ಪ್ರಾರ್ಥನೆ । ಆಗ ಮಹಾರಾಜರು ಮಾವಿನಹಣ್ಣನ್ನು
ತಿನ್ನುತ್ತಿದ್ದರು, ಅದನ್ನು ಅವಳ ಕಡೆಗೆ ಎಸೆದು ನುಡಿದರು, ಅವನಿಗೆ ಅದನ್ನು ತಿನ್ನಲು ಹೇಳು, ಎಲ್ಲವೂ ಸರಿಯಾಗುವದು।
ನೀನು ನಿಜವಾಗಿ ಅವನ ಧರ್ಮಪತ್ನಿ, ನಿನ್ನ ಸೇವೆಯಿಂದಲೇ ಅವನಿಗೆ ಆರಾಮಾಗುವದು । ಇಷ್ಟು ನುಡಿದು
ಮಹಾರಾಜರು ಚಿಲುಮಿಯನ್ನು ಕುಡಿಯಲಾರಂಭಿಸಿದರು । ಲಕ್ಷ್ಮಣನ ಪತ್ನಿಯು ಮಹಾರಾಜರು ಏನಾದರೂ
ನುಡಿಯಬಹುದು ಎಂದು ತಿಳಿದು ಬದಿಗೆ ನಿಂತಳು । ಆಗ ಭಾಸ್ಕರ ಪಾಟೀಲನು ಅವಳಿಗೆ ಇಲ್ಲಿ ಈಗ ನಿಲ್ಲಬೇಡಿರಿ ॥ 98 ॥
ಎಂದನು । ತಂಗಿ ಈಗ ತಮ್ಮ ಪತಿಯೊಡನೆ ಕಾರಂಜಿಗೆ ಹೋಗು । ಮಹಾರಾಜರ ಕೈಯಿಂದ ದೊರೆತ ಪ್ರಸಾದವನ್ನು



ಅವನಿಗೆ ತಿನ್ನಿಸಿರಿ । ಮಾವಿನಹಣ್ಣನ್ನು ತಿಂದಕೂಡಲೇ ಅವನು ರೋಗ ಮುಕ್ತನಾಗುವನು । ಧರ್ಮ ಪತ್ನಿ, ಪತಿಗೆ
ಕರೆದುಕೊಂಡು ಕಾರಂಜಿಗೆ ಬಂದು, ಮಾವಿನಹಣ್ಣನ್ನು ಪತಿಗೆ ಕೊಟ್ಟಳು । ಇಬ್ಬರೂ ತಿರುಗಿ ಬಂದದ್ದನ್ನು ನೋಡಿ
ನೆಂಟರು ಶೇಗಾಂವಿಯಲ್ಲಿ ಏನಾಯಿತು ಎಂದು ಪ್ರಶ್ನಿಸಿದರು । ಪತ್ನಿಯು ಎಲ್ಲ ಸಮಾಚಾರವನ್ನು ತಿಳಿಸಿ ನಂತರ
ಮಹಾರಾಜರು ಕೊಟ್ಟ ಮಾವಿನ ಹಣ್ಣನ್ನು ಪತಿಗೆ ತಿನ್ನಿಸಿರುವದಾಗಿ ಹೇಳಿದಳು । ವೈದ್ಯರು ಸಮಾಚಾರ ಕೇಳಿ
ಚಿಂತಾಕ್ರಾಂತರಾದರು । ಅವರು ನುಡಿದರು, ತಂಗಿ ನೀನು ಇದೇನು ಮಾಡಿರುವಿ ? ಹೊಟ್ಟೆನೋವಿಗೆ ಮಾವಿನಹಣ್ಣನ್ನು
ಸೇವಿಸಬಾರದು । 'ಮಾಧವ ನಿದಾನ', 'ಶುಶ್ರುತ', 'ನಿಘಂಟು' ಹಾಗೂ 'ಶಾರಂಗಧರ' ಗ್ರಂಥಗಳಲ್ಲಿ ಈ ಬಗ್ಗೆ
ಬರೆಯಲಾಗಿದೆ । ಮಹಾರಾಜರು ಕೊಟ್ಟ ಪ್ರಸಾದವನ್ನು ಪತಿಗೆ ಕೊಡುವ ಬದಲು ನೀನೆ ತಿಂದರೆ ಒಳ್ಳೆಯದಾಗುತ್ತಿತ್ತು
ಏಕೆಂದರೆ ಪತ್ನಿಯು ಅರ್ಧಾಂಗಿ ಇರುವದರಿಂದ ಪತಿಗೆ ಅವಶ್ಯವಾಗಿ ಫಲ ಸಿಗುವದು । ವೈದ್ಯರ ಈ ಮಾತುಗಳನ್ನು
ಕೇಳಿ ಆಪ್ತೇಷ್ಟರು ಹೆದರಿದರು । ಪತ್ನಿಯಿಂದಾದ ತಪ್ಪಿನ ಕಡೆಗೆ ಬೆರಳು ತೋರಿಸಿ ಕಹಿ ಮಾತುಗಳನ್ನು
ಆಡತೊಡಗಿದರು, ಆದರೆ ಪ್ರಭು ಕೃಪೆಯಿಂದ ಹಣ್ಣನ್ನು ತಿಂದು ಅಪಾಯವಾಗುವ ಬದಲು ರೋಗಿಯಲ್ಲಿ
ಆಶ್ಚರ್ಯಕಾರಕ ಪರಿಣಾಮಗಳು ಕಂಡು ಬರತೊಡಗಿದವು । ಅವನಿಗೆ ಮಲ ವಿಸರ್ಜನೆಯಾಗಿ ಕಠಿಣವಾದ ಹೊಟ್ಟೆಯು
ಮೃದುವಾಯಿತು । ಮಹಾರಾಜರ ಪ್ರಸಾದದಿಂದ ಅವನ ಆರೋಗ್ಯ ಮರಳತೊಡಗಿತು । ಮತ್ತು ಕೆಲವು ದಿನಗಳಲ್ಲಿ
ಲಕ್ಷ್ಮಣನು ಮೊದಲಿನಂತೆ ಆದನು । ಮಾನವಿ ಪ್ರಯತ್ನಗಳು ಪ್ರಕೃತಿಯ ಸೀಮೆಯವರೆಗೆ ಸಫಲವಾಗುತ್ತವೆ । ಆದರೆ
ಸಂತರ ಹಾಗೂ ಭಗವಂತನ ಕೃಪೆಯಿಂದ ಅಸಾಧ್ಯ ಮಾತುಗಳು ಸಹಜವಾಗಿ ಸಾಧ್ಯವಾಗುತ್ತುವೆ । ಲಕ್ಷ್ಮಣನು
ಆರೋಗ್ಯವಂತನಾದ ಕೂಡಲೇ ಶೇಗಾಂವಿಗೆ ಬಂದನು । ಮಹಾರಾಜರಿಗೆ ಸಾಷ್ಟಾಂಗ ನಮಸ್ಕಾರ ಮಾಡಿ, ತಮ್ಮ
ಪಾದಧೂಳಿಯಿಂದ ನನ್ನ ಮನೆಯನ್ನು ಪವಿತ್ರಗೊಳಿಸಿರಿ ಎಂದು ಪ್ರಾರ್ಥಿಸಿದನು । ತಮಗೆ ಕರೆದುಕೊಂಡು ಹೋಗಲು
ಬಂದಿರುವೆನು । ಇಲ್ಲ ಎಂದು ಹೇಳಿ ನಿರಾಶ ಮಾಡದಿರಿ । ಲಕ್ಷ್ಮಣನು ಬಹಳ ಬೆನ್ನು ಹತ್ತಿದನು । ಕೊನೆಗೆ ಮಹಾರಾಜರು
ಶಂಕರ ಭಾವು ಹಾಗೂ ಪೀತಾಂಬರನ ಜೊತೆಗೆ ಕಾರಂಜಾ ತಲುಪಿದರು । ಅಲ್ಲಿ ಲಕ್ಷ್ಮಣನು ಮಹಾರಾಜರ ಪೂಜೆಯನ್ನು
ಮಾಡಿ, ಎಲ್ಲ ಸಂಪತ್ತಿಯು ತಮ್ಮದೇ ಎಂದನು । ನಂತರ ತನ್ನ ಮಾತನ್ನು ಸುಧಾರಿಸಿ ನಿಮಗೆ ದಾನ ಮಾಡುವವನು ॥ 99 ॥
ನಾನು ಯಾರು ? ನೌಕರನು ಮಾಲೀಕನಿಗೆ ದಾನ ಕೊಡುವದು ಸಾಧ್ಯವೇ ? ಕೆಲ ನಿಮಿಷಗಳಲ್ಲಿ ಅವನು ತಟ್ಟೆಯಲ್ಲಿ

ಕೆಲವು ರೂಪಾಯಿಗಳನ್ನು ಇಟ್ಟು ಮಹಾರಾಜರಿಗೆ ಅರ್ಪಿಸಿದನು । ತಟ್ಟೆಯನ್ನು ನೋಡಿ ಮಹಾರಾಜರು ಸಿಟ್ಟಿನಿಂದ ನುಡಿದರು, ಎಲೈ, ಕೆಲವು ನಿಮಿಷಗಳ ಹಿಂದೆ ನೀನು ನುಡಿದೆ ಈಗ ಸರ್ವಸ್ವವು ತಮ್ಮದೇ ಎಂದು । ಹಾಗಾದರೇ ಈ ರೂಪಾಯಿಗಳು ಎಲ್ಲಿಂದ ಬಂದವು ? ನುಡಿದಂತೆ ನಡೆಯದಿರುವ ಇದೆಂತಹ ಪದ್ಧತಿ ? ತೋರಿಸುವ ಹಲ್ಲುಗಳು ಬೇರೆ ಹಾಗೂ ತಿನ್ನುವ ಹಲ್ಲುಗಳು ಬೇರೆ, ಈ ರೀತಿಯ ವರ್ತನೆ ಸರಿಯಲ್ಲ। ನೀನು ಸರ್ವಸ್ವವನ್ನು ನನಗೆ ಅರ್ಪಿಸಿರುವಿ ಯ ಎಲ್ಲ ಕೀಲಿಗಳನ್ನು ತಗೆದು ರಸ್ತೆಯ ಮೇಲೆ ಒಗೆದು ನಿನ್ನ ಖಜಾನೆಯ ಬಾಗಿಲನ್ನು ತೆರೆ । ಲಕ್ಷ್ಮಣನು ಮಾತನಾಡದೆ ಸುಮ್ಮನೆ ಕುಳಿತನು । ಆದರೆ ಮಹಾರಾಜರು ಖಜಾನೆಯ ಬಾಗಿಲನ್ನು ತೆರೆಯುವಂತೆ ಹಟ ಹಿಡಿದರು । ಕೊನೆಗೆ ಉಪಾಯವಿಲ್ಲದೇ ಅವನು ಬಾಗಿಲನ್ನು ತೆರೆದನು । ಆದರೆ ಖಜಾನೆಯ ಬಾಗಿಲದ ಮುಂದೆ ಹೋಗಿ ಕುಳಿತನು । ಬಾಗಿಲಲ್ಲಿ ಕುಳಿತು ಮಹಾರಾಜರೇ ತಮಗೆ ಬೇಕಾಗಿದ್ದನ್ನು ಕೊಂಡು ಹೋಗಿರಿ ಎಂದನು । ಅವನು ಹೀಗೆ ನುಡಿದರೂ, ಅವನ ಮನಸ್ಸಿನಲ್ಲಿಯ ವಿಚಾರಗಳು ಬೇರೆಯೇ ಇದ್ದವು । ಅವನ ಈ ಅಭಿನಯವು ಕಂಡು ಬರುತ್ತಿತ್ತು। ಅವನ ಈ ದಾಂಭಿಕತೆಯನ್ನು ಮಹಾರಾಜರು ಅರಿತರು । ಬಹುರೂಪಿಯ ಅರಸನಂತಹ ರೂಪವನ್ನು ಮಾರುಕಟ್ಟೆಯಲ್ಲಿ ಯಾರು ಕೇಳುವರು ? ಹಾಗಲ ಕಾಯಿ ಮೇಲಿನಿಂದ ಸುಂದರವೆನಿಸಿದರೂ, ಅದರ ಕಹಿತನವನ್ನು ಮುಚ್ಚುವದು ಹೇಗೆ ಸಾಧ್ಯ? ಲಕ್ಷ್ಮಣನ ವರ್ತನೆಯಿಂದ ಸುಂದರವೆನಿಸಿದರೂ, ಅದರ ಕಹಿತನವನ್ನು ಮುಚ್ಚುವದು ಹೇಗೆ ಸಾಧ್ಯ ? ಲಕ್ಷ್ಮಣನ ವರ್ತನೆಯಿಂದ ಮಹಾರಾಜರು ಅವನ ಸಂಪತ್ತಿಯಲ್ಲಿಯ ಒಂದು ರೂಪಾಯಿ ಕೂಡಾ ಬೇಕಿರಲಿಲ್ಲ। ಅವರು ವೈರಾಗ್ಯ ರೂಪಿ ಸಾಗರದಲ್ಲಿ ಸ್ಥಿತರಿದ್ದರು । ಆದರೆ ಬಾಯಿಯಿಂದ ಹೊರಬಿದ್ದ ಮಾತಿನ ಪರೀಕ್ಷೆ ಮಾಡುವ ಇಚ್ಛೆ ಅವರದಾಗಿತ್ತು ಅವನು ಸುಳ್ಳು ನಡಿಯುವದನ್ನು ಕೇಳಿ, ಮಹಾರಾಜರು ಕೋಪದಿಂದ ಅಲ್ಲಿಂದ ಹೊರಬಿದ್ದರು । ಹೋಗುವ ಮುಂಚೆ ಮಹಾರಾಜರು ನುಡಿದರು, ಎಲ್ಲವೂ ತನ್ನದೇ ಎನ್ನುತ್ತಿರುವಿ, ಅದರ ಫಲವನ್ನು ಈಗ ಅನುಭವಿಸು । ವಿಯದಲ್ಲಿ ನಾನು ಏನೂ ಮಾತನಾಡುವದಿಲ್ಲ। ನಾನು ಇಲ್ಲಿ ನಿನ್ನ ಮೇಲೆ ಕೃಪೆಮಾಡುವ ಉದ್ದೇಶದಿಂದ, ನಿನ್ನ ಬಳಿ ಇರುವ ಹಣವನ್ನು ಎರಡು ಪಟ್ಟು ಮಾಡುವ ಇಚ್ಛೆಯಿಂದ ಬಂದಿದ್ದೆ । ಆದರೆ ನಿನ್ನ ದುರ್ಭಾಗ್ಯದಿಂದ ನೀನು ಅದನ್ನು ಧಿಃಕರಿಸಿರುವಿ । ನಂತರ ಮಹಾರಾಜರ ಮಾತುಗಳು ನಿಜವಾದವು । ಆರು ತಿಂಗಳ ಅವಧಿಯಲ್ಲಿ ಲಕ್ಷ್ಮಿಯ ಅವಕೃಪೆಯಿಂದ ಅವನು ಭಿಕಾರಿಯಾಗಿ, ಜೋಳಿಗೆಯನ್ನು ಹಿಡಿಯುವ ಸ್ಥಿತಿ ಬಂದಿತು । ಹೇ ಶ್ರೋತೃಗಳೇ ಪರಮಾರ್ಥದಲ್ಲಿ ಅಸತ್ಯ






ವಚನಗಳಿಗೆ ಸ್ಥಾನವಿಲ್ಲ ಎಂಬುದನ್ನು ಮಹಾರಾಜರು ತಮ್ಮ ಲೀಲೆಯ ಮೂಲಕ ತೋರಿಸಿದರು । ಶ್ರೀ ಗಜಾನನ ಚಿಂತಾಮಣಿಗೆ ಚಕಮಕಿ ಕಲ್ಲುಗಳಿಂದ ತಾನೇ ಶೋಭೆ ಬರುವದು ? ಅಥವಾ ಬಂಗಾರದ ಆಭರಣಗಳು ಬದಲು ಹಿತ್ತಾಳೆಯ ಆಭರಣಗಳನ್ನು ಹಾಕುವರೇ ? ಸ್ವಸ್ತಿಶ್ರೀ ದಾಸಗಣು ವಿರಿಚಿತ ಶ್ರೀ ಗಜಾನನ ವಿಜಯ ಎಂಬ ಗ್ರಂಥ ಭಕ್ತರು ನಿಜ ಕಲ್ಯಾಣಕ್ಕಾಗಿ ಶ್ರಮಿಸಬೇಕು.

॥ ಶುಭಂ ಭವತು ॥ ಶ್ರೀ ಹರಿಹರಾರ್ಪಣಮಸ್ತು॥

॥ ಇಲ್ಲಿಗೆ ಹತ್ತನೆಯ ಅಧ್ಯಾಯವು ಮುಗಿಯಿತು ॥





ಶ್ರೀ ಗಜಾನನ ಮಹಾರಾಜರು ಕಾಗೆಗಳಿಗೆ ಯಥೇಚ್ಛವಾಗಿ ತಿನ್ನಲು ಕೊಟ್ಟರು ಮತ್ತು ಮತ್ತೆ ಬರಬಾರದೆಂದು ಹೇಳಿದರು.

## ॥ ಅಧ್ಯಾಯ ೧೧ ॥

ಶ್ರೀ ಗಣೇಶಾಯನಮಃ । ಹೇ ಜಂಕಾರರೂಪಿ ಪಶುಪತಿ, ಹೇ ಭವಾನಿವರ ದಕ್ಷಿಣಾಮೂರ್ತಿ, । ಬ್ರಹ್ಮಾಂಡದಲ್ಲಿಯ ಎಲ್ಲ ವಿಭೂತಿಗಳು ನಿನ್ನ ರೂಪಗಳೆ । ತಮ್ಮ ನಿರಾಕಾರ ರೂಪವು, ಈ ಬ್ರಹ್ಮಾಂಡಕ್ಕೆ ಆಧಾರವೂ, ಹಾಗೂ ಅವಿದ್ಯಾರೂಪದ ಮಾಯಾ ಪ್ರಕೃತಿಯಲ್ಲದೆ । ತಮ್ಮ ನಿರಾಕಾರ ರೂಪವು ಸಾಮಾನ್ಯ ಜನರು ತಿಳಿಯಲಾರರು, ಆದ್ದರಿಂದಲೇ ತಮಗೆ ಸಗುಣ ರೂಪದಲ್ಲಿ ಅವತಾರ ತಾಳಬೇಕಾಗುವದು । ಯಾರಿಗೆ ಯಾವ ರೂಪದಲ್ಲಿ ಕಾಣುವಿರಿ, ಅದೇ ರೂಪದಲ್ಲಿ ತಮ್ಮ ಭಕ್ತಿಯನ್ನು ಅವರು ಮಾಡುವರು । ಅನೇಕ ಹೆಸರುಗಳಿಂದ ತಾವು ಪರಿಚಿತರಿದ್ದರೂ, ತಮ್ಮ ಅಭಿನ್ನತ್ವವು ಭಿನ್ನವಾಗಿದೆ । ಶೈವ ಪಂಥದ ಜನರು ತಮಗೆ ಶಿವ ಎನ್ನುವರು । ದೇದಾಂತಿಗಳಲ್ಲಿ ತಾವು ಬ್ರಹ್ಮನೆಂದು ಪರಿಚಿತರಿರುವಿರಿ । ರಾಮಾನುಜರ ಅನುಯಾಯಿಗಳು ತಮಗೆ ಸೀತಾಪತಿ, ಹಾಗೂ ವೈಷ್ಣವರು ವಿಷ್ಣುವೆಂದು ಕರೆಯುವರು । ತಮ್ಮ ತಮ್ಮ ಉಪಾಸನೆಗೆ ಅನುಸರಿಸಿ ತಮ್ಮ ಹೆಸರನ್ನು ಇಟ್ಟಿರುವರು । ಆದರೆ ನಿಜ ಮಾತೆಂದರೆ ತಾವು ಅಭಿನ್ನರೂಪದಿಂದ ಎಲ್ಲ ಹೃದಯದಲ್ಲಿರುವ ಪರಮೇಶ್ವರನಾಗಿ ವಾಸಿಸಿರುವಿರಿ । ಸೋಮನಾಥ, ವಿಶ್ವೇಶ್ವರ, ವೇರುಳದ ಘೃಣೇಶ್ವರ, ಗೋದಾವರಿಯ ದಂಡೆಯ ತ್ರೈಂಬಕ, ಹಿಮ ಕೇದಾರ, ಜಂಕಾರ, ಶಿಪ್ರಾ ತೀರದ ಮಹಾಕಾಲ ಆದಿಗಳು ತಮ್ಮ ಅಭಿನ್ನರೂಪಗಳು । ಭೀಮಾಶಂಕರ, ರಾಮೇಶ್ವರ, ಮಲ್ಲಿಕಾರ್ಜುನ, ಗೋಕರ್ಣದ ಮಹಾಬಳೇಶ್ವರ ಹಾಗೂ ಶಿಂಗಣಾಪುರದ ಮಹಾದೇವ ಆದಿ ಹೆಸರುಗಳಿಂದ ತಾವು ಪರಿಚಿತರು । ಅನೇಕ ನಾಮಗಳಿಂದ ಪರಿಚಿತ ಇರುವ ಆ ಶಂಕರನಿಗೆ ನನ್ನ ಸಾಷ್ಟಾಂಗ ನಮಸ್ಕಾರಗಳು । ಹೇ ದೀನ ಬಂಧು, ನನ್ನ ಎಲ್ಲ ದುಃಖಗಳ ನಾಶ ಮಾಡಿರಿ । ಹೇ ಭಗವಂತ, ತಾವು ಕುಬೇರನಿಗೆ ಕ್ಷಣಮಾತ್ರದಲ್ಲಿ ಧನವಂತ ಮಾಡಿದಿರಿ । ಮತ್ತು ಈಗ ನನ್ನ ಬಗ್ಗೆಯೇ ಈ ಸಂಕೋಚವು ಏಕೆ ? ಇರಲಿ । ಬಾಳಾಪುರದಲ್ಲಿ ಮುಂದಿನ ವರ್ಷ ದಾಸನವಮಿಯ ದಿನ ಮಹಾರಾಜರು ಬಾಳಕೃಷ್ಣನ ಮನೆಗೆ ಬಂದರು। ಬಾಳಕೃಷ್ಣ ಹಾಗೂ ಸುಖಲಾಲರಿಬ್ಬರೂ, ಮಹಾರಾಜರ ಪರಮಭಕ್ತರಿದ್ದರು; ಭಕ್ತಿ ಸಾಧನೆಯಲ್ಲಿ ಯಾರೂ ಅವರ ಸಮಾನರಿರಲಿಲ್ಲ। ಈ ಸಲ ಮಹಾರಾಜರ ಜೊತೆಗೆ ಭಾಸ್ಕರ ಪಾಟೀಲ, ಬಾಳಾಭಾವು, ಪೀತಾಂಬರ, ಗಣು, ಜಗದೇವ ಹಾಗೂ ದಿಂಡೋಕಾರ ಆದಿ ಭಕ್ತರಿದ್ದರು । ದಾಸನವಮಿಯ ಉತ್ಸವವು ಬಹು ಸಡಗರದಿಂದ ನೆರವೇರಿತು । ಆದರೆ

ಭಾಸ್ಕರ ಪಾಟೀಲನಿಗಾಗಿ ವಿಪತ್ತಿ ಉಂಟಾಯಿತು । ಒಂದು ಹುಚ್ಚ ನಾಯಿಯು ಬಂದು ಅವನಿಗೆ ಕಡಿಯಿತು, ಅದನ್ನು
ನೋಡಿ ಎಲ್ಲ ಜನರು ಹೆದರಿ ನುಡಿದರು, ಈಗ ಅವನು ಹುಚ್ಚನಾಗುವನು । ಲೌಕಿಕ ಉಪಾಯಗಳನ್ನು ಮಾಡಿದರು।
ಕೆಲವರು ಡಾಕ್ಟರರನ್ನು ತರುವಂತೆ ಸಲಹೆ ನೀಡಿದರು । ಭಾಸ್ಕರನು ನುಡಿದನು ಈಗ ಡಾಕ್ಟರ–ವೈದ್ಯರನ್ನು ತರುವ
ಅವಶ್ಯಕತೆ ಇಲ್ಲ। ನನ್ನ ಡಾಕ್ಟರರು ಕೇವಲ ಒಬ್ಬರೆ ! ಗಜಾನನ ಮಹಾರಾಜ; ಅವರ ಹತ್ತಿರವೇ ನನ್ನನ್ನು ಕೊಂಡು
ಹೋಗಿರಿ। ಅವರಿಗೆ ಎಲ್ಲ ವೃತ್ತಾಂತ ಹೇಳಿರಿ। ಮತ್ತು ಅವರು ನುಡಿದಂತೆ ನಡೆಯಿರಿ। ತಾವು ತಮ್ಮ ಮನಸ್ಸಿನ ಮಾತನ್ನು
ಹೇಳಬೇಡಿರಿ । ಭಾಸ್ಕರ ಪಾಟೀಲನಿಗೆ ಗಜಾನನ ಮಹಾರಾಜರ ಮುಂದೆ ತಂದರು । ಬಾಳಾಭಾವು ಎಲ್ಲ ವೃತ್ತಾಂತ
ಹೇಳಿದನು । ಮಾತುಗಳನ್ನು ಕೇಳಿ ಮಹಾರಾಜರು ನಕ್ಕು ನುಡಿದರು, ಹತ್ಯೆ, ವೈರ ಹಾಗೂ ಮೃತ್ಯು ಇವುಗಳನ್ನು
ಯಾರೂ ತಪ್ಪಿಸಲಾರರು, ಇದರಿಂದ ಯಾರಿಗೂ ಮುಕ್ತಿ ಇಲ್ಲ ಸುಕಲಾಲನ ಆಕಳಿನಲ್ಲಿಯ ಪುಂಡತನವಿತ್ತು ಆದ್ದರಿಂದ
ಭಾಸ್ಕರನು ಅದನ್ನು ಶೇಗಾಂವಿಗೆ ಕಳುಹಿಸಿದನು। ಆ ಆಕಳಿನ ನಿಜ ಸ್ವಭಾವವು ಇಲ್ಲಿ ನಾಯಿಯಾಗಿ ಬಂದು ಭಾಸ್ಕರನಿಗೆ
ಕಡಿಯಿತು । ಆಕಳಿನ ತುಂಟತನವನ್ನು ದೂರ ಮಾಡುವಂತೆ ಭಾಸ್ಕರನು ವಿನಂತಿಸಿದನು । ಏಕೆಂದರೆ ಅವನು ಆಕಳದ
ಹಾಲನ್ನು ಕುಡಿಯುವ ಇಚ್ಛೆ ಹೊಂದಿದ್ದನು । ಆಕಳದ ಸಹಾಯ ಪಡೆಯುವ ಈ ಭಾಸ್ಕರನು ಸ್ವಾರ್ಥಿ ಹಾಲು
ಕುಡಿಯುವಾಗ ಒಳ್ಳೆಯದೆನಿಸಿತು ಮತ್ತು ಈಗ ಸ್ವಾರ್ಥದ ಕರ್ಮ ಭೋಗಿಸುವ ಸಮಯ ಬಂದಾಗ ಏಕೆ ಹಿಂದೆ
ಮುಂದೆ ನೋಡುತ್ತಿರುವನು ? ಆದರೂ, ನಾನು ಅವನು ಆಯುಷ್ಯವನ್ನು ಬೆಳೆಸಬಹುದು, ಆದರೆ ಅವನ
ಇಚ್ಛೆಯೇನಿದೆ ? ವಾಸ್ತವದಲ್ಲಿ ನಾಯಿಯು ಕಡಿಯುವದು ಕೇವಲ ಒಂದು ನೆವ, ನಿಜವಾಗಿ ಹೇಳುವದೆಂದರೆ ಅವನ
ಆಯುಷ್ಯ ಮುಗಿದಿದೆ। ಅವನು ಈ ಜಗತ್ತನ್ನು ಬಿಟ್ಟು ಹೋಗುವದೇ ಲೇಸು। ಮಹಾರಾಜರು ಭಾಸ್ಕರನಿಗೆ ನುಡಿದರು
'ನಿನ್ನ ಇಚ್ಛೆಯಿದ್ದರೆ ನಿನ್ನನ್ನು ಈ ಸಂಕಟದಿಂದ ಬದುಕಿಸಬಹುದು । ಆದರೂ ಅದು ಒಂದು ರೀತಿಯ ಋಣ
ಕೊಟ್ಟಂತೆಯೇ । ಈ ಜಗತ್ತಿನ ಅಶಾಶ್ವತ ಮಾರುಕಟ್ಟೆಯಲ್ಲಿ ಜನ್ಮ–ಮೃತ್ಯುಗಳ ವ್ಯಾಪಾರವು ಯಾವಾಗಲೂ
ನಡೆಯುವದೇ ? ಇದಕ್ಕೆ ಬೆದರುವದೇಕೆ ? ಇಂದಿನಂತಹ ಪರ್ವಕಾಲವು ಬಹಳ ಕಡಿಮೆ । ಈ ವಿಷಯದಲ್ಲಿ ನಿನ್ನ
ವಿಚಾರವೇನು। ಭಾಸ್ಕರನು ಮೌನಧರಿಸಿ, ನಂತರ ನುಡಿದನು ಮಹಾರಾಜ, ನಾನು ಅಜ್ಞಾನಿ। ನನ್ನ ಹಿತ–ಅಹಿತವು ॥ 104 ॥
ತಮಗೆ ಗೊತ್ತು। ಆದ್ದರಿಂದ ತಮ್ಮ ಇಚ್ಛೆ ಇದ್ದಂತೆ ಮಾಡಿರಿ । ಒಂದು ಅಭಂಗದಲ್ಲಿ ತುಕಾರಾಮರು ಹೇಳಿದ್ದಾರೆ,





ಮಗುವಿನ ಹಿತ–ಅಹಿತವು ತಾಯಿಗೆ ಗೊತ್ತು। ಮಹಾರಾಜ, ನಾನು ತಮ್ಮ ಬಾಲಕ । ಆದ್ದರಿಂದ ನಾನೇಕ ನಿಮಗೆ
ವಿನಂತಿಸಲಿ? ತಾವು ಜ್ಞಾನದ ಸಾಗರ। ತಾವು ಎಲ್ಲವನ್ನು ಅರಿತಿರುವಿರಿ। ಭಾಸ್ಕರನ ಸತ್ಯವಚನವನ್ನು ಕೇಳಿ ಮಹಾರಾಜರು
ಆನಂದಿತರಾದರು । ಯಾರಿಗೆ ಸತ್ಯದ ಬಗ್ಗೆ ನಿಷ್ಠೆ ಇರುವದೋ, ಅವರಿಗೆ ಸತ್ಯ ವಚನದಿಂದ ಆನಂದವಾಗುತ್ತದೆ ।
ಮಹಾರಾಜರ ಹತ್ತಿರದಲ್ಲಿರುವ ಭಕ್ತರಲ್ಲಿ ಒಬ್ಬನು ನುಡಿದನು,ಮಹಾರಾಜ, ಭಾಸ್ಕರನು ತಮ್ಮ ಪ್ರೀಯ ಶಿಷ್ಯನು,
ಅವನಿಗೆ ಆಪತ್ತಿಯಿಂದ ಬದುಕಿಸಿರಿ । ಆಗ ಮಹಾರಾಜರು, ಈ ರೀತಿ ನುಡಿಯುವದೇ ನಿಮ್ಮ ಅಜ್ಞಾನದ ಪ್ರಚೀತಿ ।
ಮೂರ್ಖರೇ, ಜನ್ಮ ಮೃತ್ಯು ಒಂದು ಮರೀಚಿಕೆ । ಯಾರೂ ಹುಟ್ಟುವದಿಲ್ಲ ಅಥವಾ ಸಾಯುವದಿಲ್ಲ। ಶಾಸ್ತ್ರಗಳನ್ನು
ಬರೆದವರು ತೋರಿಸಿದ ಪರಮಾರ್ಥದ ಮಾರ್ಗವನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡಬೇಕು । ಅದನ್ನು
ಜ್ಞಾಪಕದಲ್ಲಿಟ್ಟು, ಪ್ರಾರಬ್ಧ ಕರ್ಮದಲ್ಲಿ ಬರೆದಂತೆ ಮೋಹವನ್ನು ಬಿಟ್ಟು ಬದುಕಬೇಕು । ಸಂಚಿತ, ಪ್ರಾರಬ್ಧ
ಕ್ರಿಯಾಮಣ, ಇವುಗಳನ್ನು ಭೋಗಿಸದಿದ್ದರೆ, ಬಂಧಿತರಾದ ಈ ಜೀವಗಳಿಗೆ ಮುಕ್ತಿಯು ಅಸಂಭವ। ಹಿಂದಿನ ಜನ್ಮದಲ್ಲಿ
ಮಾಡಿದ ಕರ್ಮಗಳ ಫಲವನ್ನು ಮುಂದಿನ ಜನ್ಮದಲ್ಲಿ ಅನುಭವಿಸಬೇಕಾಗುವದು । ಇದಕ್ಕೆ ಕೊನೆಯಿಲ್ಲ। ಭಾಸ್ಕರದ
ಹಿಂದಿನ ಜನ್ಮದ ಗಂಟು ಮುಗಿದುಹೋಗಿದೆ । ಈಗ ಅವನು ಮುಕ್ತನಾಗಿ ಮೋಕ್ಷದ ಅಧಿಕಾರಿಯಾಗಿರುವನು ।
ಆದ್ದರಿಂದ ಅವನ ವಯಸ್ಸನ್ನು ಬೆಳೆಸಲು ಹೇಳದಿರಿ । ಈಗ ಭಾಸ್ಕರನು ಮುಕ್ತಿ ಪಡೆದು ಮತ್ತೆ ಜನ್ಮತಾಳಲಾರ ।
ಪೂರ್ವಜನ್ಮದ ವೈರತ್ವದ ಭಾವನೆಯಿಂದ, ಈ ನಾಯಿಯ ಜನ್ಮವಾಗಿ ಅದು ತಮ್ಮ ಸೇಡು ತೀರಿಸಿತು । ಈಗ
ಕೊಂಚವೂ, ಸೇಡಿನ ಭಾವನೆ ಭಾಸ್ಕರನ ಮನಸ್ಸಿನಲ್ಲಿ ಉಳಿದರೆ ಅವನು ಮತ್ತೊಮ್ಮೆ ಜನ್ಮತಾಳುವನು। ಹಿಂದಿನ ಜನ್ಮದ
ಎಲ್ಲ ಲೆಕ್ಕವನು ತೀರಿಸಿರುವದರಿಂದ, ಭಾಸ್ಕರನು ಬಿರುದು ಇಲ್ಲದವನಾಗಿರುವನು । ಈಗ ನಾನು ಬಹಳೆಂದರೇ,
ಎರಡು ತಿಂಗಳ ಅವನ ಆಯುಷ್ಯವನ್ನು ಬೆಳೆಸಿ, ಅವನನ್ನು ನಾಯಿಯ ವಿಷದಿಂದ ಮುಕ್ತಮಾಡುವೆನು । ಅದರಿಂದ
ಅವನಿಗೆ ಶಾರೀರಿಕ ಕ್ಲೇಶಗಳು ಆಗಲಿಕ್ಕಿಲ್ಲ। ನಂತರ ಅವನಿಗೆ ಮೋಕ್ಷಪ್ರಾಪ್ತಿ ಆಗುವದು। ನಾನು ಈ ರೀತಿ ಮಾಡದಿದ್ದರೆ
ಅವನಿಗೆ ಎರಡು ತಿಂಗಳುಗಳಿಗಾಗಿ ಜನ್ಮ ತಾಳಬೇಕಾಗುವದು। ಮಹಾರಾಜರ ಈ ಮಾತಿಗೆ ಯಾರು ಸಮ್ಮತಿ ಕೊಡಲಿಲ್ಲ
ಆದರೆ ಈ ಉಪದೇಶದಿಂದ ಬಾಳಾಭಾವು ಪ್ರಭಾವಿತನಾದನು । ಮತ್ತು ನುಡಿದನು ಭಾಸ್ಕರ ನೀನು ನಿಜವಾಗಿ ॥ 105 ॥
ಭಾಗ್ಯವಂತ। ನೀನು ಮಾಡಿದ ಸಂತಸೇವೆಯಿಂದ ನಿನಗೆ ಜನ್ಮ ಮೃತ್ಯುಗಳಿಂದ ಮುಕ್ತಿ ದೊರಕಿತು। ನಿನ್ನ ಯೋಗ್ಯತೆಯ

ವರ್ಣನೆ ಹೇಗೆ ಮಾಡಲಿ। ಈ ಪ್ರಸಂಗದ ನಂತರ ಮಹಾರಾಜರು ಹಾಗೂ ಅವರ ಸಂಗಡಿಗಳು ಮರಳಿ ಶೇಗಾಂವಿಗೆ
ಬಂದರು । ಭಾಸ್ಕರನು ಈಗ ಭಕ್ತರೊಡನೆ ಸಿಹಿಮಾತನಾಡತೊಡಗಿದನು । ಬಾಳಾಪುರದಲ್ಲಿ ನಡೆದ ಘಟನೆಯನ್ನು
ಎಲ್ಲರಿಗೆ ಶೇಗಾಂವಿಯಲ್ಲಿ ವಿಶದಿಸತೊಡಗಿದನು । ಜೊತೆಗೆ ಕೈಮುಗಿದು ಜನರಿಗೆ ವಿನಂತಿ ಮಾಡತೊಡಗಿದನು ।
ಮಹಾರಾಜರು ನಮ್ಮ ಶೇಗಾಂವಿಯಲ್ಲಿರುವದು ನಮ್ಮ ಸೌಭಾಗ್ಯ । ಈ ರತ್ನವನ್ನು ಜೋಕೆಯಿಂದ ಹಾಗೂ ಪ್ರಾಣ
ಪಣಕ್ಕಿಟ್ಟು, ಕಾಪಾಡಿರಿ। ಅವರು ಚಿರಂತನ ರೂಪದಿಂದ ಜನರ ಮುಂದೆ ಇರುವಂತೆ ಅವರ ಸ್ಮಾರಕವನ್ನು ಮಾಡಿರಿ।
ಮಹಾರಾಜರಿಗೆ ಸ್ಮಾರಕದ ಅವಶ್ಯಕತೆ ಇಲ್ಲ। ಆದರೆ ನಮ್ಮ ನಂತರ ಬರುವ ಪೀಳಿಗೆಗಳಿಗೆ ಅವರ ಸಾಧುತ್ವದ ಸ್ಮರಣೆ
ಇರುವಂತೆ ಮಾಡಲು, ಸ್ಮಾರಕದ ಅವಶ್ಯಕತೆ ಇದೆ । ಆಳಂದಿಯು ಜ್ಞಾನೇಶ್ವರ ಮಹಾರಾಜರಿಂದ, ಸಜ್ಜನಗಡವು
ಸಮರ್ಥ ರಾಮದಾಸರಿಂದ ಹಾಗೂ ದೇಹುಗಾಂವ ತುಕಾರಾಮ ಮಹಾರಾಜರಿಂದ ಪುನೀತವಾಯಿತು। ಭಕ್ತರು ಅವರ
ಸಮಾಧಿಯನ್ನು ಮಾಡಿ ಅವರ ಚಿರಂತನ ಸ್ಮಾರಕವನ್ನು ಮಾಡಿರುವರು । ಶೇಗಾಂವಿಯ ಜನರು ಕೂಡಾ ಅವರ
ಆದರ್ಶವನ್ನು ಮುಂದಿಡಬೇಕು । ಈ ಮಾತನ್ನೇ ಅವನು ಎಲ್ಲ ಭಕ್ತರಿಗೆ ಹೇಳುತ್ತಿದ್ದನು। ಆದರೆ ಒಂದು ದಿನ ಅವನ
ಮನಸ್ಸಿನಲ್ಲಿ ಒಂದು ವಿಚಾರ ಬಂದಿತು । ಕಂಡವರು ನುಡಿದಿದ್ದಕ್ಕೆ ತಲೆಬಾಗಿಸುವದು ಜಗತ್ತಿನ ಪದ್ಧತಿ । ನನ್ನ
ಮನಸ್ಸಿನಲ್ಲಿಯ ಮಾತನ್ನು ಇದೇ ರೀತಿ ತಿಳಿದು, ಅವರು ನಂತರ ಮರೆತು ಬಿಡಬಹುದು । ಆದ್ದರಿಂದ ಭಾಸ್ಕರನು
ಒಂದು ದಿನ ಮಹಾರಾಜರ ಅನುಪಸ್ಥಿತಿಯನ್ನು ಎಲ್ಲರನ್ನು ಮಠದಲ್ಲಿ ಕೂಡಿಸಿದನು । ಅವರಲ್ಲಿ ಬಂಕಟಲಾಲ, ಹರಿ
ಪಾಟೀಲ, ಖಂಡೂಜಿಯ ಅಂಗಡಿಯ ಕಾರ್ಯದರ್ಶಿ ಮಾರುತಿ ಚಂದ್ರಭಾನ, ಶ್ರೀಪತಿರಾವ ವಾವಿಕರ, ತಾರಾಚಂದ
ಸಾಹುಕಾರ, ಇತ್ಯಾದಿ ಅನೇಕ ಭಕ್ತರಿದ್ದರು। ಅವರೆದರು ಕೈ ಮುಗಿದು ನುಡಿದನು, ಈ ಜಗತ್ತಿನಲ್ಲಿ ನನ್ನ ಎರಡು ತಿಂಗಳು
ಮಾತ್ರ ಉಳಿದಿವೆ। ನನ್ನ ಮನಸ್ಸಿನಲ್ಲಿಯ ಇಚ್ಛೆಯೆಂದರೆ ವರ್‍ಹಾಡ ಪ್ರಾಂತದ ಶೇಗಾಂವಿಯಲ್ಲಿ ಮಹಾರಾಜರ ಒಂದು
ಭವ್ಯ, ದಿವ್ಯ ಸ್ಮಾರಕವನ್ನು ಮಾಡುವ ನನ್ನ ಇಚ್ಛೆಯನ್ನು ಪೂರೈಸುವದಾಗಿ ಆಶ್ವಾಸನೆಯನ್ನು ಕೊಟ್ಟರೆ, ನಾನು ಶಾಂತ
ಚಿತ್ತದಿಂದ ವೈಕುಂಠಕ್ಕೆ ಹೋಗುವೆನು । ಸಂತ ಸೇವೆಯು ವ್ಯರ್ಥವಾಗದು । ಭಕ್ತರ ಎಲ್ಲ ಇಚ್ಛೆಗಳನ್ನು ಸಂತರೇ
ಪೂರ್ಣಗೊಳಿಸುವರು । ಮಹಾರಾಜರ ಚಿರಂತನ ಸ್ಮಾರಕವು ನೋಡುವವರ ಕಣ್ಣುಗಳನ್ನು ಆಶ್ಚರ್ಯಚಕಿತ ಹಾಗೂ ॥ 106 ॥
ಮಂತ್ರಮುಗ್ಧ ಮಾಡಬೇಕು । ಬರುವವನು ಎಷ್ಟೇ ನಾಸ್ತಿಕನಿದ್ದರೂ, ಆ ಭಕ್ತನ ಅಂತಃಕರಣವು ಭಕ್ತಿಯಿಂದ ತುಂಬಿ



ಹಾವಾಡಿಗನ ಪುಂಗಿಯಿಂದ ನಾಗರಾಜನು ಮೈ ಮರೆತಂತೆ, ಆ ಸ್ಮಾರಕವನ್ನು ನೋಡಿ ಆಗಬೇಕು। ಈ ರೀತಿ ಸ್ಮಾರಕವನ್ನು
ಮಾಡುವದಾಗಿ ತಾವು ಪ್ರತಿಜ್ಞೆ ಮಾಡಬೇಕು, ಇದು ನನ್ನ ಕೊನೆಯ ಇಚ್ಛೆ । ಉಪಸ್ಥಿತರು ಭಾಸ್ಕರನಿಗೆ ಆ ರೀತಿ
ವಚನಕೊಟ್ಟರು। ಇದರಿಂದ ಅವನ ಮನಸ್ಸಿಗೆ ನೆಮ್ಮದಿ ದೊರಕಿತು। ಮೃತ್ಯುವಿನ ಹೆದರಿಕೆಯಿಂದ ಭಾಸ್ಕರನ ವೃತ್ತಿಯು
ದಿನಕಳೆದಂತೆ ಉಲ್ಲಸಿತವಾಯಿತು । ಯಾವ ರೀತಿ ಮುಂದೆ ಬರುವ ಹಬ್ಬದ ಕಲ್ಪನೆಯಿಂದ ಮಕ್ಕಳು
ಆನಂದಿತರಾಗುವರೋ, ಅದೇ ರೀತಿ ಮುಂದೆ ಬರುವ ಹಬ್ಬದ ಕಲ್ಪನೆಯಿಂದ ಮಕ್ಕಳು ಆನಂದಿತರಾಗುವರೋ,
ಅದೇ ರೀತಿ ಭಾಸ್ಕರ ಅವಸ್ಥೆಯಾಗಿತ್ತು। ಮಾಘ ವದ್ಯ ತ್ರಯೋದಶಿಗೆ ಮಹಾರಾಜರು ಭಾಸ್ಕರಿಗೆ ತಾವು ಶಿವರಾತ್ರಿಯ
ಪವಿತ್ರ ದಿನ ತ್ರ್ಯಂಬಕೇಶ್ವರಕ್ಕೆ (ಯಾವದು ಜಾಗ್ರತ ಜ್ಯೋರ್ತಿಲಿಂಗ) ಹೋಗೋಣ । ಆ ತ್ರ್ಯಂಬಕರಾಜ,
ಭವಭವಾಂತಕ, ಭವನಿ–ವರ ಗೋದಾವರಿಯ ದಂಡೆಯ ಮೇಲೆ ಕುಳಿತಿರುವರು । ಅಲ್ಲಿ ಜಾಗೃತ
ಜ್ಯೋರ್ತಿಲಿಂಗವಿದೆ, ಅದು ಪಾಪಗಳ ನಾಶ ಮಾಡುತ್ತದೆ । ಈಗ ತಡಮಾಡಬೇಡ, ನಾವು ಗಂಗಾಸ್ನಾನ ಮಾಡಲು
ಹೋಗೋಣ । ಎಲೈ ಭಾಸ್ಕರ, ತ್ರ್ಯಂಬಕೇಶ್ವರದಲ್ಲಿ ಒಂದು ಬ್ರಹ್ಮಗಿರಿ ಪರ್ವತವಿದೆ, ಅಲ್ಲಿ ಅನೇಕ ಪ್ರಕಾರದ
ಔಷಧಿಗಳು ದೊರಕುತ್ತವೆ । ಬ್ರಹ್ಮಗಿರಿ ಪರ್ವತದ ಮೇಲೆ ಗಹನಿನಾಥರು ಚಿನ್ಮಯ ರೂಪದಿಂದ ವಾಸಿಸಿರುವರು ।
ಅವರು ಔಷಧಗಳ ವಿಷಯದಲ್ಲಿ ಜ್ಞಾನಿಗಳು ನಾಯಿಯ ವಿಷದ ಮೇಲೆ ಅಲ್ಲಿ ಉತ್ತಮ ಔಷಧಿಗಳು ದೊರಕುವವು
ಅದರ ಲಾಭ ಪಡೆಯೋಣ। ಆಗ ಭಾಸ್ಕರು ವಿನಯದಿಂದ ನುಡಿದನು, ಹೇ ಗುರುರಾಜ, ಈಗ ಅಲ್ಲಿಯ ಔಷಧಿ ಏಕೆ?
ತಮ್ಮ ಅಧಿಕಾರವು ಅಪರಿಮಿತ, ಅದರ ಮುಂದೆ ಔಷಧಿಗೆ ಏನು ಬೆಲೆ ? ತಮ್ಮ ಕೃಪೆಯಿಂದ ಹುಚ್ಚು ನಾಯಿಯ ವಿಷವು
ಬಾಳಾಪುರದಲ್ಲಿಯೇ ಮುಗಿಯಿತು । ನನ್ನ ಆಯುಷ್ಯದ ಎರಡು ತಿಂಗಳು ಮಾತ್ರ ಉಳಿದಿವೆ । ಆದ್ದರಿಂದ
ಶೇಗಾಂವಿಯಲ್ಲಿ ಇರುವ ಇಚ್ಛೆಯಿದೆ। ಏಕೆಂದರೆ ತಾವೇ ನನಗೆ ತ್ರ್ಯಂಬಕೇಶ್ವರ। ತಮ್ಮ ಚರಣಗಳಲ್ಲಿಯೇ ಗೋದಾವರಿ
ನದಿ ಇದೆ। ತಮ್ಮ ಚರಣ ತೀರ್ಥದಿಂದಲೇ ಗಂಗಾಸ್ನಾನದ ಪುಣ್ಯ ದೊರಕುತ್ತದೆ। ಈಗ ನನಗೆ ಯಾವ ತೀರ್ಥ ಕ್ಷೇತ್ರದ
ಮಹತ್ವವಿಲ್ಲ। ಇದನ್ನು ಕೇಳಿ ಮಹಾರಾಜರು ಮಂದಹಾಸ್ಯ ಮಾಡಿ ನುಡಿದರು ನೀನು ಹೇಳುವದು ನಿಜ। ಆದರೂ
ತೀರ್ಥಕ್ಷೇತ್ರದ ಮಹಿಮೆಯು ಯಾವಾಗಲೂ ಅಮೂಲ್ಯ । ನಿನ್ನ ಸಲಹೆ ಏನೇ ಇದ್ದರೂ, ನಾವು ತ್ರ್ಯಂಬಕೇಶ್ವರಕ್ಕೆ ॥ 107 ॥
ನಿಶ್ಚಿತವಾಗಿ ಹೋಗುವೆವು । ಹೊರಡುವ ಸಿದ್ಧತೆಯನ್ನು ಮಾಡು, ಬಾಳಾಭಾವು ಹಾಗೂ ಪೀತಾಂಬರರೂ ನಮ್ಮ

ಜೊತೆಗಿರುವರು । ಅವರು ಶೇಗಾಂವಿಯಿಂದ ಹೊರಟು, ಶಿವರಾತ್ರಿಗೆ ತ್ರೈಂಬಕೇಶ್ವರವನ್ನು ತಲುಪಿದರು । ಅವರು
ಕುಶಾವರ್ತ ತೀರ್ಥದಲ್ಲಿ ಸ್ನಾನಮಾಡಿ ಶಂಕರನ ದರ್ಶನ ಪಡೆದು, ಗಂಗಾದ್ವಾರಕ್ಕೆ ಹೋಗಿ ಗೌತಮಿಯ ಪೂಜೆ
ಮಾಡಿದರು । ನೀಲಾಂಬಿಕೆಯ ದರ್ಶನ ಮಾಡಿ, ನಂತರ ಗಹಿನಿ – ನಿವೃತ್ತಿನಾಥರ ಸಮಾಧಿಗಳ ದರ್ಶನವನ್ನೂ
ಮಾಡಿದರು । ನಂತರ ಅವರು ಗೋಪಾಲದಾಸನಿಗೆ ಭೆಟ್ಟಿಯಾಗಲು ನಾಶಿಕಕ್ಕೆ ಬಂದರು । ಈ ಗೋಪಾಲದಾಸ
ಮಹಂತನು ಪಂಚವಟಿಯ ಕಾಳಾರಾಮನ ಮಂದಿರದಲ್ಲಿ ಚಿಲುಮಿ ಹಚ್ಚಿ ಕುಳಿತಿದ್ದನು । ಕಾಲಾರಾಮ ಮಂದಿರದ
ಮುಂದೆ ಒಂದು ಅರಳಿ ಮರದ ಕೆಳಗೆ ಕಟ್ಟೆಯಿತ್ತು । ಮಹಾರಾಜರು ತಮ್ಮ ಭಕ್ತರೊಡನೆ ಅಲ್ಲಿ ಕುಳಿತರು ।
ಮಹಾರಾಜರು ಬಂದಿದ್ದನ್ನು ತಿಳಿದೊಡನೆ ಗೋಪಾಲದಾಸನು ಆನಂದಿತನಾದನು । ಹತ್ತಿರದಲ್ಲಿದ್ದ ಭಕ್ತರಿಗೆ ಅವರು
ನಡಿದರು, ವರ್ಹಾಡದಿಂದ ನನ್ನ ಬಂಧು ಗಜಾನನನು ಬಂದಿರುವನು । ಅನನ್ಯಭಾವದಿಂದ ಅವನ ದರ್ಶನ ಪಡೆದು,
ನನ್ನ ಕಡೆಯಿಂದ ಈ ತೆಂಗಿನಕಾಯಿ ಹಾಗೂ ಕಲ್ಲು ಸಕ್ಕರೆಯನ್ನು ಉಡುಗರೆಯಾಗಿ ಕೊಡಿರಿ । ಅವರಿಗೆ ಈ ಹಾರವನ್ನು
ಹಾಕಿರಿ । ಅವರು ಹಾಗೂ ನಾನು ಇಬ್ಬರೂ ಒಂದೇ । ದೇಹಗಳು ಭಿನ್ನವಾಗಿರುವದರಿಂದ ದ್ವೈತವು ಕಾಣುತ್ತಿದೆ ।
ಆದ್ದರಿಂದ ನಮಗೆ ಭಿನ್ನವೆಂದು ತಿಳಿಯದಿರಿ । ಗೋಪಾಲದಾಸನು ನುಡಿದಂತೆ ಭಕ್ತರು ನಡೆದರು । ಅವರ
ಮಹಾರಾಜರಿಗೆ ಸಾಷ್ಟಾಂಗ ನಮಸ್ಕಾರ ಮಾಡಿ, ಹೂಮಾಲೆಯನ್ನು ಹಾಕಿ, ತೆಂಗು ಸಕ್ಕರೆಯ ಪ್ರಸಾದವನ್ನು ಮುಂದೆ
ಇಟ್ಟರು । ನಂತರ ಮಹಾರಾಜರು ಭಾಸ್ಕರಗೆ ಎಲ್ಲರಿಗೆ ಪ್ರಸಾದ ಹಂಚುವಂತೆ ಹೇಳಿದರು । ಆದರೆ ನೆನಪಿಡು, ಪ್ರಸಾದ
ಕೊಡುವಾಗ ತಪ್ಪಾಗದಿರಲಿ । ಈ ಪಂಚವಟಿಯಲ್ಲಿ ನನ್ನ ಬಂಧುವಿನ ಭೆಟ್ಟಿಯಾಯಿತು । ನನ್ನ ಇಲ್ಲಿಯ ಕೆಲಸವು
ಪೂರ್ಣವಾಯಿತು । ಈಗ ನಾಶಿಕದ ಧುಮಾಳ ವಕೀಲರ ಮನೆಗೆ ನನಗೆ ಹೋಗಬೇಕಾಗಿದೆ । ಮಹಾರಜರು ನಾಶಿಕಕ್ಕೆ
ಬಂದು ಸುದ್ದಿ ತಿಳಿದೊಡನೆ ದರ್ಶನಕ್ಕಾಗಿ ಜನರ ಗದ್ದಲವು ಉಂಟಾಯಿತು । ಅಲ್ಲಿ ಅನೇಕ ಸಣ್ಣ ಘಟನೆಗಳು ನಡೆದವು।
ಅವುಗಳ ಬಗ್ಗೆ ವಿಸ್ತಾರದಿಂದ ಬರೆದರೆ, ಈ ಗ್ರಂಥವು ಬಹು ದೀರ್ಘವಾಗುವದು, ಆದ್ದರಿಂದ ಸಂಕ್ಷೇಪ್ತದಲ್ಲಿ ನುಡಿದೆ।
ಅದಕ್ಕಾಗಿ ಕ್ಷಮೆ ಯಾಚಿಸುವೆ । ನಾಶಿಕದಲ್ಲಿ ಕೆಲವು ದಿನಗಳವರೆಗೆ ಇದ್ದು ಮಹಾರಾಜರು ತಮ್ಮ ಭಕ್ತರೊಡನೆ ಶೇಗಾಂವಿಗೆ
ಮರಳಿದರು । ಮಹಾರಾಜರನ್ನು ಆಡಗಾಂವಿಗೆ ಕರೆದುಕೊಂಡು ಹೋಗಲು ಝೂಮಸಿಂಗನು ಶೇಗಾಂವಿಗೆ ಬಂದನು। ॥ 108 ॥
ಅವನು ಮಹಾರಾಜರಿಗೆ ಬರುವಂತೆ ವಿನಂತಿಸಿದರೂ, ಮಹಾರಾಜರು ರಾಮ ನವಮಿಯ ಉತ್ಸವದ ನಂತರ



ಆಡಗಾಂವಿಗೆ ಬರುವದಾಗಿ ಹೇಳಿದರು । ಈಗ ಕರೆದುಕೊಂಡು ಹೋಗುವ ಹಟ ಹಿಡಿಯಬೇಡ । ಝೂಮಸಿಂಗನು
ಮಹಾರಾಜರ ನಿಸ್ಸೀಮ ಭಕ್ತನಿರುವದರಿಂದ ಮರಳಿ ಹೋದನು । ನಂತರ ರಾಮ ನವಮಿಯ ದಿನ ಅವನು ಪುನಃ
ಶೇಗಾಂವಿಗೆ ಬಂದನು । ಅವನು ಶೇಗಾಂವಿಯ ರಾಮನವಮಿ ಉತ್ಸವವನ್ನು ನೋಡಿದನು । ನಂತರ ಮಹಾರಾಜ
ಹಾಗೂ ಅವರ ಶಿಷ್ಯರೊಡನೆ ಝೂಮಸಿಂಗನು ಹನುಮಾನ ಜಯಂತಿ ಉತ್ಸವಕ್ಕಾಗಿ ಅಡಗಾಂವಿಗೆ ಬಂದನು ।
ಮಹಾರಾಜರು ಅಡಗಾಂವಿಯಲ್ಲಿ ಅನೇಕ ಚಮತ್ಕಾರಗಳನ್ನು ಮಾಡಿದರು । ಒಂದು ದಿನ ಮಧ್ಯಾಹ್ನ ಮಹಾರಾಜರು
ಭಾಸ್ಕರನನ್ನು ನೆಲದ ಮೇಲೆ ಕುಕ್ಕರಿಸಿದರು । ನಂತರ ಎದೆಯ ಮೇಲೆ ಕುಳಿತು ಅವನನ್ನು ಬಡೆಯತೊಡಗಿದರು ।
ಉಪಸ್ಥಿತ ಭಕ್ತರು ಆ ತಮಾಷೆಯನ್ನು ನೋಡುತ್ತಿದ್ದರು, ಆದರೆ ಮಹಾರಾಜರನ್ನು ತಡೆಯುವ ಧೈರ್ಯ ಯಾರಲ್ಲಿರಲಿಲ್ಲ
ಸಮೀಪದಲ್ಲಿದ್ದ ಬಾಳಾಭಾವು ವಿನಯದಿಂದ ನುಡಿದನು, ಹೇಗ ಸದ್‌ಗುರುನಾಥ, ಈಗ ಭಾಸ್ಕರನನ್ನು ಬಿಟ್ಟು ಬಿಡಿರಿ।
ಅವನು ಬಡಿತದಿಂದ ಹಾಗೂ ಬಿಸಿಲಿನಿಂದ ಬಳಲಿರುವನು । ಇದನ್ನು ಕೇಳಿ ಬಾಳಾಭಾವು ನುಡಿದನು, ಹೇ ಬಂಧು
ನನಗಾಗಿ ಮಹಾರಾಜರನ್ನು ತಡೆಯಬೇಡ। ಮಹಾರಾಜರು ಸಾಕ್ಷಾತ್ ಈಶ್ವರ । ಅವರು ಏನು ಮಾಡಿದರೂ ಸರಿ ।
ನೋಡುವವರಿಗೆ ಮಹಾರಾಜರು ನನಗೆ ಹೊಡೆಯುವಂತೆ ತೋರುತ್ತಿದೆ, ಆದರೆ ನನಗೆ ಕಚಕುಳಿಯಾಗುತ್ತಿದೆ । ನಂತರ
ಮಹಾರಾಜರು ಭಾಸ್ಕರನೊಡನೆ ತಮ್ಮ ಸ್ಥಾನಕ್ಕೆ ಬಂದರು । ಮಹಾರಾಜನು ಬಾಳಾಭಾವುಗೆ ನುಡಿದರು, ಭಾಸ್ಕರನಿಗೆ
ಇಹಲೋಕವನು ಬಿಡಲು ಕೇವಲ ಎರಡು ದಿನಗಳು ಉಳಿದಿವೆ । ಅವನು ಪಂಚಮಿಗೆ ಸಾಯುವನು । ಮುಂದೆ ಹೋಗಿ
ಮಹಾರಾಜರು ತಮ್ಮ ಮನಸ್ಸಿಲ್ಲಿರುದನ್ನು ಹೇಳಿದರು । ಇಂದು ನಾನು ಭಾಸ್ಕರನಿಗೆ ಹೊಡೆಯುವ ಕಾರಣ ಗೊತ್ತೇನು।
ನಿನಗೆ ಭಾಸ್ಕರನು ನನ್ನಿಂದ ಶೇಗಾಂವಿಯಲ್ಲಿ ಕೊಡೆಯಿಂದ ಹೊಡೆಸಿದ್ದನು । ಅದು ನಿನಗೆ ಜ್ಞಾಪಕವಿದೆಯೇ ? ಭಾಸ್ಕರನ
ಆ ದುಷ್ಕರ್ಮವನ್ನು ಬಗೆಹರಿಸಲು ಅವನಿಗೆ ಬಡಿದೆನು । ಅವನನ್ನು ಹೊಡೆಯುವ ಹಿಂದೆ ಬೇರೆ ಯಾವ ಉದ್ದೇಶವು
ಇರಲಿಲ್ಲ । ಹನುಮಾನ ಜಯಂತಿಯ ಉತ್ಸವವು ಮುಗಿದ ಮೇಲೆ ಅಡಗಾಂವಿನಲ್ಲಿ ಏನಾಯಿತು ? ಎಂಬುದನ್ನು ಈಗ
ಕೇಳಿರಿ । ಉತ್ಸವವು ಪ್ರಸಾದದೊಡನೆ ಮುಗಿಯಿತು । ವದ್ಯ ಪಂಚಮಿಯ ದಿನ ಮಹಾರಾಜರು ಭಾಸ್ಕರನಿಗೆ ಹೇಳಿದರು।
ಎಲ್ಯೆ, ಭಾಸ್ಕರ, ಇಂದು ನಿನ್ನ ಪ್ರಯಾಣ ದಿನ । ನೀನು ಈಗ ಪದ್ಮಾಸನವನ್ನು ಹಾಕಿ ಪೂರ್ವಭಿಮುಖವಾಗಿ ಕುಳಿತುಕೊ। ॥ 109 ॥
ನಿನ್ನ ಚಿತ್ತವನ್ನು ಸ್ಥಿರಗೊಳಿಸಿ, ಭಗವಂತನ ಧ್ಯಾನ್ಯವನ್ನು ಮಾಡು । ನಿನ್ನ ನಿರ್ವಾಣದ ಸಮಯವು ಬಂದಿದೆ, ಚಿತ್ತವನ್ನು

ಏಕಾಗ್ರಗೊಳಿಸು । ಮಹಾರಾಜರು ಉಪಸ್ಥಿತ ಭಕ್ತರಿಗೆ "ವಿಠ್ಠಲ ವಿಠ್ಠಲ ನಾರಾಯಣ" । ಭಜನೆಯನ್ನು ಜೋರಾಗಿ
ಹಾಡಲು ಹೇಳಿದರು । ಈ ನಿಮ್ಮ ಬಂಧು ಇಂದು ವೈಕುಂಠಕ್ಕೆ ಪ್ರಯಾಣ ಮಾಡುವವನಿರುವನು, ನೀವು ಅವನಿಗೆ ಹೂ
ಮಾಲೆಯನ್ನು ಹಾಕಿ, ಪೂಜೆ ಮಾಡಿರಿ । ಭಕ್ತರು ಭಾಸ್ಕರನ ಪೂಜೆ ಮಾಡಿ, ಅಬೀರ ಹಚ್ಚಿ, ಹೂಮಾಲೆ ಹಾಕಿದರು ।
ಭಾಸ್ಕರನು ಪದ್ಮಾಸನ ಹಾಕಿ, ದೃಷ್ಟಿಯನ್ನು ನಾಸಿಕಾಗ್ರದ ಮೇಲೆ ಸ್ಥಿರಗೊಳಿಸಿದನು । ಇದರಿಂದಾಗಿ ಅವನು ಚಿತ್ತವೃತ್ತಿಗಳು
ಅಂತರ್ ಲೀನವಾದವು । ಈ ವಿಧಿಯನ್ನು ಮಹಾರಾಜರು ದೂರದಿಂದ ನೋಡುತ್ತಿದ್ದರು । ಮಹಾರಾಜರ ಆದೇಶದ
ಅನುಸಾರ ಭಕ್ತರು ಒಂದು ಪ್ರಹರ ಭಜನೆ ಮಾಡುತ್ತಿದ್ದರು । ಸೂರ್ಯನು ನೆತ್ತಿಯ ಮೇಲೆರಿದನು । ಒಮ್ಮೆಲೆ ಮಹಾರಾಜರು
"ಹರಹರ" ಎಂದು ನಾಮೋಚ್ಚಾರ ಜೋರಾಗಿ ಮಾಡಿದರು । ಆಗ ಭಾಸ್ಕರನ ಪ್ರಾಣ ಪಕ್ಷಿ ಹಾರಿ ಹೋಯಿತು । ಸಂತರು
ಯಾರ ಕೈ ಹಿಡಿಯುವರೋ ಅವರು ಹರಿಯ ಅತಿಥಿಯಾಗುವರು । ಭಾಸ್ಕರನು ಅಂತ್ಯ ಸಂಸ್ಕಾರಕ್ಕಾಗಿ ಭಕ್ತರು
ಮಹಾರಾಜರಿಗೆ ಕೇಳಿದರು, "ಅವನ ಶರೀರವನ್ನು ಎಲ್ಲಿ ಇಡಬೇಕು, ಅಂದರೆ ಅದರ ಮೇಲೆ ಸಮಾಧಿ ಕಟ್ಟುವದು
ಸಾಧ್ಯ । ಮಹಾರಾಜರು, ದ್ವಾರಕೇಶ್ವರದಲ್ಲಿ ಎಲ್ಲಿ ಪಶುಪತಿ ಹಾಗೂ ಸತಿ ಇರುವರೋ ಅಲ್ಲಿ ಭಾಸ್ಕರನ ಶರೀರವನ್ನು
ಇಡಬೇಕು ಎಂದರು । ಮಹಾರಾಜರ ಆಜ್ಞೆಯಾದ ಕೂಡಲೆ ಜನರು ವಿಮಾನವನ್ನು ತಯಾರು ಮಾಡಿ
ಬಾಳೆಕಂಬಗಳನ್ನು ಕಟ್ಟಿದರು । ಮತ್ತು ಅದರಲ್ಲಿ ಭಾಸ್ಕರನ ದೇಹವನ್ನು ಇಟ್ಟರು । ಭಕ್ತ-ಮಂಡಳಿಯ ಭಜನದ
ಸಮೇತ ಭಾಸ್ಕರನ ಶರೀರವನ್ನು ದ್ವಾರಕೇಶ್ವರಕ್ಕೆ ತಂದರು । ಸಮಾಧಿಯ ಧಾರ್ಮಿಕ ವಿಧಿಯು ಸಂಪನ್ನವಾಯಿತು ।
ಜನರು ದುಃಖದಿಂದ ನುಡಿದರು, ಮಹಾರಾಜರ ಪ್ರೀಯ ಭಕ್ತನು ನಮ್ಮಿಂದ ದೂರಹೋದನು । ಮರುದಿನ
ಸಮಾಧಿಯ ಹತ್ತಿರ ಬಡವರಿಗಾಗಿ ಅನ್ನದಾನವಾಯಿತು । ದ್ವಾರಕೇಶ್ವರವು ಅಡಗಾಂವಿನಿಂದ ಒಂದು ಮೈಲಿ
ದೂರದಲ್ಲಿದೆ । ಅಲ್ಲಿಯ ಪರಿಸರವು ಬಹು ರಮ್ಯವಾಗಿದೆ । ವಿಶೇಷವಾಗಿ ಇಲ್ಲಿ ಹುಣಸೆಹಣ್ಣಿನ ಮರಗಳು ಬಹು
ಸಂಖ್ಯೆಯಲ್ಲಿವೆ । ಜೊತೆಗೆ, ಅಶ್ವತ್ಥ, ಮಂದರಾ, ಮಾವು, ಔದುಂಬರ, ಆರಳಿ, ಬೇವಿನ ಮರಗಳು ಅಲ್ಲಿವೆ । ಜೊತೆಗೆ
ಅನೇಕ ಪ್ರಕಾರದ ಹೂಗಿಡಗಳು, ಬಳ್ಳಿಗಳು, ಲತೆಗಳು ಇದ್ದವು । ದ್ವಾರಕೇಶ್ವರವು ಅಡಗಾಂವ-ಅಕೋಲಿಯ ನಡುವೆ
ಇದೆ । ಹತ್ತು ದಿನ ಅನ್ನದಾನ ನಡೆದಿತ್ತು, ಅದರ ವರ್ಣನೆಯನ್ನು ಕೇಳಿರಿ । ಅನ್ನದಾನಕ್ಕೆ 'ಸಂತ ಭಂಡಾರಾ' ಎನ್ನುವರು। ॥ 110 ॥
ಹುಣಸೆ ಮರಗಳ ಕೆಳಗೆ ಜನರು ಉಣ್ಣಲು ಕೊಡುತ್ತಿದ್ದರು । ಅಲ್ಲಿ ಒಂದು ಹೊಸ ಸಮಸ್ಯೆಯು ಉಂಟಾಯಿತು । ಅಲ್ಲಿ



ಅನೇಕ ಕಾಗೆಗಳು ಸೇರಿ ಜನರಿಗೆ ಕಾಡತೊಡಗಿದವು । ಕಾಗೆಗಳ ಕರ್ಕಶ ಧ್ವನಿಯಿಂದ ಜನರು ಬೇಸತ್ತರು । ಅವು ಕೆಲವು
ಸಲ ತಟ್ಟೆಯಿಂದ ದ್ರೋಣವನ್ನು ಕೊಂಡು ಹೋಗುತ್ತಿದ್ದರೆ, ಕೆಲವು ಸಲ ಮೇಲಿನಿಂದ ಮಲವಿಸರ್ಜನೆ ಮಾಡುತ್ತಿದ್ದವು।
ಇದರಿಂದ ಊಟ ಮಾಡುವವರು ಬೇಸತ್ತು ಹೋಗಿ, ಅವರನ್ನು ಓಡಿಸ ತೊಡಗಿದರು । ತಿನ್ನುವದರಲ್ಲಿ ಕೆಲವು
ಬೇಡರಿದ್ದರು । ಅವರು ಬಿಲ್ಲು ಬಾಣಗಳನ್ನು ಧರಿಸಿ, ಕಾಗೆಗಳ ಮೇಲೆ ಗುರಿಯಿಟ್ಟು ಬಾಣ ಬಿಡುವದರಲ್ಲಿದ್ದರು ।
ಅಷ್ಟರಲ್ಲಿ ಅವರನ್ನು ತಡೆದು ಮಹಾರಾಜರು ಅವುಗಳನ್ನು ಕೊಲ್ಲದಿರಿ ಎಂದರು । ಇಲ್ಲಿ ಬರುವದರಲ್ಲಿ ಅವರ ತಪ್ಪೇನು?
ಇಲ್ಲಿ ಬರುವದರಲ್ಲಿ ಅವುಗಳ ಉದ್ದೇಶ ಕೇವಲ ಈ ಭಂಡಾರದಿಂದ ಸ್ವಲ್ಪ ಪ್ರಸಾದ ಸೇವಿಸುವದಾಗಿದೆ । ಏಕೆಂದರೆ
ಭಾಸ್ಕರನು ವೈಕುಂಠಲೋಕಕ್ಕೆ ಸೀದಾ ತಲುಪಿದನು । ಅವನು ಪಿತೃಲೋಕದಲ್ಲಿ ತಡೆಯಲಿಲ್ಲ । ಹತ್ತು ದಿನಗಳ ವರೆಗೆ
ಮೃತನಾದವನ ಆತ್ಮವು ಅಂತರಾಳದಲ್ಲಿ ಸುತ್ತುವದು । ಹನ್ನೊಂದನೆ ದಿನ ಬಲಿ ಅರ್ಪಣೆ ಮಾಡಿ, ಕಾಗೆಯು ಪಿಂಡವನ್ನು
ಸ್ಪರ್ಶ ಮಾಡಿದ ಮೇಲೆ ಆತ್ಮವು ಮುಂದಕ್ಕೆ ಸಾಗುವದು । ಆದರೆ ಭಸ್ಕರನಿಗೆ ಪಿಂಡದಾನದ ಅವಶ್ಯಕತೆ ಇರಲಿಲ್ಲ
ಆದ್ದರಿಂದ ತಮ್ಮ ಪಾಲು ಸಿಗದಿದ್ದರಿಂದ ಕಾಗೆಗಳು ಸಿಟ್ಟಾಗಿವೆ । ಯಾರು ಮುಕ್ತನಗುವದಿಲ್ಲವೋ ಅವನಿಗಾಗಿ
ಪಿಂಡದಾನದ ಅವಶ್ಯಕತೆ ಇರುತ್ತದೆ । ಭಾಸ್ಕರನು ವೈಕುಂಠಲೋಕಕ್ಕೆ ಹೋದನು । ಭಂಡಾರದ ಸ್ವಲ್ಪ ಪ್ರಸಾದ
ಪಡೆಯುವ ಉದ್ದೇಶದಿಂದ ಕಾಗೆಗಳು ಬಂದಿರಬಹುದು । ನೀವು ಅವುಗಳನ್ನು ಕೊಲ್ಲದಿರಿ । ನಾನೇ ಅವುಗಳಿಗೆ
ತಿಳಿ-ಹೇಳುವೆನು ಎಂದು ಅವರು ನುಡಿದರು, ಎಲೈ ಕಾಗೆಗಳೇ ನನ್ನ ಮಾತನ್ನು ಕೇಳಿರಿ । ನಾಳೆಯಿಂದ ಇಲ್ಲಿ ಬರಬೇಡಿರಿ।
ಇಲ್ಲದಿದ್ದರೆ ಭಾಸ್ಕರನಿಗಾಗಿ ನನ್ನ ಮಾನಹಾನಿಯಾಗುವದು । ಇಂದು ಪ್ರಸಾದ ತಿಂದು ತೃಪ್ತರಾಗಿರಿ । ಆದರೆ ನಾಳೆಯಿಂದ
ಇಲ್ಲಿ ಬರಬೇಡಿರಿ । ಅವರ ಭಕ್ತರು ಅವರ ಈ ಮಾತಿನ ಮೇಲೆ ವಿಶ್ವಾಸವಿಟ್ಟರು, ಆದರೆ ಇತರ ದುಷ್ಟ ಜನರು ಆ
ಮಾತಿನ ಮೇಲೆ ವಿಶ್ವಾಸವಿಡದೆ, ಹಲ್ಲು ಕಿಸಿದರು । ತಮ್ಮಲ್ಲಿಯೇ ಮಾತನಾಡತೊಡಗಿದರು, ಮಹಾರಾಜರ ಈ
ವಾಣಿಯು ಸುಳ್ಳು ಹಾಗೂ ನಿರರ್ಥಕವಿದೆ । ಏಕೆಂದರೆ ಪಕ್ಷಿಗಳು ಮಾನವನ ಮಾತುಗಳನ್ನು ತಿಳಿಯುವದು ಸಾಧ್ಯವೇ?
ಇದರ ಸತ್ಯಪರೀಕ್ಷೆ ನಾಳೆ ಬಂದು ಮಾಡೋಣ । ಮಹಾರಾಜರಂತಹ ಹುಚ್ಚರು ಮಾತುಗಳನ್ನು ಆಡಿ ಭಕ್ತರನ್ನು ತಮ್ಮ
ವಶದಲ್ಲಿಡುವರು । ಮತ್ತು ಈ ಭಕ್ತರೇ ಅವರ ಸಂತತ್ವದ ಬಗ್ಗೆ ಡಂಗುರ ಬಡಿಯುವರು । ಯಾವದು ಸತ್ಯವೋ ಅದನ್ನೇ ॥ 111 ॥
ಹೇಳಬೇಕು । ಯಾವದನ್ನು ಅರಗಿಸಬಹುದೋ ಅದನ್ನು ಮಾತ್ರ ಸೇವಿಸಬೇಕು । ಯಾವದು ಅಸತ್ಯವೋ ಅದರ

ಮರಿಚಿಕೆಯನ್ನು ತೋರಿಸುವದು ಒಳ್ಳೆಯದಲ್ಲ। ಪ್ರತ್ಯಕ್ಷ ಪ್ರಮಾಣ ಮಾಡಲು ಅವರೆಲ್ಲ ಮರುದಿನ ಅಲ್ಲಿ ತಲುಪಿದರು । ಅಲ್ಲಿ ಔಷಧಿಗೆ ಕೂಡಾ ಒಂದು ಕಾಗೆಯು ಕಾಣಲಿಲ್ಲ। ಈ ಚಮತ್ಕಾರವನ್ನು ನೋಡಿ ಅವರು ಚಕಿತರಾದರು ಮತ್ತು ಜೊತೆಗೆ ತಮ್ಮ ಅವಿಶ್ವಾಸದ ಮೇಲೆ ದುಃಖಿತರಾದರು । ನಾಚಿಕೆಯಿಂದ ಅವರು ಮಹಾರಾಜರಿಗೆ ಶರಣಾದರು। ಹೇ ಶ್ರೋತೃಗಳೇ, ಅಲ್ಲಿ ಹನ್ನೆರಡು ವರ್ಷಗಳ ಒಂದು ಕಾಗೆಯೂ ಕಾಣಲಿಲ್ಲ। ಹದಿನಾಲ್ಕು ದಿನ ಪೂರ್ಣವಾದ ಮೇಲೆ ಮಹಾರಾಜರು ತಮ್ಮ ಶಿಷ್ಯರೊಡನೆ ಶೇಗಾಂವಿಗೆ ಮರಳಿದರು । ಹೇ ಶ್ರೋತೃಗಳೇ, ಶೇಗಾಂವಿಯಲ್ಲಿ ನಡೆದ ಮಾತನ್ನು ಏಕಾಗ್ರ ಚಿತ್ತದಿಂದ ಕೇಳಿರಿ । ಆ ದಿನಗಳಲ್ಲಿ ಎಲ್ಲೆಡೆಗೆ ಬರಗಾಲವಿತ್ತು। ಬರಗಾಲ ಪೀಡಿತ ಜನರಿಗಾಗಿ ಬಾವಿಗಳನ್ನು ಅಗಿಯುವ ಕಾರ್ಯ ನಡೆದಿತ್ತು। ಸುರಂಗಗಳನ್ನು ಹಚ್ಚಿ ಬಾವಿಗಳನ್ನು ಆಳು ಮಾಡುತ್ತಿದ್ದರು। ಒಂದು ಸ್ಥಳದಲ್ಲಿ ತೋಡಿದರೆ ನೀರು ಸಿಗದೆ, ಕಪ್ಪು ಕಲ್ಲು ಹತ್ತಿತ್ತು। ಕಲ್ಲು ಒಡೆಯುವ ಕೆಲಸ ನಿಂತಿತು । ಕಲ್ಲಿನಲ್ಲಿ ಹಾರಿಯಿಂದ ನಾಲ್ಕು ತೂತುಗಳನ್ನು ಮಾಡಿ, ಅವುಗಳಲ್ಲಿ ಮದ್ದನ್ನು ತುಂಬಿ, ಬತ್ತಿಯನ್ನು ಇಟ್ಟರು, ಮತ್ತು ಬೆಂಕಿಯನ್ನು ಹಚ್ಚಿದರು, ಆದರೆ ಬಹಳ ಹೊತ್ತಾದರೂ, ಮದ್ದು ಸಿಡಿಯಲಿಲ್ಲ। ಕೆಳಗಿನ ನೀರು ಕಲ್ಲಿನಿಂದಾಗಿ ಮೇಲೆ ಬರುತ್ತಿರಲಿಲ್ಲ। ಏಕೆಂದರೆ ಬತ್ತಿ ಹಾಗೂ ಮದ್ದಿನ ನಡುವೆ ಅಡತಡೆ ಇತ್ತು। ಇಲ್ಲಿಯ ಮೇಸ್ತ್ರಿಯ ಒಳಗೆ ಹೋಗಿ ಬತ್ತಿಯನ್ನುಸರಿಮಾಡದಿದ್ದರೆ ಸುರಂಗಗಳು ನೀರಿನಿಂದಾಗಿ ವ್ಯರ್ಥ ಹೋಗುವವು । ಈ ಜವಾಬುದಾರಿಯ ಹಾಗೂ ಕಠಿಣ ಕಾರ್ಯವನ್ನು ಮಾಡಲು ಯಾರೂ ಮುಂದೆ ಬರುತ್ತಿರಲಿಲ್ಲ, ಏಕೆಂದರೆ ಸ್ವಲ್ಪ ಸರಿಸಿದರೆ ಸುರಂಗವು ಹಾರುವ ಹೆದರಿಕೆ ಇತ್ತು। ಮೇಸ್ತ್ರಿಯ ದೃಷ್ಟಿ ಈಗ ಗಣು ಜವರ್‍ಯಾ ಎಂಬ ಬಡ ಕೂಲಿಯವನ ಮೇಲೆ ಬಿತ್ತು । ಅವನಿಗೆ ಆ ಕೆಲಸ ಮಾಡುವಂತೆ ಆಜ್ಞೆ ಮಾಡಲಾಯಿತು । ಪಾಪ, ಅದನ್ನು ಆ ಕೆಲಸ ಮಾಡದೇ ಏನು ಮಾಡಬಹುದು, ಏಕೆಂದರೆ ಅವನು ಧನಹೀನನು। ಗಣು ನಿಧನವಾಗಿ ಬಾವಿಯಲ್ಲಿ ಇಳಿದು, ಸುರಂಗದ ಬತ್ತಿಯನ್ನು ಅಲುಗಾಡಿಸಿದೊಡನೆ, ಅದು ಹೊತ್ತಿ ಬೆಂಕಿ ಒಳಗೆ ಹೋಗಿ, ಸುರಂಗವು ಹಾರಿತು। ಮುಂದೆ ಬರುವ ಸಂಕಟದ ಸೂಚನೆಯಿಂದ ಗಣು ಜವರ್‍ಯಾನು ಮಹಾರಾಜರ ನಿಸ್ಸೀಮ ಭಕ್ತನು – ಮಹಾರಾಜರನ್ನು ಮನದಲ್ಲಿ ಜ್ಞಾಪಿಸಿ ಸಂಧಿ ಸಾಧಿಸಿ ಒಂದು ಕಲ್ಲಿನ ಸಂದಿನಲ್ಲಿ ಅಡಗಿದನು । ಸುರುಂಗದ ಧ್ವನಿಯನ್ನು ಹೇಳಿ ಮೆಸ್ತ್ರಿ ಹಾಗೂ ಇತರ ಜನರು ಯಾವ ರೀತಿ ಕಲ್ಲುಗಳು ಸಿಡಿದು ಬಿದ್ದವೋ ಅದೇ ರೀತಿ ಗಣುನ ಶವವೂ ಬಿದ್ದಿರಬಹುದು ಎಂದು ಆಲೋಚಿಸಿದರು । ಒಳಗೆ ಇಣುಕಿದರೆ, ಹೊಗೆಯಿಂದಾಗಿ ಏನೂ ಕಾಣುತ್ತಿರಲಿಲ್ಲ।





ಮೆಸ್ತ್ರಿ ನುಡಿದನು ಗಣು ನಿಶ್ಚಿತವಾಗಿ ಸತ್ತಿರುವನು, ಅವನ ಶವವನ್ನು ಹುಡುಕಿರಿ। ಮೇಸ್ತ್ರಿಯ ಧ್ವನಿಯನ್ನು ಕೇಳಿ ಗಣು ಬಾವಿಯೊಳಗಿನಿಂದ ನುಡಿದನು, ಗಣು ಸತ್ತಿಲ್ಲ, ಅವನು ಬಾವಿಯೊಳಗೆ ಇರುವನು । ಮಹಾರಾಜರ ಕೃಪೆಯಿಂದ ಬದುಕಿರುವೆನು ಮತ್ತು ಒಂದು ಕಲ್ಲಿನ ಸಂದಿಯಲ್ಲಿರುವೆನು । ಆ ಭಾಗವು ಒಂದು ದೊಡ್ಡ ಕಲ್ಲಿನಿಂದ ಮುಚ್ಚಿದೆ, ಆದ್ದರಿಂದ ನಾನು ಹೊರಗೆ ಬರಲಾರೆ । ಗಣೂನ ಶಬ್ದಗಳನ್ನು ಕೇಳಿ ಜನರು ಆನಂದಿತರಾದರು ಮತ್ತು ಕೆಲವರು ಕೆಳಗಿಳಿದು, ಆ ಕಲ್ಲನ್ನು ಸರಿಸಿ ಗಣೂನನ್ನು ಹೊರತಗೆದರು। ಹೊರಗೆ ಬಂದೊಡನೆ ಗಣು ಮಹಾರಾಜರ ದರ್ಶನಕ್ಕಾಗಿ ಓಡಿದನು । ಗಣುಗೆ ಕಂಡೊಡನೆ ಮಹಾರಾಜರು ನುಡಿದರು, ಗಣ್ಯಾ, ಕಲ್ಲಿನ ಗವಿಯಲ್ಲಿ ಕುಳಿತು ಎಷ್ಟು ಕಲ್ಲುಗಳನ್ನು ಹಾರಿಸಿದೆ ? ಅವುಗಳಲ್ಲಿರುವ ದೊಡ್ಡ ಕಲ್ಲಿನಿಂದಾಗಿ, ಯಾವದು ಅ ಗವಿಯನ್ನು ಮುಚ್ಚಿತು ಅದರಿಂದ, ನೀನು ಬದುಕಿದೆ। ಅದರೆ ಈ ತರಹದ ಕೃತ್ಯವನ್ನು (ಕೆಲಸವನ್ನು) ಇನ್ನು ಮುಂದೆ ಮಾಡಬೇಡ । ಬೆಂಕಿಯೊಡನೆ ಚೆಲ್ಲಾಟವೆಂದರೆ ಮರಣಕ್ಕೆ ಆವ್ಹಾನ ಎಂಬುದನ್ನು ಮರೆಯಬೇಡ। ಈಗ ಹೋಗು, ನಿನ್ನ ಮೇಲೆ ಬಂದ ಗಂಡಾಂತರ ದೂರವಾಗಿದೆ। ಗಣೂನನ್ನು ನೋಡಲು ಊರಿನ ಜನರು ಕಲೆತರು। ಗಣು ಮನಸ್ಸಿನಲ್ಲಿಯ ಮಾತನ್ನು ಹೇಳಿದ, ಹೇ ಸದ್‌ಗುರುನಾಥ ಸುರುಂಗ ಹಾರಿದಾಗ, ತಾವು ನನ್ನ ಕೈ ಹಿಡಿದು ಗವಿಯಲ್ಲಿ ಕೂಡ್ರಿಸಿದಿರಿ। ಆದ್ದರಿಂದ ನನ್ನ ಪ್ರಾಣಗಳು ಬದುಕಿದವು, ಮತ್ತು ತಮ್ಮ ಚರಣಕಮಲಗಳ ದರ್ಶನಕ್ಕಾಗಿ ನಾನು ಬಂದೆ । ಹೇ ಗುರುರಾಜ ತಮ್ಮ ಕೃಪೆ ಇರದಿದ್ದರೆ ನಾನು ಬಾವಿಯಲ್ಲಿ ಸಾಯುತ್ತಿದ್ದೆ। ಈ ರೀತಿ ಗಜಾನನ ಮಹಾರಾಜರ ಕೃಪಾ ಮಹಿಮೆಯು ಅಸಾಧಾರಣ, ಅದನ್ನು ಸರಿಯಾಗಿ ವರ್ಣಿಸುವದು ಅಸಾಧ್ಯ । ಶ್ರೀ ದಾಸಗಣು ವಿರಚಿತ ಶ್ರೀ ಗಜಾನನ ವಿಜಯ ಗ್ರಂಥವನ್ನು ಪಠಿಸುವವರಿಗೆ ಆನಂದಕೊಡಲಿ, ಇದೇ ದಾಸಗಣುವಿನ ಇಚ್ಛೆ।

॥ ಶುಭಂ ಭವತು ॥ ಶ್ರೀ ಹರಿಹರಾರ್ಪಣಮಸ್ತು॥

॥ ಇಲ್ಲಿಗೆ ಹನ್ನೊಂದನೆಯ ಅಧ್ಯಾಯವು ಮುಗಿಯಿತು ॥





ಪೀತಾಂಬರನು ಶ್ರೀ ಗಜಾನನ ಮಹಾರಾಜರ ಸ್ಮರಣೆಯನ್ನು ಮಾಡುತ್ತಲೇ ಒಣಗಿದ ವೃಕ್ಷವು ಚಿಗುರಿತು.

## ॥ ಅಧ್ಯಾಯ೧೨ ॥

ಶ್ರೀ ಗಣೇಶಾಯನಮಃ । ಹೇ ಗಣಾಧೀಶ ಗಣಪತಿ, ಮಯೂರೇಶ್ವರ ವಿಮಲಕೀರ್ತಿ । ನನ್ನ ಹೃದಯದಲ್ಲಿ ನಿವಾಸ ಮಾಡಿ ಈ ಗ್ರಂಥವನ್ನು ಪೂರ್ತಿಗೊಳಿಸುವಂತೆ ಸಹಾಯ ಮಾಡಿರಿ । ತಾವು ಜ್ಞಾನ ಹಾಗೂ ಬುದ್ಧಿಯನ್ನು ದಯಪಾಲಿಸುತ್ತೀರಿ, ಮತ್ತು ಭಕ್ತರ ಇಚ್ಛೆಯನ್ನು ಪೂರ್ಣ ಮಾಡುವಿರಿ । ಹೇ ಗಣರಾಯ, ತಮ್ಮ ಕೃಪೆಯಿಂದ ಎಲ್ಲ ವಿಘ್ನಗಳು ನಾಶವಾಗುತ್ತವೆ । ತಾವು ಸಾಕ್ಷಾತ್ ಚಿಂತಾಮಣಿ । ಪುರಾಣಗಳ ಪ್ರಮಾಣದಂತೆ ಭಕ್ತರ ಎಲ್ಲ ಇಚ್ಛೆಗಳನ್ನು ತಾವು ಪೂರ್ಣಗೊಳಿಸುತ್ತೀರಿ । ಆದ್ದರಿಂದ ನನ್ನ ಮನಸ್ಸಿನಲ್ಲಿರುವ ಗ್ರಂಥ ಪೂರ್ತಿಯ ಇಚ್ಛೆಯನ್ನು ಹೇ ಏಕದಂತ, ಲಂಬೋದರ, ಭಾಲಚಂದ್ರ, ಸಿಂಧೂರಾರೆ, ತಾವು ಕೃಪೆಮಾಡಿ ಪೂರ್ಣಗೊಳಿಸಿರಿ । ಇರಲಿ ! ಬಚ್ಚುಲಾಲ ಅಗ್ರವಾಲ ಅಕೋಲೆಯಲ್ಲಿರುತ್ತಿದ್ದನು । ಅವನು ಧನ ಕನಕಗಳಿಂದ ಸಂಪನ್ನರಾಗಿದ್ದರೂ ಒಳ್ಳೆಯ ಮನಸ್ಸಿನವನಾಗಿದ್ದನು । ಅವನು ಕಾರಂಜಾದ ಲಕ್ಮಣ ಘುಡೆಯ ಮಾತನ್ನು ಕೇಳಿದ್ದನು । ಆ ಘಟನೆಯ ಬಗ್ಗೆ ಅವನಿಗೆ ಸಂಶಯ ಉಂಟಾಯಿತು । ಇದು ಸತ್ಯವಾಗಿರಬಹುದೇ ? ಎಂದು ಅವನು ಯೋಚಿಸ ತೊಡಗಿದನು । ಅವನು ಈ ಚಿಂತೆಯಲ್ಲಿದ್ದಾಗಲೆ, ಮಹಾರಾಜರು ಒಮ್ಮೆಲೇ ಅಕೋಲಾಗೆ ಬಂದರು । ಬಚ್ಚುಲಾಲನು ಅವರ ಭಕ್ತನಿದ್ದನು । ಆದ್ದರಿಂದ ಮಹಾರಾಜರು ಅವನ ಮನೆಯ ಮುಂದಿನ ಕಟ್ಟೆಯ ಮೇಲೆ ಕುಳಿತರು । ಮಹಾರಾಜರನ್ನು ಕಂಡೊಡನೆ ಅವನು ಆನಂದಿತನಾದನು । ಅವನು ಮಹಾರಾಜರಿಗೆ ಹೇಳಿದನು, ಹೇ ಗುರುರಾಜ, ತಮ್ಮ ಪೂಜೆಯನ್ನು ಮಾಡುವ ಇಚ್ಛೆಯಾಗಿದೆ । ಅವನ ಮಾತನ್ನು ಕೇಳಿ ಮಹಾರಾಜರು ಅವನಿಗೆ ಸಮ್ಮತಿ ನೀಡಿದರು । ಬಚ್ಚುಲಾಲನು ಎಲ್ಲ ಸಿದ್ಧತೆಗಳನ್ನು ಮಾಡಿ ಶೋಡಶೋಪಚಾರ ಗಳ ಪೂಜೆಯನ್ನು ಆರಂಭಿಸಿದ ಮೊದಲು ಮಹಾರಾಜರಿಗೆ ಸುಗಂಧಿತ ಲೇಪವನ್ನು ಹಚ್ಚಿ ಮೃಂಗ ಸ್ನಾನ ಮಾಡಿಸಿದನು। ನಂತರ ರೇಶ್ಮೆಯ ಸುಂದರ ಪೀತಾಂಬರವನ್ನು ಉಡಿಸಿದನು । ಬಹುಮೂಲ್ಯ ಕಾಶ್ಮೀರಿ ಶಾಲನ್ನು ಹೊದಿಸಿ ಮತ್ತು ಜರತಾರಿಯ ಪೇಟವನ್ನು ತಲೆಗೆ ಕಟ್ಟಿದನು । ಅವನ ಹತ್ತಿರವಿರುವ ಭಾರಿ ಹಾರವನ್ನು ಮಹಾರಾಜರಿಗೆ ಹಾಕಿ, ಜೊತೆಗೆ ವಜ್ರದ ಉಂಗುರವನ್ನು ಹಾಕಿದನು । ನಂತರ ಮಹಾರಾಜರನ್ನು ಒಳ್ಳೆಯ ಆಸನದ ಮೇಲೆ ಕೂಡ್ರಿಸಿ, ಜಿಲೇಬಿ, ಪೇಢೆ, ಮತ್ತು ರಾಘವದಾಸ ಆದಿಗಳನ್ನು ನೈವೇದ್ಯದ ರೂಪದಲ್ಲಿ ಅವರ ಮುಂದೆ ಇಟ್ಟನು । ನಂತರ ಸುಗಂಧಿತ ಬೀಡವನ್ನು ತಟ್ಟೆಯಲ್ಲಿಟ್ಟನು । ಅಷ್ಟಗಂಧದ ತಿಲಕವಿಟ್ಟನು । ಗುಲಾಬಿ ಹೂವಿನಿಂದ ಸುಗಂಧಿತ ನೀರನ್ನು ಎಲ್ಲೆಡೆಗೆ ಚಿಮುಕಿದನು।

ಮತ್ತು ಒಂದು ಬಂಗಾರದ ತಟ್ಟೆಯಲ್ಲಿ ದಕ್ಷಿಣೆಯ ರೂಪದಲ್ಲಿ ರೂಪಾಯಿಗಳ ರಾಶಿಯನ್ನು ಹಾಕಿದನು । ಅವುಗಳ ಬೆಲೆ ನಿರ್ಧರಿಸುವದೇ ಕಷ್ಟ । ಆ ರೂಪಾಯಿಗಳನ್ನು ಎಣಿಸಿದರೆ, ಹತ್ತು ಸಾವಿರಕ್ಕಿಂತ ಕಡಿಮೆ ಇರಲಿಕ್ಕಿಲ್ಲ, ಯಾವುದರ ವರ್ಣನೆ ಮಾಡಲು ಅಸಾಧ್ಯ । ಮಹಾರಾಜರ ಮುಂದೆ ಒಂದು ಶ್ರೀಫಲವನ್ನು ಇಟ್ಟು ವಿನಯದಿಂದ ಬಚ್ಚುಲಾಲ ನುಡಿದನು, ಮಹಾರಾಜ, ನನ್ನ ಮನಸ್ಸಿನಲ್ಲಿ ಒಂದು ರಾಮ ಮಂದಿರವನ್ನು ಮಾಡುವ ಇಚ್ಛೆಯಿದೆ । ಈ ಕಟ್ಟೆಯು ಬಲು ಚಿಕ್ಕದು, ಇಲ್ಲಿ ಬಹಳ ಜನರು ಕೂಡಲು ಸಾಧ್ಯವಿಲ್ಲ। ಆದ್ದರಿಂದ ರಾಮಮಂದಿರದ ನನ್ನ ಇಚ್ಛೆಯನ್ನು ತಾವು ಪೂರ್ಣಗೊಳಿಸಿರಿ। ಹೀಗೆ ನುಡಿದು ಅವನು ಅನನ್ಯ ಭಕ್ತಿಯಿಂದ ಮಹಾರಾಜರಿಗೆ ಸಾಷ್ಟಾಂಗ ನಮಸ್ಕಾರ ಮಾಡಿದನು। ಅವನ ಭಾವ ಭಕ್ತಿಯನ್ನು ನೋಡಿ, ಮಹಾರಾಜರಿಗೆ ಪ್ರಸನ್ನರಾಗಿ ನುಡಿದರು ನಿನ್ನ ಇಚ್ಛೆ ಜಾನಕಿ ವಲ್ಲಭರು ಪೂರ್ಣಗೊಳಿಸುವರು । ಮುಂದುವರೆದು ಮಹಾರಾಜರು ನುಡಿದರು, ನನಗೆ ಏನು ಎತ್ತು ಎಂದು ತಿಳಿರುವೇಯೇ ? ಏಕೆಂದರೆ ನನಗೆ ಆ ರೀತಿ ಅಲಂಕರಿಸಲಾಗಿದೆ । ನಾನು 'ಗೂಳಿ' ಹೋಳಿ ಹುಣ್ಣಿಮೆಯ ಹೋರಿ ಅಥವಾ ವರ್ಷ ಪ್ರತಿಪದೆಯ ಕುದುರೆ ಅಲ್ಲ। ನನಗೆ ಈ ಅಲಂಕಾರಗಳಿಂದ ಏನು ಪ್ರಯೋಜನ ? ಈ ವಿಷವನ್ನು ನನ್ನಿಂದ ದೂರವಿಡು। ನನ್ನ ಹಿಂದೆ ಈ ಬಿರುದಾವಲಿ ಬೇಡ । ಹೇ ಬಚ್ಚುಲಾಲ, ನನ್ನ ಸಂಪತ್ತನ್ನು ತೋರಿಸುವ ಇಚ್ಛೆಯಿಂದ ನೀನು ಈ ನಾಟಕವನ್ನು ರಚಿಸಲಿಲ್ಲ ತಾನೇ ? ಯಾರಿಗೆ ಯಾವದು ರುಚಿಸುವದೋ ಅದನ್ನೇ ಕೊಡಬೇಕು। ನಾನು ಹುಚ್ಚ ಸಂನ್ಯಾಸಿ। ಊರಿನಲ್ಲಿ ಯಾವಾಗಲೂ ನಗ್ನನಾಗಿ ತಿರುಗಾಡುತ್ತೇನೆ । ಆದ್ದರಿಂದ ಇದೆಲ್ಲವೂ ನಿನಗೆ ಅರ್ಪಣೆ । ಈ ವಸ್ತುಗಳು ಪ್ರಾಪಂಚಿಕರಿಗೆ ಮಾತ್ರ ಅವಶ್ಯಕ। ನನ್ನ ಮಾಲಿಕನು ಭೀಮಾನದಿಯ ತೀರದ ಮೇಲೆ ಕೈ ಕಟ್ಟಿ ನಿಂತಿರುವನು। ಅವನು ನನಗೆ ಈ ಎಲ್ಲ ವಸ್ತುಗಳನ್ನು ಕೊಡಲು ಅಸಮರ್ಥನೇ ? ಎಂದು ನುಡಿದು ಮಹಾರಾಜರು ಎಲ್ಲ ಅಲಂಕಾರಗಳನ್ನು ತಗೆದು ಎಸೆಯತೊಡಹಿದರು । ಧರಿಸಿದ ವಸ್ತ್ರಗಳ ಸ್ಥಿತಿಯೂ ಹಾಗೆಯೇ ಆಯಿತು । ಕೇವಲ ಎರಡು ಪೇಢೆಗಳನ್ನು ಸೇವಿಸಿ ಮಹಾರಾಜರು ಅಲ್ಲಿಂದ ಹೋದರು। ಇದನ್ನು ನೋಡಿ ನೆರೆದ ಭಕ್ತರು ದುಃಖಿತರಾದರು। ಆ ಭಕ್ತರಲ್ಲಿ ಕೆಲವು ಕಾರಂಜಾದವರಾಗಿದ್ದರು । ಅವರು ತಮ್ಮಲ್ಲಿಯೇ ಲಕ್ಮಣನು ನಿಜವಾಗಿಯೂ ದುರ್ದೈವಿ ಎಂದರು । ಅವನು ಬಚ್ಚುಲಾಲನು ಪೂಜೆ ಮಾಡಿದಂತೆ ಮಹಾರಾಜರ ಪೂಜೆ ಮಾಡಿದ್ದನು । ಆದರೆ ಅವನು ಲೋಭಿಯಾಗಿದ್ದರಿಂದ ಮನಸ್ಸಿನಲ್ಲಿ ಒಂದು ಮತ್ತು ಮುಖದಿಂದ ಬೇರೆ ಭಾವಗಳನ್ನು ವ್ಯಕ್ತಪಡಿಸಿದನು । ಅವನ ದಾಂಭಿಕ ಭಾವನೆಗಳನ್ನು







ತಿಳಿಯಲು ಮಹಾರಾಜರು ಅಸಮರ್ಥರಿರಲಿಲ್ಲ । ದಾಂಭಿಕನು ಶಬ್ದಗಳಿಂದಲೇ ಪೂಜೆ ಮಾಡುವನು ಮತ್ತು ಮಹಾವಸ್ತ್ರವನ್ನು ಅಕ್ಷತೆಯನ್ನು ಸಮರ್ಪಿಸಿ ಮುಗಿಸುವನು । ಅವನು ಮುಖದಿಂದ "ಶರ್ಕರಾ ಖಂಡ ಖಾದ್ಯಾದಿ" ಎಂದು ನುಡಿಯುವನು, ಆದರೆ ಭಗವಂತನ ಮುಂದೆ ಕೊಳಕು ಶೇಂಗಾಕಾಳನ್ನು ಇಡುವನು । 'ಬಿತ್ತಿದಂತೆ ಬೆಳಸುವ' ಈ ನ್ಯಾಯದಂತೆ ಆ ದಾಂಭಿಕನಿಗೂ ಫಲವು ಸಿಗುತ್ತದೆ। ಕೊನಗೆ ಲಕ್ಮಣನು ನಾಶಹೊಂದಿದನು ಈ ಕಾರಣದಿಂದಲೇ। ಆದರೆ ಈ ಬಚ್ಚುಲಾಲನು ಧನ್ಯನು । ಅವನು ಮಹಾರಾಜರ ಪೂಜೆಯನ್ನು ಶ್ರದ್ಧಾಭಾವದಿಂದ ಮಾಡಿದನು, ಮತ್ತು ಅದರ ಒಳ್ಳೆಯ ಫಲವು ದೊರಕಿತು । ದಿನಕಳೆದಂತೆ ಅವನ ಸಂಪತ್ತಿಯು ವೃಧಿಯಾಗತೊಡಗಿತು । ಸಂತ ಕೃಪೆಯಾದವನು, ಯಾವಾಗಲೂ ಪ್ರಸನ್ನ ಹಾಗೂ ಸುಖಿಯಾಗುವನು । ಮಹಾರಾಜರು ಒಮ್ಮೆಲೆ ಹೊರಟು ಹೋಗಿದ್ದರಿಂದ ಬಚ್ಚುಲಾಲನು ಅವರನ್ನು ಹುಡುಕಲು ಆಕೋಲಾ ಊರಿನಲ್ಲಿ ತಿರುಗಿದನು, ಆದರೆ ಮಹಾರಾಜರು ಎಲ್ಲಿಯೂ ಕಾಣಲಿಲ್ಲ । ಇರಲಿ, ಸಿಂಪಿಗೆ ಜಾತಿಯ ಪೀತಾಂಬರನೆಂಬ ಮಹಾರಾಜರ ಶಿಷ್ಯನಿದ್ದನು । ಅವನು ಶೇಗಾಂವಿಯಲ್ಲಿ ಮಹಾರಾಜರ ಜೊತೆಗಿರುತ್ತಿದ್ದನು । ಅವನು ತನ್ಮಯತೆಯಿಂದ ಮಹಾರಾಜರ ಸೇವೆ ಮಾಡುತ್ತಿದ್ದನು। ಅವನು ತಪಸ್ಸು ಸಾರ್ಥಕವಾಯಿತು। ಒಂದು ದಿನ ಮಠದಲ್ಲಿ ಒಂದು ಘಟನೆ ನಡೆಯಿತು। ಮಠದಲ್ಲಿ ಪೀತಾಂಬರನು ಹರಿದ ಪಂಚೆಯನ್ನು ಉಟ್ಟುಕೊಂಡಿದ್ದನು। ಇದನ್ನು ನೋಡಿ ಮಹಾರಾಜರು ಮಂದಹಾಸ್ಯ ಸೂಸಿ ನುಡಿದರು। ಅರೇ, ನಿನ್ನ ಹೆಸರು ಪೀತಾಂಬರ, ಆದರೆ ನೀನು ಉಟ್ಟ ವಸ್ತ್ರದಿಂದ ನಿನ್ನ ಪಾರ್ಶ್ವ ಭಾಗವೂ ಕಂಡು ಬರುತ್ತಿದೆ। ನಿನ್ನ ಪಾರ್ಶ್ವ ಭಾಗವನ್ನಾದರೂ ಮುಚ್ಚಿಕೊ । ಹೆಸರಾದರೆ 'ಸೋನುಬಾಯಿ' ಆದರೆ ಕೈಯಲ್ಲಿ ಕಂಚಿನ ಬಳೆಗಳು । ಹೆಸರಾದರೇ 'ಗಂಗಾಬಾಯಿ' ಆದರೆ ನೀರಿಗಾಗಿ ಚಡಪಡಿಸುತ್ತಿರುವಳು । ಅದೇ ರೀತಿ ನಿನ್ನ ಸ್ಥಿತಿ । ಈ ಹರಿದ ಪಂಚೆಯು ಉಟ್ಟು ಕೊಳ್ಳಲು ಯೋಗ್ಯವಿಲ್ಲ । ಈ ಜರ್ಜರವಾದ ಪಂಚೆಯನ್ನು ಉಟ್ಟುಕೊಂಡು ನೀನು ತಿರುಗುವಿ ಆದ್ದರಿಂದ ಈ ಕೈ ಪಂಚೆಯನ್ನು ಉಟ್ಟುಕೊಳ್ಳು । ಆದರೆ ನೆನಪಿರಲಿ, ಯಾರು ಏನೂ ನುಡಿದರೂ ಅದನ್ನು ಧರಿಸು । ಮಹಾರಾಜರು ಕೊಟ್ಟ ಪಂಜೆಯನ್ನು ಪೀತಾಂಬರನು ಧರಿಸಿದನು, ಆದರೆ ಈ ಮಾತು ಅವನ ಸಹಕಾರಿಗಳಿಗೆ ರುಚಿಸಲಿಲ್ಲ । ಸ್ವಾರ್ಥದಿಂದ ಮರುಳಾಗಿರುವ ಒಬ್ಬನು ತಮ್ಮ ಬಂಧುವಿನ ವಿನಾಶ ಮಾಡಲು ಆತುರಿಸುತ್ತಾನೆ । ಅವರ ಆ ಮತ್ಸರದಿಂದ ತುಂಬಿದ ಮಾತುಗಳ ವರ್ಣನೆಯ ಅವಶ್ಯಕತೆ ಏನು ? ಏಕೆಂದರೆ ಹೊಲಸು ಹಳ್ಳದ ಬಾಯಿ ತಗೆದರೆ

ಹೊಲಸು ನಾತವೇ ಬರುವದು। ಶ್ರೀ ಗಜಾನನ ಮಹಾರಾಜರ ಶಿಷ್ಯರು ಅನೇಕರಿದ್ದರೂ, ಅವರ ಅಧಿಕಾರಿಯಾಗುವ ಪಾತ್ರತೆ ಇದ್ದವರು ಬಹಳ ಕಡಿಮೆ। ಅರಣ್ಯದಲ್ಲಿ ಸಾವಿರಾರು ವೃಕ್ಷಗಳಿದ್ದರೂ, ಚಂದನಗಿಡಗಳು ವಿರಳ। ಮಹಾರಾಜರ ಕೆಲವು ಭಕ್ತರು ಪೀತಾಂಬರನ ಮೇಲೆ ಬೆಂಕಿಕಾರತೊಡಗಿದರು। ಮಹಾರಾಜರು ಧರಿಸಿದ ವಸ್ತ್ರವನ್ನು ಧರಿಸಿ ತಿರುಗುವ ನಿಜ ಭಕ್ತನು ಇವನು, ಎಂದು ಮಹಾರಾಜರ ಕೆಲವು ಭಕ್ತರು ಹೀಯಾಳಿಸತೊಡಹಿದರು। ನಿನ್ನ ಭಕ್ತಿ ನಮಗೆ ತಿಳಿದಿದೆ। ನೀನಾದರೊ ಸೋಮಾರಿ ಕಂಡು ಬರುವಿ । ನೀನು ಇಲ್ಲಿರುವದರಿಂದ ಮತ್ತು ನಿನ್ನ ಕೃತಿಯಿಂದ ಮಹಾರಾಜರ ಅಪಮಾನವಾಗುತ್ತದೆ। ಆಗ ವಿನಯದಿಂದ ಪೀತಾಂಬರನು, ನಾನು ಮಹಾರಾಜರು ಕೊಟ್ಟ ವಸ್ತ್ರವನ್ನು ಧರಿಸಿ ಅವರ ಅವಮಾನ ಮಾಡದೇ, ಅವರು ಕೊಟ್ಟ ಪ್ರಸಾದವನ್ನು ಸಮ್ಮಾನ ಪೂರ್ವಕವಾಗಿ ಕಾಪಾಡಿದ್ದೇನೆ ಎಂದನು । ಈ ವಸ್ತ್ರವನ್ನು ನನಗೆ ಕೊಟ್ಟಿರುವದರಿಂದ ನಾನು ಧರಿಸಿರುವೆನು । ಇದರಲ್ಲಿ ಮಹಾರಾಜರ ಅಪಮಾನ ಹಾಗೂ ಆಜ್ಞಾಭಂಗವೆಲ್ಲಿಂದ ಬಂತು ? ಇಷ್ಟು ನುಡಿದರೂ, ಅವರ ಮಾತನ್ನು ಬೇರೆಯವರು ನಂಬದೇ ಅವನ ಮೇಲೆ ಅಸೂಯೆ ಹೊಂದಿದರು। ಅವರ ಮತ್ಸರ ಹಾಗೂ ಹೊಟ್ಟೆಕಿಚ್ಚನ್ನು ಮುಗಿಸಲು ಮಹಾರಾಜರು ಪೀತಾಂಬರನಿಗೆ ನೀನು ಈಗ ಇಲ್ಲಿಂದ ದೂರ ಹೊರಟು ಹೋಗು ಎಂದು ಆಜ್ಞಾಪಿಸಿದರು । ಏಕೆಂದರೆ ಮಗುವು ದೊಡ್ಡವನಾದ ಮೇಲೆ ತಾಯಿಯಿಂದ ದೂರಹೋಗಬೇಕು । ಪೀತಾಂಬರ, ನನ್ನ ಕೃಪೆ ನಿನ್ನ ಮೇಲೆ ಸದೈವ ಇರುವದು । ನೀನು ಇಲ್ಲಿಂದ ಹೋಗಿ ಪತಿತರ ಸಹಾಯ ಮಾಡು । ಮಹಾರಾಜರ ಆಜ್ಞೆಯನ್ನು ಪ್ರಮಾಣವೆಂದು ತಿಳಿದು, ಅಶ್ರುಪೂರ್ಣ ನೇತ್ರಗಳಿಂದ ಅವರಿಂದ ಬೀಳ್ಕೊಟ್ಟನು । ಅವನ ಕಾಲುಗಳು ಮುಂದೆ ನಡೆಯುತ್ತಿದ್ದರೂ, ಅವನ ಮುಖವು ಮಠದ ಕಡೆಗೆ ಹಾಗೂ ಕಣ್ಣುಗಳು ಮಹಾರಾಜರ ಕಡೆಗಿದ್ದವು । ಪೀತಾಂಬರನು ನಡೆಯುತ್ತ ಕೊಂಡೋಲಿ ಎಂಬ ಗ್ರಾಮಕ್ಕೆ ತಲುಪಿದನು । ಸಂಜೆಯಾಗುತ್ತಿತ್ತು ಮತ್ತು ಮಹಾರಾಜರ ನಾಮಸ್ಮರಣೆಯು ನಡೆದಿತ್ತು । ಸಂಜೆಗೆ ಊರಿನಲ್ಲಿ ಹೋಗುವದು ಉಚಿತವಲ್ಲ ಎಂದು ಗ್ರಹಿಸಿ, ಒಂದು ಮಾವಿನ ಮರದ ಕೆಳಗೆ ಕುಳಿತನು । ಗಿಡದ ಕೆಳಗಿದ್ದ ಇರುವೆಗಳು ಅವನಿಗೆ ಕಡಿದವು । ಆದ್ದರಿಂದ ಬೆಳಗಾದ ಕೂಡಲೇ ಅವನು ಮರದ ಮೇಲೇರಿ ಕುಳಿತನು । ಅಲ್ಲಿ ಕೂಡಾ ಇರುವೆಗಳ ಕಾಟದಿಂದ ಒಂದು ಟೊಂಗೆಯಿಂದ ಮತ್ತೊಂದಕ್ಕೆ ಹೋಗುತ್ತಿದ್ದನು । ಆದರೆ ಅವನಿಗೆ ಸರಿಯಾದ ಸ್ಥಾನವು ದೊರಕಿಲಿಲ್ಲ। ಅವನ ಈ ಓಡಾಟವನ್ನು ಕೆಲವು ದನಗಾಯಿಗಳು ನೋಡಿದರು । ಅವನು ಮಂಗದಂತೆ ಏಕೆ ಹಾರಾಡುತ್ತಿರುವನು ?





ಎಂಬ ಪ್ರಶ್ನೆ ಉಂಟಾಯಿತು. ಅವನು ಭಯವಿಲ್ಲದೆ ಒಂದು ಟೊಂಗೆಯಿಂದ ಮತ್ತೊಂದಕ್ಕೆ ಕೆಳಗೆ ಬೀಳದೆ ಹಾರಾಡುತ್ತಿರುವನು ಇದೇ ಆಶ್ಚರ್ಯ । ಆಗ ಮತ್ತೊಬ್ಬನು ಇದರಲ್ಲಿ ಆಶ್ಚರ್ಯವೇನು ? ಶ್ರೀ ಗಜಾನನ ಮಹಾರಾಜರ ಶಿಷ್ಯನೇ ಈ ಲೀಲೆಯನ್ನು ಮಾಡಬಲ್ಲರು । ಇವನ ಈ ಲೀಲೆಯಿಂದ ಇವನು ಗಜಾನನ ಮಹಾರಾಜರ ಶಿಷ್ಯನೇ ಇರುವದು ಸತ್ಯ । ನಡೆಯಿರಿ, ನಾವು ಊರಿನಲ್ಲಿ ಹೋಗಿ ಈ ವಾರ್ತೆಯನ್ನು ಎಲ್ಲರಿಗೆ ಹೇಳೋಣ । ದನಗಾಯಿಗಳ ವೃತ್ತಾಂತವನ್ನು ಕೇಳಿ ಕೊಂಡೋಲಿಯ ಎಲ್ಲ ಜನರು ಮಹಾರಾಜರ ಶಿಷ್ಯನನ್ನು ನೋಡಲು ಮಾವಿನ ಗಿಡದ ಕೆಳಗೆ ನೆರೆದರು । ಮೊದಲು ಯಾರೂ ವಿಶ್ವಾಸವಿಡಲಿಲ್ಲ । ಆದ್ದರಿಂದ ಎಲ್ಲರೂ ಇವನು ಠಕ್ಕನಿರಬೇಕು, ಮತ್ತು ಗಜಾನನ ಮಹಾರಾಜರ ಶಿಷ್ಯರಂತೆ ನಾಟಕ ಮಾಡುತ್ತಿರಬಹುದು ಎಂದು ಮಾತನಾಡತೊಡಗಿದರು । ಗಜಾನನ ಮಹಾರಾಜರ ನಿಜ ಶಿಷ್ಯ ಭಾಸ್ಕರ ಪಾಟೀಲನಿದ್ದನು । ಯಾವನು ಅಡಗಾಂವಿಯಲ್ಲಿ ಸ್ವರ್ಗಸ್ಥನಾದನು । ಮತ್ತೊಬ್ಬನು ಮಹಾರಾಜರ ಶಿಷ್ಯನು ಇಲ್ಲೇಕೆ ಬರುವೆನು ? ಎಂದು ಸಂಶಯ ವ್ಯಕ್ತಪಡಿಸಿದನು । ಅಲ್ಲಿಯ ಪೇಢೆ–ಬರ್ಫಿಗಳನ್ನು ಬಿಟ್ಟು ಇಲ್ಲಿ ಉಪವಾಸ ಮಾಡಲು ಏಕೆ ಬರುವನು ? ಆದರೂ ಸತ್ಯವನ್ನು ಅರಿಯಲು ಅವನಿಗೆ ಪ್ರಶ್ನಿಸುವದು ಲೇಸು । ಅವನು ಹೇಳುವದನ್ನು ತಿಳಿಯುವದು ಅವಶ್ಯಕ । ಕೇವಲ ತರ್ಕಮಾಡುವದು ಸರಿಯಲ್ಲ। ಕೊನೆಗೆ ಊರಿನ ಹಿರಿಯನೊಬ್ಬನು ಮುಂದೆ ಒಂದು ಪೀತಾಂಬರನಿಗೆ ಕೇಳಿದನು, ನೀನು ಯಾರು ಮತ್ತು ಎಲ್ಲಿಂದ ಬಂದಿರುವಿ ? ನಿನ್ನ ಗುರು ಯಾರು ? ಆಗ ಪೀತಾಂಬರನು ನುಡಿದನು, ನಾನು ಶೇಗಾಂವಿಯ ರಹವಾಸಿ । ನಾನು ಸಿಂಪಿಗ ಜಾತಿಯವನು ಮತ್ತು ನನ್ನ ಹೆಸರು ಪೀತಾಂಬರ । ನಾನು ಶ್ರೀ ಗಜಾನನ ಮಹಾರಾಜರ ಶಿಷ್ಯ । ಅವರ ಆಜ್ಞೆಯಿಂದಲೆ ನಾನು ತಿರುಗಾಡುತ್ತ ಇಲ್ಲಿ ಬಂದಿರುವೆನು ಮತ್ತು ಈ ಮರದ ಕೆಳಗೆ ಕುಳಿತಿರುವೆನು । ಮಾವಿನ ಬುಡದಲ್ಲಿರುವ ಇರುವೆಗಳ ಕಾಟದಿಂದ ಮರದ ಮೇಲೆ ಹತ್ತಿದೆನು । ಆದರೆ ಜನರಿಗೆ ಪೀತಾಂಬರನ ಮಾತುಗಳಲ್ಲಿ ವಿಶ್ವಾಸವಿರಲಿಲ್ಲ। ಅವರು ಸಿಟ್ಟಿನಿಂದ ನುಡಿದರು, ದೊಡ್ಡವರ ಹೆಸರಿನಲ್ಲಿ ಇಂತಹ ಮರ್ಕಟಲೀಲೆಗಳನ್ನು ಏಕೆ ಮಾಡವಿ । ನೋಡದರೆ, ಅರಸನ ರಾಣಿ, ಹಾಗೂ ಹೊರಟಿರುವಳು ಹೊಟ್ಟೆ ತುಂಬಲು ಕೆಲಸ ಮಾಡಲು । ಆ ಊರಿನ ಶ್ಯಾಮರಾಮ ದೇಶಮುಖನು ನುಡಿದನು, ಎಲೈ ಮೂರ್ಖ, ನನ್ನ ಮಾತು ಕೇಳು । ಸ್ವಾಮಿ ಮಹಾರಾಜರು ಸಾಕ್ಷಾತ್ ದೇವರು । ಅವರ ಹೆಸರಿಗೆ ಮಸಿ ಬಳೆಯ ಬೇಡ। ಎಲೈ ಮೂರ್ಖ, ಅವರು ತಮ್ಮ ಲೀಲೆಯಿಂದ ಋತು ಇರದಿರುವಾಗ ಕೂಡಾ ಮಾವಿನ ಮರಕ್ಕೆ ಹಣ್ಣುಗಳನ್ನು

ನಿರ್ಮಿಸಿದ್ದರು । ಅವರು ಮರಕ್ಕೆ ಹಣ್ಣು ತಗಲಿಸಿದ್ದರು, ನೀನು ಹಣ್ಣೆಲ್ಲದಿದ್ದರೂ ಸರಿ, ಕೊನೆಯ ಪಕ್ಷ ಎಲೆಗಳನ್ನು ತಗುಲಿಸು । ಹೀಗೆ ಮಾಡದಿದ್ದರೆ ನಿನಗೆ ಉಳಿಗಾಲವಿಲ್ಲ । ಇದು ಪರ್ಣಹೀನ ವೃಕ್ಷ । ನಮ್ಮ ಮುಂದೆ ಈ ಮರದಲ್ಲಿ ಎಲೆ ಉಂಟು ಮಾಡು । ಹೀಗೆ ಮಾಡಿದ್ದರೆ ನಾವೆಲ್ಲರೂ ಸೇರಿ ನಿನ್ನನ್ನು ಬಡಿಯುವೆವು । ಏಕೆಂದರೆ ಸದ್ಗುರು ಕೃಪೆಯಿಂದಲೇ ಶಿಷ್ಯನಲ್ಲಿ ಶಕ್ತಿಯು ಉಂಟಾಗುತ್ತದೆ । ಈಗ ತಡಮಾಡದಿರಿ । ಈ ಮಾವಿನ ಮರವನ್ನು ಹಸಿರು ಮಾಡು। ಜನರು ಇಚ್ಛೆಯನ್ನು ಕೇಳಿ ಪೀತಾಂಬರನು ಬೆದರಿದನು । ಅವನು ಬಲು ವಿನಯದಿಂದ ನನಗೆ ಕಾಡಿಸದಿರಿ ಎಂದನು । ನನ್ನ ಕಥೆಯನ್ನು ಕೇಳಿರಿ । ಒಂದೇ ಗಣಿಯಿಂದ ವಜ್ರ ಹಾಗೂ ಕಲ್ಲು ಬರುತ್ತವೆ । ಗಜಾನನ ಮಹಾರಾಜರ ಶಿಷ್ಯರಲ್ಲಿ ನಾನು ಬೆಣಚು ಕಲ್ಲು । ನಾನು ನುಡಿಯುವದನ್ನು ಸತ್ಯವೆಂದು ತಿಳಿದು ವಿಶ್ವಾಸವಿಡಿರಿ । ಬೆಣಚುಕಲ್ಲಿನಿಂದಾಗಿ ಗಣಿಯ ಮಹತ್ವ ಕಡಿಮೆ ಆಗುವದಿಲ್ಲ । ಆದ್ದರಿಂದ ನನ್ನ ಗುರುವಿನ ನಾಮಸ್ಮರಣೆ ಮಾಡಲು ನಾನೇಕೆ ಬೆದರಲಿ ? ಆಗ ಶ್ಯಾಮರಾವನು ನೀನು ವ್ಯರ್ಥ ಬಡಬಡಿಸಬೇಡ । ಶಿಷ್ಯನು ಕಷ್ಟದಲ್ಲಿದ್ದಾಗ ತನ್ನ ಗುರುವಿನ ನಾಮಸ್ಮರಣೆಯನ್ನು ಮನಸ್ಸಿಟ್ಟು ಮಾಡುವನು । ಮತ್ತು ಶಿಷ್ಯನು ಯೋಗ್ಯತೆಗೆ ಪಾತ್ರನಿಲ್ಲದಿದ್ದರೂ, ಗುರು ಅವನ ಸಹಾಯತೆ ಮಾಡುತ್ತಾನೆ। ಈ ರೀತಿ ಒಂದು ಕಡೆ ಬಾವಿ ಮತ್ತು ಮತ್ತೊಂದು ಕಡೆ ಹುಲಿಯಂತೆ ಪೀತಾಂಬರನ ಸ್ಥಿತಿಯಾಯಿತು । ಅವನು ಚಿಂತಾಕ್ರಾಂತನಾದನು । ಈಗ ಏನು ಮಾಡಬೇಕು ಎಂದು ಯೋಚಿಸತೊಡಗಿದನು । ಮುಂದೆ ಏನಾಗುವದು ಎಂದು ತಮಾಷೆ ನೋಡಲು ಮರದ ಸುತ್ತಮುತ್ತ ಅನೇಕ ಜನರು ನೆರೆದರು । ಗುರು ಮೂರ್ತಿಯನ್ನು ಕಣ್ಣಿನ ಮುಂದೆ ತಂದು ಪೀತಾಂಬರನು ಅವನ ಸ್ತವನ ಆರಂಭಿಸಿದನು । ಹೇ ಸ್ವಾಮಿ ಸಮರ್ಥ ಗಜಾನನ, ನಾರಾಯಣ, ರಕ್ಷಕನೇ, ನನ್ನನ್ನು ಈ ವಿಪತ್ತಿಯಿಂದ ಪಾರು ಮಾಡಿರಿ । ನನ್ನಿಂದ ತಮ್ಮ ಮಹಿಮೆಗೆ ಮಸಿ ತಗುಲಬಾರದು । ಆದ್ದರಿಂದ ತಮಗೆ ಶರಣು ಬಂದು ಪ್ರಾರ್ಥಿಸುವದೆಂದರೆ ಈ ಮಾವಿಗೆ ಎಲೆ ತಗುಲಿಸಿರಿ । ನನಗೆ ತಮ್ಮ ಮೇಲೆಯೇ ವಿಶ್ವಾಸವಿದೆ । ಈ ಜನರು ನುಡಿದಂತೆ ನಡೆಯದಿದ್ದರೆ ಅವರು ನನ್ನನ್ನು ಕೊಲ್ಲುವರು । ಭಕ್ತ ಪ್ರಲ್ಹಾದನಿಗಾಗಿ ತಾವು ಕಂಬದಿಂದ ಪ್ರಕಟರಾದಿರಿ । ಜನಾಬಾಯಿಗೆ ನೇಣು ಹಾಕಿದಾಗ ತಮ್ಮ ಕೃಪೆಯಿಂದ ನೇಣು ನೀರಾಗಿ ಹೋಯಿತು । ಯಾವ ರೀತಿ ಜನಾಬಾಯಿಯ
ವಿಶ್ವಾಸ ವಿಠ್ಠಲನ ಮೇಲೆ ಇತ್ತು ಅದೇ ರೀತಿ ನನ್ನ ವಿಶ್ವಾಸ ತಮ್ಮ ಮೇಲೆ ಇದೆ । ದೇವರು ಹಾಗೂ ಸಂತರು ಅಭಿನ್ನರು। ॥ 120 ॥
ದೇವರೇ ಸಂತ ಹಾಗೂ ಸಂತರು ಭಗವಂತನ ಅವತಾರ । ಜನರು ನನಗೆ ಗಜಾನನ ಮಹಾರಾಜರ ಶಿಷ್ಯನೆನ್ನುವರು



ಇದರಲ್ಲಿ ನನ್ನ ದೊಡ್ಡಸ್ತಿಕೆ ಏನಿಲ್ಲ, ಆದರೆ ತಮ್ಮ ಕೃಪೆಯಿಂದ ನಮ್ಮಂತಹ ಕ್ಷುದ್ರರು, ದೊಡ್ಡವರಾಗುತ್ತಾರೆ । ದಾರದಲ್ಲಿ ಹೂವನ್ನು ಪೋಣಿಸಿದಾಗಲೇ ಆ ದಾರಕ್ಕೆ ಬೆಲೆ । ತಾವು ಹೂವಾದರೆ ನಾನು ದಾರ । ತಾವು ಕಸ್ತೂರಿಯಾದರೆ ನಾನು ಮಣ್ಣು । ಹಾಗೆ ನೋಡಿದರೆ ತಮ್ಮಿಂದಲೇ ನಾನು ಈ ವಿಪತ್ತಿನಲ್ಲಿ ಸಿಲುಕಿರುವೆನು । ಹೇ ಗುರುರಾಯ, ನನ್ನ ಪರೀಕ್ಷೆ ಮಾಡದಿರಿ । ತಾವೇ ಬಂದು ಈ ಪರ್ಣಹೀನ ವೃಕ್ಷವನ್ನು ಎಲೆಯಿಂದ ತುಂಬಿರಿ । ಪೀತಾಂಬರನು ಜನರಿಗೆ ಸದ್ಗುರುವಿನ ನಾಮಸ್ಮರಣೆ ಮಾಡಲು ಹೇಳಿದನು । ಹೇಳಿರಿ, ಜಯ ಜಯ ಗಜಾನನ ಸಾಧು ಮಹಾರಾಜ । ಶೇಗಾಂವಿಯ ಸಂತ । ತಮಗೆ ಜಯವಾಗಲಿ । ಉಪಸ್ಥಿತ ಜನರು ಮಹಾರಾಜರ ನಾಮಸ್ಮರಣೆ ಆರಂಭಿಸಿದೊಡನೆ, ನೋಡಿದರೆ ಪರ್ಣಹೀನ ಮಾವಿನ ಮರವ ಹಸಿರೆಲೆಗಳಿಂದ ತುಂಬಿತ್ತು ಮತ್ತು ಅವರು ಆಶ್ಚರ್ಯಚಕಿತರಾದರು । ಕೆಲವರು ನಾವು ಸ್ವಪ್ನಭಂಗವಾಗುವದು । ಕೆಲವರು ಇದು ಭ್ರಮೆ ಇರಬಹುದು । ಜಾದುಗಾರನು ಹಗ್ಗದ ಹಾವನ್ನು ಮಾಡುವನು । ಜೋಳಿಗೆಯಿಂದ ಸಾವಿರಾರು ರೂಪಾಯಿ ನಿರ್ಮಿಸುವನು । ಅದೇ ರೀತಿ ಇದು ಮಾಯಾಜಾಲವಿರಬಹುದು । ಜನರು ಎಲೆಯನ್ನು ಹರಿದಾಗಲೇ ವಿಶ್ವಾಸ ಉಂಟಾಯಿತು । ಈ ಚಮತ್ಕಾರವನ್ನು ನೋಡಿ ಜನರು ಇದು ಸಾಕ್ಷಾತ್ ಗಜಾನನ ಮಹಾರಾಜರ ಲೀಲೆ ಎಂದು ನಂಬಿದರು । ಅವರು ಮಹಾನ್ ಸಂತರು ಎಂಬುದರ ಬಗ್ಗೆ ಸಂಶಯವಿಲ್ಲ । ಇವನು ಮಹಾರಾಜರ ಶಿಷ, ಇದರ ಬಗ್ಗೆ ಸಂಶಯವೆಂದರೆ ಮಹಾರಾಜರ ಅವಪಮಾನವೇ । ಈಗ ಇವರನ್ನು ಸನ್ಮಾನದಿಂದ ಊರಿನಲ್ಲಿ ಕೊಂಡು ಹೋಗೋಣ । ಏಕೆಂದರೆ ತಮ್ಮ ಶಿಷ್ಯನಿಗಾಗಿ ಮಹಾರಾಜರು ಅವಶ್ಯವಾಗಿ ಕೊಂಡೋಲಿಗೆ ಬರುವರು । ಯಾವ ರೀತಿ ಕರುವಿಗಾಗಿ ಆಕಳು ಧಾವಿಸಿ ಬರುವದೋ ಅದೇ ರೀತಿ । ಈ ಮಾತಿಗೆ ಎಲ್ಲರೂ ಸಮ್ಮತಿ ನೀಡಿ, ಮೆರವಣಿಗೆಯಿಂದ ಪೀತಾಂಬರನಿಗೆ ಊರಿನಲ್ಲಿ ಕರೆದುಕೊಂಡು ಹೊರಟರು । ಜಗತ್ತಿನ ನೀತಿಯಂತೆ, ಚಮತ್ಕಾರ, ಲೀಲೆ ತೋರಿಸಿದ ಹೊರತು ನಮಸ್ಕಾರ ದೊರಕದು । ಯಾವ ರೀತಿ ಸಮರ್ಥ ರಾಮದಾಸ ಸ್ವಾಮೀಜಿಯವರು ಜನರ ಉದ್ಧಾರಕ್ಕಾಗಿ ತಮ್ಮ ಪ್ರೀಯ ಶಿಷ್ಯ ಕಲ್ಯಾಣಿಗೆ ಡೋಮ ಊರಿಗೆ ಕಳುಹಿಸಿದರೊ, ಅದೇ ರೀತಿ ಮಹಾರಾಜರು ಪೀತಾಂಬರನಿಗೆ ಕೊಂಡೋಲಿಗೆ ಕಳುಹಿಸಿದರು । ಅಂದಿನಿಂದ ಊರಿನ ಜನರ ಉನ್ನತಿಯಾಗುವದು । ಶ್ರೋತೃಗಳೇ, ಇಂದಿಗೂ
ಕೊಂಡೋಲಿಯಲ್ಲಿ ಆ ಮಾವಿನ ಮರವಿದೆ ಮತ್ತು ಸಾಮಾನ್ಯ ಗಿಡಗಳಿಗಿಂತ ಹೆಚ್ಚು ಮಾವಿನ ಹಣ್ಣುಗಳು ಹಿಡಿಯುತ್ತವೆ। ॥ 121 ॥
ಪೀತಾಂಬರನು ಊರಿನ ಜನರಿಗೆ ಒಂದು ಶ್ರದ್ಧಾಸ್ಥಾನ ಹಾಗೂ ಪ್ರಾತಃ ಸ್ಮರಣೀಯ ವ್ಯಕ್ತಿಯಾದನು । ವಜ್ರವು ಎಲ್ಲಿ

ಶ್ರೀಗಜಾನನ ॥ ೧೨೨ ॥ ವಿಜಯ ಅ.॥ ೧೨ ॥

ಹೋದರೂ ಅದರ ಬೆಲೆ ಕಡಿಮೆಯಾಗುವದಿಲ್ಲ । ಭಕ್ತರು ಪೀತಾಂಬರನಿಗೆ ಕೊಂಡೋಲಿಯಲ್ಲಿ ಮಠವನ್ನು ಮಾಡಿಕೊಟ್ಟರು । ಅಲ್ಲಿ ಯೋಗ್ಯ ಸಮಯಕ್ಕೆ ಪೀತಾಂಬರನ ದೇಹಾಂತವೂ ಆಯಿತು । ಇತ್ತ ಶೇಗಾಂವಿಯಲ್ಲಿ ಮಹಾರಾಜರು ಉದ್ವಿಗ್ನರಾಗಿ ಮಠದಲ್ಲಿ ಕುಳಿತಿದ್ದರು । ಮಹಾರಾಜರ ಚಿತ್ತ ಅಸ್ಥಿರವಾಗುವ ಕಾರಣವೇನು ಎಂದು ಶಿಷ್ಯರು ಮಹಾರಾಜರನ್ನು ಕೇಳುತ್ತಿದ್ದರು । ಆಗ ಮಹಾರಾಜರು ನನ್ನ ಕೃಷ್ಣಾ ಪಾಟೀಲನು ಸತ್ತನು । ಅವನು ಪ್ರತಿದಿನ ನನಗೆ ಅಡಿಕೆಯನ್ನು ತಂದು ಕೊಡುತ್ತಿದ್ದನು । ಅವನ ನೆನಪು ಬಂದು ನಾನು ವ್ಯಾಕುಳನಾಗಿದ್ದೇನೆ । ಅವನ ಪುತ್ರ ರಾಮನು ಇನ್ನೂ ಚಿಕ್ಕವನು । ಈಗ ನನಗೆ ಅಡಿಕೆ ಯಾರು ತಂದು ಕೊಡುವರು । ಆರಮನು ದೊಡ್ಡವನಾದ ಮೇಲೆ ನನ್ನ ಸೇವೆ ಮಾಡುವನು । ಆದರೆ ನಾನು ಈಗ ಈ ಮಠದಲ್ಲಿ ಇರಲಾರೆ । ಮಹಾರಾಜರ ಈ ಮಾತಿನಿಂದ ಶಿಷ್ಯರು ಚಿಂತಾಕ್ರಾಂತರಾದರು । ಅವರು ಮನಸ್ಸಿನಲ್ಲಿ ಮಹಾರಾಜರು ಇಲ್ಲಿ ಇರಲಾರರು ಎಂಬುದನ್ನು ತಿಳಿದರು । ಆಗ ಎಲ್ಲರೂ ಯಾವ ಸ್ಥಿತಿಯಲ್ಲಿಯೂ ಮಹಾರಾಜರಿಗೆ ಇಲ್ಲಿಂದ ಬಿಡಲಾರೆವು ಎಂದು ನಿರ್ಧರಿಸಿದರು । ನಾವೆಲ್ಲರೂ ಅವರ ಚರಣಗಳಲ್ಲಿ ಸತ್ಯಾಗ್ರಹ ಮಾಡೋಣ । ಈ ರೀತಿ ವಿಚಾರ ಮಾಡಿ ಮಹಾರಾಜರ ಶಿಷ್ಯಗಣರು ಮುಖ್ಯವಾಗಿ ಶ್ರೀಪತರಾವ, ಬಂಕಟಲಾಲ, ತಾರಾಚಂದ ಹಾಗೂ ಮರುತಿ ಮಹಾರಾಜರ ಬಳಿ ಬಂದರು । ಎಲ್ಲರೂ ಅವರ ಚರಣಗಳನ್ನು ಹಿಡಿದು, ಮಹಾರಾಜರೇ ನಮ್ಮನ್ನು ಬಿಟ್ಟು ಹೋಗುವ ವಿಚಾರ ಮಾಡದಿರಿ । ತಮ್ಮ ಇಚ್ಛೆಯಿದ್ದರೆ ಶೇಗಾಂವಿಯಲ್ಲಿ ಎಲ್ಲಿಯೂ ಇರಬಹುದು । ಆದರೆ ಈ ಊರನ್ನು ಬಿಟ್ಟು ಹೋಗಬೇಡಿ । ಆಗ ಮಹಾರಾಜರು ನುಡಿದರು, ಈ ಊರಿನಲ್ಲಿ ಎರಡು ಬಣಗಳಿವೆ । ಒಂದು ದೇಶಮುಖನ ಬಣ, ಇನ್ನೊಂದು ಪಾಟೀಲನ ಬಣ, ಆದ್ದರಿಂದ ನಾನು ಈಗ ಆ ಸ್ಥಳದಲ್ಲಿ ಇರುವೆನು, ಯಾವದು ಮುಕ್ತವಾಗಿರುವದು । ಎಂದರೆ ಮಾತ್ರ ನಾನು ಇರುವೆನು । ಮಹಾರಾಜರ ಇಚ್ಛೆ ಬಹಳ ವಿಚಿತ್ರವಾಗಿತ್ತು, ಆದ್ದರಿಂದ ಎಲ್ಲರೂ ಸಂಭ್ರಮದಲ್ಲಿ ಬಿದ್ದರು । ಮಹಾರಾಜರ ಎರಡೂ ಪಕ್ಷಗಳ ಜನರಲ್ಲಿ ಇರಲು ಸಿದ್ಧರಿರಲಿಲ್ಲ । ಈಗ ಉಳಿಯಿತು ಸರಕಾರದ ಜಮೀನು, ಅದನ್ನು ಅವರೇಕೆ ಕೊಡುವರು? ನಮ್ಮ ಸಂತರ ಮಹತ್ವ ಪರಕೀಯ ಸರಕಾರಕ್ಕೆ ಎಲ್ಲಿಂದ ಬಂತು । ಬಂಕಟಲಾಲನು ನುಡಿದನು, ಮಹಾರಾಜ ಈ ಮಾತಿನಿಂದ ನಮಗೆ ತೊಡಕಿನಲ್ಲಿ ಹಾಕದಿರಿ । ವಿದೇಶಿ ಸರಕಾರವು ನಮ್ಮ ಧಾರ್ಮಿಕ ಕಾರ್ಯಗಳಿಗಾಗಿ ಜಮೀನು ಕೊಡುವದು ನನಗೆ ಸಾಧ್ಯವೆನಿಸುವದಿಲ್ಲ । ಆದ್ದರಿಂದ ನಮ್ಮಲ್ಲಿ ಯಾರ ನೆಲವನ್ನು ಕೇಳಿರಿ, ನಾವು ಕೊಡುವೆವು ।



ಶ್ರೀಗಜಾನನ ॥ ೧೨೩ ॥ ವಿಜಯ ಅ.॥ ೧೨ ॥

ಮಹಾರಾಜರು ನುಡಿದರು ಇದು ನಿಮ್ಮ ಅಜ್ಞಾನ । ಭೂಮಿಯ ಮಾಲಿಕನು ಕೇವಲ ದೇವರೇ ಇರುವನು । ಇಂದಿನ ವರೆಗೆ ಅನೇಕ ರಾಜರು ಸಿಂಹಾಸನ ಮೇಲೆ ಕುಳಿತರು ಮತ್ತು ಸಮಯಕ್ಕೆ ಅನುಸಾರವಾಗಿ ಎಲ್ಲವನ್ನು ಬಿಟ್ಟು ಹೋದರು। ಆ ಪಾಂಡುರಂಗನೇ ಅಮರನಾಗಿದ್ದು ಈ ಭೂಮಿಯ ಮಾಲಿಕನು । ಲೌಕಿಕ ದೃಷ್ಟಿಯಿಂದ ಭೂಮಯಿ ಅಧಿಕಾರ ಒಬ್ಬನಿಂದ ಇನ್ನೊಬ್ಬನಿಗೆ ಹೋಗುವದು । ಇದು ಜಗದ ರೀತಿ । ಆದ್ದರಿಂದ ಸ್ಥಳವನ್ನು ಪಡೆಯಲು ಪ್ರಯತ್ನಿಸಿರಿ । ಮಹಾರಾಜರು ಮುಂದೆ ನಿಶ್ಚಯದಿಂದ ನುಡಿದರು, ಪ್ರಯತ್ನ ಮಾಡಿದರೆ ಪ್ರಯತ್ನಿಸಿರಿ । ಮಹಾರಾಜರು ಮುಂದೆ ನಿಶ್ಚಯದಿಂದ ನುಡಿದರು, ಪ್ರಯತ್ನ ಮಾಡಿದರೆ ಅವಶ್ಯವಾಗಿ ಸ್ಥಳವು ದೊರಕುವದು । ಈ ಬಗ್ಗೆ ಈಗ ವಾದ ವಿವಾದ ಮಾಡಬೇಡಿ । ಹರಿ ಪಾಟೀಲನು ಪ್ರಯತ್ನ ಮಾಡಿದರೆ ನಿಶ್ಚಿತವಾಗಿ ಅವನು ಯಶಸ್ವಿಯಾಗುವನು । ನಂತರ ಎಲ್ಲರೂ ಹರಿ ಪಾಟೀಲನ ಬಳಿಗೆ ಬಂದರು । ಎಲ್ಲರೂ ಸೇರಿ ಭೂಮಿಗಾಗಿ ಸರಕಾರಕ್ಕೆ ಅರ್ಜಿ ಮಾಡಿದರು । ಬುಲಢಾಣಾ ತಹಸೀಲಿನ ಸರಕಾರಿ ಅಧಿಕಾರಿ 'ಕರಿ' ಶ್ರೀಗಜಾನನ ಎಂದು ಇದ್ದನು । ಅವನು ಜನರ ಅರ್ಜಿಯ ಬಗ್ಗೆ ವಿಚಾರ ಮಾಡಿ ಮಠಕ್ಕಾಗಿ ಒಂದು ಎಕರೆ ನೆಲವನ್ನು ಕೊಟ್ಟನು । ಅರ್ಜಿಯನ್ನು ಸ್ವೀಕರಿಸುವಾಗ ಅವನು ಹೇಳಿದನು, ತಾವು ಎರಡು ಎಕರೆ ನೆಲವನ್ನು ಕೇಳಿದ್ದಿರಿ । ಆದರೆ ಈಗ ಕೇವಲ ಒಂದು ಎಕರೆ ನೆಲವನ್ನು ಕೊಡುವೆನು । ಕೊಟ್ಟ ನೆಲವನ್ನು ಹೇಗೆ ಉಪಯೋಗಿಸುವಿರಿ ಎಂಬುದನ್ನು ನೋಡಿ ಮತ್ತೊಂದು ಎಕರೆ ನೆಲವನ್ನು ನಂತರ ಕೊಡಲಾಗುವದು । ಸರಕಾರದ ಈ ಆಜ್ಞಾಪತ್ರವು ಕಚೇರಿಯಲ್ಲಿದೆ । ಈ ರೀತಿ ಮಹಾರಾಜರ ಲೋಕೋತ್ತರವಾಣಿಯು ಸತ್ಯವಾಯಿತು । ನಂತರ ಹರಿ ಪಾಟೀಲ, ಬಂಕಟಲಾಲರು ಮಠಮಂದಿರಕ್ಕಾಗಿ ನಿಧಿಯನ್ನು ಸಂಗ್ರಹಿಸಲು ಹೊರಬಿದ್ದರು ಮತ್ತು ಜನರನ್ನು ಪ್ರಾರ್ಥಿಸತೊಡಗಿದರು । ಸ್ವಲ್ಪ ಸಮಯದಲ್ಲಿ ಹಣವು ಕೂಡಿತು । ಕೆಲಸವು ಆರಂಭವಾಯಿತು । ಮುಂದಿನ ವೃತ್ತಾಂತವು ಮುಂದಿನ ಅಧ್ಯಾಯದಲ್ಲಿ ಇದೆ । ಸತ್ಪುರುಷರ ಇಚ್ಛೆಯನ್ನು ಸ್ವಯಂ ಭಗವಂತನು ಪೂರ್ಣಗೊಳಿಸುವನು । ಡೋಂಗರಗಾಂವಿನ ವಿಠು ಪಾಟೀಲ, ವಾಡೆಗಾಂವಿನ ಲಕ್ಷ್ಮಣ ಪಾಟೀಲ ಮತ್ತು ಶೇಗಾಂವಿನ ಜಗು ಆಬಾ ಮೊದಲಾದವರು ನಿಧಿ ಕೊಡುವವರಲ್ಲಿ ಪ್ರಮುಖರು । ಶ್ರೀ ದಾಸಗಣು ವಿರಚಿತ ಶ್ರೀ ಗಜಾನನ ವಿಜಯ ಎಂಬ ಗ್ರಂಥವನ್ನು ನಿಜ ಕಲ್ಯಾಣವನ್ನು ಸಾಧಿಸಲು ಸಾವಧಾನ ಚಿತ್ತದಿಂದ ಕೇಳಿರಿ ।

**॥ ಶುಭಂ ಭವತು ॥ ಶ್ರೀ ಹರಿಹರಾರ್ಪಣಮಸ್ತು ॥**

॥ ಇಲ್ಲಿಗೆ ಹನ್ನೆರಡನೆಯ ಅಧ್ಯಾಯವು ಮುಗಿಯಿತು ॥





ಶ್ರೀ ಗಜಾನನ ಮಹಾರಾಜರ ಪ್ರಸಾದದಿಂದ ಮಹಾರೋಗಿಗಳು ಕೂಡ ಆರಾಮಾ ಆದರು.

## || ಅಧ್ಯಾಯ ೧೩ ||

ಶ್ರೀ ಗಣೇಶಾಯನಮಃ । ಹೇ ಸಂತವರದ ಶ್ರೀಧರ, ದಯಾಸಾಗರ, ಹೇ ಗೋಪ ಗೋಪಿ ಪ್ರಿಯ ಕರ, ತಮಾಲನೀಲ ಹರಿ । ತಮ್ಮ ಮಾನವರೂಪದಲ್ಲಿರುವ ಈಶ್ವರ ತತ್ವದ ಪರೀಕ್ಷೆ ಮಾಡಲೆಂದೇ ಯಮುನಾ ನದಿ ತೀರದಲ್ಲಿ ಸ್ಥಿತ ಗೋಕುಲದ ಆಕಳು ಮತ್ತು ಅವುಗಳ ಕರುಗಳನ್ನು ಕದ್ದರು । ಆಗ ತಾವು ತಮ್ಮ ಲೀಲೆಗಳ ಆಧಾರದಿಂದ ಆಕಳು ಹಾಗೂ ಕರುವಿನ ರೂಪ ಧರಿಸಿ ಬ್ರಹ್ಮನಿಗೆ ತಮ್ಮ ಈಶ್ವರತ್ವವನ್ನು ತೋರಿಸಿದಿರಿ । ಗೋಕುಳ ನಿವಾಸಿಗಳಿಗೆ ಧೈರ್ಯ ಕೊಡಲು ತಾವು ದುಷ್ಟ ಕಾಲಿಯಾಗೆ ಯಮುನೆಯಲ್ಲಿ ತುಳಿದು, ರಮಣಕ ದ್ವೀಪಕ್ಕೆ ಅಟ್ಟಿದಿರಿ । ಅದೇ ರೀತಿ ನನ್ನ ದುರ್ದೈವವನ್ನು ತುಳಿದು, ಹೇ ವಾಸುದೇವ, ಈ ದಾಸಗಣುಗೆ ಚಿಂತಾಮುಕ್ತ ಹಾಗೂ ನಿರ್ಭಯ ಮಾಡಿರಿ । ಹೇ ಹರಿ, ನಾನಾದರೂ ತಮ್ಮ ಅಜ್ಞಾನಿ ಭಕ್ತ, ನನ್ನ ಮೇಲೆ ಕೃಪೆ ಮಾಡಿರಿ । ನಾನು ತಮ್ಮ ಕೃಪೆಯ ಯೋಗ್ಯತೆಯನ್ನು ಪಡೆದಿಲ್ಲ ಆದರೂ ನನ್ನ ಅಂತವನ್ನು ನೋಡದೇ ತಮ್ಮ ಕೃಪಾಶೀರ್ವಾದದಿಂದ ನನಗೆ ಚಿಂತಾಮುಕ್ತ ಮಾಡಿರಿ । ಹೇ ಶ್ರೋತೃಗಳೇ, ಈಗ ಏಕಾಗ್ರಚಿತ್ತದಿಂದ ಮುಂದಿನ ಕಥೆಯನ್ನು ಕೇಳಿರಿ । ಬಂಕಟಲಾಲ, ಹರಿ, ಲಕ್ಮಣ, ವಿಠು ಜಗದೇವ ಮೊದಲಾದ ಭಕ್ತರು ನಿಧಿಯನ್ನು ಕೂಡಿಸಲು ಮನೆಯಿಂದ ಮನೆಗೆ ಹೋಗುತ್ತಿದ್ದರು । ಮಹಾರಾಜರಲ್ಲಿ ಶ್ರದ್ಧೆ ಇದ್ದವರು ಕೇಳಿದ ನಿಧಿಯನ್ನು ಕೊಟ್ಟರು । ಆದರೆ ಯಾರು ನಾಸ್ತಿಕರಿದ್ದರೊ, ಅವರು ಬಡಬಡಿಸತೊಡಗಿದರು । ನಿಮ್ಮ ಸಾಧುಗೆ ಏಕೆ ಬೇಕು ನಿಧಿ ? ತಾವು ಭಕ್ತರು ಮಹಾರಾಜರು ಕೇವಲ ಸಂತರಲ್ಲದೇ ಮಹಾನ್ ಸಂತರೆಂದು ಹೇಳುವಿರಿ । ತಮ್ಮ ಲೀಲೆಯಿಂದ ಅವರು ಅಸಾಧ್ಯವನ್ನು ಸಾಧ್ಯದಲ್ಲಿ ಪರಿವರ್ತಿಸಬಲ್ಲರು । ಹೀಗಿರುವಾಗ ಮಠಕ್ಕಾಗಿ ಚಂದಾ ಕೇಳುವ ಅವಶ್ಯಕತೆ ಏನು । ಕುಬೇರನು ಅವರ ಸೇವೆಯಲ್ಲಿರುವನು । ಹೀಗಿರುವಾಗ ತಾವು ಮನೆಯಿಂದ ಮನೆಗೆ ಭಿಕ್ಷೆ ಏಕೆ ಬೇಡುವಿರು ? ಕುಬೇರನಿಗೆ ಒಂದು ಚೀಟಿಯನ್ನು ಬರೆದರೆ ತಮ್ಮ ಕೆಲಸವು ಸುಲಭವಾಗುವದು । ನಾಸ್ತಿಕರ ಈ ಮಾತುಗಳನ್ನು ಕೇಳಿ ಜಯ ದೇವನು ನಕ್ಕು ನುಡಿದನು, ಈ ಓಂ ಭವತಿ ತಮ್ಮ ಒಳಿಯದಕ್ಕಾಗಿಯೇ । ಮಹಾರಾಜರಿಗೆ ಮಠ ಮಂದಿರದ ಅವಶ್ಯಕತೆ ಇಲ್ಲ । ನಡೆದದ್ದೆಲ್ಲ ನಮ್ಮ ಕಲ್ಯಾಣಕ್ಕಾಗಿಯೇ ಇದೆ । ಗಜಾನನ ಮಹಾರಾಜರಿಗೆ ತ್ರೈಲೋಕವೇ ಅವರ ಮಠದಂತಿದೆ । ಜಗತ್ತಿನ ಎಲ್ಲ ಕಾಡುಗಳು ಅವರ ಹೂದೋಟದಂತೆ । ಅಷ್ಟಸಿದ್ಧಿಗಳು ಅವರ

ಬಾಗಿಲಲ್ಲಿ ದಾಸಿಗಳಂತಿದ್ದು, ಅವರ ಆಜ್ಞೆಯ ಅಪೇಕ್ಷೆಯಿಂದ ದಿನ–ರಾತ್ರಿ ನಿಂತಿರುವವು । ನೆಲವೇ ಅವರ ಮಂಚ । ಅವರ ಐಶ್ವರ್ಯದ ಪದ್ಧತಿಯೇ ಬೇರೆ । ಅವರಿಗೆ ನಿಮ್ಮ ಮುಖದ ಕಡೆ ನೋಡುವ ಅವಶ್ಯಕತೆ ಇಲ್ಲ। ಅವರು ಸವಿತಾ ಸೂರ್ಯ ನಾರಾಯಣರು । ಮಾಮೂಲಿ ದೀಪದಿಂದ ತಮೋಗುಣದ ನಾಶವು ಹೇಗೆ ಸಾಧ್ಯ ? ಅವರು ಸ್ವಯಂ ಪ್ರಕಾಶಿತರು, ಅವರಿಗೆ ದೀಪದ ಅವಶ್ಯಕತೆ ಏನು ? ಸೈನಿಕನು ಅರಸನಾಗುವದು ಸಾಧ್ಯವೆ ? ಪ್ರಾಪಂಚಿಕರ ಅಧ್ಯಾತ್ಮಿಕ ಇಚ್ಛೆಗಳು ಈ ರೀತಿಯ ಪುಣ್ಯ ಕಾರ್ಯಗಳಿಂದಲೇ ಪೂರ್ತಿಗೊಳ್ಳುತ್ತವೆ । ಶಾರೀರಿಕ ರೋಗಗಳಿಗೆ ಮಾತ್ರ ಔಷಧಿ ಕೊಡುವರು, ಆತ್ಮಕ್ಕೆ ಅಲ್ಲ। ರೋಗ ಭಯವು ಶರೀರಕ್ಕೆ, ಆತ್ಮಕ್ಕೆ ಅಲ್ಲ। ಏಕೆಂದರೆ ಅದು ಜನ್ಮ–ಮರಣಗಳಿಂದ ಮುಕ್ತವಿದೆ। ಅದೇ ರೀತಿ ತಾವು ಸುಸಂಪನ್ನರಾಗಿರಲು ಪುಣ್ಯರೂಪಿ ಔಷಧಿಯ ಅವಶ್ಯಕತೆ ಇದೆ। ಸಂಪನ್ನ ಶರೀರವು ದುರಾಚಾರರೂಪಿ ರೋಗದಿಂದ ನಾಶವಾಗುವದು, ಅದಕ್ಕಾಗಿಯೇ ಪುಣ್ಯ ರೂಪಿ ಔಷಧಿಯಿಂದ ರೋಗದ ನಿರ್ಮೂಲನ ಹಾಗೂ ಪುಣ್ಯ ಸಂಚಯದ ಅವಶ್ಯಕತೆ। ನಾಸ್ತಿಕತೆಯನ್ನು ಬೇರು ಸಹಿತ ಕಿತ್ತು ಎಸೆಯಿರಿ। ಪುಣ್ಯರೂಪಿ ನೆಲದಲ್ಲಿ ಸಂಪತ್ತಿಯ ಗಿಡಗಳನ್ನು ಬೆಳೆಸಿರಿ। ಪರ್ವದ ಮೇಲೆ ಬೀಜವನ್ನು ಬಿತ್ತಿದರೆ ಅದು ಬೆಳೆಯದು। ಅನಾಚಾರ – ವ್ಯಸನಗಳೇ ಮನುಷ್ಯನ ಜೀವನದಲ್ಲಿಯ ಪರ್ವತಗಳು। ಅವುಗಳ ಮೇಲೆ ಬೀಜಗಳನ್ನು ಬಿತ್ತಿದರೆ ಪಕ್ಷಿಗಳು ತಿಂದು ಹೋಗುವವು । ಸಂತ ಸೇವೆಯನ್ನು ಮೀರಿ ಬೇರೆ ಯಾವ ಪುಣ್ಯ ಕರ್ಮವಿಲ್ಲ। ಗಜಾನನ ಮಹಾರಾಜರು ಸಂತರ ಮುಕುಟಮಣಿ ಆದ್ದರಿಂದ ಸಂತಕಾರ್ಯಕ್ಕಾಗಿ ಸಹಾಯ ಮಾಡಿದರೇ ಒಳ್ಳೆಯದು। ನೆಲದಲ್ಲಿ ಒಂದು ಕಾಳನ್ನು ಬಿತ್ತುವರು। ಅದರಿಂದ ಅನೇಕ ಕಾಳುಗಳಿಂದ ತುಂಬಿದ ತೆನೆಯಾಗುವದು । ಒಂದು ಬೀಜ ಅನೇಕ ಬೀಜಗಳಲ್ಲಿ ರೂಪಾಂತರಿತವಾಗುವದು । ಪುಣ್ಯ ಕರ್ಮಗಳ ಸ್ಥಿತಿಯೂ ಕೂಡಾ ಹಾಗೆಯೇ । ಈ ರೀತಿಯ ಉತ್ತರವನ್ನು ಕೇಳಿ, ನಾಸ್ತಿಕನು ಬೆರಗಾದನು, ಚಿರಂತನ ಸತ್ಯದ ಮುಂದೆ ತರ್ಕವಿತರ್ಕಗಳು ನಿಲ್ಲಲಾರವು। ಚಂದಾ ಕೂಡಿಸುವವರು ತಮ್ಮ ಕಾರ್ಯದಲ್ಲಿ ವಿಶ್ವಾಸವಿಟ್ಟರೆ, ಇಚ್ಛಿತ ಚಂದಾ ಕೊಡುವದರಲ್ಲಿ ಆಶ್ಚರ್ಯವೇನು ? ಎಲ್ಲರಿಗೂ ಈ ಸಫಲತೆ ಸಿಗುವದು ಸಾಧ್ಯವಿಲ್ಲ। ಇರಲಿ, ಜಮೀನು ದೊರೆತ ಮೇಲೆ ಮಠವನ್ನು ಕಟ್ಟುವ ಕಾರ್ಯವು ಪ್ರಾರಂಭವಾಯಿತು। ಊರಿನ ಜನರು ಆ ಕೆಲಸದಲ್ಲಿ ಮಗ್ನರಾದರು ಕಲ್ಲು, ಸುಣ್ಣ ಹಾಗೂ ಉಸುಕನ್ನು ಎತ್ತಿನ ಬಂಡಿಯಲ್ಲಿ ತುಂಬಿ ಶೇಗಾಂವಿಗೆ ತರುವ ಕೆಲಸವು ನಡೆದಿತ್ತು। ಆ ಸಮಯದಿ ಮಹಾರಾಜರು ಹಳೆಯ ಮಠದಲ್ಲಿ ಕುಳಿತಿದ್ದರು। ಅವರ ಮನಸ್ಸಿನಲ್ಲಿ ಈ ಪ್ರಕಾರದ ವಿಚಾರ







ತರಂಗಗಳು ನಡೆದಿದ್ದವು। ನಾನು ಈ ರೀತಿ ಕುಳಿತರೆ ಕೆಲಸವು ಸರಿಯಾಗಿ ಸಾಗದು । ಆಗ ಮಹಾರಾಜರು ಒಂದು ಉಸುಕಿನ ಗಾಡಿಯಲ್ಲಿ ಹತ್ತಿ ಕುಳಿತರು। ಮಹಾರಜರು ಕುಳಿತಿದ್ದನ್ನು ನೋಡಿ, ಚಕ್ಕಡಿಯವನು ಕೆಳಗಿಳಿದನು, ಏಕೆಂದರೆ ಅವನು ಹೀನ ಕುಲದವರನಿದ್ದನು । ಅದನ್ನು ನೋಡಿ, ಮಹಾರಾಜರು ನುಡಿದರು, ನೀನು ಏಕೆ ಕೆಳಗಿಳಿದಿರುವಿ । ನಮ್ಮಂತಹ ಪರಮಹಂಸರು, ಭೂತ–ಅಭೂತರಿಗಿಂತ ಕಡೆ । ಈ ಮಾತು ನನ್ನಿಂದ ಎಂದಿಗೂ ಸಾಧ್ಯವಿಲ್ಲ। ತಮ್ಮ ಬದಿಗೆ ಚಕ್ಕಡಿಯಲ್ಲಿ ಕುಳಿತುಕೊಳ್ಳುವದು ಉಚಿತವಲ್ಲ। ಹನುಮಂತನು ರಾಮನ ಪ್ರಿಯ ಭಕ್ತನಿದ್ದರೂ ಅವನು ಅವರ ಜೊತೆಗೆ ಕುಳಿತುಕೊಳ್ಳದೇ, ಅವನ ಮುಂದೆ ಕೈ ಮುಗಿದು ನಿಲ್ಲುತ್ತಿದ್ದನು। ಅವನ ಉತ್ತರವನ್ನು ಕೇಳಿ, ಮಹಾರಾಜರು ನಿನ್ನ ಮನಸ್ಸಿಗೆ ಬಂದಂತೆ ಮಾಡು ಎಂದರು । ಎತ್ತುಗಳಿಗೆ ನುಡಿದರು, ಚಕ್ಕಡಿಯವನ ಹಿಂದೆ ಹಿಂದೆ ನಡೆಯಿರಿ । ಎತ್ತುಗಳು ಹಾಗೆ ಮಾಡಿದವು । ಮಾರ್ಗದಲ್ಲಿ ಯಾವ ಅಡೆತಡೆ ಉಂಟಾಗಲಿಲ್ಲ। ಚಕ್ಕಡಿಯವನು ಸನ್ನೆಮಾಡದೇ ಎತ್ತುಗಳು ಗಾಡಿಯನ್ನು ತೆಗೆದುಕೊಂಡು ನಿರ್ಧಾರಿತ ಸ್ಥಳಕ್ಕೆ ತಲುಪಿದವು । ಮಹಾರಾಜರು ಮಧ್ಯದಲ್ಲಿ ಹೋಗಿ ಕುಳಿತರು । ಆ ಸ್ಥಳವನ್ನು ಕೇಂದ್ರವಾಗಿ ಮಾಡಿ ಭವ್ಯ ಸಮಾಧಿಯನ್ನು ಕಟ್ಟಿದರು । ಆ ಸ್ಥಳವು ಶೇಗಾಂವಿನ ಎರಡು ನಂಬರಿನ, ಏಳುನೂರು ಸರ್ವೆ ನಂಬರನಲ್ಲಿಯ ನಲವತ್ತು ಮೂರು ಹಾಗೂ ನಲವತ್ತೈದು ನಂಬರ ಮೇಲೆ ಇದೆ । ಮಹಾರಾಜರು ಕುಳಿತ ಸ್ಥಾನವನ್ನು ಕೇಂದ್ರ ಬಿಂದುವೆಂದು ತಿಳಿದರೆ, ಸ್ವಲ್ಪ ಬದಲು ಮಾಡುವದು ಅವಶ್ಯವಾಯಿತು। ಅದಕ್ಕಾಗಿ ಎರಡನೆಯ ನಂಬರಿನಿಂದ ಸ್ವಲ್ಪ ಭಾಗವನ್ನು ತೆಗೆದುಕೊಳ್ಳುವದು ಅವಶ್ಯವಾಯಿತು । ಆದರೆ ಜಮೀನು ಕೇವಲ ಒಂದು ಎಕರೆ ಸಿಕ್ಕಿತು । ಆದರೆ ಸಮಾಧಿ ಮಧ್ಯವನ್ನು ಪಡೆಯಲು ಸ್ವಲ್ಪ ಸ್ಥಳವು ಕಡಿಮೆ ಬಿತ್ತು। ಅದಕ್ಕಾಗಿ ಎರಡು ನಂಬರಿನಿಂದ ಹನ್ನೊಂದು ಗುಂಟೆ ಜಮೀನು ತೆಗೆದುಕೊಂಡು ಕೆಲಸ ಆರಂಭವಾಯಿತು । ಆದರೆ ಸರಕಾರದ ಆದೇಶದಂತೆ ಮುಂದಿನ ನಂಬರಿನ ಜಾಗೆ ಕೆಲವು ತಿಂಗಳುಗಳ ನಂತರ ದೊರಕುವದಿತ್ತು। ಆದರೂ ಅನುಮತಿ ಇಲ್ಲದೆ ಅದರಿಂದ ಹನ್ನೊಂದು ಗುಂಟೆ ಜಮೀನು ಉಪಯೋಗಿಸಲಾರಂಭಿಸಿದರು। ಆದರೆ ಈ ಮಾತು ಕೆಲವು ದುಷ್ಟರಿಂದಾಗಿ ಬಯಲಿಗೆ ಬಂದಿತು। ಇದರಿಂದ ಮಹಾರಾಜರ ಅನುಯಾಯಿಗಳು, ಪ್ರಮುಖವಾಗಿ ಹರಿ ಪಾಟೀಲನು ಬೆದರಿದರು। ಅವನು ಮಹಾರಾಜರಿಗೆ ಅತಿಕ್ರಮಣ ಮಾಡಿದ ಜಮೀನಿನ ಬಗ್ಗೆ ತನಿಖೆ ಮಾಡಲು ಜೋಶಿ ಎಂಬ ಹೆಸರಿನ ಅಧಿಕಾಯಿ ಬಂದಿರುವದಾಗಿ ಹೇಳಿದನು । ಆಗ ಮಹಾರಾಜರು ನಕ್ಕು, ನಿನಗಾದ ದಂಡವನ್ನು ಹಿಂತೆಗೆದುಕೊಳ್ಳುವದಾಗಿ

ಹೇಳಿದರು। ಮಹಾರಾಜರು ಆ ಅಧಿಕಾರಿಗೆ ಪ್ರೇರಣೆ ನೀಡಿದರು। ಅವನು ಒಪ್ಪಿಸಿದ ವರದಿಯಲ್ಲಿ ಸಂಸ್ಥಾನಕ್ಕೆ ಮಾಡಿದ
ದಂಡವನ್ನು ಹಿಂದಕ್ಕೆ ಮರುಳಿಸಬೇಕು ಎಂದು ಸೂಚಿಸಿದನು । ನಾನು ಸ್ವತಃ ಶೇಗಾಂವಿಗೆ ಹೋಗಿ ನೋಡಿರುವೆನು ।
ಈ ಸಂದರ್ಭದಲ್ಲಿ ಮಾಡಿದ ಜುರಮಾನೆಯು ಉಚಿತವಲ್ಲ । ದಂಡವನ್ನು ರದ್ದು ಮಾಡಿರುವದಾಗಿ ಆದೇಶ
ಬಂದೊಡನೆ ಹರಿ ಪಾಟೀಲನು ಆನಂದಿತನಾದನು । ಅವನು ಮಹಾರಾಜರ ವಾಣಿಯು ಅಸತ್ಯವಾಗದು ಎಂದನು ।
ದಂಡದ ಬಗ್ಗೆ ಸಂಕಟವು ಕೆಲವು ದಿನಗಳ ಹಿಂದೆ ನನ್ನ ಮೇಲೆ ಬಂದಿತ್ತು। ಆದರೆ ಆಗ ನನಗೆ ಮಹಾರಾಜರು
ಹೆದರಬೇಡ ಎಂದು ಆಶ್ವಾಸನೆ ಕೊಟ್ಟಿದ್ದರು। ನಿನ್ನ ತಲೆಗೂದಲಿಗೂ ಕೂಡಾ ಧಕ್ಕೆ ತಗಲಲಾರದು ಎಂದಿದ್ದರು। ಕೊನೆಗೆ
ಹಾಗೆಯೇ ಆಯಿತು । ಅದೇ ರೀತಿ ಇಂದು ಕೂಡಾ ಮಹಾರಾಜರ ವಾಣಿಯು ಸತ್ಯವಾಯಿತು । ಮಹಾರಾಜರ
ಮುಖದಿಂದ ಹೊರಟ ಶಬ್ದವು ಸುಳ್ಳಾಗಿದ್ದನ್ನು ಎಂದಿಗೂ ಕಂಡಿಲ್ಲ । ಇರಲಿ, ಶೇಗಾಂವಿಯ ಜನರ ನಿಜ ಶ್ರದ್ಧೆ
ಮಹಾರಾಜರಲ್ಲಿ ಉಂಟಾಯಿತು । ಮಹಾರಾಜರು ಹೊಸ ಮಠದಲ್ಲಿ ಬಂದ ಮೇಲೆ ಅವರು ಮಾಡಿದ ಚಮತ್ಕಾರ
ಗಳನ್ನು ಕೇಳಿರಿ । ಮೆಹೆಕರದ ಹತ್ತಿರ ಸವಡದ ಎಂಬ ಗ್ರಾಮವಿತ್ತು। ಆ ಊರಿನಲ್ಲಿ ಗಂಗಾಭಾರತಿ ಗುಸಾಯಿ ಎಂಬ
ಸಜ್ಜನನಿದ್ದನು। ಅವನು ಮಹಾರೋಗಿಯಾಗಿದ್ದನು। ಅವನ ಶರೀರವು ಕ್ಷೀಣವಾಗಿತ್ತು। ಎರಡು ಕಾಲುಗಳಲ್ಲಿ ಬಿರುಕು
ಬಿದ್ದಿದ್ದವು । ಅವನ ಬೆರಳುಗಳು ಕೊಳೆತಿದ್ದವು । ಸಂಪೂರ್ಣ ದೇಹವು ಕೆಂಪಾಗಿತ್ತು। ಅವನ ಶರೀರದ ತುಂಬ
ಖಜ್ಜಿಯಾಗಿತ್ತು। ಗಂಗಾ–ಭಾರತಿಯು ಆ ರೋಗದಿಂದು ಬೇಸತ್ತನು । ಮಹಾರಾಜರ ಮಹಿಮೆಯನ್ನು ಕೇಳಿ ಅವನು
ಶೇಗಾಂವಿಗೆ ಬಂದನು । ಅವನು ಮಹಾರಾಜರ ದರ್ಶನಕ್ಕಾಗಿ ಹೊರಟರೆ, ಜನರು ಅವನನ್ನು ತಡೆದರು । ನೀನು
ಮಹಾರೋಗಿ ಆದ್ದರಿಂದ ಮಹಾರಾಜರ ಹತ್ತಿರ ಹೋಗಬೇಡ । ದೂರದಿಂದ ಮಹಾರಾಜರು ಕಾಣುವರೋ
ಅಲ್ಲಿಂದಲೇ ಅವರ ದರ್ಶನ ಪಡೆ । ಮಹಾರಾಜರ ಹತ್ತಿರ ಹೋಗಿ ಅವರ ಕಾಲಿಗೆ ಸ್ಪರ್ಶ ಮಾಡಬೇಡ । ನಿನ್ನದು
ಸಂಸರ್ಗಜನ್ಯ ರೋಗ ಎಂದು ಡಾಕ್ಟರರು ಹೇಳುವರು ಎಂಬುದನ್ನು ಮರೆಯಬೇಡ । ಆದರೂ ಒಂದು ದಿನ
ಗಂಗಾಭಾರತಿ ಎಲ್ಲರ ಕಣ್ಣು ತಪ್ಪಿಸಿ ಮಹಾರಾಜರ ಬಳಿಗೆ ಹೋಗಿ ಕಾಲುಗಳ ಮೇಲೆ ಬಿದ್ದನು। ಮಹಾರಾಜರು ಅವನಿಗೆ
ಜೋರಾಗಿ ಹೊಡೆದರು । ಗಂಗಾಭಾರತಿಯು ಎದ್ದು ನಿಂತನು ಮತ್ತು ಮಹಾರಾಜರ ಕಡೆ ನೋಡತೊಡಗಿದನು, ॥ 128 ॥
ಮಹಾರಾಜರು ಅವನ ಎರಡು ಗಲ್ಲಗಳ ಮೇಲೆ ಹೊಡೆದರು ಮತ್ತು ಅವನನ್ನು ಒದ್ದರು, ಮತ್ತು ಕೊನೆಗೆ ಅವನ



ಮೇಲೆ ಉಗುಳಿದರು । ಗಂಗಾಭಾರತಿಯು ಅದನ್ನೇ ಪ್ರಸಾದವೆಂದು ತಿಳಿದು, ಔಷಧಿಯಂತೆ ಮೈಮೇಲೆ ಉಜ್ಜಿದನು।
ಅದನ್ನು ನೋಡುತ್ತಿರುವ ಒಬ್ಬನು, ನುಡಿದನು, ಮೊದಲೇ ನಿನ್ನ ಶರೀರವು ರೋಗ ಜರ್ಜರವಾಗಿದೆ ಮತ್ತು ಅದರ
ಮೇಲೆ ಉಗುಳನ್ನು ಹಚ್ಚಿರುವಿ । ನಿನ್ನ ಶರೀರವನ್ನು ಸಾಬೂನು ಹಚ್ಚಿ ತೊಳೆದು ಬಿಡು । ಮಹಾರಾಜರಂತಹ ಅನೇಕ
ಹುಚ್ಚರು ಜಗತ್ತಿನಲ್ಲಿರುವರು । ಅವರ ಮೇಲೆ ಶ್ರದ್ಧೆ ಇಡುವವರು ಅವರಿಗೆ ಸಾಧು ಎನ್ನುವರು । ಇದರ ಪರಿಣಾಮ
ಸ್ವರೂಪ ಅನೇಕ ವಿಚಿತ್ರ ಕೃತ್ಯಗಳು ಬೆಳೆಯುತ್ತವೆ ಮತ್ತು ಸಮಾಜವು ಮಣ್ಣು ಸೇರುತ್ತದೆ । ನಿನ್ನ ಈ ಕೃತಿಯು ಅದೇ
ರೀತಿಯಾಗಿದೆ । ರೋಗವನ್ನು ನಿರ್ಮೂಲ ಮಾಡಲು ಔಷಧಿಯನ್ನು ತೆಗೆದುಕೊಳ್ಳುವ ಬದಲು ನೀನು ಈ ಹುಚ್ಚಿನ
ಬಳಿಗೆ ಬಂದಿರುವಿ । ಇದನ್ನು ಕೇಳಿ ಗೋಸಾವಿಯು ನಕ್ಕು ನಿಮ್ಮಂತಹ ಶ್ರದ್ಧಾಹೀನ ಜನರು ಇಲ್ಲಿ ತಪ್ಪು ಮಾಡುವರು ।
ಸಾಧುವಿನ ಹತ್ತಿರ ಅಮಂಗಲವೆಂಬ ವಸ್ತುವು ಇಲ್ಲ । ಕಸ್ತೂರಿಯಿಂದ ದುರ್ವಾಸನೆಯು ಸಾಧ್ಯವೇ ? ನಿನಗನಿಸಿದ
ಉಗುಳು, ಔಷಧಿಯಾಗಿದ್ದು, ಅದಕ್ಕೆ ಕಸ್ತೂರಿಯ ಸುವಾಸನೆ ಇದೆ । ನಿನಗೆ ಸಂದೇಹವಾಗುತ್ತಿದ್ದರೆ ನನ್ನ ಶರೀರವನ್ನು
ಮುಟ್ಟಿ ನೋಡು । ಇದು ಉಗುಳಿರದೇ ಉತ್ತಮ ಔಷಧಿಯಾಗಿದೆ । ನಾನು ಉಗುಳನ್ನು ಔಷಧಿಯಾಗಿ ನಂಬಲು
ಹುಚ್ಚನಿಲ್ಲ । ನಿನಗೆ ಅದರ ಸಂಬಂಧವಿಲ್ಲ, ಆದ್ದರಿಂದ ಅದು ಉಗುಳಿನಂತೆ ಕಂಡು ಬಂದಿತು । ಮಹಾರಾಜರ
ಮಹಿಮೆಯನ್ನು ನೀನು ಅರಿತಿಲ್ಲ। ನಾನು ಹೇಳುವದು ನಿಜವೋ ಎಂಬುದನ್ನು ತಿಳಿಯಲು ಮಹಾರಾಜರು ಎಲ್ಲಿ ಸ್ನಾನ
ಮಾಡವರೋ ಅಲ್ಲಿ ಹೋಗೋಣ । ಅಲ್ಲಿಯ ಹಸಿ ಮಣ್ಣನ್ನು ನಾನು ಮೈಮೇಲೆ ಹಚ್ಚಿಕೊಳ್ಳುವೆನು । ನಂತರ ಇಬ್ಬರೂ
ಮಹಾರಾಜರು ಸ್ನಾನ ಮಾಡುವ ಸ್ಥಳಕ್ಕೆ ತಲುಪಿದರು । ಅಲ್ಲಿ ಗಂಗಾಭಾರತಿ ಹಾಗೂ ನಾಸ್ತಿಕರಿಬ್ಬರಿಗೂ ಅದೇ ಅನುಭವ
ಬಂದಿತು । ಸ್ನಾನ ಸ್ಥಳದ ಮಣ್ಣನ್ನು ಇಬ್ಬರೂ ಕೈಯಲ್ಲಿ ಹಿಡಿದರು । ಗೋಸಾವಿಯ ಕೈಯಲ್ಲಿಯ ಮಣ್ಣು ಔಷಧಿಯಾಯಿತು।
ಆದರೆ ಆ ನಾಸ್ತಿಕನ ಕೈಯಮಣ್ಣು ಮಣ್ಣಾಗಿಯೇ ಉಳಿಯಿತು । ಅಷ್ಟೇ ಅಲ್ಲದೇ ಅದರಿಂದ ಹೊಲಸು ವಾಸನೆ
ಆರಂಭವಾಯಿತು । ಇದನ್ನು ನೋಡಿ ನಾಸ್ತಿಕನ ಕಣ್ಣುಗಳು ತೆರೆದವು ಮತ್ತು ಅವನು ಮಹಾರಾಜರ ಚರಣಗಳಲ್ಲಿ
ನತಮಸ್ತಕನಾದನು । ಇರಲಿ, ಗಂಗಾಭಾರತಿಗೆ ಯಾರು ಹತ್ತಿರ ಬರಕೊಡುತ್ತಿರಲಿಲ್ಲ । ಅವನು ದೂರ ಕುಳಿತು
ಮಹಾರಾಜರ ಮುಂದೆ ಭಜನೆ ಹಾಡುತ್ತಿದ್ದನು । ಗಂಗಾಭಾರತಿಯ ಧ್ವನಿಯು ಎತ್ತರ ಹಾಗೂ ಮಧುರವಿತ್ತು। ಅವನು ॥ 129 ॥
ಗಾಯನಕಲೆಯನ್ನು ಅವಗತಮಾಡಿದ್ದನು । ಈ ರೀತಿ ಹದಿನೈದು ದಿನಗಳು ಕಳೆದವು । ನಿಧಾನವಾಗಿ ಗಂಗಾಭಾರತಿಯ

ರೋಗದ ಸ್ವರೂಪವು ಬದಲಿಯಾಗುತ್ತಿತ್ತು। ಅದರ ಕೆಂಪು ಬಣ್ಣವು ಕಡಿಮೆಯಾಗುತ್ತಿತ್ತು। ಕಿವಿಯ ಏಡಿಗಳು ಮತ್ತು
ಕಾಲಿನಲ್ಲಿ ಬಿದ್ದ ಬಿರುಕುಗಳು ಕಡಿಮೆಯಾದವು । ಶರೀರದಿಂದ ಬರುವ ವಾಸನೆಯು ಕಡಿಮೆಯಾಯಿತು ।
ಗೋಸಾವಿಯ ಭಜನೆಯನ್ನು ಕೇಳಿ ಮಹಾರಾಜರ ಮನವು ಉಲ್ಲಸಿತವಾಗುತ್ತಿತ್ತು। ಸಂಗೀತ ಕಲೆಯು ಎಲ್ಲರಿಗೂ
ಸೇರುತ್ತದೆ । ಗಂಗಾಭಾರತಿಯ ಹೆಂಡತಿ ಅನಸೂಯಾ । ಅವಳು ತಮ್ಮ ಪತಿಯನ್ನು ಕರೆದುಕೊಂಡು ಹೋಗಲು
ಶೇಗಾಂವಿಗೆ ಬಂದಳು। ಅವಳ ಜೊತೆಗೆ ಪುತ್ರ ಸಂತೋಷ ಭಾರತಿಯು ಇದ್ದನು। ಅವಳು ಪತಿಯ ಬಳಿಗೆ ಬಂದು ಕೈ
ಮುಗಿದು ಈಗ ಮನೆಗೆ ಹಿಂದಿರುಗಿರಿ ಎಂದಳು । ತಾವು ವ್ಯಾಧಿ ಮುಕ್ತರಾಗಿರುವದನ್ನು ನಾನು ಕಂಡಿರುವೆನು ।
ಮಹಾರಾಜರು ಸಾಕ್ಷಾತ್ ಚಂದ್ರಮೌಳಿ ಎಂಬುದರಲ್ಲಿ ಸಂದೇಹವಿಲ್ಲ। ಮಗನು ತಾಯಿಯ ಮಾತುಗಳಲ್ಲಿ ನಡುವೆ
ಹೇ ಪಿತಾ, ಮಹಾರಾಜರ ಅಪ್ಪಣೆ ಪಡೆದು ಈಗ ಊರಿಗೆ ಮರಳಿ ನಡೆಯಿರಿ। ಈಗ ಇಲ್ಲಿ ತಂಗಿರುವದು ಸಾಕು। ಆಗ
ಗಂಗಾಭಾರತಿಯು ನನಗೆ ಕೈ ಮುಗಿಯಬೇಡಿರಿ। ಈಗ ನಮ್ಮಿಬ್ಬರ ನಡುವಿನ ಸಂಬಂಧ ಮುಗಿಯಿತು। ಅನಾಥರ ತಾಯಿ,
ಸ್ವಾಮಿ ಗಜಾನನ ಮಹಾರಾಜರು ನನ್ನ ಕಪಾಳಕ್ಕೆ ಹೊಡೆದು ನನ್ನ ನಶೆಯನ್ನು ಇಳಿಸಿರುವರು । ನಾನು ಶರೀರಕ್ಕೆ
ಬೂದಿಯನ್ನು ಹಚ್ಚಿದರೂ, ನನ್ನ ಚಿತ್ತವು ಸಂಸಾರದಿಂದ ಹೊರಬರಲಿಲ್ಲ। ಕೇಸರಿ ವಸ್ತ್ರದ ವಿಟಂಬನೆ ಮಾಡಿದೆ। ಇದನ್ನು
ಮಹಾರಾಜರು ನನಗೆ ಹೊಡೆದು ತಿಳಿಸಿದರು । ನಾನು ಈಗ ಪ್ರಪಂಚದಿಂದ ದೂರ ಹೋಗುವೆನು । ಹೇ
ಸಂತೋಷಭಾರತಿ ಕುಮಾರ, ಈಗ ನೀನು ಮಾತೆಯನ್ನು ಕರೆದುಕೊಂಡು ಮನೆಗೆ ಹೋಗು। ಇಲ್ಲಿ ಇರದೆ ಸವಡದಕ್ಕೆ
ಹೋಗು । ತಾಯಿಯು ಜೀವಿತವಿರುವ ತನಕ ಅವಳ ಸೇವೆ ಮಾಡು । ನಿನ್ನ ಪ್ರೀಯ ಮಾತೆಯಿಂದ ಎಂದಿಗೂ
ಅಂತರವಿಡಬೇಡ। ಯಾರು ತಾಯಿಯ ಸೇವೆ ಮಾಡುವನೋ ಅವನು ದೇವರಿಗೆ ಪ್ರಿಯನಾಗುವನು। ನೀನು ಕಣ್ಣಿನ
ಮುಂದೆ ಭಕ್ತ ಪುಂಡಲೀಕನ ಆದರ್ಶವಿಡು । ನಾನು ಸವಡದಕ್ಕೆ ಹಿಂತಿರುಗಿ ಬಂದರೆ ನನ್ನ ಈ ಹಳೆಯ ರೋಗವು
ತಲೆ ಎತ್ತುವದು । ಆದ್ದರಿಂದ ತಾವು ಇಬ್ಬರು ನನ್ನನ್ನು ಹಿಂದಕ್ಕೆ ಬರಲು ಬಿನ್ನವಿಸದಿರಿ । ಇಲ್ಲಿಯವರೆಗೆ ನಾನು
ತಮ್ಮನಾಗಿದ್ದೆನು, ಆದರೆ ಈಗ ದೇವರಿಗೆ ತಮ್ಮವನಾಗಿ ನೋಡಿ, ನರ ಜನ್ಮದ ಸಾರ್ಥಕ ಮಾಡುವ ಪ್ರಯತ್ನ
ಮಾಡುವೆನು । ಈ ವರೆಗಿನ ಆಯುಷ್ಯವು ವ್ಯರ್ಥವಾಗಿ ಹೋಯಿತು । ಬಲು ಭಾಗ್ಯದಿಂದ ದೊರೆತ ನರಜನ್ಮವನ್ನು ॥ 130 ॥
ಒಳ್ಳೆಯ ರೀತಿಯ ಉಪಯೋಗದಿಂದ ಮಾನವನು ಎಂಭತ್‌ನಾಲ್ಕು ಸುತ್ತುಗಳಿಂದ ಮುಕ್ತನಾಗುವನು ಎಂದು




ಶಾಸ್ತ್ರವಚನವಿದೆ । ಮಹಾರಾಜರ ಕೃಪಾಶೀರ್ವಾದದಿಂದ ನಾನು ಮನುಷ್ಯನಾಗಿರುವೆನು । ಈ ಪರಮಾರ್ಥರೂಪಿ
ಪಾಯಸದಲ್ಲಿ ಮೋಹಮಾಯೆಯ ಮಣ್ಣನ್ನು ಕಲಿಸಬೇಡ । ಈ ರೀತಿ ತಿಳಿಹೇಳಿ ಅವನು ಪತ್ನಿ ಹಾಗೂ ಪುತ್ರರನ್ನು
ಸವಡದಕ್ಕೆ ಕಳುಹಿಸಿ ಶೇಗಾಂವಿಯಲ್ಲಿದ್ದನು । ಅವನಿಗೆ ಸ್ವರಜ್ಞಾನವಿರುವದರಿಂದ ಅವನು ಮಹಾರಾಜರ ಸ್ತವನವನ್ನು
ಅನೇಕ ಪದಗಳಲ್ಲಿ ಮಾಡುತ್ತಿದ್ದನು । ಪ್ರತಿದಿನ ಸಂಜೆ ಅವನು ವೀಣೆಯನ್ನು ಹಿಡಿದು ಮಹಾರಾಜರ ಹತ್ತಿರ ಕುಳಿತು
ಭಜನೆ ಮಾಡುತ್ತಿದ್ದನು । ಅವನ ಭಜನೆಯನ್ನು ಕೇಳಿ ಉಪಸ್ಥಿತ ಭಕ್ತರು ಆನಂದಿತರಾಗುತ್ತಿದ್ದರು । ಗಾನಕಲೆ ಎಲ್ಲರನ್ನು
ಮಂತ್ರಮುಗ್ಧ ಮಾಡುವದು । ಕೆಲವು ದಿನಗಳ ನಂತರ ಗಂಗಾಭಾರತಿ ರೋಗಮುಕ್ತನಾದನು । ಮಹಾರಾಜರ
ಆಜ್ಞೆಯಂತೆ ಸಮಯಕ್ಕೆ ಅನುಸಾರವಾಗಿ ಮಲಕಾಪುರಕ್ಕೆ ತಲುಪಿದನು । ಒಂದು ಹುಣ್ಣಿಮೆಯ ದಿನ, ಝ್ಯಾಮಸಿಂಗನು
ಶೇಗಾಂವಿಗೆ ಬಂದು, ತಮ್ಮ ಊರು ಮುಂಡಗಾಂವಿಗೆ ಬರಬೇಕು ಎಂದು ಬಿನ್ನವಿಸಿ ಮಹಾರಾಜರಿಗೆ ಸಂಭೋದಿಸಿದನು।
ಹೇ ಸ್ವಾಮಿ, ಕೆಲದಿನಗಳ ಹಿಂದೆ ನನ್ನ ತಂಗಿಯ ಮಗನ ಮನೆಗೆ ಹೋಗುವಾಗ ಇಲ್ಲಿ ಬಂದಿದ್ದೆ। ಆಗ ತಾವು ಮುಂದೆ
ಯಾವಾಗಾರೇ ನೋಡೋಣ ಎಂದಿದ್ದಿರಿ। ತಾವು ಬರುವದಾಗಿ ವಚನ ನೀಡಿ ಅನೇಕ ದಿನಗಳು ಕಳೆದಿವೆ। ಆದ್ದರಿಂದ
ಈಗ ನನ್ನ ಜೊತೆಗೆ ಮುಂಡಗಾಂವಿಗೆ ಹೊರಡಿರಿ । ನಾನು ನಿಮ್ಮ ಭಕ್ತ, ಆದ್ದರಿಂದ ನನ್ನ ಇಚ್ಛೆ ಪೂರ್ಣ ಮಾಡಿರಿ ।
ಮುಂಡಗಾಂವಿಯ ನನ್ನ ಮನೆಯಲ್ಲಿ ಕೆಲವು ದಿನ ತಂಗಿರಿ। ಮನೆಯಲ್ಲಿ ತಮಗಾಗಿ ಎಲ್ಲ ವ್ಯವಸ್ಥೆ ಮಾಡಿ ಬಂದಿರುವೆನು।
ಝ್ಯಾಮಸಿಂಗನ ಜೊತೆಗೆ ಮಹಾರಾಜರು ಮುಂಡಗಾಂವಿಗೆ ಬಂದರು । ಈ ಸುದ್ಧಿ ತಿಳಿದೊಡನೆ ಮಹಾರಾಜರ
ದರ್ಶನಕ್ಕಾಗಿ ಜನರು ಕಲೆತರು। ಅಲ್ಲಿ ನಡೆದ ಆನಂದೋತ್ಸವದ ವರ್ಣನೆ ಮಾಡುವದು ಅಸಾಧ್ಯ। ಝ್ಯಾಮಸಿಂಗನು
ಭಂಡಾರದ ಪ್ರಬಂಧಮಾಡಿ ಅನ್ನದಾನ ಮಾಡಿದನು । ಆ ದೃಶ್ಯವೆಂದರೆ ಮುಂಡಗಾಂವಿಯು ಗೋದಾ ತೀರದ
ಪೈಠಣವಾಗಿತ್ತು। ಪೈಠಣದ ಸಂತ ಏಕನಾಥ ಮಾಹಾರಾಜರು, ಅದೇ ರೀತಿ ಮುಂಡಗಾಂವಿಯಲ್ಲಿ ಸಂತ ಗಜಾನನ
ಮಹಾರಾಜರು ! ಈ ಸಮಾರಂಭದಲ್ಲಿ ಪಾಲುಗೊಳ್ಳಲು ಅನೇಕ ಭಜನಿ ಮಂಡಲಿಗಳು ಅಲ್ಲಿ ತಲುಪಿದವು। ಅಡಿಗೆ
ಮನೆಯಲ್ಲಿ ಊಟವು ಸಿದ್ಧವಾಗುತ್ತಿತ್ತು। ಅರ್ಧ ಅನ್ನವು ತಯಾರಾಯಿತು । ಆಗ ಮಹಾರಾಜರು, ಝ್ಯಾಮಸಿಂಗನಿಗೆ
ನುಡಿದರು, ಅರೇ, ಇಂದು ಚತುರ್ದಶಿ ತಿಥಿ, ಯಾವದು ರಿಕ್ತ ತಿಥಿ ಎಂದು ಗಣಿಸಲ್ಪಡುತ್ತದೆ। ಆದ್ದರಿಂದ ಭೋಜನದ ॥ 131 ॥
ಪ್ರಬಂಧವನ್ನು ಹುಣ್ಣಿಮೆಯ ದಿನ ಮಾಡಿರಿ। ಆಗ ಝ್ಯಾಮಸಿಂಗನು, ಮಹಾರಾಜ, ಊಟವು ತಯಾರಾಗಿದೆ, ಮತ್ತು

ತಮ್ಮ ಪ್ರಸಾದವನ್ನು ಸೇವಿಸಲು ಜನರು ಜಾತ್ರೆ ನೆರೆದಿದೆ। ಆಗ ಮಹಾರಾಜರು, ನಿನ್ನ ಈ ವ್ಯವಸ್ಥೆ ಜಗದೀಶ್ವರನಿಗೆ ಪ್ರಿಯವಿಲ್ಲ। ಆದ್ದರಿಂದ ಈ ಅನ್ನವು ಉಪಯೋಗಕ್ಕೆ ಬರಲಾರದು। ನಿನ್ನಂತಹ ಪ್ರಾಪಂಚಿಕರು ಭವಗಂತನಲ್ಲದೆ; ತಮ್ಮ ಇಚ್ಛೆಯನ್ನು ಪೂರ್ಣಗೊಳಿಸಲು ಪ್ರಯತ್ನಿಸುತ್ತಿರಿ। ಸಮಯಕ್ಕೆ ಅನುಸಾರವಾಗಿ ಜನರು ಊಟಮಾಡಲು ಕುಳಿತರು। ಒಮ್ಮೆಲೇ ಆಕಾಶದಲ್ಲಿ ಮೋಡಗಳು ಸೇರಿ, ಗುಡುಗು ಆಯಿತು। ಮಿಂಚು ಹೊಡೆಯಿತು, ಮತ್ತು ಬಿರುಗಾಳಿ ಆರಂಭವಾಗಿ, ಆ ವನದಲ್ಲಿಯ ಅನೇಕ ಮರಗಳು ಬಿದ್ದವು। ಭಯಂಕರ ಮಳೆಯಾಗಿ, ಜನರು ದಿಕ್ಕಾಪಾಲಾದರು। ಎಲ್ಲ ಅನ್ನವು ಹಾಳಾಗಿರುವದನ್ನು ನೋಡಿ ಝ್ಯಾಮಸಿಂಗನು ಮಹಾರಾಜರೇ ನಾಳೆ ಈ ತರಹ ಆಗಲಾರದಂತೆ ನೋಡಿ ಕೊಳ್ಳಿ, ಎಂದು ಪ್ರಾರ್ಥಿಸಿದನು। ಏಕೆಂದರೆ ತಮ್ಮ ಪ್ರಸಾದ ದೊರಕದೆ ಜನರು ನಿರಾಶರಾಗಿರುವರು। ಇವು ಮಳೆಗಾಲದ ದಿನಗಳಲ್ಲ। ಈ ಮಳೆ ನಮ್ಮ ಆಶೆಗಳ ಮೇಲೆ ನೀರನ್ನು ಸುರಿಸಿದೆ। ಈ ರೀತಿ ಮಳೆಯು ಬಿದ್ದರೆ ಹೊಲದಲ್ಲಿಯ ಬೆಳೆಗಳು ನಾಶವಾಗುವವು ಮತ್ತು ಜನರು ಝ್ಯಾಮಸಿಂಗನು ಅನ್ನದಾನ ಮಾಡಿ ಪುಣ್ಯ ಕಟ್ಟಿಕೊಂಡು ನಮಗೆ ಹಳ್ಳ ಹಿಡಿಸಿದನು ಎಂದು ಹೇಳುವರು। ಅವನ ಈ ಪುಣ್ಯ ಸಂಚಯದ ರೀತಿ ನೋಡಿರಿ ಇತ್ಯಾದಿ। ಆಗ ಮಹಾರಾಜರು ನುಡಿದರು ಝ್ಯಾಮಸಿಂಗ ನೀನು ಈ ರೀತಿ ದುಃಖಿತನಾಗಬೇಡ। ನಾಳೆ ಮಳೆಯು ನಿನ್ನ ಉತ್ಸಾಹದ ಮೇಲೆ ನೀರು ಹಾಕುವದಿಲ್ಲ। ನಾನು ಕೂಡಲೆ ಆ ಬಗ್ಗೆ ವ್ಯವಸ್ಥೆ ಮಾಡುತ್ತೇನೆ। ಈ ರೀತಿ ನುಡಿದು ಅವರು ಆಕಾಶದ ಕಡೆಗೆ ಒಂದು ಬಾರಿ ನೋಡಿದರು। ಚಮತ್ಕಾರವು ಆಯಿತು, ಕೆಲವೇ ಕ್ಷಣಗಳಲ್ಲಿ ಮೋಡಗಳು ದಿಕ್ಕಾಪಾಲಾಗಿ ಆಕಾಶವು ನಿರಭ್ರವಾಯಿತು। ಮೋಡಗಳು ಹೋಗಿದ್ದರಿಂದ ಸೂರ್ಯ ಪ್ರಕಾಶವು ಬಂದಿತು। ಈ ರೀತಿ ಸಂತರು ಆಶ್ಚರ್ಯ ಮಾಡಬಲ್ಲರು। ಎರಡನೆಯ ದಿನ ಬಹಳ ಆನಂದದಿಂದ ಭಂಡಾರದ ಆಯೋಜನೆ ಮಾಡಿದರು। ಪ್ರಸಾದ ಪಡೆದು ಜನರು ಆನಂದಿತರಾದರು। ಮುಂಡಗಾಂವಿನಲ್ಲಿ ಪ್ರಾರಂಭವಾದ ಅನ್ನದಾನದ ಪ್ರಥೆಯು ಇಂದಿಗೂ ಇದೆ। ಆ ಝ್ಯಾಮಸಿಂಗನು ತಮ್ಮ ಸಂಪತ್ತನ್ನು ಮಹಾರಾಜರ ಚರಣಗಳಲ್ಲಿ ಮುಂಡಗಾಂವಿಯಲ್ಲಿ ಅರ್ಪಿಸಿದನು। ಆ ಮುಂಡಗಾಂವಿಯಲ್ಲಿ ಅನೇಕರು ಮಹಾರಾಜರ ಭಕ್ತರಾದರು। ಪುಂಡಲೀಕ ಭೋಕರೆ ಎಂಬ ಯುವಕನು ಅವರಲ್ಲಿ ಒಬ್ಬನು। ಅವನು ಉಕಿರ್ಡಾ ಎಂಬ ಹೊಲೆಯನ ಒಬ್ಬನೇ ಮಗ। ವಿದರ್ಭ ಪ್ರಾಂತದಲ್ಲಿ ಮಗು ಹುಟ್ಟಿದೊಡನೆ ಸತ್ತು ಹೋಗುತ್ತಿದ್ದರೆ, ಅಂತಹವರ ಮಗುವಿನ ಹೆಸರು ಉಕಿರ್ಡಾ ಇಡುತ್ತಾರೆ। ಮಗುವಿನ ಆಯುಷ್ಯಕ್ಕಾಗಿ ಹರಕೆ





ಹೊತ್ತು ಅದರ ಹೆಸರು 'ಉಕಿರ್ಡಾ' ಎಂದು ಇಡುವದು ಒಂದು ಪ್ರಥೆ। ತೆಲಂಗದಲ್ಲಿ ಪೆಂಟಯ್ಯಾ, ಮಹಾರಾಷ್ಟ್ರದಲ್ಲಿ 'ಕೇರಪುಂಜ', ಹಾಗೂ ವಿದರ್ಭದಲ್ಲಿ 'ಉಕಿರ್ಡಾ' ಹೆಸರಿಡುವ ಪ್ರಥೆ ಇದೆ। ಈ ಭಕ್ತ ಪುಂಡಲೀಕನು, ವದ್ಯ ಪಕ್ಷದಲ್ಲಿ ಮಹಾರಾಜರ ದರ್ಶನಕ್ಕಾಗಿ ನಿಯಮಿತ ರೂಪದಿಂದ ಶೇಗಾಂವಿಗೆ ಬರುತ್ತಿದ್ದನು ವಾರಕರಿಗಳು ವದ್ಯ ಪಕ್ಷದ ತಿಥಿಗೆ ಇಂದ್ರಾಯಣಿ ತೀರದ ದೇಹು, ಆಳಂದಿಗೆ ಹೋಗುವರು। ಅದೇ ರೀತಿ ಈ ಪುಂಡಲೀಕನು ಶೇಗಾಂವಿಯಲ್ಲಿ ಮಹಾರಾಜರ ದರ್ಶನಕ್ಕಾಗಿ ಹೋಗುತ್ತಿದ್ದನು। ಒಂದು ಬಾರಿ ವಿದರ್ಭದಲ್ಲಿ ಪ್ಲೇಗ ರೋಗವು ಹಬ್ಬಿತು। ಈ ರೋಗವು ಸಂಸರ್ಗಜನ್ಯವಾಗಿರುವದರಿಂದ ಊರಿನ ಜನರು ಬಯಲಿನಲ್ಲಿ, ಹೊಲಗಳಲ್ಲಿ ಇರುತ್ತಾರೆ। ಈ ರೋಗದ ಲಕ್ಷಣಗಳೆಂದರೆ, ಮೊದಲು ನೆಗಡಿ, ನಂತರ ಜ್ವರ, ಮತ್ತು ಕಣ್ಣು ಕೆಂಪಾಗುತ್ತವೆ। ನಂತರ ಗಂಟು ಉಂಟಾಗಿ, ರೋಗಿಗೆ ಗಾಳಿ ತಗುಲಿದೊಡನೆ ಹುಚ್ಚರಂತೆ ಬಡಬಡಿಸುತ್ತಾನೆ। ಭಯಂಕರ ಜ್ವರದಿಂದ ಮೈ ಉರಿಯುತ್ತದೆ ಮತ್ತು ಅನೇಕ ಸಲ ಎಚ್ಚರ ತಪ್ಪುತ್ತದೆ। ಈ ರೋಗವು ಮೊದಲು ಭರತಖಂಡದಲ್ಲಿರಲಿಲ್ಲ। ಈ ರೋಗ ಯುರೋಪಿನಲ್ಲಿತ್ತು। ಪರಕೀಯ ಜನರು ತಮ್ಮ ಜೊತೆಗೆ ಈ ರೋಗವನ್ನು ಭಾರತಕ್ಕೆ ತಂದರು। ಇರಲಿ, ಈ ರೋಗವು ವಿದರ್ಭದಲ್ಲಿ ಹಬ್ಬಿತು। ರೋಗದಿಂದ ದೂರವಿರಲು ಜನರು ಮನೆ ಬಿಟ್ಟು ಹೊಲಗಳಲ್ಲಿ ಇರತೊಡಗಿದರು। ಆ ರೋಗವು ಮುಂಡಗಾಂವಿಗೆ ತಲುಪಿತು। ಅದೇ ಸಮಯಕ್ಕೆ ಪುಂಡಲೀಕನು ವಾರಿಗಾಗಿ ಶೇಗಾಂವಿಗೆ ಹೊರಟನು। ಜ್ವರವು ಶೇಗಾಂವಿಗೆ ಹೊರಟಾಗಲೇ ಆರಂಭವಾಗಿತ್ತು। ಆದರೆ ಅವನು ಯಾರಿಗೂ ಹೇಳಲಿಲ್ಲ। ಅವನು ತಮ್ಮ ತಂದೆಯ ಜೊತೆಗೆ ಶೇಗಾಂವಿಗೆ ಹೊರಟಿದ್ದನು। ಐದು ಮೈಲಿ ದೂರ ಅಂತರವನ್ನು ಪಾರು ಮಾಡಿದಾಗಲೇ ಜ್ವರವು ಜೋರಾಯಿತು, ಮತ್ತು ಒಂದು ಹೆಜ್ಜೆ ನಡೆಯುವದು ಅಶಕ್ಯವಾಯಿತು। ಬಗಲಿನಲ್ಲಿ ಗಂಟು ಉಂಟಾಯಿತು। ಪುತ್ರನ ಈ ಸ್ಥಿತಿಯನ್ನು ನೋಡಿ, ಅವನು ತಂದೆಯು ಕೇಳಿದನು, ಪುಂಡಲೀಕ ನೀನು ಹೀಗೆಕೆ ಮಾಡುವಿ ? ಅವನು ತಂದೆಗೆ ಹೇಳಿದನು ನನಗೆ ಜ್ವರವು ಬಂದಿದೆ ಮತ್ತು ಬಗಲಿನಲ್ಲಿ ಗಂಟಾಗಿದೆ। ಭಯಂಕರ ಜ್ವರದಿಂದ ನಾನು ಶಕ್ತಿಹೀನನಾಗಿರುವೆನು। ನನ್ನಿಂದ ಒಂದು ಹೆಜ್ಜೆ ಹಾಕುವದು ಸಾಧ್ಯವಿಲ್ಲ। ಎಂತಹ ದುರ್ದೈವ, ಈ ವರ್ಷ ನನ್ನ ವಾರಿಯು ಪೂರ್ಣವಾಗುವ ಶಕ್ಯತೆ ಇಲ್ಲ। ಸ್ವಾಮಿ ದಯಾಘನ ನನ್ನ ವಾರಿ (ಯಾತ್ರೆ) ಪೂರ್ಣವಾಗಲೆಂದು ಪ್ರಾರ್ಥನೆ। ಹೇ ಭಕ್ತವತ್ಸಲ, ದಯಾನಿಧಿ, ತಮ್ಮ ಚರಣಗಳವರೆಗೆ ತಲುಪಿಸಿರಿ। ತಮ್ಮ ದರ್ಶನ ಪಡೆದ ನಂತರ ನಾನು ಸತ್ತರೂ ನನಗೆ ಚಿಂತೆಯಲ್ಲ। ಯಾತ್ರೆಯೇ

ನನ್ನ ಪುಣ್ಯಸಂಚಯ, ಅದರ ರಕ್ಷಣೆ ಮಾಡಿರಿ । ಶರೀರದಲ್ಲಿ ಶಕ್ತಿಯಿರುವತನಕ ಸಾಧಕನಿಂದ ಪರಮಾರ್ಥವು ಸಾಧ್ಯ। ಪುತ್ರನ ಸ್ಥಿತಿಯನ್ನು ನೋಡಿ ತಂದೆಗೆ ಚಿಂತೆಯಾಯಿತು । ಅವನು ಕಣ್ಣೀರಿತ್ತನು । ಏಕೆಂದರೆ ಅವನು ಒಬ್ಬನೇ ಪುತ್ರನು। ಅವನು ಕೂಡಾ ಮನದಲ್ಲಿಯೇ ಪ್ರಾರ್ಥಿಸತೊಡಗಿದನು, ಹೇ ಭಗವಂತ, ನನ್ನ ವಂಶದ ದೀಪವನ್ನು ಆರಿಸಬೇಡ । ನಂತರ ತಂದೆಯು ನುಡಿದನು, ನಿನಗಾಗಿ ಒಂದು ಗಾಡಿಯನ್ನು ತರಿಸುತ್ತೇನೆ । ಆಗ ಪುಂಡಲಿಕನು ನುಡಿದನು, ಯಾತ್ರೆಯು ಕಾಲ್ನಡಿಗೆಯಿಂದಲೇ ಆಗಬೇಕು । ಯಾವ ರೀತಿಯಾಗಲೀ ನಾವು ಶೇಗಾಂವಿಗೆ ತಲುಪೋಣ । ಒಂದು ವೇಳೆ ದಾರಿಯಲ್ಲಿಯೇ ಮರಣ ಬಂದರೇ ನನ್ನ ಶವವನ್ನು ಶೇಗಾಂವಿಗೆ ಕೊಂಡು ಹೋಗಿ, ಅಂತ್ಯಕ್ರಿಯೆ ಮಾಡು । ನಂತರ ಬಲು ಕಷ್ಟದಿಂದ ಅನೇಕ ವಿಪತ್ತಿಗಳನ್ನು ಎದುರಿಸಿ ಪುಂಡಲೀಕನು ಶೇಗಾಂವಿಗೆ ತಲುಪಿ ಮಹಾರಾಜರ ಚರಣಗಳಲ್ಲಿ ಬಿದ್ದನು। ಆಗ ಮಹಾರಾಜರು ಲೀಲೆ ಮಾಡಿದರು। ಒಂದು ಕೈಯಿಂದ ಬಗಲಿನಲ್ಲಿಯ ಗಂಟನ್ನು ವತ್ತಿದರು। ಮತ್ತು ಮಧುರವಾಣಿಯಂದ ನುಡಿದರು, ರೇ ಪುಂಡಲೀಕ, ನಿನ್ನ ಗಂಡಾಂತರವು ದೂರವಾಗಿದೆ । ಈಗ ಚಿಂತೆಯು ಕಾರಣವಿಲ್ಲ। ಮಹಾರಾಜರು ಹೀಗೆ ನುಡಿಯುತ್ತಲೇ, ಕಂಕುಳದಲ್ಲಿಯ ಗಂಟು ಮಾಯಾವಾಗಿ, ಜ್ವರವು ಹೋಯಿತು। ಅಶಕ್ತನಾಗಿದ್ದರಿಂದ ಶರೀರವು ಕಂಪಿಸತೊಡಗಿತು । ಪುಂಡಲೀಕನ ತಾಯಿಯು ಪ್ರಸಾದದ ತಟ್ಟೆಯನ್ನು ಮಹಾರಾಜರ ಮುಂದೆ ಇಟ್ಟಳು । ಅದರಿಂದ ಸ್ವಲ್ಪ ಭಾಗವನ್ನು ಮಹಾರಾಜರು ತಿಂದೊಡನೆ ಪುಂಡಲೀಕನ ಶರೀರದ ಕಂಪವು ಹೋಯಿತು । ಪುಂಡಲೀಕನು ಸಮಯ ಕಳೆದಂತೆ ಸುಧೃಡನಾದನು । ಅಶಕ್ತತೆಯು ಕಡಿಮೆಯಾಯಿತು । ಇದು ಗುರುಭಕ್ತಿಯ ಪ್ರಭಾವ ಹೇ ಅಂಧ ಜನರೇ, ಕಣ್ಣು ತೆರೆದು ನೋಡಿರಿ । ನಿಜವಾದ ಗುರುವಿದ್ದರೇ, ಭಕ್ತನ ಸೇವೆ ವಿಫಲವಾಗುವದಿಲ್ಲ । ಯಾರ ಮನೆಯಲ್ಲಿ ಕಾಮಧೇನು ಇರುವದೋ ಅವರ ಇಚ್ಛೆಯು ಪೂರ್ಣವಾಗುವದು । ಪುಂಡಲೀಕನ ಈ ಕಥೆಯನ್ನು ಯಾರು ಮನಸ್ಸಿಟ್ಟು ಓದುವರೋ ಅವರ ಗಂಡಾಂತರವು ದೂರವಾಗುವದು । ಸಂತ ಚರಿತ್ರೆಯು ಮನೋರಂಜನೆಯ ಕಥೆಯಲ್ಲ । ಅದು ಪ್ರಚೀತಿಯ ಗಣಿಯಿದೆ । ಸಂತ ಮಹಿಮೆಯ ಮೇಲೆ ಅವಿಶ್ವಾಸವಿರಬಾರದು । ಶ್ರೀ ದಾಸಗಣು ವಿರಚಿತ ಈ ಗಜಾನನ ವಿಜಯ ಎಂಬ ಗ್ರಂಥವು ಭಾವಿಕರಿಗೆ ಸುಖನೀಡಲಿ, ಎಂದು ಪ್ರಭುವಿನಲ್ಲಿ ಪ್ರಾರ್ಥನೆ ।



॥ ಶ್ರೀ ಹರಿಹರಾರ್ಪಣಮಸ್ತು ॥ ಶುಭಂ ಭವತು ॥



ಶ್ರೀ ಗಜಾನನ ಮಹಾರಾಜರ ಕೃಪೆಯಿಂದ ಪ್ರತ್ಯಕ್ಷ ನರ್ಮದಾ ದೇವಿಯು ಎಲ್ಲರ ರಕ್ಷಣೆಯನ್ನು ಮಾಡಿದಳು.

## || ಅಧ್ಯಾಯ೧೪ ||



ಶ್ರೀ ಗಣೇಶಾಯನಮಃ। ಹೇ ಕೌಸಲ್ಯಾತ್ಮಜ ರಾಮರಾಯ। ರಘುಕುಲಭೂಷಣ ಕರುಣಾಲಯ। ಸೀತಾಪತೇ, ಈ ಬಾಲಕನ ಮೇಲೆ ದಯೆಮಾಡಿರಿ। ತಾವು ತ್ರಾಟಿಕೆಯ ಉದ್ಧಾರ ಮಾಡಿದಿರಿ। ಶಿಲೆಯಾಗಿ ಬಿದ್ದ ಅಹಿಲ್ಯೆಯನ್ನು ತಾವು ಚೇತನೆ ಮಾಡಿದಿರಿ। ಹೇ ದಾಶರಥಿ, ಶಬರಿಯ ಇಚ್ಛೆಯನ್ನು ತಾವು ಪೂರ್ಣ ಮಾಡಿದಿರಿ। ಭಕ್ತರ ರಕ್ಷಣೆಗಾಗಿ ತಾವು ಸಿಂಹಾಸನದ ತ್ಯಾಗಮಾಡಿದಿರಿ। ತಮ್ಮ ಕೃಪಾದೃಷ್ಟಿಯಿಂದ ವಾನರರು ಬಲಶಾಲಿಯಾದರು। ತಮ್ಮ ನಾಮ ಪ್ರತಾಪದಿಂದ ಸಾಗರದಲ್ಲಿ ಕಲ್ಲುಗಳು ತೇಲ ತೊಡಗಿದವು। ತಮ್ಮ ಭಕ್ತ ವಿಭೀಷಣನಿಗೆ ತಾವು ರಾಜಸಿಂಹಾಸನದ ಮೇಲೆ ಕೂಡ್ರಿಸಿದಿರಿ। ಹೇ ಆನಂದಕಂದ, ತಮಗೆ ಶರಣು ಬಂದವರ ದೈನ್ಯ, ದುಃಖ ಮತ್ತು ಆಪತ್ತಿಗಳ ಹರಣ ಮಾಡುವಿರಿ। ಈ ಮಾತುಗಳನ್ನು ಜ್ಞಾಪಕದಲ್ಲಿಟ್ಟು, ದಾಸಗಣುಗೆ ಚಿಂತಾಮುಕ್ತಮಾಡಿರಿ। ಏಕೆಂದರೆ ಬಾಲಕನಿಗೆ ತಾಯಿಯ ಹೊರತು ಜಗತ್ತಿನಲ್ಲಿ ಯಾರು ನೆಲೆ ? ತಾವೇ ತಾಯಿ, ತಂದೆ ಹಾಗೂ ಸದ್‌ಗುರು। ರಾಮರಾಯ, ತಾವೇ ಭಕ್ತನ ಕಲ್ಪತರು, ಭವಸಾಗರದಿಂದ ಮುಕ್ತಿಕೊಡುವ ತಾರಕರು। ಇರಲಿ, ಮೆಹಕರ ತಹಸೀಲಿನಲ್ಲಿ ಬಂಡುತಾತ್ಯಾ ಎಂಬ ಗ್ರಸ್ಥನಿದ್ದನು। ಬಂಡು ತಾತ್ಯಾ ಸದಾಚಾರ ಸಂಪನ್ನನು ಹಾಗೂ ಆನಂದದಿಂದ ಗ್ರಹಸ್ಥ ಧರ್ಮದ ಪಾಲನೆ ಮಾಡುತ್ತಿದ್ದನು। ಹೇ ವಾಚಕರೇ ಈ ಸಂಸಾರವು ಆಪತ್ತಿಗಳಿಂದ ತುಂಬಿದೆ। ಆದರೂ ಮನುಷ್ಯನು ಅವುಗಳಿಂದ ದೂರಹೋಗಲು ಸಿದ್ಧನಿಲ್ಲ। ಈ ಬಂಡುತಾತ್ಯಾನ ಮನೆಗೆ ಪ್ರತಿದಿನ ಅತಿಥಿಗಳು ಬರುತ್ತಿದ್ದರು। ಗ್ರಹಸ್ಥನಾಗಿದ್ದರಿಂದ ಅವನಿಗೆ ಅದರ ಸತ್ಕಾರ ಮಾಡುವದು ಅವಶ್ಯಕವಾಗಿತ್ತು। ಈ ರೀತಿಯ ಕಾಲಕ್ರಮವು ಬಹಳ ಕಾಲದವರೆಗೆ ನಡೆದಿತ್ತು। ಉಳಿದ ಹಣವೆಲ್ಲ ಅತಿಥಿಗಳಿಗಾಗಿ ಖರ್ಚಾಗುತ್ತಿತ್ತು। ಕೊನಗೆ ಅವನಿಗೆ ಸಾಹುಕಾರನಿಂದ ಸಾಲ ಪಡೆಯಬೇಕಾಯಿತು। ಮತ್ತು ಅದರ ಬದಲು ಮನೆ – ಮಠಗಳನ್ನು ಗಿರವಿ ಇಟ್ಟನು। ಆದರೂ ಸಾಲದ ದೆವ್ವವು ಬೆನ್ನು ಬಿಡಲಿಲ್ಲ। ಇದರಿಂದಾಗಿ ಅವನಿಗೆ ಮುಕ ಮರೆಸಲೂ ಸ್ಥಳ ಉಳಿಯಲಿಲ್ಲ। ಈಗ ಅವನ ಬಳಿ ಗಿರವಿ ಇಡಲು ಅಥವಾ ಮಾರಲು ಏನೂ ಉಳಿಯಲಿಲ್ಲ। ಮನೆಯಲ್ಲಿಯ ಭಾಂಡಿಗಳಿಂದಲೂ ಮಾಲಿಕನಿಗೆ ಕೈ ತೊಳೆದು ಬೇಕಾಯಿತು। ಅವನ ಮೇಲೆ ಬಂದ ಆಪತ್ತಿಗಳ ವರ್ಣನೆ ಅಸಾಧ್ಯ। ಸಾಲವನ್ನು ವಸೂಲಿ ಮಾಡಲು ಸಾಹುಕಾರನು ತಮ್ಮ ಜನರನ್ನು ಮೇಲಿಂದ ಮೇಲೆ ಕಳುಹಿಸುತ್ತಿದ್ದನು।

ಮಧ್ಯಾಹ್ನದ ಊಟವೂ ಕೂಡಾ ಬಂಡುತಾತ್ಯಾಗೆ ದುಸ್ತರವಾಯಿತು । ಹೆಂಡತಿ ಮಾತ್ರವಲ್ಲದೇ, ಅವನ ಮಕ್ಕಳುಗಳು ಕೂಡಾ ಅವನಿಗೆ ಬೈಯುತ್ತಿದ್ದರು । ಅವನ ದೈನ್ಯ ಸ್ಥಿತಿಯಿಂದಾಗಿ ಯಾರೂ ಏನೂ ಕೊಡುತ್ತಿರಲಿಲ್ಲ । ಈ ರೀತಿ ಬಂಡುತಾತ್ಯಾ ಎಲ್ಲ ಕಡೆಯಿಂದಲೂ ಸಂಕಟದಲ್ಲಿ ಬಿದ್ದನು । ಆತ್ಮಹತ್ಯೆಯ ವಿಚಾರವು ಅವನ ಮನಸ್ಸಿನಲ್ಲಿ ಪ್ರಬಲವಾಯಿತು । ಜಗತ್ತಿನಲ್ಲಿ ದರಿದ್ರಿ ಮನುಷ್ಯನಿಗೆ ಎಳ್ಳಷ್ಟೂ ಬೆಲೆಯಿಲ್ಲ । ಹಣವಿದ್ದರೆ ಪ್ರಪಂಚವು ಒಳ್ಳೆಯದು । ಆದರೆ ಕಂಗಾಲನಾದಾಗ, ಅವನಿಗೆ ಪ್ರಪಂಚದ ಬಗ್ಗೆ ಘೃಣೆ ಉಂಟಾಗುತ್ತದೆ । ಇದು ಸಂಸಾರದ ನೀತಿ, ಮತ್ತು ನಿಜ ರೂಪ । ಪರಿಸ್ಥಿತಿಗೆ ಬೇಸತ್ತು ಬಂಡುತಾತ್ಯಾ ಯಾವ ರೀತಿ ಆತ್ಮಹತ್ಯೆ ಮಾಡಬೇಕು ? ಎಂದು ವಿಚಾರಮಗ್ನನಾದನು । ಆಫೀಮೂ ತಿಂದು ಸಾಯಬೇಕೆಂದರೆ ಅದನ್ನು ಖರೀದಿಸಲು ಹಣವಿಲ್ಲ । ಬಾವಿಯಲ್ಲಿ ಬಿದ್ದರೆ, ಮತ್ತು ಯಾರಾದರೂ ಬಂದು ಹೊರತೆಗೆದರೆ, ನಾನು ಸಾಯಲಾರೆ, ಮತ್ತು ಜನರ ಮಾತುಗಳನ್ನು ಕೇಳಬೇಕಾಗುವದು । ಅಷ್ಟೇ ಅಲ್ಲದೇ ಆತ್ಮಹತ್ಯೆಯ ಆರೋಪವಿಟ್ಟು ಸರಕಾರವು ನನಗೆ ದಂಡಿಸುವದು । ಆದ್ದರಿಂದ ಹಿಮಾಲಯದಲ್ಲಿ ಹೋಗಿ ಆತ್ಮಹತ್ಯೆ ಮಾಡುವೆನು । ಇದರಿಂದ ಯಾರಿಗೂ ಕಷ್ಟವಿಲ್ಲ । ಆದ್ದರಿಂದ ಹಿಮಾಲಯಕ್ಕೆ ಹೋಗುವದರಿಂದ ನನ್ನ ಇಚ್ಛೆಯು ಪೂರ್ಣವಾಗವದು ಮತ್ತು ನನಗೆ ಯಾರೂ ಆರೋಪಿಸಲಾರರು । ಈ ರೀತಿ ವಿಚಾರ ಮಾಡಿ ಅವನು ಮನೆಯಿಂದ ಹೊರಗೆ ಹೊರಟನು । ಹೋಗುವಾಗ ಅವನು ತಮ್ಮ ಸಂಸಾರಕ್ಕೆ ಕೊನೆಯ ನಮಸ್ಕಾರ ಮಾಡಿದನು । ಹೋಗುವಾಗ ಯಾರೂ ಗುರುತಿಸಬಾರದೆಂದು ಅವನು ಒಂದು ಲಂಗೋಟಿಯನ್ನು ಧರಿಸಿ, ಮೈಗೆಲ್ಲ ಬೂದಿ ಬಳಿದುಕೊಂಡನು । ತಮಗೆಲ್ಲರಿಗೆ ಗೊತ್ತಿರುವಂತೆ, ಸಂಸಾರಿಯು ಜನ ನಿಂದೆಗೆ ಬೆದರುವನು । ಬಂಡುತಾತ್ಯಾ, ಹೇ ದೀನದಯಾಳ, ಚಕ್ರಪಾಣಿ, ನನ್ನ ಮೇಲೆ ಅವಕೃಪೆ ಏಕೆ ಮಾಡಿದಿರಿ ? ಎಂದು ಪ್ರಾರ್ಥಿಸತೊಡಗಿದನು । ಹೇ ಅಧೋಕ್ಷಜ, ತಮ್ಮ ಮೇಲೆ ನನಗೆ ಸಂಪೂರ್ಣ ವಿಶ್ವಾಸವಿತ್ತು । ಪುರಾಣ ಗ್ರಂಥಗಳಲ್ಲಿ, ತಮ್ಮ ಕೃಪೆಯಿಂದ ಕಳ್ಳನು ಅರಸನಾಗುವವನು ಎಂದು ಬರೆಯಲಾಗಿದೆ । ಆದರೆ ನನ್ನ ವಿಷಯದಲ್ಲಿ ಈ ಮಾತು ಸುಳ್ಳಾಯಿತು । ಹೇ ನಾರಾಯಣ, ಕವಿಗಳು ತಮ್ಮ ಬಗ್ಗೆ ಮಾಡಿದ ವರ್ಣನೆಯು ತಪ್ಪು ಎಂಬ ನಿರ್ಧಾರಕ್ಕೆ ಬಂದಿರುವೆನು । ಆದ್ದರಿಂದ ವಿವಶನಾಗಿ ನನ್ನ ಪ್ರಾಣವನ್ನು ಕೊಡುವ ನಿರ್ಣಯ ಮಾಡಿರುವೆನು । ಹೇ ಶ್ರೀಹರಿ, ನನ್ನ ಹತ್ಯೆಯ ಪಾಪವು ತಮ್ಮ ತಲೆಯ ಮೇಲೆ, ಎಂಬುದರ ವಿಚಾರ ಮಾಡಿರಿ । ಈ ರೀತಿ ವಿಚಾರ ಮಾಡಿ ಬಂಡುತಾತ್ಯಾ ಟಿಕೆಟ್ಟನ್ನು ತಗೆಯಲು ಹೋದನು । ಸ್ಟೇಶನ್ ಮೇಲೆ ಅವನಿಗೆ ಒಬ್ಬ ಸಾಧುವು || 136 ||



ಭೆಟ್ಟಿಯಾದನು । ಅವನು, ಹರಿದ್ವಾರದ ಟಿಕೆಟ್ಟನ್ನು ತೆಗೆದು ಕೊಳ್ಳಬೇಡ । ಮೊದಲು ಸಂತರ ದರ್ಶನವನ್ನು ಮಾಡಿ ನಂತರ ಹರಿದ್ವಾರಕ್ಕೆ ಹೋಗು ಎಂದನು । ನಮ್ಮ ವಿದರ್ಭ ಪ್ರಾಂತದಲ್ಲಿ ಶ್ರೀ ಗಜಾನನ ಮಹಾರಾಜರೆಂಬ ಮಹಾಸಂತರು ಅವತರಿಸಿರುವರು । ಅವರ ದರ್ಶನವನ್ನು ಪಡೆದು ಹೋಗು । ಸಂತದರ್ಶನದಿಂದ ಲಾಭವಾಗಲಿಲ್ಲ ಎಂದು ಈ ವರೆಗೆ ಆಗಿಲ್ಲ । ಆದ್ದರಿಂದ ಬ್ರಾಹ್ಮಣನ ಮುಖದಿಂದ ಹೊರಬಿದ್ದ ಮಾತುಗಳನ್ನು ಕೇಳಿ ಬಂಡುತಾತ್ಯಾ ಸಂಕಟದಲ್ಲಿ ಬಿದ್ದನು । ಯಾರಿವನು ? ಇವನು ನನಗೇಕೆ ಭೆಟ್ಟಿಯಾದನು ? ಇವನಿಗೆ ನನ್ನ ನಿಜರೂಪವು ತಿಳಿದಿಲ್ಲ ತಾನೇ? ವಿಚಾರ ಮಗ್ನನಾದನು । ಕೊನೆಗೆ ಇವನ ಪರಿಚಯ ಹೇಗೆ ಪಡೆಯಲಿ ? ಸತ್ಯವು ಏನೇ ಇದ್ದರೂ ಶೇಗಾಂವಿಗೆ ಹೋಗಿ ಮಹಾರಾಜರ ದರ್ಶನ ಪಡೆದು ನಂತರ ಮುಂದೆ ಹೋಗುವದಾಗಿ ನಿಶ್ಚಯ ಮಾಡಿ ಬಂಡುತಾತ್ಯಾ ಶೇಗಾಂವಿಗೆ ತಲುಪಿದನು । ಮಹಾರಾಜರ ದರ್ಶನ ಪಡೆಯಲು ಅವರ ಎದುರಿಗೆ ಬಂದನು । ಅವನನ್ನು ನೋಡಿ ಮಹಾರಾಜರು ನಕ್ಕು ನುಡಿದರು, ಏನು ಹಿಮಾಲಯಕ್ಕೆ ಹೋಗಿ ಜೀವ ಕೊಡುವ ವಿಚಾರವೇಕೆ? ಅರೇ, ಆತ್ಮಹತ್ಯೆ ಎಂದಿಗೂ ಮಾಡಬಾರದು । ವಿಪತ್ತಿಗಳಿಂದ ಮನುಷ್ಯನು ನಿರಾಶನಾಗಬಾರದು । ಮನಸ್ಸಿನಲ್ಲಿಯ ಇಚ್ಛೆಯನ್ನು ಪೂರ್ಣಮಾಡಲು ಯಾವಾಗಲೂ ಪ್ರಯತ್ನ ಮಾಡಬೇಕು । ಪ್ರಪಂಚಕ್ಕೆ ಬೇಸತ್ತು ಆತ್ಮಹತ್ಯ ಮಾಡಿದರೆ, ಉಳಿದ ಪ್ರಾರಬ್ಧವನ್ನು ಭೋಗಿಸಲು ಮತ್ತೆ ಜನ್ಮ ಪಡೆಯಬೇಕಾಗುವದು । ಆದ್ದರಿಂದ ಗಂಗೆಯಲ್ಲಿ ಜೀವಕೊಡಲು ಹಿಮಾಲಯಕ್ಕೆ ಹೋಗದಿರು । ಎಲೈ, ಮರುಳನೇ ಈಗ ನಿನ್ನ ಮನೆಗೆ ಹಿಂದಿರುಗು । ಸ್ಟೇಶನ್‌ನಲ್ಲಿ ಭೆಟ್ಟಿಯಾದ ವಿಪ್ರನನ್ನು ನೀನು ಗುರುತಿಸಿರುವಿಯೇ ? ಅವನು ಯಾರಿದ್ದನು ? ಈಗ ಇಲ್ಲಿ ನಿಲ್ಲದಿರು । ತಮ್ಮ ಮನೆಗೆ ಹಿಂದಿರುಗು। ನಿನ್ನ ಹೊಲದಲ್ಲಿ ಗ್ರಾಮದೇವತೆ 'ಮ್ಹಸೋಬಾ' ಇದ್ದು ಅದರ ಪೂರ್ವ ದಿಕ್ಕಿಗೆ ಒಂದು ಜಾಲಿಗಿಡವಿದೆ । ಅಲ್ಲಿ ರಾತ್ರಿ ಎರಡು ಗಂಟೆಗೆ ಹೋಗಿ ನೆಲವನ್ನು ಅಗಿ । ಅಗಿಯುವ ಕೆಲಸವನ್ನು ನೀನೆ ಮಾಡು । ಮೂರು ಪೂಟಿನ ಕೆಳಗೆ ನಿನಗೆ ಧನವು ಸಿಗುವದು । ಆ ಧನರಾಶಿಯಿಂದ ಸಾಹುಕಾರನ ಋಣವನ್ನು ತೀರಿಸಿ ಮುಕ್ತನಾಗು । ತಮ್ಮ ಪತ್ನಿ ಹಾಗೂ ಪುತ್ರರನ್ನು ಬಿಡಬೇಡ । ಮಹಾರಾಜರ ಈ ವಾಣಿಯನ್ನು ಕೇಳಿ ಬಂಡುತಾತ್ಯಾ ಆನಂದಿತನಾದನು । ಮತ್ತು ಶರೀರಕ್ಕೆ ಹಚ್ಚಿದ ಬೂದಿಯನ್ನು ಒರೆಸಿ ಮನೆಯ ಹಾದಿ ಹಿಡಿದನು । ರಾತ್ರಿಯ ಸಮಯದಿ ಮ್ಹಸೋಬಾದ ಹತ್ತಿರದ ಜಾಲಿಗಿಡದ ಬಳಿ ತೆಗ್ಗನ್ನು ತೋಡಲಾರಂಭಿಸಿದನು ಯ ಮೂರು ಅಡಿ ಅಗೆದ ಮೇಲೆ ಅವನಿಗೆ ಒಂದು ಕೊಡವು ಸಿಕ್ಕಿತು । ಆ || 137 ||

ಕೊಡದಲ್ಲಿ ನಾಲ್ಕು ನೂರು ಬಂಗಾರದ ನಾಣ್ಯಗಳಿದ್ದವು। ಅವುಗಳನ್ನು ನೋಡಿ ಆನಂದಿತನಾದನು। ನಂತರ ಕೊಡವನ್ನು ತೆಗೆದುಕೊಂಡು ಮನೆಗೆ ಬಂದನು । ಮನೆಗೆ ಬಂದು ಆನಂದದಿಂದ ಕುಣಿಯುತ್ತ, ಮುಖದಿಂದ "ಜಯ ಜಯ ಗಜಾನನ ಗುರುರಾಯ" ಎಂದು ಹಾಡ ತೊಡಗಿದನು ಯ ದೊರಕಿದ ಹಣದಿಂದ, ಋಣವನ್ನು ತೀರಿಸಿದನು । ಹೊಲವನ್ನು ಕೂಡಾ ಬಿಡಿಸಿಕೊಂಡನು । ಕೊನೆಯುಸಿರು ಎಳೆಯುವಾಗ ಅಮೃತಕಲಶ ದೊರಕಿದಂತೆ ಅಥವಾ ಸಾಗರದಲ್ಲಿ ಮುಳುಗುವಾಗ ಆಧಾರ ದೊರಕಿದಂತೆ, ಗಜಾನನ ಮಹಾರಾಜರ ಕೃಪೆಯಿಂದ ಬಂಡುತಾತ್ಯಾನ ಸ್ಥಿತಿ ಆಯಿತು। ಆಗ ಅವನಿಗೆ ಒಳ್ಳೆಯ ದಿನಗಳು ಬಂದವು। ಅವನು ಶೇಗಾಂವಿಗೆ ಬರತೊಡಗಿದನು। ದಾನ ಧರ್ಮವನ್ನು ಬಲು ಉತ್ಸಾಹದಿಂದ ಮಾಡುತ್ತಿದ್ದನು। ಗಜಾನನ ಮಹಾರಾಜರ ಚರಣಗಳಲ್ಲಿ ಶರಣಾಗುತ್ತಿದ್ದನು। ಅದನ್ನು ನೋಡಿ ಮಹಾರಾಜರು ನನಗೇಕೆ ವಂದನೆ ಮಾಡುವಿ ? ಎಂದರು । ಯಾವ ಭಗವಂತನು ನಿನಗೆ ಆ ಧನಕಲಶವನ್ನು ಕೊಟ್ಟನೋ ಅವನಿಗೆ ಶರಣಾಗು। ಈಗ ದ್ರವ್ಯದ ಉಪಯೋಗವನ್ನು ಸರಿಯಾಗಿ ಮಾಡು। ಅವಶ್ಯಕತೆಗಿಂತ ಹೆಚ್ಚು ಖರ್ಚುಮಾಡುವದು ಸರಿಯಲ್ಲ । ನೀನು ಸ್ವಂತ ಅನುಭವಿಸಿರುವಿ, ಹಣವಿರುವವರೆಗೆ ಎಲ್ಲರೂ ಮಿತ್ರರು । ಹಣವಿಲ್ಲದವನಿಗೆ ಯಾರೂ ಇಲ್ಲ। ಆದರೆ ವಿಪತ್ತಿಯು ಬಂದಾಗ ಕಾಪಾಡುವವನು ದೇವರೇ ! ಅವನನ್ನು ಎಂದಿಗೂ ಮರೆಯದಿರು, ಏಕೆಂದರೆ ಅವನು ಯಾರಿಗೂ ಮರೆಯುವದಿಲ್ಲ । ಈ ಅಮೃತವಾಣಿಯನ್ನು ಕೇಳಿ ಬಂಡುತಾತ್ಯಾ ಮಹಾರಾಜರಿಗೆ ವಂದಿಸಿ, ಪ್ರಫುಲ್ಲಿತ ಮನಸ್ಸಿನಿಂದ ಮನೆಗೆ ಬಂದನು। ಸೋಮವತಿ ಅಮವಾಸ್ಯೆಗೆ ಬಹಳ ಮಹತ್ವ। ಸೋಮವಾರದ ದಿನ ಬರುವ ಅಮವಾಸ್ಯೆಯು "ಸೋಮವತಿ ಅಮವಾಸ್ಯೆ" ಎಂದು । ಸೋಮವತಿ ಅಮವಾಸ್ಯೆಗೆ ನರ್ಮದಾ ನದಿಯಲ್ಲಿ ಸ್ನಾನ ಮಾಡಿದರೆ ಪುಣ್ಯವು ದೊರಕುವದೆಂದು ಪುರಾಣಗಳಲ್ಲಿ ಬರೆದಿದೆ । ಈ ಪುಣ್ಯ ಸಂಚಯಕ್ಕಾಗಿ ಶೇಗಾಂವಿಯ ಕೆಲವು ಜನರು ನರ್ಮದಾ ನದಿಯಲ್ಲಿ ಸ್ನಾನ ಮಾಡಲು ಹೊರಟಿದ್ದರು। ಮಾರ್ತಂಡ ಪಾಟೀಲ, ಬಂಕಟಲಾಲ, ಮಾರುತಿ, ಚಂದ್ರಭಾನ್, ಬಜರಂಗಲಾಲ ಮೊದಲಾದವರು ಓಂಕಾರೇಶ್ವರಕ್ಕೆ ಹೋಗುವವರಿದ್ದರು । ಬಂಕಟಲಾಲನು ತಮ್ಮ ಮಹಾರಾಜರನ್ನು ಏಕೆ ಕರೆದುಕೊಂಡು ಹೋಗಬಾರದು ? ಎಂದು ಪ್ರಶ್ನಿಸಿದನು। ನಂತರ, ಆ ನಾಲ್ವರು ಮಹಾರಾಜರಲ್ಲಿ ತಾವು ಓಂಕಾರೇಶ್ವರಕ್ಕೆ ನಮ್ಮ ಜೊತೆಗೆ ಬಂದರೆ ಯಮರಾಜನ ಭಯವೂ ಕೂಡಾ ಇಲ್ಲ ಎಂದು ಪ್ರಾರ್ಥಿಸಿದರು । ಓಂಕಾರೇಶ್ವರದ ನಮ್ಮ ಯಾತ್ರೆಯನ್ನು ಸಫಲಗೊಳಿಸಿರಿ । ತನ್ನ





ಬಾಲಕನಿಗೆ ಮಾತೆಯೇ ಧನ್ಯ ಮಾಡುವಳು । ಈ ಅಧಿಕಾರ ಬೇರೆ ಯಾರಿಗಿಲ್ಲ। ನರ್ಮದಾ ಸ್ನಾನಕ್ಕಾಗಿ ನಮಗೆ ಕರೆದುಕೊಂಡು ಹೋಗಿರಿ ಎಂದು ಪ್ರಾರ್ಥನೆ । ತಾವು ಬರಲು ಸಮ್ಮತಿ ಕೊಡುವವರೆಗೆ ನಾವು ಇಲ್ಲಿ ಸತ್ಯಾಗ್ರಹ ಮಾಡುವೆವು। ಏಕೆಂದರೆ ಪುತ್ರನ ಹಟವನ್ನು ತಾಯಿಯೇ ಪೂರ್ಣಗೊಳಿಸುವಳು। ಈ ಅಧಿಕಾರ ಬೇರೆ ಯಾರಿಗಿಲ್ಲ। ನರ್ಮದಾ ಸ್ನಾನಕ್ಕಾಗಿ ನಮಗೆ ಕರೆದುಕೊಂಡು ಹೋಗಿರಿ, ಎಂಬುದೇ ನಮ್ಮ ಪ್ರಾರ್ಥನೆ । ಆಗ ಮಹಾರಾಜರು ನುಡಿದರು, ನರ್ಮದಾ ನದಿಯು ಇಲ್ಲಿರುವಳು । ಹೀಗಿರುವಾಗ ಅಲ್ಲಿ ಹೋಗುವ ಅವಶ್ಯಕತೆ ಏನು ? ಇಲ್ಲಿಯೇ ಮಠದಲ್ಲಿದ್ದು ನರ್ಮದೆಯ ಸ್ನಾನ ಮಾಡುವೆನು। ತಾವು ಓಂಕಾರೇಶ್ವರಕ್ಕೆ ಹೋಗಿ ಬನ್ನಿರಿ। ಅಲ್ಲಿ ಹಿಂದೆ ಭಾಗ್ಯವಂತ ಮಾಂಧಾತಾ ಅರಸ ಮಹಾಬಲಿಯು ಅಗಿ ಹೋದನು, ಅವನ ಕೀರ್ತಿಯು ಎಲ್ಲ ದಿಕ್ಕಿನಲ್ಲಿ ಹಬ್ಬಿತ್ತು। ಜಗದ್‌ಗುರು ಶ್ರೀ ಶಂಕರಾಚಾರ್ಯರು ಜಗದೋದ್ಧಾರಕ್ಕಾಗಿ ಪರಮಹಂಸರಿಗೆ ದೀಕ್ಷೆಯನ್ನು ಅಲ್ಲಿಯೇ ಕೊಟ್ಟಿದ್ದರು । ತಾವು ಶಂಕರಾಚಾರ್ಯರು ಜಗದೋದ್ಧಾರಕ್ಕಾಗಿ ಪರಮಹಂಸರಿಗೆ ದೀಕ್ಷೆಯನ್ನು ಅಲ್ಲಿಯೇ ಕೊಟ್ಟಿದ್ದರು। ತಾವು ಆನಂದದಿಂದ ಅಲ್ಲಿಗೆ ಹೋಗಿ ನರ್ಮದೆಯ ದರ್ಶನ ಪಡೆಯಿರಿ । ಆದರೆ ನನಗೆ ಕರೆದುಕೊಂಡು ಹೋಗುವ ಹಟ ಮಾಡಬೇಡಿರಿ। ಪವಿತ್ರ ಪರ್ವದ ಮಹತಿ ಈ ವಿರಕ್ತ ಅವಸ್ಥೆಯಲ್ಲಿ ನನಗೆ ಎಳ್ಳಷ್ಟು ಇಲ್ಲ। ಇದನ್ನು ಕೇಳಿ ಆ ನಾಲ್ಕು ಜನರು ಮಹಾರಾಜರ ಚರಣವನ್ನು ಹಿಡಿದು ಕುಳಿತರು ಮತ್ತು ನುಡಿದರು, ಮಹಾರಾಜ ತಾವು ನುಡಿಯುವದು ನಿಜ। ಆದರೂ ತಾವು ನಮ್ಮ ಜೊತೆಗೆ ಬರಲೇ ಬೇಕು। ನಾವು ಸ್ನಾನ ಮಾಡಿ ಕೂಡಲೆ ತಿರುಗಿ ಬರುವೆವು। ಆಗ ಮಹಾರಾಜರು ತಾವು ದಾಂಭಿಕರು। ಏಕೆಂದರೆ ನರ್ಮದೆಯ ನೀರು ನಮ್ಮ ಶೇಗಾಂವಿಯ ಬಾವಿಯಲ್ಲಿದೆ। ಈ ಉದಕವನ್ನು ಬಿಟ್ಟು ನೀವು ಅಲ್ಲಿಗೆ ಹೋದರೆ ನನ್ನ ನರ್ಮದಾ ತಾಯಿ ಸಿಟ್ಟಾಗುವಳು । ಆದ್ದರಿಂದ ತಾವು ಹೋಗಿರಿ, ನನಗೆ ಒತ್ತಾಯ ಮಾಡಬೇಡಿರಿ । ನಾನು ಹೇಳುವದನ್ನು ಕೇಳುವದರಲ್ಲೇ ತಮಗೆ ಸೌಖ್ಯ। ಆದರೆ ಮಾರುತಿ, ಹಾಗೂ ಚಂದ್ರಭಾನರು ಪಟ್ಟು ಹಿಡಿದು ಕುಳಿತರು। ಆಗ ಮಹಾರಾಜರು ನಾನು ಅಲ್ಲಿ ಹೋಗುವದರಿಂದ ವಿಪರೀತ ಘಟನೆಯೂ ಆಗಬಹುದು । ಹಾಗಾದರೆ ನನಗೆ ದೋಷ ಕೊಡ ಬೇಡಿರಿ। ಈ ರೀತಿ ಮಾತುಕತೆ ನಡೆದು ನಂತರ ಎಲ್ಲರೂ ಓಂಕಾರೇಶ್ವರವನ್ನು ತಲುಪಿದರು। ಪರ್ವ ಕಾಲದ ಪುಣ್ಯವನ್ನು ಪಡೆಯಲು ಜನರ ಗದ್ದಲ ನೆರೆದಿತ್ತು । ನದಿಯ ದಂಡೆಯ ಮೇಲೆ ನೆರೆದ ಪ್ರಚಂಡ ಜನಸಮುದಾಯದಿಂದ ಇವರೆಗೂ ಶಂಕರನ ಮಂದಿರವನ್ನು ಪ್ರವೇಶಿಸುವದು ಅಸಾಧ್ಯವಾಗಿತ್ತು। ಕೆಲವರು ಸ್ನಾನ

ಮಾಡುತ್ತಿದ್ದರು, ಕೆಲವರು ಬ್ರಾಹ್ಮಣರಿಂದ ಸಂಕಲ್ಪ ಮಾಡಿ ದೇವರಿಗೆ ಉದಕ ಬಿಡುತ್ತಿದ್ದರು । ಕೆಲವರು, ಬಿಲ್ವಪತ್ರಿ ಹಾಗೂ ಹೂಗಳನ್ನು ಹಿಡಿದು ಮಂದಿರದ ಕಡೆಗೆ ಓಡುತ್ತಿದ್ದರು । ಕೆಲವರು, ಬರ್ಫಿ, ಪೇಢೆ, ಹಾಗೂ ಮಿಠಾಯಿ ತಿನ್ನುತ್ತಿದ್ದರು । ಅನಕ ಭಜನ ಮಂಡಳಿಗಳು ಅಲ್ಲಿಗೆ ಬರುತ್ತಿದ್ದರು । ಪರ್ವವು ಮುಗಿಯುವವರೆಗೆ ಮಂದಿರದಲ್ಲಿ ನಡೆದ ಅಭಿಷೇಕ ಹಾಗೂ ಮಂತ್ರಘೋಷಗಳಿಂದ ಬೇರೆ ಯಾವ ಶಬ್ದವೂ ಕೇಳಿ ಬರುತ್ತಿರಲಿಲ್ಲ । ಅಲ್ಲಿ ಈ ಭಾರೀ ಶಬ್ದಗಳ ನಡುವೆ ಮಹಾರಾಜರು ನರ್ಮದಾ ನದಿಯ ತೀರದಲ್ಲಿ ಪದ್ಮಾಸನ ಹಾಕಿ ನಿಜಾನಂದದಲ್ಲಿ ಮಗ್ನರಾಗಿದ್ದರು । ಆ ನಾಲ್ಕು ಜನರು, ಸ್ನಾನ ಹಾಗೂ ಶಂಕರನ ದರ್ಶನ ಪಡೆದು ಹಿಂದಕ್ಕೆ ಬಂದರು । ಮಹಾರಾಜರು ಈಗ ರಸ್ತೆಯ ಮೇಲಿಂದ ಹೋಗುವದು ಅಸಾಧ್ಯ ಏಕೆಂದರೆ ಬರುವ ಹೋಗುವ ಜನರ ಗದ್ದಲವಿದೆ । ಚಕ್ಕಡಿಗಳು ಮುರಿಯುತ್ತವೆ, ಮತ್ತು ಗದ್ದಲದಿಂದ ಎತ್ತುಗಳು ಬೆದರುತ್ತವೆ । ಗಾಡಿಯವನು ಖೇಡಿಘಾಟ ಸ್ಟೇಶನ್ ತನಕ ಹೋಗಿ ಬರುವ ಮಾತುಕೊಟ್ಟಿದ್ದರೂ, ಬರುವಾಗಲೇ ಎತ್ತುಗಳು ಮಾಡಿದ ರಂಪಾಟದಿಂದ ಜೀವ ಉಳಿಸುವದು ಕಷ್ಟವಾಗಿತ್ತು । ಆದ್ದರಿಂದ ನಾವು ಈಗ ಎತ್ತಿನ ಬಂಡಿಯಲ್ಲಿ ಕುಳಿತು ಹೋಗುವ ಬದಲು, ದೋಣಿಯಲ್ಲಿ ಕುಳಿತು ಖೇಡಿಘಾಟ ಸ್ಟೇಶನ್ ವರೆಗೆ ಹೋಗೋಣ । ಮತ್ತು ಅಲ್ಲಿ ನೋಡಿ, ಜನರು ದೋಣಿಯಲ್ಲಿ ಕುಳಿತುಕೊಂಡೇ ಹೊರಟಿರುವರು । ಆಗ ಮಹಾರಾಜರು, ನನಗೇನು ಕೇಳ ಬೇಡಿರಿ, ನಾನು ವಚನಬದ್ಧ । ತಾವು ಎಲ್ಲಿ ಕೂಡಲು ಹೇಳುವಿರೋ ಅಲ್ಲಿ ನಾನು ಕೂಡ್ರುವೆನು । ತಮಗೆ ಸರಿ ಎನಿಸಿದ್ದನ್ನು ತಾವು ಮಾಡಿರಿ । ನಂತರ ಎಲ್ಲರೂ ದೋಣಿಯಲ್ಲಿ ಕುಳಿತು ಖೇಡಿ ಘಾಟಸ್ಟೇಶನ ಕಡೆಗೆ ಹೊರಟರು ಯ ದೋಣಿಯು ನದಿಯ ಮಧ್ಯದಲ್ಲಿ ಹೋದ ಕೂಡಲೇ ಒಂದು ಬಂಡೆಗೆ ಬಡಿದು ದೋಣಿಯಲ್ಲಿ ಒಂದು ತೂತಾಯಿತು । ನೀರು ದೋಣಿಯಲ್ಲಿ ತುಂಬ ತೊಡಗಿತು ಮತ್ತು ಅದು ಮುಳುಗತೊಡಗಿತು । ಪ್ರಾಣ ಭಯದಿಂದ ದೋಣಿಯ ನಾವಾಡಿಗನು ನೀರಿನಲ್ಲಿ ಜಿಗಿದು ಈಜಿ ತಮ್ಮ ಪ್ರಾಣವನ್ನು ಬದುಕಿಸಿದರು । ಆದರೆ ಮಹಾರಾಜರು ಶಾಂತಚಿತ್ತದಿಂದ 'ಗಿನ ಗಿನ ಗಣಾತ ಬೋತೆ । ಎಂದು ಭಜನೆ ಮಾಡತೊಡಗಿದರು । ಮಾರ್ತಂಡ, ಭಜರಂಗ, ಮಾರುತಿ ಹಾಗೂ ಬಂಕಟಲಾಲರು ಈ ಸಂಟದಿಂದ ಬೆದರಿದ್ದರು । ಆ ನಾಲ್ವರು ಮಹಾರಾಜರಿಗೆ ಹೇಳಿದರು ನಾವು ತಮ್ಮ ಅಪರಾಧಿಗಳು । ಶೇಗಾಂವಿಯಲ್ಲಿ ತಾವು ಹೇಳಿದ್ದನ್ನು ನಾವು ಕೇಳಲಿಲ್ಲ । ನಾವು ನಮ್ಮ ಮಾತನ್ನೇ ಸಿದ್ಧ ಮಾಡವದರಲ್ಲಿ ಮಗ್ನರಾಗಿದ್ದವು । ಅದರ ಪರಿಣಾಮ ಈಗ ನಮ್ಮ ಕಣ್ಣೆದುರು ಇದೆ । ಯಾವ ಪಾವನ ಜಲದಲ್ಲಿ ಸ್ನಾನ





ಮಾಡಿ ಪುಣ್ಯ ಸಂಚಯ ಮಾಡಲು ಬಂದೆವೋ ಆ ನರ್ಮದಾ ನದಿ ನಮಗೆ ಜಲ ಸಮಾಧಿ ಕೊಡಲು ಹೊರಟಿರುವಳು । ಹೇ ಗುರುರಾಜ ತಮ್ಮ ಶಬ್ದವನ್ನು ವೇದದಂತೆ ಪ್ರಮಾಣ ತಿಳಿಯುವೆವು । ಆದರೆ ಈ ಆಪತ್ತಿಯಿಂದ ನಂಗೆ ರಕ್ಷಿಸಿರಿ । ಅವರು ಈ ರೀತಿ ಮಹಾರಾಜರ ಪ್ರಾರ್ಥನೆ ಮಾಡತೊಡಗಿದರು, ಅಷ್ಟರಲ್ಲಿ ದೋಣಿಯು ಸೆಳವಿನಲ್ಲಿ ಸಿಕ್ಕಿ ಮುಳುಗತೊಡಗಿತು । ದಂಡೆಗೆ ಇದ್ದ ಜನರು, ದೋಣಿಯಲ್ಲಿ ಕುಳಿತ ಈ ಐದು ಜನರು ಜಲಸಮಾಧಿ ಪಡೆಯುವರು ಎಂದು ಕೂಗತೊಡಗಿದರು । ಏಕೆಂದರೆ ನರ್ಮದೆಯ ನೀರು ಬಹಳ ಆಳವಾಗಿದೆ । ಮಹಾರಾಜರು ನುಡಿದರು, ಹೆದರ ಬೇಡಿರಿ । ನರ್ಮದಾ ಮಾತೆ ನಿಮ್ಮನ್ನು ಉಳಿಸುವಳು । ಹೀಗೆ ನುಡಿದು ಮಹಾರಾಜರು ದೋಣಿಯಲ್ಲಿ ಕೈ ಮುಗಿದು ನರ್ಮದಾ ಸ್ತವನ ಆರಂಭಿಸಿದರು ।

**ಶ್ಲೋಕ (ಅನುಷ್ಟುಪ ಛಂದ)**

ನರ್ಮದೆ ಮಂಗಲೇದೇವಿ । ರೆವೆ ಅಶುಭ ನಾಶಿಸಿ ।
ಕ್ಷಮಿಸು ಇವರ ಅಪರಾಧ । ದಯಾವಂತ ವರದಾಯಿನಿ ॥

ಈ ರೀತಿ ನರ್ಮದಾ ಸ್ತವನ ನಡೆದಾಗ, ಒಮ್ಮೆಲ ದೋಣಿಯಲ್ಲಿ ತುಂಬಿದ ನೀರು ಹೊರಗೆ ಬಿತ್ತು । ನರ್ಮದೆಯು ತನ್ನ ಕೈಯಿಂದ ಆ ರಂಧ್ರವನ್ನು ಮುಚ್ಚಿದಳು । ದೋಣಿಯು ಮೊದಲಿನಂತೆ ತೇಲ ತೊಡಗಿತು । ಹೇಗ ಶ್ರೋತೃಗಳ ದೋಣಿಯ ಜೊತೆಗೆ ಸಾಕ್ಷಾತ್ ನರ್ಮದಾ ದೇವಿಯು ಇದ್ದಳು । ನರ್ಮದೆಯು ಮೀನುಗಾರತಿಯ ರೂಪ ಧರಸಿದಳು । ಅವಳ ಸುಂದರ ಕಪ್ಪು ಕುಂತಲ ಹಾಗೂ ವಸ್ತ್ರವು ಮೊಣಕಾಲಿನ ವರೆಗೆ ಒದ್ದೆಯಾಗಿದ್ದವು । ದೋಣಿ ತೀರಕ್ಕೆ ತಲುಪಿತು । ಆಶ್ಚರ್ಯದಿಂದ ಜನರು ಆ ರಂಧ್ರವಿದ್ದ ದೋಣಿಯನ್ನು ನೋಡಿದರು । ಭಕ್ತರು ಈ ಸ್ತ್ರೀಯು ಇರುವದರಿಂದಲೇ ನಮ್ಮ ಪ್ರಾಣಗಳು ಬದುಕಿದವು ಎಂದರು । ಹೇ ದೇವಿ, ತಾವು ಯಾರು ಮತ್ತು ಎಲ್ಲಿ ವಾಸಿಸುತ್ತೀರಿ? ಈ ಒದ್ದೆಯಾದ ವಸ್ತ್ರವನ್ನು ತೆಗೆಯಿರಿ, ನಾವು ನಿಮಗೆ ಹೊಸ ವಸ್ತ್ರ ಕೊಡುವೆವು । ಆಗ ನರ್ಮದೆಯು ನುಡಿದಳು ನಾನು ಓಂಕಾರ ಮೀನುಗಾರನ ಕನ್ಯೆ । ನನ್ನ ಹೆಸರು ನರ್ಮದೆ । ಹಸಿ ಬಟ್ಟೆಗಳನ್ನು ಉಡುವ ರೂಢಿ ಇದೆ । ಏಕೆಂದರೆ ನಾನು ಯಾವಾಗಲೂ ಒದ್ದೆ ಇರುತ್ತೇನೆ । ಈ ಜಲವೇ ನನ್ನ ನಿಜರೂಪ । ಈ ರೀತಿ ನುಡಿದು ನರ್ಮದೆಯು ಗಜಾನನ

ಮಹಾರಾಜರಿಗೆ ನಮಸ್ಕರಿಸಿ, ಕ್ಷಣಾರ್ಧದಲ್ಲಿ ನದಿಯಲ್ಲಿ ಅದೃಶ್ಯಳಾದಳು । ಯಾವ ರೀತಿ ಆಕಾಶದಲ್ಲಿ ಸಿಡಿಲು ಬಿದ್ದು ಹೋಗುವದೋ ಅದೇ ರೀತಿ। ಈ ಚಮತ್ಕಾರವನ್ನು ನೋಡಿ ಆ ನಾಲ್ಕು ಜನರು ಆಶ್ಚರ್ಯಚಕಿತರಾದರು। ಮಹಾರಾಜರ ಮಹಿಮೆಯ ಪರಿಚಯ ಅವರಿಗಾಯಿತು । ಏಕೆಂದರೆ ಸ್ವಯಂ ನರ್ಮದೆಯ ಅವರ ದರ್ಶನಕ್ಕಾಗಿ ಬಂದಿದ್ದಳು । ಭಯದಿಂದ ಮುಕ್ತನಾದ ಬಂಕಟಲಾಲನು ಮಹಾರಾಜರಿಗೆ ಆ ಸ್ತ್ರೀ ಯಾರು ? ಎಂದು ಪ್ರಶ್ನಿಸಿದನು । ಎಲ್ಲ ಮಾತುಗಳನ್ನು ಸತ್ಯವಾಗಿ ಹೇಳಿರಿ । ಆಗ ಮಹಾರಾಜರು ಈ ಪ್ರಶ್ನೆಯನ್ನು ಕೇಳುವ ಅವಶ್ಯಕತೆ ಏನು ? ಜಾಣನಿಗೆ ಸನ್ನೆಯು ಸಾಕು । ಏಕೆಂದರೆ ನರ್ಮದೆ ತನ್ನ ಪರಿಚಯವನ್ನು ರೂಪಕವಾಗಿ ಮಾಡಿರುವಳು । ಮೀನುಗಾರ ಓಂಕಾರ ವೆಂದರೆ ಈ ಓಂಕಾರೇಶ್ವರ । ನಿಜ ರೂಪ ನೀನು ಎಂದು ಅವಳು ಹೇಳಿರುವಳು । ಎಲೈ, ಮೂರ್ಖರೇ, ಅವಳೇ ನರ್ಮದಾದೇವಿ, ಈ ಬಗ್ಗೆ ಸಂದೇಹ ಬೇಡ। ತನ್ನ ಭಕ್ತರನ್ನು ಸಂಕಟದಿಂದ ಅವಳು ಪಾರುಮಾಡುವಳು। ಆದ್ದರಿಂದ ಅವಳ ಜಯಜಯಕಾರವನ್ನು ಎತ್ತರದ ಧ್ವನಿಯಲ್ಲಿ ಮಾಡಿರಿ, ಹೇ ನರ್ಮದೆ ನಿನಗೆ ಜಯವಾಗಲಿ। ಹೇ ಅಂಬೇ, ಈ ರೀತಿ ನಮ್ಮ ರಕ್ಷಣೆ ಮಾಡು । ಇದನ್ನು ಕೇಳಿ ಬಂಕಟಲಾಲ ಮತ್ತು ಅವನ ಸಂಗಡಿಗರು ಮಹಾರಾಜರ ಚರಣಗಳಲ್ಲಿ ನತಮಸ್ತಕರಾದರು। ಸಮಯಕ್ಕೆ ಅನುರೂಪವಾಗಿ ಅವರು ಶೇಗಾಂವಿಗೆ ಮರಳಿದರು। ಭೆಟ್ಟಿಯಾದವರಿಗೆಲ್ಲ, ಅವರು ನಡೆದ ಘಟನೆಯನ್ನು ಹೇಳುತ್ತಿದ್ದರು। ಸದಾಶಿವ ರಂಗನಾಥ ವಾನವಳೆ ಎಂಬ ಗೃಹಸ್ಥನು ಸಜ್ಜನನ ಜೊತೆಗೆ ಮಹಾರಾಜರ ದರ್ಶನಕ್ಕಾಗಿ ಶೇಗಾಂವಿಗೆ ಬಂದನು । ಈ ಸದಾಶಿವನ ಎರಡನೆಯ ಹೆಸರು ತಾತ್ಯಾ । ಅವನು ಚಿತ್ರಕೂಟದ ಮಾಧವನಾಥನ ಶಿಷ್ಯನಾಗಿದ್ದನು । ಮಾಧವನಾಥರು ಯೋಗ ವಿದ್ಯೆಯಲ್ಲಿ ಪಾರಂಗತರಾಗಿದ್ದು, ಅವರ ಶಿಷ್ಯಗಣರು ಮಾಳವಾ ಪ್ರಾಂತದಲ್ಲಿ ಇರುವರು । ಸದಾಶಿವನು ಮಹಾರಾಜರ ದರ್ಶನಕ್ಕೆ ಬಂದಾಗ, ಮಹಾರಾಜರು ಮಠದಲ್ಲಿ ಊಟ ಮಾಡುತ್ತಿದ್ದರು । ಸದಾಶಿವನನ್ನು ಕಂಡೊಡನೆ ಮಹಾರಾಜರಿಗೆ ಮಾಧವನಾಥನ ನೆನಪಾಯಿತು । ಏಕೆಂದರೆ ಒಬ್ಬ ಸಂತರು ಇನ್ನೊಬ್ಬ ಸಂತರನ್ನು ಅರಿಯುವರು। ಭಕ್ತರಿಗೆ ಹೇಳಿದರು, ಮಾಧವನಾಥನ ಶಿಷ್ಯರನ್ನು ಕರೆದು ಕೊಂಡು ಬನ್ನಿರಿ ಎಂದು । ಅವರ ಗುರು ಮಾಧವನಾಥರು ಈಗ ತಾನೆ ಮಠದಲ್ಲಿ ಭೋಜನಮಾಡಿ ಹೋಗಿದ್ದಾರೆ । ಅವರು ಹೋಗಲು ಇವರಿಬ್ಬರು ಬಂದಿರುವರು । ಅವರು ಕೆಲ ಸಮಯ ಮುಂಚೆ ಬಂದಿದ್ದರೆ ಗುರುವಿನ ಭೆಟ್ಟಿಯಾಗುತ್ತಿತ್ತು। ಅವರಿಗೆ ಬರಲು ಸ್ವಲ್ಪ ತಡವಾಗಿದೆ । ಅವರ ಗುರು ವೀಳ್ಯದೆಲೆಯನ್ನು ಸೇವಿಸದೇ ಹೋದರು । ಈಗ






ವೀಳ್ಯದೆಲೆಯನ್ನು ಕೊಟ್ಟೇ ಅವರನ್ನು ಬೀಳ್ಕೊಡೋಣ । ಗುರು ಬಂಧುವಿನ ಶಿಷ್ಯರೆಂದು ತಿಳಿದು ಮಹಾರಾಜರು ಆಲಿಂಗಿಸಿದರು । ಮಠದಲ್ಲಿ ಅವರ ಸ್ವಾಗತ ಮಾಡಿದರು । ಬೀಳ್ಕೊಡುವಾಗ ಮಹಾರಾಜರು ಸೂಚನೆ ಕೊಟ್ಟರು, ನೀವು ಹೋಗಿ ಮೊದಲು ಮಾಧವಜಿಗೆ ಭೆಟ್ಟಿಯಾಗಿ ಅವರಿಗೆ ಈ ವೀಳ್ಯದೆಲೆಯನ್ನು ಕೊಟ್ಟು, ಬಿಡಿರಿ। ಮತ್ತು ನಾನು ಕೊಟ್ಟ, ಸಂದೇಶವನ್ನು ಅವರಿಗೆ ತಿಳಿಸಿರಿ। ಆ ಸಂದೇಶದಲ್ಲಿ ಒಂದು ಶಬ್ದವನ್ನೂ ಕಲ್ಪನೆಯಿಂದ ಸೇರಿಸಬೇಡಿ। ಅವರು ಹೇಳಿದರು – "ಜೊತೆಗೆ ಭೋಜನವಾಯಿತು। ನಿಮ್ಮ ಎಲೆ ಉಳಿದು ಹೋಯಿತು। ಅದನ್ನು ನಾವು ತಂದಿರುವೆವು। ಹೇ ನಾಥ ತಮಗೆ ಕೊಡಲು।" ಹೇಳಿದ್ದೆಲ್ಲವನ್ನು ಕೇಳಿ ಸದಾಶಿವನು ಊರಿಗೆ ಹಿಂದಿರುಗಿದನು । ಮಾಧವನಾಥರಿಗೆ ವೃತ್ತಾಂತ ಹೇಳಿ ಕೇಳಿದನು, ಮಹಾರಾಜ ನಿಜವಾಗಿಯೂ ತಾವು ಆ ದಿನ ಶೇಗಾಂವಿಗೆ ಹೋಗಿದ್ದೀರಾ ? ಮಾಧವನಾಥನು ಗಜಾನನ ಮಹಾರಾಜರು ನುಡಿದದ್ದು ಸರಿ ಎಂದರು । ಭೋಜನದ ಸಮಯಕ್ಕೆ ಅವರು ನನ್ನನ್ನು ನೆನೆಸಿದ್ದರು । ನೆನಪಿನ ಮಾರ್ಗವಾಗಿ ನಾವು ಭೆಟ್ಟಿಯಾಗುತ್ತೇವೆ । ಈ ರೀತಿ ಭೆಟ್ಟಿಯು ಯಾವಾಗಲೂ ನಡೆದಿರುತ್ತದೆ। ಈ ಬಗ್ಗೆ ಸಂದೇಹ ಬೇಡ । ನಮ್ಮ ಶರೀರಗಳು ಭಿನ್ನವಾಗಿದ್ದರೂ ಪ್ರಾಣವು ಒಂದೇ ಈ ವಿಷಯದಲ್ಲಿ ಸತ್ಯವು ಏನು, ಎಂಬುದನ್ನು ತಾವು ತಿಳಿಯಲಾರಿರಿ, ಈ ಜ್ಞಾನವು ಅತ್ಯಂತ ರಹಸ್ಯಮಯ । ಒಳ್ಳೆಯದಾಯಿತು, ನನ್ನ ಆ ಏಲೆಯನ್ನು ತಾವು ತೆಗೆದುಕೊಂಡು ಬಂದಿರಿ। ಮಾಧವನಾಥರು ಎಲೆಯನ್ನು ಅರಿದು, ಸ್ವಲ್ಪ ತಾವು ಸೇವಿಸಿ ಉಳಿದಿದ್ದನ್ನು ಇತರರಿಗೆ ಕೊಟ್ಟರು। ಸಂತರ ಭೆಟ್ಟಿ ಹೇಗೆ ನೆರವೇರುವದು ಎಂಬುದನ್ನು ಜ್ಞಾನೇಶ್ವರ ಮಹಾರಾಜರು "ಚಾಂಗದೇವ ಪಾಸಷ್ಠಿ" ಯಲ್ಲಿ ವರ್ಣಿಸಿರುವರು । ಅದನ್ನು ತಿಳಿದರೆ, ಎಲ್ಲವೂ ಅರಿಯಬಹುದು । ಅನುಭವದ ಮಾತುಗಳನ್ನು ಅನುಭವದಿಂದಲೇ ಅರಿಯಬಹುದು, ತರ್ಕದಿಂದ ಇಲ್ಲ। ಯೋಗಿಗಳು ಯೋಗ ಬಲದಿಂದ ಕುಳಿತಲ್ಲಿಂದಲೇ ಎಲ್ಲವನ್ನು ಅರಿಯುವರು । ತರ್ಕದಿಂದ ಇಲ್ಲ। ಯೋಗಿಗಳು ಯೋಗ ಬಲದಿಂದ ಕುಳಿತಲ್ಲಿಂದಲೇ ಎಲ್ಲವನ್ನು ಅರಿಯುವರು । ಕುಳಿತಲ್ಲಿಂದಲೇ ಅವರು ಬೇರೆಯವರ ದರ್ಶನ ಪಡೆಯುವರು । ಶೇಖ ಮಹಮ್ಮದ ಶ್ರೀಗೊಂದೆಯಲ್ಲಿ ಮತ್ತು ತುಕಾರಾಮರು ದೇಹುದಲ್ಲಿ। ಕೀರ್ತನೆಯ ಸಮಯದಲ್ಲಿ ಮಂಟಪದಲ್ಲಿ ಬೆಂಕಿ ಹಿಡಿದಿತ್ತು। ಆ ಬೆಂಕಿಯನ್ನು ಶೇಖ ಮಹಮ್ಮದನು ಶ್ರೀಗೊಂದೆಯಲ್ಲಿ ಕುಳಿತು ಆರಿಸಿದನು । ಈ ವಿಷಯದಲ್ಲಿ ಮಹಿಪತಿಯು 'ಭಕ್ತವಿಜಯ'ದಲ್ಲಿ ನಮೂದಿಸಿದ್ದಾನೆ। ಮಾಣಿಕ ಪ್ರಭು 'ಹಳಿ' ಗ್ರಾಮಕ್ಕೆ ಹೋಗಿ ಬಾವಿಯಲ್ಲಿ ಮುಳುಗುತ್ತಿರುವ ಪಾಟೀಲನ ಪುತ್ರನನ್ನು

ಬದುಕಿಸಿದರು । ನಿಜ ಯೋಗಿಯಿಂದಲೇ ಇದು ಸಾಧ್ಯ, ನಕಲಿ ಸಾಧುವಿನಿಂದ ಅಲ್ಲ। ಅವರು ಕೇವಲ ಮಾತನಾಡುವ ಯೋಗ್ಯತೆ ಹೊಂದಿರುವರು। ಯೋಗ ಸಾಧನೆಯು ಆಧ್ಯಾತ್ಮಿಕ ಸಾಧನಗಳಲ್ಲಿ ಬಹು ಶ್ರೇಷ್ಠ। ರಾಷ್ಟ್ರೋದ್ಧಾರ ಮಾಡುವ ಇಚ್ಛೆಯಿದ್ದರೆ ಯೋಗವನ್ನು ಅವಲಂಬಿಸಬೇಕು । ಶ್ರೀ ದಾಸಗಣು ವಿರಚಿತ ಈ ಶ್ರೀ ಗಜಾನನ ವಿಜಯ ಗ್ರಂಥವನ್ನು ಶ್ರದ್ಧೆಯಿಂದ ಭಕ್ತರು ಹೇಳಬೇಕು ।

॥ ಶುಭಂ ಭವತು । ಶ್ರೀ ಹರಿಹರಾರ್ಪಣಮಸ್ತು॥







ಶ್ರೀ ಬಲಗಡೆಯ ಕುರ್ಚಿಯ ಮೇಲೆ ಶ್ರೀಗಜಾನನ ಮಹಾರಾಜರು ಕುಳಿತಿದ್ದು, ಲೋಕಮಾನ್ಯ ಟಿಳಕರು ಭಾಷಣ ನೀಡುತ್ತಿದ್ದಾರೆ.

## ॥ ಅಧ್ಯಾಯ ೧೫ ॥

ಶ್ರೀ ಗಣೇಶಾಯನಮಃ । ಹೇ ಕಶ್ಯಪಾತ್ಮಜ ವಾಮನ, ಹೇ ವಟುರೂಪಧಾರಿ ನಾರಾಯಣ, ತಾವು ಬಲಿ ಅರಸನು ಕೊಟ್ಟ ದಾನವನ್ನು ಸ್ವೀಕರಿಸಿ ಅವನಿಗೆ ಕೃತಾರ್ಥ ಮಾಡಿದಿರಿ । ತಾವು ದಾನದಲ್ಲಿ ಮೃತ್ಯುಲೋಕದ ರಾಜ್ಯ ಪಡೆದು ಬದಲಿಗೆ ಅವನಿಗೆ ಪಾತಾಳಲೋಕದ ರಾಜ್ಯ ಕೊಟ್ಟರಿ । ಆ ಪುಣ್ಯವಂತ ಬಲಿಯ ಇಚ್ಛೆಯನ್ನು ಪೂರ್ಣಗೊಳಿಸಿದಿರಿ । ಅವನು ತೋರಿದ ಭಕ್ತಿಯ ಮೇಲೆ ಪ್ರಸನ್ನರಾಗಿ ತಾವು ಅವನ ದ್ವಾರಪಾಲರಾದಿರಿ । ಈ ಕಲಿಯುಗ ಮುಗಿದ ಮೇಲೆ ತಮ್ಮ ಆಶೀರ್ವಾದದಿಂದ ಬಲಿಯು ದೇವತೆಗಳ, ದೇವರ ರಾಜ ರಾಜೇಶ್ವರನಾಗುವನು। ಹೇ ಅನಂತ, ತಾವು ಕೆಲವು ಕ್ಷಣಗಳಲ್ಲಿಯೇ ನಾಲ್ಕು ವೇದಗಳ ಸಂಹಿತೆಯನ್ನು ಮಾಡಿದಿರಿ। ತಮ್ಮ ಅಪಾರ ಬುದ್ಧಿಯನ್ನು ನೋಡಿ ಪಂಡಿತರು ಕೂಡಾ ಆಶ್ಚರ್ಯ ಚಕಿತರಾಗುವರು । ಈ ವರೆಗೆ ತಾವು ತೆಗೆದುಕೊಂಡ ಅವತಾರಗಳಲ್ಲಿ, ಕೇವಲ ಸಾಂಪ್ರತ ಅವತಾರದಲ್ಲಿ ಈ ಭೂಮಿಯ ಮೇಲೆ ಯಾರ ವದವಾಗಲಿಲ್ಲ। ಶತ್ರು ಮಿತ್ರ ಎಂಬ ಭೇದಭಾವ ಮಾಡದೇ ಎಲ್ಲರ ಮನೆಯಲ್ಲಿ ದೀಪವು ಉರಿಯಿತು । ದೇವ ಹಾಗೂ ದಾನವರು ಒಂದೇ ಎಂದು ತಿಳಿದಿರು । ದೇವರುಗಳ ಒಳ್ಳೆಯದನ್ನು ಮಾಡುವಾಗ ತಾವು ರಾಕ್ಷಸರಿಗೂ ಸಂರಕ್ಷಣೆ ನೀಡಿದಿರಿ । ತಾವು ಈಶ್ವರತ್ವದ ಸಮತೋಲವನ್ನು ಈ ಅವತಾರದಲ್ಲಿ ಕಾಪಾಡಿದಿರಿ। ನಾನು ತಮಗೆ ನಮಸ್ಕರಿಸುತ್ತೇನೆ ಯ ಹೇ ವಾಮನಾ ದಾಸಗಣುಗೆ ಆಶೀರ್ವಾದ ಕೊಟ್ಟು ಅವನಿಗೆ ಶಾಂತಿಯನ್ನು ದಯಪಾಲಿಸು। ಇರಲಿ ! ಮಹಾರಾಷ್ಟ್ರದ ಕೊಹಿನೂರು ವಜ್ರ, ದೂರ ದೃಷ್ಟಿಯ ಸಾಗರ, ಮತ್ತು ರಾಜಕಾರಣ ನಿಪುರಣರೆಂದರೇ ಬಾಳ ಗಂಗಾಧರ ಟಿಳಕ । ಪರತಂತ್ರದಿಂದ ದೇಶವನ್ನು ಮುಕ್ತಗೊಳಿಸಲು ಅವರು ಜೀವನವನ್ನೇ ಪಣಕ್ಕಿಟ್ಟರು । ಪರಕೀಯರ ದಬ್ಬಾಳಿಕೆಗೆ ಅವರು ಮಾಡಿದ ವಿರೋಧ ಮತ್ತು ಧೈರ್ಯಗಳ ವರ್ಣನೆ ಮಾಡಲು ಯಾರಿಂದ ಸಾಧ್ಯ ? ಅವರು ಭೀಷ್ಮನಂತೆ ದೃಢ ಪ್ರತಿಜ್ಞರಾಗಿದ್ದರು । ಪಾರತಂತ್ರ್ಯದಲ್ಲಿ ಮುಳುಗಿದ ಭಾರದೇಶವನ್ನು ನೋಡಿ ಅವರು ಜೀವನವನ್ನೇ ಪಣಕ್ಕಿಟ್ಟು ಸ್ವರಾಜ್ಯ ವ್ರತದ ಪ್ರತಿಜ್ಞೆಯನ್ನು ತೆಗೆದುಕೊಂಡರು । ಅವರು ನಿರ್ಭಯರಾಗಿದ್ದು ಯಾರಿಗೂ ಬೆದರುತ್ತಿರಲಿಲ್ಲ। ಅವರ ವಾಕ್ ಚಾತುರ್ಯವು ಬ್ರಹಸ್ಪತಿಯ ಸಮಾನವಾಗಿತ್ತು। ಅವರ ಕುಶಲ ಲೇಖನಿಯಿಂದ ಬ್ರಿಟಿಷ್ ಸರಕಾರದ ನಿದ್ದೆ ಹಾರಿತ್ತು ಅವರು ಆಸಕ್ತಿ ಇಲ್ಲದೆ ಕರ್ಮಮಯ ಜೀವನದಿಂದ

ದೇಶ ಸೇವೆ ಮಾಡಿದ್ದರೆ ಫಲಸ್ವರೂಪವಾಗಿ ಜನತಾ–ಜನಾರ್ಧನನು "ಲೋಕಮಾನ್ಯ"ವೆಂಬ ಪದವಿಯಿಂದ
ಗೌರವಿಸಿದನು । ಒಮ್ಮೆ ಶಿವ ಜಯಂತಿಯ ಉತ್ಸವದಲ್ಲಿ ಲೋಕಾಗ್ರಹಕ್ಕಾಗಿ ಅವರು ಭಾಷಣವನ್ನು ಮಾಡಲು
ಅಕೊಲಾಕ್ಕೆ ಬಂದರು । ಉತ್ಸವದ ಸಿದ್ಧತೆಯು ಬಲು ಸಡಗರದಿಂದ ನಡೆದಿತ್ತು। ಲೋಕಮಾನ್ಯರ ಆಗನಮದಿಂದ
ವಿದ್ವಾನರಲ್ಲಿ, ಪಂಡಿತರಲ್ಲಿ ವಿಚಾರ ವಿನಿಮಯ ನಡೆದಿತ್ತು। ದಾಮಲೆ, ಕೊಲ್ಹಟಕರ, ಖಾಪರ್ಡೆ ಆದಿ ವಿದ್ವಾನರು
ಅಕೋಲಾದಲ್ಲಿ ನೆರೆದರು । ಶಿವ ಜಯಂತಿಯ ಉತ್ಸವಕ್ಕಾಗಿ ಟಿಳಕರು ಅಧ್ಯಕ್ಷರಾಗುವರಿದ್ದರು । ಟಿಳಕರ ಹೆಸರು ಕೇಳಿ
ವಿದರ್ಭ ಪ್ರಾಂತವು ಆನಂದಿತವಾಗಿತ್ತು। ಜನರು ಶಿವ ಜಯಂತಿ ಈ ಪ್ರಾಂತದಲ್ಲಿ ಮೊದಲೇ ಆರಂಭವಾಗಬೇಕಿತ್ತು
ಎಂದು ಮಾತನಾಡತೊಡಗಿದರು । ಇದರ ಮುಖ್ಯ ಕಾರಣ, ಶಿವಾಜಿಯ ಜನ್ಮದಾತೆ ವೀರ ಮಾತಾ ಜಿಜಾಯಿಯ
ಜನ್ಮಕೊಟ್ಟು ವರ್ಹಾಡ ಸಿಂಧಖೇಡಾ ಗ್ರಾಮದಲ್ಲಾಗಿತ್ತು। ವೀರ ಮತಾ ಜಿಜಾಯಿಯು ಶಿವಾಜಿಗೆ ಜನ್ಮಕೊಟ್ಟು ವರ್ಹಾಡ
ಹಾಗೂ ಮಹಾರಾಷ್ಟ್ರವನ್ನು ಒಂದು ಮಾಡಿಸಿದಳು । ತಾಯಿ ವರ್ಹಾಡ ಪ್ರಾಂತದವಳಾದರೆ, ತಂದೆ ಮಹಾರಾಷ್ಟ್ರದ
ಶಹಾಜಿ ಭೋಸಲೆ । ಅವರಿಬ್ಬರೂ ಅನುರೂಪರಾಗಿದ್ದರು । ಒಂದು ಶಿವ ಜಯಂತಿಯ ಉತ್ಸವ, ಯಾವದು
ಮಹಾರಾಷ್ಟ್ರದ ಮಹಾಪರ್ವ, ಮತ್ತು ಎರಡನೆಯದು ಉತ್ಸವದ ಅಧ್ಯಕ್ಷರಾಗಿ ಲೋಕಮಾನ್ಯಬಾಳ ಗಂಗಾಧರ ಟಿಳಕ!
ಬೆಳ್ಳಿ ಬಂಗಾರವಾದಂತೆ ! ಉತ್ಸವದ ವ್ಯವಸ್ಥೆ ಒಂದು ತಿಂಗಳು ಮೊದಲಿನಿಂದ ನಡೆದಿತ್ತು। ಈ ಪರಸ್ಪರಾನುಕೂಲ
ಸಂಧಿಯಿಂದ ಎಲ್ಲರೂ ಆನಂದಿತರಾಗಿದ್ದರು। ಉತ್ಸವದ ಅಧ್ಯಕ್ಷ ಹಾಗೂ ಉಪಾಧ್ಯಕ್ಷರನ್ನು ನಿಶ್ಚಯಿಸಿದರು । ಸ್ವಯಂ
ಸೇವಕರ ಸೂಚಿ ತಯಾರಾಯಿತು । ಕೆಲವು ಜನರು ಶಿವ–ಜಯಂತಿಯ ಉತ್ಸವಕ್ಕೆ ಶೇಗಾಂವಿಯ ಗಜಾನನ
ಮಹಾರಾಜರಿಗೆ ಆಮಂತ್ರಿಸಬೇಕು ಎಂದು ಸೂಚಿಸಿದರು। ಎಂದರೆ ಹಾಲಲ್ಲಿ ಸಕ್ಕರೆ ಸೇರಿಸಿದಂತಾಗುವದು। ಶಿವಾಜಿಯ
ರಾಷ್ಟ್ರೋದ್ಧಾರದ ಕಾರ್ಯದಲ್ಲಿ ಸಫಲತೆ ದೊರಕಲು ಸಮರ್ಥ ರಾಮದಾಸ ಸ್ವಾಮಿಗಳ ಆಶೀರ್ವಾದವಿತ್ತು। ಟಿಳಕರ
ಕಾರ್ಯವೂ ಶಿವಾಜಿಯಂತೆ ರಾಷ್ಟ್ರೋದ್ಧಾರಕ್ಕೆ ಸಂಬಂಧಿಸುವದರಿಂದ ಮಹಾರಾಜರ ಆಶೀರ್ವಾದವು ಅವಶ್ಯಕ । ಈ
ಸೂಚನೆಗೆ ಕೆಲವರು ಸಮ್ಮತಿಕೊಟ್ಟರು, ಕೆಲವರು ವಿರೋಧ ಪ್ರಕಟಿಸಿದರು । ವಿರೋಧ ಮಾಡುವವರು, ಈ ರೀತಿ
ನುಡಿದರು ಆ ಶೇಗಾಂವಿಯ ಸಂನ್ಯಾಸಿಗೆ ಈ ಶುಭ ಅವಸರದಲ್ಲಿ ಏಕೆ ಕರೆಯುತ್ತೀರಿ ? ಅವರು ಆ ಸಮಯದಿ
ಏನಾದರೂ ವಿಚಿತ್ರ ಮಾತುಗಳನ್ನು ಆಡಿ, ಸಭೆಯ ರಂಗವನ್ನು, ಆನಂದವನ್ನು ಹಾಳು ಮಾಡಬಹುದು । "ಗಿಣ ಗಿಣ ॥ 146 ॥



ಗಣಾತ ಬೋತೆ" ಎಂಬ ಭಜನೆಯನ್ನು ಹಾಡುತ್ತ ಅವರು ಲೋಕಮಾನ್ಯರನ್ನು ಬಡಿಯಬಹುದು । ಆಗ ಇತರರು
ಈ ಮಾತುಗಳನ್ನು ಖಂಡಿಸಿ ನುಡಿದರು – ಮಹಾರಜರ ಶ್ರೀ ಚರಣಗಳು ಈ ಶುಭ ಸಮಯದಲ್ಲಿ ಅವಶ್ಯವಾಗಿ
ತಗಲಬೇಕು । ಅವರ ಹುಚ್ಚುತನ ಜನಸಾಮಾನ್ಯರ ದೃಷ್ಟಿಯಿಂದ ಮಾತ್ರ ಗೋಚರ । ವಿದ್ವಾನರು, ಸಜ್ಜನರು,
ಅವರನ್ನು ಹುಚ್ಚರೆಂದು ಅರಿಯರು । ಒಂದು ವೇಲೆ ಟಿಳಕರು ನಿಜವಾಗಿ ರಾಷ್ಟ್ರೋದ್ಧಾರಕರಾಗಿದ್ದರೆ, ನಿಶ್ಚಿತವಾಗಿ
ಮಹಾರಾಜರು ಆಗ ಉಪಸ್ಥಿತರಾಗುವರು । ಸತ್ಯ ಅಸತ್ಯದ ಪರೀಕ್ಷೆ ಇಂತಹ ಸಮಯದಲ್ಲಿ ಮಾತ್ರ ಸಾಧ್ಯ । ಆದ್ದರಿಂದ
ಮಹಾರಾಜರಿಗೆ ಆಮಂತ್ರಣ ನೀಡಲು ಹಿಂದೆ ಮುಂದೆ ನೋಡಬಾರದು । ಈ ರೀತಿಯ ವಾದದಿವಾದಗಳ ನಂತರ
ಕೆಲವು ಜನರು ಮಹಾರಾಜರನ್ನು ಆಮಂತ್ರಿಸಲು ಶೇಗಾಂವಿಗೆ ಬಂದರು । ಜನರನ್ನು ಕಂಡೊಡನೆ ಮಹಾರಾಜರು,
ದಾದಾಸಾಹೇಬ ಖಾಪರ್ಡೆಗೆ ನಾನು ಶಿವ ಜಯಂತಿಗೆ ಅವಶ್ಯವಾಗಿ ಬರುವೆನು । ಅಲ್ಲಿ ಹುಚ್ಚನಂತೆ ವರ್ತನೆ
ಮಾಡುವದಿಲ್ಲ। ಸುಧಾರಕರ ಮನೋಭಂಗ ನಾನು ಮಾಡುವದಿಲ್ಲ। ರಾಷ್ಟ್ರೋದ್ಧಾರ ಮಾಡಲು ಬಾಳ ಗಂಗಾಧರ
ಟಿಳಕರು ಯೋಗ್ಯ ವ್ಯಕ್ತಿ। ಅವರಂತಹ ರಾಷ್ಟ್ರ ಪ್ರೇಮಿ ವ್ಯಕ್ತಿ ವಿರಳ। ಆಳಂದಿಯ ನರಸಿಂಹ ಸರಸ್ವತಿಯ ಶಿಷ್ಯ, ಹಾಗೂ
ಟಿಳಕರ ಮಿತ್ರ ಅಣ್ಣಾಪಟವರ್ಧನ । ಟಿಳಕ ಹಾಗೂ ಅಣ್ಣಾ ಪಟವರ್ಧನರನ್ನು ಭೆಟ್ಟಿಯಾಗಲು ನಾನು ಅಕೋಲಾಗೆ
ಬರುವೆನು । ಈ ಮಾತುಗಳನ್ನು ಕೇಳಿ ಖಾಪರ್ಡೆಗೆ ಅತ್ಯಾನಂದವಾಯಿತು । ಮತ್ತು ಕೊಲ್ಹಟಕರರಿಗೆ ಹೇಳಿದರು, ಇದು
ನಮ್ಮ ವರ್ಹಾಡ ಪ್ರಾಂತದ ಜ್ಞಾನ ವಜ್ರ । ಇವರು ಅಕೋಲಾದಲ್ಲಿ ನಡೆದ ನಮ್ಮ ಮಾತುಗಳನ್ನು ಇಲ್ಲಿ ಕುಳಿತು
ಅರಿತಿರುವರು । ಸಂತರ ಅಪಾರ ಜ್ಞಾನ ಹಾಗೂ ರಾಷ್ಟ್ರ ಪುರುಷರ ಬಗ್ಗೆ ಪ್ರೇಮವು ಇಲ್ಲಿ ಕಾಣುತ್ತದೆ । ನಾವು
ಮಾತಾನಾಡುವ ಮೊದಲೇ ಮಹಾರಾಜರು ಸಮ್ಮತಿ ಕೊಟ್ಟರು । ನಮಗೆ ಮಾತನಾಡುವ ಅವಶ್ಯಕತೆಯೇ
ಉಂಟಾಗಲಿಲ್ಲ। ಇದು ಈ ಶುಭಕಾರ್ಯದ ಶುಭ ಶಕುನ । ನಾವು ಈಗ ಮಹಾರಾಜರಿಗೆ ನಮ್ಮಸ್ಕರಿಸಿ ಅಕೋಲಾಗೆ
ಮರಳೋಣ । ಖಾಪರ್ಡೆ ಹಾಗೂ ಕೊಲ್ಹಟಕರ ಹಿಂದಿರುಗಿದರು । ಶಿವ ಜಯಂತಿಯ ಉತ್ಸವಕ್ಕೆ ಎಂಟು ದಿನಗಳು
ಉಳಿದಿದ್ದವು । ಸಂಪೂರ್ಣ ವರ್ಹಾಡ ಪ್ರಾಂತವು ಆನಂದಿತವಾಗಿತ್ತು। ಎಲ್ಲರೂ ಟಿಳಕರ ಚರಣಗಳು ತಮ್ಮ ಪ್ರಾಂತಕ್ಕೆ
ಯಾವಾಗ ತಗಲುವವು ಎಂದು ಆತುರರಾಗಿದ್ದರು । ಶಕೆ ಹದಿನೆಂಟು ನೂರಾ ಮೂವತ್ತು ವೈಶಾಖ ಮಸದಲ್ಲಿ ॥ 147 ॥
ಅಕೋಲಾದಲ್ಲಿ ಭವ್ಯ ಮಂಡಪದಲ್ಲಿ ಶಿವ ಜಯಂತಿಯ ಉತ್ಸವವನ್ನು ಆಚರಿಸಿದರು । ವರ್ಹಾಡ ಪ್ರಾಂತದಲ್ಲಿ ಅಕ್ಷಯ

ತೃತೀಯಾ ಉತ್ಸವವು ಆನಂದಿಂದ ನೆರವೇರುತ್ತದೆ । ಆ ದಿನ ಸಂಪೂರ್ಣ ಸಭಾ ಮಂಟಪವು ತುಂಬಿ ಹೋಗಿತ್ತು ।
ಅಕ್ಷಯ ತೃತೀಯಾ ಉತ್ಸವದ ಕೊನೆಯ ದಿನವಾಗಿತ್ತು । ಆದ್ದರಿಂದ ಲೋಕಮಾನ್ಯರನ್ನು ಭೆಟ್ಟಿಯಾಗಲು ಎಲ್ಲ
ಕಡೆಗಳಿಂದ ಜನರು ಬಂದಿದ್ದರು । ಜನರಿಗೆ ಮಹಾರಾಜರೂ ಈ ಶುಭ ಸಮಯಕ್ಕೆ ಬರುವವರು ಎಂದು ಗೊತ್ತಿತ್ತು ।
ಆದ್ದರಿಂದ ಸಭಾಮಂಟಪವು ತುಂಬಿತ್ತು । ಎಲ್ಲರ ಕಣ್ಣುಗಳು ಮಹಾರಾಜರ ಶುಭಾಗಮನದ ಹಾದಿ ನೋಡುತ್ತಿದ್ದವು।
ಎಲ್ಲರೂ ಮಹಾರಾಜರು ಇನ್ನೂ ಏಕೆ ಬರಲಿಲ್ಲ ಎಂದು ಮಾತನಾಡುತ್ತಿದ್ದರು । ಆದರೆ ಮಹಾರಾಜರು ಮೊದಲೇ
ಮಂಟಪದಲ್ಲಿದ್ದರು । ಸಾಧುವು ಕೊಟ್ಟ ಶಬ್ದವು ಎಂದಿಗೂ ಸುಳ್ಳಾಗದು ! ಜೀವನಮುಕ್ತ ಸಾಧು ಗಜಾನನ ಮಹಾರಾಜರು
ಸಭಾ ಮಂಟಪದ ಉಚ್ಚಾಸನದ ಮೇಲೆ ಕುಳಿತಿದ್ದರು । ಉಚ್ಚಾಸನದ ಮಧ್ಯದ ಸ್ಥಾನವನ್ನು ಟಿಳಕರು ಭೂಷಿಸಿದ್ದರು ।
ಅವರ ಹತ್ತಿರ ಅಣ್ಣಾಸಾಹೇಬ ಪಟವರ್ಧನರು ಕುಳಿತಿದ್ದರು । । ಶ್ರೀಕೃಷ್ಣ ನಂದನ, ಖಾಪರ್ಡೆ ಕುಲದ ಭೂಷಣ,
ಗಣೇಶರು ಟಿಳಕರ ಎರಡನೆಯ ಬದಿಗೆ ಕುಳಿತಿದ್ದರು । ದಾಮಲೆ, ಕೊಲ್ಹಟಕರ, ಭಾವೆ ಹಾಗೂ ವೈಕಂಟರಾವ ದೇಸಾಯಿ
ಆದಿ ಸಭೆಯ ಮುಖ್ಯ ಆಯೋಜಕರು ವ್ಯಾಸಪೀಠದ ಮೇಲೆ ಕುಳಿತಿದ್ದರು । ಮತ್ತು ವ್ಯಾಖ್ಯಾನ ಮಾಡಲು ಅನೇಕ
ಸಜ್ಜನರು ಉಪಸ್ಥಿತರಿದ್ದರು, ಅವರ ವರ್ಣಣೆ ಅಸದಳ । ಕೊಲ್ಹಟಕರರು ಸಭೆಯ ಉದ್ದೇಶವನ್ನು ನಿವೇದಿಸಿದರು ।
ಅನಂತರ ಭಾಷಣ ಸಮ್ರಾಟ ಲೋಕಮಾನ್ಯ ಟಿಳಕರು ಎದ್ದು ನಿಂತರು । ಅವರು ಈ ದಿನವು ಬಹಳ ವಿಶೇಷ । ನಮ್ಮ
ಒಬ್ಬ ವೀರನು ಸ್ವಾತಂತ್ರ್ಯಕ್ಕಾಗಿ ಪ್ರಾಣವನ್ನು ಪಣಕ್ಕಿಟ್ಟನು । ಆ ಧರ್ನುಧರ ವೀರ ಶಿವಾಜಿ ಮಹಾರಾಜರ
ಜನ್ಮದಿನವನ್ನು ಆಚರಿಸಲು ನಾವು ನೆರೆದಿರುವೆವು । ಆ ಶೂರವೀರ ಶಿವಾಜಿಗೆ ಸಮರ್ಥ ರಾಮದಾಸ ಸ್ವಾಮಿಗಳ
ಕೃಪಾಶೀರ್ವಾದ ದೊರಕಿತ್ತು । ಆದ್ದರಿಂದಲೇ ಅವರ ಹೆಸರಿನ ದದುಂಭಿ ಕೇವಲ ಮಹಾರಾಷ್ಟ್ರವಲ್ಲದೇ, ಸಂಪೂರ್ಣ
ಭರತಖಂಡದಲ್ಲಿ ಮೊಳಗಿತು । ಅದೇ ರೀತಿ ನಮಗೆ ಆಶೀರ್ವಾದ ಕೊಡಲು ಸಾಧು ಗಜಾನನ ಮಹಾರಾಜರು ಈ
ಸಭೆಯಲ್ಲಿ ಉಪಸ್ತಿತರಿರುವರು । ರಾಮದಾಸ ಸ್ವಾಮಿಯ ಕೃಪೆಯಿಂದ ಶಿವಾಜಿ ಮಹಾರಾಜರಿಗೆ ತಮ್ಮ ಕಾರ್ಯದಲ್ಲಿ
ಸಫಲತೆ ದೊರಕಿತ್ತು । ಅದೇ ರೀತಿ ಈ ಸಭೆಯಲ್ಲಿ ಗಜಾನನ ಮಹಾರಾಜರ ಆಶೀರ್ವಾದದ ಅವಶ್ಯಕತೆ ಇದೆ ।
ಸ್ವಾತಂತ್ರ್ಯ ಸೂರ್ಯನು ಮುಳುಗಿರುವದರಿಂದ, ಪರಾಧೀನತೆಯ ಕತ್ತಲೆ ನಾಲ್ಕು ದಿಕ್ಕಿನಲ್ಲಿ ಹಬ್ಬಿದೆ ಯ ಪಾರತಂತ್ರ್ಯ ॥ 148 ॥
ದಲ್ಲಿರುವ ದೇಶವು, ಮೃತದೇಹದಂತೆ । ಆದ್ದರಿಂದ ಸಮಾಜದಲ್ಲಿ ರಾಷ್ಟ್ರ ಪ್ರೇಮದ ನಿರ್ಮಾಣವು ಅವಶ್ಯಕವೆಂದು




ಜನರಿಗೆ ಶಿಕ್ಷಣ ಕೊಡಬೇಕಾಗಿದೆ । ಇಂದಿನ ಬಾಲಕರಿಗೂ ರಾಷ್ಟ್ರ ಪ್ರೇಮದ ಶಿಕ್ಷಣ ಅವಶ್ಯಕ । ಈ ರೀತಿಯ ಶಿಕ್ಷಣವನ್ನು
ನಮ್ಮ ಪರಕೀಯ ಅಧಿಪತಿಗಳು ಕೊಡುವದು ಸಾಧ್ಯವೇ ? ಇದನ್ನು ಕೇಳಿ ಮಹಾರಾಜರು ಎದ್ದು ನಿಂತು ನುಡಿದರು,
ತ್ರಿವಾರ ಸಾಧ್ಯವಿಲ್ಲ ! ಭಾಷಣವು ಅಗ್ರೇಸರವಾಯಿತು ಮತ್ತು ಸರಕಾರದ ವಿರುದ್ಧ ಟೀಕೆ ಮಾಡಿದರು । ಅವರ
ಭಾಷಣದ ದಿಕ್ಕನ್ನು ಮಹಾರಾಜರು ಅರಿತು ನಗುತ್ತ ನುಡಿದರು, ಈ ರೀತಿ ಸರಕಾರದ ವಿರುದ್ಧ ಮಾತನಾಡಿಯೇ ಕೈಯಲ್ಲಿ
ಬೇಡಿ ಬೀಳುತ್ತವೆ । ಇಷ್ಟು ಹೇಳಿ ಮಹಾರಾಜರು ತಮ್ಮ ಭಜಗೆ 'ಗಿಣ ಗಿಣ ಗಿಣಾತ ಬೋತೆ' ಎಂದು
ಹಾಡತೊಡಗಿದರು । ಸಭೆಯು ನಂತರ ವಿಘ್ನಗಳಿಲ್ಲದೇ ಮುಗಿಯಿತು । ಜನರು ಟಿಳಕರಿಗೆ ಅಭಿನಂದಿಸಿದರು । ಆದರೆ
ಮಹಾ ರಾಜರು ಮಾಡಿದ ಭವಿಷ್ಯವಾಣಿ ಆ ವರ್ಷ ನಿಜವಾಯಿತು । ಸರಕಾರವು ಟಿಳಕರ ಮೇಲೆ ಕೇಸು ಮಾಡಿ,
ಅವರಿಗೆ ಕಲಮು ೧೨೪ ರ ದ್ವಾರಾ ಬಂಧಿಸಿ, ಬೇಡಿ ಹಾಕಿದರು । "ರಾಜಸತ್ತಾ ಬಲೀಯಸಿ" ಈ ನ್ಯಾಯದಿಂದ
ಸರಕಾರದ ವಿರುದ್ಧ ತಲೆ ಎತ್ತುವದು ಸಾಧ್ಯವಿರಲಿಲ್ಲ । ದೊಡ್ಡ ದೊಡ್ಡ ವಕೀಲರು ಟಿಳಕರ ಮೇಲಿನ ಕೇಸನ್ನು ನಡೆಸಲು
ತಯಾರಿ ಮಾಡಿದರು । ಅಷ್ಟೇ ಅಲ್ಲದೇ ಟಿಳಕರ ಪ್ರತಿ ಶ್ರದ್ಧೆ ಇರುವವರು, ಪಾರಮಾರ್ಥಿಕ ಉಪಾಯಗಳನ್ನು
ಮಾಡತೊಡಗಿದರು । ಅವರಲ್ಲಿ ಒಬ್ಬರು ಈ ರೀತಿ ಇದ್ದರು । ದಾದಾಸಾಹೇಬ ಖಾಪರ್ಡೆ, ಟಿಳಕರ ಮಿತ್ರ ಹಾಗೂ
ಸಹಯೋಗಿ, ಅಮರಾವತಿಯಿಂದ ಮುಂಬಯಿಗೆ ಕೇಸು ನಡೆಸಲು ಹೊರಟರು । ಅದೋಲಾ ಸ್ಟೇಶನ್ ಮೇಲೆ ಅವರು
ಕೊಲ್ಹಟಕರರಿಗೆ ನುಡಿದರು – ತಾವು ಕೂಡಲೆ ಶೇಗಾಂವಿಗೆ ಹೋಗಿ ಮಹಾರಾಜರಲ್ಲಿ ಟಿಳಕರನ್ನು ಈ ಸಂಕಟದಿಂದ
ಪಾರು ಮಾಡುವಂತೆ ಬಿನ್ನವಿಸಿರಿ । ದೇಶದ ಮೇಲೆ ಸಂಕಟ ಬಂದಿದೆ । ನಾನೇ ಶೇಗಾಂವಿಗೆ ಹೋಗುವವನಿದ್ದೆ । ಆದರೆ
ಈಗ ನನಗೆ ಮುಂಬಯಿಗೆ ಹೋಗುವ ಅವಶ್ಯಕತೆ ಇರುವದರಿಂದ ತಮಗೆ ಭಿನ್ನವಿಸುತ್ತಿದ್ದೇನೆ । ಕೂಡಲೇ ಗಾಡಿಯಲ್ಲಿ
ಕುಳಿತು ಟಿಳಕರ ಭಕ್ತ ಕೊಲ್ಹಟಕರರು ಶೇಗಾಂವಿಗೆ ಮಹಾರಾಜರ ಬಳಿ ತಲುಪಿದರು । ಆಗ ಮಹಾರಾಜರು ಮಂಚದ
ಮೇಲೆ ಮಲಗಿದ್ದರು । ಮೂರು ದಿನಗಳಾದರೂ ಮಹಾರಾಜರೂ ಏಳಲಿಲ್ಲ । ಅಲ್ಲಿಯವರೆಗೆ ಕೊಲ್ಹಟಕರರು
ಮಠದಲ್ಲಿಯೇ ಕುಳಿತಿದ್ದರು । ಹಿಂತಿರುಗುವ ಮಾತನ್ನು ಎತ್ತಲಿಲ್ಲ । ಟಿಳಕರ ಬಗ್ಗೆ ಅವರ ಮನಸ್ಸಿನಲ್ಲಿ ಶ್ರದ್ಧೆ
ಇರುವದರಿಂದ ಮಹಾರಾಜರು ಏಳುವವರಗೆ ಅವರು ಅಲ್ಲಿಯೇ ತಳಹೂಡಿದರು । ಮರಾಠಿಯಲ್ಲಿ ಒಂದು ಗಾದೆ ॥ 149 ॥
ಇದೆ – ಅಗ್ನಿ ಇಲ್ಲದೇ ಬೆಚ್ಚಗಾಗಲಾರಿ, ಮತ್ತು ಮಾಯೇ, ಪ್ರೀತಿಗಳಿಲ್ಲದೇ ಕಣ್ಣೀರಿಲ್ಲ । ನಾಲ್ಕನೆಯ ದಿನ ಮಹಾರಾಜರು

ಶ್ರೀಗಜಾನನ ॥ ೧೫೦ ॥ ವಿಜಯ ಅ.॥ ೧೫ ॥

ಎದ್ದು ಕೊಲ್ಹಟಕರಿಗೆ ನುಡಿದರು, ಈ ವಿಷಯದಲ್ಲಿ ನೀವು ಪ್ರಯತ್ನ ಮಾಡಿದರೂ ಸಫಲತೆ ದೊರಕದು । ಛತ್ರಪತಿ ಶಿವಾಜಿಯ ಮೇಲೆ ಸಮರ್ಥ ರಾಮದಾಸ ಸ್ವಾಮಿಯ ವರದಹಸ್ತವಿದ್ದರೂ ಬಾದಶಹನು ಅವರಿಗೆ ಬಂಧಿಸಿ ಕೈದಿ ಮಾಡಿದ್ದನು । ಸಜ್ಜನ ಹಾಗೂ ವೀರರಿಗೆ ಕಷ್ಟ ಸಿಗದೆ, ರಾಜ್ಯಕ್ರಾಂತಿ ಆಗುವದಿಲ್ಲ। ಈ ವಿಷಯದಲ್ಲಿ ಕಂಸನ ಇತಿಹಾಸ ಜ್ಞಾಪಕದಲ್ಲಿಡಿ । ನಾನು ಜೋಳದ ರೊಟ್ಟಿ ಕೊಡುವೆನು ಆ ರೊಟ್ಟಿಯನ್ನು ಹಿಂದೆ ಮುಂದೆ ನೋಡದೇ ಅವರಿಗೆ ತಿನ್ನಿಸು । ಅದನ್ನು ತಿನ್ನುವದರಿಂದ ಒಂದು ಮಹಾನ್ ಕಾರ್ಯವು ಭವಿಷ್ಯದಲ್ಲಿ ಪೂರ್ಣಗೊಳ್ಳುವದು । ಅವರ ನಮ್ಮಿಂದ ದೂರ ಹೋಗುವರು। ಆದರೆ ಅದಕ್ಕೆ ಯಾವ ಉಪಾಯವು ಇಲ್ಲ। ಮಹಾರಾಜರ ಮಾತುಗಳನ್ನು ಹೇಳಿ ಕೊಲ್ಹಟಕರರು ಶಂಕಿಸಿದರು । ರೊಟ್ಟಿಯನ್ನು ತೆಗೆದುಕೊಂಡು ಮಹಾರಾಜರಿಗೆ ವಂದಿಸಿದರು । ನಂತರ ಮುಂಬೈಗೆ ಬಂದು ಟಿಳಕರಿಗೆ ರೊಟ್ಟಿಯನ್ನು ಕೊಟ್ಟು, ನಡೆದ ವೃತ್ತಾಂತವನ್ನು ಹೇಳಿದರು । ಅದನ್ನು ಕೇಳಿ ಟಿಳಕರು ಉಪಸ್ಥಿತರಿಗೆ ನಗುತ್ತ ನುಡಿದರು, ಮಹಾರಾಜರ ಈ ವೃತ್ತಾಂದಲ್ಲಿ ಏನಾದರೂ ಗುಟ್ಟು ಅಡಗಿದೆ । ಏಕೆಂದರೆ ಅವರು ಅಂರ್ತಜ್ಞಾನಿ । ನಾವು ಮಾಡುವ ಪ್ರಯತ್ನಗಳಿಗೆ ಯಶಸ್ಸು ದೊರಕುವದು ವಿರಳ । ಏಕೆಂದರೆ ನಾವು ಮಾಡುವ ಸಮರ್ಥನೆಯನ್ನು ಸರಕಾರವು ಮನಸ್ಸಿಗೆ ಬಂದಂತೆ ಮಾತನಾಡಿ ವ್ಯರ್ಥಗೊಳಿಸುತ್ತಿದ್ದೆ । ನಿಸ್ವಾರ್ಥ ಭಾವನೆಯಿದ್ದರೆ ಮಾತ್ರ ನ್ಯಾಯದಾನಕ್ಕೆ ಬೆಲೆಯಿದೆ । ಇದು ಜಗತ್ತಿನ ರೀತಿ । 'ನನ್ನ ಕೈಯಿಂದ ಒಂದು ಮಹಾನ್ ಕಾರ್ಯವು ನೆರವೇರಲಿದೆ' ಎಂಬ ಮಹಾರಾಜರ ಅಮೃತವಾಣಿಯಲ್ಲಿ ಏನಾದರೂ ಸಂದೇಶ ಅಡಗಿದೆ । ಏಕೆಂದರೆ ಸಿದ್ಧಯೋಗಿಯು ಭೂತ, ವರ್ತಮಾನ ಹಾಗೂ ಭವಿಷ್ಯಕಾಲವನ್ನು ಅರಿಯುವರು । ನಾವೆಲ್ಲರೂ ಜನಸಾಮಾನ್ಯರು । ಅವರ ಭವಿಷ್ಯವಾಣಿಯಿಂದ ಏನಾಗುವದು ಎಂಬುದನ್ನು ತಿಳಿಯೋಣ। ಕೊಲ್ಹಟಕರರು ಟಿಳಕರಿಗೆ ಮಹಾರಾಜರು ಕೊಟ್ಟ ರೊಟ್ಟಿಯನ್ನು ನೀಡಿದರು । ಟಿಳಕರು ಹಲ್ಲಿಲ್ಲದಿದ್ದರೂ, ರೊಟ್ಟಿಯನ್ನು ಅಗಿದು ತಿಂದರು । ಟಿಕಗರಿಗೆ ಆರು ವರ್ಷಗಳ ಕಾರಾಗ್ರಹವಾಸವಾಯಿತು ಮತ್ತು ಅವರನ್ನು ಮಂಡಾಲೆ (ಬ್ರಹ್ಮದೇಶ)ಗೆ ಕಳುಹಿಸಿದರು । ಅಲ್ಲಿ ಭಗವದ್‌ಗೀತೆಯ ಮೇಲೆ ಸಮೀಕ್ಷೆ ಮಾಡಿ ಬರೆದ ಗ್ರಂಥ 'ಗೀತಾರಹಸ್ಯ'ವು ನಿರ್ಮಾಣವಾಯಿತು । ಅದು ಒಂದು ಮಹಾನ್ ಗ್ರಂಥವೆಂದು ತಿಳಿಯಲ್ಪಟ್ಟು ಜಗದ್‌ಗುರು ಶಂಕಾರಾಚಾರ್ಯರ ಸಮಾನ ಸನ್ಮಾನವನ್ನು ಪಡೆದರು । ಈ ಗೀತಾಗ್ರಂಥದ ಮೇಲೆ ಬರೆದ ಟೀಕೆ-ಟಿಪ್ಪಣಿಗಳ ಬಗ್ಗೆ ಹೇಳುವದು ಈ ದಾಸಗಣುವಿನಿಂದ ಅಸಾಧ್ಯ । ಸಜ್ಜನರೇ, ಕಲಿಯುಗದ ಅನುಸಾರವಾಗಿ ಪ್ರತಿಯೊಬ್ಬ ಆಚಾರ್ಯರು ಜಗದೋದ್ಧಾರಕ್ಕಾಗಿ



ಶ್ರೀಗಜಾನನ ॥ ೧೫೧ ॥ ವಿಜಯ ಅ.॥ ೧೫ ॥

ಭಗವದ್‌ಗೀತೆಗೆ ಅರ್ಥ ಕೊಟ್ಟರು । ಒಂದೇ ಗೀತೆಯ ಅರ್ಥವನ್ನು ಕೆಲವರು ಅದ್ವೈತದ ಮೇಲೆ, ದ್ವೈತದ ಮೇಲೆ, ಹಾಗೂ ಕರ್ಮದ ಮೇಲೆ ಆಧಾರಿಸಿ ಹೇಳಿದರು । ಟಿಳಕರು ಕರ್ಮ ಯೋಗದ ಮಾರ್ಗವು ಶ್ರೇಷ್ಠವೆಂದು ತಿಳಿಸಿದರು ಮತ್ತು ಅದೇ ಅವರ ಮಹಾನ್ ಕಾರ್ಯದ ಅಡಿಗಲ್ಲಾಯಿತು । ಅವರು ಕರ್ಮಯೋಗವೇ ಶ್ರೇಷ್ಠವೆಂದು ನಂಬಿದ್ದರು । ಈ ಗ್ರಂಥದಿಂದ ಬಾಳ ಗಂಗಾಧರರು, ಅಕ್ಷರ ವಾಂಙಮಯವು ಈ ವಿಶ್ವದಲ್ಲಿ ಇರುವವರೆಗೆ ಅಮರರಾಗಿರುವರು । ಅವರ ಪ್ರಯತ್ನಗಳಿಂದ ಸ್ವಾತಂತ್ರ್ಯ ದೊರಕಲು ಸಹಾಯವಾಗಿದ್ದರೂ, 'ಗೀತಾರಹಸ್ಯ'ದಿಂದಲೇ ಅವರು ಅಮರ ರಾದರು । ಸ್ವಾತಂತ್ರ್ಯವು ದೊರೆತಂತೆ, ಕಳೆಯಲೂಬಹುದು । ಇದು ವ್ಯವಹಾರ ಗೀತಾಶಾಸ್ತ್ರದ ಮಾತೇ ಬೇರೆ । ಅದರಿಂದ ಮೋಕ್ಷಪ್ರಾಪ್ತಿಯು ಸಾಧ್ಯ, ಆದರೂ ಅದರಲ್ಲಿ ಹೇಳಿದ ಚಿರಂತನ ಸತ್ಯದಿಂದ ಸಮಾಜವು ಒಳ್ಳೆಯ ದಿಕ್ಕಿನಲ್ಲಿ ಸಾಗಲು ಸಹಾಯವಾಗುತ್ತದೆ । ರೀತಿ ಲೋಕಮಾನ್ಯ ಬಾಳ ಗಂಗಾಧರ ಟಿಳಕರು ಕೀರ್ತಿರೂಪದಿಂದ ನಿರಂತರ ಚಿರಂಜೀವಿಯಾದರು । ಇರಲಿ । ಕರವೀರ ಕೊಲ್ಹಾಪುರದಲ್ಲಿ ಶ್ರೀಧರ ಗೋವಿಂದ ಕಾಳೆ ಎಂಬ ಚಿತ್ಪಾವನ ಬ್ರಾಹ್ಮಣನಿದ್ದನು । ಅವನ ಮನೆಯ ಸ್ಥಿತಿಯು ಒಳ್ಳೆಯದಿರದಿದ್ದರೂ, ಅವನು ಇಂಗ್ಲೀಷು ಶಾಲೆಯಲ್ಲಿ ಸೇರಿ ಮ್ಯಾಟ್ರಿಕ್ ಪರೀಕ್ಷೆ ಪಾಸಾದನು । ನಂತರ ಕಾಲೇಜಿಗೆ ಹೋದನು, ಆದರೆ ಇಂಟರ್ ಪರೀಕ್ಷೆಯಲ್ಲಿ ಅನುತ್ತೀರ್ಣನಾಗಿದ್ದರಿಂದ ಕಾಲೇಜನ್ನು ಬಿಟ್ಟನು । ಯಾವ ಕೆಲಸವು ಸಿಗದೆ, ಅವನು ಸಮಾಚಾರ ಪತ್ರಿಕೆಗಳನ್ನು ನೋಡತೊಡಗಿದನು । ಒಂದು ದಿನ ಅವನು 'ಕೇಸರಿ' ಪೇಪರಿನಲ್ಲಿ ಟೋಗೋ ಹಾಗೂ ಯಾಮಾರ ಚರಿತ್ರೆಯನ್ನು ಓದಿದನು । ಬಹಳ ವಿಚಾರ ಮಾಡಿ, ಅವನು ನಾನು ಒಂದು ರೀತಿ ಭೂಮಿಗೆ ಭಾರವಿದ್ದಂತೆ । ನಾನು ಇಂಗ್ಲೆಂಡಿಗೆ ಹೋಗಿ ಯಂತ್ರವಿದ್ಯೆಯನ್ನು ಏಕೆ ಕಲಿಯಬಾರದು ? ಟೋಗೊ ಹಾಗೂ ಯಮಾ ಜ್ಞಾನ ಸಂಪಾದಿಸಿ ತಮ್ಮ ಮಾತ್ರುಭೂಮಿ ಜಪಾನಿನ ಅಭ್ಯುದಯಕ್ಕೆ ಸಹಾಯ ಫಾಡಿದರು । ಅದೇ ರೀತಿ ನಾನು ತಂತ್ರ ವಿದ್ಯೆ ಸಂಪಾದಿಸಿ ಮಾತ್ರಭೂಮಿಗೆ ತಿರುಗಿ ಬರುವೆನು, ಎಂದು ವಿಚಾರ ಮಾಡಿದನು । ವಿಚಾರವೇನೋ ಸರಿಯಾಗಿತ್ತು, ಆದರೆ ಬರುಹೋಗುವ ಹಣದ ಪ್ರಬಂಧ ಯಾರು ಮಾಡುವರು ? ಅವನ ಆರ್ಥಿಕ ಸ್ಥಿತಿಯು ಸರಿಯಿರಲಿಲ್ಲ । ಯಾವ ದಾರಿ ಸಿಗುವದು ಸಾಧ್ಯವಿರಲಿಲ್ಲ । ಈ ರೀತಿ ನಿರಾಶನಾಗಿ ಮನದಲ್ಲಿಯೇ ಸ್ವಪ್ನ ಕಾಣುತ್ತಿದ್ದನು । ಒಂದು ದಿನ ಅವನು ತಮ್ಮ ಶಿಕ್ಷಕ ಮಿತ್ರನನ್ನು ಹೇಳಿದನು । ಮಿತ್ರನು ಕೂಡಾ ಅವನ ವಿಚಾರದಲ್ಲಿ ಸಹಮತನಾದನು, ಆದರೆ ಅಷ್ಟೊಂದು ಹಣ ಕೂಡಿಸುವದು ಅವನಿಗೆ ಸಾಧ್ಯವಿರಲಿಲ್ಲ ।

ಮಿತ್ರನು ನುಡಿದನು, ಶ್ರೀಧರ, ಹಣವಿಲ್ಲದೇ ಎಲ್ಲವೂ ವ್ಯರ್ಥ । ಮನುಷ್ಯನು ಎಲ್ಲ ಸೋಗು (ವೇಷ) ಧರಿಸಬಲ್ಲ, ಆದರೆ ಹಣದ ಬಗ್ಗೆ ಮಾತ್ರವಲ್ಲ। ಧನಹೀನನ ಮನೋರಾಜ್ಯ ಮನಸ್ಸಿನಲ್ಲೇ ಉಳಿಯುತ್ತದೆ। ಆದ್ದರಿಂದ ನಾವು ನಮ್ಮ ಜನ್ಮಭೂಮಿ ಕೊಲ್ಹಾಪುರಕ್ಕೆ ಹೋಗೋಣ, ಏಕೆಂದರೆ ಇಲ್ಲಿ ಭಯಂಕರ ಬಿಸಿಲು । ಇಬ್ಬರೂ ಗಾಡಿಯಲ್ಲಿ ಕುಳಿತರು । ಮಹಾರಾಜರ ಮಹಿಮೆಯನ್ನು ಕೇಳಿದ್ದರು, ಆದ್ದರಿಂದ ನಿಜ ಸಾಧುವು ಹೇಗೆ ಇರುತ್ತಾನೆ ಎಂದು ನೋಡಲು ಶೇಗಾಂವಿಯಲ್ಲಿ ಇಳಿದರು । ಪೋಷ್ಟಮಾಸ್ತರರ ಮನೆಯಲ್ಲಿ ಸಾಮಾನ ಇಟ್ಟು ಮಹಾರಾಜರ ದರ್ಶನಕ್ಕೆ ಮಠದಲ್ಲಿ ಬಂದರು । ಮಠದಲ್ಲಿ ಬಂದಕೂಡಲೇ ಮಹಾರಾಜರಿಗೆ ಸಾಷ್ಟಾಂಗ ನಮಸ್ಕಾರ ಮಾಡಿ ಅವರ ಮುಂದೆ ಕುಳಿತರು । ಅವರನ್ನು ನೋಡಿದೊಡನೆ ಮಹಾರಾಜರು ಶ್ರೀಧರನ ಇಚ್ಛೆಯನ್ನು ತಿಳಿದು ನುಡಿದರು, ಹುಚ್ಚಾ ! ಪರದೇಶಕ್ಕೆ ಹೋಗುವ ಇಚ್ಛೆಯನ್ನು ಬಿಡು । ಇಲ್ಲಿ ಎಲ್ಲವೂ ಇದೆ । ಅಲ್ಲಿಯ ಭೌತಿಕ ಜ್ಞಾನದಲ್ಲಿ ಅರ್ಥವಿಲ್ಲ। ಇಲ್ಲಿಯ ಆಧ್ಯಾತ್ಮಿಕ ವಿದ್ಯೆಯನ್ನು ಗಳಿಸಿ ಜೀವನವನ್ನು ಧನ್ಯಮಾಡಿರಿ । ಮಹಾರಾಜರ ಅಮೃತವಾಣಿಯನ್ನು ಕೇಳಿ ಶ್ರೀಧರನ ವಿಚಾರ ಪರಿವರ್ತನೆಯಾಯಿತು । ಶ್ರೀಧರನಿಗೆ ಕೊಲ್ಹಾಪುರದ ಕುಂಭಾರ ಓಣಿಯ ಸ್ವಾಮಿಯ ನೆನಪಾಯಿತು । ಅವರು ಭಕ್ತರೊಡನೆ ಮಾತನಾಡುವ ಪದ್ಧತಿಯು ಇದೇ ರೀತಿ ಇತ್ತು । ಅದೇ ರೀತಿ ಈ ಗುರುಮೂರ್ತಿ ಭಕ್ತರೊಡನೆ ಮಾತನಾಡುವರು । ಶ್ರೀಧರನು ಸಂಭ್ರಮದಲ್ಲಿ ಬಿದ್ದನು । ಅವನ ಮನಸ್ಸಿನಲ್ಲಿ ವಿಚಾರ ನಡೆದಾಗಲೇ ಮಹಾರಾಜರ ನುಡಿದರು, ಭಾರತವನ್ನು ಬಿಟ್ಟು ಹೋಗುವ ಇಚ್ಛೆ ಮಾಡಬೇಡಿರಿ । ಬಹಳ ಪುಣ್ಯಗಳಿಸಿದ ನಂತರ ಇಲ್ಲಿ ಜನ್ಮ ಪಡೆಯುವ ಭಾಗ್ಯವು ದೊರಕುತ್ತದೆ । ಅಲ್ಲಿಯ ಭೌತಿಕ ಶಾಸ್ತ್ರಕ್ಕಿಂತ ಇಲ್ಲಿಯ ಯೋಗಶಾಸ್ತ್ರವು ಸಮರ್ಥವಾಗಿದೆ । ಯಾರೂ ಯೋಗಶಾಸ್ತ್ರದಲ್ಲಿ ಪ್ರವೀಣನೋ ಅವನು ಭೌತಿಕ ಶಾಸ್ತ್ರಕ್ಕೆ ಬೆಲೆಕೊಡುವದಿಲ್ಲ। ಯೋಗಶಾಸ್ತ್ರದ ಅಧ್ಯಾತ್ಮ ವಿಚಾರಗಳು ಶ್ರೇಷ್ಠವಾಗಿವೆ । ಬೇರೆ ಕಡೆ ಹೋಗುವ ವಿಚಾರ ಬಿಟ್ಟು, ಅಧ್ಯಾತ್ಮ ಸಾಧನೆ ಮಾಡುವ ಪ್ರಯತ್ನ ಮಾಡಿರಿ। ಮಹಾರಾಜರ ಉಪದೇಶವನ್ನು ಕೇಳಿ, ಶ್ರೀಧರನು ನಿಸ್ಸಂದೇಹನಾದನು । ಶ್ರೀಧರನ ಪರಿವರ್ತನೆ ಮಾಡಿ, ಅವನ ವಿಚಾರ ಪಶ್ಚಿಮದಿಂದ ಪೂರ್ವಕ್ಕೆ ಮಹಾರಾಜರು ಬದಲಿಸಿದರು । ಸಂತರು ಸತ್ಯವನ್ನು ಅರಿತಿರುತ್ತಾರೆ, ಆದ್ದರಿಂದ ಅವರು ಮನುಷ್ಯರ ವಿಚಾರ ಪರಿವರ್ತನೆ ಮಾಡುವದರಲ್ಲಿ ಸಮರ್ಥರಿರುತ್ತಾರೆ। ಮಹಾರಾಜರು ಮುಂದೆ ನುಡಿದನು, ನಿನ್ನ ಅಭ್ಯುದಯ ಇಲ್ಲಿಯೇ ಆಗುವದು । ಕೊಲ್ಹಾಪುರದಲ್ಲಿ ನಿನ್ನ ಹೆಂಡತಿ ದಾರಿಕಾಯುತ್ತಿರುವಳು । ನಿನ್ನ ಮಿತ್ರನ






ಜೊತೆಗೆ ಕೊಲ್ಹಾಪುರಕ್ಕೆ ಮನೆಗೆ ಹೋಗು । ಮಹಾರಾಜರ ವಾಣಿ ನಿಜವಾಗಿ, ಶ್ರೀಧರನ ಇಚ್ಛೆ ಪೂರ್ಣವಾಯಿತು । ಅವನು ಬಿ.ಎ.ಎಮ್.ಎ. ಪಾಸಾಗಿ, ಶಿವಪುರಿ ಕಾಲೇಜಿನಲ್ಲಿ ಪ್ರಿನ್ಸಿಪಾಲನಾದನು । ಸಂತರು ಸಾಕ್ಷಾತ್ ಈಶ್ವರರು । ಯಾರಿಗೆ ಸಂತರ ಕೃಪಾಶೀರ್ವಾದ ದೊರಕುವದೋ ಅವರು ಧನ್ಯರು। ಶ್ರೀಧರ ಕಾಳೆ ಸಂತದರ್ಶನದಿಂದ ಸಂಪೂರ್ಣ ಬದಲಾದನು । ಸಂತರು ಇದೇ ಭೂಮಿಯ ಮೇಲೆ ನೆಲೆಸಿರುವರು । ನಂದನವನದ ವೃಕ್ಷವು ಬೇರೆ ಸ್ಥಳದಲ್ಲಿ ಬೆಳೆಯುವದು ಅಸಾಧ್ಯವೆಂಬುದು ತ್ರಿವಾರ ಸತ್ಯ । ಸ್ವತ್ತಿ ಶ್ರೀ ದಾಸಗಣು ವಿರಚಿತ ಈ ಶ್ರೀ ಗಜಾನನ ವಿಜಯವೆಂಬ ಗ್ರಂಥ ಭಾವಿಕ ಭಕ್ತರಿಗೆ ಯಾವಾಗಲೂ ಸತ್ಯದ ಮಾರ್ಗವನ್ನು ತೋರಿಸಲಿ ।

॥ ಶ್ರೀ ಹರಿಹರಾಪರ್ಣಮಸ್ತು॥ ಶುಭಂ ಭವತು ॥

॥ ಇಲ್ಲಿಗೆ ಹದಿನೈದನೆ ಅಧ್ಯಾಯವು ಮುಗಿಯಿತು ॥





ಕವರ ಪುತ್ರ ತ್ರ್ಯಂಬಕನು ಶ್ರೀ ಗಜಾನನ ಮಹಾರಾಜರಿಗೆ ರೊಟ್ಟಿ-ಉಳ್ಳಾಗಡ್ಡಿಯ ಊಟವನ್ನು ನೀಡುತ್ತಿದ್ದಾನೆ.

## || ಅಧ್ಯಾಯ ೧೬ ||

ಶ್ರೀ ಗಣೇಶಾಯನಮಃ । ಜಯ ಜಯ ಪರಶುಧರ, ಜಮದಗ್ನಿಕುಮಾರ । ಪರಶುರಾಮ, ಪರಮೇಶ್ವರ ನನಗೆ ಮರೆಯದಿರಿ। ತಾವು ಸಹಸ್ರಾರ್ಜುನನಿಗೆ ಶಿಕ್ಷೆ ಮಾಡಿ, ಸಜ್ಜನರನ್ನು ರಕ್ಷಿಸಿದಿರಿ। ಏಕೆಂದರೆ ಬ್ರಾಹ್ಮಣರ ಅವಮಾನ ತಾವು ಸಹಿಸಲಿಲ್ಲ। ಆದರೆ ಈಗ ಬ್ರಾಹ್ಮಣರ ಬಗ್ಗೆ ಏಕೆ ಅನಾಸಕ್ತಿ? ಈಗ ತಮಗೆ ಈ ಗಾಢನಿದ್ರೆ ಏಕೆ ಬಂದಿದೆ ? ಶ್ರೀ ಹರಿ, ಈಗ ಕಠಿಣ ಪ್ರಸಂಗವು ಬಂದಿದೆ। ಆದ್ದರಿಂದ ಕಣ್ಣು ತೆರೆದು, ನಮಗೆ ಸಹಾಯ ಮಾಡಿರಿ। ತಮ್ಮ ಕೃಪೆಯಿಲ್ಲದೇ, ನಮ್ಮ ಎಲ್ಲ ಪ್ರಯತ್ನಗಳು ವ್ಯರ್ಥ । ತಾವಿಲ್ಲದೇ ನಮ್ಮ ಆರ್ಯ ಸಂಸ್ಕೃತಿಯನ್ನು ಯಾರು ಕಾಪಾಡಬಲ್ಲರು ? ಗಜಾನನ ಮಹಾರಾಜರ ಅಪೂರ್ವ, ಅದ್ಭುತ ಕೃಪೆಯನ್ನು ಜನ ಸಾಮಾನ್ಯರು ತಿಳಿಯಲಾರರು । ಮುಂಡಗಾಂವದಲ್ಲಿ ಪುಂಡಲೀಕನೆಂಬ ಸಜ್ಜನ ಮಹಾರಾಜರ ಭಕ್ತನಿದ್ದನು। ಅವನು ಶೇಗಾಂವಿಗೆ ನಿಯಮಿತ ರೂಪದಿಂದ ಹೋಗುತ್ತಿದ್ದನು। ಮಹಾರಾಜರ ಬಗ್ಗೆ ಅಪಾರ ಶ್ರದ್ಧೆ ಇತ್ತು। ಅವನು ಭಾಗಾಬಾಯಿ ಎಂಬ ಠಾಕೂರನ ಹೆಂಡತಿ ಇದ್ದಳು। ಅವಳ ನಿಷ್ಠೆಯು ಸ್ಥಿರವಿರಲಿಲ್ಲ। ದಾಂಭಿಕಳಿದ್ದಳು । ದಾಂಭಿಕತೆಯಿಂದ ಪೂಜೆಯನ್ನು ಆಚರಿಸಿ ಅನೇಕ ಜನರಿಗೆ ಮಳ್ಳುಮಾಡಿದ್ದಳು । ಅದು ಅವಳ ವ್ಯವಸಾಯವೇ ಆಗಿತ್ತು। ಒಂದು ದಿನ ಅವಳು ಪುಂಡಲೀಕನಿಗೆ, ನಿನಗೆ ಗುರು ಇಲ್ಲ, ಆದ್ದರಿಂದ ನಿನ್ನ ಜನ್ಮವು ವ್ಯರ್ಥವಾಗಿದೆ ಎಂದಳು। ನೀನು ಗಜಾನನ ಮಹಾರಾಜರ ಕಡೆ ಅನೇಕ ಬಾರಿ ಹೋಗವಿ, ಅವರನ್ನು ಸದ್ಗುರು ಎಂದು ನಂಬಿರುವಿ, ಆದರೆ ಅವರು ನಿನಗೆ ಗುರುಮಂತ್ರ ಕೊಟ್ಟಿರುವರೆ ? ಅಧಿಕಾರಿ ಗುರುವಿನಿಂದ ಗುರುಮಂತ್ರ ದೊರಕುವವರೆಗೆ, ಗುರು ಇರುವದಾಗಿ ನಂಬುವದಿಲ್ಲ। ಶೇಗಾಂವಿಯ ನನ್ನ ಗಜಾನನ ಮಹಾರಾಜನು ಹುಚ್ಚ। ನಿನ್ನ ಜ್ವರವು ಕಡಿಮೆಯಾದ ಮಾತ್ರಕ್ಕೆ ಅವನನ್ನು ಪೂಜನೀಯ ಎಂದು ನಂಬಿರುವಿ। ಇದು ಕಾಕತಾಲೀಯ ನ್ಯಾಯ। ಅವನ ಮೇಲೆ ವಿಶ್ವಾಸ ಇಡಬೇಡ । 'ಗಿಣ ಗಿಣ ಗಣಾತ ಬೋತೆ' ಎಂಬ ಭಜನೆ, ಹುಚ್ಚರಂತೆ ವರ್ತನೆ, ಮತ್ತು ಯಾರು ಕೊಟ್ಟಿದ್ದೆಲ್ಲವನ್ನು ತಿನ್ನುವದು, ಇವು ಮತಿಭ್ರಷ್ಟ ಮನುಷ್ಯನ ಲಕ್ಷಣಗಳು । ಆದ್ದರಿಂದ ನಾನು ನಿನಗೆ ಅಂಜನಗುಂವಿನ ಸಂತ ಕೇಕಾಜಿಯ ಶಿಷ್ಯನನ್ನು ಗುರು ಮಾಡುವಂತೆ ಬಿನ್ನವಿಸುತ್ತೇನೆ । ನಾಳೆ ಅವರ ಕೀರ್ತನೆ ಅಂಜನಗಾಂವಿನಲ್ಲಿ ಇದೆ। ಅದನ್ನು ಕೇಳಲು ನಾಳೆ ಮುಂಜಾನೆ ನಾವು ಹೋಗೋಣ। ಗುರು, ಯಾವಾಗಲೂ ಮಹಾಜ್ಞಾನಿ, ಚಾತುರ್ಯ – ಶಾಸ್ತ್ರ

ಚಿಂತಾಮಣಿ, ಇರಬೇಕು । ಭಕ್ತ ಪಂಥವರಿಗೆ ಸರಿಯಾದ ದಾರಿ ತೋರಿಸುವಷ್ಟು ಗುರುವು ಪರಮಗುಣಿಯಾಗಿರಬೇಕು। ಈ ಗುಣಗಳು ಗಜಾನನ ಮಹಾರಾಜರಲ್ಲಿ ಇಲ್ಲ। ಆದ್ದರಿಂದ ತಡಮಾಡದೇ ಅಂಜನಗಾಂವಿಗೆ ಹೊರಡಿರಿ । ಪುಂಡಲೀಕ ಭೋಕರೆ ಭಾವಿಕ ಅಂತಃಕರಣದವನಿದ್ದನು । ಭಾಗಾಬಾಯಿ ತಮ್ಮ ಸಿಹಿ ಮಾತುಗಳಿಂದ ಅವನ ಮನಸ್ಸಿನಲ್ಲಿ ವಿಕಲ್ಪ ಉಂಟು ಮಾಡಿದಳು । ನಂತರ ಅವನು ನಾಳೆಯ ಕೀರ್ತನೆಯನ್ನು ಕೇಳುವದಾಗಿ ನಿರ್ಧರಿಸಿದನು । ಮುಂದಿನದು ಮುಂದೆ ನೋಡೋಣ। ಆದ್ದರಿಂದ ಅವನು ಭಾಗಾಬಾಯಿಗೆ ನಾನು ನಿನ್ನ ಜೊತೆಗೆ ನಾಳೆ ಬರುವೆನು ಎಂದು ತಿಳಿಸಿದನು। ಇಬ್ಬರು ಮರುದಿನ ಹೋಗುವದಾಗಿ ನಿರ್ಧರಿಸಿದರು । ಪುಂಡಲೀಕನು ರಾತ್ರಿ ಮಲಗಿದನು । ರಾತ್ರಿಯ ಮೂರನೆ ಪ್ರಹರದಲ್ಲಿ ಈ ಪ್ರರಕಾರವು ನಡೆಯಿತು । ಪುಂಡಲೀಕನ ಕನಸಿನಲ್ಲಿ ಒಬ್ಬ ಮಹಾರಾಜರಂತೆ ಕಾಣುವ ದಿಗಂಬರನು ಬಂದು ನಿಂತನು । ಅವನು ನುಡಿದನು, ಅರೇ ಪುಂಡಲೀಕ, ಅಂಜನಗಾಂವಿಗೆ ಏಕೆ ಹೋಗುವಿ ? ಭಾಗಾಬಾಯಿಯ ಮಾತುಗಳಿಗೆ ಮರುಳಾಗಿ ಗುರು ಮಾಡಲು ! ಈಗ ಹೋಗುವ ನಿಶ್ಚಯ ಮಾಡಿದ್ದರಿಂದ ಅಲ್ಲಿ ಹೋಗು । ಅವನ ಹೆಸರು ಕಾಶಿನಾಥ । ಆದರೆ ಅಲ್ಲಿ ಹೋದೊಡನೆ ನಿನ್ನ ಭ್ರಮೆಯು ದೂರಾಗುವದು । ಕಿವಿಯಲ್ಲಿ ಮಂತ್ರ ಹೇಳಿದ ಮಾತ್ರಕ್ಕೆ ಗುರು ಆಗುವದು ಸಾಧ್ಯವೇ ? ದಿನವಿಡಿ ಜನರು ಕಿವಿಮಾತುಗಳಲ್ಲಿ ಮಗ್ನರಾಗಿದ್ದ ಮಾತ್ರಕ್ಕೆ ಎಲ್ಲರೂ ಗುರು ಆಗಬೇಕು । ಪುಂಡಲೀಕ, ದಂಭಾಚಾರಕ್ಕೆ ಮರುಳಾಗಬೇಡ ನಿನಗೆ ನಿಜವಾಗಿ ಮಂತ್ರ ಬೇಕಿದ್ದರೆ, ನಿನ್ನ ಕಿವಿಯನ್ನು ನನ್ನ ಹತ್ತಿರ ತೆಗೆದುಕೊಂಡು ಬಾ । ನಾನು ನಿನಗೆ ಮಂತ್ರಕೊಡುವೆನು । 'ಗಣ ಗಣ' ಎನ್ನುತ್ತ ಮಹಾರಾಜರು ಸ್ತಬ್ಧರಾದರು । ನಂತರ ನುಡಿದರು, ನಿನಗೆ ಬೇಕಾಗಿದ್ದೆಲ್ಲವನ್ನು ನಾನು ನಿನಗೆ ಕೊಡುವೆನು । ಅದನ್ನು ಕೇಳಿ ಪುಂಡಲೀಕನು ಆನಂದಿತನಾದನು। ಪುಂಡಲೀಕನು ಸರಿಯಾಗಿ ನಿರೀಕ್ಷಿಸಿದರೆ, ಅವರು ಬೇರೆ ಯಾರಿರದೇ ಶೇಗಾಂವಿಯ ಗಜಾನನ ಮಹಾರಾಜರಿದ್ದರು । ಪುಂಡಲೀಕನು ನುಡಿದನು, ಗುರುರಾಜ, ನಿತ್ಯಪೂಜೆಗಾಗಿ ನಿಮ್ಮ ಪಾದುಕೆಗಳನ್ನು ಕೊಡಿರಿ । ನನಗೆ ಬೇರೆ ಯಾವ ಇಚ್ಛೆಯು ಇಲ್ಲ। ಮಹಾರಾಜರು ಈ ಪಾದುಕೆಗಳನ್ನು ತೆಗೆದುಕೊ । ನಾಳೆ ಎರಡನೆಯ ಪ್ರಹರಕ್ಕೆ ಪೂಜೆ ಮಾಡು । ಪುಂಡಲೀಕನು ಪಾದುಕೆಗಳನ್ನು ತೆಗೆದುಕೊಳ್ಳಲು ಎದ್ದು ಕುಳಿತರೆ ಅವನ ನಿದ್ದೆ ಮುರಿಯಿತು। ಎದ್ದು ಕುಳಿತು, ಎಲ್ಲ ದಿಕ್ಕಿನಲ್ಲಿ ನೋಡಿದರೂ ಅವನಿಗೆ ಮಹಾರಾಜರು ಅಥವಾ ಅವರ ಪಾದುಕೆಗಳು ಕಂಡು ಬರಲಿಲ್ಲ ಅವನಿಗೆ ಸಂಭ್ರಮೆಯಾಯಿತು । ಮನದಲ್ಲಿ ಸಂಶಯವು ಮನೆ ಮಾಡಿತು । ಈವರೆಗೆ ಮಹಾರಾಜರ ಶಬ್ದವು ಸುಳ್ಳಾಗಿಲ್ಲ







ಮಹಾರಾಜರು ಕನಸಲ್ಲಿ ದರ್ಶನ ನೀಡಿ ಭಾಗಾಬಾಯಿಯ ಬಗ್ಗೆ ಹೇಳಿದರು । ಅದೇ ರೀತಿ ನಾನೇ ಮಧ್ಯಾಹ್ನ ಪಾದುಕೆಗಳನ್ನು ತಂದು ಪೂಜೆ ಮಾಡಲೇ ? ಇದರೆ ನಾನು ಅವರ ಪಾದುಕೆಗಳನ್ನು ಬೇಡಿದ್ದು ಅವುಗಳನ್ನು ಅವರು ಕೊಟ್ಟಿದ್ದರು । ಹೀಗಿರುವಾಗ ಹೊಸ ಪಾದುಕೆಗಳನ್ನೇಕೆ ತರಲಿ ? ಈ ರೀತಿ ವಿಚಾರ ಮಾಡುತ್ತಿರುವಾಗ ಮುಂಜಾನೆ ಭಾಗಿ ಠಾಕುರತಿಯು ಅವನನ್ನು ಕರೆಯಲು ಬಂದಳು । ಬಂದೊಡನೆ ಅರುಣೋದಯವಾಗುತ್ತಿದೆ । ಈಗ ನಮಗೆ ಗುರೂಪದೇಶ ಪಡೆಯಲು ಹೊರಡಲೇ ಬೇಕು । ಆಗ ಪುಂಡಲೀಕನು ನಾನು ಅಂಜನಗಾಂವಿಗೆ ಬರುವದಿಲ್ಲ, ನಿನಗೆ ಬೇಕಿದ್ದರೇ ನೀನು ಹೋಗು ಎಂದನು । ನಾನು ಗಜಾನನ ಮಹಾರಾಜರನ್ನು ನ್ನ ಗುರು ಮಾಡಿದ್ದೇನೆ । ಅವರನ್ನು ಬಿಟ್ಟು ಬೇರೆ ಕಡೆ ಹೋಗುವದಿಲ್ಲ ಎಂದು ನಿಶ್ಚಯ ಮಾಡಿದ್ದೇನೆ । ಇದನ್ನು ಕೇಳಿ ಭಾಗಾಬಾಯಿ ಅಂಜನಗಾಂವಿಗೆ ಹೊರಟು ಹೋದಳು । ಇತ್ತ ಮುಂಡಗಾಂವಿನಲ್ಲಿ ನಡೆದ ಘಟನೆಯ ಬಗ್ಗೆ ಕೇಳಿರಿ । ಝ್ಯಾಮಸಿಂಗ ರಜಪೂತನು ಎರಡು ದಿನಗಳ ಹಿಂದೆಯೇ ಮಹಾರಾಜರ ಬಾಳಾಭಾವುಗೆ ಈ ಪಾದುಕೆಗಳನ್ನು ಪುಂಡಲೀಕನಿಗೆ ಕೊಡಲು ಝ್ಯಾಮಸಿಂಗನಿಗೆ ಕೊಡುವಂತೆ ಆಜ್ಞಾಪಿಸಿದರು । ಸಮರ್ಥರ ಆಜ್ಞೆಯಂತೆ ಬಾಳಾಭಾವು ನಡೆದನು । ಪಾದುಕೆಗಳನ್ನು ಝ್ಯಾಮಸಿಂಗನಿಗೆ ಕೊಡುವಾಗ ಬಾಳಾಭಾವು ನುಡಿದರು, "ನಿನ್ನ ಊರಿನಲ್ಲಿ ಪುಂಡಲೀಕ ಭೋಕರೆ ಎಂಬ ಸಜ್ಜನನು ಇರುವನು । ಅವನಿಗೆ ಪೂಜೆ ಮಾಡಲು ಇವುಗಳನ್ನು ಕೊಡು ।" ಝ್ಯಾಮಸಿಂಗನು ಹೇಳಿದ್ದನು ಕೇಳಿ ಪಾದುಕೆಗಳನ್ನು ತೆಗೆದುಕೊಂಡನು । ಝ್ಯಾಮಸಿಂಗನು ಮುಂಡಗಾಂವಿಗೆ ಬಂದನು । ಪುಂಡಲೀಕನು ಅವನಿಗೆ ದಾರಿಯಲ್ಲಿ ಭೆಟ್ಟಿಯಾಗಿ, ಮಹಾರಾಜರ ಕ್ಷೇಮ ಕುಶಲತೆಯನ್ನು ಅರಿತುಕೊಂಡು, ನಂತರ ಮಹಾರಾಜರು ತಮಗಾಗಿ ಏನಾದರು ಕೊಟ್ಟಿರುವರೋ ? ಎಂದು ಕೇಳಿದನು । ಇದನ್ನು ಕೇಳಿ ಝ್ಯಾಮಸಿಂಗನು ಆಶ್ಚರ್ಯ ಚಕಿತನಾದನು । ಅವನು ಪುಂಡಲೀಕನಿಗೆ ಮನೆಗೆ ಕರೆದುಕೊಂಡು ಹೋಗಿ ಪುನಃ ಕೇಳತೊಡಗಿದನು ನೀನು ಈ ಪ್ರಶ್ನೆಯನ್ನು ಏಕೆ ಕೇಳಿರುವಿ ? ಪುಂಡಲೀಕನು ತಮಗೆ ಬಿದ್ದ ಕನಸಿನ ಬಗ್ಗೆ ಹೇಳಿದ ಮೇಲೆ ಅವನ ಮನಸ್ಸಿನಲ್ಲಿಯ ಸಂಶಯವು ದೂರವಾಯಿತು । ಝ್ಯಾಮಸಿಂಗನು ಪಾದುಕೆಗಳನ್ನು ಕೊಟ್ಟನು । ಆ ಪಾದುಕೆಗಳು ಇಂದಿಗೂ ಅಲ್ಲಿ ಇವೆ । ನಂತರ ಪುಂಡಲೀಕನು ಮಧ್ಯಾಹ್ನ ಆ ಪಾದುಕೆಗಲ ಪೂಜೆಯನ್ನು ಮಾಡಿದನು । ಹೇ ಶ್ರೋತೃಗಳೇ ನಿಜ ಸಂತರು ಕೊಟ್ಟ ಮಾತನ್ನು ಈ ರೀತಿ ನೆರವೇರಿಸುತ್ತಾರೆ. ಜೊತೆಗೆ ತಮ್ಮ ಭಕ್ತನನ್ನು ದಾರಿ ತಪ್ಪದಂತೆ ಕಾಪಾಡುತ್ತಾರೆ । ತಮ್ಮ ಪ್ರಿಯ ಭಕ್ತನ ಇಚ್ಛೆಯನ್ನು ಮಹಾರಾಜರು ಯಾವ ರೀತಿ ಪೂರ್ಣಗೊಳಿಸು ತ್ತಾರೆ ಎಂಬುದನ್ನು ಈ ಕತೆಯ ರೂಪದಿಂದ ತಿಳಿದಿರುವಿರಿ । ಇರಲಿ । ಆಕೋಲಾ ಊರಿನಲ್ಲಿ ರಾಜಾರಾಮ ಕವರನೆಂಬ

ಬ್ರಾಹ್ಮಣನಿದ್ದನು, ಅವನು ಚಿನಿವಾರನಾಗಿದ್ದನು। ಅವನು ಬೆಳ್ಳಿಬಂಗಾರವನ್ನು ಖರೀದಿ – ವಿಕ್ರಿಯನ್ನು ಮಾಡುತ್ತಿದ್ದನು। ಈ ರಾಜಾರಾಮನ ಮೇಲೆ ಮಹಾರಾಜರಿಗೆ ಬಲು ಪ್ರೀತಿ । ಆದ್ದರಿಂದ ರಾಜಾರಾನ ಪುತ್ರರಿಬ್ಬರೂ ಮಹಾರಾಜರ ಭಕ್ತರಿದ್ದರು । ಅವರ ಹೆಸರು ತ್ರೈಂಬಕ ಹಾಗೂ ಗೋಪಾಲ । ಇಬ್ಬರು ಲವ–ಕುಶರ ಜೋಡಿಯಂತಿದ್ದರು । ಕಿರಿಯ ತ್ರೈಂಬಕ (ಭಾವು) ವೈದ್ಯಕೀಯ ಶಿಕ್ಷಣಕ್ಕಾಗಿ ಹೈದರಾಬಾದಿಗೆ ಹೋಗಿದ್ದನು । ಚಿಕ್ಕಂದಿನಿಂದಲೇ ತ್ರೈಂಬಕನಿಗೆ ದೇವರ ಪ್ರತಿ ಭಕ್ತಿಭಾವನೆ ಇತ್ತು। ಯಾವ ಸಂಕಟ ಬಂದರೂ ಅವನು ಭಾಗಾನಗರಿಯ ನದಿ ತೀರದ ಮೇಲೆ ಕುಳಿತು ಮಹಾರಾಜ ಧ್ಯಾನ ಮಾಡುತ್ತಿದ್ದನು । ಮತ್ತು ಚಿಕ್ಕಂದಿನಿಂದಲೇ ಭಾವು ಶೇಗಾಂವಿಯ ಗಜಾನನ ಮಹಾರಾಜರನ್ನು ತಮ್ಮ ಆರಾಧ್ಯ ದೇವರೆಂದು ನಂಬಿದ್ದನು । ಒಮ್ಮೆ ರಜೆಯಲ್ಲಿ ಅವನು ಮನೆಗೆ ಬಂದನು ಯ ಶೇಗಾಂವಿಗೆ ಹೋಗಿ ಮಹಾರಾಜರಿಗೆ ಊಟ ಉಣ್ಣಿಸುವ ಇಚ್ಛೆ ಅವನ ಮನಸ್ಸಿನಲ್ಲಿ ಬಂದಿತು । ಮಹಾರಾಜರಿಗೆ ಅವರ ಪ್ರೀಯ ವಸ್ತುಗಳನ್ನೇ ತಿನ್ನಿಸಬೇಕು । ಆದರೆ ನನ್ನ ಇಚ್ಛೆ ಸಫಲವಾಗುವದು ಹೇಗೆ ಸಾಧ್ಯ ? ಎಂದು ಚಿಂತಿಸತೊಡಗಿದನು । ಭಾವು ಮನಸ್ಸಿನಲ್ಲಿಯೇ, ಮಹಾರಾಜರಿಗೆ ಬಿನ್ನವಿಸಿದನು, ಹೇ ಗುರುನಾಥ, ನನ್ನ ಇಚ್ಛೆ ಪೂರ್ಣಗೊಳ್ಳುವದು ಹೇಗೆ ಸಾಧ್ಯ ? ನನ್ನ ತಾಯಿ ನಾನು ಚಿಕ್ಕವನಿದ್ದಾಗಲೇ ಬಿಟ್ಟು ಹೋದಳು । ಮನೆಯಲ್ಲಿ ನನಗಾಗಿ ಯಾರಿಲ್ಲ । ಮನೆಯಲ್ಲಿ ಅಣ್ಣನ ಹೆಂಡತಿ ಇರುವಳು । ಅವಳು ಬಲು ಕೋಪಿ । ಹೇ ಗುರುರಾಯ, ನಾನು ತಮಗೆ ಇಷ್ಟವಿರುವ ವಸ್ತುಗಳನ್ನೇ ತಿನ್ನಿಸ ಬಯಸುತ್ತೇನೆ । ಆದರೆ ಈ ಪದಾರ್ಥಗಳನ್ನು ಮಾಡಲು ನನ್ನ ಅತ್ತಿಗೆಗೆ ಹೇಗೆ ಹೇಳಲಿ ? ಕೇವಲ ತಾಯಿಯ ಹತ್ತಿರ ಮಾತ್ರ ಬಾಲಕನು ಹಟ ಹಿಡಿಯಬಹುದು । ಮನದಲ್ಲಿಯ ಇಚ್ಛೆ ಯಾವ ರೀತಿ ಪೂರ್ಣವಾಗಬಹುದು, ಎಂಬ ವಿಚಾರ ಮಾಡುತ್ತ ಉದಾಸೀನನಾದನು । ಅಷ್ಟರಲ್ಲಿ ಯಾವದೋ ಕೆಲಸಕ್ಕಾಗಿ 'ನಾನಿ' ಅಲ್ಲಿ ಬಂದಳು । ಮೈದುನನ ಕಳೆಗುಂದಿದ ಮುಖವನ್ನು ನೋಡಿ ಅವಳು ನುಡಿದಳು ಯಾವ ಚಿಂತೆಯಿಂದ ಮುಖವು ಕಳೆಗುಂದಿದೆ ? ಆಗ ಭಾವು ದೀನನಾಗಿ ನುಡಿದನು, ಅತ್ತಿಗೆ ಮನಸ್ಸಿನಲ್ಲಿಯ ಮಾತನ್ನು ಹೇಗೆ ಹೇಳಲಿ ? ಕೈಯಲ್ಲಿ ಅಧಿಕಾರ ಇರದಿದ್ದರೆ, ಇಚ್ಛೆ ಪೂರ್ಣವಾಗುವದು ಸಾಧ್ಯವಿಲ್ಲ। ಆದ್ದರಿಂದ ನನ್ನ ಮನದಲ್ಲಿಯ ಇಚ್ಛೆಯನ್ನು ವ್ಯಕ್ತಪಡಿಸಲಾರೆ । ಆಗ ನಾನಿ ನುಡಿದಳು, ಕೊನೆಯ ಪಕ್ಷ ನಿನ್ನ ಮನದಲ್ಲಿಯ ಮಾತನ್ನು ಹೇಳು ನೀನು ನನ್ನ ಮೈದುನನಾಗಿ ನನ್ನಿಂದ ಏಕೆ ಮಾತನ್ನು ಮುಚ್ಚಿಡುವಿ? ಅಣ್ಣನು ತಂದೆಯ ಸಮಾನ ಹಾಗೂ ಅತ್ತಿಗೆಗೆ ತಾಯಿಯ ಸಮಾನ । ಈ ಮಾತು ನೀನು ಅರಿತಿಲ್ಲವೇ ? ನಾನಿಯ ಈ





ಮಾತುಗಳಿಂದ ಧೈರ್ಯ ಬಂದು ಭಾವು ನಕ್ಕು ನುಡಿದನು, 'ಹೇ ನಾನಿ, ಮಹಾರಾಜರಿಗೆ ಪ್ರಿಯವಿರುವ ಪದಾರ್ಥಗಳನ್ನು ಮಾಡಿ ಅವರಿಗೆ ತಿನ್ನಿಸುವ ಇಚ್ಛೆ ನನ್ನ ಮನಸ್ಸಿನಲ್ಲಿದೆ । ತಾವು ಆ ಪದಾರ್ಥಗಳನ್ನು ಮಾಡಿಕೊಟ್ಟರೆ ತಮಗೆ ಪುಣ್ಯವು ದೊರಕುವದು ಮತ್ತು ನನ್ನ ಕೆಲಸವು ಆಗುವದು । ಒಂದೇ ಕಲ್ಲಿನಲ್ಲಿ ಎರಡು ಪಕ್ಷಿಗಳು । ಮೈದುನನ ಈ ಸಣ್ಣ ಇಚ್ಛೆಯನ್ನು ಕೇಳಿ ನಾನಿ ಜೋರಾಗಿ ನಕ್ಕು ನುಡಿದಳು, ಈ ಸಣ್ಣ ಮಾತಿಗಾಗಿ ನೀನು ಚಿಂತಾಕ್ರಾಂತನಾನಗಿ ಕುಳಿತಿದ್ದಿ । ಈಗ ಹಿಂದೆ ಮುಂದೆ ನೋಡದೇ ಯಾವ ಪದಾರ್ಥಗಳನ್ನು ಮಾಡಬೇಕು ಎಂಬುದಾಗಿ ಹೇಳು । ಮಹಾರಾಜರ ಕೃಪೆಯಿಂದ ಮನೆಯಲ್ಲಿ ಎಲ್ಲ ಸಾಧನ ಸಾಮಗ್ರಿಗಳಿವೆ । ಇದನ್ನು ಕೇಳಿ ಭಾವು ತನ್ನ ಇಚ್ಛೆಯನ್ನು ವ್ಯಕ್ತಪಡಿಸಿದನು । ನಾನಿ ಆನಂದದಿಂದ ಅಡಿಗೆ ಮಾಡತೊಡಗಿದಳು । ಕೆಲ ಸಮಯದ ನಂತರ ಅವಳು ಪಲ್ಯೆ, ಜೋಳದ ರೊಟ್ಟಿ, ಮೆಣಸಿನಕಾಯಿ ಇತ್ಯಾದಿ ಅವನ ಮುಂದೆ ಇಟ್ಟಳು । ಬೆಣ್ಣೆ ಹಚ್ಚಿದ ಮೂರು ರೊಟ್ಟಿ, ಮೂರು ಉಳ್ಳಾಗಡ್ಡಿ, ಮತ್ತು ಕಡಲೆ ಹಿಟ್ಟಿನ ಝುಣಕವನ್ನು ಮೈದುನನ ಮುಂದೆ ಇಟ್ಟು, ನಾನಿ ಶೇಗಾಂವಿಗೆ ಹೊರಡುವ ರೈಲು ಬಿಡುವ ಸಮಾಯವಾಗುತ್ತಿದೆ ಬೇಗ ಹೊರಡು ! ಈ ರೈಲು ತಪ್ಪಿದರೆ ಬಲು ಕಷ್ಟ । ಏಕೆಂದರೆ ಮಹಾರಾಜರ ಊಟದ ಸಮಯಕ್ಕೆ ನೀನು ಅಲ್ಲಿ ತಲುಪಬೇಕು । ನಾನಿಯ ಮಾತುಗಳನ್ನು ಕೇಳಿ ಅಣ್ಣನಿಂದ ಅಪ್ಪಣೆ ಪಡೆದು ಸ್ಟೇಶನ್ನಿಗೆ ಬಂದನು । ಅಲ್ಲಿ ನೋಡಿದರೆ ಹನ್ನೆರಡು ಘಂಟೆಯ ರೈಲು ಹೋಗಿತ್ತು । ಅದನ್ನು ನೋಡಿ ಭಾವಿ ದುಃಖಿತನಾದನು । ಮುಖದ ಮೇಲೆ ನಿರಾಶೆ ಹಾಗೂ ಕಣ್ಣೀರು ಸುರಿಯತೊಡಗಿದವು । ಮಹಾರಾಜರ ಮೂರ್ತಿಯನ್ನು ಕಣ್ಣಿನ ಮುಂದೆ ತಂದು, ನುಡಿದನು, ಮಹಾರಾಜ, ನನ್ನಿಂದ ಏಕೆ ಮುಖ ಮರೆಯಿಸಿದಿರಿ ? ನಾನು ಹೀನ ದೀನನು । ನನ್ನಿಂದ ಯಾವ ಪುಣ್ಯಕರ್ಮವೂ ಸಾಧ್ಯ? ನನ್ನಂತಹ ಕಾಗೆಯು ಮಾನಸ ಸರೋವರದ ಬಗ್ಗೆ ಆಶೆಯಿಟ್ಟು ಏನು ಪ್ರಯೋಜನ ? ಹೇ ಗುರುರಾಜ, ನನ್ನಿಂದ ಯಾವ ಪಾಪಕರ್ಮ ನೆರವೇರಿತು, ಆದ್ದರಿಂದ ನನ್ನ ರೈಲು ತಪ್ಪಿತು ! ನನ್ನ ದುರ್ಭಾಗ್ಯದಿಂದಲೇ ಈ ಸ್ಥಿತಿ ಬಂದಿತು । ನನ್ನ ಹಣೆಬರಹದಲ್ಲಿ ಗುರು ಸೇವೆಯು ಇಲ್ಲ । ನನ್ನ ಬಳಿ ಇರುವ ೯ ನೈವೇದ್ಯವನ್ನು ತಾವು ಸೇವಿಸದಿದ್ದರೆ ನಾನು ಊಟ ಮಾಡುವದಿಲ್ಲ । ಇದು ಕಲ್ಲಿನ ಮೇಲೆಳೆದ ಗೆರೆ ! ಹೇ ಗುರುರಾಜ, ಹೇ ಕೃಪಾಸಾಗರ, ನನ್ನ ಅವಹೇಳನೆ ಮಾಡದಿರಿ। ನನ್ನ ನೈವೇದ್ಯವನ್ನು ಸ್ವೀಕರಿಸಲು ಕೂಡಲೆ ಬನ್ನಿರಿ । ತಮ್ಮ ಅಪರಿಮಿತಿ ಶಕ್ತಿಯಿಂದ ತಾವು ಕ್ಷಣಮಾತ್ರದಲ್ಲಿ ನಮಗೆ ಕೇದಾರ ದರ್ಶನ ಮಾಡಸಬಲ್ಲಿರಿ । ಹಾಗಿರುವಾಗ ಇಲ್ಲಿ ಬರಲು ಬೇಸರವೇಕೆ ? । ನಾನು ತಮಗೆ ಆಜ್ಞೆ ಮಾಡದಿದ್ದರೂ,

ಪ್ರೇಮದಿಂದ ಪ್ರಾರ್ಥಿಸುತ್ತೇನೆ । ಇದಕ್ಕೆ ಅವಮಾನವೆಂದು ತಿಳಿಯದಿರಿ । ಎರಡನೆಯ ಗಾಡಿ ಇಲ್ಲಿಗೆ ಬರಲು ಎರಡು ಘಂಟೆ ಅವಕಾಶವಿದೆ । ಅಷ್ಟರಲ್ಲಿ ತಾವು ಊಟ ಮಾಡಿರುವಿರಿ । ಈ ರೀತಿ ವಿಚಾರ ಮಾಡುತ್ತ ಅವನು ಖಾಲಿ ಹೊಟ್ಟೆಯಲ್ಲಿ ನಾಲ್ಕನೆಯ ಪ್ರಹರಕ್ಕೆ ಶೇಗಾಂವಿಗೆ ತಲುಪಿದನು । ಕೂಡಲೇ ಅವನು ದರ್ಶನಕ್ಕಾಗಿ ಹೋದನು । ಅವನು ನೋಡಿದರೆ ಮಹಾರಾಜರು ಆಸನದ ಮೇಲೆ ಕುಳಿತಿದ್ದು ಅವರು ಊಟ ಮಾಡುವದು ಬಾಕಿ ಇತ್ತು । ನೈವೇದ್ಯದ ಪಕ್ವಾನ್ನಗಳಿಂದ ತುಂಬಿದ ತಟ್ಟೆಗಳು ಮಠದಲ್ಲಿ ಹಾಗೆಯೇ ಇದ್ದವು ಅವುಗಳ ವರ್ಣನೆ ಯಾರಿಂದ ಸಾಧ್ಯ ? ಜೀಲೇಬಿ, ಘೇವರ, ಮೋತಿಚೂರದ ಉಂಡೆ, ಪಾಯಸ, ಶ್ರೀಖಂಡ–ಪುರಿ ಇತ್ಯಾದಿಗಳಿದ್ದವು । ಆದರೆ ಮಹಾರಾಜರು ಅವುಗಳಿಗೆ ಸ್ಪರ್ಶ ಮಾಡಲಿಲ್ಲ । ಬಾಳಾಭಾವು ಒಂದರ ನಂತರ ಒಂದು ತಟ್ಟೆಯನ್ನು ಇಟ್ಟರೂ ಮಹಾರಾಜರು ಸ್ಪರ್ಶ ಮಾಡಲಿಲ್ಲ ಮತ್ತು ಈ ರೀತಿ ಮಧ್ಯಾಹ್ನವು ಕಳೆದು ಹೋಯಿತು । ಆಗ ಅವನು ಮಹಾರಾಜರಿಗೆ ನುಡಿದನು, ನೀವು ಆಹಾರ ಸೇವಿಸದ ಹೊರತು ಉಳಿದ ಭಕ್ತರು ಆಹಾರ ಹೇಗೆ ಸೇವಿಸಬಲ್ಲರು ? ಯಾರು ತಟ್ಟೆಗಳನ್ನು ತಂದಿರುವರೋ ಅವರು ಪ್ರಸಾದಕ್ಕಾಗಿ ಹಾದಿ ಕಾಯುತ್ತಿದ್ದಾರೆ । ಅವರಲ್ಲಿ ಮುಂದೆ ಬಂದು ಮಾತನಾಡುವ ಧೈರ್ಯವಿಲ್ಲ ಆದ್ದರಿಂದ ನಾನು ವಿನಯಿಸುತ್ತಿದ್ದೇನೆ । ಆಗ ಮಹಾರಾಜರು ಸ್ವಲ್ಪ ತಡೆಯಿರಿ ಎಂದರು । ನನ್ನ ಭೋಜನವು ನಾಲ್ಕನೆಯ ಪ್ರಹರಕ್ಕೆ ಆಗುವದು । ಅವರು ತಡೆಯಲಾರದಿದ್ದರೇ ತಮ್ಮ ತಟ್ಟೆಗಳನ್ನು ತೆಗೆದುಕೊಂಡು ಹಿಂದಕ್ಕೆ ಹೋಗಬಹುದು । ನನಗೆ ಯಾರ ಚಿಂತೆಯಿಲ್ಲ । ಈ ರೀತಿ ಮಾತುಗಳು ನಡೆದಾಗ ಭಾವು ಅಲ್ಲಿಗೆ ತಲುಪಿದನು । ಮಹಾರಾಜರನ್ನು ನೋಡಿ ಅವನು ಮನಸ್ಸಿನಲ್ಲಿಯೇ ಆನಂದಿತನಾದನು ಆಕಳನ್ನು ಕಳೆದುಕೊಂಡ ಕರುವಿಗೆ ಅದನ್ನು ಕಂಡಾಗ ಆದ ಸ್ಥಿತಿ, ಮಹಾರಾಜರನ್ನು ಕಂಡಾಗ ಭಾವುನ ಸ್ಥಿತಿಯಾಗಿತ್ತು । ಮಹಾರಾಜರ ಬಳಿಗೆ ಹೋಗಿ ಸಾಷ್ಟಾಂಗ ನಮಸ್ಕಾರ ಮಾಡಿ, ಮಹಾರಾಜರ ಆಜ್ಞೆಯ ದಾರಿ ಕಾಯತೊಡಗಿದನು, ಆಗ ಮಹಾರಾಜರು ನಕ್ಕು, ನನಗೆ ಭೋಜನಕ್ಕೆ ಆಮಂತ್ರಣ ಕೊಡುವ ನಿನ್ನ ಪದ್ಧತಿ ವಿಶೇಷ ಎಂದರು । ಇದೇನು ಊಟ ಮಾಡುವ ಸಮಯವೆ ? ನಾನು ಈವರೆಗೆ ನಿನ್ನ ದಾರಿ ಕಾಯುತ್ತ ಹಸಿದಿದ್ದೇನೆ । ಈಗ ಕೂಡಲೇ ನನ್ನ ಊಟ ತೆಗೆದುಕೊಂಡು ಬಾ । ಮಹಾರಾಜರ ಮಾತುಗಳನ್ನು ಕೇಳಿ, ನಾಚಿಕೆಯಿಂದ ನುಡಿದನು, ಮಹಾರಾಜ ನಾನೇನು ಮಾಡಲಿ, ನನ್ನ ರೈಲು ತಪ್ಪಿತು । ಆಗ ಬಾಳಾಭಾವು ನುಡಿದನು ಆಗ ಚಿಂತಿಸಬೇಡ । ಏನು ತಂದಿರುವಿ ? ತೋರಿಸು । ಏನು ತಂದಿರುವೆಯೋ ಅದನ್ನೇ ನೀಡೋಣ ? ಇದನ್ನು ಕೇಳಿ ಅವನು ಮಹಾರಾಜರ ಮುಂದೆ





ಉಳ್ಳಾಗಡ್ಡಿ ಪಲ್ಯೆ ಮತ್ತು ರೊಟ್ಟಿಗಳನ್ನು ಇಟ್ಟನು । ಅವುಗಳಲ್ಲಿಯ ಎರಡು ರೊಟ್ಟಿಗಳನ್ನು ಮಹಾರಾಜರು ಸೇವಿಸಿದರು ಮತ್ತು ಒಂದು ರೊಟ್ಟಿಯನ್ನು ಪ್ರಸಾದವೆಂದು ಎಲ್ಲರಿಗೆ ಹಂಚಿದರು । ಇದನ್ನು ನೋಡಿ ಎಲ್ಲರಿಗೆ ಆಶ್ಚರ್ಯವಾಯಿತು । ಮತ್ತು ಮಹಾರಾಜರ ಭಕ್ತವತ್ಸಲತೆಯನ್ನು ಅರಿತರು। ಹಸ್ತಿನಾಪುರದ ರಾಜ ದರಬಾರದ ಆದರ ಸತ್ಕಾರವನ್ನು ಬಿಟ್ಟು ಭಗವಾನ್ ಶ್ರೀಕೃಷ್ಣನಿಗೆ ವಿದುರನ ಮನೆಯ ಹುರಳಿಯ ನುಚ್ಚು ಪಕ್ವಾನ್‌ಗಳಿಗಿಂತ ಮಿಗಿಲೆನಿಸಿತು । ಇದೇ ರೀತಿ ಇಲ್ಲಾಯಿತು । ಭಕ್ತರ ಮನದಲ್ಲಿ ನಮ್ಮ ಪಕ್ವಾನ್ನಗಳಿಗಿಂತ ಮಹಾರಾಜರಿಗೆ ಭಾವು ತಂದ ಒಣ ರೊಟ್ಟಿ ಹೆಚ್ಚು ಪ್ರಿಯವೆನಿಸಿತು । ಶೇಗಾಂವಿಯಲ್ಲಿ ಭಾವು ಪ್ರಸಾದ ಸೇವಿಸಿದನು । ಒಳ್ಳೆಯದರ ಪ್ರತಿ ಸದ್ಭಾವವಿದ್ದರೆ ಈ ಫಲವು ಸಿಗುತ್ತದೆ। ಯೋಗ್ಯ ಸಮಯಕ್ಕೆ ಮಹಾರಾಜರು ಭಾವುಗೆ ಆಶೀರ್ವಾದ ಕೊಟ್ಟು, ಅಕೋಲಾಗೆ ಹೊರಡುವಂತೆ ಆಜ್ಞಾಪಿಸಿದರು। ಮುಂದಿನ ವರ್ಷ ನೀನು ವೈದ್ಯಕೀಯ ಪರೀಕ್ಷೆಯಲ್ಲಿ ಉತ್ತೀರ್ಣನಾಗುವಿ । ಹೋಗುವಾಗ ಭಾವು ಮಹಾರಾಜರಲ್ಲಿ ನಾನು ಯಾವದೇ ಕಾರಣದಿಂದ ಇಲ್ಲಿ ಬರದಿದ್ದರೆ ತಮ್ಮ ಆಶೀರ್ವಾದವು ಸದೈವ ನನ್ನ ಮೇಲೆ ಇರಲಿ ಎಂದು ಬಿನ್ನವಿಸಿದನು । ತಮ್ಮ ಈ ದಿವ್ಯ ಚರಣಗಳು ನನ್ನ ಸರ್ವಸ್ವ । ತಮ್ಮ ಚಿಂತನೆಯು ಯಾವಾಗಲೂ ಇರಲಿ ಎಂಬುದೇ ಪ್ರಾರ್ಥನೆ । ಈ ರೀತಿ ನುಡಿದು ಮಹಾರಾಜರಿಂದ ಬೀಳ್ಕೊಟ್ಟು, ಅಕೋಲಾಗೆ ಹಿಂದಿರುಗಿದನು । ಮಹಾರಾಜರು ಎಂದಿಗೂ ಭಕ್ತರನ್ನು ಉಪೇಕ್ಷಿಸುವದಿಲ್ಲ । ತುಕಾರಾಮ ಶೇಗೋಕಾರ ಶೇಗಾಂವಿಯ ರಹಿವಾಸಿ । ಅವನು ರೈತನಾಗಿದ್ದನು ಮತ್ತು ಮಹಾರಾಜರ ಪ್ರತಿ ಶ್ರದ್ಧೆ ಇತ್ತು । ಅವನ ಮನೆಯ ಸ್ಥಿತಿ ಒಳ್ಳೆಯದಿರಲಿಲ್ಲ । ಇಡೀ ದಿನ ಹೊಲದಲ್ಲಿ ಕೆಲಸ ಮಾಡಿ ಸಂಜೆಗೆ ಮಹಾರಾಜರ ದರ್ಶನಕ್ಕೆ ಮಠದಲ್ಲಿ ನಿಯಮಿತವಾಗಿ ಹೋಗುತ್ತಿದ್ದನು । ಅಲ್ಲಿ ಅವರ ಚಿಲುಮೆ ತುಂಬಿ ಕೊಡುತ್ತಿದ್ದನು, ಮಹಾರಾಜರ ದರ್ಶನ ಪಡೆದು, ಅವರ ಸೇವೆ ಮಾಡಿ ನಂತರ ಹೊರಡುತ್ತಿದ್ದನು । ಈ ರೀತಿ ಅವನ ನಿತ್ಯ ಕರ್ಮವು ಅನೇಕ ದಿನ ನಡೆದಿತ್ತು । ಆಗುವದನ್ನು ಯಾರು ತಡೆಯಬಲ್ಲರು । ವಿಧಿ ಲಿಖಿತದಲ್ಲಿ ಬರೆದಂತೆಯೇ ಆಗುತ್ತದೆ । ತುಕಾರಾಮ ತಮ್ಮ ಹೊಲದಲ್ಲಿ ಕೆಲಸ ಮಾಡುತ್ತಿದ್ದನು । ಒಂದು ದಿನ ಒಬ್ಬ ಶಿಕಾರಿ ಬೇಟೆಯಾಡಲು ಬಂದನು । ಅವನ ಬೆನ್ನಿನ ಮೇಲೆ ಬಂದೂಕು ಇತ್ತು ಮತ್ತು ಅವನು ಬೇಟೆಯಾಡುತ್ತಿದ್ದನು । ಅದು ಮುಂಜಾನೆಯ ಸಮಯ । ಅರುಣೋದಯವಾಗುತ್ತಿತ್ತು । ತುಕಾರಾಮ ತಮ್ಮ ಹೊಲದಲ್ಲಿ ಕುಳಿತಿದ್ದನು ಆ ಶಿಕಾರಿಯು ನೋಡಿದನು। ಶಿಕಾರಿಯು ಬಂದೂಕಿನಿಂದ ಗುಂಡು ಹಾರಿಸಿದನು । ಅವುಗಳಿಂದ ಮೂಲವು ಸತ್ತಿತು । ಆದರೆ ಒಂದು ಗುಂಡು

ತುಕಾರಾಮನ ಕಿವಿಯ ಹಿಂಬದಿಯಿಂದ ತಲೆಯಲ್ಲಿ ನುಗ್ಗಿತು । ತಲೆಯಲ್ಲಿ ನುಗ್ಗಿದ ಗುಂಡು ವೈದ್ಯಕೀಯ ಉಪಾಯಗಳಿಂದ ಹೊರಡಲಿಲ್ಲ । ಅದರಿಂದಾಗಿ ತುಕಾರಾಮನಿಗೆ ಯಾವಾಗಲೂ ವೇದನೆಯಾಗುತ್ತಿತ್ತು । ತಲೆ ನೋವಿನಿಂದ ನಿದ್ದೆ ಬರುತ್ತಿರಲಿಲ್ಲ । ವೇದನೆಯು ಅಸಹ್ಯವಾಗುತ್ತಿತ್ತು । ಆ ಅವಸ್ಥೆಯಲ್ಲಿ ಯಾವದೋ ಭಕ್ತನು ತುಕಾರಾಮನಿಗೆ ಮಠದಲ್ಲಿ ಹೋಗಿ ಮಹಾರಾಜರ ದರ್ಶನೆಯನ್ನು ಪಡೆದರೆ ನೋವು ಕಡಿಮೆಯಾಗುವದು ಎಂದನು। ಈಗ ಡಾಕ್ಟರ್–ವೈದ್ಯರನ್ನು ಬಿಟ್ಟು ಬಿಡು । ಸಂತರ ಚರಣಗಳಲ್ಲಿ ಇವನನ್ನು ಸಮರ್ಪಿಸಿರಿ । ಏಕೆಂದರೆ ಸಂತರ ಚರಣ ಸೇವೆಯೇ ನಿಜ ಉಪಾಯ । ಸಂತರ ಕೃಪೆಯಾದರೆ ಅವನ ಚಿಂತೆ ದೂರಾಗುವದು । ಕಸ ಗುಡಿಸಿ ಮಠವನ್ನು ಸ್ವಚ್ಛಗೊಳಿಸುವ ಕೆಲಸಮಾಡಬೇಕು । ಆದರೆ ತಮ್ಮ ತಂದೆಯಂತೆ ಈ ಕೆಲಸವನ್ನು ದಾಂಭಿಕತೆಯಿಂದ ಮಾಡಬಾರದು। ಈ ಕೆಲಸವನ್ನು ಶುದ್ಧ ಅಂತಃಕರಣದಿಂದ ನಿರಾಸಕ್ತನಾಗಿ ಮಾಡಬೇಕು । ತುಕಾರಾಮನಿಗೆ ಈ ಮಾತು ಸರಿಯೆನಿಸಿತು । ಅಂದಿನಿಂದ ಅವನು ಮಠವನ್ನು ಗೂಡಿಸುವ ಕೆಲಸ ಆರಂಭಿಸಿದನು । ಮಠವನ್ನು ಕನ್ನಡಿಯಂತೆ ಇಡುತ್ತಿದ್ದನು । ಈ ರೀತಿ ಅವನು ಈ ಕೆಲಸವನ್ನು ಹದಿನಾಲ್ಕು ವರ್ಷ ಮಾಡಿದನು । ತುಕಾರಾಮನು ಸೇವೆಯ ಫಲವು ದೊರಕಿತು । ಒಂದು ದಿನ ಚಮತ್ಕಾರವಾಯಿತು । ತುಕಾರಾಮನು ಮಠವನ್ನು ಗುಡಿಸುತ್ತಿರುವಾಗ, ಒಮ್ಮೆಲೆ ಗುಂಡು ಕಿವಿಯಿಂದ ಹೊರಗೆ ಬಿದ್ದಿತು । ಯಾವ ರೀತಿ ಬೀಜವು ಹಾರಿ ಬೀಳುವದೋ ಅದೇ ರೀತಿ । ಗುಂಡು ಹೊರಬಿದ್ದ ನಂತರ ನಿಧಾನವಾಗಿ ತಲೆನೋವು ಕಡಿಮೆಯಾಯಿತು । ಇದು ಅನಾಸಕ್ತ ಸೇವೆಯ ಫಲ । ತುಕಾರಾಮನು ಕಸಗುಡಿಸುವ ಕೆಲಸವನ್ನು ಕೊನೆಯ ಗಳಿಗೆಯವರೆಗೆ ಮಾಡಿದನು । ಅನುಭೂತಿ ಇಲ್ಲದೇ ಪರಮಾರ್ಥದ ಜೊತೆಗೆ ಶ್ರದ್ಧೆಯು ಉಂಟಾಗುವದಿಲ್ಲ ಒಮ್ಮೆ ಶ್ರದ್ಧೆಯು ಉಂಟಾದ ಮೇಲೆ ಅದು ಸ್ಥಾಯಿ ಭಾವವಾಗುತ್ತದೆ । ಸಂತ ಸೇವೆಯು ಸರ್ವ ಶ್ರೇಷ್ಠ । ಇಲ್ಲಿಗೆ ಶ್ರೀ ಗಜಾನನ ವಿಜಯ ಎಂಬ ಗ್ರಂಥ ಸಾಧಕರಿಗೆ ಸಹಾಯ ಮಾಡಲಿ ಎಂಬುದು ಇಚ್ಛೆ ।

|| ಶುಭಂ ಭವತು || ಶ್ರೀ ಹರಿಹರಾರ್ಪಣಮಸ್ತು ||






ಶ್ರೀ ಗಜಾನನ ಮಹಾರಾಜರು ಹೆಣ್ಣು ಮಕ್ಕಳ ಡಬ್ಬಿಯಿಂದ ಕೆಳಗೆ ಇಳಿದು ಕುಳಿತರು. ಸ್ಟೇಶನ್ ಮಾಸ್ತರರು ಅವರ ಮನವೊಲಿಸುತ್ತಿದ್ದಾರೆ.

## ॥ ಅಧ್ಯಾಯ ೧೭ ॥

ಶ್ರೀ ಗಣೇಶಾಯನಮಃ । ಜಯಜಯಾಜಿ ಮಹಾಮಂಗಲ, ಜಯಜಯಾಜಿ ಭಕ್ತಪಾಲಕ । ಜಯ ಜಯಾಜಿ ತಮಾಲನೀಲ। ಪತಿತ ಪಾವನ ನರಹರ। ಹಿರಣ್ಯಕಶ್ಯಪು ಮಹಾಕೂರ್ರ, ಸಜ್ಜನರ ಮಹಾಕ್ರೂರ, ಸಜ್ಜನರ ಮಹಾಶತ್ರು। ಹೊಟ್ಟೆ ಹರಿದು ಅವನಿಗೆ ಯಮಸದನಕ್ಕೆ ಅಟ್ಟಿದಿರಿ । ಭಕ್ತ ಪ್ರಲ್ಹಾದನ ರಕ್ಷಣೆ ಮಾಡಲು ತಾವು ಸ್ಥಂಭದಲ್ಲಿ ಪ್ರಕಟರಾದಿರಿ। ಭಯಂಕರ ಹಲ್ಲು ಹಾಗೂ ದವಡೆಗಳನ್ನು ತೋರಿಸುತ್ತ। ಕುತ್ತಿಗೆಯ ಮೇಲೆ ಮೇನ ಹಾಗೂ ಕೆಂಡದಂತೆ ಸಂಪೂರ್ಣ ಬ್ರಹ್ಮಾಂಡವನ್ನು ಸುಂಡಲು ಸಿದ್ಧವಾದ ಕಣ್ಣುಗಳು । ಆದರೆ ಈ ಭಯಂಕರ ರೂಪದಿಂದ ಭಕ್ತರು ಬೆದರಲಿಲ್ಲ। ಹುಲಿಯ ಮರಿಗಳು ತಮ್ಮ ತಾಯಿಯನ್ನು ಕಂಡು ಬೆದರದೇ, ಅವಳೊಡನೆ ಚಿಲ್ಲಾಟವಾಡುತ್ತವೆ । ತಮ್ಮ ಭಯಂಕರ ರೂಪವನ್ನು ಕಂಡು ಲಕ್ಷ್ಮಿಯು ಕೂಡಾ ತಮ್ಮೆದುರು ಬರಲು ಸಿದ್ಧಳಿರಲಿಲ್ಲ। ಆದರೆ ಹೇ ನರಹರಿ, ತಮ್ಮ ಪ್ರೀತಿಯ ಭಕ್ತ ಪ್ರಲ್ಹಾದನು ನಿರ್ಭಯತೆಯಿಂದ ತಮ್ಮ ದರ್ಶನಕ್ಕಾಗಿ ಬಂದನು । ಹೇ ಲಕ್ಷ್ಮಿಕಾಂತ ತಾವು ಭಕ್ತವತ್ಸಲರೆಂದು ಸಂತ ಮಹಂತ ದೃಢ ವಿಶ್ವಾಸವಿದೆ । ಭಕ್ತರ ಎಲ್ಲ ಇಚ್ಛೆಗಳನ್ನು ತಾವು ಪೂರ್ಣಗೊಳಿಸುವಿರಿ । ಹೇ ಹೃಷಿಕೇಶ ಈ ವಿಶ್ವಾಸವನ್ನು ಕಾಪಾಡಿರಿ । ಹೇ ಪಾಂಡುರಂಗ, ತಮ್ಮ ಬಳಿಗೆ ಬಂದು ದಾಸಗಣುಗೆ ನಿರ್ಭಯಗೊಳಿಸಿರಿ। ಇರಲಿ ! ಗಜಾನನ ಮಹಾರಾಜರ ಕೆಲವು ಭಕ್ತರು ಅಕೋಲಾದಲ್ಲಿದ್ದರು । ಕೆಲವರ ಮನೆಗೆ ಮಹಾರಾಜರು ಅನೇಕ ಬಾರಿ ಹೋಗುತ್ತಿದ್ದರು । ಅವರಲ್ಲಿ ಕೆಲವರ ಹೆಸರುಗಳು ಹೀಗೆ ಇವೆ । ಚಾಪಡಗಾಂವಿನ ಬಾಪು ಕೃಷ್ಣ, ಖಟಾವು ಶೇಠಡಿಯ ಪರಿವಾರ, ಗೋಂಡುಲಾಲನ ಪುತ್ರ, ಬಚ್ಚುಲಾಲ । ಜಿಜಾಬಾಯಿ ಪಂಡಿತ ಆದಿ ಭಕ್ತರ ಹೆಸರುಗಳಿಗೆ ಕೊನೆಯಿಲ್ಲ। ಒಂದು ಸಲ ಗಜಾನನ ಮಹಾರಾಜರು ಅಕೋಲಾಕ್ಕೆ ಬಂದು ಖಟಾವಜಿಯ ಮಿಲ್ಲಿನಲ್ಲಿ ತಂಗಿದರು । ಮಿಷ್ಣುಸಾ ಎಂಬ ಹೆಸರಿನ ಭಕ್ತ ಮಲಕಾಪುರದಲ್ಲಿದ್ದನು । ಅವನು ಮನಸ್ಸಿನಲ್ಲಿ ಮಹಾರಾಜರನ್ನು ಈ ಸಲ ಮಲಕಾಪುರಕ್ಕೆ ಕರೆದುಕೊಂಡು ಹೋಗುವೆನು ಎಂದು ನಿರ್ಧಾರ ಮಾಡಿದನು । ಆದ್ದರಿಂದ ಅವನು ಭಾಸ್ಕರ ಪಾಟೀಲನ ಮೂಲಕ ಮಹಾರಾಜರಿಗೆ ಆಮಂತ್ರಣ ಕೊಟ್ಟನು । ವಾಚಕರಿಗೆ ಜ್ಞಾಪಕದಲ್ಲಿದ್ದರೇ, ಈ ಭಾಸ್ಕರನೇ ಆಡಗಾಂವಿಯಲ್ಲಿ ಸಮಾಧಿ ಹೊಂದಿದವನು । ಭಾಸ್ಕರ ಪಾಟೀಲನು ಮಹಾರಾಜರ ಬಳಿ ಇದ್ದು ಅವರ ಸೇವೆ ಮಾಡುತ್ತಿದ್ದನು । ವಿಷ್ಣುಸಾಗೆ

ಮಹಾರಾಜರು ಭಾಸ್ಕರನ ಶಬ್ದವನ್ನು ಒಪ್ಪಿಕೊಳ್ಳುವರು ಎಂಬ ಭರವಸೆ ಇತ್ತು। ಭಾಸ್ಕರನು ಮಹಾರಾಜರಿಗೆ ನಿಮ್ಮನ್ನು ಕರೆದುಕೊಂಡು ಹೋಗಲು ಮಲಕಾಪುರದ ಭಕ್ತವಿಷ್ಣುಸಾ ಬಂದಿರುವನು ಎಂದನು। ಅಕೋಲಾದ ಭಕ್ತರ ಇಚ್ಛೆಯನ್ನು ತಾವು ಪೂರ್ಣಗೊಳಿಸಿರುವಿರಿ। ಈಗ ಮಲಕಾಪುರದ ಭಕ್ತರು ತಮ್ಮ ಕಡೆ ಆಶೆ ಗಣ್ಣುಹಚ್ಚಿರುವರು। ಆಗ ಮಹಾರಾಜರು ಭಾಸ್ಕರನಿಗೆ ನಾನು ಮಲಕಾಪುರಕ್ಕೆ ಭಕ್ತರು ತಮ್ಮ ಕಡೆ ಆಶೆ ಗಣ್ಣು ಹಚ್ಚಿರುವರು। ಆಗ ಮಹಾರಾಜರು ಭಾಸ್ಕರನಿಗೆ ನಾನು ಮಲಕಾಪುರಕ್ಕೆ ಈಗ ಹೋಗುವದಿಲ್ಲ ಎಂದರು। ನನಗೆ ಅಲ್ಲಿ ಕರೆದುಕೊಂಡು ಹೋಗುವ ಹಟ ಮಾಡಿದಿರಿ। ಹಟ ಹಿಡಿದರೆ ತಮಗೆ ಪಶ್ಚಾತ್ತಾಪ ಪಡಬೇಕಾಗುವದು। ನಾನು ಪೂರ್ಣ ವಿಚಾರ ಮಾಡಿಯೇ ಮಾತನಾಡುವೆನು। ಹಗ್ಗವನ್ನು ಬಹಳ ಜೋರಾಗಿ ಜಗ್ಗಿದರೆ ಅದು ಮಧ್ಯದಲ್ಲಿ ಹರಿಯುವದು ಎಂಬುದನ್ನು ಮರೆಯದಿರಿ। ನಾನು ಈಗ ಈ ಸ್ಥಾನವನ್ನು ಬಿಟ್ಟು ಬೇರೆ ಕಡೆ ಹೋಗಲಾರೆ। ನನಗೆ ಕರೆದುಕೊಂಡು ಹೋಗುವ ಪ್ರಯತ್ನ ಮಾಡಬೇಡಿ। ಆದರೂ ಭಾಸ್ಕರನು ನುಡಿದನು, ಹೇಗ ಗುರುರಾಜ, ತಮಗೆ ಮಲಕಾಪುರಕ್ಕೆ ಬರಲೇಕು, ಎಂದು ಪ್ರಾರ್ಥಿಸಿದನು। ನಾನು ತಮ್ಮ ಪ್ರಿಯ ಭಕ್ತ, ನಾನು ವಿಷ್ಣುಸಾಗೆ ಮಹಾರಾಜರಿಗೆ ಅವಶ್ಯವಾಗಿ ಮಲಕಾಪುರಕ್ಕೆ ಕರೆದುಕೊಂಡು ಬರುವೆನೆಂದು ಮಾತುಕೊಟ್ಟಿರುವೆನು। ಆದ್ದರಿಂದ ನಾನು ಕೊಟ್ಟ ಮಾತನ್ನು ಪಾಲಿಸಲು ತಮಗೆ ಬರಲೇಬೇಕು। ಈಗ ನಡೆಯಿರಿ, ನಾವು ರೈಲಿನಿಂದ ಹೊರಡೋಣ। ಈ ರೀತಿ ವತ್ತಾಯದಿಂದ ಮಹಾರಾಜರಿಗೆ ರೇಲ್ವೆ ಸ್ಟೇಶನ್‌ಗೆ ಕರೆದುಕೊಂಡು ಹೋದನು। ಭಾಸ್ಕರನು ಸ್ಟೇಶನ್ ಮಾಸ್ತರರಿಗೆ ವಿನಂತಿಸಿ ಹನ್ನೆರಡು ಜನರಿಗಾಗಿ ಒಂದು ಬೋಗಿಯ ಆರಕ್ಷಣೆ ಮಾಡಿದನು। ಅಕೋಲಾ ಸ್ಟೇಶನ್ ಮೇಲೆ ಮಹಾರಾಜರು ರೈಲು ಹೊರಡುವವರೆಗೆ ಒಂದು ಸ್ಥಳದಲ್ಲಿ ಕುಳಿತಿದ್ದರು। ಯಾರ ಜೊತೆಗೆ ಮಾತನಾಡಲಿಲ್ಲ ಅಥವಾ ತಿರುಗಾಡಲಿಲ್ಲ। ಕೊನೆಯ ಘಂಟಿ ಬಾರಿಸಿದಾಗ ಮಹಾರಾಜರು, ಭಾಸ್ಕರನಿಗೆ ತಿಳಿಯದಂತೆ ಒಂದು ಲೀಲೆ ಮಾಡಿದರು। ಆರಕ್ಷಣೆ ಮಾಡಿದ ಬೋಗಿಯಲ್ಲಿ ಕುಳಿತುಕೊಳ್ಳದೇ ಮಹಾರಾಜರು ಮಹಿಳೆಯರ ಬೋಗಿಯಲ್ಲಿ ಕುಳಿತರು। ಮಹಾರಾಜರ ದಿಗಂಬರ ಮೂರ್ತಿಯನ್ನು ನೋಡಿ ಎಲ್ಲ ಮಹಿಳೆಯರು ಬೆದರಿ, ಪೋಲಿಸರಿಗೆ ಸೂಚನೆ ಕೊಟ್ಟರು। ಪೋಲಿಸನು ಅಲ್ಲಿ ಬಂದು ಮಹಾರಾಜರಿಗೆ ಹಿಡಿದು ಎಳೆಯ ತೊಡಗಿದನು ಮತ್ತು ಏ ಹುಚ್ಚು, ನಗ್ನ ಫಕೀರ, ನಿನಗೆ ತಲೆ ಇದೆಯೋ ಇಲ್ಲವೊ। ಇದು ಮಹಿಳೆಯರ ಬೋಗಿ, ಇದರಲ್ಲಿ ಏಕೆ ಕುಳಿತಿರುವಿ? ಇದನ್ನು ಕೇಳಿ ಮಹಾರಾಜರು ಅವನ ಕೈ ಬಿಡಿಸಿಕೊಂಡು ಅಲ್ಲಿಯೆ ಕುಳಿತರು। ಅವರು ಪೋಲಿಸನಿಗೆ ಏಳ್ಳಷ್ಟು ಬೆದರಲಿಲ್ಲ।





ನಂತರ ಆ ಪೋಲಿಸನು ಸ್ಟೇಶನ್-ಮಾಸ್ತರನಿಗೆ ಆ ಬೋಗಿಯ ಬಳಿ ಹೋಗುವಂತೆ ವಿನಂತಿಸಿದನು। [illegible] ಬೋಗಿಯ ಹತ್ತಿರ ಬಂದರು ಮತ್ತು ಸ್ಟೇಶನ್ ಮಾಸ್ತರ ಯೋಗಿರಾಜರು ಮಹಿಳೆಯ ಬೋಗಿಯಲ್ಲಿ ಆರಾಮದಿಂದ ಕುಳಿತಿರುವದನ್ನು ಕಂಡನು। ಸ್ಟೇಶನ್ ಮಾಸ್ತರರು ಮಹಾರಾಜರನ್ನು ಗುರುತಿಸಿದರು। ಆದ್ದರಿಂದ ಅವರು ಪೋಲಿಸನಿಗೆ ಮಹಾರಾಜರನ್ನು ಆ ಬೋಗಿಯಲ್ಲೇ ಕುಳಿತು ಹೋಗಲು ಅನುಮತಿ ಕೊಡುವಂತೆ ಹೇಳಿದರು। ಅವರು ಮಹಾನ್ ಸಂತ, ಮನುಷ್ಯ ರೂಪಧರಿಸಿದ ಈಶ್ವರರು। ಇವರಿಂದ ಮಹಿಳೆಯರಿಗೆ ಬಾಧೆಯಿಲ್ಲ। ಇದನ್ನು ಕೇಳಿ ಆ ಪೋಲಿಸನು ನಾನು ನನ್ನ ವರಿಷ್ಠ ಅಧಿಕಾರಿಗೆ ಈ ಮಾತನ್ನು ತಾರಿನ ಮೂಲಕ ತಿಳಿಸಿದ್ದೇನೆ। ಈಗ ನನ್ನ ಕೈಯಲ್ಲಿ ಏನೂ ಇಲ್ಲ। ಆದ್ದರಿಂದ ತಮಗೆ ಸರಿಯೆನಿಸಿದಂತೆ ಮಾಡಿರಿ। ಸ್ಟೇಶನ್ ಮಾಸ್ತರರು ತಮ್ಮ ಹ್ಯಾಟ್ ತಲೆಯ ಮೇಲಿಂದ ತೆಗೆದು ಆದರದಿಂದ ಮಹಾರಾಜರಿಗೆ ದಯವಿಟ್ಟು ಕೆಳಗೆ ಇಳಿಯುವಂತೆ ಬಿನ್ನವಿಸಿದರು। ಕಾಯಿದೆಯನ್ನು ಉಲ್ಲಂಘಿಸದಿರಿ। ಈ ವಿನಂತಿಯನ್ನು ಕೇಳಿ ಮಹಾರಾಜರು ಕೆಳಗೆ ಇಳಿದರು। ಮಹಾರಾಜರ ಮೇಲೆ ಮುಕದ್ದಮೆ ಮಾಡಿದರು। ಜಠಾರ ಸಾಹೇಬರ ಕೋರ್ಟಿನಲ್ಲಿ ಮುಕದ್ದಮೆ ಆರಂಭವಾಯಿತು। ಮುಕದ್ದಮೆಯ ದಿನ ನಿಶ್ಚಿತವಾಯಿತು। ವಿಚಾರಣೆಯ ಕೆಲಸ ಶೇಗಾಂವಿಯಲ್ಲಿ ಆರಂಭವಾಯಿತು। ಬಾಪುಸಾಹೇಬ ಜಠಾರರು ವಿಚಾರಣೆಗಾಗಿ ಶೇಗಾಂವಿಗೆ ಬಂದು ಡಾಕ ಬಂಗಲೆಯಲ್ಲಿ ತಂಗಿದರು। ಅಕೋಲಾದ ವೈಂಕಟರಾವ ದೇಸಾಯಿ ಜಠಾರ ಸಾಹೇಬರಿಗೆ ಇಂದು ಯಾವ ಮುಕದ್ದಮೆ ಇದೆ ? ಎಂದು ಕೇಳಿದರು। ಯಾವ ಕಾರಣಕ್ಕಾಗಿ ಇಷ್ಟು ಜನರು ಕಲೆತಿರುವರು। ಜಠಾರಸಾಹೇಬರು ಆಶ್ಚರ್ಯದಿಂದ ನುಡಿದರು ಏನು ತಮಗೆ ಗೊತ್ತಿಲ್ಲವೇ ? ತಮ್ಮ ಗಜಾನನ ಮಹಾರಾಜರು ನಗ್ನರಾಗಿ ತಿರುಗುತ್ತಾರೆ ಎಂದು ಪೋಲಿಸರು ಮುಕದ್ದಮೆ ಹೂಡಿದ್ದಾರೆ। ಇಂದು ಆ ಮುಕದ್ದಮೆ ಇದೆ, ಆದ್ದರಿಂದ ಜನರು ಇಲ್ಲಿ ಕೂಡಿರಬಹುದು। ಇದನ್ನು ಕೇಳಿ ವೈಂಕಟರಾವ ದುಃಖಿತರಾಗಿ ಜಠಾರಸಾಹೇಬರ ಮುಂದೆ ಕೈ ಮುಗಿದು ನುಡಿದರು, ಕೃಪೆಮಾಡಿ ಈ ವಿಷಯವನ್ನು ಮುಗಿಸಿ ಬಿಡಿ। ಶ್ರೀ ಗಜಾನನ ಮಹಾರಾಜರ ಮಹತಿಯನ್ನು ಯಾರು ತಿಳಿಯರು ? ಅವರು ಸಾಕ್ಷಾತ್ ಭಗವಂತರೇ। ವಿದೇಹಿ ಸಂನ್ಯಾಸಿಯಾಗಿದ್ದರಿಂದ ಅವರು ಬಂಧನಮುಕ್ತರಾಗಿರುವರು। ಅವರ ಮೇಲೆ ಮುಕದ್ದಮೆ ನಡೆಸುವದು ತಪ್ಪು, ಅದನ್ನು ಸ್ಥಗಿತಗೊಳಿಸುವದು ಲೇಸು। ಆಗ ಜಠಾರ ಸಾಹೇಬರು ತಮಗೆ ಕಾನೂನು ಗೊತ್ತು। ಈ ಬಗ್ಗೆ ವಿಚಾರ ಪೋಲಿಸರು ಮೊದಲೇ ಮಾಡಿದ್ದರೆ ಒಳ್ಳೆಯದಿತ್ತು। ಅವರು ಕಾರಕೂನನು ಒಬ್ಬ ಯುವಕ ಪೋಲಿಸನಿಗೆ ಈ ಕೆಲಸ

ಹಚ್ಚಿದನು। ಅವನು ಮಹಾರಾಜರ ಬಳಿಗೆ ಹೋಗಿ, ಸಾಹೇಬರು ಕಛೇರಿಯಲ್ಲಿ ತಮಗೆ ಕರೆದಿದ್ದಾರೆ। ತಾವು ಸುಮ್ಮನೆ ನನ್ನ ಜೊತೆಗೆ ನಡೆಯಿರಿ। ಇಲ್ಲದಿದ್ದರೆ ನಿಮಗೆ ಏಳೆದುಕೊಂಡು ಹೋಗಬೇಕಾದೀತು। ಪೋಲಿಸನ ಸೊಕ್ಕನ್ನು ನೋಡಿ ಮಹಾರಾಜರು ನಾನು ಇಲ್ಲಿಂದ ಏಳುವದಿಲ್ಲ ಎಂದರು। ನಿನ್ನ ಶಕ್ತಿಯನ್ನು ನೋಡಬೇಕಾಗಿದೆ, ಸ್ವಲ್ಪ ನಿನ್ನ ಕೈಯನ್ನು ಬಿಡಿಸಿಕೊ ಎಂದರು। ಮಹಾರಾಜರು ಅವನ ಕೈಯನ್ನು ಗಟ್ಟಿಯಾಗಿ ಹಿಡಿದರು। ಆದರಿಂದ ರಕ್ತ ಪ್ರವಾಹವು ನಿಂತಿತು ಮತ್ತು ಅವನು ಬೆದರಿದನು । ಮಹಾರಾಜರಿಗೆ ಕರೆಯಲು ಕಳುಹಿಸಿದ ಪೋಲಿಸನಿಗೆ ತಡವಾಗಿದ್ದರಿಂದ, ಮಹಾರಾಜರನ್ನು ಕರೆಯಲು ವ್ಯೆಂಕಟರಾವ ದೇಸಾಯಿಗೆ ಕಳುಹಿಸುವಾಗ ಜಠಾರಸಾಹೇಬರು ನುಡಿದರು । ತಾವು ಹೋಗಿ ಮಹಾರಾಜರನ್ನು ಕರೆಯಿರಿ । ಈ ಕಾರ್ಯವನ್ನು ಜಾಗ್ರತೆಯಿಂದ ಮಾಡಿರಿ । ಇಲ್ಲಿ ನೆರೆದ ಜನರಿಗೆ ತಿಳಿಯಬಾರದು । ಅಷ್ಟರಲ್ಲಿ ಮಹಾರಾಜರು ತಮ್ಮ ಲೀಲೆಯಿಂದ ಪೋಲಿಸನ ಕೈ ಹಿಡಿದು ಅವನಿಗೆ ಒಂದು ಸ್ಥಳದಲ್ಲಿ ಕೂಡ್ರಿಸಿರುವರು ಎಂಬ ಸಂದೇಶವು ಬಂದಿತು। ನಂತರ ದೇಸಾಯಿ ಮಠಕ್ಕೆ ಬಂದು, ಮಹಾರಾಜರಿಗೆ ಧೋತರವನ್ನು ಉಡಿಸಿರೆಂದು ಭಕ್ತರಿಗೆ ವಿನಂತಿಸಿದರು । ಇದನ್ನು ಕೇಳಿ ಭಕ್ತರು ಮಹಾರಾಜರಿಗೆ ಪಂಚೆಯನ್ನು ಉಡಿಸಿದರು, ಆದರೆ ಅದನ್ನು ಮಹಾರಾಜರು ರಸ್ತೆಯಲ್ಲಿ ಬಿಚ್ಚಿದರು। ಕೊನೆಗೆ ಮಹಾರಾಜರು ಕಚೇರಿಯಲ್ಲಿ ನಗ್ನರಾಗಿಯೇ ಪ್ರವೇಶಿಸಿದರು। ಅವರ ಜೊತೆಗೆ ಭಾಸ್ಕರನೆಂಬ ಶಿಷ್ಯನಿದ್ದನು । ಮಹಾರಾಜರನ್ನು ಕಂಡೊಡನೆ ಜಠಾರಜಿ ಅವರಿಗೆ ಕುರ್ಚಿಯನ್ನು ಕೊಟ್ಟರು। ಮತ್ತು ವಿನಯದಿಂದ ಮಹಾರಾಜರನ್ನು ಸ್ವಾಗತಿಸಿದರು । ತಾವು ಊರಿನಲ್ಲಿ ನಗ್ನರಾಗಿ ತಿರುಗಾಡುವದು ಒಳ್ಳೆಯದಲ್ಲ। ಕಾನೂನಿನ ದೃಷ್ಟಿಯಲ್ಲಿ ನಗ್ನರಾಗಿ ತಿರುಗಾಡುವದು ಅಪರಾಧ। ಆದ್ದರಿಂದ ನಾನು ನಗ್ನತೆಯನ್ನು ಬಿಟ್ಟು ಬಿಡಿರಿ ಎಂದು ಪ್ರಾರ್ಥಿಸುತ್ತೇನೆ। ಜಠಾರ ಸಾಹೇಬರ ಮಾತನ್ನು ಶಾಂತಚಿತ್ತದಿಂದ ಕೇಳಿ ಮಹಾರಾಜರು ನಕ್ಕು ನನ್ನ ನಗ್ನತೆಯಿಂದ ತಮಗೇನು ಕಷ್ಟ ? ವ್ಯರ್ಥ ಮಾತುಗಳನ್ನಾಡುವ ಬದಲು ಚಿಲುಮೆ ತುಂಬಿ ಕೊಡಿರಿ । ಉಳಿದ ಮಾತುಗಳು ನನಗೆ ನಿರರ್ಥಕ । ಮಹಾರಾಜರ ಈ ಮಾತನ್ನು ಕೇಳಿ ಜಠಾರ ಸಾಹೇಬರು ಕರಗಿದರು । ಅವರು ಮನದಲ್ಲಿಯೇ ಮಹಾರಾಜರು ಸಂತರಾಗಿದ್ದರಿಂದ ಲೌಕಿಕ ಮಾತುಗಳಿಂದ ದೂರವಿರುವರು ಎಂದು ವಿಚಾರ ಮಾಡತೊಡಗಿದರು । ಇವರಾದರೇ ಭಾಗವತದ ವೃಷಭದೇವ, ಶುಕ್ರಾಚಾರ್ಯ ಅಥವಾ ಸಂತ ನಾಮದೇವನ ಅವತಾರದಂತೆ। ಜೀವನ ಮುಕ್ತ ಆಗಿದ್ದರಿಂದ ಯಾವಾಗಲೂ ನಿಜಾನಂದದಲ್ಲಿ ಮಗ್ನರಾಗಿರುತ್ತಾರೆ। ಆದ್ದರಿಂದ ಇವರ





ಮೇಲೆ ಯಾವ ಆರೋಪವು ವ್ಯರ್ಥ । ಬೆಂಕಿಯು ತಮ್ಮ ಉಷ್ಣತೆಯಿಂದ ದೂರವಾಗುವದು ಸಾಧ್ಯವಿಲ್ಲ। ಆದ್ದರಿಂದ ಅಗ್ನಿಹೋತ್ರಿಗೆ ಅಗ್ನಿಯನ್ನು ಕುಂಡದಲ್ಲಿಯೇ ಇಡಬೇಕಾಗುತ್ತದೆ। ಇಲ್ಲದಿದ್ದರೆ ಆ ಸದನವು ದಗ್ಧವಾಗಿ ಹೋಗಬಹುದು। ಮುಂದೆ ಬಂದ ವಸ್ತುವನ್ನು ಸುಡುವದು ಅಗ್ನಿಯ ಗುಣಧರ್ಮ ಇರುವಾಗ ಅಗ್ನಿಯದು ಏನು ತಪ್ಪು ? ಅಗ್ನಿಯ ಸ್ವಭಾವ ಧರ್ಮಕ್ಕೆ ಅನುಸರಿಸಿ ಮಹಾರಾಜ ನಗ್ನತೆಯು ಸ್ವಯಂ ಸಿದ್ಧವಾಗಿದೆ। ಆದ್ದರಿಂದ ಈ ವಿಷಯದಲ್ಲಿ ತಪ್ಪಾಗಿದ್ದರೆ ಅದು ಅವರ ಶಿಷ್ಯರದೇ । ಮಹಾರಾಜರ ನಗ್ನತೆಯನ್ನು ವಸ್ತ್ರರೂಪಿ ಕುಂಡದಲ್ಲಿ ಇವರ ಶಿಷ್ಯರು ಇಟ್ಟಿದ್ದರೆ ಎಲ್ಲರಿಗೂ ಒಳ್ಳೆಯದಿತ್ತು। ಈ ರೀತಿ ವಿಚಾರ ಮಾಡಿ ಜಠಾರಜಿ ಈ ನಿರ್ಣಯವನ್ನು ಕೊಟ್ಟರು । ಮಹಾರಾಜರು ಜೀವನಮುಕ್ತ ಸಂನ್ಯಾಸಿ। ಅವರನ್ನು ಲೌಕಿಕ ದೃಷ್ಟಿಯಿಂದ ಸರಿಯಾಗಿ ಇಡುವ ಜವಾಬುದಾರಿ ಅವರ ಶಿಷ್ಯ ಭಾಸ್ಕರನ ಮೇಲೆ ಇದೆ। ಈ ವಿಷಯದಲ್ಲಿ ಅವನು ತಮ್ಮ ಕರ್ತವ್ಯವನ್ನು ಸರಿಯಾಗಿ ಪೂರ್ಣಗೊಳಿಸಲಿಲ್ಲ। ಆದ್ದರಿಂದ ನಾನು ಅವನಿಗೆ ಐದು ರೂಪಾಯಿ ದಂಡ ಮಾಡುತ್ತೇನೆ । ಶೇಗಾಂವಿಯಲ್ಲಿ ಈ ರೀತಿ ಜಠಾರರು ನ್ಯಾಯದಾನ ಮಾಡಿದರು । ನಂತರ ಮಹಾರಾಜರು ಭಾಸ್ಕರನಿಗೆ ನುಡಿದರು, ನೋಡು ಹಟಹಿಡಿದ ಪರಿಣಾಮ ಏನಾಗುವದು ? ನೀನು ನಿನ್ನ ಕೈಯಿಂದಲೇ ಕಲ್ಲು ಹೊಡೆದುಕೊಂಡೆ। ಏನು ಸರಿ ನುಡಿದೆ ತಾನೇ ? ಭಾಸ್ಕರನು ಮಹಾರಾಜರ ಪ್ರಶ್ನೆಗೆ ಉತ್ತರಕೊಡದೆ ಸುಮ್ಮನೆ ಕುಳಿತನು। ಈ ಘಟನೆಯಿಂದ ಎಲ್ಲರೂ ಪಾಠ ಕಲಿತರು। ಮಹಾರಾಜರಿಗೆ ಮುಂದೆ ಎಂದು ಎಂದಿಗೂ ರೈಲು ಅಥವಾ ವಾಹನದಲ್ಲಿ ಕೂಡಿಸಬಾರದು। ತಾವೇ ಆಪತ್ತಿಗಳನ್ನು ಎದುರಿಸುವದು ಒಳ್ಳೆಯದಲ್ಲ। ನಂತರ ಮಹಾರಾಜರು ಎತ್ತಿನ ಬಂಡಿಯಲ್ಲಿ ಕುಳಿತು ಪ್ರವಾಸ ಮಾಡತೊಡಗಿದರು । ಈ ನಿಯಮವು ಅನೇಕ ದಿನಗಳವರೆಗೆ ಜಾರಿ ಇತ್ತು। ಒಂದು ದಿನ ಚಕ್ಕಡಿಯಲ್ಲಿ ಕುಳಿತು ಮಹಾರಾಜರು ಅಕೋಲಾದ ಬಾಪುರಾವನ ಮನೆಗೆ ತಲುಪಿದರು । ಮುರ್ತಜಾಪುರದ ಹತ್ತಿರ ಕುರುಮ ಎಂಬ ಹಳ್ಳಿ ಇದೆ। ಅಲ್ಲಿ ಮಹತಾಬಶಾ ಎಂಬ ಸಾಧು ಇರುತ್ತಿದ್ದನು। ಅವನು ಬಾಪುರಾವನಿಗೆ ಇನ್ನು ಮುಂದೆ ಮಹಾರಾಜರು ಅಕೋಲಾಗೆ ಬಂದರು ನನಗೆ ವರದಿ ಕೊಡೆಂದು ಹೇಳಿದ್ದನು । ಅದಕ್ಕೆ ಅನುಸರಿಸಿ ಬಾಪುರಾವನು ಒಬ್ಬ ಮನುಷ್ಯನಿಗೆ ಕುರುಮ ಊರಿಗೆ ಕಳುಹಿಸಿದನು । ಅದೇ ವೇಳೆ ಮಹತಾಬಶಾ ಅಕೋಲಾಗೆ ಹೊರಟಿದ್ದರು । ಅವರಿಬ್ಬರು ಭೆಟ್ಟಿ ದಾರಿಯಲ್ಲಾಯಿತು । ಅವನು ಬಾಪುರಾವರ ಸಂದೇಶವನ್ನು ತಿಳಿಸಿದನು । ಮಹತಾಬಶಾ ನುಡಿದರು, ಈಗ ನಿನಗೆ ಕುರುಮಕ್ಕೆ ಹೋಗುವ ಅವಶ್ಯಕತೆಯಿಲ್ಲ। ಇಬ್ಬರೂ ಸೇರಿ ಗಾಡಿಯಲ್ಲಿ ಕುಳಿತು

ಶ್ರೀಗಜಾನನ ॥ ೧೬೮ ॥ ವಿಜಯ ಅ. ॥ ೧೭ ॥

ಸ್ಟೇಶನ್‌ಗೆ ಹೋಗೋಣ । ಸಂತರು ತ್ರಿಕಾಲಜ್ಞರಾಗಿದ್ದರಿಂದ ಕಳಿತಲ್ಲಿಂದಲೇ, ಎಲ್ಲ ಮಾತುಗಳನ್ನು ಅರಿಯುವರು ಮಹಾತಾಬಶಾ ಜೊತೆಗೆ ಮೂರು, ನಾಲ್ಕು ಯವನ ಭಕ್ತರಿದ್ದರು । ಎಲ್ಲರೂ ಸಮಯಕ್ಕೆ ಸರಿಯಾಗಿ ಬಾಪುರಾವನ ಸದನಕ್ಕೆ ತಲುಪಿದರು । ಎರಡನೆಯ ದಿನ ಮುಂಜಾನೆ ಮಹತಾಬಶಾ ತಂಗಿದ್ದ ಸ್ಥಳಕ್ಕೆ ಮಹಾರಾಜರು । ಮತ್ತು ಅವನ ಕೂದಲು ಹಿಡಿದು ಅವನಿಗೆ ಬಡಿಯತೊಡಗಿದರು । ಅದರ ಅರ್ಥ ಹೀಗಿರಬಹುದು । ಯಮನ–ಜಾತಿಯಲ್ಲಿ ಹುಟ್ಟಿ ಯಾವ ಕಾರ್ಯವನ್ನು ಮಾಡಲಿಲ್ಲ। ಹೊರತು ನಿನಗೆ ಮದ ಬಂದಿದೆ । ನಿನ್ನ ಈ ಉದ್ಧಟತನದಿಂದ ಧಾಮಿಕ ತತ್ವಗಳು ನಾಶವಾಗುವವು । ಇದರಿಂದ ಮೃತ್ಯುಲೋಕದ ಪ್ರಾಣಿಗಳು ಚಿಂತಾಗ್ರಸ್ಥರಾಗುತ್ತವೆ । ನಿನ್ನ ಹೆಸರಾದರೋ ಮೆಹತಾಬ (ಚಂದ್ರ) । ಈ ಹೆಸರನ್ನಾದರೂ ಜ್ಞಾಪಕದಲ್ಲಿ ಇಡು । ದೋಷರೂಪದ ತಮೋಗುಣವನ್ನು ಬೆಳೆಸದಿರು । ಈ ದ್ವೇಷರೂಪದ ಅಂಧಃಕಾರವು ದಿನಕಳೆದಂತೆ ಬೆಳೆಯುತ್ತಿದೆ ಆದ್ದರಿಂದಲೇ ನಿನ್ನನ್ನು ಹೊಡೆಯುತ್ತಿರುವೆನು । ಮಹಾರಾಜರ ಈ ಸನ್ನೆಯು ಮೆಹತಾಬನಿಗೆ ತಿಳಿದು ಅವನು ಮನಸ್ಸಿನಲ್ಲಿ ಬೆರಗಾದನು । ಸಾಧು, ಸಾಧುವಿನ ಅಂತರಿಕ ಭಾವನೆಯನ್ನು ಅರಿಯಬಲ್ಲ । ಮಹತಾಬಶಾಗೆ ಬಡೆಯುವದನ್ನು ಕಂಡು ಅವನ ಸಂಗಡಿಗರು ಬೆದರಿದರು । ಮಹತಾಬಶಾ ಅವರಿಗೆ ಇಲ್ಲಿ ಇರದೇ ಕುರುಮಕ್ಕೆ ತಿರುಗಿ ಹೋಗಲು ಸಂಬೋಧಿಸಿದರನು । ಶೇಖ ಕಡುಗೆ ಬಿಟ್ಟು ಇತರರು ಕರುಮಕ್ಕೆ ಮರಳಿದರು । ಅಷ್ಟರಲ್ಲಿ ಆಮಂತ್ರಣಕೊಡಲು ಬಚ್ಚುಲಾಲ ಅಲ್ಲಿಗೆ ಬಂದನು । ಅವನು ವಿನೀತನಾಗಿ ಮಹಾರಾಜರಲ್ಲಿ ನುಡಿದನು, ಹೇ ದಯಾಧನ, ನಾಳೆ ನನ್ನ ಮನೆಗೆ ಪ್ರಸಾದಕ್ಕಾಗಿ ಬಂದು ಉಪಕಾರ ಮಾಡಿರೆಂದು ಪ್ರಾರ್ಥನೆ । ಮರುದಿನ ಮಹಾರಾಜರಿಗೆ ಕುದುರೆಗಾಡಿ (ಟಾಂಗಾ)ದಲ್ಲಿ ಕೂಡಿಸಿ ಬಹು ಆನಂದದಿಂದ ಮನೆಗೆ ತಂದನು, ಆದರೆ ಮಹಾರಾಜರು ಟಾಂಗಾದಿಂದ ಇಳಿಯಲು ಸಿದ್ಧರಿರಲಿಲ್ಲ। ಮಹಾರಾಜರು ಹೀಗೆ ಮಾಡುವ ಕಾರಣ ಯಾರಿಗೆ ತಿಳಿಯಲಿಲ್ಲ। ಕೊನೆಗೆ ಟಾಂಗಾ ತಿರುಗಿ ಬಾಪುರಾವನ ಮನೆಗೆ ಹೋಯಿತು । ಜನರಿಗೆ ಈ ಮಹಾರಜರ ವರ್ತನೆಯ ಅರ್ಥ ತಿಳಿಯದಾಯಿತು । ನಿನ್ನೆ ಸ್ವೀಕರಿಸಿದ ಆಮಂತ್ರಣೆಯನ್ನು ಇಂದು ಏಕೆ ತಿರಿಸ್ಕರಿಸುವರು ? ಎಲ್ಲರಿಗೂ ಆಶ್ಚರ್ಯವಾಯಿತು । ಉಪಸ್ಥಿತರಲ್ಲಿ ಒಬ್ಬ ಬುದ್ಧಿವಂತ ಸಜ್ಜನನಿದ್ದನು ಯ ಅವನು ನನ್ನ ದೃಷ್ಟಿಯಂದ ಈ ಕಾರಣವಿರಬಹುದು ಎಂದನು । ಮಹತಾಬಶಾಗೆ, ಯವನನಿರುವದರಿಂದ ಆಮಂತ್ರಣೆ ಕೊಡಲಿಲ್ಲ । ಇದರಿಂದ ಮಹಾರಾಜರು ಕೆಳಗಿಳಿಯಲಿಲ್ಲ। ಅವನಿಗೆ ಆಮಂತ್ರಣವೇಕೆ ಕೊಡಲಿಲ್ಲ? ಆದ್ದರಿಂದ ಇಬ್ಬರಿಗೂ ಒಂದೇ ಟಾಂಗಾದಲ್ಲಿ



ಶ್ರೀಗಜಾನನ ॥ ೧೬೯ ॥ ವಿಜಯ ಅ. ॥ ೧೭ ॥

ತೆಗೆದುಕೊಂಡು ಬಂದರೆ, ಮಹಾರಾಜರು ನಿಶ್ಚಿತವಾಗಿ ಬರುವರು । ಕೊನೆಗೆ ಅವನ ವಿಚಾರವು ಸ್ಪಷ್ಟವಾಯಿತು । ನಂತರ ಇಬ್ಬರಿಗೂ ಬಲು ಸಡಗರದಿಂದ ತರಲಾಯಿತು । ಮಂದಿರದ ಬಳಿ ಇರುವ ಥಿಯೇಟರಿನಲ್ಲಿ ಮಹತಾಬಶಾ ತಂಗಿದರು । ಶ್ರೀರಾಮ ಮಂದಿರದಲ್ಲಿ ಮಹಾರಾಜರ ನಿವಾಸದ ವ್ಯವಸ್ಥೆ ಮಾಡಿದರು । ನಂತರ ಮಹಾರಾಜರು ಥಿಯೇಟರಿಗೆ ಹೋದರು । ಎಲ್ಲರೂ ಸೇರಿ ಊಟ ಮಾಡಿದರು । ಮಹತಾಬಶಾ ಜನರಿಗೆ ಪಂಜಾಬಕ್ಕೆ ಹೋಗಲು ತೀಕೀಟು ಕೊಡುವಂತೆ ಹೇಳಿದನು । ಆಗ ಶೇಖ ಕಡು ಮಹತಾಬಶಾಗೆ ತಾವು ಈ ಮಸೀದಿಯನ್ನು ಅರ್ಧದಲ್ಲಿ ಬಿಟ್ಟು ಏಕೆ ಹೊರಟಿರುವಿರಿ ? ಈ ಮಸೀದಿ ಪೂರ್ಣವಾದ ಮೇಲೆ ತಾವು ಪಂಜಾಬಿಗೆ ಹೋಗಬಹುದು ಮಸೀದಿಯ ಕಾರ್ಯವನ್ನು ಅರ್ಧದಲ್ಲಿ ಬಿಟ್ಟು ಹೋಗುವದು ಒಳ್ಳೆಯ ಮಾತಲ್ಲ। ಆಗ ಶೇಖ ಕಡುಗೆ ಮಹತಾಬಶಾ ಪ್ರೀತಿಯಿಂದ ನುಡಿದನು, ನನಗೆ ಇಲ್ಲಿ ಇರುವಂತೆ ವತ್ತಾಯ ಮಾಡಬೇಡಿರಿ । ಗಜಾನನ ಮಹಾರಾಜರು ನನಗೆ ಪಂಜಾಬಿಗೆ ಹೋಗುವಂತೆ ಆದೇಶ ಮಾಡಿರುವರು । ಆದ್ದರಿಂದ ನಾನು ಈಗ ಕ್ಷಣ ಮಾತ್ರ ನಿಲ್ಲಲಾರೆ । ಮಹಾರಾಜರ ಕೃಪೆಯಿಂದ ಮಸೀದೆಯ ಕೆಲಸ ಪೂರ್ಣವಾಗುವದು, ಈ ನನ್ನ ಸತ್ಯ ವಚನವು ವ್ಯರ್ಥವಾಗದು । ಸಂತರ ಹತ್ತಿರ ಧರ್ಮದ ವಿಷಯದಲ್ಲಿ ಸ್ವಂತದ್ದು ಅಥವಾ ಬೇರೆಯವರದು ಎಂಬ ಭೇದವಿರುವದಿಲ್ಲ। ಅವರು ಎಲ್ಲ ಧರ್ಮಗಳನ್ನು ಒಂದೇ ಎಂದು ತಿಳಿಯುತ್ತಾರೆ । ಮಸೀದೆಯ ನೆವದಿಂದ ನನಗೆ ಇಲ್ಲಿ ಇರುವಂತೆ ಹೇಳಬೇಡಿರಿ । ಏಕೆಂದರೆ ಇದರಲ್ಲಿ ಇಬ್ಬರಿಗೂ ಹಾನಿಯಿದೆ । ಮಸೀದೆ ಹಾಗೂ ಮಂದಿರಗಳನ್ನು ಕಟ್ಟಲು ಒಂದು ರೀತಿಯ ಸಾಮಾನು ಬೇಕು । ಆದರೆ ಅವುಗಳ ಆಕಾರ, ಧರ್ಮದಂತೆ ಬೇರೆ ಬೇರೆ ಇರುತ್ತದೆ । ಈ ಮಾತನ್ನು ತಿಳಿದುಕೊಂಡು ಪರಸ್ಪರ ಜಗಳಾಡಬಾರದು । ಯವನನು ಅಲ್ಲಾನಿಗೆ ಪ್ರೀಯನಾದರೆ, ಹಿಂದೂವು ಭೂತನಿಗೆ ಪ್ರೀಯವ್ಹೋ ? ಎಲ್ಲರಲ್ಲಿ ಅಭಿನ್ನ ರೂಪದಿಂದ ಮನುಷ್ಯತ್ವವು ಇರುವದರಲ್ಲಿ ಸಂಶಯುವಿಡಬಾರದು । ಹಿಂದೂ ಹಾಗೂ ಮುಸಲ್ಮಾನರು ಒಂದೇ ದೇವರಿಂದ ಉತ್ಪನ್ನರಾಗಿರುವರು। ಪ್ರತಿಯೊಬ್ಬನಿಗೆ ತಮ್ಮ ಧರ್ಮದ ಮೇಲೆ ಪ್ರೀತಿ ಇರಬೇಕು, ಆದರೆ ಬೇರೆ ಧರ್ಮಗಳ ಮೇಲೆಯೂ ಪ್ರೀತಿ ಇರಬೇಕು। ಈ ತಿಳುವಳಿಕೆ ಬರದ ಹೊರತು ಆತ್ಮಿಕ ಶಾಂತಿ ಹಾಗೂ ಸುಖ ದೂರವಿರುವದು, ಎಂಬುದನ್ನು ಮರೆಯದಿರಿ। ಗಜಾನನ ಮಹಾರಾಜರ ಕೃಪೆಯಿಂದ ಮಸೀದಿಯು ಪೂರ್ಣವಾಗುವದು । ಈಗ ನಿಶ್ಚಿಂತರಾಗಿ ಮನೆಗೆ ಮರಳಿರಿ । ನಂತರ ಮಹತಾಬಶಾ ಪಂಜಾಬಿಗೆ ಹೋಗಿ, ಎಂದಿಗೂ ಮರಳಲಿಲ್ಲ । ಈ ಮಾತಿನ ಮೇಲೆ ಹಿಂದೂ ಹಾಗೂ

ಮುಸಲ್ಮಾನರು ವಿಚಾರ ಮಾಡಬೇಕು । ಮಹತಾಬಶಾಗೆ ಮಹಾರಾಜರು ಹೊಡೆದರೂ, ಮನಸ್ಸಿನಲ್ಲಿ ದ್ವೇಷವಿರದೇ ಅಪಾರ ಪ್ರೀತಿ ಇತ್ತು । ಮಹತಾಬಶಾನಂತಹ ಮುಸಲ್ಮಾನನಿಗೆ ತಮ್ಮ ಹತ್ತಿರ ಕೂಡ್ರಿಸಿಕೊಂಡು ಮಹಾರಾಜರು ಭೋಜನ ಮಾಡಿದರು, ಈ ಮಾತಿನ ಬಗ್ಗೆ ವಿಚಾರ ಮಾಡಬೇಕು । ಇರಲಿ । ಬಾಪುರಾವನ ಹೆಂಡತಿಗೆ ಭಾನುಮತಿಯಾಗಿತ್ತು । ಒಮ್ಮೆಲೆ ಗಂಟಲು ಒಣಗುತ್ತಿತ್ತು, ಮೈಮೇಲಿನ ವಸ್ತ್ರಕ್ಕೆ ಬೆಂಕಿ ಹಿಡಿಯುತ್ತಿತ್ತು, ಕೆಲವು ಸಲ ಕೇರಿನ ಬರೆ ಮೈಮೇಲೆ ಕಂಡು ಬರುತ್ತಿದ್ದವು । ಈ ಭಾನುಮತಿಯ ಪ್ರಕಾರದಿಂದ ಬಾಪುರಾವನ ಹೆಂಡತಿಯು ಸೊರಗಿದಳು । ಅವಳಿಗೆ ಊಟ ಕಠಿಣವಾಯಿತು । ಪತ್ನಿಗೆ ಆದ ಬಾಧೆಯನ್ನು ದೂರ ಮಾಡಲು ಅಕೋಲಾದಿಂದ ಮಾಂತ್ರಿಕನನ್ನು ಕರೆ ತಂದರು । ಆದರೆ ಅವನು ಅಸಫಲನಾದನು । ಇದರ ಉಪಚಾರದಲ್ಲಿ ಹಣವನ್ನು ಖರ್ಚು ಮಾಡಿದರೂ ಉಪಯೋಗವಾಗಲಿಲ್ಲ । ಕೊನೆಗೆ ಅವನು ಮಹಾರಾಜರಿಗೆ ಶರಣಾದನು । ಅವನು ಮಹಾರಾಜರಿಗೆ ಸಂಭೋದಿಸಿದನು, ಹೇ ಸ್ವಾಮಿ, ನನ್ನ ಹೆಂಡತಿಗೆ ಭಾನುಮತಿಯಿಂದ ಬಹಳ ಕಷ್ಟವಾಗಿದೆ । ಔಷಧಿ, ಮಂತ್ರ ತಂತ್ರ, ತಾಯಿತಗಳಿಂದ ಉಪಯೋಗವಾಗಲಿಲ್ಲ। ನಾನು ಈಗ ಬಹಳ ಬೇಸತ್ತಿದ್ದೇನೆ । ಈಗ ತಮ್ಮ ಶ್ರೀಚರಣಗಳು ನನ್ನ ಮನೆಗೆ ತಗುಲಿದ್ದರಿಂದ, ಇಲ್ಲಿ ಭಾನುಮತಿಯ ನಿವಾಸವು ಹೇಗೆ ಸಾಧ್ಯ ? ಎಲ್ಲಿ ವನಕೇಸರಿಯು ಇರುವನೋ, ಅಲ್ಲಿ ನರಿಯದೇನು ಆಟ ? । ಹೇ ಗುರುರಾಜ, ಎಲ್ಲಿ ಕಸ್ತೂರಿಯ ಸುವಾಸನೆಯು ಇದೆಯೋ, ಅಲ್ಲಿ ಭಾನುಮತಿಯ ದುರ್ವಾಸನೆ ಸಾಧ್ಯವೇ? ಈ ರೀತಿ ವ್ಯಾಕುಳನಾಗಿ ಬಾಪುರಾವನು ಮಹಾರಾಜರಲ್ಲಿ ಯಾಚಿಸಿದಾಗ, ಮಹಾರಾಜರು ಬಾಪುರಾವನ ಹೆಂಡತಿಯ ಕಡೆಗೆ ಕೃಪಾದೃಷ್ಟಿಯಿಂದ ನೋಡಿದರು । ಕೂಡಲೇ ಕ್ಷಣ ಮಾತ್ರದಲ್ಲಿ ಅವಳ ಭಾನುಮತಿಯು ಓಡಿಹೋಯಿತು । ಸಿಂಹದ ಮುಂದೆ ಮರ್ಕಟದ ಆಟ ಎಲ್ಲಿಯವರೆಗೆ ಸಾಗುವದು ? ಇರಲಿ ! ಒಮ್ಮೆ ಮಹಾರಾಜರು ತಮ್ಮ ಬಂಧು ನರಸಿಂಗಜಿಯನ್ನು ಭೆಟ್ಟಿಯಾಗಲು ಆಕೋಟಕ್ಕೆ ಬಂದರು । ಅವರ ಮಠದ ಬಳಿ ಭಾವಿಯಿತ್ತು । ಅಲ್ಲಿ ಹೋದರು । ಬಾವಿಯ ಹತ್ತಿರ ಕಾಲು ಬಿಟ್ಟು, ಒಳಗಿನ ನೀರನ್ನು ನೋಡತೊಡಗಿದರು । ಮಹಾರಾಜರ ಈ ಕೃತಿಯನ್ನು ಜನರು ಆಶ್ಚರ್ಯದಿಂದ ನೋಡತೊಡಗಿದರು । ನರಸಿಂಗಜಿ, ಮಹಾರಾಜರಿಗೆ ನುಡಿದರು, ಎಲೈ, ಬಂಧು, ಇದೇನು ನಡೆದಿದೆ?। ಮಹಾರಾಜರು ಗೋದಾ, ಯಮುನಾ ಹಾಗೂ ಭಾಗಿರಥಿಯ ತೀರ್ಥವು ನಿಮಗಾಗಿ ದಾರಿಕಾಯುತ್ತಿದೆ । ಬೇರೆ ಯಾವ ತೀರ್ಥ ಜಲವೂ ಇದೆಯೋ ಏನೋ ಎಂದು ನೋಡುತ್ತಿರುವೆನು । ತಾವು ಈ ಪವಿತ್ರ ಜಲದಿಂದ ದಿನಾಲು ಸ್ನಾನ





ಮಾಡುವಾಗ ನಾನೇಕೆ ವಂಚಿತನಾಗಲಿ ? ಈ ತೀರ್ಥದಿಂದ ನನಗೆ ಸ್ನಾನ ಮಾಡಿಸಿರಿ । ಈ ಜಲದಿಂದ ಸ್ನಾನ ಆಗುವವರೆಗೆ ಇಲ್ಲಿಂದ ನಾನು ಏಳಲಾರೆ । ಉಪಸ್ಥಿತ ಜನರು ಮಹಾರಾಜರ ಮಾತನ್ನು ಕೇಳಿದರು । ಕೆಲವರು ಇವರು ನಿಜವಾಗಿಯೂ ಹುಚ್ಚರಿರುವರು ಎಂದರು । ಶೇಗಾಂವಿಯ ಜನರು ಇವರ ಅನುಯಾಯಿ ಹೇಗಾದರೋ ಏನೋ ? ಇಲ್ಲಿ ನಿಂತು ನೋಡೋಣ, ಇವನು ಏನು ಮಾಡುವನೆಂದು । ಅಷ್ಟರಲ್ಲಿ ಮಹಾರಾಜರ ಲೀಲೆಯಿಂದ ಕೆಲವು ಕ್ಷಣಗಳಲ್ಲಿ ಬಾವಿಯು ನೀರಿನಿಂದ ತುಂಬಿತು । ಸಾವಿರಾರು ಕಾರಂಜಿಗಳು ಬಾವಿಯಿಂದ ಹೊರಬಿದ್ದು ಮಹಾರಾಜರ ಮೇಲೆ ಸುರಿಯತೊಡಗಿದವು । ಮಹಾರಾಜರು ಗ್ರಾಮವಾಸಿಗಳಿಗೆ, ಈಗ ಆನಂದದಿಂದ ಸ್ನಾನ ಮಾಡಿರಿ, ಸ್ನಾನ ಮಾಡಲು ಬಾವಿಯಲ್ಲಿ ಇಳಿಯುವ ಅವಶ್ಯಕತೆ ಇಲ್ಲ ಎಂದರು । ಗಂಗಾ, ಯಮುನಾ, ಹಾಗೂ ಗೋದಾವರಿ ಮೇಲೆ ಬಂದಿರುವರು। ಪವಿತ್ರ ನದಿಗಳಲ್ಲಿ ಸ್ನಾನ ಮಾಡುವ ಭಾಗ್ಯವನ್ನು ಕಳೆದುಕೊಳ್ಳಬೇಡಿರಿ । ಭಾವಿಕರು ಸ್ನಾನ ಮಾಡಿದರು । ಮತ್ತು ನಿಂದಿಸುವವರು, ಲಜ್ಜೆಯಿಂದ ಮುಖ ಮುಚ್ಚಿಕೊಂಡರು । ಸಂತರ ಇಚ್ಛೆ ಸುಳ್ಳಾಗದಂತೆ ದೇವರು ನೋಡಿ ಕೊಳ್ಳುತ್ತಾನೆ। ಸ್ನಾನವಾದ ನಂತರ ಕಾರಂಜಿಗಳು ನಿಂತು, ಬಾವಿಯ ನೀರು ಮೊದಲಿನಂತೆ ಆಯಿತು । ನರಸಿಂಗನನ್ನು ಭೆಟ್ಟಿಯಾಗಿ ಮಹಾರಾಜರು ಮನೋರೂಪದ ಕುದುರೆಯ ಮೇಲೆ ಕುಳಿತು ಶೇಗಾಂವಿಗೆ ಮರಳಿದರು । ಸ್ವಸ್ತಿ ಶ್ರೀ ದಾಸಗಣು ವಿರಚಿತ ಈ ಶ್ರೀ ಗಜಾನನ ವಿಜಯವೆಂಬ ಗ್ರಂಥ ಭಾವಿಕರಿಗೆ ಶಕ್ತಿಕೊಡಲಿ ।

**॥ ಶುಭಂ ಭವತು ॥ ಶ್ರೀ ಹರಿಹರಾರ್ಪಣಮಸ್ತು ॥**

॥ ಇಲ್ಲಿಗೆ ಹದಿನೇಳನೆಯ ಅಧ್ಯಾಯವು ಮುಗಿಯಿತು ॥





ಶ್ರೀ ಗಜಾನನ ಮಹಾರಾಜರು ಪಂಢರಪುರದಲ್ಲಿ ಬಾಪು ಕಾಳೆಗೆ ಶ್ರೀ ವಿಠ್ಠಲನ ಸ್ವರೂಪದಲ್ಲಿ ದರ್ಶನ ನೀಡಿದರು.

## ॥ ಅಧ್ಯಾಯ ೧೮ ॥

ಶ್ರೀ ಗಣೇಶಾಯನಮಃ। ಜಯ ಜಯಾಜಿ ಚಿದ್ವಿಲಾಸ ! ಹೇ ಗೋವಿಂದ ಶ್ರೀನಿವಾಸ ! ಹೇ ಆನಂದಕಂದ ಪರೇಷ ! ಪಾಹಿ ಮಾಮ್ ದೀನ ಬಂಧು ! ಹೇ ಕೇಶವ, ಕೇಶಿಮರ್ದನ ! ಹೇ ಮಾಧವ, ಮಧುಸೂಧನ ! ಹೇ ಪೂತನಾ ರಾಕ್ಷಸಿಯ ಪ್ರಾಣಹಾರಕ, ಪಾಂಡುರಂಗ ರುಕ್ಮಿಣಿ ಪತೇ ! ಹೇ ಚಕ್ರಪಾಣಿ ! ನನ್ನ ಮನಸ್ಸಿನಲ್ಲಿರುವದೆಲ್ಲ ನಿನಗೆ ಗೊತ್ತು। ಹೇ ಪದ್ಮನಾಭ ! ತಮಗೆ ಗೊತ್ತಿರುವದನ್ನು ಹೇಳುವದರಲ್ಲಿ ಏನು ಲಾಭ ? ಹೇ ಶ್ರೀ ಹರಿ, ಭಕ್ತರ ಅವಶ್ಯಕತೆಯನ್ನು ತಿಳಿದುಕೊಂಡು, ತಾವು ಅವರನ್ನು ತೃಪ್ತಗೊಳಿಸುವಿರಿ। ಈ ರೀತಿಯ ವರ್ಣನೆಯನ್ನು ಪುರಾಣಗಳಲ್ಲಿ ಅನೇಕ ಕಡೆ ಮಾಡಿರುವರು। ಹೇ ಪಂಢರಿನಾಥ, ನನ್ನ ಇಚ್ಛೆಯನ್ನು ಪೂರ್ಣಗೊಳಿಸಿರಿ। ಮತ್ತು ತಮ್ಮ ಮನವನ್ನು ಕಠೋರ ಮಾಡದಿರಿ। ಏಕೆಂದರೆ ದಾಸಗಣು ತಮ್ಮ ಬಾಲಕ। ಇರಲಿ ! ಆಕೋಟದ ಹತ್ತಿರ ಮುಂಡಗಾಂವಿಯಲ್ಲಿ ಬಾಯಜಾ ಎಂಬ ಸ್ತ್ರೀ ಇದ್ದಳು। ಅವಳ ತಂದೆಯ ಹೆಸರು ಶಿವರಾಮ ಮತ್ತು ತಾಯಿಯ ಹೆಸರು ಭುಲಾಬಾಯಿ। ಬಾಯಜಾಳ ಮದುವೆ ಚಿಕ್ಕಂದಿನಲ್ಲೇ ಆಗಿತ್ತು। ತಮ್ಮ ಹಣೆಬರಹದಲ್ಲಿ ಬರೆದಂತೆ ಜೀವನವನ್ನು ಕಳೆಯಬೇಕಾಗುವದು। ಬಾಯಜಾ ತರುಣ್ಯಾವಸ್ಥೆಗೆ ಬಂದಳು। ಆದ್ದರಿಂದ ಗರ್ಭದಾನದ ವಿಧಿಗಾಗಿ ಅವಳ ತಂದೆ ಬಾಯಜಾಗೆ ಅತ್ತೆಮನೆಗೆ ಕರೆದುಕೊಂಡು ಹೋದನು। ಆದರೆ ಅಳಿಯನು ಷಂಢನು ಎಂದು ತಿಳಿಯಿತು। ಇದರಿಂದ ಜನಕ ಜನನಿಗೆ ಬಹಳ ದುಃಖವಾಯಿತು। ಬಾಯಜಿಯ ಸ್ಥಿತಿ ತಿಳಿದು ತಾಯಿಯು ಅಳತೊಡಗಿದಳು। ಏಕೆಂದರೆ ಪತಿಯಿಂದಾಗಿ ಅವಳ ಯೌವನವು ವ್ಯರ್ಥವಾಗುವದು। ಭುಲಾಬಾಯಿ ಶಿವರಾಮನಿಗೆ ಈಗ ಬಾಯಜಾಗೆ ಇಲ್ಲಿ ಇರುವದು ಒಳ್ಳೆಯದಲ್ಲ ಎಂದಳು। ನಾವು ಅವಳ ಪುನರ್ವಿವಾಹವನ್ನು ಬೇರೆ ಸ್ಥಳಕ್ಕೆ ಮಾಡೋಣ। ಆಗ ಶಿವರಾಮನು ನಾವು ಇಷ್ಟು ಬೇಗ ಆತ್ಮವಿಶ್ವಾಸ ಕಳೆದುಕೊಳ್ಳುವದು ಸರಿಯಲ್ಲ। ಕೆಲವು ಪುರುಷರ ಪುರುಷತ್ವ ಕಂಡು ಬರಲು ತಡವಾಗುತ್ತದೆ। ಕೆಲವು ದಿನ ನಾವು ದಾರಿ ಕಾಯೋಣ। ಬಾಯಜಾಗೆ ಅತ್ತೆ ಮನೆಯಲ್ಲೇ ಕೆಲವು ದಿನ ಇಡೋಣ। ಏಕೆಂದರೆ ಷಂಢತ್ವ ಯಾವದೇ ಕಾರಣದಿಂದ ಬಂದಿದ್ದರೇ ಔಷಧೋಪಚಾರದಿಂದ ಸರಿಯಾಗಬಹುದು। ನಾವು ಕೆಲವು ದಿನ ದಾರಿ ಕಾಯೋಣ। ಈ ರೀತಿ ವಿಚಾರ ಮಾಡಿ ಇಬ್ಬರೂ ಬಾಯಜಾಗೆ ಅತ್ತೆ ಮನೆಯಲ್ಲಿ ಬಿಟ್ಟು ಮುಂಡಗಾಂವಿಗೆ ಮರಳಿದರು।

ಬಾಯಜಾಗೆ ಆಗ ಹದಿನಾರು ವರ್ಷ । ಅವಳು ಕಪ್ಪು ವರ್ಣದವಳಿದ್ದಳು । ತಾರುಣ್ಯದಿಂದ ಅವಳ ಶರೀರ ತುಂಬಿತ್ತು ಕಣ್ಣು ಹಾಗೂ ಮೂಗು ತೇಜಸ್ವಿಯಾಗಿದ್ದವು । ಅವಳು ಎತ್ತರವಾಗಿದ್ದು, ತೆಳ್ಳಗಿನ ಶರೀರವಾಗಿತ್ತು, ಅವಳನ್ನು ಕಣ್ಣೆತ್ತಿ ನೋಡಿದ ಪುರುಷನು ಮೋಹಿತನಾಗುವದರಲ್ಲಿ ಸಂಶಯವಿಲ್ಲ । ಅವಳ ಹಿರಿಯ ಭಾವನಿಗೆ ಅವಳನ್ನು ಭೋಗಿಸುವ ಇಚ್ಛೆ ಉಂಟಾಯಿತು । ತಮ್ಮ ಇಚ್ಛೆಯನ್ನು ಪೂರ್ಣಗೊಳಿಸಲು ಅವನು ಪ್ರಯತ್ನ ಮಾಡಿದನು । ಅವನು ನೀನು ಪತಿಯ ಕಾರಣದಿಂದ ಹತಾಶನಾಗಬೇಡ । ನಾನು ನಿನ್ನ ಪತಿಯ ಸ್ಥಾನದಲ್ಲಿರುವೆನು । ಆಮರಣ ನಿನ್ನನ್ನು ಕಾಪಾಡುವೆನು । ದುಃಖಿತನಾಗದೆ, ಆನಂದದಿಂದ ಜೀವನವನ್ನು ಕಳೆ । ಇಂದಿನಿಂದ ನನಗೆ ಪತಿಯೊಂದು ತಿಳಿದುಕೊ । ಈ ರೀತಿ ನುಡಿದು, ಸನ್ನೆಗಳಿಂದ ಮತ್ತು ವಸ್ತುಗಳನ್ನು ಕೊಡುವ ನೆವಮಾಡಿ ಅವಳನ್ನು ವಶಮಾಡಲು ಪ್ರಯತ್ನಿಸುತ್ತಿದ್ದನು । ಆದರೆ ಬಾಯಜಾ ಒಳ್ಳೆಯ ಮನೆತನದವರಳಾಗಿದ್ದರಿಂದ ಅವನಿಗೆ ಯಶಸ್ಸು ದೊರಕಲಿಲ್ಲ । ಭಾವನ ಈ ಪ್ರಯತ್ನವನ್ನು ನೋಡಿ ಅವಳು ದೇವರ ಪ್ರಾರ್ಥನೆ ಮಾಡತೊಡಗಿದಳು, ಹೇ ನಾರಾಯಣ, ಈ ಆಪತ್ತಿ ನನ್ನ ಮೇಲೆ ಏಕೆ ಬಂದಿದೆ? ಹೇ ಭಗವನ್, ಚಿಕ್ಕಂದಿನಿಂದ ನಿಮ್ಮ ಚರಣಸೇವೆ ಮಾಡಿದ್ದರ ಫಲವನ್ನು ಈ ರೀತಿ ಕೊಡುವಿರೋ ? ನನಗೆ ದೊರೆತ ಜೀವನ ಸಾಥಿಯು ನಪುಂಸಕನು । ಇದನ್ನು ತಿಳಿದುಕೊಂಡು, ನನ್ನ ಹಣೆಬರಹದಲ್ಲಿ ಶಾರೀರಿಕ ಸುಖವಿಲ್ಲ ಎಂಬುದನ್ನು ತಿಳಿದುಕೊಂಡು, ನನ್ನ ಮನಸ್ಸನ್ನು ನಿಯಂತ್ರಿಸಲು ಪ್ರಯತ್ನಿಸುತ್ತಿದ್ದೇನೆ । ನನ್ನ ವಿಧಿಲಿಖಿತದಂತೆ ಆಗುವದು, ಆದ್ದರಿಂದ ಶೇಷಶಾಹಿ, ನನ್ನ ಮನಸ್ಸಿನಲ್ಲಿ ಬೇರೆ ಪುರುಷರ ಬಗ್ಗೆ ವಿಚಾರ ಮಾಡದೇ ತಮ್ಮಲ್ಲಿ ಲೀನವಾಗುವಂತೆ ಶಕ್ತಿಕೊಡಿರಿ । ಒಂದು ದಿನ ರಾತ್ರಿ ಬಾಯಜಾಳ ಭಾವನು ಅವಳ ಹತ್ತಿರ ಬಂದು ಮನಸ್ಸಿನಲ್ಲಿಯ ಮಾತನ್ನು ಹೇಳಿದನು । ಭಾವನ ಮಾತನ್ನು ಕೇಳಿ, ಸಿಟ್ಟಿನಿಂದ ವಿರೋಧಿಸಿ ಈ ಮಾತುಗಳನ್ನು ಆಡಲು ನಾಚಿಕೆಯಾಗುವದಿಲ್ಲವೇ ? ಏನು ನಾಚಿಕೆಯನ್ನು ಮಾರಾಟ ಮಾಡಿ ಬಂದಿರಾ ? ದೊಡ್ಡ ಭಾವನು ತಂದೆಯ ಸಮಾನ ಎಂದಳು । ಆದ್ದರಿಂದ ಅವಿಚಾರ ಬಿಟ್ಟು ಕಾಮಾಂಧನಾಗಬೇಡಿ । ಇಷ್ಟು ನುಡಿದರೂ ಅವನು ಕೇಳಲಿಲ್ಲ । ಏಕೆಂದರೆ ಅವನು ಕಾಮಾಂಧನಾಗಿದ್ದನು । ಮನುಷ್ಯನ ಕಾಮ–ವಾಸನೆಯು ಪ್ರಜ್ವಲಿತವಾದಾಗ, ಅವನು ಧರ್ಮ ಹಾಗೂ ನೀತಿಯನ್ನು ಮರೆತು ಬಿಡುತ್ತಾನೆ । ಅವಿಚಾರದಿಂದ ಅವನು ಆಕೆಯ ಹೆಗಲಿನ ಮೇಲೆ ಕೈ ಇಡುವದರಲ್ಲಿದ್ದನು, ಅಷ್ಟರಲ್ಲಿ ಅವನ ಮಗನು ಅಟ್ಟದ ಮೇಲಿಂದ ಬಿದ್ದನು । ॥ 174 ॥
ಅವನ ತಲೆಗೆ ಗಾಯವಾಯಿತು । ಬಾಯಜಾ ಓಡಿ ಹೋಗಿ ಅವನನ್ನು ತೊಡೆಯ ಮೇಲೆ ಕೂಡಿಸಿಕೊಂಡು ಔಷಧ




ಹಚ್ಚಿದಳು । ನಂತರ ಬಾಯಜಾ ತಮ್ಮ ಭಾವನಿಗೆ ಪರಸ್ತ್ರೀಯ ಬಗ್ಗೆ ಅಭಿಲಾಷೆ ಇಡುವದು ಒಳ್ಳೆಯದಲ್ಲ ಎಂದಳು । ಮಗನು ಬಿದ್ದಿದ್ದರಿಂದ ಅವನು ಬೆದರಿದನು । ಅವನಿಗೆ ತಮ್ಮ ದುಷ್ಟ ಇಚ್ಛೆಯ ಬಗ್ಗೆ ದುಃಖವಾಯಿತು । ಆ ನಂತರ ಅವನು ತನ್ನ ಅತ್ತಿಗೆಯ ಮೇಲೆ ಕಣ್ಣು ಹಾಕಲಿಲ್ಲ । ಕೆಲವು ದಿನಗಳ ನಂತರ ಶಿವರಾಮನು ತಮ್ಮ ಕನ್ಯೆಗೆ ಮುಂಡಗಾಂವಿಗೆ ಕರೆದುಕೊಂಡು ಬಂದನು । ಭುಲಾಬಾಯಿ ತಮ್ಮ ಪತಿಗೆ ನಮ್ಮ ಮಗಳನ್ನು ಕರೆದುಕೊಂಡು ಶೇಗಾಂವಿಗೆ ಹೋಗಿ ಮಹಾರಾಜರಿಗೆ ಅವಳ ಭವಿಷ್ಯದ ಬಗ್ಗೆ ಕೇಳೋಣ ಎಂದಳು । ಹೆಂಡತಿಯ ಮಾತು ಸರಿಯೆನಿಸಿ, ಅವರು ಶೇಗಾಂವಿಗೆ ತಲುಪಿದರು । ಮಗಳು ಮಹಾರಾಜರ ಚರಣಗಳಲ್ಲಿ ವಂದಿಸಿದಾಗ, ಶಿವರಾಮನು ಮಹಾರಾಜರಿಗೆ ಈ ಹುಡುಗಿಯ ಮೇಲೆ ಕೃಪೆ ಮಾಡಿರಿ ಎಂದನು । ಇವಳಿಗೆ ಮಕ್ಕಳಾಗುವಂತೆ ಆಶೀರ್ವಾದ ಮಾಡಿರಿ ಎಂದನು । ಮಹಾರಾಜರು ಅವನ ಇಚ್ಛೆಯನ್ನು ತಿಳಿದುಕೊಂಡು ನಕ್ಕು ನುಡಿದರು, ಶಿವರಾಮ ಇವಳ ಹಣೆಬರಹದಲ್ಲಿ ಪುತ್ರಯೋಗವು ಇಲ್ಲ । ಈ ಜಗತ್ತಿನಲ್ಲಿಯ ಎಲ್ಲ ಪುರುಷರು ಇವಳಿಗೆ ತಂದೆಯ ಸಮಾನರಾಗುವರು । ಆದ್ದರಿಂದ ಎರಡನೇಯ ವಿವಾಹ ಮಾಡುವ ವಿಚಾರ ಮಾಡಬೇಡಿರಿ । ಈ ಮಾತನ್ನು ಕೇಳಿ ಶಿವರಾಮನು ದುಃಖಿತನಾದನು । ಮತ್ತು ಬಾಯಜಾಳನ್ನು ಕರೆದುಕೊಂಡು ಮುಂಡಗಾಂವಿಗೆ ಮರಳಿದನು । ತಂದೆತಾಯಿ ಮಹಾರಾಜರ ವಾಣಿಯಿಂದ ದುಃಖಿತರಾದರು, ಆದರೆ ಬಾಯಜಾ ಈ ವಾಣಿಯಿಂದ ಬಹಳ ಆನಂದಿತಳಾದಳು । ಆ ದಿನದಿಂದ ಗಜಾನನ ಮಹಾರಾಜರ ಪ್ರತಿ ಅವಳ ಶ್ರದ್ಧೆಯು ದೃಢವಾಯಿತು । ಪುಂಡಲೀಕನೆಂಬ ಯುವಕನು ಮಹಾರಾಜರ ಭಕ್ತನಾಗಿದ್ದನು । ಅವನ ಜೊತೆಗೆ ಬಾಯಜಾ ಮಹಾರಾಜರ ದರ್ಶನಕ್ಕಾಗಿ ಹೋಗುತ್ತಿದ್ದಳು । ಆರಂಭದಲ್ಲಿ ಪುಂಡಲೀಕನ ಜೊತೆಗೆ ಬಾಯಜಾ ಶೇಗಾಂವಿಗೆ ಹೋಗುವದಕ್ಕೆ ತಂದೆ ತಾಯಿಗಳು ಹಿಂದೆ ಮುಂದೆ ನೋಡಲಿಲ್ಲ । ತಂದೆ–ತಾಯಿ ಮಗಳು ಮಹಾರಾಜರ ಶ್ರೀ ಚರಣಗಳಲ್ಲಿ ಶರಣರಾಗಿದ್ದಾಳೆ ಎಂದು ನಂಬಿದ್ದರು । ಮಹಾರಾಜರು ಅವಳ ಮೇಲೆ ಕೃಪೆ ಮಾಡುವರು । ಅವರು ಅಳಿಯನಿಗೆ ಪುರುಷತ್ವವನ್ನು ದಯಪಾಲಿಸಬಹುದು ಏಕೆಂದರೆ ಸಂತರು ಬೇಕಿದ್ದನ್ನು ಮಾಡಬಹುದು । ಆದ್ದರಿಂದ ಪುಂಡಲೀಕನ ಜೊತೆಗೆ ಶೇಗಾಂವಿಗೆ ಹೋಗಲು ಅವರು ವಿರೋಧಿಸಲಿಲ್ಲ । ಆದರೆ ಈ ಮಾತು ಎಲ್ಲ ಕಡೆಗೆ ಹಬ್ಬಿತು ಮತ್ತು ಜನರು ಬಾಯಿಗೆ ಬಂದಿದ್ದನ್ನು ಮಾತನಾಡ ತೊಡಗಿದರು । ಇಬ್ಬರೂ ಸೇರಿ ಶೇಗಾಂವಿಗೆ ಹೋಗುವದು ಒಂದು ॥ 175 ॥
ನೆವ । ಏಕೆಂದರೆ ಯುವಾವಸ್ಥೆಯಲ್ಲಿ ಮನುಷ್ಯನು ಪರಮಾರ್ಥ ಮಾಡುವದು ಸಾಧ್ಯವೆ ? ಬಾಯಜಾ ಹಾಗೂ

ಪುಂಡಲೀಕ ಇಬ್ಬರೂ ಯುವಕ, ಯುವತಿಯರು । ಆದ್ದರಿಂದ ಪರಸ್ಪರ ಆಕರ್ಷಣೆಯೇ ಅವರ ಯಾತ್ರೆಯ ಕಾರಣವಾಗಬಹುದು । ಅವರಿಬ್ಬರೂ ಆಕರ್ಷಿತರಾಗಿರುವರು, ಆದ್ದರಿಂದ ವಿಷಯ ಭೋಗಗಳಿಗಾಗಿ ಅವರು ಶೇಗಾಂವಿಗೆ ಯಾತ್ರೆ ಮಾಡುತ್ತಿರುವರು । ಪುಂಡಲೀಕನು ಕೂಡಾ ಮಾಳಿ ಜಾತಿ (ಒಕ್ಕಲಿಗ ಜಾತಿ) ಯವನಾಗಿದ್ದರೆ, ಇಬ್ಬರೂ ತರುಣರಾಗಿದ್ದರಿಂದ ಅವರ ಮನಸ್ಸು ಒಂದಾಗಿದ್ದರೆ ಏನೂ ಕಷ್ಟವಿರಲಿಲ್ಲ। ಆದರೆ ಪುಂಡಲೀಕನು ಮರಾಠಾ ಹಾಗೂ ಬಾಯಜಾ ಒಕ್ಕಲಿಗ ಜಾತಿಯವಳಾಗಿದ್ದರಿಂದ, ಇಬ್ಬರೂ ಒಂದಾಗಿ ದುರಾಚಾರ ಮಾಡುವ ಸಾಧ್ಯತೆ ಇರುವದರಿಂದ ಅವರನ್ನು ದೂರ ಇಡುವದೇ ಒಳ್ಳೆಯದು, ಎಂದು ಜನರು ಆಡತೊಡಗಿದರು । ಜನರೇನು ಆಡಿದರೂ, ಅವರ ಭಾವನೆಗಳು ವಿರುದ್ಧ ಇರುವದರಿಂದ ಮನಸ್ಸಿನಲ್ಲಿ ಕಾಮ ವಿಕಾರಗಳು ಏಳಷ್ಟು ಬರಲಿಲ್ಲ। ಆದರೆ ಅವರ ಭಾವನೆಗಳನ್ನು ತಂದೆ ತಾಯಿ ಹಾಗೂ ಊರಿನವರು ಅರಿಯುವದು ಹೇಗೆ ಸಾಧ್ಯ। ಭುಲಾಬಾಯಿ ಕ್ರೋಧದಿಂದ ತಮ್ಮ ಮಗಳಿಗೆ ನುಡಿದಳು, ಏಲ್ಯೆ ಕುಪುತ್ರಿ ನೀನು ಮೇಲಿಂದ ಮೇಲೆ ಆ ಪುಂಡಲೀಕನ ಮನೆಗೆ ಏಕೆ ಹೋಗುವಿ ಎಂಬುದು ತಿಳಿಯದು । ಈ ಯುವಾವಸ್ಥೆಯಲ್ಲಿ ನಿನ್ನಿಂದೇನು ಮಣ್ಣಾಗುವದು ಪರಮಾರ್ಥ । ಕಬ್ಬಿನ ತೋಟದಲ್ಲಿ ಹೊಕ್ಕು ನರಿಯು ಕಬ್ಬನ್ನು ತಿನ್ನದೆ ಹಿಂದಿರುಗುವದು ಸಾಧ್ಯವೇ ? ಅಥವಾ ಹಚ್ಚ ಹಸಿರು ಹುಲ್ಲನ್ನು ನೋಡಿ ಎತ್ತುಗಳು ಹಾಗೇ ಮುಂದೆ ಹೋಗವದು ಸಾಧ್ಯವೇ ? ನಿನ್ನ ಪರಾಕ್ರಮಗಳಿಂದ ನಮ್ಮ ಮುಖಕ್ಕೆ ಮಸಿ ಬಳಿಯಬೇಡ । ನಂತರ ತನ್ನ ಪತಿಗೆ ನುಡಿದಳು, ನಾಥ, ಈಗ ಇವಳನ್ನು ಹೀಗೆ ಇಡುವದು ಸರಿಯಲ್ಲ। ಯಾವದಾದರೂ ಹುಡುಗನನ್ನು ನೋಡಿ ನಮ್ಮ ಒಕ್ಕಲಿಗ ಜಾತಿಯಲ್ಲಿಯೇ ಪುನರ್‌ವಿವಾಹ ಮಾಡಿಬಿಡಿ । ಇವಳು ಹಗಲೆಲ್ಲ ಆ ಪುಂಡಲೀಕನ ಮನೆಗೆ ಹೋಗಿ ಅವನೊಡನೆ ಮಾತನಾಡುತ್ತಾಳೆ। ಆದ್ದರಿಂದ ಇಲ್ಲಿ ಏನೋ ಆಟ ನಡೆದಿದೆ। ಈಗ ಶೇಗಾಂವಿಗೆ ಹೋಗಿ ಮಹಾರಾಜರಿಗೆ ಇವಳ ಕಾರುಭಾರವನ್ನು ಹೇಳಿ ಬಿಡೋಣ। ಸಂತರು ಎಲ್ಲವನ್ನು ಅರಿಯುವರು। ಅವರಿಗೆ ಭಕ್ತರಿಂದ ಶುಭಾಚರಣೆಯ ಅಪೇಕ್ಷೆ ಇರುತ್ತದೆ। ಚಂದನದಿಂದ ದುರ್ವಾಸನೆ ಸಾಧ್ಯವಿಲ್ಲ। ಕೊನೆಗೆ ಭುಲಾಬಾಯಿ, ಶಿವರಾಮ, ಬಾಯಜಾಬಾಯಿ ಮತ್ತು ಪುಂಡಲೀಕ ಭೋಕರಾ, ಶೇಗಾಂವಿಗೆ ಮಹಾರಾಜರ ದರ್ಶನಕ್ಕಾಗಿ ತಲುಪಿದರು। ಪುಂಡಲೀಕನನ್ನು ಕಂಡೊಡನೆ ದಯಾಘನ ಮಹಾರಾಜರು ನುಡಿದರು, ಪುಂಡಲೀಕ, ಪೂರ್ವಜನ್ಮದಲ್ಲಿ ಬಾಯಜಾ ನಿನ್ನ ತಂಗಿಯಾಗಿದ್ದಳು। ಜನರು ಬಾಯಿಗೆ ಬಂದಿದ್ದನ್ನು ಆಡುವರು, ಆದರೆ ನೀನು ನಿನ್ನ ಸಹೋದರಿಯಿಂದ ಅಂತರ ವಿಡಬೇಡ । ಇಬ್ಬರೂ ಸೇರಿ





ಸಚ್ಚಿದಾನಂದ ಹರಿಯ ದರ್ಶನವನ್ನು ಪಡೆದು ಭಕ್ತಿ ಮಾಡಿರಿ । ನಂತರ ಮಹಾರಾಜರು ಭುಲಾಬಾಯಿಗೆ ತಮ್ಮ ಮಗಳ ಮೇಲೆ ವೃಥಾ ಆರೋಪವಿಡಬೇಡ ಎಂದರು ಯ ಹಿಂದಿನ ಜನ್ಮದಲ್ಲಿ ಇಬ್ಬರೂ ಅಣ್ಣಾ–ತಂಗಿ ಇದ್ದರು। ಮತ್ತು ಅವಳಿಗೆ ಪತಿಯು ದೊರಕಬಹುದು ಎಂಬ ಆಶೆಯನ್ನು ಬಿಟ್ಟು, ಬಿಡು। ಏಕೆಂದರೆ ಪ್ರಪಂಚ ಮಾಡಿ ಸಂಸಾರ ಸುಖ ಪಡೆಯಲು ಅವಳು ಈ ಸಂಸಾರದಲ್ಲಿ ಬಂದಿಲ್ಲ। ಪಂಢರಪುರದ ನಾಮದೇವರ ಜೊತೆ ಸಂತ ಜನಾಬಾಯಿ ಇದ್ದಳು, ಅದೇ ರೀತಿ ಹುಡುಗಿ ಸಂಪೂರ್ಣ ಜನ್ಮ ವ್ರತಸ್ಥಳಾಗಿ ಇರುವಳು। ಜನಾಬಾಯಿಯ ಗುರು ಸಂತ ನಾಮದೇವರಿದ್ದರು। ನಿನ್ನ ಮಗಳು ನನಗೆ ಶರಣು ಬಂದಿರುವಳು। ಇದರಿಂದ ನನ್ನ ಜನಾಬಾಯಿಗೆ ಕಷ್ಟವಾಗಬಾರದು। ಮಹಾರಾಜರ ಅಮೃತವಾಣಿ ಕೇಳಿ, ಶಿವರಾಮ, ಬಾಯಜಾಬಾಯಿಯ ಹೃದಯ ತುಂಬಿ ಬಂದಿತು ಮತ್ತು ಅವರ ಮುಖದಿಂದ ಶಬ್ದ ಹೊರಬೀಳಲಿಲ್ಲ ಈ ಪ್ರಸಂಗದ ನಂತರ ಬಾಯಜಾಗೆ ಪುಂಡಲೀಕನ ಜೊತೆಗೆ ಹೋಗಲು ಎಂದಿಗೂ ಅಡ್ಡ ಬರಲಿಲ್ಲ । ಇರಲಿ ! ಮಹಾರಾಜರು ತಮ್ಮ ಭಕ್ತರ ರಕ್ಷಣೆ ಹೇಗೆ ಮಾಡುವರು ಎಂಬ ಬಗ್ಗೆ ಮತ್ತೊಂದು ಕಥೆಯನ್ನು ಕೇಳಿರಿ । ಭಾವು ರಾಜಾರಾಮ ಕವರ ಎಂಬ ಡಾಕ್ಟರನು ಖಾಮಗಾಂವಿನ ಆಸ್ಪತ್ರೆಯಲ್ಲಿ ಅಧಿಕಾರಿಯಾಗಿದ್ದನು। ಅವನು ಮಹಾರಾಜರ ಭಕ್ತನು । ಒಮ್ಮೆ ಅವನಿಗೆ ಒಂದು ದೊಡ್ಡ ಹುಣ್ಣಾಯಿತು । ಉಪಚಾರಕ್ಕಾಗಿ ದೊಡ್ಡ ಡಾಕ್ಟರರನ್ನು ಖಾಮಗಾಂವಕ್ಕೆ ಕರೆಯಲಾಯಿತು । ಬುಲ್‌ಢಾಣಾ, ಆಕೋಲಾ, ಅಮರಾವತಿ ಮೊದಲಾದ ಸ್ಥಳಗಳಿಂದ ಪ್ರಖ್ಯಾತ ಡಾಕ್ಟರರು ಶಸ್ತ್ರಕ್ರಿಯೆ ಮಾಡಲು ಖಾಮಗಾಂವಿಗೆ ಬಂದರು । ಅನೇಕ ಪ್ರಕಾರದ ಔಷಧಿಗಳನ್ನು, ಹುಣ್ಣಿನ ಮೇಲೆ ಮಲಮುಗಳನ್ನು ಹಚ್ಚಿದರಲ್ಲದೆ ಶಸ್ತ್ರಕ್ರಿಯೆಯನ್ನೂ ಮಾಡಿದರು । ಆದರೆ ಎಲ್ಲ ಪ್ರಯತ್ನಗಳು ವ್ಯರ್ಥವಾದವು । ಹುಣ್ಣು ಕಡಿಮೆಯಾಗುವ ಬದಲು ಬೆಳೆಯತೊಡಗಿತು। ಭಾವುನ ಅಣ್ಣನು ಚಿಂತಾಕ್ರಾಂತನಾದನು। ಭಾವು ಭಯಂಕರ ವೇದನೆಯಿಂದೆ ನರಳುತ್ತಿದ್ದನು। ಕೊನೆಗೆ ಅವನು ಇದರ ಮೇಲೆ ಒಂದೇ ಉಪಾಯವಿದೆ ಎಂದನು। ಸದ್ಗುರುಗೆ ಶರಣು ಹೋಗುವದು । ಅದರ ಹೊರತು ಬೇರೆ ಉಪಾಯವಿಲ್ಲ । ಹಾಸಿಗೆಯಲ್ಲಿ ಬಿದ್ದಲ್ಲಿಯೇ ಅವನು ಕೈ ಮುಗಿದು ಪ್ರಾರ್ಥಿಸಿದನು, ಹೇ ಸದ್ಗುರುನಾಥ ಈಗ ತಡ ಮಾಡಬೇಡಿ । ಈ ಬಾಲಕನಿಗೆ ಕಷ್ಟಕೊಡದೇ, ಅವನ ಮೇಲೆ ದಯೆಮಾಡಿರಿ। ಈ ರೀತಿ ಪ್ರಭು ನಾಮಸ್ಮರಣೆ ಮಾಡುತ್ತ ಸಂಪೂರ್ಣ ರಾತ್ರಿಯನ್ನು ಕಳೆದನು। ರಾತ್ರಿ ಒಂದು ಘಂಟೆಯ ಸಮಯ । ಭಯಂಕರ ಕತ್ತಲೆ ಹಬ್ಬಿತ್ತು ಮತ್ತು ಎಲ್ಲೆಡೆ ಸ್ಮಶಾನ ಶಾಂತತೆ ಇತ್ತು। ಕಾಡಿನಲ್ಲಿಯ ನರಿಯ ಕೇಕೇ ಕೇಳಿ

ಬರುತ್ತಿತ್ತು। ಅಷ್ಟರಲ್ಲಿ ಒಂದು ಎತ್ತಿನಗಾಡಿ ದವಾಖಾನೆಯ ಬಳಿ ಬಂದಿತು। ಗಾಡಿಗೆ ಬಲಿಷ್ಠ ಎತ್ತುಗಳು ಇದ್ದು, ಅವುಗಳ ಕೊರಳಿನಲ್ಲಿ ಗೆಜ್ಜೆ ಪಟ್ಟಿ ಇತ್ತು। ಅವುಗಳ ಮಧುರ ಧ್ವನಿ ಕೇಳಿ ಬರುತ್ತಿತ್ತು। ಆ ಎತ್ತಿನ ಬಂಡಿ ದವಾಖಾನೆಯ ಮುಂದೆ ನಿಂತಿತು । ಇದನ್ನು ಭಾವು ಹಾಸಿಗೆಯ ಮೇಲೆ ಬಿದ್ದುಕೊಂಡು ನೋಡುತ್ತಿದ್ದನು । ಎತ್ತು ಗಾಡಿಯಿಂದ ಬ್ರಾಹ್ಮಣನು ಇಳಿದು, ಮನೆಯ ಬಾಗಿಲು ಬಡಿಯ ತೊಡಗಿದನು। ಡಾಕ್ಟರನ ಬಂಧು ಬಾಗಿಲು ತಗೆದು ತಾವು ಎಲ್ಲಿಂದ ಬಂದಿರುವಿರಿ ಎಂದು ಕೇಳಿದನು। ಆಗ ಬ್ರಾಹ್ಮಣನು ನನ್ನ ಹೆಸರು ಗಜಾ ಎಂದನು। ನಾನು ತೀರ್ಥ ಹಾಗೂ ವಿಭೂತಿಯನ್ನು (ಭಸ್ಮ) ಶೇಗಾಂವಿಯಿಂದ ತಂದಿರುವೆನು। ಡಾಕ್ಟರ.ಭಾವು ಕವರನಿಗೆ ಎಲ್ಲಿ ಹುಣ್ಣು ಆಗಿದೆಯೋ, ಅಲ್ಲಿ ಈ ಭಸ್ಮವನ್ನು ಹಚ್ಚಿರಿ। ಈ ತೀರ್ಥವನ್ನು ಕುಡಿಯಲು ಕೊಟ್ಟಿರುವರು, ಅದನ್ನು ಕೊಡಿರಿ। ನಾನು ಈಗ ಹೊರಡುವೆನು, ಏಕೆಂದರೆ ಬೇಗ ತಿರುಗಿ ಹೋಗಬೇಕಾಗಿದೆ। ತೀರ್ಥ ಹಾಗೂ ವಿಭೂತಿಯನ್ನು ಕೊಟ್ಟು, ಅವನು ಅಲ್ಲಿಂದ ಹೋದನು। ಅವನನ್ನು ಹುಡುಕಲು ಭಾವು ಒಬ್ಬನಿಗೆ ಅವನ ಹಿಂದೆ ಕಳುಹಿಸಿದನು। ಆದರೆ ಎತ್ತಿನ ಬಂಡಿ ಹಾಗೂ ಮನುಷ್ಯ ಇಬ್ಬರೂ ಕಂಡು ಬರಲಿಲ್ಲ। ಭಾವು ಯೋಚಿಸಿದನು, ಆದರೆ ಅವನಿಗೆ ಏನೂ ತಿಳಿಯಲಿಲ್ಲ। ಹುಣ್ಣಿನ ಮೇಲೆ ವಿಭೂತಿ ಹಚ್ಚಿದೊಡನೆ, ಅದು ಒಡೆದು, ಎಲ್ಲ ಕೀವು ಹೊರಗೆ ಬಂದಿತು। ನಂತರ ಭಾವುಗೆ ಗಾಢ ನಿದ್ರೆ ಬಂದಿತು। ಭಾವು ತೀರ್ಥ ಹಾಗೂ ವಿಭೂತಿಯಿಂದ ರೋಗ ಮುಕ್ತನಾದನು । ಕಾಲವಶ ಭಾವುನ ಆರೋಗ್ಯ ಮೊದಲಿನಂತಾಯಿತು । ನಂತರ ಭಾವು ಶೇಗಾಂವಿಗೆ ಮಹಾರಾಜರ ದರ್ಶನಕ್ಕಾಗಿ ಹೋದನು। ಅವನನ್ನು ನೋಡಿ ಮಹಾರಾಜರು, ಆದಿನ ನೀನು ನನ್ನ ಎತ್ತುಗಳಿಗೆ ಹುಲ್ಲು ಮತ್ತು ನೀರನ್ನು ಕೂಡ ಕೊಡಲಿಲ್ಲ ಎಂದರು। ಮಹಾರಾಜರ ಸಾಂಕೇತಿಕ ಭಾಷೆಯನ್ನು ಅರಿತು, ಭಾವುನ ಹೃದಯ ತುಂಬಿ ಬಂದಿತು। ಆ ದಿನ ಬಂದ ಬ್ರಾಹ್ಮಣನು ನಿಶ್ಚಿತವಾಗಿ ಮಹಾರಾಜರೇ ಇರಬಹುದು। ನನಗಾಗಿ ಅವರು ಖಾಮಗಾಂವಿಗೆ ಬಂದರು। ನಂತರ ವ್ಯಾಧಿ ಮುಕ್ತನಾದ ಆನಂದದಲ್ಲಿ ಕವರನು ಅನ್ನದಾನ ಮಾಡಿದನು। ಸಂತ ಗಜಾನನ ಮಹಾರಾಜರು ಅಂತರಜ್ಞಾನಿ ಎಂಬುದರ ಅನುಭವ ಕವರನಿಗೆ ಮತ್ತೊಂದು ಸಲ ಬಂದಿತು। ಇರಲಿ। ಒಮ್ಮೆ ಮಹಾರಾಜರು ಚಂದ್ರಭಾಗಾ ನದಿಯ ತೀರದ ಶ್ರೀ ವಿಠ್ಠಲನ ದರ್ಶನ ಪಡೆಯಲು ಪಂಢರಪುರಕ್ಕೆ ಹೊರಟರು। ಜೊತೆಗೆ ಭಕ್ತರಿದ್ದರು। ಹೊರಡುವ ದಿನ ಬಂದಿತು। ಜನರು ವಿಶೇಷ ಗಾಡಿಯಿಂದ ಹೊರಟರು। ಜಗು, ಆಬಾ ಪಾಟೀಲ, ಹರಿ, ಬಾಪುನಾ ಆದಿ ಕೆಲವು ಭಕ್ತರು ಶೇಗಾಂವಿಯನ್ನು ಬಿಟ್ಟು, ನಾಗಝರಿಗೆ ಬಂದರು। ಅಲ್ಲಿ ಊರ ಹೊರಗೆ ಒಂದು







ಗುಹೆಯಲ್ಲಿ ಗೋಮಾಜಿ ಎಂಬ ಸಾಧುವು ಸಮಾಧಿಸ್ಥನಾಗಿದ್ದಾನೆ । ಅಲ್ಲಿರುವ ಒಂದು ಕುಂಡದ ಗೋಮುಖದಿಂದ ಅಖಂಡ ನೀರು ಹರಿಯುತ್ತದೆ। ಸುತ್ತಮುತ್ತಲು ಅನೇಕ ಝರಿಗಳಿವೆ ಆದ್ದರಿಂದ ಈ ಊರಿನ ಹೆಸರು ನಾಗಝರಿ ಬಿದ್ದಿದೆ। ಮಹದಾಜಿ ಪಾಟೀಲನು ಗೋಮಾಜಿ ಸಾಧುಕಡೆಯಿಂದ ಪ್ರಥಮ ಆಶೀರ್ವಾದ ಪಡೆದನು। ನಂತರ ಶೇಗಾಂವಿಯ ಪಾಟೀಲ ಪರಿವಾರದವರು ಗೋಮಾಜಿ ಸಾಧುಕಡೆಯಿಂದ ಗುರುಪದೇಶ ಪಡೆದರು। ಆದ್ದರಿಂದ ಪಾಟೀಲ ವಂಶದ ಜನರು ಮೊದಲು ಗೋಮಾಜಿಯ ದರ್ಶನ ಪಡೆದು ನಂತರ ಪಂಢರಪುರಕ್ಕೆ ಪ್ರಯಾಣ ಮಾಡವರು। ಈ ಪ್ರಥೆಯು ಇಂದಿಗೂ ನಡೆದಿದೆ। ಈ ಪದ್ಧತಿಯ ಅನುಸಾರವಾಗಿ, ಜಗು, ಆಬಾ ಪಾಟೀಲ, ಮೊದಲಾದ ಭಕ್ತರು ಮೊದಲು ನಾಗಝರಿಗೆ ಬಂದು ಗೋಮಾಜಿ ಸಾಧು ದರ್ಶನ ಪಡೆದು ನಂತರ ರೈಲಿನಲ್ಲಿ ಕುಳಿತು ಪಂಢರಪುರಕ್ಕೆ ಪ್ರಯಾಣ ಮಾಡಿದರು। ಮಹಾರಾಜರ ಜೊತೆ, ಹರಿ ಪಾಟೀಲ, ಬಾಪುನಾ ಕಾಳೆ, ಮೊದಲಾದ ನಾಲ್ಕೈದು ಭಕ್ತರಿದ್ದರು। ಯಾತ್ರಿಕರು, ಆಷಾಢ ನವಮಿಯಿಂದಲೇ ಪಂಢರಪುರದಲ್ಲಿ ಕೂಡತೊಡಗಿದರು। ಹೇ ಶ್ರೋತೃಗಳೇ, ಆ ದಿನ ಆಕಾಶದಲ್ಲಿ ಮೋಡಗಳು ತುಂಬಿ, ನಡು ನಡುವೆ ಮಳೆಯಾಗುತ್ತಿತ್ತು। ಭೂ ವೈಕುಂಠವು ಅಂದರೆ ಪಂಢರಪುರವು ಭಕ್ತರಿಂದ ತುಂಬಿಹೋಗಿತ್ತು। ಪರಿಕ್ರಮೆಯ ಮಾರ್ಗದಲ್ಲಿ ಕೈತಾಳಗಳ ಧ್ವನಿಯ ಜೊತೆಗೆ 'ಜಯ ಜಯ ರಾಮಕೃಷ್ಣಹರಿ'ಯ ನಾಮೋಚ್ಚಾರದಿಂದ ಆಕಾಶವು ತುಂಬಿಹೋಗಿತ್ತು। ಇಬ್ಬರ ನಡುವಿನ ಸಂಭಾಷಣೆಯೂ ಕೇಳಿ ಬರುತ್ತಿರಲಿಲ್ಲ। ಅದರ ವರ್ಣನೆ ಅಸಾಧ್ಯ। ಏಕನಾಥ, ನಿವೃತ್ತಿ ಜ್ಞಾನದೇವ, ಸಾವತಾ, ಗೋರಾ ಕುಂಭಾರ, ತುಕಾರಾಮ ಮಹಾರಾಜ, ಸೋಪಾನ, ಮುಕ್ತಾಬಾಯಿ, ಮತ್ತು ಜನಾರ್ಧನ ಮೊದಲಾದ ಸಂತ ಪಾಲಕಿಗಳು ಪಂಢರಪುರಕ್ಕೆ ತಲುಪಿದ್ದವು। ಭಕ್ತರು ಅಬೀರ, ಹೂಗಳಿಂದ ಶೃಂಗಾರ ಮಾಡಿದ್ದರು। ಅವುಗಳಿಂದಾ ಆಕಾಶವು ಅನೇಕ ಬಣ್ಣಗಳಿಂದ ತುಂಬಿ ಹೋಗಿತ್ತು। ಹೂಗಳ ಸುವಾಸನೆ ತುಂಬಿತ್ತು ಮತ್ತು ತುಲಸಿಗಳಿಂದ ವಾತಾವರಣವು ಪ್ರಸನ್ನವಾಗಿತ್ತು। ಮಹಾರಾಜರು ತಮ್ಮ ಭಕ್ತರ ಜೊತೆಗೆ ಪಂಢರಪುರಕ್ಕೆ ಬಂದು ಪ್ರದಕ್ಷಿಣೆಯ ಮಾರ್ಗದಲ್ಲಿರುವ ಕುಕಾಜಿ ಪಾಟೀಲರ ಮನೆಯಲ್ಲಿ ತಂಗಿದರು। ಮಂದಿರದ ಎಲ್ಲ ಬದಿಗೆ ದರ್ಶನಾರ್ಥಿಗಳ ಗದ್ದಲವಿತ್ತು। ಪ್ರತಿ ಒಂದು ಮಳ ಅಂತರಕ್ಕೆ ಪೋಲಿಸರು ಕಾವಲಿದ್ದರು। ಯಾತ್ರಿಕರು ತಲ್ಲೀನರಾಗಿ ಭಜನ ನುಡಿಯುತ್ತಿದ್ದರು। ಏಕಾದಶಿಯ ದಿನ ಬಾಪುನಾ ಕಾಳೆನನ್ನು ಬಿಟ್ಟು, ಹರಿ ಪಾಟೀಲ ಮತ್ತು ಅವನ ಸಂಗಡಿಗರು ವಿಠ್ಠಲನ ದರ್ಶನಕ್ಕೆ ಹೋದರು। ಸ್ನಾನಮಾಡಲು ಚಂದ್ರಭಾಗಾ

ನದಿಯ ತೀರಕ್ಕೆ ಹೋಗಿದ್ದರಿಂದ ಬಾಪುನಾ ಕಾಳೆ ಹಿಂದೆ ಉಳಿದಿದ್ದನು । ಅವನು ಬರಲು ತಡವಾಯಿತು, ಆದ್ದರಿಂದ ಅನೇಕ ಭಕ್ತರು ಮಂದಿರದ ಕಡೆಗೆ ಹೊರಟಿದ್ದರು । ಹಿಂದಿರುಗಿ ನೋಡಿದರೆ ಅವನ ಎಲ್ಲ ಸಂಗಡಿಗರು ಮಂದಿರಕ್ಕೆ ಹೋಗಿದ್ದರು । ನಂತರ ಅವನು ಕೂಡಾ ದರ್ಶನಕ್ಕಾಗಿ ಮಂದಿರದ ಕಡೆಗೆ ಓಡಿದನು । ಮಂದಿರದ ಸುತ್ತಲು ಜನರ ಜಾತ್ರ ನೆರೆದಿತ್ತು । ಆ ಗದ್ದಲದಲ್ಲಿ ಒಂದು ಇರುವೆಯೂ ಕಾಲಿಡುವದು ಅಸಾಧ್ಯವಾಗಿತ್ತು । ಈ ಸ್ಥಿತಿಯಲ್ಲಿ ಅವನಿಗೆ ದರ್ಶನ ಸಿಗುವದು ಹೇಗೆ ಸಾಧ್ಯ । ಜೊತೆಗೆ ಅವನು ದರಿದ್ರಿ । ಆದ್ದರಿಂದ ಕೆಲವು ಜನರಂತೆ ಲಂಚವನ್ನು ಕೊಟ್ಟು ಒಳಗೆ ಪ್ರವೇಶ ದೊರಕಿಸುವದು ಸಾಧ್ಯವಿರಲಿಲ್ಲ । ಅವನು ಅಸಹಾಯನಾಗಿ ಪ್ರಭುವಿಗೆ ಪ್ರಾರ್ಥಿಸತೊಡಗಿದನು, ಹೇ ವಿಠ್ಠಲ, ಹೃಷಿಕೇಶ । ನನಗೆ ದರ್ಶನಕೊಡಲು ತಾವು ಇಷ್ಟು ಕಠೋರ ಏಕೆ ? ತಾವು ಭಕ್ತ ಸಾವತಾಮಾಳಿಗೆ ಅವನ ಊರು ಅರಣಗಾಂವಿಗೆ ಹೋಗಿ ದರ್ಶನ ಕೊಟ್ಟಿರುವಿರಿ । ಈ ಮಂದಿರದ ಬಳಿಗೆ ತಲುಪಿಕೂಡಾ ತಾವು ನನಗೆ ದರ್ಶನ ಕೊಡಲಾರಿರಿ ? ಅರಣಗಾಂವ ಎರಡು ಯೋಜನೆ ದೂರದಲ್ಲಿದೆ । ನಾನಾದರೋ ತಮ್ಮ ಮಂದಿರದ ಹತ್ತಿರ ನಿಂತಿರುವೆನು । ಭಕ್ತರು ನಿಮಗೆ ಅನಾಥರ ನಾಥ ಎನ್ನುವರು । ಹೀಗಿರುವಾಗ ನನ್ನ ಬಗ್ಗೆ ಏಕೆ ಉಪೇಕ್ಷೆ । ಈ ರೀತಿ ಅವನು ಪ್ರಾರ್ಥಿಸತೊಡಗಿದನು । ಸಂಜೆಯ ತನಕ ಪ್ರಭುದರ್ಶನದ ದಾರಿ ಕಾಯ್ದು ನಿರಾಶನಾಗಿ ಮನೆಗೆ ಮರಳಿದನು । ಅವನ ಮುಖವು ಕಳೆಗುಂದಿತ್ತು ಇಡೀ ದಿನ ಉಪವಾಸವಿದ್ದನು । ಆದರೂ ಅವನ ಮನಸ್ಸು ವಿಠ್ಠಲ ದರ್ಶನಕ್ಕಾಗಿ ಚಡಪಡಿಸುತ್ತಿತ್ತು । ಅವನು ಶರೀರದಿಂದ ಮನೆಯಲ್ಲಿದ್ದರೂ, ಮನದಿಂದ ವಿಠ್ಠಲ ಮಂದಿರದಲ್ಲಿದ್ದನು । ಇದಕ್ಕೆ ನಿಜಧ್ಯಾಸವೆನ್ನುವರು । ಬಾಪುನಾನ ಸ್ಥಿತಿಯನ್ನು ನೋಡಿ ಅವನ ಸಂಗಡಿಗರು ನಕ್ಕು ಅವನನ್ನು ಕೆಣಕ ತೊಡಗಿದರು । ಪಾಪ, ಇವನು ನೋಡಿ ಅವನ ಸಂಗಡಿಗರು ನಕ್ಕು ಅವನನ್ನು ಕೆಣಕ ತೊಡಗಿದರು । ಪಾಪ, ಇವನು ಶೇಗಾಂವಿಯಿಂದ ಪಂಢರಪುರಕ್ಕೆ ಬಂದನು ವಿಠ್ಠಲ ದರ್ಶನಕ್ಕಾಗಿ । ಆದರೆ ಅಲ್ಲಿ ಇಲ್ಲಿ ನೆಲೆದಾಡಿದನು । ಇವನ ಭಕ್ತಿ ದಾಂಭಿಕವಾಗಿದ್ದರಿಂದ ಶ್ರೀಪತಿಯ ದರ್ಶನ ಹೇಗೆ ಸಾಧ್ಯ ? ಸಮಯ ಬಂದಾಗ ಇವನು ಎಲ್ಲಿಯೋ ಹೋಗಿದ್ದನು । ಕೆಲವರು ವ್ಯಂಗವಾಗಿ ನುಡಿದರು, ಇವನು ವೇದಾಂತಿ, ಆದ್ದರಿಂದ ಮಂದಿರಕ್ಕೆ ಏಕೆ ಹೋಗುವನು ? ಪ್ರತಿಯೊಬ್ಬನ ಹೃದಯದಲ್ಲಿ ಭಗವಂತನು ಇರುವನು ಎಂಬುದು ವೇದಾಂತ ಸತ್ಯ । ಆ ಕಲ್ಲಿನಲ್ಲಿ ದೇವರೆಲ್ಲಿ ಕಂಡು ಬರುವನು ? ನಾವು ॥ 180 ॥
ಹುಚ್ಚರಿರುವದರಿಂದ, ದರ್ಶನಕ್ಕಾಗಿ ಮಂದಿರಕ್ಕೆ ಹೋದೆವು । ಬಾಪುನಾನ ನಾರಾಯಣನು ಎಲ್ಲಕಡೆ ವ್ಯಾಪಿ । ಆಗ



ಮತ್ತೊಬ್ಬನು ಇವನು ಇಲ್ಲಿ ಏಕೆ ಬಂದನು ? ಎಲ್ಲ ಕಡೆ ನಾರಾಯಣನಿರುವಾಗ, ನಾರಾಯಣನ ದರ್ಶನ ಶೇಗಾಂವಿಯಲ್ಲಿದ್ದು ಕೊಂಡೇ ಪಡೆಯಬಹುದಾಗಿತ್ತು । ಮೂರನೆಯವನು, ವೇದಾಂತಿಗಳು ಎಲ್ಲರಿಗೆ ಜ್ಞಾನವನ್ನು ಕಲಿಸುವರು, ಆದರೆ ಸ್ವಯಂ ಅದರ ಪ್ರಚೀತಿಯನ್ನು ಹೊಂದುವದಿಲ್ಲ ಎಂದರು । ಸಗುಣೋಪಾಸನೆಯಿಂದಲೇ ಜ್ಞಾನಪ್ರಾಪ್ತಿ ಸಾಧ್ಯ । ಬಾಲ್ಯಾವಸ್ಥೆಯನ್ನು ಕಳೆದ ಮೇಲೆಯೇ ಯುವಾವಸ್ಥೆ ಪ್ರಾಪ್ತವಾಗುತ್ತದೆ । ಪ್ರತಿಯೊಂದು ಮಾತು ಕ್ರಮದಂತೆ ಸಾಗಬೇಕು । ಈ ರೀತಿ ಅವನ ಮಿತ್ರರು ಅವನ ಚೇಷ್ಟ ಆರಂಭಿಸಿದರು । ಪಾಪ ಅವನೊಬ್ಬನೇ ಅವರನ್ನು ಹೇಗೆ ಎದುರಿಸಬಲ್ಲ ? ಒಂದು ಕಡೆ ದಿನವಿಡೀ ಉಪವಾಸ, ಮೇಲೆ ವಿಠ್ಠಲನ ದರ್ಶನವಾಗಿಲ್ಲ, ಮತ್ತು ಸಂಗಡಿಗರ ಚುಚ್ಚು ಮಾತುಗಳು, ಆದ್ದರಿಂದ ಅಧೋಮುಖನಾಗಿ ಸುಮ್ಮನೆ ಒಂದು ಮೂಲೆಯಲ್ಲಿ ಕುಳಿತನು । ಅವನ ಸ್ಥಿತಿ ಹಾಗೂ ಸಂಗಡಿಗರ ಚೇಷ್ಟೆಯನ್ನು ಮಹಾರಾಜರು ನೋಡುತ್ತಿದ್ದರು । ಸಾಧು, ಬಡವನ ದುಃಖವನ್ನು ಅರಿಯಬಲ್ಲರು । ಯಾರಿಗೆ ಸಾಧುವಿನ ಸತ್ಸಂಗ ದೊರಕುತ್ತದೆಯೋ ಅವರು ಭಾಗ್ಯವಂತರು । ನಂತರ ಮಹಾರಾಜರು ಬಾಪುನಾಗೆ ನುಡಿದರು, ನೀನು ದುಃಖಿತನಾಗಬೇಡ । ನಾನು ನಿನಗೆ ರುಕ್ಮಿಣಿ ರಮಣನ ದರ್ಶನ ಮಾಡಿಸುವೆನು । ಹೀಗೆ ನುಡಿದು ಮಹಾರಾಜರು ಎರಡೂ ಕಾಲ ಜೋಡಿಸಿ, ಟೊಂಕದ ಮೇಲೆ ಕೈ ಹಿಡಿದು ಎದ್ದು ನಿಂತು, ದರ್ಶನ ಪಡೆಯಲು ಹೇಳಿದರು । ಬಾಪುನಾ ನೋಡಿದರೆ, ಶ್ರೀ ವಿಠ್ಠಲನ ಪ್ರತಿಕೃತಿ, ಕೊರಳಿನಲ್ಲಿ ತುಲಸಿ ಮಾಲೆ ಮತ್ತು ಕಪ್ಪು ವರ್ಣ । ಅವನು ಬೆರಗಾಗಿ ನೋಡುತ್ತ ಅವರ ಚರಣಗಳನ್ನು ಹಿಡಿದನು । ವಿಠ್ಠಲ ದರ್ಶನವಾದ ನಂತರ, ಮತ್ತೆ ಬಾಪುನಾ ಆನಂದಿತನಾದನು । ಮನೆಯಲ್ಲಿ ನೋಡಿದ ವಿಠ್ಠಲನ ಮೂರ್ತಿಯನ್ನು ಮಂದಿರದಲ್ಲಿ ನೋಡಲು ಜನರು ಗದ್ದಲ ಮಾಡುವರು । ಬಾಪುನಾನ ಸಂಗಡಿಗರು, ಮಹಾರಾಜರಿಗೆ ನುಡಿದರು, ಮಹಾರಾಜ ನಮಗೆ ಕೂಡಾ ವಿಠ್ಠಲನ ದರ್ಶನ ಮಾಡಿಸಿರಿ । ಆಗ ಮಹಾರಾಜರು ನುಡಿದರು, ತಾವು ಮೊದಲು ಬಾಪುನಾನಂತೆ ಮನಸ್ಸನ್ನು ನಿರ್ಮಲ ಹಾಗೂ ಶುದ್ಧ ಮಾಡಿರಿ । ಚಿತ್ತ ಶುದ್ಧಿಯ ನಂತರವೇ ಭಗವಂತನ ದರ್ಶನ ಸಾಧ್ಯ । ಭಗವಂತನ ದರ್ಶನ ಮಾರುಕಟ್ಟೆಯಲ್ಲಿ ಸಿಗುವದು ತಾನೇ? ಅದಕ್ಕಾಗಿ ಮೊದಲು ಚಿತ್ತ ಶುದ್ದಿಗಾಗಿ ಪ್ರಯತ್ನಿಸಿರಿ । ಹೇ ಶ್ರೋತೃಗಳೇ, ಮಹಾರಾಜರು ತಮ್ಮ ಲೀಲೆಯಿಂದ ಬಾಪುನಾಗೆ ಮನೆಯಲ್ಲಿ ಕುಳಿತುಕೊಂಡೇ ದರ್ಶನ ನೀಡಿದರು । ಸಾಧುತ್ವವೆಂದರೆ ಮೋಹಿನಿಯ ಆಟವಲ್ಲ । ಸಂತೆ ॥ 181 ॥
ಹಾಗೂ ದೇವರು ಒಂದೇ । ಬೆಲ್ಲ ಹಾಗೂ ಸಿಹಿ ಇವುಗಳನ್ನು ಬೇರೆ ಮಾಡುವದು ಸಾಧ್ಯವೇ । ಮಹಾರಾಜರು

ಮಾಡಿಸಿದ ವಿಠ್ಠಲನ ದರ್ಶನವು ಬಾಪೂನಾನ ಹೃದಯದಲ್ಲಿ ಮನೆ ಮಾಡಿತು । ಮಹಾರಾಜರ ಕೃಪಾಶೀರ್ವಾದದಿಂದ ಬಾಪುನಾಗೆ ಪುತ್ರನಾದನು, ಅವನು ಮುಂದೆ ಹೋಗಿ, ಚತುರ ಹಾಗೂ ವಿದ್ವಾನನಾದನು । ಸಂತ ಸೇವೆ ವ್ಯರ್ಥವಾಗುವದಿಲ್ಲ ಎಂಬ ಮಾತುಸತ್ಯ । ವಿಠ್ಠಲನ ಕೃಪೆಯಿಂದ ಪುತ್ರನಾದನು, ಅವನ ಹೆಸರಿಟ್ಟರು ನಾಮದೇವ । ಇರಲಿ ! ವರ್ಹಾಡ ಪ್ರಾಂತದ ಕವಠೆ ಬಹಾದ್ದೂರನೆಂಬ ಒಬ್ಬ ವಾರಕರಿ (ವಿಠ್ಠಲನ ಭಕ್ತ) ಕುಕಾಜಿಯ ಮನೆಯಲ್ಲಿ ಮೇಲೆ ಭಕ್ತರೊಡನೆ ಆ ಸಮಯದಲ್ಲಿ ತಂಗಿದ್ದನು । ಪಂಢರಪುರದಲ್ಲಿ ಆಷಾಢಿ ದ್ವಾದಶಿಯ ಸಮಯದಲ್ಲಿ ಕಾಲರಾದ ಬೇನೆ ಪ್ರಾರಂಭವಾಯಿತು । ಮತ್ತೇನು ಕೇಳುವದು ? ಡಾಕ್ಟರರ ಸಲಹೆಯಂತೆ ಪೋಲಿಸರು ಜನರನ್ನು ಮನೆಯಿಂದ ಹೊರಗೆ ಹಾಕ ತೊಡಗಿದರು । ಇದು ಅಂಟುರೋಗವಾಗಿದ್ದರಿಂದ ಪೋಲಿಸರು ಯಾತ್ರಿಕರಿಗೆ ಮನೆಯಿಂದ ಹೊರತಗೆದು ಗಾಡಿಯಲ್ಲಿ ಕೂಡ್ರಿಸಿ, ಚಂದ್ರಭಾಗಾ ನದಿಯ ಮರುದಂಡೆಗಿರುವ ಕುರ್ಡುವಾಡಿ ಸ್ಟೇಶನ್ ಮೇಲೆ ಬಿಟ್ಟು ಬರುತ್ತಿದ್ದರು। ಈ ಕವಠೆ ಬಹಾದೂರನಿಗೆ ಕಾಲರಾ ತಗುಲಿ ಅವನಿಗೆ ವಾಂತಿ–ಭೇದಿ ಆರಂಭವಾಯಿತು. ಕಾಲುಗಳು ಜಡವಾದವು । ಇದು ಅಂಟುರೋಗವಾಗಿದ್ದರಿಂದ ಯಾರೂ ರೋಗಿಯ ಸೇವೆ ಮಾಡಲು ಹೋಗುತ್ತಿರಲಿಲ್ಲ। ಯಾವ ತಲೆ ನೋವು ಆಗಬಾರದೆಂದು ಪೋಲಿಸರಿಗೂ ಯಾರೂ ತಿಳಿಸಲಿಲ್ಲ। ರೋಗಿಯನ್ನು ಅಲ್ಲಿಯೇ ಬಿಟ್ಟು ಶೇಗಾಂವಿಗೆ ಜನರು ಮರಳಿ ಹೊರಟರು । ಇವನನ್ನು ಬಿಟ್ಟು ಎಲ್ಲರೂ ಮರಳುವ ಸಿದ್ಧತೆಯಲ್ಲಿದ್ದರು । ಸಂಕಟ ಬಂದಾಗ, ಯಾರೂ ಸಹಾಯ ಮಾಡುವದಿಲ್ಲ ಎಂಬುದು ಸತ್ಯ । ಸುಖದ ಕ್ಷಣಗಳಲ್ಲಿ ಎಲ್ಲರೂ ನೆಂಟರು, ಆದರೆ ಆಪತ್ತಿ ಬಂದಾಗ ಕೇವಲ ವ್ಯಂಕಟರಮಣನೇ । ಇದು ಜಗತ್ತಿನ ರೀತಿ । ಆದರೆ ಇಂತಹ ಸಮಯದಲ್ಲಿ ಸಂತರು ಅಥವಾ ದೇವರೇ ಕಾಪಾಡುವರು। ಇದನ್ನು ನೋಡಿ ಮಹಾರಾಜರು ತಮ್ಮ ಭಕ್ತಗೆ ನುಡಿದರು ನಾವು ಈ ರೋಗಿಯನ್ನು ಜೊತೆಗೆ ಕರೆದುಕೊಂಡು ಹೋಗೋಣ । ಆಗ ಶಂಕೆಯಿಂದ ಒಬ್ಬನು ಮಹಾರಾಜರ ಅವನು ಸತ್ತಿರಬಹುದು । ನಾವು ಇವನನ್ನು ಜೊತೆಗೆ ಕರೆದುಕೊಂಡು ಹೋದರೆ ಈ ಆಪತ್ತಿನಿಂದ ದೂರ ಹೋಗುವದು ಒಳಿತು । ಆದ್ದರಿಂದ ನಾವು ಈಗ ಇಲ್ಲಿ ನಿಲ್ಲದೇ, ಚಂದ್ರಭಾಗಾ ನದಿಯ ಮರುದಂಡೆಯನ್ನು ತಲುಪುವದೇ ಲೇಸು । ಆಗ ಮಹಾರಾಜರು ನಿರಾಶೆಯಿಂದ ನೀವು
ಹೀಗೇಕೆ ಹುಚ್ಚರಂತೆ ಮಾತನಾಡುತ್ತಿರುವಿರಿ ಎಂದರು । ತಮ್ಮ ಗ್ರಾಮ ಬಂಧುಗೆ ಈ ಸ್ಥಿತಿಯಲ್ಲಿ ಬಿಟ್ಟು, ಹೋಗುವದು || 182 ||
ನಿಮಗೆ ಶೋಭಿಸುವದಿಲ್ಲ। ಮನುಷ್ಯನಿಗೆ ಇದು ಲಾಂಛನ। ಹೀಗೆ ನುಡಿದು ಮಹಾರಾಜರು ರೋಗಿಯ ಬಳಿಗೆ ಹೋಗಿ,





ಕೈ ನೀಡಿ ಎದ್ದು ಕೂಡಿಸಿ, ಮಧುರವಾಣಿಯಿಂದ ನುಡಿದರು, ಏಳು, ನಮ್ಮ ವರ್ಹಾಡ ಪ್ರಾಂತಕ್ಕೆ ತಿರುಗಿ ಹೋಗೋಣ ಆಗ ಅವನು ನಿರಾಶನಾಗಿ ನುಡಿದನು, ಮಹಾರಾಜ ವರ್ಹಾಡವು ಈಗ ನನ್ನ ಭಾಗ್ಯದಲ್ಲಿ ಎಲ್ಲಿ ? ನನ್ನ ಮೃತ್ಯುವು ಹತ್ತಿರ ಬಂದಂತೆ ಏನಿಸುತ್ತದೆ। ನನ್ನ ಬಂಧು ಬಳಗವಿಲ್ಲ। ಮಹಾರಾಜರು ಅವನಿಗೆ ಹುರಿದುಂಬಿಸಿ ನುಡಿದರು, ನಿನಗೆ ಹೆದರುವ ಕಾರಣವಿಲ್ಲ। ನಿನ್ನ ಗಂಡಾಂತರವು ದೂರವಾಗಿದೆ । ಎಂದು ನುಡಿದು ಅವನ ನೆತ್ತಿಯ ಮೇಲೆ ಕೈ ಇಟ್ಟರು । ಕೆಲವು ಕ್ಷಣಗಳಲ್ಲಿ ಅವನ ವಾಂತಿಭೇದಿಗಳು ನಿಂತವು । ಮಹಾರಾಜರ ಕೃಪೆಯಿಂದ ಅವನ ದೇಹದಲ್ಲಿ ಶಕ್ತಿ ಬಂದು ಅವನು ಎದ್ದು ನಿಂತನು । ಸಂತರು ಆಸರೆ ನೀಡಿದರೆ ಯಮರಾಜನು ಕೊಂಡು ಹೋಗುವದು ಸಾಧ್ಯವೇ ? ನಂತರ ಅವನು ಮಹಾರಾಜರ ಜೊತೆಗೆ ಚಂದ್ರಭಾಗಾ ನಂದಿಯ ಮರುದಂಡೆಯನ್ನು ತಲುಪಿದನು । ಮಹಾರಾಜರ ಕೃಪಾಶೀರ್ವಾದ ದಿಂದ ಅವನು ಪ್ರಫುಲ್ಲಿತನಾದನು । ಮಹಾರಾಜರ ಚರಣ ಕಮಲಗಳನ್ನು ಹಿಡಿದು, ಮಹಾರಾಜ ತಾವು ನನಗೆ ಮೃತ್ಯುವಿನ ದವಡೆಯಿಂದ ಬದುಕಿಸಿದಿರಿ ಎಂದನು । ಈ ಚಮತ್ಕಾರವನ್ನು ನೋಡಿ ಎಲ್ಲರೂ ಮಹಾರಾಜರ ಜಯಜಯಕಾರಮಾಡಿ ಕುರ್ಡುವಾಡಿ ಸ್ಟೇಶನ್ ತಲುಪಿಸಿದರು । ಪಂಢರಪುರದ ಯಾತ್ರೆ ಮಾಡಿ ಯಥಾವಕಾಶ ಎಲ್ಲರೂ ಶೇಗಾಂವಿಗೆ ತಲುಪಿದರು । ಒಬ್ಬ ಕರ್ಮಠ ಬ್ರಾಹ್ಮಣನು ಮಹಾರಾಜರ ದರ್ಶನಕ್ಕಾಗಿ ಶೇಗಾಂವಿಗೆ ಬಂದನು। ಅವನು ಮಹಾರಾಜರ ಮಹಿಮೆಯನ್ನು ಜನರಿದಂ ಕೇಳಿದ್ದನು, ಆದ್ದರಿಂದ ಬಹುದೂರ ಪ್ರವಾಸ ಮಾಡಿ ತಲುಪಿದ್ದನು। ಅವನು ಮಧ್ವಾಚಾರ್ಯರ ಸಂಪ್ರದಾಯದವನಾಗಿದ್ದರಿಂದ ಪವಿತ್ರ–ಅಪವಿತ್ರ, ಮಡಿ ಮೈಲಿಗೆಯ ಬಗ್ಗೆ ಬಹಳ ವಿಶ್ವಾಸವಿಡುತ್ತಿದ್ದನು । ಆದರೆ ಮಹಾರಾಜರ ಬಳಿ ಮಡಿ ಮೈಲಿಗೆಯ ಬಗ್ಗೆ ಮಹತ್ವ ಇರದಿದ್ದನ್ನು ಕಂಡು ಅನಿಗೆ ನಿರಾಶೆಯಾಯಿತು । ಅವನು ನಾನು ಸುಮ್ಮನೆ ಇಲ್ಲಿಗೆ ಬಂದಿರುವೆ ಎಂದು ವಿಚಾರ ಮಾಡಿದನು । ಮಹಾರಾಜರಾದರೋ ಭ್ರಷ್ಟಾಚಾರದ ಸಾರ್ವಭೌಮ ಶಿರೋಮಣಿಯಾಗಿರುವರು । ಮಡಿಮೈಲಿಗೆಯ ಯಾವ ಬಂಧನವು ಇಲ್ಲಿ ಕಂಡು ಬರುವದಿಲ್ಲ । ಇಂತಹ ಹುಚ್ಚನಿಗೆ ಈ ಜನರು ತಲೆ ಮೇಲೆ ಕೂಡಿಸಿಕೊಂಡಿರುವರು । ಮಠದ ಮುಂದೆ ಒಂದು ನಾಯಿಯು ಸತ್ತು ಬಿದ್ದಿತ್ತು ಮತ್ತು ಅದರಿಂದ ಒಳಗೆ ಹೊರಗೆ ಬರಲು ಅಡತಡೆಯಾಗುತ್ತಿತ್ತು। ನಡು ರಸ್ತೆಯ ಮೇಲೆ
ಬಿದ್ದ ನಾಯಿಯನ್ನು ನೋಡಿ ಬ್ರಾಹ್ಮಣನು ಖಿನ್ನನಾದನು । ಈ ಸ್ಥಿತಿಯಲ್ಲಿ ನೀರನ್ನು ತರುವದು ಹೇಗೆ ಸಾಧ್ಯ ? ಇದನ್ನು || 183 ||
ರಸ್ತೆಯಿಂದ ಬದಿಗೆ ಸರಿಸುವದನ್ನು ಬಿಟ್ಟು ಗಾಂಜಾ ಸೇವಿಸಿ ಎಲ್ಲರೂ ಈ ಹುಚ್ಚನಿಗೆ ಮಹಾರಾಜ–ಮಹಾರಾಜ

ಎನ್ನುವರು। ಇಂತಹ ಸಾಧುತ್ವಕ್ಕೆ ಲಾಂಛನ। ನನಗೆ ಈಗ ತಿಳಿಯದು ಇವನ ದರ್ಶನಾಕ್ಕಾಗಿ ನಾನು ಇಷ್ಟು ದೂರದಿಂದ ಕೊನೆಗೆ ಏಕೆ ಬಂದೆ ? ಸಾಕ್ಷಾತ್ಕಾರಿ ಮಹಾರಾಜರು ಅವನ ಮನದ ದ್ವಂದ್ವವನ್ನು ಅರಿತು ಅವನ ಬಳಿ ಬಂದು ನೀವು ಪೂಜೆಮಾಡಿರಿ ಎಂದರು । ಆ ನಾಯಿಯು ಸತ್ತಿಲ್ಲ। ಮನಸ್ಸಿನಲ್ಲಿ ಸಂದೇಹವಿಡಬೇಡಿರಿ । ಮಹಾರಾಜರ ಮಾತನ್ನು ಕೇಳಿ ಆ ಬ್ರಾಹ್ಮಣನು ಸಿಟ್ಟಿನಿಂದ ನುಡಿದನು ಹುಚ್ಚಾ ನಾನು ನಿನ್ನಂತೆ ಹುಚ್ಚನಿಲ್ಲ। ನಾಯಿಯು ಇಲ್ಲಿ ಸತ್ತು ಬಿದ್ದು ಒಂದು ಪ್ರಹರದ ಮೇಲೆ ಸಮಯವಾಗಿದೆ । ಯಾರ ಮನಸ್ಸಿನಲ್ಲಿ ಇದನ್ನು ದೂರ ಒಗೆಯುವಂತೆ ವಿಚಾರಕೂಡ ಬರಲಿಲ್ಲ। ವಿಪ್ರನ ಮಾತನ್ನು ಕೇಳಿ ಮಹಾರಾಜರು ನಾವು ಭ್ರಷ್ಟರು । ನಮಗೆ ನಿಮ್ಮಂತೆ ಜ್ಞಾನವೆಲ್ಲಿ ? ಆದರೂ ತಾವು ಚಿಂತೆ ಮಾಡಬೇಡಿರಿ । ಹೇ ಬ್ರಾಹ್ಮಣ ಶ್ರೇಷ್ಠ, ನೀರಿಗಾಗಿ ಒಂದು ಕೊಡವನ್ನು ತೆಗೆದುಕೊಂಡು ನಮ್ಮ ಜೊತೆಗೆ ಬನ್ನಿರಿ । ಹೀಗೆ ನುಡಿದು ಮಹಾರಾಜರು ನಾಯಿಯ ಹತ್ತಿರ ಬಂದು ಪದಸ್ಪರ್ಶ ಮಾಡಿದರು । ಕೂಡಲೇ ನಾಯಿಯು ಎದ್ದು ನಿಂತಿತು । ಈ ಚಮತ್ಕಾರವನ್ನು ನೋಡಿ ಬ್ರಾಹ್ಮಣನು ಆಶ್ಚರ್ಯಚಕಿತನಾದನು । ಅವನು ಇವರ ಅಧಿಕಾರವು ದೇವರ ಸಮಾನವೆಂದು ಮನದಲ್ಲಿ ಎಣಿಸಿದನು । ನಾನು ಸುಮ್ಮನೆ ಇವರನ್ನು ನಿಂದಿಸಿದೆನು । ನಾನು ಇವರ ಅಧಿಕಾರವನ್ನು ತಿಳಿಯಲಿಲ್ಲ। ಅವನು ಮಹಾರಾಜರಿಗೆ ಶರಣಾದನು । ಮತ್ತು ನುಡಿದನು, ಮಹಾರಾಜ, ಹೇ ಗುರುರಾಜ, ನನ್ನ ಅಪರಾಧಕ್ಕಾಗಿ ನನಗೆ ಕ್ಷಮಿಸಿರಿ ಮತ್ತು ನನ್ನ ತಲೆಯ ಮೇಲೆ ಕೃಪಾಹಸ್ತವನ್ನು ಇಡಿರಿ। ತಾವೇ ಈ ಜಗತ್ತಿನಲ್ಲಿ ನಿಜವಾಗಿ ಪವಿತ್ರ ಹಾಗೂ ಶುದ್ಧರು । ಜನ ಸಾಮಾನ್ಯರ ಉದ್ಧಾರಕ್ಕಾಗಿಯೇ ಭಗವಂತನು ತಮಗೆ ಕಳುಹಿಸಿದ್ದಾನೆ । ಹೇ ಶ್ರೋತೃಗಳೆ, ಆ ದಿನವೇ ಆ ಬ್ರಾಹ್ಮಣನು ಸಮಾರಾಧನೆ ಮಾಡಿದನು । ಅವನ ಮನಸ್ಸಿನಲ್ಲಿಯ ಶಂಕೆಗಳು ದೂರವಾಗಿದ್ದರಿಂದ ಅವನು ಮಹಾರಾಜರ ಚರಣಗಳಲ್ಲಿ ಲೀನನಾಗಿ, ಪ್ರಸಾದ ಪಡೆದು ತಮ್ಮ ಊರಿಗೆ ಹೊರಟು ಹೋದನು । ಮಹಾರಾಜರು ಪ್ರತ್ಯಕ್ಷ ದೇವರೆಂಬ ವಿಶ್ವಾಸ ಅವನಿಗಾಯಿತು । ಸ್ವಸ್ತಿ ಶರೀ ದಾಸಗಣು ವಿರಚಿತ ಈ ಶ್ರೀ ಗಜಾನನ ವಿಜಯವೆಂಬ ಗ್ರಂಥ ಎಲ್ಲ ಭಾವಿಕರಿಗೆ ಯೋಗ್ಯ ಮಾರ್ಗವನ್ನು ತೋರಿಸಲಿ ಎಂಬುದೇ ದಾಸಗಣುವಿನ ಇಚ್ಛೆ।



॥ ಶುಭಂ ಭವತು ॥ ಶ್ರೀ ಹರಿಹರಾರ್ಪಣಮಸ್ತು ॥



ಶ್ರೀ ಗಜಾನನ ಮಹಾರಾಜರು ಹರಿ ಪಾಟೀಲರನ್ನು ಕರೆದುಕೊಂಡು ಶ್ರೀವಿಠ್ಠಲನನ್ನು ನೋಡಲು ಪಂಢರಪುರಕ್ಕೆ ಹೋದರು

## ॥ ಅಧ್ಯಾಯ೧೯ ॥

ಶ್ರೀ ಗಣೇಶಾಯನಮಃ। ಜಯ ಜಯಾಜಿ ಆನಂದಕಂದ। ಜಯ ಜಯಾಜಿ ಅಭೇದ। ಅನನ್ಯ ಭಾವದಿಂದ ತಮ್ಮ ಪದಕಮಲಗಳಲ್ಲಿ ನಾನು ಸದೈವ ಇರಲಿ। ಹೇ ರಾಘವ, ರಘುಪತಿ, ನನ್ನ ಅಂತವನ್ನು ನೋಡದೇ ನನ್ನ ಮೇಲೆ ಕೂಡಲೇ ಪ್ರಸನ್ನರಾಗಿರಿ। ತಾವು ಪ್ರಸನ್ನರಾಗಲು ತಡವೇಕೆ ಎಂಬುದನ್ನು ನಾನು ತಿಳಿಯಲಾರೆ। ಯಾರು ನಿಜವಾಗಿ ಶ್ರೇಷ್ಠರೋ ಅವರಿಗೆ ಕಠೋರತೆಯು ಶೋಭಿಸುವದಿಲ್ಲ। ಈ ಮಾತಿನ ಮೇಲೆ ವಿಚಾರ ಮಾಡಿರಿ। ಹೇ ಜಗದೀಶ, ಜಗನ್ನಾಯಕ, ನಾನು ನನ್ನ ಹೃದಯದಿಂದ ಕರೆಯುತ್ತಿದ್ದೇನೆ, ಆದ್ದರಿಂದ ನನಗೆ ಮೋಸಮಾಡದೇ, ಈ ದಾಸಗಣುನ ಮೇಲೆ ಕೃಪೆ ಮಾಡಿರಿ। ಇರಲಿ ! ಮಹಾರಾಜರ ವಾಸ ಶೇಗಾಂವಿಯಲ್ಲಿತ್ತು। ಒಂದು ದಿನ ಕಾಶಿನಾಥ ಖಂಡೇರಾವ ಗರ್ದೆ ಎಂಬ ವಿಪ್ರನು ಮಹಾರಾಜರ ದರ್ಶನಕ್ಕಾಗಿ ಬಂದನು। ಬಂದ ಕೂಡಲೆ ಅವನು ಮಹಾರಾಜರಿಗೆ ನಮಸ್ಕರಿಸಿದನು। ಮಹಾರಾಜರ ಪ್ರಸನ್ನ ಮುದ್ರೆಯನ್ನು ನೋಡಿ ಅವನು ಆನಂದಿತನಾದನು। ಮನಸ್ಸಿನಲ್ಲೇ ಅವನು ನನ್ನ ತಂದೆಯು ಜೀವನ ಮುಕ್ತ ಸಂನ್ಯಾಸಿಯ ಬಗ್ಗೆ ಹೇಳಿದ ಎಲ್ಲ ಲಕ್ಷಣಗಳು, ಮಹಾರಾಜರಲ್ಲಿವೆ ಎಂದು ವಿಚಾರ ಮಾಡಿದನು। ನಾನು ನಿಜವಾಗಿ ಭಾಗ್ಯವಂತ। ಏಕೆಂದರೆ ಮಹಾರಾಜರ ದರ್ಶನಕ್ಕಾಗಿ ಖಾಮಗಾಂವದಿಂದ ನಾನು ಇಲ್ಲಿಗೆ ಬಂದೆ। ಅವನು ವಿಚಾರ ಮಗ್ನನಾದಾಗ, ಹಾರಾಜರು ಅವನನ್ನು ಅಲುಗಾಡಿಸಿ ಹೇಳಿದರು, ನಿನ್ನ ಮನೋಕಾಮನೆಯು ಪೂರ್ಣವಾಗಿದೆ। ಕೂಡಲೇ ಮನೆಗೆ ಹೋಗು ಅಂಚೆಯವನು ತಾರು ತೆಗೆದುಕೊಂಡು ಮನೆಯ ಮುಂದೆ ನಿಂತಿರುವನು। ಮಹಾರಾಜರ ಮಾತಿನ ಅರ್ಥ ಅವನಿಗೆ ತಿಳಿಯಲಿಲ್ಲ। ನಾನು ಯಾವ ಇಚ್ಛೆಯಿಂದ ಇಲ್ಲಿಗೆ ಬಂದಿರಲಿಲ್ಲ ಅಥವಾ ಯಾವ ಅಪೇಕ್ಷೆಯು ಇರಲಿಲ್ಲ। ಹೀಗಿರುವಾಗ 'ಅಂಚೆಯವನು ದಾರಿ ಕಾಯುತ್ತಿರುವನು' ಇದರ ಅರ್ಥವೇನು ? ಅದರ ಅರ್ಥವನ್ನು ಕೇಳುವ ಧೈರ್ಯವಿರಲಿಲ್ಲ। ಮಹಾರಾಜರಿಗೆ ವಂದಿಸಿ ಅವನು ಖಾಮಗಾಂವಿಗೆ ಹಿಂದಿರುಗಿದನು। ಮನೆಯ ಮುಂದೆ ನಿಜವಾಗಿಯೂ ತಾರು ಹಿಡಿದು ಅಂಚೆಯವನು ದಾರಿ ಕಾಯುತ್ತಿದ್ದನು। ತಾರನ್ನು ಕೈಯಲ್ಲಿ ಹಿಡಿಯುವಾಗ ಹೃದಯದ ಬಡಿತ ಜೋರಾಗಿತ್ತು। ತಾರಿನಲ್ಲಿ ಈ ಸಂದೇಶವಿತ್ತು, 'ನಿಮಗೆ ಮೂರ್ಶಿ ವಿಭಾಗದ ಮುನಸಿಫನಾಗಿ ನಿಯುಕ್ತಮಾಡಲಾಗಿದೆ। ತಾರನ್ನು ಓದಿದೊಡನೆ ಅವನು ಆನಂದಿತನಾಗಿ ಮಹಾರಾಜರು ಮಾಡಿದ ಸಂಕೇತದ ಅರ್ಥವನ್ನು ತಿಳಿದುಕೊಂಡನು। ಸಂತರು ಅಂತರ್‌ಜ್ಞಾನಿ ಎಂಬುದರ ಅನುಭವ ಅವನಿಗಾಯಿತು। ಇರಲಿ!

ಒಮ್ಮೆ ಗೋಪಾಳ ಬುಟಿಜಿಯವರ ಆಮಂತ್ರಣಕ್ಕೆ ಅನುಸಾರವಾಗಿ ಮಹಾರಾಜರು ನಾಗಪುರಕ್ಕೆ ಹೋದರು । ನಾಗಪುರವು ಮೊದಲು ರುಘುಜಿರಾಜೆ ಭೋಸಲೆಯ ರಾಜಧಾನಿಯಾಗಿತ್ತು। ಆದರೆ ಈಗ ಈ ಶಹರ ದುಃಸ್ಥಿತಿಯಲ್ಲಿದೆ। ಪಾರತಂತ್ರ್ಯದಿಂದ ಸ್ವಾತಂತ್ರ್ಯರೂಪಿ ಪ್ರಾಣವು ಹೋಗಿದೆ । ದುರ್ದೈವದಿಂದ ಮಾಲಿಕನಿಗೆ ಯಾಚಕನಾಗುವ ಸ್ಥಿತಿ ಬಂದಿತು । ಸಂಪೂರ್ಣ ನಗರವು ಪರಕೀಯರಿಂದ ತುಂಬಿ ಹೋಗಿತ್ತು। ಹೇಗೆ ರಾಜನು ಉಡುಗೆ – ತೊಡುಗೆ ! ಆನೆ, ಕುದುರೆ – ಪಾಲಕಿಗಳು ನಷ್ಟವಾಗಿ, ರಸ್ತೆಯ ಮೇಲೆ ಮೋಟಾರು, ಕಾರುಗಳು ಓಡತೊಡಗಿದವು । ಇದು ಕಾಲದ ಮಹಿಮೆ । ಆದ್ದರಿಂದ ಯಾರಿಗೂ ಹೆಸರಿಡುವದು ನ್ಯಾಯ ವಿಸಂಗತ । ಗೋಪಾಲ ಬುಟಿಯ ಮನೆ ಸೀತಾ ಬರ್ಡಿಯಲ್ಲಿತ್ತು। ಆ ಭವ್ಯ ಸದನದಲ್ಲಿ ಮಹಾರಾಜರನ್ನು ಇಟ್ಟಿದ್ದರು । ಹುಲಿಯನ್ನು ಕೋಟೆಯಲ್ಲಿಟ್ಟಂತೆ । ಬುಟಿಯ ವಿಚಾರ ಮಹಾರಾಜರನ್ನು ಇಟ್ಟಿದ್ದರು । ಹುಲಿಯನ್ನು ಕೋಟೆಯಲ್ಲಿಟ್ಟಂತೆ । ಬುಟಿಯ ವಿಚಾರ ಮಹಾರಾಜರನ್ನು ನಿರಂತರ ಸೀತಾಬರ್ಡಿಯಲ್ಲಿ ಇಡುವಂತೆ ಇತ್ತು। ಅವರಿಗೆ ಶೇಗಾಂವಿಗೆ ಹೋಗಲು ಬಿಡಲಾರೆ । ಯಾವ ರೀತಿ ಅಕ್ರೂರನು ಶ್ರೀ ಕೃಷ್ಣನನ್ನು ಮಥುರಾಗೆ ಕರೆದುಕೊಂಡು ಹೋದನೋ ಅದೇ ರೀತಿ । ಮಹಾರಾಜರಿಲ್ಲದೆ ಶೇಗಾಂವಿಯು ಕಳೆಗುಂದಿತು । ಶರೀರದಿಂದ ಪ್ರಾಣವು ಹೋದಮೇಲೆ ಆ ಶರೀರಕ್ಕೆ ಬೆಲೆಯೇನು ? ಈ ರೀತಿ ಮಹಾರಾಜರಿಲ್ಲದೇ ಶೇಗಾಂವಿಯು ಪ್ರಾಣಹೀನವಾಗಿತ್ತು। ಶೇಗಾಂವ ನಿವಾಸಿಗಳು ದುಃಖಿತರಾದರು । ಅವರು ಹರಿ ಪಾಟೀಲನಿಗೆ ಮಹಾರಾಜರನ್ನು ಶೇಗಾಂವಿಗೆ ಕರೆತರುವಂತೆ ಬೆನ್ನು ಹತ್ತಿದರು । ತಾವು ಊರಿನ ಮುಖ್ಯಸ್ಥರು, ಆದ್ದರಿಂದ ನೀವು ಪ್ರಯತ್ನ ಮಾಡಿರಿ । ಬುಟಿ ದೊಡ್ಡ ಹತ್ತಿದರು । ತಾವು ಊರಿನ ಮುಖ್ಯಸ್ಥರು, ಆದ್ದರಿಂದ ನೀವು ಪ್ರಯತ್ನ ಮಾಡಿರಿ। ಬುಟಿ ದೊಡ್ಡ ಸಾಹುಕಾರರು, ಆದ್ದರಿಂದ ನಮಗೆ ಯಾರು ಕೇಳುವರು ? ಒಂದು ಆನೆ ಮತ್ತೊಂದು ಆನೆಯೊಡನೆ ಯುದ್ಧ ಮಾಡಿದರೆ ಶೋಭಿಸುತ್ತದೆ । ಅಲ್ಲಿ ನಮ್ಮಂತಹ ನರಿಗಳಿಗೆ ಯಾರೂ ಕೇಳುವರು । ಜಂಬುಮಾಲಿಯ ಜೊತೆಗೆ ಯುದ್ಧ ಮಾಡಲು ಹನುಮಂತನೇ ಯೋಗ್ಯನಾಗಿದ್ದನು । ಕರ್ಣನ ಜೊತೆಗೆ ಯುದ್ಧ ಮಾಡಲು ಅರ್ಜುನನ ಯೋಜನೆಯಾಗಿತ್ತು। ಆದ್ದರಿಂದ ತಾವು ನಾಗಪುರಕ್ಕೆ ಹೋಗಿ ಮಹಾರಾಜರನ್ನು ಕರೆತನ್ನಿರಿ, ಅದರಿಂದ ನಾವು ಸುಖಿಯಾಗುವೆವು ಎಂದು ಪ್ರಾರ್ಥಿಸಿದರು । ಅತ್ತ ಮಹಾರಾಜರು ಬುಟಿಯ ಮನೆಯಲ್ಲಿ ಇದ್ದರು । ಆದರೆ ಹಸ್ತಿನಾವಾಪುರದಲ್ಲಿ ಶ್ರೀ ಕೃಷ್ಣನು ಸಂತೋಷದಿಂದಿರಲಿಲ್ಲ, ಅದೇ ರೀತಿ ಮಹಾರಾಜರ ಸ್ಥಿತಿ ನಾಗಪುರದಲ್ಲಿ





ಆಗಿತ್ತು। ಅವರು ಅನೇಕ ಸಲ ಬುಟಿಗೆ ಶೇಗಾಂವಿಗೆ ಕಳುಹಿಸುವಂತೆ ಹೇಳುತ್ತಿದ್ದರು । ನಿನ್ನ ಈ ಭವ್ಯ ಸದನದಲ್ಲಿ ನನಗೆ ಇಡಬೇಡ । ಮಹಾರಾಜರ ಮಾತನ್ನು ಬುಟಿಯು ಕೇಳದೆ ಮಹಾರಾಜರನ್ನು ನಾಗಪುರದಲ್ಲಿಯೇ ಇಟ್ಟನು । ಬುಟಿ ಭಾವಿಕನಾಗಿದ್ದರೂ, ಧನ ಹಾಗೂ ಅಧಿಕಾರದ ಮದವು ಇಳಿದಿರಲಿಲ್ಲ। ಪ್ರತಿ ದಿನ ಮಹಾರಾಜರ ಸನ್ಮಾನದಲ್ಲಿ ಬ್ರಾಹ್ಮಣ ಭೋಜನವು ನೆರವೇರುತ್ತಿತ್ತು। ಆದರೆ ಶೇಗಾಂವಿಯ ವ್ಯಕ್ತಿಗೆ ಪ್ರವೇಶವಿರಲಿಲ್ಲ। ಮನೆಕಾಯುವ ಸೇವಕನಿಗೆ ಅಪ್ಪಣೆ ಇಲ್ಲದೇ, ಶೇಗಾಂವಿಯ ಜನರಿಗೆ ಒಳಗೆ ಪ್ರವೇಶಕೊಡಬಾರದು ಎಂಬ ಆಜ್ಞೆ ಇತ್ತು। ಆದ್ದರಿಂದ ಶೇಗಾಂವಿಯ ಜನರ ಎಲ್ಲ ಪ್ರಯತ್ನಗಳು ಅಸಫಲವಾಗಿ, ಮರಳಿ ಬಂದರು । ನಂತರ ಹರಿ ಪಾಟೀಲನು ಕೆಲವು ಜನರನ್ನು ಕರೆದುಕೊಂಡು ಮಹಾರಾಜರನ್ನು ತರಲು ನಾಗಪುರಕ್ಕೆ ಹೊರಟನು । ಅವನು ರೈಲಿನಲ್ಲಿ ಕುಳಿತಿದ್ದನ್ನು, ಮಹಾರಾಜರಿಗೆ ಅಂತರ್ ಜ್ಞಾನದಿಂದ ತಿಳಿಯಿತು । ಆಗ ಅವರು ಗೋಪಾಳ ಬುಟಿಗೆ, ನನ್ನನ್ನು ಕರೆದುಕೊಂಡು ಹೋಗಲು ಹರಿ ಪಾಟೀಲನು ನಾಗಪುರಕ್ಕೆ ಬರುತ್ತಿದ್ದಾನೆ ಎಂದರು । ಅವನು ಇಲ್ಲಿ ತಲುಪುವ ಮೊದಲು ನನಗೆ ಶೇಗಾಂವಿಗೆ ಹೋಗಲು ಅನುಮತಿ ಕೊಡು। ಅವನು ಇಲ್ಲಿಗೆ ಬಂದರೆ, ವಾತಾವರಣವು ಅಶಾಂತವಾಗುವದು। ಅವನು ತಮ್ಮ ಶಕ್ತಿಯನ್ನು ಉಪಯೋಗಿಸಿ ನನಗೆ ಕರೆದುಕೊಂಡು ಹೋಗುವನು । ನಿನ್ನ ಸಂಪತ್ತಿಯ ಶಕ್ತಿ ಆಗ ಉಪಯೋಗಕ್ಕೆ ಬರಲಿಕ್ಕಿಲ್ಲ। ಯೋಗ್ಯ ಸಮಯಕ್ಕೆ ಹರಿ ಪಾಟೀಲನು ಬುಟಿಯ ಮನೆಗೆ ಬಂದನು । ಕಾವಲಿಗನು ತಡೆಯುವ ಪ್ರಯತ್ನ ಮಾಡಿದನು। ಅವನಿಗೆ ಬದಿಗೆ ತಳ್ಳಿ ಹರಿ ಪಾಟೀಲನು ಬುಟಿ ಸದನದಲ್ಲಿ ಪ್ರವೇಶ ಮಾಡಿದನು । ಗೋಪಾಳ ಬುಟಿಯ ಮನೆಯಲ್ಲಿ ಬ್ರಾಹ್ಮಣ ಭೋಜನವು ನಡೆದಿತ್ತು। ಭೋಜನದ ಸಡಗರ ವಿಶೇಷವಾಗಿತ್ತು। ಕುಳಿತುಕೊಳ್ಳಲು ಶೀಸಮ್ ಕಟ್ಟಿಗೆಯ ಮಣೆ, ಪ್ರತಿಯೊಬ್ಬನಿಗೆ ಬೆಳ್ಳಿಯ ತಟ್ಟೆ ಹಾಗೂ ಬಟ್ಟಲು। ಅನೇಕ ಪಕ್ವಾನ್ನಗಳಿಂದ ಭೋಜನವು ಸುಂದರವಾಗಿತ್ತು। ನಡುವೆ ಮಹಾರಾಜರ ಆಸನವಿತ್ತು। ಬುಟಿಯ ಈ ಸಡಗರದ, ವರ್ಣನೆ ಹೇಗೆ ಸಾಧ್ಯ ? ಏಕೆಂದರೆ ಬುಟಿಯು ನಾಗಪುರದ ಕುಬೇರನೆಂದು ತಿಳಿಯಲ್ಪಡುತ್ತಿದ್ದನು । ಹರಿ ಪಾಟೀಲನು ಬಂದಿದ್ದು ತಿಳಿದೊಡನೆ ಮಹಾರಾಜರು ಆಸನದ ಮೇಲಿಂದ ಎದ್ದು, ಸದನದ ದ್ವಾರದ ಕಡೆಗೆ ಓಡಿದರು । ಕರುವನ್ನು ಕಂಡೊಡನೆ ಆಕಳು ಓಡಿ ಹೋಗುವಂತೆ ಮಹಾರಾಜರು ಹರಿ ಪಾಟೀಲನ ಕಡೆಗೆ ಓಡಿಹೋದರು । ಮತ್ತು ನುಡಿದರು, ನಾವು ಕೂಡಲೇ ಇಲ್ಲಿಂದ ಹೊರಟು ಹೋಗೋಣ । ನಾನು ಈಗ ಇಲ್ಲಿ ಒಂದು ಕ್ಷಣವು ಇರಲಾರೆ। ನೀನು ಕರೆಯಲು ಬಂದಿದ್ದು ಬಹಳ ಒಳ್ಳೆಯದಾಯಿತು। ಹರಿ ಪಾಟೀಲನಿಗೆ

ಇಷ್ಟು ಹೇಳಿ ಮಹಾರಾಜರು ಹೊರಟರು। ಇದೆಲ್ಲವನ್ನು ಬುಟಿ ನೋಡಿದನು। ಅವನು ಮಹಾರಾಜರ ಚರಣಗಳನ್ನು ಹಿಡಿದು, ವಿನಯದಿಂದ ನುಡಿದನು, ಹೇ ಗುರುರಾಜ, ಈ ಸಮಯದಲ್ಲಿ ನನಗೆ ನಾಚಿಕೆಯಿಂದ ತಲೆಬಾಗುವಂತೆ ಮಾಡದಿರಿ। ಎರಡು ಕರಚಿಕಾಯಿಗಳನ್ನು ತಿಂದು ತಮಗೆ ಸರಿಯೆನಿಸಿದ ಸ್ಥಳಕ್ಕೆ ಹೋಗಿರಿ। ಅವನು ಪಾಟೀಲನಿಗೆ ಕೂಡಾ ಪ್ರಸಾದ ಸೇವಿಸಿ ನಂತರ ಅವರನ್ನು ಕರೆದುಕೊಂಡು ಹೋಗುವಂತೆ ಬಿನ್ನವಿಸಿದನು। ಮಹಾರಾಜರು ಈಗ ಇಲ್ಲಿ ನಿಲ್ಲಲಾರರು, ಎಂಬುದನ್ನು ಅರಿತಿರುವೆನು। ಆದರೆ ಈ ಸಮಯ ನನ್ನ ಪ್ರತಿಷ್ಠೆ ನಿಮ್ಮ ಕೈಯಲ್ಲಿದೆ। ಪ್ರಸಾದ ಸೇವಿಸದೆ ಮಹಾರಾಜರು ಹೊರಟು ಹೋದರೇ, ಜನರು ಕೂಡಾ ಊಟ ಮಾಡದೇ ಹೋಗುವರು, ಮತ್ತು ಸಂಪೂರ್ಣ ನಾಗಪುರದಲ್ಲಿ ನನ್ನ ಮಾನಹಾನಿಯಾಗುವದು। ಕೊನೆಗೆ ಮಹಾರಾಜ ಮತ್ತು ಪಾಟೀಲರು ಬುಟಿಯ ಮಾತನ್ನು ಒಪ್ಪಿದರು। ಭೋಜನವಾಗುವವರೆಗೆ ಅಲ್ಲಿ ನಿಂತರು। ಶೇಗಾಂವಿಯ ಎಲ್ಲ ಜನರು ಭೋಜನಕ್ಕೆ ಕುಳಿತರು। ಭೋಜನದ ನಂತರ ಮಹಾರಾಜರು ತಮ್ಮ ಭಕ್ತರೊಡನೆ ಹೋಗುವದು। ಆದ್ದರಿಂದ ಬುಟಿ ಸದನದಲ್ಲಿ ಜನರ ಗದ್ದಲ ಉಂಟಾಯಿತು। ಗೋಪಾಳ ಬುಟಿಯ ಪತ್ನಿ, ಮಹಾರಾಜರ ಭಾವಿಕ ಭಕ್ತರಾಗಿದ್ದಳು। ಅವಳೇ ಪ್ರತ್ಯಕ್ಷ ಗ್ರಹಲಕ್ಷ್ಮಿ। ಅವಳು ಮಹಾರಾಜರ ಚರಣಕಮಲಗಳನ್ನು ಹಿಡಿದು, ವಿನಯದಿಂದ ನುಡಿದಳು, ಗುರುರಾಜ, ನನ್ನ ಮನದಲ್ಲಿಯ ಇಚ್ಛೆಯನ್ನು ಪೂರ್ಣಗೊಳಿಸಿರಿ। ಆಗ ಮಹಾರಾಜರು ನುಡಿದರು, ನಿನ್ನ ಇಚ್ಛೆಯನ್ನು ನಾನು ಅರಿತಿರುವೆನು। ಹೀಗೆ ನುಡಿದು ಅವರು ಕುಂಕುಮ–ತಿಲಕವನ್ನು ಹಚ್ಚಿದರು। ಮತ್ತು ನಿನಗೆ ಪರಮ ಸದ್ಗುಣಿ ಪುತ್ರನಾಗುವನು ಎಂದು ಆಶೀರ್ವದಿಸಿದರು। ಹೇ ಮಗಳೆ, ನೀನು ಸೌಭಾಗ್ಯವಂತಿಯಾಗಿದೇ ವೈಕುಂಠಕ್ಕೆ ಹೋಗುವಿ। ಈ ರೀತಿ ಆಶೀರ್ವಾದ ಕೊಟ್ಟು ಮಹಾರಾಜರು ಸೀತಾ ಬರ್ಡಿಯಿಂದ ಹೊರಟು ರಘುಜಿ ಭೋಸಲೆಯ ಮನೆಗೆ ಬಂದರು। ರಾಜಾ ರಘುಜಿ ಭೋಸಲೆ ಭಕ್ತಿಪೂರ್ಣ ಅಂತಃಕರಣದವನಿದ್ದನು। ಅವನು ತಮ್ಮ ಶುದ್ಧಾಚರಣೆಯಿಂದ ರಾಮನನ್ನು ವಶಮಾಡಿ ಕೊಂಡಿದ್ದನು। ಅವನ ಅಶಾಶ್ವತವಿರುವ ಲೌಕಿಕ ರಾಜ್ಯವು ಹೋಗಿದ್ದರೂ, ಸದ್ಗುರು ಭಕ್ತಿಯ ಶಾಶ್ವತ ರಾಜ್ಯವು ಅವನ ಮನೆಯಲ್ಲಿತ್ತು। ರಾಜನು ಮಹಾರಾಜರ ಆದರ ಅತಿಥ್ಯಮಾಡಿದನು। ಅದರಿಂದ ಪ್ರಸನ್ನರಾಗಿ ಮಹಾರಾಜರು ರಾಮಟೇಕ್‌ಗೆ ಹೋದರು। ಅಲ್ಲಿ ರಾಮದರ್ಶನವನ್ನು ಮಾಡಿ ಮಹಾರಾಜರು ಹರಿಪಾಟೀಲನ ಜೊತೆಗೆ ಶೇಗಾಂವಿಗೆ ಮರಳಿದರು। ಧಾರ ಕಲ್ಯಾಣದ ರಂಗನಾಥ ಸ್ವಾಮಿ, ಯಾರು ಮೊಗಲರ ಕಾಲದ ಪ್ರಸಿದ್ಧ ಸಾಧುವೆನಿಸಿದ್ದರು, ಅವರು





ಮಹಾರಾಜರನ್ನು ಭೆಟ್ಟಿಯಾಗಲು ಶೇಗಾಂವಿಗೆ ಬಂದರು। ಸಾಂಕೇತಿಕ ಭಾಷೆಯಲ್ಲಿ ಅವರಿಬ್ಬರ ನಡುವೆ ನಡೆದ ಅಧ್ಯಾತ್ಮಿಕ ವಿಷಯಗಳ ಚರ್ಚೆ ಬೇರೆ ಯಾರಿಗೂ ತಿಳಿಯಲಿಲ್ಲ। ಶ್ರೀ ವಾಸುದೇವಾನಂದ ಸರಸ್ವತಿ ಎಂಬ ಕರ್ಮಮಾರ್ಗಿ ಯೋಗಿ ಇದ್ದರು। ಅವರು ತಲುಪುವ ಮೊದಲೇ ಸ್ವಾಮಿ ಗಜಾನನ ಸಿದ್ಧಯೋಗಿ ಬಾಳಾಭಾವುಗೆ ಹೇಳಿದರು, ನಾಳೆ ನನ್ನ ಗುರುಬಂಧು ನನಗೆ ಭೆಟ್ಟಿಯಾಗಲು ಬರುತ್ತಿದ್ದಾನೆ। ಅವರನ್ನು ಸರಿಯಾಗಿ ಸನ್ಮಾನಿಸಿರಿ। ಅವರು ಅತ್ಯಂತ ಕರ್ಮಠ। ಆದ್ದರಿಂದ ಅವರ ಮಾರ್ಗದಲ್ಲಿ ಅರಿವೆಯ ತುಂಡು ಮೊದಲಾದವು ಕಂಡು ಬರದಂತೆ ನೋಡಿಕೊಳ್ಳಿರಿ। ಮಠದ ಆವಾರವನ್ನು ಸ್ವಚ್ಛವಿಡಿರಿ। ರಸ್ತೆಯಲ್ಲಿ ಅಥವಾ ಆವಾರದಲ್ಲಿ ಚಿಂದಿ ಕಂಡು ಬಂದರೆ ಅವರು ಸಿಟ್ಟಾಗುವರು, ಜಮದಗ್ನಿಯ ಎರಡನೆಯ ಅವತಾರದಂತೆ। ಆ ಕರ್‍ಹಾಡಾ ಬ್ರಾಹ್ಮಣನು, ಶುಚಿರ್ಭೂತನಾಗಿ, ಜ್ಞಾನ ಸಂಪನ್ನನಾಗಿದ್ದು ಅವನ ಕರ್ಮಠತನವು ಕೇವಲ ಮೇಲಿನ ಕವಚದಂತಿದೆ। ಈ ರೀತಿ ಪೂರ್ವ ಸೂಚನೆಯನ್ನು ಬಾಳಾಭಾವುಗೆ ಮಹಾರಾಜರು ಕೊಟ್ಟಿದ್ದರು। ಮರು ದಿನ ಮೊದಲನೆಯ ಪ್ರಹರಕ್ಕೆ ಮಹಾರಾಜರ ಗುರುಬಂಧು ಸ್ವಾಮಿ ವಾಸುದೇವಾನಂದ ಸರಸ್ವತಿ ಮಠದಲ್ಲಿ ಬಂದರು। ಇಬ್ಬರೂ ನೋಡಿ ಮುಗುಳ್ನಕ್ಕರು। ಇಬ್ಬರು ಭೆಟ್ಟಿಯಾಗಿ ಹರ್ಷಿತರಾದರು। ಒಬ್ಬರು ಕರ್ಮದ ಸಾಗರ, ಎರಡನೆಯವರು ಯೋಗ–ಯೋಗೇಶ್ವರ। ಒಬ್ಬರು ಸುಂದರ ಮಲ್ಲಿಗೆ, ಎರಡನೆಯವರು ಗುಲಾಬಿ ಹೂವು। ಗಂಗಾ–ಭಾಗಿರಥಿ, ಮತ್ತು ಗೋದಾವರಿ–ಗೋಮತಿ ನದಿ ! ಸಾಕ್ಷಾತ್ ಪಶುಪತಿ ಮತ್ತು ಶೇಷಶಾಹಿ ನಾರಾಯಣರಂತೆ ! ವಾಸುದೇವಾನಂದೆ ಸರಸ್ವತಿ ಮಠದಲ್ಲಿ ಪ್ರವೇಶಿಸಿದಾಗ ಮಹಾರಾಜರು ಪಲ್ಲಂಗಿನ ಮೇಲೆ ಕುಳಿತು ಚುಟಕಿ ಬಾರಿಸುತ್ತಿದ್ದರು। ಸ್ವಾಮಿಯನ್ನು ಕಂಡು ಮಹಾರಾಜರು ಚುಟಕಿ ಬಾರಿಸುವದನ್ನು ನಿಲ್ಲಿಸಿ, ಇಬ್ಬರೂ ಪರಸ್ಪರರ ಕಡೆಗೆ ನೋಡತೊಡಗಿದರು। ಒಂದು ಕ್ಷಣಮಾತ್ರ ನೋಡಿ ಸ್ವಾಮಿಗಳು ಕಣ್ಣಿನ ಸನ್ನೆಯಿಂದಲೇ ಹೋಗಲು ಅನುಜ್ಞೆ ಕೇಳಿದರು। 'ಪರವಾಗಿಲ್ಲ' ಎಂದು ಮಹಾರಾಜರು ಗೋಣು ಅಲ್ಲಾಡಿಸಿದರು। ಸ್ವಾಮಿ ವಾಸುದೇವಾನಂದ ಸರಸ್ವತಿ ಹೊರಟರು। ಅವರಿಬ್ಬರ ಈ ಕಣ್ಣು ಸನ್ನೆಯ ಆಟವನ್ನು ನೋಡಿ ಬಾಳಾಭಾವು ಆಶ್ಚರ್ಯಚಕಿತನಾದನು। ಅವನು ಮಹಾರಾಜರಿಗೆ ನುಡಿದನು, ನಿಮ್ಮ ಈ ಭೆಟ್ಟಿಯನ್ನು ನೋಡಿ ಮನದಲ್ಲಿ ಸಂಶಯ ಉಂಟಾಗಿದೆ। ನನ್ನ ಸಂದೇಹವನ್ನು ದೂರಮಾಡಿರಿ। ನಿಮ್ಮ ಹಾಗೂ ಅವರ ಸಾಧನೆಯ ಮಾರ್ಗಗಳು ಭಿನ್ನವಾಗಿವೆ। ಹೀಗಿರುವಾಗ ಅವರು ನಿಮ್ಮ ಗುರುಬಂಧು ಹೇಗೆ ? ಮಹಾರಾಜರು ಪ್ರಶ್ನೆಯನ್ನು ಕೇಳಿ ಬಾಳಾಭಾವುಗೆ ಹೇಳಿದರು,

ನಿನ್ನ ಮನಸ್ಸಿನಲ್ಲಿಯ ಸಂದೇಹವು ನಿಜವಾಗಿದೆ । ಇದು ಬಹಳ ವಿಶೇಷ ಜ್ಞಾನ । ಈಶ್ವರನನ್ನು ತಲುಪಲು ಮೂರು ಮಾರ್ಗಗಳಿವೆ । ಮತ್ತು ಈ ಮೂರು ಮಾರ್ಗಗಳು ಕೊನೆಗೆ ಜ್ಞಾನದ ನಗರಕ್ಕೆ ತಲುಪುತ್ತವೆ । ಸಾಮಾನ್ಯ ದೃಷ್ಟಿಯಿಂದ ನೋಡುವವರಿಗೆ ಅವರ ಸ್ವರೂಪಗಳು ಭಿನ್ನವಾಗಿ ಗೋಚರಿಸುತ್ತವೆ ಮತ್ತು ಜನರು ಸಂಭ್ರಮದಲ್ಲಿ ಬೀಳುತ್ತಾರೆ । ಕರ್ಮ ಮಾರ್ಗದಲ್ಲಿ, ಮಡಿ ಮೈಲಿಗೆಧ್ಯಾನ, ಸ್ನಾನ, ವ್ರತ, ಅನುಷ್ಠಾನ, ಉಪೋಷಣಗಳಿಗೆ ಬಹಳ ಮಹತ್ವವಿದೆ । ಯಾವ ಸಾಧಕರನು ಈ ಅಂಗಗಳ ವಿಚಾರ ಮಾಡಿ ಸಾಧನೆ ಮಾಡುವು, ಅವನಿಗೆ ಬ್ರಹ್ಮವೇತ್ತಾ ಕರ್ಮಠನೆನ್ನುವರು । ಈ ಮಾರ್ಗದ ವಿಶೇಷತೆಯೆಂದರೆ, ಯಾವ ಪ್ರಕಾರದ ಕೊರತೆ ಅಥವಾ ಯಾವ ವಸ್ತು ಹೆಚ್ಚಾದರೆ ಕೈಯಲ್ಲಿ ಏನೂ ಸಿಗುವದಿಲ್ಲ। ಆದ್ದರಿಂದ ಸಾಧಕನಿಗೆ ಈ ಮಾರ್ಗವನ್ನು ಅನುಸರಿಸುವಾಗ ಬಹಳ ಜಾಗರೂಕನಾಗಿರಬೇಕಾಗುತ್ತದೆ । ಬೇರೆಯವರಿಂದ ಅಸಭ್ಯ ವರ್ತನೆ ಮತ್ತು ಕಠೋರ ಮಾತುಗಳು ಈ ಮಾರ್ಗದಲ್ಲಿ ಅಡೆತಡೆ ಮಾಡುತ್ತವೆ । ಎರಡನೆಯ ಮಾರ್ಗವು ಭಕ್ತಿ ಮಾರ್ಗ । ಭಕ್ತಿಮಾರ್ಗದಿಂದ ಹೋಗುವವನ ಮನಸ್ಸು ಹಾಗೂ ಅಂತಃಕರಣವು ಶುದ್ಧವಾಗಿರಬೇಕು । ಮನಸ್ಸಿನ ಮಲೀನತೆ ಈ ಮಾರ್ಗದಲ್ಲಿ ಭಾದೆ ಉಂಟುಮಾಡಿ, ಸಾಧಕನಿಗೆ ಏನೂ ದೊರಕುವದಿಲ್ಲ । ಇದು ಭಕ್ತಿಮಾರ್ಗದ ವಿಶೇಷತೆ । ದಯಾ ಪ್ರೇಮ ಮತ್ತು ಲೀನತೆ ಜೀವನದ ಅವಿಭಾಜ್ಯ ಅಂಗವಾಗಿರಬೇಕು ಶ್ರವಣ–ಪೂಜನದಲ್ಲಿ ಅಖಂಡ ಶ್ರದ್ಧಾಭಾವವಿರಬೇಕು । ಇವು ಭಕ್ತಿಮಾರ್ಗದ ವಿಶೇಷತೆ ಮತ್ತು ಸಾಧನ । ಯಾವ ಸಾಧಕನು ಈ ಅಂಗಗಳಿಂದ ಭಕ್ತಿಮಾರ್ಗವನ್ನು ಅನುಸರಿಸುವನು ಅವನಿಗೆ ಶ್ರೀ ಹರಿಯ ದರ್ಶನವಾಗುವದು । ಭಕ್ತಿ ಮಾರ್ಗವು ಸುಲಭವೆನಿಸುತ್ತದೆ ಮತ್ತು ಅದರ ಸಾಧನೆಯ ಮಾರ್ಗವು ಕಠಿಣವಿಲ್ಲ । ಆದರೆ ಭಕ್ತಿಮಾರ್ಗದ ಆಚರಣೆಯು ಕರ್ಮಮಾರ್ಗಕ್ಕಿಂತ ಕಠಿಣವಾಗಿದೆ । ಯಾವ ರೀತಿ ಆಕಾಶವು ಕಣ್ಣಿಗೆ ಸಮೀಪನೆನಿಸಿದರೂ, ಅದು ಬಹಳ ದೂರವಿದೆ, ಅದೇ ರೀತಿ ಭಕ್ತಿಮಾರ್ಗವಿದೆ । ಮೂರನೆಯ ಮಾರ್ಗವು ಯೋಗಮಾರ್ಗ । ಯೋಗ ಮಾರ್ಗವು ಎರಡೂ ಮಾರ್ಗಗಳಿಂದ ಭಿನ್ನವಾಗಿದ್ದು, ಅದರ ವಿಧಾನವು ಬಹಳ ಕ್ಲಿಷ್ಟ । ಈ ಮಾರ್ಗವು ಹೊರಗಿನ ಸಾಮಗ್ರಿಗಳ ಮೇಲೆ ಅವಲಂಬಿಸಿಲ್ಲ। ಎಲ್ಲ ಸಾಮಗ್ರಿಯು ಸಾಧಕನ ಬಳಿಯೇ ಇರುತ್ತದೆ। ಯಾವದು ಬ್ರಹ್ಮಾಂಡದಲ್ಲಿಯೋ ಅದು ಪಿಂಡದಲ್ಲಿರುತ್ತದೆ । ಪಿಂಡದಲ್ಲಿರುವ ಸಾಹಿತ್ಯವನ್ನು ಉಪಯೋಗಿಸ ಲಾಗುತ್ತದೆ । ಯೋಗ ಮಾರ್ಗಕ್ಕಾಗಿ, ಆಸನ, ರೇಚಕ, ಕುಂಭಕ, ಅದೇ ರೀತಿ ಇಡಾ ಪಿಂಗಳಾಗಳ ಭೇದ, ಧೌತಿ, ಮುದ್ರಾ, ತ್ರಾಟಕ, ಆದಿ ಅನೇಕ ಪ್ರಕಾರಗಳ





ಜ್ಞಾನವು ಅವಶ್ಯಕ । ಕುಂಡಲಿನಿ ಶಕ್ತಿ ಮತ್ತು ಸುಷುಮ್ನಾ ನಾಡಿಗಳ ಸಂಬಂಧದಲ್ಲಿ ಅಭ್ಯಾಸವು ಅವಶ್ಯಕ । ಈ ಶಕ್ತಿಗಳ ಬಗ್ಗೆ ಸಾಧಕನಿಗೆ ಪೂರ್ಣಜ್ಞಾನವಿದ್ದರೆ ಮಾತ್ರ ಯೋಗ ಸಾಧನೆಯು ಸಾಧ್ಯ । ಈ ಮೂರು ಮಾರ್ಗಗಳ ಅಂತಿಮ ಫಲವು ಒಂದೇ–ಜ್ಞಾನ ಪ್ರಾಪ್ತಿ । ಆದರೆ ಈ ವಿಷಯದಲ್ಲಿ ಈಶ್ವರನ ಪ್ರತಿ ಪ್ರೇಮವು ಅವಶ್ಯಕ । ಪ್ರೇಮವಿಲ್ಲದೆ ಯಾವ ಕೃತಿಯು ನೆರವೇರುವದೋ ಅದು ಅಸಫಲವಾಗುವದು, ಆದ್ದರಿಂದ ಈ ಮೂರೂ ಮಾರ್ಗಗಳಲ್ಲಿ ಪ್ರೇಮ ಹಾಗೂ ಶ್ರದ್ಧೆಯು ಅತಿ ಅವಶ್ಯಕ । ಕಪ್ಪು, ಬಿಳಿ, ಗಿಡ್ಡ, ಉದ್ದ, ಕುರೂಪ ಹಾಗೂ ಸುಂದರ ಎಂದು ದೇಹದ ಪ್ರಕಾರಗಳಿವೆ । ಆದರೆ ಆತ್ಮಕ್ಕೆ ಇದರ ಸಂಬಂಧವಿಲ್ಲ । ಎಲ್ಲರ ಆತ್ಮವು ಒಂದೇ ಸಮ ಇರುತ್ತದೆ । ಅವುಗಳಲ್ಲಿ ಅಂತರವಿಲ್ಲ । ಆದರೆ ಲೌಕಿಕ ದೃಷ್ಟಿಯಿಂದ ಭೇದವು ಅವಶ್ಯಕ । ಆದರೆ ಅದು ವಿಶೇಷವಿಲ್ಲ । ಅದೇ ರೀತಿ ಈ ಮೂರು ಮಾರ್ಗಗಳ ಸ್ಥಿತಿ ಇದೆ । ಮೂರು ಮಾರ್ಗಗಳು ಭಿನ್ನವಾಗಿದ್ದರೂ, ಅವುಗಳ ಉದ್ದೇಶವು ಒಂದೇ – ಜಗದಾತ್ಮನನ್ನು ಪಡೆಯುವದು । ಬೇಕಾದ ಸ್ಥಾನವನ್ನು ತಲುಪಿದ ಮೇಲೆ ಮಾರ್ಗದ ವಿಚಾರ ಉಳಿಯುವದಿಲ್ಲ, ಏಕೆಂದರೆ ಇಚ್ಛಿತ ಸ್ಥಾನವು ದೊರಕಿದೆ । ಮಾರ್ಗವು ಬೇರೆ, ಹಾಗೂ ಸ್ವರೂಪವು ಬೇರೆ, ಆದರೆ ಈ ಎರಡು ಗುಣಗಳು ಗೌಣ, ಏಕೆಂದರೆ ಗುರಿ ಹಾಗೂ ಧ್ಯೇಯಗಳು ಒಂದೇ । ಯಾವನು ಯಾವ ಮಾರ್ಗದ ಮೇಲೆ ನಡೆಯುವನು ಅವನ ಗರ್ವವು ಕಂಡು ಬರುತ್ತದೆ । ಆದರೆ ಈ ಪಂಥಾಭಿಮಾನವನ್ನು ಸಾಧಕನಿಗೆ ಬಿಡಬೇಕಾಗುವದು। ಯಾರು ತಮ್ಮ ಗುರಿಯನ್ನು ಮುಟ್ಟಿರುವದಿಲ್ಲವೋ, ಅಂಥ ಪಂಥಾಭಿಮಾನಿಗಳಲ್ಲಿ ಜಗಳಗಳಾಗುತ್ತವೆ । ಯಾರು ಸಧಾನೆ ಮಾಡಿ ಯೋಗ್ಯ ಸ್ಥಳಕ್ಕೆ ತಲುಪುತ್ತಾರೆ, ಅವರಿಗೆ ಸಂತರೆನ್ನುತ್ತಾರೆ, ಮತ್ತು ಅವರ ಮನಸ್ಸಿನಲ್ಲಿ ದ್ವೈತದ ಭಾವನೆ ಇರುವದಿಲ್ಲ । ಕರ್ಮ ಮಾರ್ಗದ ಪಥದ ಮೇಲೆ ನಡೆದು ತಮ್ಮ ಯೋಗ್ಯ ಸ್ಥಳವನ್ನು ತಲುಪಿದವರಲ್ಲಿ ವಸಿಷ್ಠ, ನಾಮದೇವ, ಜಮದಗ್ನಿ, ಅತ್ರಿ, ಪರಾಶರ ಹಾಗೂ ಶಾಂಡಿಲ್ಯ ಋಷಿಗಳು ಪ್ರಮುಖರು । ಭಕ್ತಿ ಮಾರ್ಗದಿಂದ ಮುಕ್ತಿಯನ್ನು ಪಡೆಯುವವರಲ್ಲಿ ವ್ಯಾಸ, ನಾರದ, ಕಯಾಧು ಕುಮರ, ಹನುಮಂತ, ಶಬರಿ, ಅಕ್ರೂರ, ಉದ್ಧವ, ಸುದಾಮ, ಅರ್ಜುನ ಹಾಗೂ ವಿದುರರು ಪ್ರಮುಖರು । ಯೋಗ ಮಾರ್ಗದಿಂದ ತಲುಪಿದವರಲ್ಲಿ, ಶ್ರೀ ಶಂಕರಾಚಾರ್ಯ, ಮಚ್ಛಿಂದ್ರನಾಥ, ಗೋರಖನಾಥ, ಜಾಲಂಧರನಾಥರು ಪ್ರಮುಖರು । ವಸಿಷ್ಠರು ಪಡೆದ ಲಾಭವು ವಿದುರ ಹಾಗೂ ಮಚ್ಛಿಂದ್ರನಾಥರಿಗೂ ಪ್ರಾಪ್ತವಾಗಿವೆ । ಅವುಗಳ ಫಲವು ಒಂದೇ ಆಗಿದ್ದು, ಮಾರ್ಗಗಳು ಭಿನ್ನವಾಗಿವೆ। ಈ ಪರಂಪರೆ ಇಂದಿಗೂ ನಡೆದಿದೆ । ಆಧುನಿಕ ಕಾಲದಲ್ಲಿ ಗಾಣಗಾಪುರದ

ಶ್ರೀಪಾದ ವಲ್ಲಭರು ಮತ್ತು ಔದುಂಬರದ ನರಸಿಂಹ ಸರಸ್ವತಿಯರು ಕರ್ಮ ಮಾರ್ಗದಲ್ಲಿ ಪ್ರಮುಖರು ।
ನಾಮದೇವ, ಸಾವತಾ ಮಾಳಿ, ಜ್ಞಾನೇಶ್ವರ ಮಹಾರಾಜ, ಸೇನಾ ನಾವಿ, ಚೋಖಾಮೇಳಾ, ದಾಮಾಜಿಪಂತರು
ಭಕ್ತಿಮಾರ್ಗದಲ್ಲಿ ಪ್ರಮುಖರಾಗಿದ್ದರು । ಶ್ರೀಗೊಂದೆಯ ಶೇಖ ಮಹಮ್ಮದ, ಜಾಲನಾದ ಆನಂದಸ್ವಾಮಿ ಮತ್ತು
ಅಂಜನಗಾಂವಿಯ ದೇವನಾಥರು ಯೋಗಮಾರ್ಗವನ್ನು ಅನುಸರಿಸಿದರು । ಅದೇ ರೀತಿ ಇಂದು ಸ್ವಾಮಿ
ವಾಸುದೇವಾನಂದ ಸರಸ್ವತಿಯು ಕರ್ಮಮಾರ್ಗದಲ್ಲಿ ಶ್ರೇಷ್ಠರು । ನಾನು ಕೂಡಾ ಭಕ್ತಿ ಪಂಥವನ್ನು ಅನುಸರಿಸಿದ್ದೇನೆ
। ಅನೇಕರೂ ಈ ಮಾರ್ಗದಿಂದ ಸಫಲತೆಯನ್ನು ಪಡೆದಿರುವರು । ಪಲುಸಿನ ಧೋಂಡಿಬುವಾ, ಸೋನಗಿರದ ನಾನಾ
ಬುವಾ, ಜಾಲನಾದ ಯಶವಂತರಾವ ಆದಿಗೆ ಭಕ್ತಿಪಂಥವು ಸಾಧ್ಯವಾಯಿತು । ಖಾಲ್ಲಾ ಆಮ್ಲಾ, ಶಿರ್ಡಿಯ
ಸಾಯಿಬಾಬಾ, ಗುಲಾಬರಾವ ಮೊದಲಾದವರ ಬಳಿ ಜ್ಞಾನ ದೃಷ್ಟಿಯು ಇತ್ತು। ಚಾಂದೂರ ತಹಸೀಲಿನ ವರಖೇಡೆ
ಗ್ರಾಮದ ಸಂತ ಅಡಕೂಜಿ ಈ ಮಾರ್ಗವನ್ನು ಅನುಸರಿಸಿದನು । ಮುಹ್ರಾಗಾಂವಿಯ ಸಂತರತ್ನ ಝಿಂಗಾಜಿ, ಮತ್ತು
ನಾಗಪೂರಿನ ತಾಜುದ್ದೀನ ಭಕ್ತಿ ಮಾರ್ಗವನ್ನು ನಂಬಿದ್ದರು । ಈ ಸಂತರ ಆಚರಣೆಯು ಭಿನ್ನವಾಗಿದ್ದರೂ ಎಲ್ಲರಿಗೂ
ಮೋಕ್ಷ ಪ್ರಾಪ್ತಿಯಾಯಿತು। ಸಾಧನೆಯ ಮಾರ್ಗಕ್ಕೆ ಮಹತ್ವವಿಲ್ಲ। ಆದರೆ ಸಾಧಕನು ತನ್ನ ಗುರಿಯನ್ನು ತಲುಪುವನೋ
ಇಲ್ಲವೋ ಎಂಬುದಕ್ಕೆ ಬಹಳ ಮಹತ್ವವಿದೆ। ನಾವು ಎಲ್ಲ ಸಹೋದರರು ಭೂಮಿಯ ಮೇಲಿನ ಎಲ್ಲ ಭಾವುಕ ಭಕ್ತರಿಗೆ
ಉಚಿತ। (ಯೋಗ್ಯ) ಮಾರ್ಗವನ್ನು ತೋರಿಸಲು ಬಂದಿದ್ದೇವೆ। ಯಾರಿಗೆ ಯಾವ ಮಾರ್ಗವು ಯೋಗ್ಯವೆನಿಸುವದೋ,
ಅದನ್ನು ಅನುಸರಿಸಿ ಮೋಕ್ಷರೂಪಿ ಫಲ ಪ್ರಾಪ್ತಿಮಾಡಿಕೊಳ್ಳುತ್ತಾನೆ। ನಾನು ಹೇಳಿದ್ದನ್ನು ಜ್ಞಾಪಕದಲ್ಲಿಡು। ಈಗ ಹೆಚ್ಚಿಗೆ
ಕೇಳಬೇಡ । ನಾನು ಹೊದ್ದುಕೊಂಡಿರುವ ಹುಚ್ಚನ ವೇಷ, ಹಾಗೆಯೇ ಇರಲಿ । ಯಾರಿಗೆ ಶ್ರದ್ಧೆ ಇದೆಯೋ, ನಿಷ್ಠೆ
ಇರುವದೋ, ಮತ್ತು ಯಾರು ನನಗೆ ಪ್ರಿಯರೋ ಅವರ ಕೆಲಸವು ನೆರವೇರುವದು। ಬೇರೆ ಜನರ ಅವಶ್ಯಕತೆ ನನಗಿಲ್ಲ
। ಯಾರು ಯೋಗ್ಯರೋ ಅವರಿಗೆ ಬ್ರಹ್ಮಜ್ಞಾನವನ್ನು ಕೊಡುವೆನು । ವ್ಯರ್ಥ ತರ್ಕ ವಿತರ್ಕಗಳನ್ನು ಮಾಡುವವರಿಗೆ
ಜ್ಞಾನವನ್ನು ಹೇಳುವದು ಸರಿಯಲ್ಲ। ಯಾರು ಏನೂ ನುಡಿದರೂ, ನಾವು ಏಕಾಂತದಲ್ಲಿ ಕುಳಿತು, ಭಗವತ್ ಭಜನೆ
ಮಾಡಿದರೆ, ನಮಗೆ ನಿಶ್ಚಿತವಾಗಿ ಜಗದ್ಗುರು ಜಗನ್ಮಾತೆಯ ದರ್ಶನವಾಗುವದು । ಮಹಾರಾಜರ ಈ
ಉಪದೇಶವಾಣಿಯನ್ನು ಕೇಳಿ ಬಾಳಾಭಾವುನ ನೇತ್ರದಿಂದ ಅಖಂಡವಾಗಿ ಕಣ್ಣೀರು ಸುರಿಯುತ್ತಿತ್ತು, ಮತ್ತು ॥ 192 ॥



ಅವುಗಳನ್ನು ತಡೆಯುವದ ಅವನಿಂದ ಸಾಧ್ಯವಿರಲಿಲ್ಲ। ಬಾಳಾ ಭಾವುನ ಅಷ್ಟಭಾವಗಳು ಪ್ರಚುದಿತವಾದವು, ಶರೀರ
ರೋಮಾಂಚಿತವಾಯಿತು, ಮತ್ತು ವೈಖರಿ ವಾಣಿಯ ಕಾರ್ಯವು ಮುಗಿಯಿತು । ಅವನು ಮೌನವಾಗಿ, ವರ್ಹಾಡ
ಪ್ರಾಂತದ ಉದ್ಧಾರಕ ಶ್ರೀ ಗಜಾನನ ಮಹಾರಾಜರಿಗೆ ನಮಸ್ಕರಿಸಿದನು । ಕಣ್ವ ಶಾಖೆಯ ಸಾಳುಬಾಯಿ ಎಂಬ ಸ್ತ್ರಿ
ಮಹಾರಾಜರ ಭಕ್ತಳಿದ್ದಳು । ಒಂದು ದಿನ ಮಹಾರಾಜರು ಅವಳಿಗೆ ಯಾರೇ ಮಠದಲ್ಲಿ ಬಂದರೆ ಮತ್ತು ಅವರು
ಹಸಿದಿದ್ದರೆ, ಅವರಿಗೆ ಊಟ ಮಾಡಿ ಹಾಕುವದು ನಿನ್ನ ಕಾರ್ಯ ಎಂದರು । ಇದೇ ನಿನ್ನ ನಿಜ ಸೇವೆ ಮತ್ತು ಇದರಿಂದ
ನೀನು ಭಗವಂತನಿಗೆ ಪ್ರಿಯಳಾಗುವಿ। ಆ ಸಾಳುಬಾಯಿ ಕೊನೆಯವರೆಗೆ ಮಠದಲ್ಲಿದ್ದಳು। ಪ್ರಲ್ಹಾದಬುವಾ ಜೋಶಿಗೆ
ಮಹಾರಾಜರ ಕೃಪೆಯನ್ನು ಹೊಂದುವ ಸಮಯ ಬಂದಿತ್ತು, ಆದರೆ ಅವನ ದುರ್ದೈವದಿಂದ ಮಹಾರಾಜರ
ಕೃಪೆಯಾಗಲಿಲ್ಲ । ಖಾಮಗಾಂವಿಯ ಹತ್ತಿರ ಜಲಂಬವೆಂಬ ಊರಿದೆ । ಅಲ್ಲಿ ತುಲಸಿರಾಮನೆಂಬ ಮಹಾರಾಜರ
ಭಕ್ತನಿದ್ದನು। ಅವನ ಪುತ್ರ ಆತ್ಮಾರಾಮನು ಕೂಡಾ ಒಳ್ಳೆಯವ ಮತ್ತು ಕುಶಾಗ್ರಬುದ್ಧಿಯವನಾಗಿದ್ದನು। ಅವನಿಗೆ ವೇದ
ವಿದ್ಯೆಯಲ್ಲಿ ರುಚಿಯಿತ್ತು। ಆದ್ದರಿಂದ ಧರ್ಮಪೀಠದಲ್ಲಿ ಅಧ್ಯಯನ ಮಾಡಲು ಅವನು ಕಾಶಿಗೆ ಹೋದನು। ಪ್ರತಿದಿನ
ಭಾಗೀರಥಿಯಲ್ಲಿ ಸ್ನಾನ, ಭಿಕ್ಷೆಯಿಂದ ದೊರೆತದ್ದನ್ನು ಸೇವಿಸಿ ಗುರುಗ್ರಹದಲ್ಲಿ ಶ್ರುತಿಗಳ ಅಭ್ಯಾಸ, ಈ ರೀತಿ ಅವನ
ದಿನಚರಿ । ಹೇ ಶ್ರೋತೃಗಳೇ, ಅನೇಕ ಸಲ ವಿದ್ಯಾರ್ಥಿಗಳು ಅಧ್ಯಯನಕ್ಕಾಗಿ ಮನೆಯಿಂದ ಹೊರಬೀಳುವರು ।
ಆದರೆ ಹೊರಬಿದ್ದ ಮೇಲೆ ಮೋಜು, ಮಜಾ ಮಾಡುವರು। ಮೋಜು ಮಾಡು ವಿದ್ಯಾರ್ಥಿಯಿಂದ ಅಧ್ಯಯನ ಹೇಗೆ
ಸಾಧ್ಯ ? ರೋಗ ಹತ್ತಿದ ಮಾವಿನಿಂದ ಮಧುರ ರಸ ಹೇಗೆ ಸಾಧ್ಯ ? ಆದರೆ ಆತ್ಮಾರಾಮನು ಈ ರೀತಿಯ ವಿದ್ಯಾರ್ಥಿ
ಯಾಗಿರಲಿಲ್ಲ। ಅವನು ವಿವೇಕ ಸಂಪನ್ನ ಸದಾಚಾರಿಯಾಗಿದ್ದರಿಂದ ಕಾಲಕ್ಕೆ ಅನುಸರಿಸಿ ವೇದ ಪಾರಂಗತನಾಗಿ ಊರಿಗೆ
ಮರಳಿದನು। ಊರಿಗೆ ಮರಳಿದ ಕೂಡಲೇ ಅವನು ಗಜಾನನ ಮಹಾರಾಜರ ದರ್ಶನಕ್ಕಾಗಿ ಶೇಗಾಂವಿಗೆ ಹೋದನು।
ಅವನು ವೇದ–ವಿದ್ಯಾ ಪಾರಂಗತನಾದರೆ, ಮಹಾರಾಜರು ಜ್ಞಾನ ಸವಿತೆಯಂತೆ ! ಮಹಾರಾಜರ ಎದುರು
ಆತ್ಮಾರಾಮನು ವೇದ ಗಾಯನವನ್ನು ಆರಂಭಿಸಿದನು। ಕೆಲವು ಕಡೆ ಅವನು ತಪ್ಪುತ್ತಿದ್ದನು। ಆಗ ಮಹಾರಾಜರು ಅವನ
ತಪ್ಪನ್ನು ತೋರಿಸಿ, ಅವನ ಜೊತೆಗೆ ವೇದ ಋಚೆಯನ್ನು ನುಡಿಯುತ್ತಿದ್ದರು । ಮಹಾರಾಜರ ವೇದಗಾಯನವನ್ನು ॥ 193 ॥
ವಿದ್ವಾನರು ತನ್ಮಯರಾಗಿ ಕೇಳುತ್ತಿದ್ದರು। ಆತ್ಮಾರಾಮನ ವಿದ್ಯೆಯು ಸಾರ್ಥಕವಾಯಿತು, ಏಕೆಂದರೆ ರತ್ನದ ಪರೀಕ್ಷಕನ

ಹೊರತು ರತ್ನ ಪರೀಕ್ಷೆ ಯಾರು ಮಾಡಬಲ್ಲರು ? ಕೊನೆಗೆ ಆತ್ಮಾರಾಮನು ಸರ್ವಸ್ವವನ್ನು ತ್ಯಾಗ ಮಾಡಿ ಮಹಾರಾಜರ ಬಳಿ ಮಠದಲ್ಲಿ ಉಳಿದುಕೊಂಡನು । ಮಧುರಸವನ್ನು ಬಿಟ್ಟು ಜೇನ್ನೊಣ ಬೇರೆ ಕಡೆಗೆ ಏಕೆ ಹೋಗುವದು ? ಮಹಾರಾಜರ ಸೇವೆ ಮಾಡುವ ಒಂದು ಸಂಧಿಯನ್ನು ಕೂಡಾ ತಪ್ಪಿಸಲಿಲ್ಲ, ಹೀಗೆ ಅವನೊಬ್ಬ ಮಹಾರಾಜರ ಏಕನಿಷ್ಠ ಭಕ್ತನಿದ್ದನು । ಮಹಾರಾಜರ ನಂತರ ಅವರ ಸಮಾಧಿಯ ಪೂಜೆ ಆದಿ ಕಾರ್ಯವನ್ನು ಆತ್ಮಾರಾಮನು ಕೊನೆಯತನಕ ಮಾಡುತ್ತಿದ್ದನು। ಯಾವ ವಸ್ತುವಿನ ಅಪೇಕ್ಷೆ ಮಾಡದೇ ಅವನು ಮಹಾರಾಜರ ಸೇವೆ ಮಾಡಿದನು । ಕೊನೆಗೆ ಅವನು ತಮ್ಮ ಸಂಪತ್ತಿಯನ್ನು ಮಠಕ್ಕೆ ದಾನ ಮಾಡಿದನು । ಒಂದು ಮನೆ ಹಾಗೂ ಸ್ವಲ್ಪ ಜಮೀನು ಇಷ್ಟೇ ಅವನ ಸಂಪತ್ತಿಯಾಗಿತ್ತು। ಇಲ್ಲಿ ಸಂಪತ್ತಿಗಿಂತ, ಸಮರ್ಪಣೆಯ ಭಾವನೆಯು ಮುಖ್ಯ । ಶಬರಿಯು ಸಮರ್ಪಣ ಬುದ್ಧಿಯಿಂದ ಎಂಜಲು ಬಾರಿಹಣ್ಣನ್ನು ಕೊಟ್ಟು ಪ್ರಭು ರಾಮಚಂದ್ರರನ್ನು ವಶಮಾಡಿಕೊಂಡಳು । ಆತ್ಮಾರಾಮನ ವಿಷಯದಲ್ಲಿ ಹೀಗೆಯೇ ಆಯಿತು, ಅದರ ವರ್ಣನೆ ಮಾಡುವೆನು । ಮಹಾರಾಜರಿಗೆ ಸರ್ವಸ್ವವನ್ನು ಅರ್ಪಣೆ ಮಾಡುವ ಭಕ್ತರು ಅನೇಕರು। ಅವರಲ್ಲಿ ನಾರಾಯಣ ಜಾಮಕರ ಮತ್ತು ಮಾರುತಿ ಪಟವಾರಿ ಪ್ರಮುಖರು । ಇವರಲ್ಲಿ ನಾರಾಯಣ ಜಾಮಕರನು ದುಗ್ಧಾಹಾರಿಯಾಗಿದ್ದು, ಕೇವಲ ಹಾಲಿನ ಮೇಲಿರುತ್ತಿದ್ದನು । ಈಗ ಮಾರುತಿ ಪಟವಾರಿಯ ವೃತ್ತಾಂತವನ್ನು ಕೇಳಿರಿ । ಹೇ ಶ್ರೋತ್ರುಗಳೇ, ಮಾರುತಿಯು ರೈತನಾಗಿದ್ದನು । ಬೆಳೆಯ ರಕ್ಷಣೆಗಾಗಿ ಅವನು ಒಕ್ಕಲಿಗ ಜಾತಿಯ ತಿಮ್ಮಾಜಿ ಎಂಬ ನೌಕರನನ್ನು ಇಟ್ಟನು । ಒಮ್ಮೆ ಅವನಿಗೆ ಹೊಲದಲ್ಲಿ ನಿದ್ದೆ ಹತ್ತಿತು । ಮಧ್ಯಾಹ್ನದ ಸಮಯವಾಗಿದ್ದು, ಕುಂಬಾರನ ಹತ್ತಿಪ್ಪತ್ತು ಕತ್ತೆಗಳು ಹೊಲದಲ್ಲಿ ನುಗ್ಗಿದವು । ನೌಕರನು ಮಲಗಿದ್ದರಿಂದ ಅವುಗಳನ್ನು ತಡೆಯುವವರು ಯಾರಿರಲಿಲ್ಲ। ಅವುಗಳು ಹೋಗಿ ಜೋಳದ ರಾಶಿಯನ್ನು ತಿನ್ನ ತೊಡಗಿದವು । ಈ ಮಾರುತಿಯು ಮಹಾರಾಜರ ಭಕ್ತನಾಗಿದ್ದನು । ಆದ್ದರಿಂದ ಮಹಾರಾಜರು ಲೀಲೆ ಮಾಡಿದರು । ಅವರು ಕ್ಷಣ ಮಾತ್ರದಲ್ಲಿ ಮೊರಗಾಂವಿಗೆ ಬಂದು ತಿಮಾಜಿಗೆ ನುಡಿದರು, ಅರೇ ಎದ್ದೇಳು ! ಕತ್ತೆಗಳು ಹೊಲದಲ್ಲಿ ಹೊಕ್ಕಿವೆ । ತಿಮ್ಮಾಜಿಗೆ ಎಬ್ಬಿಸಿ ಮಹಾರಾಜರು ಅದೃಶ್ಯರಾದರು। ತಿಮ್ಮಾಜಿ ಲಗುಬಗೆಯಿಂದ ಎದ್ದು ನೋಡಿದರೆ ಹತ್ತು ಹನ್ನೆರಡು ಕತ್ತೆಗಳು ಜೋಳವನ್ನು ತಿನ್ನುತ್ತಿವೆ । ಇದನ್ನು ನೋಡಿ ಅವನು ಮನಸ್ಸಿನಲ್ಲಿ ವಿಚಾರ ಮಾಡತೊಡಗಿದನು, ಮಾಲಿಕನು ಬೆಂಕಿ ಕಾರುವನು, ಏಕೆಂದರೆ ನನಗೆ ಜೋಳದ ರಕ್ಷಣೆಗಾಗಿ ಇಡಲಾಗಿದೆ । ಇಂದು ನನ್ನಿಂದ ವಿಶ್ವಾಸಘಾತವಾಯಿತು । ನನ್ನ





ಮೇಲೆ ವಿಶ್ವಾಸವಿಟ್ಟರು ಮಾಲಿಕರು, ಮತ್ತು ನಾನಿಲ್ಲಿ ಮಲಿಗಿದೆ । ಕತ್ತೆಗಳು ಬಹುಭಾಗವನ್ನು ತಿಂದಿದ್ದವು । ಈಗ ಮಾಲಿಕನಿಗೆ ಧಾನ್ಯ ಕಡಿಮೆಯಾದ ಬಗ್ಗೆ ಏನು ಹೇಳಲಿ? ತಿಮಾಜಿ ದುಃಖಿತನಾದನು । ಏಕೆಂದರೆ ಅವನು ನಿಷ್ಠಾವಂತ ಸೇವಕನಿದ್ದನು । ಅವನು ಈ ದಿನಗಳ ನೌಕರರಂತೆ ಇರಲಿಲ್ಲ। ಅವರಿಗೆ ಹಣದ ಚಿಂತೆ, ಮಾಲಿಕನಿಗೆ ಹಾನಿಯಾದರೂ ಸರಿ । ಆದರೆ ತಿಮಾಜಿ ಆ ರೀತಿ ತಿಂದ ಮನೆಗೆ ಎರಡು ಬಗೆಯುತ್ತಿರಲಿಲ್ಲ । ನಡೆದ ಘಟನೆಯನ್ನು ಹೇಳಿ ಕ್ಷಮೆ ಯಾಚಿಸಬೇಕು । ಅವರ ಸ್ವಭಾವವು ಒಳ್ಳೆಯದಿರುವದರಿಂದ ನನ್ನ ತಪ್ಪನ್ನು ಕ್ಷಮಿಸಬಹುದು । ಈ ರೀತಿ ವಿಚಾರ ಮಾಡಿ, ಮರುದಿನ ಬೆಳಗಾಗುತ್ತಲೇ, ತಿಮಾಜಿ ಊರಲ್ಲಿ ಬಂದು ಮಾಲಿಕರ ಕಾಲು ಹಿಡಿದು, ದುಃಖದಿಂದ ನಿನ್ನೆ ರಾತ್ರಿ ನನಗೆ ನಿದ್ದೆ ಹತ್ತಿತು ಮತ್ತು ಕತ್ತೆಗಳು ಹೊಲದಲ್ಲಿ ಹೊಕ್ಕು, ಜೋಳವನ್ನು ತಿಂದವು । ಅದರಿಂ ತಮಗಾದ ಹಾನಿಯನ್ನು ನೀವೇ ಬಂದು ನೋಡಿರಿ । ಆಗ ಮಾರುತಿ ನುಡಿದನು, ನಾನು ಈಗ ಶೇಗಾಂವಿಗೆ ಹೊರಟಿರುವೆನು, ಮತ್ತು ನನಗೆ ಈಗ ಸಮಯವಿಲ್ಲ । ಗಜಾನನ ಮಹಾರಾಜರ ದರ್ಶನ ಪಡೆದು ನಾಳೆ ಬರುವೆನು । ಹೀಗೆ ಹೇಳಿ ಮಾರುತಿ ಮಹಾರಾಜರ ದರ್ಶನಕ್ಕಾಗಿ ಮುಂಜಾನೆ ಹತ್ತು ಘಂಟೆಯ ಸುಮಾರಕ್ಕೆ ಶೇಗಾಂವಿಗೆ ಬಂದನು । ಆಗ ಮಹಾರಾಜರು ಆಸನದ ಮೇಲೆ ಕುಳಿತಿದ್ದರು । ಮುಂದೆ ಜಗು ಪಾಟೀಲ ಹಾಗೂ ಬಾಳಾಭಾವು ಕುಳಿತಿದ್ದರು । ಮಾರುತಿ ಮಹಾರಾಜರ ದರ್ಶನ ಪಡೆಯುವಾಗ, ನಕ್ಕು ನುಡಿದರು ನಿನಗಾಗಿ ನಿನ್ನೆ ರಾತ್ರಿ ನನಗೆ ಕಷ್ಟವಾಯಿತು । ನೀನು ನನ್ನ ಭಕ್ತ, ಆದ್ದರಿಂದ ನನಗೆ ಎಚ್ಚರವಿರಬೇಕಾಗುತ್ತದೆ । ಯಾರ ಭರವಸೆಯ ಮೇಲೆ ನೀನು ಮಲಗುತ್ತಿರುವಿ, ಆ ನೌಕರನು ಮಲಗಿದ್ದರಿಂದ ಹೊಲದ ರಕ್ಷಣೆ ನನಗೆ ಮಾಡಬೇಕಾಗುತ್ತದೆ । ಕತ್ತೆಗಳು ಜೋಳ ಮೇಯುತ್ತಿರುವಾಗ, ನನಗೆ ಹೋಗಿ ತಿಮ್ಮಾಜಿಯವನ್ನು ಎಬ್ಬಿಸಬೇಕಾಯಿತು। ಇದನ್ನು ಕೇಳಿ ಮಾರುತಿ ಮಹಾರಾಜರ ಚರಣಕಮಲಗಳನ್ನು ಹಿಡಿದು ನಡಿದನು, ಮಹಾರಾಜ ತಾವೇ ನಮ್ಮ ರಕ್ಷಕರು। ತಾವೇ ನಮಗೆ ಆಧಾರ । ಬಾಲಕನಿಗೆ ಆಧಾರ ಮಾತೆಯೇ, ಇವುಗಳಿಗಿಂತ ಮಿಗಿಲು ಯಾರ ಅಧಿಕಾರವಿಲ್ಲ । ಹೊಲ ಹಾಗೂ ಧಾನ್ಯದ ಮಾಲಿಕರೂ ತಾವೇ । ಲೌಕಿಕದ ದೃಷ್ಟಿಯಿಂದ ನೌಕರನು ಇದ್ದರೂ, ರಕ್ಷಣೆ ಮಾಡುವವನು ಬೇರೆಯೇ । ಬ್ರಹ್ಮಾಂಡದ ಸುರಕ್ಷಣೆಯನ್ನು ತಾವು ಇಲ್ಲಿಂದಲೇ ಮಾಡವಿರಿ । ಬಾಲಕನಿಗಾಗಿ ತಾಯಿಗೆ ಅನೇಕ ಬಾರಿ ವಿಪತ್ತಿಗಳಿಗೆ ಎಡೆ ಹೋಗಬೇಕಾಗುತ್ತದೆ । ನಾನು ತಮ್ಮ ಬಾಲಕ, ಆದ್ದರಿಂದ ಮೊರಗಾಂವಿಗೆ ಹೋಗಿ ನಮ್ಮ ಹೊಲದ ರಕ್ಷಣೆ ಮಾಡಿದಿರಿ । ಇದೇ ರೀತಿ ಕೃಪಾಶೀರ್ವಾದ ನಮ್ಮ ಮೇಲಿರಲಿ ಎಂದು ಪ್ರಾರ್ಥನೆ । ನಾನು

ಕೂಡಲೆ ಹೋಗಿ ತಿಮಾಜಿಗೆ ನೌಕರಿಯಿಂದ ತಗೆದು ಬಿಡುವೆನು । ಮಾರುತಿಯ ವಿನಯದಿಂದ ಪೂರ್ಣ ಆತ್ಮ ನಿವೇದನೆಯನ್ನು ಕೇಳಿ ಮಹಾರಾಜರು ಪ್ರಸನ್ನರಾಗಿ ನುಡಿದರು, ಆ ತಿಮಾಜಿಗೆ ನೌಕರಿಯಿಂದ ತಗೆಯಬೇಡ । ಏಕೆಂದರೆ ತಿಮಾಜಿಯು ಪ್ರಾಮಾಣಿಕನಿರುವನು । ಕತ್ತೆಗಳು ಧಾನ್ಯವನ್ನ ತಿಂದಿದ್ದನ್ನು ನೋಡಿ ಅವನು ದುಃಖಿತನಾದನು। ಈ ಮಾತ್ರ ನನಗೆ ಆಗಲೇ ತಿಳಿದಿತ್ತು। ರಾತ್ರಿ ನಡೆದ ಘಟನೆ ವೃತ್ತಾಂತವನ್ನು ಹೇಳಲು ಬೆದರುತ್ತ ಅವನು ಮುಂಜಾನೆ ಬಂದಿದ್ದನು । ಆಗ ನೀನು ಅವನ ಮಾತನ್ನು ಕೇಳಿ ನಾಳೆ ಅಲ್ಲಿಗೆ ಹೋಗುವದಾಗಿ ಹೇಳಿದ್ದು ನಿಜ ತಾನೇ । ಈ ಗುರು ವಚನವನ್ನು ಕೇಳಿ ಮಾರುತಿ ಎಲ್ಲವನ್ನು ಅರಿತನು । ಸಂತರ ಕಾರ್ಯ ಅದ್ಭುತ ಎಂಬುದನ್ನು ಅವನನು ಅರಿತಿದ್ದನು । ಕತ್ತೆಗಳು ಹೊಲದಲ್ಲಿ ಹೊಕ್ಕಿದ್ದನ್ನು ಅಂತರ್ಜ್ಞಾನದಿಂದ ಮಹಾರಾಜರು ಅರಿತಿದ್ದರು । ಶಕೆ ಹದಿನೆಂಟು ನೂರಾ ಹದಿನಾರರಲ್ಲಿ ಮಹಾರಾಜರು ಬಾಳಾಪುರದಲ್ಲಿದ್ದರು । ಆಗ ನಡೆದ ಘಟನೆಯನ್ನು ಕೇಳಿರಿ । ಬಾಳಾಪುರದಲ್ಲಿ ಸುಖಲಾಲ ಬನ್ಸಿಲಾಲನ ಅಂಗಡಿಯ ಮುಂದೆ ಕಟ್ಟೆಯಿತ್ತು । ಅದರ ಮೇಲೆ ಮಹಾರಾಜರು ನಿಜಾನಂದದಿಂದ ಕುಳಿತಿದ್ದರು । ಸಂಪೂರ್ಣ ದಿಗಂಬರ ಮೂರ್ತಿ ಶರೀರದ ಮೇಲೆ ವಸ್ತ್ರವಿರಲಿಲ್ಲ । ಆದರೂ ಭಾವಿಕರು ಮನದಲ್ಲಿ ಯಾವ ಸಂದೇಹವಿಲ್ಲದೇ ಅವರಿಗೆ ನಮಸ್ಕರಿಸಿ ಮುಂದೆ ಹೋಗುತ್ತಿದ್ದರು । ಮಾರುಕಟ್ಟೆಗೆ ಹೋಗುವ ಬೀದಿಯಾಗಿದ್ದರಿಂದ ಬಹಳ ಗದ್ದಲ ವಿರುತ್ತಿತ್ತು। ಆ ರಸ್ತೆಯಿಂದ ಒಬ್ಬ ಪೋಲಿಸನು ಹೊರಟಿದ್ದನು । ಆ ಹವಾಲದಾರನ ಹೆಸರು ನಾರಾಯಣ ಆಸರಾಜಿ । ಮಹಾರಾಜರನ್ನು ನೋಡಿದೊಡನೆ ಅವನು ಬೆಂಕಿಕಾರತೊಡಗಿದನು । ಅವನು ಈ ನಗ್ನ ಸಾಧುಬೇಕೆಂದು ಈ ರಸ್ತೆಯ ಮೇಲೆ ಕುಳಿತಿರುವನು ಎಂದು ಸಿಟ್ಟಿನಿಂದ ನುಡಿದನು । ಇವನು ಕಳ್ಳ ಸಂನ್ಯಾಸಿ । ಇವನ ಮೇಲೆ ದಯೆ ತೋರಿಸುವದು ಸರಿಯಲ್ಲ। ಹೀಗೆ ನುಡಿದು ಅವನು ಮಹಾರಾಜರ ಬಳಿಗೆ ಹೋಗಿ ಅವರನ್ನು ಹೀಯಾಳಿಸ ತೊಡಗಿದನು । ಏ ಹುಚ್ಚಾ ರಸ್ತೆಯಲ್ಲಿ ನಗ್ನನಾಗಿ ತಿರುಗಾಡಲು ನಿನಗೆ ನಾಚಿಕೆಯಾಗುವದಿಲ್ಲ ? ನಿನ್ನ ಹುಚ್ಚತನಕ್ಕಾಗಿ ಇದು ತೆಗೆದು ಕೋ ಬಹುಮಾನ ! ಎಂದು ನುಡಿದು ಕೈಯಲ್ಲಿದ್ದ ಬಡಿಗೆಯಿಂದ ಅವರಿಗೆ ಹೊಡೆಯತೊಡಗಿದನು । ಬಡಿಗೆಯ ಗುರುತು ಬೆನ್ನಿನ ಮೇಲೆ ಕಾಣತೊಡಗಿದವು, ಆದರೂ ಅವನು ನಿಲ್ಲಲಿಲ್ಲ। ಇದನ್ನು ನೋಡಿ ಹುಂಡಿವಾಲಾ ಎಂಬ ಸಜ್ಜನನು ಅಂಗಡಿಯಿಂದ ಹೊರಬಿದ್ದು ಹವಾಲದಾರನ ಮುಂದೆ ಬಂದು ನಿಂತನು । ಮತ್ತು ನುಡಿದನು, ನಾರಾಯಣ ಸತ್ಪುರುಷರ ಮೇಲೆ ಕೈ ಮಾಡಬಾರದು । ಏಕೆಂದರೆ ಸಂತರ ರಕ್ಷಕರು ಶ್ರೀ ಹರಿ । ಮಹಾರಾಜರ ಮೈ ಮೇಲೆ ಎದ್ದು ಬಾರು ಕಂಡು





ಬರುವದಿಲ್ಲವೇ ? ನಿನ್ನ ಅಮಾನುಷ ಕೃತ್ಯದಿಂದ, ನಿನ್ನ ಅಂತಕಾಲವು ಸಮೀಪ ಬಂದಿದೆ । ಏಕೆಂದರೆ ಡಾಕ್ಟರರು ವೈದ್ಯರು ಹೇಳಿದ ಮಾತನ್ನು ಕೇಳದಿದ್ದರೆ ರೋಗಿಯು ಸಾಯುವನು । ಇದೇ ರೀತಿ ನಿನ್ನ ವರ್ತನೆಯಾಗಿದೆ । ಈ ನಡೆದ ಘಟನೆ ಅಶುಭ ಸೂಚನೆಯಾಗಿದೆ । ಆದರೂ ಇದರಿಂದ ಉಳಿಯಲು ಒಂದು ಉಪಾಯವಿದ । ನೀನು ಮಾಡಿದ ಅಪರಾಧಕ್ಕಾಗಿ ಮಹಾರಾಜರಲ್ಲಿ ಕ್ಷಮೆ ಯಾಚಿಸು । ಆಗ ಹವಾಲದಾರನು ನನಗೆ ಕ್ಷಮೆ ಯಾಚಿಸುವ ಅವಶ್ಯಕತೆ ಏನು? ಕಾಗೆಯ ಶಾಪದಿಂದ ಪ್ರಾಣಿಗಳು ಸಾಯುವದು ಸಾಧ್ಯವೇ ? ಈ ನಗ್ನ, ಹುಚ್ಚನು ನಡು ಹಾದಿಯಲ್ಲಿ ಕುಳಿತು ಏನೇನೋ ಬೊಗಳುತ್ತಾನೆ । ಇಂತಹ ಕಳ್ಳ ಸಂನ್ಯಾಸಿಗೆ ಬಡಿಯುವದರಿಂದ ಈಶ್ವರನ ಸಾಮ್ರಾಜ್ಯದಲ್ಲಿ ಶಿಕ್ಷೆಯಾದರೇ, ನಿಜವಾದ ನ್ಯಾಯದ ಆಶಯೇ ಬೇಡ ? ಆದರೆ ಇದರ ಶಿಕ್ಷೆ ಆ ಹವಾಲದಾರನಿಗಾಯಿತು । ಕೆಲವು ದಿನಗಳಲ್ಲಿಯೇ ಅವನ ಮೃತ್ಯುವಾಯಿತು । ಅವನ ನೆಂಟರೂ ಕೂಡಾ ಹದಿನೈದು ದಿನಗಳಲ್ಲಿಯೇ ಮರಣ ಹೊಂದಿದ್ದರು । ಸಾಧುವಿನ ಮೇಲೆ ಕೈ ಮಾಡಿದ್ದಕ್ಕೆ ಅವನಿಗೆ ಶಿಕ್ಷೆ ಆಯಿತು । ಕಾರಣವಿಲ್ಲದೆ ಒಬ್ಬ ಸಾಧು ಪುರುಷನಿಗೆ ಕಷ್ಟವನ್ನು ಕೊಟ್ಟರೆ ಆಗುವ ಪರಿಣಾಮವನ್ನು ಜನರು ನೋಡಿದರು । ಆದ್ದರಿಂದ ಸಂತರೆದುರು ಮರ್ಯಾದೆಯಿಂದ ವರ್ತನೆ ಮಾಡಬೇಕು । ಅಹಮ್ಮದನಗರ ತಾಲೂಕಿನಲ್ಲಿ ಪ್ರವರಾ ನದಿಯ ತೀರದ ಮೇಲೆ ಸಂಗಮನೇರವೆಂಬ ಒಂದು ಸುಂದರ ಸಣ್ಣ ಊರಿದೆ। ಅನಂತಫಂದಿ ಎಂಬ ಕವಿಯ ಊರು । ಆ ಊರಿನಲ್ಲಿ ಹರಿ ಜಾಖಡ್ಯಾ ಎಂಬ ಮನುಷ್ಯನಿದ್ದನು, ಅವನ ವೃತ್ತಾಂತವನ್ನು ಕೇಳಿರಿ । ಈ ಹರಿ ಜಾಖಡ್ಯಾ ಯಜುರ್ವೇದಿ ಬ್ರಾಹ್ಮಣನಿದ್ದನು । ಹೊಟ್ಟೆಗಾಗಿ ಅವನು ಅಲೆದಾಡುತ್ತಿದ್ದನು । ಹೀಗೆ ತಿರುಗಾಡುತ್ತ ಅವನು ಮಹಾರಾಜರ ದರ್ಶನಾಕ್ಕಾಗಿ ಶೇಗಾಂವಿಗೆ ಬಂದನು । ದರ್ಶನ ಪಡೆದು ಅವನು ಮುಂದೆ ಕುಳಿತನು । ದರ್ಶನಕ್ಕಾಗಿ ಭಕ್ತರ ಗದ್ದಲವಾಗಿತ್ತು । ಕೆಲವರು ಬ್ರಾಹ್ಮಣರಿಗೆ ಭೋಜನ ಕೊಟ್ಟು, ಮತ್ತು ಕೆಲವರು ಸಕ್ಕರೆಯ ಪ್ರಸಾದಕೊಟ್ಟು, ತಮ್ಮ ಹರಕೆಯನ್ನು ಪೂರೈಸುತ್ತಿದ್ದರು । ಇದನ್ನು ನೋಡಿ ಹರಿ ಮನಸ್ಸಿನಲ್ಲಿ ವಿಚಾರ ಮಾಡತೊಡಗಿದನು, ಈ ಜ್ಞಾನರಾಶಿಯ ಹತ್ತಿರ ಬಂದು ಕೂಡಾ ನಾನು ವಿಮುಖನಾಗಿ ಹೋಗಬೇಕಾಗಿದೆ । ಏಕೆಂದರೆ ನನ್ನ ಜೀವನವು ತೊಂದರೆಗಳಿಂದಲೇ ತುಂಬಿದೆ । ಬಂಡೆಯ ಮೇಲೆ ಬೀಜ ಬಿತ್ತಿ ಅದನ್ನು ಬೆಳೆಸುವದು ಹೇಗೆ ಸಾಧ್ಯ? ಇಂದು ಊಟ ದೊರಕಿದೆ, ನಾಳೆ ದೇವರ ಮೇಲೆ ಭಾರ, ಈ ತರಹದ ಜೀವನವು ನಡೆದಿದೆ । ಈ ದಿನದ ತನಕ ನಾನು ಧನ ಸಂಗ್ರಹ ಮಾಡಲಿಲ್ಲ । ನನ್ನ ಬಳಿ ಹೊಲ–ಮನೆಯಿಲ್ಲ, ಅಥವಾ ಉದರ ನಿರ್ವಾಹಕ್ಕೆ ಯಾವ ಸಾಧನವಿಲ್ಲ ।

ವಿದ್ಯೆಯಿಂದ ನಾನು ವಿದ್ವಾನನಾಗಲಿಲ್ಲ। ಈ ಸ್ಥಿತಿಯಲ್ಲಿ ನನಗೆ ಯಾರು ತಾನೆ ಪುತ್ರಿಯ ಕೈಯನ್ನು ಕೊಡುವರು ? ಅವನು ಮನಸ್ಸಿನಲ್ಲಿಯೇ ಮಹಾರಾಜರಲ್ಲಿ ಪ್ರಾರ್ಥನೆ ಮಾಡಿ ನುಡಿದನು, ಹೇ ಸ್ವಾಮಿ ಗಜಾನನ, ಸಚ್ಚಿದಾನಂದ ದಯಾಘನ! ನನ್ನ ಮನದಲ್ಲಿ ಸಂಸಾರ ಸುಖದ ಬಯಕೆಯಾಗಿದೆ। ಅದನ್ನು ತಾವು ಪೂರ್ಣಗೊಳಿಸಿರಿ। ನನಗೆ ಸುಂದರ ಸ್ತ್ರಿ ದೊರೆತು ಮಕ್ಕಳಾಗಲಿ। ಈ ವಿಚಾರ ಅವನ ಮನಸ್ಸಿನಲ್ಲಿ ನಡೆದಾಗಲೇ ಮಹಾರಾಜರು ಅವಳ ಮೇಲೆ ಉಗಳಿ ನುಡಿದರು, ಮೂರ್ಖ ! ಜನರು ಸಂಸಾರದಿಂದ ಮುಕ್ತತೆಯನ್ನು ಬೇಡುವರು, ಮತ್ತು ನೀನು ಸಂಸಾರ ಸುಖವನ್ನು ಕೇಳುತ್ತಿರುವಿ। ಏನಿದೂ ಜಗತ್ತಿನ ವಿಶೇಷ ಸ್ಥಿತಿ। ಎಲ್ಲರೂ ಸಂಸಾರ ಸುಖವನ್ನು ಬೇಡುವರು, ಆದರೆ ಸಚ್ಚಿದಾನಂದ ಶ್ರೀಹರಿಯನ್ನು ಕೇಳುವದಿಲ್ಲ। ಮಹಾರಾಜರು ಹೀಗೆ ನುಡಿದು, ಅವನ ಕಡೆಗೆ ಒಂದು ಕೃಪಾದೃಷ್ಟಿಯನ್ನು ಬೀರಿ, ನಿನ್ನ ಇಚ್ಛೆ ಪೂರ್ಣವಾಗುವದು ಎಂದರು। ನಿನಗೆ ಮಕ್ಕಳು, ಮರಿಮಕ್ಕಳು ಆಗುವವು ಮತ್ತು ಧನವು ನಿನ್ನ ಬಳಿ ಇರುವದು। ಈಗ ಮನೆಗೆ ಹೋಗಿ, ಆನಂದದಿಂದ ಸಂಸಾರ ಮಾಡು। ಆದರೆ ಈ ದೇವರಿಗೆ ಎಂದಿಗೂ ಮರೆಯಬೇಡ। ಈ ರೀತಿ ಉಪದೇಶಮಾಡಿ ಮಹಾರಾಜರು ಪ್ರಸಾದ ರೂಪದಲ್ಲಿ ಮದುವೆ ಮಾಡಲು ಧನವನ್ನು ಕೊಟ್ಟರು। ಸಂಗಮನೇರದಲ್ಲಿ ಹರಿ ಜಾಖಡ್ಯಾನ ಸಂಸಾರವು ಸಂತೋಷದಿಂದ ಸಾಗಿತು। ಈ ರೀತಿ ಮಹಾರಾಜರ ಸಿದ್ಧವಾಣಿಯನ್ನು ಎಲ್ಲರೂ ಅರಿತರು। ರಾಮಚಂದ್ರ ನಿಮೋಣಕರನೆಂಬ ಸಜ್ಜನ ಓವ್ಹರಸಿಯರನಿದ್ದನು। ಅವನ ಜೊತೆಗೆ ವಾಸುದೇವ ಬೇಂದ್ರೆಯೆಂಬ ಸರ್ವೆಯರನಿದ್ದನು। ಇಬ್ಬರೂ ಸಹ್ಯಾದ್ರಿ ಪರ್ವತದ ಮುಕನಾ ನದಿಯ ದಂಡೆಗೆ ತಲುಪಿದರು। ಈ ಮುಕನಾ ನದಿ, ನಾಸಿಕ ಜಿಲ್ಹೆಯ ಇಗತಪುರಿ ತಾಲೂಕಿನಲ್ಲಿದೆ। ಮುಕನಾ ನದಿಯ ಹತ್ತಿರದ ಅರಣ್ಯವು ಬಹಳ ಸುಂದರವಾಗಿದ್ದು, ಅದರ ವರ್ಣನೆಯು ಅಸದಳ। ಜಿಂಕೆಗಳು ಆನಂದದಿಂದ ಯಾರ ಹೆದರಿಕೆಯಿಲ್ಲದೇ ಅರಣ್ಯದಲ್ಲಿ ನಲೆದಾಡುತ್ತಿದ್ದವು। ಹಣ್ಣು ಕಾಯಿಗಳಿಂದ ವೃಕ್ಷಗಳು ತುಂಬಿದ್ದವು। ಕಾಡು ಪಕ್ಷಿ ಪ್ರಾಣಿಗಳು ಮುಕ್ತರಾಗಿ ಸಂಚರಿಸುತ್ತಿದ್ದವು। ಮುಕನಾ ನದಿಯ ಹತ್ತಿರದ ಒಂದು ಸಣ್ಣ ಜಲ ಪ್ರವಾಹಕ್ಕೆ 'ಕಪಿಲಧಾರಾ ಪ್ರವಾಹ'ವೆನ್ನುತ್ತಾರೆ। ಪ್ರತಿಯೊಂದು ವರ್ಷಕ್ಕೆ ಜನರು ಈ ಸ್ಥಳಕ್ಕೆ ಪವಿತ್ರ ತೀರ್ಥವೆಂದು ನಂಬಿ ಬಂದು ಸ್ನಾನ ಮಾಡುವರು। ಅದೇ ರೀತಿ ಒಂದು ವರ್ಷ ನಿಮೋಣಕರನು ಸ್ನಾನಕ್ಕಾಗಿ ಅಲ್ಲಿ ಬಂದನು। ಅವನಿಗೆ ಸ್ವಲ್ಪ ಯೋಗ ಕ್ರಿಯೆಗಳು ಗೊತ್ತಿದ್ದವು। ಯೋಗ್ಯ ವಿದ್ಯೆ ಪೂರ್ಣರೂಪದಿಂದ ಅವಗತ ಮಾಡುವ ಇಚ್ಛೆ ನಿಮೋಣಕನಿಗೆ ಇತ್ತು। ಅವನು ಅನೇಕ ಸಾಧು, ಸಂನ್ಯಾಸಿಗಳಿಗೆ ಈ ವಿಷಯದಲ್ಲಿ





ಭೆಟ್ಟಿಯಾಗಿದ್ದನು। ಆದರೆ ಈ ವಿಷಯದಲ್ಲಿ ಅವನಿಗೆ ಯಾರೂ ಸರಿಯಾಗಿ ಮಾರ್ಗದರ್ಶನೆ ಮಾಡಿರಲಿಲ್ಲ। ಆದ್ದರಿಂದ ನಿಮೋಣಕರನು ಹತಾಶನಾಗಿದ್ದನು। ಅವನು ಮನದಲ್ಲಿ ದೇವರ ಪ್ರಾರ್ಥನೆ ಮಾಡತೊಡಗಿದನು। ದೇವರೇ ನಾನು ಏನು ಮಾಡಲಿ ? ನನಗೆ ಯೋಗಾಭ್ಯಾಸ ಮಾಡಿಸುವ ಗುರುವು ಎಲ್ಲಿ ದೊರಕುವನು ? ದಯವಿಟ್ಟು ನನಗೆ ತಿಳಿಸಿರಿ। ಅವನ ಪ್ರಾರ್ಥನೆ ಪೂರ್ಣವಾಗುವದರಲ್ಲಿ, ಅವನಿಗೆ ಕಪಿಲಧಾರಾದ ಬಳಿ ಕುಳಿತ ವ್ಯಕ್ತಿಯು ಕಂಡು ಬಂದಿತು। ಆ ವ್ಯಕ್ತಿಯು ಅಜಾನುಬಾಹು ಇದ್ದಿತು। ಅವರ ಶರೀರವು ಭೀಮಕಾಯವಾಗಿದ್ದು, ಅವರು ಶಾಂತ ಮುದ್ರೆಯಿಂದ ಧ್ಯಾನಸ್ಥರಾಗಿದ್ದರು। ಅವರನ್ನು ಕಂಡೊಡನೆ ನಿಮೋಣಕರನು ಅವರಿಗೆ ಸಾಷ್ಟಾಂಗ ನಮಸ್ಕಾರ ಮಾಡಿದನು। ಬಹಳ ಸಮಯ ಕಳೆದು ಹೋಗಿ, ಸೂರ್ಯಾಸ್ತವಾಯಿತು, ಆದರೂ ಯೋಗಿರಾಜರು ಸುಮ್ಮನೆ ಕುಳಿತಿದ್ದರು। ನಿಮೋಣಕರನು ಏನು ತಿಂದಿರಲಿಲ್ಲ, ಮತ್ತು ಅವನು ತಂಗಿದ ಸ್ಥಾನವು ಬಲು ದೂರದಲ್ಲಿತ್ತು। ಸಂಜೆಯಾಗಿದ್ದರಿಂದ ಯೋಗಿ ರಾಜರು ಕಮಂಡಲಿನಲ್ಲಿ ನೀರನ್ನು ತುಂಬಿಕೊಂಡು ಹೊರಟರು। ಮುಂದೆ ಹೋಗಿ ನಿಮೋಣಕರನು ನುಡಿದನು, ಹೇ ಸಮರ್ಥ ಸ್ವಾಮಿ, ತಾವು ನನ್ನ ಪರೀಕ್ಷೆ ಎಲ್ಲಿಯವರೆಗೆ ನೋಡುವಿರಿ ? ಒಂದು ವೇಳೆ ನಿಮಗೆ ಯೋಗ ವಿದ್ಯೆ ಗೊತ್ತಿದ್ದರೆ ನನಗೆ ಸ್ವಲ್ಪ ಕಲಿಸಿರಿ। ಆ ಸಂಜೆಯ ಸಮಯದಲಿ ಆ ಕೈವಲ್ಯದಾನಿ ನುಡಿದರು, ಈ ಚಿತ್ರಪಟವನ್ನು ತೆಗೆದುಕೋ, ಅದರಿಂದ ನಿನ್ನ ಕೆಲಸವಾಗುವದು। ಇದರ ಮೇಲೆ ಷೋಡಶಾಕ್ಷರಿ ಮಂತ್ರವನ್ನು ಬರೆಯಲಾಗಿದೆ। ಅದರ ನಿರಂತರ ಜಪವನ್ನು ಮಾಡು, ಅದರ ಪ್ರಭಾವದಿಂದ ನಿನಗೆ ಯೋಗವು ಪ್ರಾಪ್ತವಾಗುವದು। ಆದರೆ ಎಲ್ಲ ಸಾಧನೆಗಳಲ್ಲಿ ಯೋಗ ವಿದ್ಯೆಯು ಬಹಳ ಕಠಿಣ। ಹೆಳವನು ಹಿಮಾಲಯ ಪರ್ವತವನ್ನು ಏರಬಲ್ಲನೇ ? ಸಮುದ್ರದಲ್ಲಿಯ ಚಿಪ್ಪಿನ ಹುಳವು ಮೇರು ಪರ್ವತವನ್ನು ದಾಟಬಹುದೇ ? ಬ್ರಹ್ಮಚರ್ಯವನ್ನು ಪಾಲಿಸಿ ನಿರಂತರ ಕಠೋರ ಪರಿಶ್ರಮವನ್ನು ಮಾಡಿದರೆ ಹತ್ತಿಪ್ಪತ್ತು ಆಸನಗಳನ್ನು ಹಾಕಬಹುದು। ಈಗ ಯಾವ ಪ್ರಶ್ನೆಯನ್ನು ಕೇಳದೆ ಮನೆಗೆ ತಿರುಗಿ ಹೋಗು। ಇದು ತೆಗೆದುಕೊ ನನ್ನ ಪ್ರಸಾದ। ಹೀಗೆ ನುಡಿದು ಮಹಾರಾಜರು ಒಂದು ಕೆಂಪು ಕಲ್ಲನ್ನು ಎಬ್ಬಿಸಿ ಕೊಟ್ಟರು। ಕಲ್ಲನ್ನು ಕೊಟ್ಟು ಮಹಾರಾಜರು ಅದೃಶ್ಯರಾದರು। ಅವರು ನಂತರ ನಾಸಿಕದ ಗಂಗಾ ತೀರದಲ್ಲಿ ಭೆಟ್ಟಿಯಾದರು। ನಿಮೋಣಕರನು ಅವರನ್ನು ನಾಸಿಕದಲ್ಲಿ ನೋಡಿದೊಡನೆ ಓಡಿ ಹೋಗಿ ಅವರ ಚರಣಗಳಲ್ಲಿ ಬಿದ್ದನು। ಅವನು ಪ್ರಶ್ನಿಸಿದನು, ಸ್ವಾಮಿ, ನನ್ನ ಮೇಲೆ ಏಕೆ ಕೋಪಿಸಿದಿರಿ ? ನನಗೆ ತಮ್ಮ ಹೆಸರು ಹಾಗೂ ವಿಳಾಸವನ್ನು ಕೊಡದೆ ಏಕೆ ಹೋದಿರಿ ? ಅವನಿಗೆ ತಮ್ಮ ವಿಶಾಲ

ನೇತ್ರಗಳಿಂದ ನೋಡಿ ಮಹಾರಾಜರು ನುಡಿದರು, ಆ ದಿನ ಕೆಂಪು ಬಣ್ಣದ ಕಲ್ಲನ್ನು ಕೊಟ್ಟು ನಾನು ನನ್ನ ಹೆಸರನ್ನು ತಿಳಿಸಿದ್ದೆ । ನರ್ಮದೆಯ ಗಣಪತಿಯ ಬಣ್ಣ ಕೆಂಪು । ಆದರೆ ನೀನು ಮೂಢ ಮತಿ, ಅದರ ಅರ್ಥವನ್ನು ತಿಳಿಯಲಿಲ್ಲ ನಾನು ಶೇಗಾಂವಿಯಲ್ಲಿರುವೆನು ಮತ್ತು ನನ್ನ ಹೆಸರು ಗಜಾನನ । ನನ್ನ ಜೊತೆಗೆ ಧುಮಾಳರ ಸದನಕ್ಕೆ ನಡೆ । ಅಲ್ಲಿ ಮತ್ತೇ ಭೆಟ್ಟಿಯಾಗುವೆನು । ಹೀಗೆ ನುಡಿದು ಮಹಾರಾಜರು ಗುಪ್ತರಾದರು । ನಿಮೋಣಕರನು ಅವರನ್ನು ದಾರಿಯಲ್ಲಿ ಹುಡುಕ ತೊಡಗಿದನು । ದಣಿದು ಅವನು ಧುಮಾಳರ ಸದನದಲ್ಲಿ ಬಂದರೆ ಅವನ ಮುಂದೆ ಮಹಾರಾಜರು ಕುಳಿತಿದ್ದರು । ಅದಕ್ಕಾಗಿ ಅವನು ಮಹಾರಾಜರಿಗೆ ಸಾಷ್ಟಾಂಗ ನಮಸ್ಕಾರ ಮಾಡಿ ನಂತರ ಅವನು ಧುಮಾಳರಿಗೆ ನಡೆದ ಘಟನೆಯನ್ನು ಹೇಳಿದನು । ಆ ಮಾತುಗಳನ್ನು ಕೇಳಿ ಧುಮಾಳರು ಆನಂದಿತರಾಗಿ ಒಮ್ಮೆಲೆ ನುಡಿದರು, ಯೋಗಿರಾಜರಿಗೆ ಏನು ಕೊರತೆ । ಅವರಾದರೆ ಎಲ್ಲ ಶಕ್ತಿಗಳ ಗಣಿಯಿದ್ದಂತೆ । ಅವರಿಗೆ ಸಾರ್ವಭೌಮ ಪದದಿಂದಲೂ ಕಾರ್ಯವಿಲ್ಲ । ನಿಮಗೆ ಅವರಿಂದ ದೊರೆತ ಕೆಂಪು ಕಲ್ಲನ್ನು ಸರಿಯಾಗಿಟ್ಟು ನಿರ್ಮಲ ಅಂತಃಕರಣದಿಂದ ನಿರಂತರ ಪೂಜೆ ಮಾಡಿರಿ । ಆ ಕಲ್ಲಿನ ಮುಂದೆಯೇ ಶ್ರದ್ಧೆಯಿಂದ ಯೋಗಾಭ್ಯಾಸ ಮಾಡಿರಿ, ನಿಮಗೆ ಸಫಲತೆಯು ದೊರಕುವದು । ಈ ಮಾತು ಮುಂದೆ ಹೋಗಿ ಸತ್ಯವಾಯಿತು । ಶ್ರೀ ಗಜಾನನ ಮಹಾರಾಜರ ಕೃಪೆಯಿಂದ ನಿಮೋಣಕರರಿಗೆ ಯೋಗವಿದ್ಯೆಯ ಕೆಲವು ರಹಸ್ಯಗಳು ಅವಗತವಾದವು । ತುಕಾರಾಮ ಕೊಕಾಟೆ ಎಂಬ ಸಜ್ಜನನು ಶೇಗಾಂವಿಯಲ್ಲಿರುತ್ತಿದ್ದನು । ಅವನ ಸಂತತಿಯು ಬದುಕುತ್ತಿರಲಿಲ್ಲ । ಆದ್ದರಿಂದ ಅವನು ಮಹಾರಾಜರಿಗೆ ಹೇಳಿದನು, ನನ್ನ ಸಂತತಿಗೆ ದೀರ್ಘಾಯುಷ್ಯವು ದೊರಕಿದರೆ, ಒಬ್ಬ ಪುತ್ರನನ್ನು ಮಹಾರಾಜರ ಸೇವೆಯಲ್ಲಿ ಅರ್ಪಿಸುವೆನು । ಕಾಲಕ್ಕೆ ಅನುಸಾರವಾಗಿ ಮಹಾರಾಜರು ಅವನ ಇಚ್ಛೆಯನ್ನು ಪೂರ್ಣಗೊಳಿಸಿದರು । ಆದರೆ ಪುತ್ರನ ಮೋಹದಿಂದ, ಮೂರು ಮಕ್ಕಳಾದರೂ ತುಕಾರಾಮನಿಗೆ ತಮ್ಮ ವಚನದ ನೆನಪುಳಿಯಲಿಲ್ಲ । ಒಂದು ದಿನ ಅವನ ಹಿರಿಯ ಮಗ ನಾರಾಯಣನು ಬೇನೆಯಿಂದ ನರಳತೊಡಗಿದನು । ಅನೇಕ ಪ್ರಕಾರದ ಉಪಾಯಗಳನ್ನು ಮಾಡಿದರೂ ರೋಗವು ಕಡಿಮೆಯಾಗಲಿಲ್ಲ ಅವನ ನಾಡಿ ಸಿಗದಂತಾಗಿ, ಕಣ್ಣುಗಳು ಬೆಳ್ಳಗಾಗಿ, ಅವನು ಕೊನೆಯುಸಿರನ್ನೆಳೆಯ ತೊಡಗಿದನು । ತಮ್ಮ ಮಗನ ಸ್ಥಿತಿಯನ್ನು ನೋಡಿ ಅವನಿಗೆ ತನ್ನ ಹರಕೆಯು ನೆನಪಾಯಿತು । ಮತ್ತು ತುಕಾರಾಮನು ಒಳ್ಳೆಯ ಮನಸ್ಸಿನಿಂದ ನುಡಿದನು, ಹೇ ಗುರುರಾಜ, ಈ ಪುತ್ರನು ಬದುಕಿದರೆ ಅವನನ್ನು ನಿಮ್ಮ ಸೇವೆಯಲ್ಲಿಡುವೆನು । ಈ ರೀತಿ ತುಕಾರಾಮನು





ವಚನ ಬದ್ಧನಾದ ಕೂಡಲೇ, ಮಹಾರಾಜರ ಕೃಪೆಯಿಂದ ಆ ಬಾಲಕನು ವಾಸಿಯಾದನು । ವ್ಯಾಧಿ ಮುಕ್ತನಾದ ಮೇಲೆ ನಾರಾಯಣನಿಗೆ ಮಹಾರಾಜರ ಚರಣಗಳಲ್ಲಿ ಅರ್ಪಿಸಿ, ತುಕಾರಾಮನು ತಮ್ಮ ವಚನದಿಂದ ಮುಕ್ತನಾದನು । ಆ ನಾರಾಯಣ ಕೊನೆಯವರೆಗೆ ಮಹಾರಾಜರ ಸೇವೆ ಮಾಡುತ್ತ ಮಠದಲ್ಲಿದ್ದನು । ಮಹಾರಾಜರಲ್ಲಿ ಹರಕೆ ಹೊತ್ತಿದರೆ ಅದನ್ನು ಯಾವ ಸ್ಥಿತಿಯಲ್ಲಿಯೂ ಭಕ್ತರಿಗೆ ಪೂರ್ಣಗೊಳಿಸಬೇಕಾಗುತ್ತದೆ । ನಾರಾಯಣನ ಈ ಉದಾಹರಣೆಯಿಂದ ಸಂತರಿಗೆ ಕೊಟ್ಟ ವಚನವನ್ನು ಎಲ್ಲರಿಗೆ ಪೂರ್ಣಗೊಳಿಸಬೇಕಾಗುತ್ತದೆ ಎಂಬುದು ತಿಳಿಯುವದು । ಏಕೆಂದರೆ ಸಂತ ಚರಿತ್ರೆಯು ಸಾಮಾನ್ಯ ಕಥೆ ಕಾದಂಬರಿಯಲ್ಲ । ನಂತರ ಪಾಂಡುರಂಗನ ದರ್ಶನಕ್ಕಾಗಿ ಆಷಾಢ ಮಾಸದಲ್ಲಿ ಮಹಾರಾಜರು ಹರಿ ಪಾಟೀಲನ ಜೊತೆಗೆ ಪಂಢರಪುರಕ್ಕೆ ಬಂದರು । ವಿಠ್ಠಲನು ಎಲ್ಲ ಸಂತರ ಪ್ರಿಯ ಧ್ಯೇಯ, ಭಕ್ತರ ಕಲ್ಪತರು, ಮತ್ತು ಕಮಲನಾಭ ಸರ್ವೇಶ್ವರ । ಅವನು ಜಗದಾಧಾರ, ಜಗತ್ಪತಿ । ಯಾರ ವರ್ಣನೆಯನ್ನು ವೇದಗಳು ಮಾಡಿವೆ, ಇಂತಹ ರುಕ್ಮಿಣಿ ಪತಿ, ದಯಾಘನ ಸಂತರ ಹೃದಯದಲ್ಲಿ ಮನೆ ಮಾಡಿರುವನು । ಪಂಢರಪುರರಕ್ಕೆ ಬಂದ ಮೇಲೆ ಗಜಾನನ ಮಹಾರಾಜರು ಚಂದ್ರಭಾಗಾ ನದಿಯಲ್ಲಿಸ್ನಾನ ಮಾಡಿ ನುಡಿದರು, ಹೇ ಪಂಢರಿನಾಥ, ಹೇ ಅಚಿಂತ್ಯ, ಅದ್ವಯ, ಸಮರ್ಥ, ಹೇ ಭಕ್ತ ಪರೇಷ, ರುಕ್ಮಿಣಿ ಕಾಂತ । ತಮ್ಮ ಆಜ್ಞೆಯಿಂದ ಇಲ್ಲಿಯವರೆಗೆ ಭೂಮಿಯ ಮೇಲೆ ಭ್ರಮಣ ಮಾಡಿ, ಯಾವ ಭಾವಿಕ ಭಕ್ತರಿದ್ದರೋ ಅವರ ಇಚ್ಛೆಯನ್ನು ಪೂಣ ಮಾಡಿರುವೆನು । ಹೇ ಪುಂಡಲೀಕ ವಿಠ್ಠಲ, ನಿಮಗೆ ತಿಳಿದಿರುವಂತೆ ನನ್ನ ಅವತಾರ ಕಾರ್ಯವು ಈಗ ಪೂರ್ಣವಾಗಿದೆ । ಈಗ ನನಗೆ ನಿಜಧಾಮಕ್ಕೆ ಹೋಗುವ ಆಜ್ಞೆಕೊಡಿರಿ । ಹೇ ಭಗವಂತ, ನಾನು ಭಾದ್ರಪದ ತಿಂಗಳಿನಲ್ಲಿ ಚಿರಂತನನಾಗಿರಲು, ವೈಕುಂಠದಲ್ಲಿ ತಮ್ಮ ಚರಣ ಸನ್ನಿಧಿಯಲ್ಲಿ ಬರಲು ಇಚ್ಛಿಸಿದ್ದೇನೆ । ನಂತರ ಮಹಾರಾಜರು ಕೈಮುಗಿದರು । ಕಣ್ಣೀರು ಸುರಿಯ ಹತ್ತಿದವು ಏಕೆಂದರೆ ಅವರಂತಹ ಸಿದ್ಧಯೋಗಿಗೆ ಕೂಡಾ ಹರಿಯ ವಿರಹ ಸಹಿಸಲಾಗಲಿಲ್ಲ । ಮಹಾರಾಜರ ನೇತ್ರಗಳಲ್ಲಿ ನೀರು ನೋಡಿ, ಹರಿ ಪಾಟೀಲನು ಮಹಾರಾಜರಿಗೆ ಕೇಳಿದನು, ಹೇ ಸದ್ಗುರುನಾಥ, ತಮ್ಮ ನೇತ್ರಗಳಲ್ಲಿ ಅಶ್ರುಗಳು ಈಗ ಯಾವ ಕಾರಣದಿಂದ ಬಂದಿವೆ ? ತಮ್ಮ ಸೇವೆ ಮಾಡುವದರಲ್ಲಿ ನನ್ನಿಂದ ತಪ್ಪಾಗಿದೆಯೇ ? ಆದ್ದರಿಂದ ತಾವು ನಿರಾಶ ಆಗಿರುವಿರಿ? ಇದರ ಕಾರಣವೇನು ? ಆಗ ಮಹಾರಾಜರು ಹರಿ ಪಾಟೀಲನ ಕೈಯನ್ನು ಕೈಯಲ್ಲಿ ಹಿಡಿದು ನುಡಿದರು, ಇದರ ಕಾರಣವನ್ನು ನೀನು ತಿಳಿಯಲಾರೆ, ಏಕೆಂದರೆ ಅದು ಗಹನ ವಿಷಯ । ಆದ್ದರಿಂದ ಅದನ್ನು ತಿಳಿದುಕೊಳ್ಳುವ

ಪ್ರಯತ್ನ ಮಾಡಬೇಡ । ನಾನು ಈಗ ನಮ್ಮ ಸಹವಾಸವು ಕೆಲವು ದಿನಗಳವರೆಗೆ ಮಾತ್ರ ಎಂಬುದನ್ನು ಹೇಳುವೆನು। ನಡೆಯಿರಿ, ನಾವು ಈಗ ಶೇಗಾಂವಿಗೆ ಮರಳಿಹೋಗೋಣ । ನಿನ್ನ ಪಾಟೀಲ ವಂಶಕ್ಕೆ ಯಾವ ಕೊರತೆ ಉಂಟಾಗದು । ಶೇಗಾಂವಿಗೆ ಬಂದು ಯಾತ್ರೆಯ ಮುಕ್ತಾಯ ಮಾಡಿದರು । ಮಹಾರಾಜರು ಕೊಟ್ಟ ಸಂಕೇತದಿಂದ ಹರಿ ಪಾಟೀಲನು ಬಹಳ ಚಿಂತಾಕ್ರಾಂತನಾದನು । ಅವನು ತಮ್ಮ ಸಂಗಡಿಗರಿಗೆ ಮತ್ತು ಇತರ ಭಕ್ತರಿಗೆ, ಪಂಢರಪುರದಲ್ಲಿ ಮಹಾರಾಜರು ತಾವು ಕೆಲವು ದಿನಗಳ ಅತಿಥಿಯೆಂದು ಹೇಳಿರುವದಾಗಿ ತಿಳಿಸಿದನು । ನಂತರ ಶ್ರಾವಣ ತಿಂಗಳು ಕಳೆಯಿತು । ಮಹಾರಾಜರ ದೇಹವು ಶಕ್ತಿಗುಂದ ತೊಡಗಿತು । ಭಾದ್ರಪದ ತಿಂಗಳು ಆರಂಭವಾಯಿತು । ಮುಂದೆ ಏನಾಯಿತು ಎಂಬುದನ್ನು ಕೇಳಿರಿ । ಗಣೇಶ ಚತುರ್ಥಿ ದಿನ ಮಠದಲ್ಲಿ ಕಲೆಯಿರಿ ಎಂದು ಹೇಳಿದರು । ಎಲ್ಲ ಭಕ್ತರು ನೆರೆದ ಮೇಲೆ ಮಹಾರಾಜರು ನುಡಿದರು, ಗಣೇಶ ಪುರಾಣದಲ್ಲಿ ಬರೆದಿದೆ, ಪಾರ್ಥಿವ ಗಣೇಶ ಮೂರ್ತಿಯನ್ನು ಮಾಡಿ ಪೂಜೆ ಮಾಡಬೇಕು । ನೈವೇದ್ಯ ಆದಿಗಳನ್ನು ಅರ್ಪಿಸಿ ನಂತರ ಎರಡನೆಯ ದಿನ ವಿಸರ್ಜನೆ ಮಾಡಬೇಕು । ಇಂದು ಆ ದಿನವಿದೆ। ಈಗ ಈ ಪಾರ್ಥಿವ ಶರೀರವನ್ನು ತಾವೆಲ್ಲರೂ ಸೇರಿ ಉತ್ಸಾಹದಿಂದ ವಿಸರ್ಜನೆ ಮಾಡಿರಿ। ಯಾರೂ ಶೋಕ ವ್ಯಕ್ತಪಡಿಸಬಾರದು । ಈ ಸ್ಥಾನದಲ್ಲಿ ನಮ್ಮ ಅಸ್ತಿತ್ವವು ನಿಮ್ಮ ರಕ್ಷಣೆಗಾಗಿ ಯಾವಾಗಲೂ ಇರುವದು । ಭಕ್ತರನ್ನು ಮರೆಯುವ ಪ್ರಶ್ನೆಯು ಇಲ್ಲ। ಜೀರ್ಣವಾದ ಅರಿವೆಯನ್ನು ಬದಲಿಸಿದಂತೆ ಈ ಶರೀರವನ್ನು ಕೂಡಾ ಬದಲಿಸಬೇಕಾಗುವದು । ಇದನ್ನು ಭಗವಂತ, ಶ್ರೀ ಕೃಷ್ಣನು ಅರ್ಜುನನಿಗೆ ಹೇಳಿರುವನು । ಎಲ್ಲ ಬ್ರಹ್ಮತತ್ವವನ್ನು ತಿಳಿದವರು ಇದೇ ರೀತಿ ಮಾಡಿರುವರು । ಸರಿಯಾದ ಸಮಯಕ್ಕೆ ಶರೀರ ವಸ್ತ್ರವನ್ನು ಬಿಟ್ಟರು । ಈ ಮಾತುಗಳನ್ನು ಎಂದಿಗೂ ಮರೆಯಬಾರದು । ಚತುರ್ಥಿಯ ದಿನವನ್ನು ಮಹಾರಾಜರು ಬಲು ಆನಂದದಿಂದ ಕಳೆದರು । ಬಾಳಾಭಾವುನ ಕೈ ಹಿಡಿದು ಅವನನ್ನು ತಮ್ಮ ಆಸನದ ಮೇಲೆ ಕೂಡ್ರಿಸಿ ನಾನು ಹೋಗಿರುವೆನು ಎಂದು ಎಂದಿಗೂ ತಿಳಿಯಬೇಡಿರಿ ಎಂದರು। ಭಕ್ತಿಯಲ್ಲಿ ಎಂದಿಗೂ ಅಂತರವಿಡಬೇಡಿರಿ । ನನಗೆ ಮರೆಯದಿರಿ, ಏಕೆಂದರೆ ನಾನು ಇಲ್ಲಿಯೇ ಇರುವೆನು । ಈ ರೀತಿ ಉಪದೇಶ ಮಾಡಿ, ಮಹಾರಾಜರು ತಮ್ಮ ಉಸಿರನ್ನು ಯೋಗ ಸಾಮರ್ಥ್ಯದಿಂದ ತಡೆದು, ತಮ್ಮ ಪ್ರಾಣಜ್ಯೋತಿಯನ್ನು ನೆತ್ತಿಯಲ್ಲಿಟ್ಟರು । ಶಕೆ ಹದಿನೆಂಟು ನೂರಾ ಮೂವತ್ತೆರಡರ ಸಾಧಾರಣ ನಾಮ ಸಂವತ್ಸರದ
ಶುದ್ಧ ಭಾದ್ರಪದ ಪಂಚಮಿಯ ಗುರುವಾರ ದಿನ ಒಂದು ಪ್ರಹರಕ್ಕೆ ಪ್ರಾಣವನ್ನು ತಡೆದ ಸಮಯಕ್ಕೆ ಅವರ || 202 ||





ಮುಖದಿಂದ ಶಬ್ದ ಹೊರಟಿತು – "ಜಯ ಗಜಾನನ !" ಮಹಾರಾಜರು ಶೇಗಾಂವಿಯಲ್ಲಿ ಸಚ್ಚಿದಾನಂದದಿಂದ ಲೀನರಾದರು । ಶರೀರವು ನಿಶ್ಚಲವಾಯಿತು । ಸಮಾಧಿಸ್ಥರಾದ ಮಹಾರಾಜರನ್ನು ನೋಡಿ ಉಪಸ್ಥಿತ ಜನರು ದುಃಖಿತರಾದರು । ಈ ಸುದ್ದಿಯು ವಾಯುವೇಗದಿಂದ ಹಬ್ಬಿತು । ನರ ನಾರಿಯರು ಎದೆ ಬಡೆದು ರೋಧಿಸತೊಡಗಿದರು । ಸಾಕ್ಷಾತ್ಕಾರಿ, ನಮ್ಮ ನಡುವೆ ವಾಸಿಸುವ ಶ್ರೀ ಹರಿಯು, ನಮ್ಮ ರಕ್ಷಕನು, ಇಂದು ನಮ್ಮಿಂದ ಬೀಳ್ಕೊಟ್ಟಿರುವನು । ನಮ್ಮ ಆಶ್ರಯ ಸ್ಥಾನ, ನಮ್ಮ ಸೌಖ್ಯ–ನಿಧಾನ, ನಮ್ಮಿಂದ ದೂರವಾದನು । ಕಾಲ ಯಾರ ಆಸರೇ ? ನಮ್ಮಿಂದ ದೂರ ಹೋಗುವ ಗಡಿಬಡಿ ಏಕೆ ? ಮಾರ್ತಂಡ ಪಾಟೀಲ, ಹರಿ ಪಾಟೀಲ, ವಿಷ್ಣುಸಾ, ಬಂಕಟಲಾಲ, ತಾರಾಚಂದ, ಮತ್ತು ಶ್ರೀಪತರಾವ ಕುಲಕರ್ಣಿ ಮೊದಲಾದವರು ಮಠದಲ್ಲಿ ನೆರೆದರು । ಅವರು ವಿಚಾರ ಮಾಡಿದರು, ಇಂದು ಪಂಚಮಿಯ ದಿನ, ಇಂದು ಮಹಾರಾಜರಿಗೆ ಸಮಾಧಿ ಕೊಡಲಾರದೇ ಇದ್ದರೆ, ಹತ್ತಿರದ ಭಕ್ತರು ಅವರ ದರ್ಶನವನ್ನು ಪಡೆಯಬಹುದು । ನಂತರ ಈ ಮೂರ್ತಿಯು ಕಾಣಲಾರದು । ಆದ್ದರಿಂದ ಸಂಜೆಯವರೆಗೆ ಭಕ್ತರ ದಾರಿ ಕಾಯೋಣ । ಯಾರ ಭಾಗ್ಯದಲ್ಲಿ ಮಹಾರಾಜರ ದರ್ಶನ ಬರೆದಿರುವದೋ, ಅವರು ಪಡೆಯುವರು । ಲಗುಬಗೆಯಿಂದ ಎಲ್ಲರಿಗೆ ಸಂದೇಶವನ್ನು ಕಳುಹಿಸಿದರು । ಡೋಣಗಾಂವಿಯ ವಿದ್ವಾನ್ ಗೋವಿಂದ ಶಾಸ್ತ್ರಿ ಉಪಸ್ಥಿತರಿಗೆ ಮಹಾರಾಜರು ಅವಶ್ಯವಾಗಿ ತಮ್ಮ ಪ್ರೀಯ ಭಕ್ತರಿಗೆ ದರ್ಶನ ಕೊಡುವರು । ಅಲ್ಲಿಯವರೆಗೆ ಅವರ ತಮ್ಮ ಪ್ರಾಣವನ್ನು ಮಸ್ತಕದಲ್ಲಿಡುವರು । ಅದರ ಪ್ರಚೀತಿಯನ್ನು ನೋಡುವ ಇಚ್ಛೆಯಿದ್ದರೆ, ಸ್ವಲ್ಪ ಬೆಣ್ಣೆಯನ್ನು ತನ್ನಿರಿ । ಬೆಣ್ಣೆಯನ್ನು ಮಸ್ತಕದ ಮೇಲೆ ಇಟ್ಟೊಡನೆ ಅದು ಕರಗ ತೊಡಗಿತು । ಇದನ್ನು ನೋಡಿ ಎಲ್ಲರು ಚಕಿತರಾದರು । ಯೋಗಶಾಸ್ತ್ರದ ಶಕ್ತಿಯನ್ನು ಭಕ್ತರು ತಮ್ಮ ಕಣ್ಣಿನಿಂದ ನೋಡಿದರು । ಗೋವಿಂದ ಶಾಸ್ತ್ರ ಮುಂದೆ ನುಡಿದರು, ಇಂದು ಒಂದು ದಿನದ ಮಾತಿಲ್ಲ । ಸಿದ್ಧಯೋಗಿ ಈ ಅವಸ್ಥೆಯಲ್ಲಿ ಒಂದು ವರ್ಷ ಇರುವರು । ಆದರೆ ನಾವು ಬಹಳ ಸಮಯ ತಡೆಯುವದು ಒಳ್ಳೆಯದಲ್ಲ । ಮಹಾರಾಜರು ಪ್ರಿಯ ಭಕ್ತರಿಗೆ ದರ್ಶನ ಕೊಟ್ಟ ನಂತರ ಅವರಿಗೆ ಸಮಾಧಿ ಕೊಡೋಣ । ಈ ವಿಷಯದಲ್ಲಿ ಎಲ್ಲರು ಒಂದಾದರು । ಭಕ್ತರು ಭಜನೆಯನ್ನು ಆರಂಭಿಸಿದರು । ಸಾವಿರಾರು ಕೈತಾಳಗಳಿಂದ ಭಜನೆ
ನಡೆಯಿತು । ದೂರ ದೂರದ ಭಕ್ತರ ಕನಸಿನಲ್ಲಿ ಹೋಗಿ ಮಹಾರಾಜರು ತಮ್ಮ ಸಮಾಧಿಯ ಸಮಾಚಾರವನ್ನು || 203 ||
ಹೇಳಿದರು । ಋಷಿ ಪಂಚಮಿಯ ದಿನ ಮಹಾರಾಜರ ದರ್ಶನ ಪಡೆಯಲು ಭಕ್ತರ ಗದ್ದಲವೇರಿತು । ಹೂ ಎಲೆಗಳಿಂದ

ರಥವನ್ನು ಸಡಗರಿಸಲಾಯಿತು। ಭಜನಿ ಮಂಡಲಿಗಳು ನೆರೆದವು। ಶಗಣೆಯಿಂದ ಸಾರಿಸಿ ರಸ್ತೆಗಳನ್ನು ಸುಶೋಭಿಸಿದ್ದರು। ರಂಗೋಲಿಗಳನ್ನು ತಗೆದಿದ್ದರು । ಶೇಗಾಂವಿಯಲ್ಲಿ ಆ ದಿನ ದೀಪೋತ್ಸವದಂತೆ ವಾಯುಮಂಡಲವಾಯಿತು । ಮಹಾರಾಜರ ದೇಹವನ್ನು ರಥದಲ್ಲಿ ಇಟ್ಟು ಮೆರವಣಿಗೆಯಿಂದ ಊರಿನ ಒಂದು ಪ್ರದಕ್ಷಿಣೆ ಮಾಡಲಾಯಿತು। ಅದರ ವರ್ಣನೆ ಅಸದಳ । ಸಂಪೂರ್ಣ ರಾತ್ರಿ ಜನರು ಮಹಾರಾಜರ ಮೇಲೆ ಅಬೀರು ಗುಲಾಲ ಹಾಗೂ ಹೂಗಳ ಮಳೆ ಸುರಿಸುತ್ತಿದ್ದರು । ಭಜನಿ ಮಂಡಲಿಗಳ ಭಜನೆಯಿಂದ ಆಕಾಶವು ತುಂಬಿ ಹೋಗಿತ್ತು। ತುಲಸಿ, ಹೂವು, ಅಬೀರ, ಗುಲಾಲಗಳು ಮಹಾರಾಜರ ಮೇಲೆ ಸುರಿಯುತ್ತಿದ್ದವು। ಹೂಮಾಲೆಗಳಿಂದ ಮಹಾರಾಜರ ಶರೀರವು ಮುಚ್ಚಿಹೋಗಿ, ಅವರು ಹೂಮಾಲೆಯ ಕಂಬಳಿಯನ್ನು ಹೊದ್ದುಕೊಂಡತ್ತಿತ್ತು । ಪೇಢೆ, ಬರ್ಫಿ ಪ್ರಸಾದಗಳನ್ನು ಮುಕ್ತವಾಗಿ ಹಂಚುತ್ತಿದ್ದರು । ಕೆಲವು ಭಕ್ತರು ಮಹಾರಾಜರ ರಥದ ಮೇಲೆ ರೂಪಾಯಿಗಳ ಮಳೆ ಸುರಿಸಿದರು । ಈ ರೀತಿ ಇಡಿ ರಾತ್ರಿ ಮೆರವಣಿಗೆ ತಗೆದು ಎರಡನೆಯ ದಿನ ಮುಂಜಾನೆ ಸಮಾಧಿ ಸ್ಥಾನದ ಮೇಲೆ ಮಹಾರಾಜರ ದೇಹವನ್ನು ಇಡಲಾಯಿತು । ರುದ್ರಾಭಿಷೇಕವಾಯಿತು । ವಿಧಿಯಂತೆ ಪಂಚೋಪಚಾರದಿಂದ ಪೂಜೆ ಮಾಡಲಾಯಿತು । ನಂತರ ಆರತಿ ಮಾಡಿದರು। ಜನರು ಗಜಾನನ ನಾಮದ ಜಯಘೋಷ ಮಾಡಿದರು। ಮತ್ತು ಆಶೀರ್ವಾದ ಬೇಡುತ್ತ ಜನರು ನುಡಿದರು ಜಯ ಜಯ ಸ್ವಾಮಿ ಗಜಾನನ ! ಹೇ ನರದೇಹಧಾರಿ ನಾರಾಯಣ ! ಅವಿನಾಶರೂಪ ಆನಂದಘನ ! ಪರಾತ್ಪರ ಜಗತ್ಪತೆ ! ಎಂದು ಪ್ರಾರ್ಥಿಸಿದರು। ಶಾಸ್ತ್ರಗಳ ಅನುಸಾರವಾಗಿ ಮಹಾರಾಜರನ್ನು ಉತ್ತರಾಭಿಮುಖರಾಗಿ ಸಮಾಧಿ ಸ್ಥಾನದಲ್ಲಿಟ್ಟರು। ಮಹಾರಾಜರ ಕೊನೆಯ ದರ್ಶನ ಪಡೆಯುವಾಗ ಎಲ್ಲ ಭಕ್ತರು ನುಡಿದರು, 'ಜಯ ಸ್ವಾಮಿ ಗಜಾನನ' ! ಉಪ್ಪು, ಅಬೀರ ಆದಿಗಳಿಂದ ಸಮಾಧಿಯ ಸ್ಥಳವನ್ನು ತುಂಬಿ, ದುಃಖಿತ ಅಂತಃಕರಣದಿಂದ ಸಮಾಧಿಯ ಮೇಲೆ ಶಿಲೆಯನ್ನು ಇಟ್ಟು ದ್ವಾರವನ್ನು ಮುಚ್ಚಿದರು। ಹತ್ತು ದಿನಗಳವರೆಗೆ ಸಮಾರಾಧನೆ ನಡೆಯಿತು। ಎಷ್ಟು ಜನರು ಪ್ರಸಾದ ಸೇವಿಸಿದರು ಎಂಬುದನ್ನು ಹೇಳುವದು ಅಸಾಧ್ಯ। ನಿಜವಾಗಿ ಸಂತರ ಅಧಿಕಾರವು ಶ್ರೇಷ್ಠ। ಅವರ ಮುಂದೆ ಸಾರ್ವಭೌಮ ಅರಸನ ದೊಡ್ಡಿಸ್ತನವು ಎಳ್ಳಷ್ಟು। ಸ್ವಸ್ತಿ ಶ್ರೀ ದಾಸಗಣು ವಿರಚಿತ ಈ ಶ್ರೀ ಗಜಾನನ ವಿಜಯವೆಂಬ ಗ್ರಂಥವು ಹರಿಯ ಭಕ್ತಿಯನ್ನು ಮಾಡುವಂತೆ ಭಾವಿಕರಿಗೆ ಮಾರ್ಗ ತೋರಿಸಲು ಸಮರ್ಥವಾಗಿರಲಿ ।

॥ ಶುಭಂ ಭವತು ॥ ಶ್ರೀ ಹರಿಹರಾರ್ಪಣಮಸ್ತು ॥





ಶ್ರೀ ಗಜಾನನ ಮಹಾರಾಜರು ಲಕ್ಷ್ಮಣ ಹರಿ ಜಾಂಜಳ ಇವರಿಗೆ ಬೋರಿ ಬಂದರದಲ್ಲಿ ಪರಮಹಂಸರ ರೂಪದಲ್ಲಿ ಭೆಟ್ಟಿ ದಯಪಾಲಿಸಿದರು.

## ॥ ಅಧ್ಯಾಯ ೨೦ ॥

ಶ್ರೀ ಗಣೇಶಾಯನಮಃ । ಜಯ ಜಯಾಜಿ ರುಕ್ಮಿಣಿವರ । ಹೇ ಚಂದ್ರಭಾಗಾ ತಟ ವಿಹಾರಿ । ಹೇ ದೇವರೇ, ಈ ದಾಸಗಣುವಿನ ಮಸ್ತಕದ ಮೇಲೆ ವರದಹಸ್ತವನ್ನು ಇಡಿರಿ । ತಾವು ಎಲ್ಲ ರಾಜರು ಮಹಾರಾಜರು । ಸಂಪೂರ್ಣ ವಿಶ್ವದ ಸಂಚಾಲಕರು ತಾವು ತಮ್ಮ ಕೃಪಾದೃಷ್ಟಿಯಿಂದ ನನ್ನ ಪಾಪವನ್ನು ಸುಟ್ಟು ಹಾಕಿ । ಅದರಿಂದ ನನ್ನ ಮನಸ್ಸು ತಮ್ಮ ಭಜನೆಯನ್ನು ಹಾಡಲು ಪ್ರಮುದಿತ ಹಾಗೂ ಉಲ್ಲಸಿತವಾಗುವದು । ಹಾಗೆ ಆಗದಿದ್ದರೆ ತಮ್ಮ ಮೇಲೆ ಸುಮ್ಮನೆ ಆರೋಪ ಮಾಡಬಹುದು । ದೊಡ್ಡವರು ತಮ್ಮ ಶ್ರೇಷ್ಠತೆಗೆ ಕಲಂಕ ತರಬಾರದು । ಆದ್ದರಿಂದ ಹೇ ಶ್ಯಾಮ ಸುಂದರ, ರುಕ್ಮಿಣಿಯ ಪ್ರಿಯ ಪತಿ ಪಾಂಡುರಂಗ, ವಿಶಾಲ ಅಂತಃಕರಣದಿಂದ ನನ್ನ ಇಚ್ಛೆಯನ್ನು ಪೂರ್ಣಗೊಳಿಸಿರಿ । ಇರಲಿ ! ಗಜಾನನ ಮಹಾರಾಜರು ಸಮಾಧಿಸ್ಥರಾದ ಮೇಲೆ ಜನರು ಈಗ ಶೇಗಾಂವಿಯಲ್ಲಿ ಏನೂ ಉಳಿದಿಲ್ಲ ಎಂದು ನಂಬತೊಡಗಿದರು । ಶೇಗಾಂವಿಯ ಜ್ಞಾನದೀಪವು ನಂದಿ ಹೋದ ಮೇಲೆ ಈಗ ಅಲ್ಲಿ ಕೇವಲ ಮಣ್ಣು ಉಳಿದಿದೆ । ಸಾಗರದ ನೀರು ಇಂಗಿ ಹೋದರೆ ಮತ್ತು ಹೂ ಗಿಡವು ಹೂವು ಕೊಡದಿದ್ದರೆ ಅವರ ಕಡೆಗೆ ಯಾರು ನೋಡುವರು? ಈಗ ಶೇಗಾಂವಿಗೆ ಯಾರು ಏಕೆ ಬರುವರು ? ಮಂದಿರದ ದೇವರಿಲ್ಲದಿದ್ದರೆ, ಮಂದಿರದ ಬಾಗಿಲಿಗೆ ಹೂವೇರಿಸಿ ಏನೂ ಪ್ರಯೋಜನ । ಕೆಲವು ಜನರ ಮನಸ್ಸಿನಲ್ಲಿ ಈ ರೀತಿ ಸಂದೇಹವು ಉಂಟಾಯಿತು । ಆದರೆ ಅವರ ಈ ಸಂದೇಹವು ನಿರರ್ಥಕವಾಯಿತು । ಏಕೆಂದರೆ ಮಹಾರಾಜರ ದಿವ್ಯ ಜ್ಯೋತಿಯು ಅದೃಶ್ಯರೂಪದಿಂದ ಅಲ್ಲಿ ಚಿರಂತನವಾಗಿ ಉಳಿಯಿತು । ಇಂದ್ರಾಯಣಿ ನಂದಿಯ ತೀರದಲ್ಲಿ ಜ್ಞಾನೇಶ್ವರ ಮಹಾರಾಜರು ಸಜೀವ ಸಮಾಧಿ ಹೊಂದಿದ್ದರು । ಯಾರ ಅಂತಃಕರಣವು ಭಕ್ತಿಪೂರ್ಣವೋ ಅವರಿಗೆ ಅಲ್ಲಿ ದರ್ಶನವಾಗುತ್ತಿತ್ತು । ಅದೇ ರೀತಿ ಶೇಗಾಂವಿಯಲ್ಲಿ ಯಾರಿಗೆ ಮಹಾರಾಜರ ಮೇಲೆ ದೃಢ ಭಕ್ತಿ ಇದೆ, ಅವರಿಗೆ ಶ್ರೀ ಗಜಾನನ ಸ್ವಾಮಿ ಸಮರ್ಥರು ಇಂದಿಗೂ ದರ್ಶನ ಕೊಡುವರು। ಈ ವಿಷಯದಲ್ಲಿ ನಡೆದ ಸತ್ಯ ಘಟನೆಯನ್ನು ನಿಮಗೆ ಹೇಳುವೆನು । ಗಣಪತ ಕೋಠಾಡೆ ಎಂಬ ಭಾವಿಕ ಗೃಹಸ್ಥನಿದ್ದನು। ಅವನು ರ್‍ಯಾಲಿ ಕಂಪನಿಯ ಶೇಗಾಂವಿಯ ಏಜಂಟನಾಗಿದ್ದನು । ಮಹಾರಾಜರ ಸಮಾಧಿಯ ದರ್ಶನವನ್ನು ಅವನು ಪ್ರತಿದಿನ ಪಡೆಯುತ್ತಿದ್ದನು । ಅವನು ಪ್ರತಿದಿನ ಸಂಜೆ ಮಠದಲ್ಲಿ ಬಂದು ಶ್ರದ್ಧೆಯಿಂದ ಸಮಾಧಿಯ ದರ್ಶನ ಪಡೆದು

ಮಹಾರಾಜರ ಮಹಿಮೆಯ ಗೀತೆಗಳನ್ನು ಹಾಡಿ ಆನಂದದಿಂದ ಸಮಯವನ್ನು ಕಳೆಯುತ್ತಿದ್ದನು । ಗಣಪತನ ಮನಸ್ಸಿನಲ್ಲಿ ಮರುದಿನ ವಿಜಯದಶಮಿ ಇರುವದರಿಂದ ಸಮಾಧಿಯ ಅಭಿಷೇಕ ಮಾಡಿ ಯಥಾಶಕ್ತಿ ಬ್ರಾಹ್ಮಣರಿಗೆ ಭೋಜನ ಮಾಡಿಸುವ ವಿಚಾರ ಬಂದಿತು । ಅವನು ಅಭಿಷೇಕದ ವ್ಯವಸ್ಥೆ ಮಾಡಿದನು । ಭೋಜನ ತಯಾರಿಸಲು ಅವಶ್ಯಕ ವಸ್ತುಗಳನ್ನು ಮಠಕ್ಕೆ ಕಳುಹಿಸಿದನು । ಆಗ ಅವನ ಹೆಂಡತಿಯು ಪ್ರಾಣನಾಥ ಇದೇನು ನಡೆದಿದೆ ? ಹಣ ಖರ್ಚು ಮಾಡುವಾಗ ತಾವು ಹಿಂದೆ – ಮುಂದೆ ನೋಡುವದಿಲ್ಲ। ನಾಳೆ ವಿಯಾದಶಮಿ, ವರ್ಷದ ಮುಖ್ಯ ಹಬ್ಬ। ತಮ್ಮ ಮಕ್ಕಳಿಗೆ ಅರಿವೆಗಳನ್ನು ತನ್ನಿರಿ । ಈ ಅಭಿಷೇಕ, ಬ್ರಾಹ್ಮಣ ಭೋಜನ ಆದಿಗಳಲ್ಲಿ ಹಣ ಖರ್ಚು ಮಾಡುವದು ಸರಿಯಲ್ಲ। ದೇವರ ಕೃಪೆಯಿಂದ ನಮಗೆ ನಾಲ್ಕು ಗಂಡು ಮಕ್ಕಳಾಗಿವೆ। ನನ್ನ ದೇಹದ ಮೇಲೆ ಒಂದು ಒಡೆದ ಸೌಭಾಗ್ಯ ಮಣಿಯೂ ಇಲ್ಲ, ನಾನು ಅಲಂಕಾರ ರಹಿತ ಸೌಭಾಗ್ಯವತಿ ಲಂಕೆಯ ಸೀತೆಯಂತಿರುವೆನು । ಇದೇನು ಪ್ರಾಪಂಚಿಕರ ರೀತಿ ? ಗೃಹಸ್ಥನಿಗೆ ಧನ ಸಂಚಯ ಮಾಡುವದು ಅವಶ್ಯಕ । ತನ್ನ ಹೆಂಡತಿಯ ಉಪದೇಶವು ಗಣಪತರಾವನಿಗೆ ಸರಿಯೆನಿಸಲಿಲ್ಲ। ಏಕೆಂದರೆ ಅವನು ಬಪ್ರಪಂಚಕ್ಕಿಂತ ಪರಮಾರ್ಥವನ್ನು ಮಿಗಿಲೆಂದು ತಿಳಿದಿದ್ದನು। ಈ ಸಮಯದಲ್ಲಿ ಅವನ ಹೆಂಡತಿಗೆ ಕನಸು ಬಿದ್ದಿತು । ಕನಸಿನಲ್ಲಿ ಮಹಾರಾಜರು ತನ್ನ ಪತಿಯನ್ನು ಕಾಡಿಸಬೇಡ ಎಂದು ನುಡಿದರು । ಅವನು ಏನು ಮಾಡವನೋ ಅದು ಸರಿ । ನಾಶವಂತ ವಸ್ತುಗಳ ಬಗ್ಗೆ ಇಚ್ಛೆ ಇಡುವದು ಸರಿಯಲ್ಲ । ನೆರಳನ್ನು ಹಿಡಿಯುವ ಪ್ರಯತ್ನವು ವ್ಯರ್ಥವಾಗಿದೆ । ಈ ಭೂಮಿಯ ಮೇಲೆ ನಿರ್ಮಿತವಾದ ಎಲ್ಲ ವಸ್ತುಗಳನ್ನು ಮನುಷ್ಯನಿಗೆ ಇಲ್ಲಿಯೇ ಬಿಟ್ಟು ಹೋಗಬೇಕಾಗುತ್ತದೆ। ತಮ್ಮ ಜೊತೆಗೆ ಕೇವಲ ಪಾಪ ಪುಣ್ಯಗಳು ಬರುತ್ತವೆ। ಅಭಿಷೇಕ ಬ್ರಾಹ್ಮಣ ಭೋಜನ ಆದಿಗಳು ಪಾರಮಾರ್ಥಿಕ ಪುಣ್ಯವನ್ನು ಕೊಡುತ್ತವೆ। ಇದಕ್ಕಾಗಿ ಮಾಡುವ ಖರ್ಚು ವ್ಯರ್ಥವಾಗುವದಿಲ್ಲ ಹೊಲದಲ್ಲಿ ಬಿತ್ತಿದ ಬೀಜದಂತಿದೆ । ಆದ್ದರಿಂದ ಹೇ ಮಗಳೆ, ಪತಿಯ ಮಾರ್ಗದಲ್ಲಿ ಅಡೆತಡೆ ಮಾಡಬೇಡ । ಬೆಳಗಾದೊಡನೆ ಅವಳು ತನ್ನ ಪತಿಗೆ ನಡೆದ ಘಟನೆಯನ್ನು ಹೇಳಿದಳು । ಇದನ್ನು ಕೇಳಿ ಗಣಪತರಾವನಿಗೆ ಆನಂದವಾಯಿತು। ಮತ್ತು ಅವನು ಪತ್ನಿಗೆ ನೋಡದೆ ಅಲ್ಲವೇ ಮಹಾರಾಜರ ಚಮತ್ಕಾರ। ಸಂತತಿ, ಧನ–ಕನಕಗಳ ವಿಚಾರವನ್ನು ಮನಸ್ಸಿನಿಂದ ತಗೆದು ಬಿಡು । ಇವುಗಳ ಮಾಲಿಕರು ಮಹಾರಾಜರು । ಇರಲಿ ! ಗಣಪತರಾವನು ಮಹಾರಾಜರ ಪೂಜೆಯನ್ನು ಭಕ್ತಿಭಾವದಿಂದ ಮಾಡಿದನು । ಇದಕ್ಕಾಗಿ ಬಹಳ ಹಣವು ವ್ಯಯವಾಯಿತು ।





ಮಹಾರಾಜರ ಪ್ರತಿ ಗಣಪತರಾವನ ಮನಸ್ಸಿನಲ್ಲಿ ಮೊದಲಿನಿಂದಲೇ ಶುದ್ಧ ಭಕ್ತಿಭಾವವಿತ್ತು । ಲಕ್ಷ್ಮಣ ಹರಿ ಜಾಂಬಳನಿಗೆ ಕೂಡಾ ಇದೇ ರೀತಿಯ ಅನುಭವ ಬಂದಿತ್ತು। ಬೋರಿಬಂದರ ಸ್ಟೇಶನಿಗೆ ಮೇಲೆ ಇದೇ ರೀತಿಯ ಘಟನೆ ನಡೆಯಿತು। ಈ ಲಕ್ಷ್ಮಣ, ಮಹಾರಾಜರ ಭಕ್ತನಿದ್ದನು। ಅವನು ಕೆಲಸದಿಂದ ಮುಂಬಯಿಗೆ ಹೋಗಿದ್ದನು। ಮನಸ್ಸು ವಿಪತ್ತಿಗಳಿಂದ ಬಹಳ ದುಃಖಿತವಾಗಿತ್ತು। ಕೆಲಸವಾದ ನಂತರ ಮನೆಗೆ ಹಿಂದಿರುಗಿ ಬರುವಾಗ ಬೋರಿಬಂದರ ಸ್ಟೇಶನಿನ ಮೇಲೆ ಅವನಿಗೆ ಪರಮಹಂಸರು ಭೆಟ್ಟಿಯಾದರು। ಅವರು ಅಜಾನುಬಾಹು ಇದ್ದರು। ಎತ್ತರ ಶರೀರ, ನಾಸಾಗ್ರ ಮೇಲೆ ಸ್ಥಿರವಾದ ದೃಷ್ಟಿ ಮತ್ತು ಮುಖದಿಂದ ಓಂಕಾರದ ಜಪಮಾಡುತ್ತಿದ್ದರು । ಅವರು ಲಕ್ಷ್ಮಣನಿಗೆ ನುಡಿದರು, ತಾವು ಗಜಾನನ ಮಹಾರಾಜರ ಶಿಷ್ಯರಲ್ಲವೇ ! ಹೀಗಿರುವಾಗ ತಾವು ದುಃಖಿತ ಏಕೆ ಕಂಡು ಬರುತ್ತೀರಿ, ಎಂಬುದು ತಿಳಿಯುವದಿಲ್ಲ । ಅಮರಾವತಿಯಲ್ಲಿ ನೀನು ಪುಣ್ಯತಿಥಿಯ ಸಮಾರಂಭಕ್ಕಾಗಿ ಮನೆಯಲ್ಲಿ ನಾಲ್ಕು ನೂರು ಜನರ ಭೋಜನದ ವ್ಯವಸ್ಥೆಯನ್ನು ಮಾಡಿದ್ದಿ। ಆಗ ಗೋಪಾಳರಾವ ಪೇಠಕರ ಮತ್ತು ಬಾಪಟ ಮಾಸ್ತರರ ಮೇಲೆ ಬಂದು ಪ್ರಸಂಗದ ಬಗ್ಗೆ ವಿಚಾರ ಮಾಡು । ಬಾಪಟರಿಗೆ ಪುತ್ರ ಶೋಕವಿದ್ದರೂ, ಅವರು ತಮ್ಮ ಮನೆಗೆ ಪ್ರಸಾದಕ್ಕಾಗಿ ಬಂದಿದ್ದರು, ಎಂಬುದು ನಿಜವಲ್ಲವೇ ? ಪೇಠಕರರ ಬ್ರಾಹ್ಮಣ ಭೋಜನ ಏಕೆ ನೆರವೇರಲಿಲ್ಲ ? ಮಹಾರಾಜರು ಅವರಿಬ್ಬರ ಸ್ವಪ್ನದಲ್ಲಿ ಹೋಗಿದ್ದರು । ಮಹಾರಾಜರು ಅವರಿಬ್ಬರಿಗೆ ಉಪದೇಶ ಮಾಡಿದ್ದರಿಂದ ಅವರು ಪ್ರಸಾದ ಸೇವಿಸಲು ಬಂದಿದ್ದರು। ಈ ಮಾತನ್ನು ಇಷ್ಟು ಬೇಗ ಹೇಗೆ ಮರೆತೆ ? ಈ ಮಾತುಗಳನ್ನು ಕೇಳಿ ಲಕ್ಷ್ಮಣನ ಮನಸ್ಸಿನಲ್ಲಿ ಈ ಸತ್ಯ ಮಾತುಗಳನ್ನು ಅರಿತವರು ಯಾರಿರುವರು ? ಎಂಬ ಶಂಕೆ ಉಂಟಾಯಿತು । ಅವನಿಗೆ ಏನೂ ತಿಳಿಯಲಿಲ್ಲ। ಲಕ್ಷ್ಮಣನು ವಿನೀತನಾಗಿ ಆ ಸಂನ್ಯಾಸಿಗೆ ತಲೆ ಬಗ್ಗಿಸಿ ವಂದಿಸಿದನು, ಮತ್ತು ಏನು ಆಶ್ಚರ್ಯ, ಅವನ ಕಣ್ಣುಗಳ ಮುಂದೆ ಅವರು ಅದೃಶ್ಯರಾದರು । ಆ ಪ್ರಸಂಗದ ನಂತರ ಲಕ್ಷ್ಮಣನು ಮನೆಯಲ್ಲಿ ಎಲ್ಲರ ಜೊತೆಗೆ ಆನಂದದಿಂದ ಮನೆಯಲ್ಲಿರತೊಡಗಿದನು । ಅಂದಿನಿಂದ ಪ್ರತಿವರ್ಷ ನಿಯಮಿತ ರೂಪದಿಂದ ಪುಣ್ಯತಿಥಿಯನ್ನು ಆಯೋಜಿಸ ತೊಡಗಿದನು। ಅವಧೂತ ಜಯರಾಮ ಖೇಡಕರನಿಗೆ ರಾಹಿತಗಾಂವಿಯಲ್ಲಿ ಮಹಾರಾಜರು ಸಂನ್ಯಾಸಿಯ ರೂಪದಲ್ಲಿ ದರ್ಶನಕೊಟ್ಟರು। ಮಾಧವ ಮಾರ್ತಂಡ ಜೋಶಿಯು ಮಹಾರಾಜರ ಭಕ್ತರಲ್ಲಿ ಒಬ್ಬನು। ಅವನು ಕಳಂಬ ಕಸೂರ ಗ್ರಾಮದಲ್ಲಿ ಭೂಮಾಪನೆ ಮಾಡಲು ಒಮ್ಮೆ ಬಂದಿದ್ದನು। ಅವನು ಸರಕಾರಿ ರೆವ್ವೆನ್ಯೂ ಆಫೀಸರನಾಗಿದ್ದನು। ಅವನಿಗೆ

ಗಜಾನನ ಮಹಾರಾಜರ ಮೇಲೆ ಶ್ರದ್ಧೆಯಿತ್ತು। ದಿನದ ಕೆಲಸ ಮುಗಿಯಿತು। ಸಂಜೆಗೆ ಅವನಿಗೆ ಶೇಗಾಂವಿಗೆ ಹೋಗುವ ಇಚ್ಛೆಯಾಯಿತು। ಅಂದು ಗುರುವಾರವಿತ್ತು। ಈಗ ಮಹಾರಾಜರ ದರ್ಶನ ಪಡೆಯಲು ಶೇಗಾಂವಿಗೆ ಹೊರಡೋಣ। ಈ ರೀತಿ ವಿಚಾರ ಮಾಡಿ ಅವನು ತಮ್ಮ ಚಪರಾಸಿಗೆ ಎತ್ತಿನಗಾಡಿ ತಯಾರು ಮಾಡುವಂತೆ ಆಜ್ಞಾಪಿಸಿದರು। ಈಗ ನಾವು ಶೇಗಾಂವಿಗೆ ಹೋಗಿ, ರಾತ್ರಿ ಅಲ್ಲಿಯೇ ತಂಗಿ, ಮರುದಿನ ತಿರುಗಿ ಬರೋಣ। ಆಗ ಚಪರಾಸಿ ಕುತಬುದ್ದೀನ ನುಡಿದನು, ಸಾಹೇಬರೇ ಮೇಲೆ ಆಕಾಶವು ಮೋಡಗಳಿಂದ ತುಂಬಿದೆ। ನದಿಯಲ್ಲಿ ನೀರು ಸ್ವಲ್ಪವಿದ್ದು, ಅದು ಕೊಳಚೆಯಾಗಿದೆ। ಆದ್ದರಿಂದ ಮತ್ತೊಮ್ಮೆ ವಿಚಾರ ಮಾಡಿರಿ। ಜೋಶಿ ನುಡಿದರು, ನಾವು ಹಾಗೆಯೇ ನದಿಯನ್ನು ದಾಟೋಣ। ಹೋಗು ಮತ್ತು ಎತ್ತಿನ ಬಂಡಿಯನ್ನು ತಯಾರು ಮಾಡು। ಸುಮ್ಮನೆ ನೆಪ ಹೇಳಬೇಡ। ನೌಕರನಾಗಿದ್ದರಿಂದ ಅಸಹಾಯನಾದನು। ಎತ್ತಿನ ಬಂಡಿಯನ್ನು ತಂದು ನಿಲ್ಲಿಸಿದನು। ಜೋಶಿ ಒಳಗೆ ಕುಳಿತರು ಮತ್ತು ಶೇಗಾಂವಿಗೆ ಹೊರಟರು। ಎತ್ತಿನ ಬಂಡಿಯನ್ನು ಮನ ನದಿಯಲ್ಲಿ ಹಾಕಿದರು। ಆದ್ದರಿಂದ ಒಮ್ಮೆಲೆ ನದಿಯಲ್ಲಿಯ ನೀರು ಏರತೊಡಗಿತು ಮತ್ತು ಮರುದಂಡೆಯನ್ನು ತಲುಪುವದು ಅಶಕ್ಯವಾಯಿತು। ಜೋರಾಗಿ ಗಾಳಿ ಬೀಸ ತೊಡಗಿತು ಮತ್ತು ಆಕಾಶದಲ್ಲಿ ಮಿಂಚತೊಡಗಿತು। ಒಮ್ಮೆಲೆ ಮನ ನದಿಯಲ್ಲಿ ನೆರೆ ಬಂದಿತು। ಭಯಂಕರ ಮಳೆ ಸುರಿಯ ತೊಡಗಿತು, ಮತ್ತು ಗಾಳಿಯಿಂದ ಒಕ್ಕಲಿಗರ ಮನೆಯ ಹಂಚು ಹಾರಿ ಹೋದವು। ಈ ಉತ್ಪಾತವನ್ನು ನೋಡಿ ಚಪರಾಸಿ ಕುತುಬುದ್ದಿನ ನುಡಿದನು, ಸಾಹೇಬರೇ ಈಗ ನಮಗೆ ಇಲ್ಲಿಯೇ ಜಲಸಮಾಧಿಯಾಗುವದು। ಮಾಧವ ಜೋಶಿ ಮನದಲ್ಲಿಯೇ ಹೆದರಿದನು। ಮಹಾರಾಜರಲ್ಲಿ ಪ್ರಾರ್ಥಿಸತೊಡಗಿದನು, ಹೇ ಸಮರ್ಥ ಗಜಾನನ, ನನ್ನನ್ನು ಸಂಕಟದಿಂದ ರಕ್ಷಿಸಿರಿ। ತಮ್ಮ ಹೊರತು ನಮ್ಮನ್ನು ಕಾಪಾಡುವವರು ಯಾರಿಲ್ಲ। ಪುರಾಣದಲ್ಲಿ ಕಥೆಯಿದೆ, ಸಂತರು ಸಹಾಯ ಮಾಡಿ ಸಾಗರದಲ್ಲಿ ಮುಳುಗುತ್ತಿರುವ ನೌಕೆಯನ್ನು ಉಳಿಸಿರುವದಾಗಿ। ತಾವು ಅಸಾಮಾನ್ಯ ಸಂತರು। ಹೇ ಬ್ರಹ್ಮವೇತ್ತಾ, ಕರುಣಾಘನ, ಈ ಸಂಕಟದಿಂದ ನಮ್ಮನ್ನು ರಕ್ಷಿಸಿರಿ। ಅಷ್ಟರಲ್ಲಿ ಎತ್ತಿನ ಬಂಡಿಯಲ್ಲಿ ನೀರು ಹೊಕ್ಕಿತು। ಆದ್ದರಿಂದ ಎತ್ತುಗಳು ಬೆದರಿದವು। ಜೋಶಿ ಮುಂದೆ ಸರಿದು ಚಪರಾಸಿಗೆ ಹಿಂದಕ್ಕೆ ಸರಿಯುವಂತೆ ಹೇಳಿದರು। ಮನದಲ್ಲಿ ದೇವರ ಭಜನೆಯ ಮಾಡು। ಚಿಂತಿಸಬೇಡ। ದೇವರು ನಮ್ಮ ರಕ್ಷಣೆ ಮಾಡುವರು। ಜೋಶಿ ಸಮರ್ಥರಲ್ಲಿ ॥ 208 ॥
ಪ್ರಾರ್ಥಿಸಿದರು, ಹೇ ಸ್ವಾಮಿ, ತಮ್ಮ ಸತ್ತೆಯು ಅಗಾಧ। ನಮ್ಮನ್ನು ರಕ್ಷಿಸಿರಿ ಅಥವಾ ಮುಳಗಿಸಿರಿ। ತಮಗೆ



ಸರಿಯೆನಿಸಿದಂತೆ ಮಾಡಿರಿ। ಹೀಗೆ ನುಡಿದು ಅವರು ಎತ್ತಿನ ಹಗ್ಗವನ್ನು ಬಿಟ್ಟರು। ಇಬ್ಬರೂ ಕಣ್ಣು ಮುಚ್ಚಿಕೊಂಡರು। ಮುಂದಿನ ಪ್ರಸಂಗ ಹೀಗೆ ನಡೆಯಿತು। ಈ ಆಪತ್ತಿಗಳಲ್ಲಿಯೂ ಪ್ರಭು ಕೃಪೆಯಿಂದ ಎತ್ತಿನಗಾಡಿ ಮರುದಂಡೆಗೆ ತಲುಪಿ ಶೇಗಾಂವಿಯ ಹಾದಿಯ ಮೇಲೆ ನಿಂತಿತು। ಕಣ್ಣು ತೆರೆದು ಇಬ್ಬರೂ ನೋಡಿದರೆ, ನಡೆದ ಚಮತ್ಕಾರದಿಂದ ಅವರು ಬೆರಗಾದರು। ಸಂತರ ಈ ನಿರಂಕುಶ ಅಧಿಕಾರವನ್ನು ನೋಡಿರಿ। ನೆರೆಯಲ್ಲಿಯೂ ಅವರು ತಮ್ಮ ಭಕ್ತರನ್ನು ರಕ್ಷಿಸಿದರು। ಜೋಶಿಜಿ ನಂತರ ರಾತ್ರಿಯಲ್ಲಿ ಶೇಗಾಂವಿಗೆ ಬಂದರು। ಸಮಾಧಿಯ ದರ್ಶನ ಪಡೆದು, ನಂತರ ಪಲ್ಲಕ್ಕಿ ಸೇವೆಯಲ್ಲಿ ಭಾಗವಹಿಸಿದರು। ಮರುದಿನ ಜೋಶಿ ದಾನ ಧರ್ಮ ಮಾಡಿದರು। ಮರಳಿ ಹೋಗುವಾಗ ಬಾಳಾಭಾವುನ ಬಳಿ ಬ್ರಾಹ್ಮಣ ಭೋಜನಕ್ಕಾಗಿ ಹಣವನ್ನು ಕೊಟ್ಟರು। ಬಾಳಾಭಾವುಗೆ ನಡೆದ ಘಟನೆಯನ್ನು ತಿಳಿಸಿ ನಂತರ ನಾನು ಸಂಕಟದಿಂದ ಬದುಕಿರುವೆನು, ಆದ್ದರಿಂದ ನನ್ನ ಪರವಾಗಿ ಬ್ರಾಹ್ಮಣ ಭೋಜನ ಮಾಡಿಸುವಂತೆ ಬಿನ್ನವಿಸಿದರು ಏಕೆಂದರೆ ಅವರಿಗೆ ರಜೆಯಿರಲಿಲ್ಲ। ಕೆಲಸದ ಮೇಲೆ ಹೋಗುವದು ಅವಶ್ಯಕವಿತ್ತು। ಹೀಗೆ ಹೇಳಿ, ಜೋಶಿ ಸಮಾಧಿಯ ದರ್ಶನ ಪಡೆದು ಹೊರಟರು। ಹಿಂಗಣೆಯ ಯಾದವ ಗಣೇಶ ಸುಭೇದಾರ ಎಂಬ ಸಜ್ಜನನು ವರ್ಹಾಡದಲ್ಲಿ ಹತ್ತಿಯ ವ್ಯಾಪಾರ ಮಾಡುತ್ತಿದ್ದನು। ಒಂದು ವರ್ಷ ಅವನಿಗೆ ಹತ್ತು ಸಾವಿರ ರೂಪಾಯಿಗಳ ಹಾನಿಯಾಯಿತು। ಆದ್ದರಿಂದ ಅವನು ಚಿಂತಿತ ಹಾಗೂ ದುಃಖಿಯಾದನು। ಈಗ ವ್ಯಾಪಾರವನ್ನು ನಡೆಸುವದು ಹೇಗೆ ? ವ್ಯಾಪಾರದಲ್ಲಿ ಲಾಭವಾಗುವ ಇಚ್ಛೆಯನ್ನು, ಆಶೆಯನ್ನು ಬಿಟ್ಟನು। ಆದರೂ ಪ್ರಯತ್ನ ಮಾಡುತ್ತಿದ್ದನು। ಸುಮ್ಮನೆ ಕೂಡದೇ ವ್ಯಾಪಾರವು ಅವನಿಂದ ನಡೆದಿತ್ತು। ಯಾವದೋ ಕೆಲಸದಿಂದ ಒಮ್ಮೆ ಅವನು ವರ್ಧಾಕ್ಕೆ ಹೋಗಿ, ವಿನಾಯಕ ಅಸಿರಕರರ ಮನೆಯಲ್ಲಿ ತಂಗಿದನು। ಅಷ್ಟರಲ್ಲಿ ಒಬ್ಬ ಭಿಕ್ಷುಕನು ಮನೆ ಮುಂದೆ ಬಂದನು। ಅವನ ವೇಷವು ಬಡವನಂತಿತ್ತು। ಕೈಯಲ್ಲಿ ಉದ್ದನೆಯ ಕೋಲು ಮತ್ತು ತಲೆಯ ಮೇಲೆ ಒಂದು ಹೊಲಸು ಟೊಪ್ಪಿಗೆ ಇತ್ತು। ವೃದ್ಧನಾಗಿದ್ದರಿಂದ ಶರೀರವು ಕಂಪಿಸುತ್ತಿತ್ತು। ಅವನನ್ನು ನೋಡಿದೊಡನೆ ಅಸಿರಿಕರ ಕ್ರೋಧದಿಂದ ನುಡಿದರು, ನೀನು ಹಿಂದೆ ಹೋಗು, ಅಲ್ಲಿ ಭಿಕ್ಷೆ ಸಿಗುವದು। ಮುಂದೆ ಬರಬೇಡ। ಆದರೂ ಅವನು ಮಾಲಿಕನ ಮಾತು ಕೇಳದೇ ಒಳಗೆ ಬಂದು ಯಾದವರ ಬಳಿ ಕುಳಿತನು। ಮತ್ತು ನುಡಿದನು, ನನಗೆ ಭಿಕ್ಷೆ ಕೊಡು। ಹೀಗೆ ನುಡಿದು ಭಿಕ್ಷಾಪಾತ್ರವನ್ನು ಯಾದವಜಿಯ ಮುಂದೆ ॥ 209 ॥
ಹಿಡಿದನು। ಯಾದವನು ಮನದಲ್ಲೆ ವಿಚಾರ ಮಾಡಿದನು, ನಾಚಿಕೆಗೇಡಿ ಭಿಕ್ಷುಕನು ಅನುಮತಿ ಕೊಡದಿದ್ದರೂ ಒಳಗೆ

ನುಗ್ಗಿ ನನ್ನ ಹತ್ತಿರ ಕುಳಿತರುವನು । ಅವನು ಸರಿಯಾಗಿ ನೋಡಿದರೆ ಶೇಗಾಂವಿಯ ರಾಜಯೋಗಿ ಗಜಾನನ
ಮಹಾರಾಜರಂತೆ ಕಾಣಿಸತೊಡಗಿದನು। ನೇರ ದೃಷ್ಟಿ ಮಾತಿನ ಶೈಲಿ, ಮಹಾರಾಜರಂತೆ ಸ್ಪಷ್ಟ, ಆದರೆ ಭೇದವು ಇಷ್ಟೇ
ಇತ್ತು, ಅವರನ್ನು ಗಜಾನನ ಮಹಾರಾಜರೆಂದು ನಂಬಿದರೆ, ಅವರಿಲ್ಲದೇ ಅನೇಕ ದಿನಗಳಾದವು । ಅವರು ಈಗ
ಗೋಚರರಾಗುವದು ಹೇಗೆ ಸಾಧ್ಯ ? ಏನೇ ಆಗಲಿ, ಗಜಾನನ ಮಹಾರಾಜರೆಂದು ತಿಳಿದು ಈ ಭಿಕ್ಷುಕನಿಗೆ ಸ್ವಲ್ಪ ಹಣ
ಕೊಟ್ಟರೆ ತಪ್ಪೇನು ? ಭಿಕಾರಿಯು ಕೊಟ್ಟ ಹಣವನ್ನು ಕೈಯಲ್ಲಿ ಹಿಡಿದು, ನುಡಿದನು, ಗಜಾನನ ಮಹಾರಾಜರಿಗಾಗಿ
ಇನ್ನೂ ಸ್ವಲ್ಪ ಕೊಡು, ಅಂದರೆ ಬೆಲ್ಲದ ಪ್ರಸಾದವನ್ನು ಹಂಚಬಹುದು। ಬೆಲ್ಲದ ಪ್ರಸಾದವನ್ನು ಹಂಚುವ ಮಾತನ್ನು
ಎಷ್ಟು ಸಲ ಕೊಟ್ಟಿರುವಿ। ಆದರೆ ಇಂದು ನಿನಗೆ ಬೇರೆ ಹಾದಿಯಿಲ್ಲ। ನಿನಗೆ ವ್ಯಾಪಾರಲ್ಲಿ ಹತ್ತು ಸಾವಿರ ರೂಪಾಯಿಗಳ
ಹಾನಿಯಾಗಿದೆ। ಆ ಬಗ್ಗೆ ವಿಚಾರ ಮಾಡಿ ಇನ್ನೂ ಸ್ವಲ್ಪ ರೂಪಾಯಿ ಕೊಡು। ಜೇಬಿನಿಂದ ಪಾಕೀಟನ್ನು ತಗೆ। ತಿರುಕನು
ಮುಂದೆ ಹೇಳಿದನು, ನೀನು ಕೊಟ್ಟಿರುವದರಲ್ಲಿ ನನಗೆ ಸಮಾಧಾನವಿಲ್ಲ। ಇನ್ನೂ ಸ್ವಲ್ಪ ರೂಪಾಯಿ ಕೊಡು।
ಯಾದವಜಿ ರೂಪಾಯಿ ತಗೆದು ಭಿಕಾರಿಯ ಕೈಯಲ್ಲಿಟ್ಟರು। ಅಷ್ಟರಲ್ಲಿ ವಿನಾಯಕ ಆಸಿರಕರ ಯಾವುದೋ ಕೆಲಸದಿಂದ
ಒಳಗೆ ಹೋದರು । ಆಸಿರಕರರ ಆ ಕೋಣೆಯಲ್ಲಿ ಯಾದವರಾವನು ಒಬ್ಬನೇ ಉಳಿದನು । ಆಗ ಆ ಭಿಕ್ಷುಕನು
ನುಡಿದನು, ಗಜಾನನ ಬಗ್ಗೆ ನಿಮಗೇಕೆ ಶಂಕೆ ? ಅರಿವೆ ಕಳಚಿ ನನ್ನ ಮುಂದೆ ನಿಲ್ಲು। ನಿನ್ನ ಶರೀರದ ಮೇಲಿಂದ ನನ್ನ
ದೃಷ್ಟಿ ಹೋದರೆ, ನಿನ್ನ ವ್ಯಾಧಿಯು ದೂರವಾಗುವದು । ನೀನು ನನಗೆ ಪುತ್ರನ ಸಮಾನ ನನ್ನ ಮುಂದೆ ನಾಚುವ
ಕಾರಣವಿಲ್ಲ। ಹೀಗೆ ನುಡಿದು ಅವನು ಬೆನ್ನಿನ ಮೇಲಿಂದ ಕೈ ಸವರಿದನು। ನಂತರ ಸಂಪೂರ್ಣ ಶರೀರದ ಮೇಲಿಂದ
ಮಮತೆಯಿಂದ ಕೈಯಾಡಿಸಿದರು । ಅಷ್ಟರಲ್ಲಿ ಆಸಿರಕರ ಹೊರಗೆ ಬಂದರು । ಆ ಭಿಕಾರಿಯು ಯಾದವರಾವನ
ಕೈಯಿಂದ ಹಣ ಪಡೆದು ಹೊರಟು ಹೋದನು । ಅವನನ್ನು ಹುಡುಕುವ ಪ್ರಯತ್ನಗಳಿಗೆ ಯಶಸ್ಸು ದೊರಕಲಿಲ್ಲ।
ವಿಚಾರ ಮಾಡಿದ ನಂತರ ಅವನು ನುಡಿದನು, ಅವರು ಮಹಾರಾಜರಿದ್ದರೆ ನನಗೆ ನಿಶ್ಚಿತವಾಗಿ ವ್ಯಾಪಾರದಲ್ಲಿ
ಲಾಭವಾಗುವದು। ಅಷ್ಟರಲ್ಲಿ ಹತ್ತಿಯ ಎಲ್ಲ ಎತ್ತಿನಗಾಡಿಗಳು ಮಾರಾಟವಾಗಿ, ಬಹಳ ಒಳ್ಳೆಯ ಬೆಲೆ ದೊರಕಿತ್ತು।
ಆದ್ದರಿಂದ ಯಾದವರಾವನಿಗೆ ಬಹಳ ಆನಂದವಾಯಿತು। ಅವನು ಈಗ ಮಹಾರಾಜರೇ ನನಗೆ ತಿರುಕನ ರೂಪದಲ್ಲಿ ॥ 210 ॥
ಬಂದು ನನ್ನ ಇಚ್ಛೆ ಪೂರ್ಣಗೊಳಿಸಿರುವದಾಗಿ ನಂಬಿದನು। ಭಕ್ತರು ದಢವಾಗಿ ನಂಬಿದರೆ, ಮಹಾರಾಜರು ಭಕ್ತರ



ರಕ್ಷಣೆ ಮಾಡುವರು । ಖಾಮಗಾಂವಿಯಲ್ಲಿ ಡಾಕ್ಟರ ಭಾವು ರಾಜಾರಾಮ ಕವರನಿದ್ದನು । ಅವನಿಗೆ ತೆಲ್ಹಾರಿಗೆ
ಬದಲಿಯಾಯಿತು । ಆದ್ದರಿಂದ ಅವನು ಪರಿವಾರ ಸಹಿತ ಮಹಾರಾಜರ ದರ್ಶನಕ್ಕಾಗಿ ಖಾಮಗಾಂವಿಯಿಂದ
ಹೊರಟನು। ಸಂಜೆಯ ಸಮಯ ಅವರು ಶೇಗಾಂವಿಗೆ ತಲುಪಿದರು। ದರ್ಶನ ಪಡೆದು ಮುಂದೆ ಹೋಗುವವರಿದ್ದರು।
ಅಷ್ಟರಲ್ಲಿ ಮಠಾಧಿಪತಿ ಬಾಳಾಭಾವು ಪ್ರಾರ್ಥನೆ ಮಾಡಿ ಭಾವುಗೆ ಪ್ರಸಾದ ತೆಗೆದುಕೊಂಡು ಹೋಗುವಂತೆ ಹೇಳಿದನು।
ಇಂದಿನ ವರೆಗೆ ನೀವು ಪ್ರಸಾದ ಸೇವಿಸದೆ ಹೋಗಲಿಲ್ಲ। ಹೀಗಿರುವಾಗ ಇಂದು ಈ ರೀತಿ ವಿಚಾರವೇಕೆ ? ಮೇಲೆ
ವ್ಯತಿಪಾತವರುವದರಿಂದ, ಇದು ಅಶುಭ ಮೂಹೂರ್ತ। ಆದರೆ ಭಾವು ಇಂದು ಬಹಳ ಮಹತ್ವದ ಕೆಲಸವಿದೆ ಎಂದು
ಸಮರ್ಥಿಸಿದನು। ಇಂದು ರಾತ್ರಿ ಪ್ರಸಾದ ಸೇವಿಸಿ ನಾನು ಹೊರಡುತ್ತೇನೆ। ನನಗೆ ಇಲ್ಲಿ ತಂಗಲು ಆಗ್ರಹ ಮಾಡಬೇಡಿ।
ಊಟ ಮಾಡಿ ಡಾಕ್ಟರನು ತಮ್ಮ ಪರಿವಾರದ ಜೊತೆಗೆ ರಾತ್ರಿ ಎತ್ತಿನಗಾಡಿಯಿಂದ ಹೊರಟನು । ರಾತ್ರಿ ಕತ್ತಲೆ
ಭಯಂಕರವಿತ್ತು, ಅದು ತನ್ನ ಪತಿ ವಿಯೋಗದ ದುಃಖದಲ್ಲಿ ಇದ್ದಂತೆ ಅನಿಸುತ್ತಿತ್ತು। ಅಷ್ಟರಲ್ಲಿ ಚಮತ್ಕಾರವಾಯಿತು।
ಗಾಡಿಯವನು ತೆಲ್ಹಾರದ ದಾರಿಯನ್ನು ತಪ್ಪಿದನು । ಯಾರಿಗಾದರೂ ಸರಿಯಾದ ದಾರಿ ಕೇಳಬೇಕೆಂದರೆ ಯಾರೂ
ಕಂಡು ಬರುತ್ತಿರಲಿಲ್ಲ। ದಾರಿ ಸಣ್ಣದಾಗಿದ್ದು ಎರಡೂ ಬದಿಗೆ ಜಾಲಿಗಿಡಗಳಿದ್ದು ಮುಳ್ಳುಗಳು ಚುಚ್ಚುತ್ತಿದ್ದವು, ಮತ್ತು
ಒಂದು ಕೆರೆಯ ದಂಡೆಯ ಮೇಲೆ ಗಾಡಿ ನಿಂತಿತ್ತು। ಈ ಸ್ಥಿತಿಯಲ್ಲಿ ಗಾಡಿಯವನು ಸಾಹೇಬರ ನಾವು ದಾರಿ ತಪ್ಪಿರುವೆವು।
ಇದನ್ನು ಕೇಳಿ ಭಾವು ಕವರನು ಹೆದರಿದನು । ಅವನು ಕೆಳಗಿಳಿದು ನೋಡಿದರೆ ಮುಂದೆ ಚಿತ್ರ ವಿಚಿತ್ರ ದೃಶ್ಯಗಳು
ಕಂಡು ಬಂದವು। ಅವನು ಸಿಟ್ಟಾಗಿ, ಆ ಗಾಡಿಯವನಿಗೆ ಬೈದು, ನುಡಿದನು, ನೀನು ತೆಲ್ಹಾರೆ ಊರಿನವನೆಂದು ನಿನ್ನ
ಗಾಡಿಯನ್ನು ತೆಗೆದುಕೊಂಡರೆ, ನೀನು ನಮಗೆ ಈ ಸ್ಥಳಕ್ಕೆ ಬಂದು ನಿಲ್ಲಿಸಿರುವಿ। ಹೋಗುವಾಗ ನೀನು ಸೆರೆ ಕುಡಿದಿರುವಿ
ಏನು ? ಅದರಿಂದ ದಾರಿ ತಪ್ಪಿರುವಿ ಅಥವಾ ದಾರಿಯಲ್ಲಿ ನಿನಗೆ ನಿದ್ದೆ ಬಂದು ಎತ್ತುಗಳು ದಾರಿ ತಪ್ಪಿದವು। ತೆಲ್ಹಾರೆಯ
ರಸ್ತೆ ನನಗೆ ಗೊತ್ತಿದೆ। ಹೀಗಿರುವಾಗ ನಿನ್ನ ಗಾಡಿ ತಪ್ಪು ಹಾದಿ ಹೇಗೆ ಹಿಡಿಯಿತು ? ಭಾವುನ ಈ ಕಟುವಚನಗಳನ್ನು
ಕೇಳಿ ಗಾಡಿಯವನು ನಮ್ರತೆಯಿಂದ ನುಡಿದನು, ಸಾಹೇಬರ ನನಗೇಕೆ ಬೈಯುತ್ತಿರುವಿರಿ ? ನನ್ನಿಂದ ಯಾವ
ಅಪರಾಧವು ಆಗಿಲ್ಲ । ನಾನು ಯಾವಾಗಲೂ ತಲ್ಹಾರೆಗೆ ಗಾಡಿ ತೆಗೆದುಕೊಂಡು ಹೋಗುತ್ತೇನೆ । ನಾನು ಹಾದಿ ॥ 211 ॥
ಗೊತ್ತಿರುವದರಿಂದ ಯಾವದೇ ಸಮಯಕ್ಕೆ ಬಂದು ಹೋಗುತ್ತೇನೆ । ಎತ್ತುಗಳು ಕೂಡಾ ಎಡ–ಬಲಕ್ಕೆ ಹೊರಳಲಿಲ್ಲ

ಅವು ಸರಿಯಾಗಿ ಹೊರಟಿದ್ದವು। ಮುಂದೆ ಕೆರೆಯನ್ನು ಕಂಡು ಅವು ನಿಂತವು। ಈ ಹಾದಿ ತೆಲ್ಹಾರೆಗೆ ಹೊರಟಿಲ್ಲ। ಭಾವು ಕವರನ ಮನಸ್ಸಿನಲ್ಲಿ ಈ ಚಮತ್ಕಾರವನ್ನು ಮಹಾರಾಜರು ಮಾಡಿರಬಹುದು ಎಂದು ಸಂಶಯ ಬಂದಿತು। ಏಕೆಂದರೆ ನಾನು ಅವರ ಪ್ರಸಾದ ಸೇವಿಸದೆ ಹೊರಟಿರುವೆನು। ಬಾಳಾಭಾವುನ ವಿನಂತಿ ಒಪ್ಪದೆ ಹೊರಟಿರುವದರಿಂದ ನಾನು ದಾರಿ ತಪ್ಪಿರುವೆನು। ಈಗ ಸರಿ ರಸ್ತೆಯನ್ನು ಯಾರು ತೋರಿಸಬಲ್ಲರು ? ತಾವೇ ನನ್ನ ರಕ್ಷಕರು। ಈ ಭಯಂಕರ ಕಾಡಿನಲ್ಲಿ ನಮಗೆ ಯಾರು ರಕ್ಷಿಸುವರು ? ಎಂದು ಪ್ರಾರ್ಥಿಸತೊಡಗಿದರು। ಅಷ್ಟರಲ್ಲಿ ಕೆರೆಯ ಮರುದಂಡೆಯಿಂದ ಗೆಜ್ಜೆಗಳ ಶಬ್ದ ಕೇಳಿಸಿತು। ಆದ್ದರಿಂದ ಅವನ ಹೆದರಿಕೆ ಕಡಿಮೆಯಾಯಿತು। ಅವನು ಗಾಡಿಯವನಿಗೆ ನುಡಿದನು, ಇಲ್ಲಿಂದ ರಸ್ತೆ ಬಹಳ ದೂರವಿಲ್ಲ। ಆದ್ದರಿಂದ ಗೆಜ್ಜೆಗಳ ಶಬ್ದ ಬಂದ ಕಡೆಗೆ ಗಾಡಿ ಹೊಡೆ। ಗಾಡಿಯವನು ಕಷ್ಟದಿಂದ ಗಾಡಿಯನ್ನು ರಸ್ತೆಯ ಮೇಲೆ ತಂದನು। ಡಾಕ್ಟರನು ಕೇಳಿದರೆ ಅದು ಶೇಗಾಂವಿಯ ಸೀಮೆಯ ಅಂತವಾಗಿತ್ತು। ಡಾಕ್ಟರನು ಗಾಡಿಯವನಿಗೆ ಗಾಡಿಯನ್ನು ಶೇಗಾಂವಿಗೆ ಮರಳಿಸುವಂತೆ ಆಜ್ಞಾಪಿಸಿದನು। ಅರುಣೋದಯದ ಸಮಯಕ್ಕೆ ಭಾವು ಕವರನು ಮಠದಲ್ಲಿ ಬಂದು, ಬಾಳಾಭಾವುಗೆ ನಡೆದ ಘಟನೆಯನ್ನು ತಿಳಿಸಿದನು। ಎಲ್ಲವನ್ನು ಕೇಳಿ ಬಾಳಾಭಾವು ನಡೆದದ್ದು ಒಳ್ಳೆಯದಾಯಿತು ಎಂದನು। ಮಹಾರಾಜರು ನಿಮಗೆ ವ್ಯತಿಪಾತದ ಮೂಹೂರ್ತಕ್ಕೆ ಹೋಗಲು ಬಿಡಲಿಲ್ಲ। ಇಂದು ಪ್ರಸಾದ ಸೇವಿಸಿ, ನಾಳೆ ತೆಲ್ಹಾರಿಗೆ ಹೊರಡಿರಿ। ಭಕ್ತನು ಎಂದಿಗೂ ಪ್ರಸಾದವನ್ನು ಸ್ವೀಕರಿಸದೇ ಇರಬಾರದು। ನೀವು ಮಹಾರಾಜರ ನಿಜ ಭಕ್ತರು, ಆದ್ದರಿಂದ ನಿಮಗೆ ಹಿಂದಕ್ಕೆ ತಂದರು। ಪ್ರಭು ಕೃಪೆಯಿಲ್ಲದೆ, ಮಾನವಿ ಸಂಕಲ್ಪಗಳು ಪೂರ್ಣವಾಗುವದಿಲ್ಲ। ಸಂತರ ಇಚ್ಛೆಗಳೇ ಪೂಣವಾಗುತ್ತವೆ। ಆದ್ದರಿಂದ ಅವರ ಮೇಲೆ ವಿಶ್ವಾಸವಿಟ್ಟು, ಮನುಷ್ಯನು ನಿಶ್ಚಿಂತನಾಗಿರಬೇಕು। ಎರಡನೆಯ ದಿನ ಪ್ರಸಾದ ಸೇವಿಸಿ ಕವರನು ತೆಲ್ಹಾರೆಗೆ ಹೊರಟನು। ಮುಂದಿನ ಮಾತನ್ನು ಸಾವಧಾನ ಚಿತ್ತದಿಂದ ಕೇಳಿರಿ। ಭಾವಸಾರ ಜಾತಿಯ ರತನಸಾ ಎಂಬ ಸಜ್ಜನನಿದ್ದನು। ಅವನ ಮಗನು ಒಂದು ವರ್ಷದವನಿದ್ದನು। ಅವನಿಗೆ ಮಕ್ಕಳ ರೋಗವಿತ್ತು। ದಿನ ಕಳೆದಂತೆ ಅವನು ಸೊರಗುತ್ತಿದ್ದನು। ಕೇವಲ ಎಲಬುಗಳು ಕಾಣುತ್ತಿದ್ದವು। ಉಪಚಾರಕ್ಕಾಗಿ ಅನೇಕ ವೈದ್ಯರೂ ಪ್ರಯತ್ನಿಸಿದರೂ, ಅಸಫಲರಾದರು। ಅವನ ರೋಗವು ವೃದ್ಧಿಯಾಗಿ, ಹಾಲು ಕುಡಿಯವದನ್ನೂ ನಿಲ್ಲಿಸಿದನು। ಶರೀರದಲ್ಲಿ ಜ್ವರವಿರುತ್ತಿತ್ತು। ವೈದ್ಯರು ರತನಸಾಗೆ ನಿನ್ನ ಮಗನು ಬದುಕುವದು ಕಷ್ಟವಾಗಿದ್ದು, ಧೈರ್ಯದಿಂದ ಇರು ಎಂದರು। ವಿಚಾರವಂತ ಜನರು ಸಾಗದ ಮೇಲೆ ಸೇತುವೆಯನ್ನು





ಕಟ್ಟುವ ಇಚ್ಛೆ ಮಾಡುವದಿಲ್ಲ। ವೈದ್ಯರಾಜರು ಕೂಡಾ ಆಶೆ ಬಿಟ್ಟ ಮೇಲೆ ರತನಸಾ ಶೋಕ ಮಾಡತೊಡಗಿದನು। ನಂತರ ಅವನು ವಿಚಾರ ಮಗ್ನನಾದನು। ಈಗ ಬಾಲಕನು ಕೊನೆಯುಸಿರು ಎಳೆಯುತ್ತಿರುವನು, ಆದ್ದರಿಂದ ಕೊನೆಗೆ ಒಂದು ಉಪಾಯ ಏಕೆ ಮಾಡಬಾರದು ? ಬಾಲಕನ ಅಂತಸಮಯ ಕಂಡು ಬಂದಿದ್ದರಿಂದ, ಮನೆಯ ಎಲ್ಲ ಜನರು ಎದೆ ಬಡಿಯ ತೊಡಗಿದರು। ಬಾಲಕನ ಕೈಕಾಲು ತಣ್ಣಗಾಗ ತೊಡಗಿದವು ಷ ಕಣ್ಣಿನಲ್ಲಿಯ ತೇಜವು ಕಡಿಮೆಯಾಗಿ, ನಾಡಿಯ ಬಡಿತ ಕಡಿಮೆಯಾಗ ತೊಡಗಿತು। ಈ ಸ್ಥಿತಿಯಲ್ಲಿ ರತನಸಾ ತಮ್ಮ ಮಗನನ್ನು ಎತ್ತಿ ಮಹಾರಾಜರ ಸಮಾಧಿಯ ಮುಂದೆ ಇಟ್ಟನು ಮತ್ತು ನನ್ನ ಮಗನು ಸರಿಯಾದರೆ, ನಾನು ಐದು ರೂಪಾಯಿಯ ಪ್ರಸಾದವನ್ನು ಹಂಚುವೆನು ಎಂದು ಹರಕೆ ಹೊತ್ತನು। ಮಹಾರಾಜ, ತಾವು ಎಲ್ಲ ಜನರ ಇಚ್ಛೆ ಪೂರ್ಣಗೊಳಿಸುವಿರಿ। ನಾನು ಕೂಡಾ ತಮ್ಮವನೇ, ನನ್ನಿಂದ ದೂರವಿರದಿರಿ। ನನ್ನ ಪುತ್ರನು ತಮ್ಮ ಸಮಾಧಿಯ ಮುಂದೆ ಮರಣಹೊಂದಿದರೆ ಸಂಪೂಣ ವಿದರ್ಭ ಪ್ರಾಂತದಲ್ಲಿ ತಮ್ಮ ಹೆಸರಿಗೆ ಮಸಿ ಬಳಿದಂತಾಗುವದು। ಹೇ ಸ್ವಾಮಿ ಗಜಾನನ ತಮ್ಮ ಚರಣಗಳು ಅಮೃತ ಸಮಾನವೆಂದು ಜನರು ನುಡಿಯುವರು। ಆದ್ದರಿಂದ ನನ್ನ ಮೇಲೆ ಕೃಪೆ ಮಾಡಿರಿ। ನನ್ನ ಪುತ್ರನು ವಾಸಿಯಾಗದಿದ್ದರೆ, ತಮ್ಮ ಚರಣಗಳ ಮೇಲೆ ನನ್ನ ತಲೆ ಒಡೆದುಕೊಳ್ಳುವೆನು। ಈ ರೀತಿ ನಾನು ನಿಶ್ಚಯಿಸಿದ್ದೇನೆ। ಹೇ ಮಹಾಪುರುಷ ಗಜಾನನ, ತಮ್ಮ ಅಮೃತತುಲ್ಯ ದೃಷ್ಟಿಯನ್ನು ನನ್ನ ಪುತ್ರನ ಮೇಲೆ ಬೀರಿರಿ। ನನ್ನ ದುಃಖವನ್ನು ಕೊನೆಗೊಳಿಸಿರಿ। ಕೆಲವು ಸಮಯವು ಹೀಗೆಯೇ ಕಳೆಯಿತು। ನಂತರ ಈ ರೀತಿ ಚಮತ್ಕಾರವಾಯಿತು। ಆ ಬಾಲಕನು ಕೈಕಾಲು ಅಲ್ಲಾಡಿಸ ತೊಡಗಿದನು। ಈ ಚಮತ್ಕಾರವನ್ನು ನೋಡಿ ಉಪಸ್ಥಿತ ಜನರು ಆನಂದಿತರಾದರು। ಮಹಾರಾಜರ ಕೃಪೆಯಿದ್ದರೆ, ದುಃಖಕ್ಕೆ ಸ್ಥಾನವಿಲ್ಲ। ಅರುಣೋದಯವಾದ ಮೇಲೆ ರಾಕ್ಷಸ ವೃತ್ತಿಗಳಿಗೆ ಕತ್ತಲೆಯಲ್ಲಿ ಮುಖ ಮರೆಸಬೇಕಾಗುವದು। ಕೆಲವೇ ದಿನಗಳಲ್ಲಿ ಬಾಲಕನು ನಿರೋಗಿಯಾದನು। ಹರಕೆಯನ್ನು ಶ್ರದ್ಧಾಯುಕ್ತ ಅಂತಃಕರದಿಂದ ಹೊತ್ತಿದ್ದರೆ ಅದು ಸಫಲವಾಗುವದು, ಎಂಬುದು ನಿಜ। ದಾದಾಸಾಹೇಬ ಕೊಲ್ಹಟಕರರ ರಾಜಾ ಎಂಬ ಪುತ್ರನು ಮಹಾರಾಜರ ಕೃಪಾಶೀರ್ವಾದದ ಫಲವಿದ್ದನು। ಸಂತ ಕೃಪೆಯ ಮೂಲ್ಯವನ್ನು ಮಾಡುವದು ಅಸಾಧ್ಯ। ರಾಮಚಂದ್ರ ಪಾಟೀಲನ ಹದಿನೆಂಟು ವರ್ಷದ ಯುವಕನ್ಯೆಯ ಹೆಸರು ಚಂದ್ರಭಾಗಾ। ಅವಳ ಅತ್ತೆಮನೆ ಲಾಡೆಗಾಂವಿನಲ್ಲಿತ್ತು। ಸಮಯಕ್ಕೆ ಅನುಸಾರವಾಗಿ ಅವಳು ಗರ್ಭವತಿಯಾದಳು। ಆ ಸಮಯ ಅವಳ ಸ್ಥಿತಿ ಬಹಳ ಕರುಣವಾಗಿತ್ತು। ಸ್ತ್ರೀಜಾತಿಗೆ

ಪ್ರಸೂತಿಯೆಂದರೆ ಎರಡನೆಯ ಜನ್ಮವೆನ್ನುತ್ತಾರೆ । ಬಹಳ ಕಷ್ಟಗಳ ನಂತರ ಅವಳು ಸಮಯಕ್ಕೆ ಅನುಸಾರವಾಗಿ ಪ್ರಸೂತಳಾದಳು । ಆದರೆ ನಂತರ ಚಂದ್ರಭಾಗಾಗೆ ಜ್ವರವೇರಿತು । ಇದು ಕೇವಲ ಜ್ವರವಿರದೆ, ನವಜ್ವರವಿತ್ತು। ತಮ್ಮ ಮಗಳ ಉಪಚಾರಕ್ಕಾಗಿ ತಂದೆಯು ಹಿಂದೆ ಮುಂದೆ ನೋಡಲಿಲ್ಲ। ವೈದ್ಯ, ಡಾಕ್ಟರರು ಅಸಫಲರಾದರು । ಔಷಧಿಗಳಿಂದ ಸ್ವಲ್ಪ ಗುಣವಾದರೂ, ಅವಳು ಪೂರ್ಣವಾಗಿ, ರೋಗ ಮುಕ್ತಳಾಗಲಿಲ್ಲ। ಚಂದ್ರಭಾಗಾ ಮೇಲಿಂದ ಮೇಲೆ ಅಸ್ವಸ್ಥಳಾಗತೊಡಗಿದಳು, ಆದ್ದರಿಂದ ಅವಳ ತಂದೆ ಆಕೆಯನ್ನು ಪರೀಕ್ಷೆಗಾಗಿ ಅಕೋಲಾಗೆ ಕರೆದುಕೊಂಡು ಹೋದನು । ಒಬ್ಬ ವೈದ್ಯನು ಕ್ಷಯರೋಗವೆಂದರೆ, ಮತ್ತೊಬ್ಬನು ಬೇರೆಯೇನೋ ಎಂದು ಹೇಳುತ್ತಿದ್ದರು । ಒಬ್ಬನು ನುಡಿದದ್ದು, ಬೇರೆಯವನಂತಿರಲಿಲ್ಲ । ಪಾಟೀಲನು ದಣಿದು ಹೋದನು । ನಂತರ ಅವನು ವಿಚಾರ ಮಾಡಿ ನಿರ್ಧರಿಸಿದನು ನಿಜ ವೈದ್ಯರಾಜ ಗಜಾನನ ಮಹಾರಾಜ। ಅವರು ಮಗಳನ್ನು ಉಳಿಸಬಲ್ಲರು ಅಥವಾ ಮುಗಿಸಬಲ್ಲರು। ಅವನು ಮಗಳಿಗೆ ಮಹಾರಾಜರ ಚರಣ ತೀರ್ಥ ಕುಡಿಸುತ್ತಿದ್ದನು ಮತ್ತು ವಿಭೂತಿ ಹಚ್ಚುತ್ತಿದ್ದನು । ಅವನಿಗೆ ಮಹಾರಾಜರ ಮೇಲೆ ದೃಢ ನಿಷ್ಟೆ ಇತ್ತು। ಈ ಉಪಾಯದಿಂದ ಅವಳು ನಿಧಾನವಾಗಿ ಸುಧಾರಿಸತೊಡಗಿದಳು। ಅವಳಿಗೆ ಮೊದಲು ಮಂಚದ ಮೇಲಿಂದ ಏಳುವದೂ ಕಷ್ಟವಾಗಿತ್ತು। ಆದರೆ ಈಗ ಅವಳು ನಿಧಾನವಾಗಿ ಕಾಲ್ನಡಿಗೆಯಿಂದ ಮಠಕ್ಕೆ ದರ್ಶನ ಪಡೆಯಲು ಹೋಗತೊಡಗಿದಳು । ಇದೆಲ್ಲ ತೀರ್ಥ ಪ್ರಸಾದದ ಪ್ರಭಾವವಾಗಿತ್ತು। ಯಾವ ಭಕ್ತರು ನಿಷ್ಠಾವಂತರೋ, ಅವರಿಗೆ ಭಗವತ್ ಪ್ರಾಪ್ತಿಯಾಗುವದು । ಉಪಾಸಕನಿಗೆ ತಮ್ಮ ಆರಾಧ್ಯ ದೇವರ ಮೇಲೆ ಶ್ರದ್ಧೆ ಇರಬೇಕು । ರಾಮಚಂದ್ರನ ಪತ್ನಿ ಜಾನಕಿಯು ಸುಲಕ್ಷಣೆಯಾಗಿದ್ದರೂ, ಅವಳಿಗೆ ಕರ್ಮಭೋಗವನ್ನು ಅನುಭವಿಸಬೇಕಾಯಿತು । ವಾತಾ ವಿಕಾರಗಳಿಂದ ಜಾನಕಿಬಾಯಿಯ ಹೊಟ್ಟೆ ನೋವಾಗ ತೊಡಗಿತು । ಔಷಧಿ ತೆಗೆದುಕೊಂಡರೆ ಕೆಲವು ದಿನಗಳವರೆಗೆ ಹೊಟ್ಟೆ ನೋವು ಮಾಯವಾಗುತ್ತಿತ್ತು । ಕೆಲವು ದಿನಗಳ ನಂತರ ಮತ್ತೆ ಆರಂಭಗುತ್ತಿತ್ತು। ಈ ರೀತಿ ಅನೇಕ ದಿನಗಳವರೆಗೆ ನಡೆಯಿತು । ನಿಧಾನವಾಗಿ ವಾತ ವಿಕಾರದ ಪ್ರಭಾವ ಮೆದುಳಿನ ಮೇಲೆ ಆಗತೊಡಗಿತು । ಅವಳ ವಿಚಾರ ಶಕ್ತಿಯು ನಾಶವಾಗ ತೊಡಗಿತು । ಆದ್ದರಿಂದ ಅವಳು ಹುಚ್ಚರಂತೆ, ಕೆಲವು
ಸಲ ಬಾಯಿಗೆ ಬಂದಿದ್ದನ್ನು ಆಡುತ್ತಿದ್ದಳು, ಕೆಲವು ಸಲ ಊಟ ಮಾಡದೇ ಮಲಗುತ್ತಿದ್ದರೇ, ಕೆಲವು ಸಲ ಸತತವಾಗಿ ॥ 214 ॥
ತಿನ್ನುತ್ತಿದ್ದಳು । ಅವಳ ಈ ವರ್ತನೆಯನ್ನು ನೋಡಿ ಕೆಲವರು ಇವಳಿಗೆ ಭೂತ ಬಾಧೆಯಾಗಿದೆ, ಇವಳ ಮೇಲೆ ಮೋಡಿ




ಮಾಡಲಾಗಿದೆ ಎನ್ನುತ್ತಿದ್ದರು। ಊರ ಪ್ರಮುಖನಿಗೆ ಅನೇಕರ ಜೊತೆಗೆ ಶತ್ರುತ್ವವನ್ನು ಪಡೆಯಬೇಕಾಗುವದು, ಮತ್ತು ಆ ಜನರು ಮಂತ್ರ ತಂತ್ರಗಳಿಂದ ಸೇಡು ತೀರಿಸುವರು। ಪಾಟೀಲನು ಶ್ರೀಮಂತನು। ಅವನು ಆಪತ್ತಿಯಲ್ಲಿರುವದನ್ನು ನೋಡಿ, ದಾಂಭಿಕ ಜನರು ಲಾಭವೆತ್ತುವ ಪ್ರಯತ್ನ ಮಾಡತೊಡಗಿದರು । ಯಾವದಾದರು ನೆವದಿಂದ ಅವನಿಂದ ಹಣ ಕೀಳತೊಡಗಿದರು । ಪತ್ನಿಯ ಉಪಚಾರಕ್ಕಾಗಿ ಅವನು ಎಲ್ಲ ಪ್ರಯತ್ನ ಮಾಡಿದನು । ಆದರೆ ಅವನ ಪ್ರಯತ್ನಗಳಿಗೆ ಯಶಸ್ಸು ದೊರಕಲಿಲ್ಲ ನಂತರ ಅವನು ಕೊನೆಗೆ ಒಂದು ಉಪಾಯ ಮಾಡುವ ನಿರ್ಧಾರ ಮಾಡಿದನು। ಈಗ ನನ್ನ ವೈದ್ಯರಾಜನು ಶ್ರೀ ಗಜಾನನ ಮಹಾರಾಜರು । ಅವರ ಇಚ್ಛೆಯಂತೆ ನಡೆಯಲಿ । ನನ್ನ ಪತ್ನಿ ಅವರ ಸೊಸೆಯಿದ್ದಂತೆ । ಹೀಗಿರುವಾಗ ನನಗೆ ಬೇರೆ ಉಪಾಯಗಳ ಅವಶ್ಯಕತೆಯಿಲ್ಲ। ಅವನು ತನ್ನ ಪತ್ನಿಗೆ ನಾಳೆಯಿಂದ ಮುಂಜಾನೆ ಸ್ನಾನಮಾಡಿ ಮಠಕ್ಕೆ ಹೋಗಿ ಪ್ರದಕ್ಷಿಣೆ ಮಾಡುವ ನಿಯಮವನ್ನು ಮಾಡು ಎಂದನು । ಅವಳು ಪತಿಯ ಆಜ್ಞೆಯನ್ನು ನಂಬಿ ನಿಯಮಿತವಾಗಿ ಮಠಕ್ಕೆ ಹೋಗಿ ಪ್ರದಕ್ಷಿಣೆ ಹಾಕಿ ಬರುತ್ತಿದ್ದಳು । ಅವಳ ಈ ನಿಯಮವು ವ್ಯರ್ಥವಾಗಲಿಲ್ಲ। ಅವಳ ಶ್ರದ್ಧೆಯನ್ನು ನೋಡಿ ಮಹಾರಾಜರು ಪ್ರಸನ್ನರಾದರು। ನಿಧಾನವಾಗಿ ಅವಳ ವಾತ ವಿಕಾರವು ಕಡಿಮೆಯಾಗಿ ಅವಳು ಮೊದಲಿನಂತಾದಳು । ಸಂತರ ಸೇವೆಯು ವ್ಯರ್ಥವಾಗುವದಿಲ್ಲ। ಮಹಾರಾಜರ ನಂತರ ಬಾಳಾಭಾವು ಮಠಾಧಿಪತಿಯಾದರು । ಅವರಿಂದಲೂ ಅನೇಕ ಚಮತ್ಕಾರಗಳು ನಡೆದವು । ಬಾಳಾಭಾವು ವೈಶಾಖ ವದ್ಯಷಷ್ಠಿಗೆ ಶೇಗಾಂವಿಯಲ್ಲಿ ವೈಕುಂಠವಾಸಿಗಳಾದರು । ಅವರ ನಂತರ ನಾರಾಯಣರು ಆಸನಸ್ಥರಾದರು । ಬಾಳಾಭಾವು ಹೋದಾಗ ಪಾಂದುರಗಾಂವಿಯ ನಾರಾಯಣನಿಗೆ ಕನಸು ಬಿತ್ತು। ಅದನ್ನು ಈಗ ಕೇಳಿರಿ । ಹೇ ಮಾಲಿ ನಾರಾಯಣ, ಶೇಗಾಂವಿಗೆ ಹೋಗಿ ಭಾವಿಕ ಭಕ್ತರನ್ನು ರಕ್ಷಿಸು, ಇದು ನನ್ನ ಆದೇಶವಿದೆ। ಹೀಗೆ ನುಡಿದು ಮಹಾರಾಜರು ಹೊರಟು ಹೋದರು । ಆದ್ದರಿಂದ ನಾರಾಯಣ ಶೇಗಾಂವಿಗೆ ಬಂದನು । ಆಸನ ಮೇಲೆ ಕುಳಿತು ಸೇವೆ ಮಾಡಿದನು। ಚೈತ್ರ ಶುದ್ಧ ಷಷ್ಠಿಗೆ ಅವನು ಸಮಾಧಿಸ್ಥನಾದನು । ಹಿಂದಿನ ಜನ್ಮದ ಪುಣ್ಯವು ಅಕ್ಷಯವಾಗಿರುತ್ತದೆ । ಶ್ರೀ ಗಜಾನನ ಲೀಲೆಯ ಮಹಿಮೆಯನ್ನು ತಿಳಿಯುವದು ಕಠಿಣ । ಏಕೆಂದರೆ ಆಕಾಶದಲ್ಲಿ ಮಿನುಗುವ ನಕ್ಷತ್ರಗಳನ್ನು ಯಾರು
ಎಣಿಸಬಲ್ಲರು ? ನಾನು ಅಜ್ಞಾನಿ ಮತ್ತು ಮತಿಮಂದನು । ಈ ಸ್ಥಿತಿಯಲ್ಲಿ ನನ್ನಿಂದ ಈ ಲೀಲಾ ಸಾಗರದ ವರ್ಣನೆ ಹೇಗೆ ॥ 215 ॥
ಸಾಧ್ಯ ? ಅವರು ನುಡಿದಿದ್ದನ್ನು ನಾನು ಹೇಳಿರುವೆನು । ಲೆಕ್ಕಣಿಕೆಯಿಂದ ಅಕ್ಷರಗಳನ್ನು ಬರೆದಿರುವೆನು, ಆದರೆ

ಅವುಗಳಲ್ಲಿ ನನ್ನ ಸಾಮರ್ಥ್ಯವು ಏನೂ ಇಲ್ಲ। ಯಾರ ಕೈಯಲ್ಲ ಲೆಕ್ಕಣಿಕೆಯೋ, ಅವನೇ ಅಕ್ಷರ ಬರೆಯುವನು। ಲೆಕ್ಕಣಿಕೆಯು ಅಕ್ಷರ ಬರೆಯುವ ಸಾಧನ ಮಾತ್ರ, ಅದೇ ರೀತಿ ಇಲ್ಲಿ ನಡೆದಿದೆ। ನಾನು ಬರೆಯುವ ಕೆಲಸ ಮಾಡಿದೆ। ಆದರೆ ಬರೆಸುವ ಮತ್ತು ಬರೆಯುವ ಕಾರ್ಯವನ್ನು ಸ್ವಯಂ ಸ್ವಾಮಿ ಶ್ರೀ ಗಜಾನನ ಮಹಾರಾಜರು ಮಾಡಿರುವರು। ಅವರ ಕೃಪೆಯಿಂದಲೇ ನಾನು ಬರೆದಿರುವೆನು, ಅದರಲ್ಲಿ ನನ್ನ ದೊಡ್ಡಸ್ತವೇನು ಇಲ್ಲ। ಸ್ವಸ್ತಿ ಶ್ರೀ ದಾಸಗಣು ವಿರಚಿತ ಈ ಶ್ರೀ ಗಜಾನನ ವಿಜಯವೆಂಬ ಗ್ರಂಥವು ಕಲಶದ ಸಮೀಪ ಬಂದಿದೆ। ಕಲಶೋಧ್ಯಾಯವು ಮುಂದಿನ ಅಧ್ಯಾಯವಾಗಿದೆ।



**॥ ಶುಭಂ ಭವತು ॥ ಶ್ರೀ ಹರಿಹರಾರ್ಪಣಮಸ್ತು॥**





ಶ್ರೀ ಗಜಾನನ ಮಹಾರಾಜರು ಸನ್ಯಾಸಿ ವೇಷದಲ್ಲಿ ರಾಮಚಂದ್ರ ಪಾಟೀಲನಿಗೆ ದೃಷ್ಟಾಂತವನ್ನು ನೀಡುತ್ತಿದ್ದಾರೆ.

## ॥ ಅಧ್ಯಾಯ ೨೧ ॥

ಶ್ರೀ ಗಣೇಶಾಯನಮಃ । ಜಯ ಜಯಾಜಿ ಅನಂತವೇಷ । ಜಯ ಜಯಾಜಿ ಅವಿನಾಶ । ಜಯಜಯಾಜಿ ಪರೇಷ । ಬ್ರಹ್ಮಾಂಡಾಧೀಶ ನಮೋ ನಮಃ । ಹೇ ಭಗವಂತ, ತಾವು ಪತಿತ–ಪಾವನರೆಂದರು ಕರೆಯಲ್ಪಟ್ಟಿರುವಿರಿ ಎಂಬುದನ್ನು ಮರೆಯದಿರಿ । ಯಾರು ಪಾಪಿ ಹಾಗೂ ಪಾತಕಿಗಳೋ, ಅವರ ಮೇಲೆ ತಮ್ಮ ಕೃಪೆ ಇರುತ್ತದೆ ಪಾಪಿ ಜನರಿಂದಲೇ ಈ ಜಗತ್ತಿನಲ್ಲಿ ನಿಮ್ಮ ಮಹಿಮೆ ಹೆಚ್ಚಾಗಿದೆ । ಹೀ ಹೃಷಿಕೇಶ, ಆದ್ದರಿಂದಲೇ ನನ್ನ ಪಾಪಗಳ ಮೇಲೆ ಧ್ಯಾನವಿಡಿರಿ । ಕೊಳಚೆ ಬಟ್ಟೆಯು ನೀರಿನಿಂದಲೇ ನಿರ್ಮಲವಾಗುವದು, ಆದ್ದರಿಂದ ಹೇ ಘನನೀಳ, ಪತಿತರಿಂದ ಅಂತರವಿಡಬೇಡಿ । ಏನು ಇಂತಹ ಜನರಿಂದ ಭೂಮಾತೆಯು ಮುಖ ಮರೆಸುವಳೇ ? ಪತಿತ ಪಾವನ, ಪುಣ್ಯ–ಪಾವನ ಈ ಎರಡೂ ಬಿರುದುಗಳ ಮೇಲೆ ತಾವಿರುವಿರಿ । ಕತ್ತಲೆಯನ್ನು ಮುಗಿಸಲು ಸೂರ್ಯನಿಗೆ ಕಷ್ಟ ತೆಗೆದುಕೊಳ್ಳುವ ಅವಶ್ಯಕತೆಯಿಲ್ಲ । ಅವನಿಗೆ ಅದಕ್ಕಾಗಿ ಯಾವ ಕಷ್ಟಗಳಿಲ್ಲ । ಸೂರ್ಯನನ್ನು ಭೆಟ್ಟಿಯಾಗಲು ಬಂದ ಕತ್ತಲೆಯು ಸ್ವಯಂ ಪ್ರಕಾಶಿತವಾಗಿ ಹಬ್ಬುವದು । ನಾರಾಯಣನ ಸನ್ನಿಧಿಯಲ್ಲಿ ತಮೋಗುಣಗಳ ಅಂಧಃಕಾರವು ನಷ್ಟವಾಗುವದು । ಹೇ ನಾರಾಯಣ , ಪಾಪಾ ಪುಣ್ಯಗಳ ವಾಸನೆಯನ್ನು ಮನುಷ್ಯನ ದೇಹದಲ್ಲಿ ತಾವೇ ನಿರ್ಮಿಸುವಿರಿ। ತಮ್ಮ ದೊಡ್ಡಿಸ್ತನವನ್ನು ಉಳಿಸಿಕೊಳ್ಳಲು, ತಾವು ಮನುಷ್ಯನಿಂದ ಪಾಪ ಮಾಡಿಸುತ್ತೀರಿ । ಹೇ ಪಾಂಡುರಂಗ, ಸಂಪೂರ್ಣ ವಿಶ್ವವು ತಮ್ಮ ಮುಷ್ಟಿಯಲ್ಲಿದೆ, ಮತ್ತು ತಮ್ಮ ಹೊರತು ನನ್ನ ತಾರಕರು ಯಾರು । ಹೇ ಶ್ರೋತೃಗಳೇ, ಈ ಕಲಶಾಧ್ಯಾಯ ಏಕಾಗ್ರ ಚಿತ್ತದಿಂದ ಕೇಳಿರಿ । ತಾವು ಸಂತ ಕಥೆಯನ್ನು ಕೇಳುತ್ತಿರುವಿರಿ, ಇದು ನಿಮ್ಮ ಭಾಗ್ಯ । ಗಜಾನನ ಪಾದಪದ್ಮಗಳಲ್ಲಿ ಶ್ರದ್ಧೆಯಿರುವವರ, ಎಲ್ಲ ದುಃಖಗಳನ್ನು ನಿಶ್ಚಿತ ರೂಪದಿಂದ ಸುಟ್ಟು ಹಾಕುತ್ತದೆ । ಇರಲಿ ! ಮಂದರಿದ ಕೆಲಸ ನಡೆಯುತ್ತಿತ್ತು. ಮತ್ತು ಆಗ ಕೆಲಸ ಮಾಡುತ್ತ ಒಬ್ಬ ಆಳು ಶಿಖರದ ಮೇಲೆ ತಲುಪಿ, ಗೌಂಡಿಗನ ಕೈಯಲ್ಲಿ ಕಲ್ಲನ್ನು ಕೊಡುತ್ತಿದ್ದನು । ಒಮ್ಮೆ ಹೀಗೆ ಕಲ್ಲನ್ನು ಕೊಡುವಾಗ, ಅವನು ಒಮ್ಮೆಲೇ ಕಾಲು ಜಾರಿ ಮೂವತ್ತು ಅಡಿ ಎತ್ತರದಿಂದ ಕೆಳಗೆ ಬಿದ್ದನು । ಆ ದೃಶ್ಯವನ್ನು ಕಂಡವರು, ಆ ಆಳು ಸತ್ತಿರಬಹುದು ಎಂದೆಣಿಸಿದರು । ಏಕೆಂದರೆ ಇಷ್ಟು ಎತ್ತರದ ಮೇಲಿಂದ ಬಿದ್ದ ಮೇಲೆ ಭಯಂಕರ ಪೆಟ್ಟಾಗುವದು ಸಹಜವಾಗಿತ್ತು । ಆದರೆ ಬೇರೆಯೇ ಆಗಿತ್ತು । ಜನರು ಹತ್ತಿರ

ಹೋಗಿ ನೋಡಿದರೆ ಅವನಿಗೆ ಎಲ್ಲಿಯೂ ಗಾಯವಾಗಿರಲಿಲ್ಲ। ಕೈಯಲ್ಲಿ ಚೆಂಡನ್ನು ಹಿಡಿದಂತೆ, ಯಾರೋ ಅವನಿಗೆ ಕೈಯಲ್ಲಿ ಹಿಡಿದು ಕೆಳಗೆ ತಲುಪಿಸಿದ್ದರು । ಯಾವ ರೀತಿ ಅಟ್ಟದ ಮೇಲಿಂದ ಮನುಷ್ಯನು ಕೆಳಗಿಳಿಯುವನು ಅದೇ ರೀತಿ ಆಳು ಬಂದಿದ್ದನು । ಇದು ಹೇಗಾಯಿತು ಎಂದು ಆ ಆಳಿಗೆ ಕೇಳಿದರೆ, ಅವನು ನನ್ನ ಕಾಲು ಜಾರಿಗೆ, ಯಾರೋ ನನಗೆ ಹಿಡಿದು ಕೆಳಗಿಟ್ಟಂತ ಆಯಿತು ಎಂದನು । ನಾನು ಸಾವರಿಸಿ ನೋಡಿದರೆ, ನನ್ನ ಮುಂದೆ ಯಾರಿರಲಿಲ್ಲ । ಈ ವೃತ್ತಾಂತವನ್ನು ಕೇಳಿ ಎಲ್ಲರಿಗೆ ಆನಂದವಾಯಿತು । ಜನರು ಮಠದ ಕಾರ್ಯ ಮಾಡುವಾಗ ಇವನು ಮರಣ ಹೊಂದಿದನು ಎಂಬ ಅಪವಾದ ತಮ್ಮ ತಲೆಯ ಮೇಲೆ ಬರಬಾರದು ಎಂದು ಮಹಾರಾಜರು ಅವನನ್ನು ಬದುಕಿಸಿದರು ಎಂದರು ಅವರು ಮುಂದೆ ನಡೆದ ನುಡಿದರು, ನೀನು ಬೀಳುವದು ಕೇವಲ ನೆಪವಾಗಿತ್ತು। ನಿನ್ನನ್ನು ಉಳಿಸಲು ಮಹಾರಾಜರ ಕೈ ನಿನ್ನ ಶರೀರಕ್ಕೆ ತಗುಲಿತು । ಇದು ಎಂತಹ ಸೌಭಾಗ್ಯ, ಎಲ್ಲರಿಗೆ ಇಂತಹ ಭಾಗ್ಯ ಎಲ್ಲಿಂದ ? ಇರಲಿ ! ಒಂದು ದಿನ ರಾಜಸ್ಥಾನದಿಂದ ಒಬ್ಬ ಮಹಿಳೆಯು ಶೇಗಾಂವಿಗೆ ಬಂದಳು । ಅವಳಿಗೆ ಭೂತಬಾಧೆ ಆಗಿತ್ತು । ಆ ಮಹಿಳೆಗೆ ದತ್ತಾತ್ರೇಯರ ಮೂಲಕ ರಾಮನವಮಿಯ ದಿನ ಶೇಗಾಂವಿಗೆ ತಲುಪುವಂತೆ ದೃಷ್ಟಾಂತವಾಗಿತ್ತು। ಅಲ್ಲಿ ಶ್ರೀ ಗಜಾನನ ಸದ್ಗುರುನಾಥರ ಚಿರಂತನವಾಸವಿದೆ । ಅವರು ನಿನ್ನ ಭೂತ ಭಾದೆಯನ್ನು ನಷ್ಟಮಾಡಿ, ಆ ಭೂತಕ್ಕೆ ಮುಕ್ತಿಕೊಡುವರು ಈ ಕನಸಿನ ಆಧಾರದ ಮೇಲೆ ಆ ಮಹಿಳೆಯು ತಮ್ಮ ಇಬ್ಬರು ಮಕ್ಕಳೊಡನೆ ರಾಮನವಮಿಗೆ ಶೇಗಾಂವಿಗೆ ಬಂದಳು। ಪ್ರತಿಪದೆಯಿಂದ ಉತ್ಸವವು ಆರಂಭವಾಗುತ್ತದೆ । ರಾಮನವಮಿಯ ದಿನ ಅಲ್ಲಿ ಬಹಳ ಗದ್ದಲವಾಗುತ್ತದೆ । ಆಗ ಮಂದಿರದ ಸಭಾಮಂಟಪದ ಕೆಲಸ ನಡೆದಿತ್ತು ಮತ್ತು ಮಂಟಪ ಆಧಾರಕ್ಕಾಗಿ ಒಂದೂವರೆ ಫೂಟು ಅಗಲ ಹಾಗೂ ಐದು ಅಡಿ ಉದ್ದದ ಕಲ್ಲುಗಳ ಕಂಬಗಳನ್ನು ನಿಲ್ಲಿಸಿದ್ದರು । ಉತ್ಸವಕ್ಕಾಗಿ ಕೆಲಸ ನಿಲ್ಲಿಸಿದ್ದರಿದ ಕಂಬಗಳನ್ನು ಹಾಗೆಯೇ ನಿಲ್ಲಿಸಿದ್ದರು । ಸಮಯಕ್ಕೆ ಅನುಸಾರವಾಗಿ ಶ್ರೀರಾಮನ ಜನ್ಮೋತ್ಸವವು ಸಂಪನ್ನವಾಯಿತು । ಪ್ರಸಾದ ಪಡೆಯಲು ಜನರ ಗದ್ದಲವಾಗಿತ್ತು ಅದರ ವರ್ಣನೆಯು ಅಸದಳ । ಆ ರಾಜಪುತ ಮಹಿಳೆಯು ಆ ಗದ್ದಲದಲ್ಲಿದ್ದಳು । ಗದ್ದಲದಿಂದ ಬೇಸತ್ತು ಅವಳು ಒಂದು ಕಂಬಕ್ಕೆ ತಗುಲಿ ನಿಂತಳು । ಏನು ಆಶ್ಚರ್ಯ, ಅವಳು ತಗಲಿನಿಂತ ಕಂಬವು ಬಿದ್ದು ಆ ಮಹಿಳೆಯು ಸತ್ತಿರಬಹುದೆಂದು ತಿಳಿದರು । ಇವಳು ಯಾರು ಮತ್ತು ಎಲ್ಲಿಯವಳು ? ಅವಳ ಜೊತೆಗೆ ಎರಡು ಮಕ್ಕಳಿವೆ । ಕೂಡಲೆ ಹತ್ತಿಪ್ಪತ್ತು ಜನರು ಸೇರಿ ಕಂಬವನ್ನು ನಿಲ್ಲಿಸಿದರು ಮತ್ತು ಆ ಮಹಿಳೆಯ ಬಾಯಲ್ಲಿ ನೀರನ್ನು ಹಾಕಿದರು । ನಂತರ ಡಾಕ್ಟರ





ಲೋಬೋ ಶಸ್ತ್ರ ವಿದ್ಯೆಯಲ್ಲಿ ನಿಪುಣಳಿದ್ದಳು । ಅವಳು ಕ್ರಿಶ್ಚನ್ ಜಾತಿಯವಳಾಗಿದ್ದು ಕ್ರಿಸ್ತನ ಭಕ್ತಳಿದ್ದಳು । ಅವಳು ಆ ಮಹಿಳೆಯ ಮೇಲೆ ಉಪಚಾರ ಮಾಡಿದಳು । ಅವಳು ಈ ಮಹಿಳೆಗೆ ಹೊರಗೆ ಅಥವಾ ಒಳಗೆ ಯಾವ ಪೆಟ್ಟಿಗಿಲ್ಲ ಎಂದಳು । ಅವಳಿಗೆ ಈ ಭಾರವಾದ ಕಲ್ಲಿನ ಕಂಬದ ಕೆಳಗೆ ಸಿಕ್ಕು ಹಾಕಿದರೂ ಈ ಮಹಿಳೆಗೆ ಪೆಟ್ಟು ಹೇಗಾಗಲಿಲ್ಲ ಎಂಬ ವಿಚಾರ ಬಂದಿತು । ಈ ಚಮತ್ಕಾರವನ್ನು ನೋಡಿ ಎಲ್ಲರೂ ಆಶ್ಚರ್ಯಚಕಿತರಾದರು । ಆದರೆ ಸತ್ಯ ಘಟನೆ ಅವಳು ಸಂಕಟದಿಂದ ಪಾರಾಗಿರುವದು ಆಗಿತ್ತು। ಆ ಕಂಬವನ್ನು ಅವಳ ಮೈಮೇಲೆ ಬೀಳಿಸಿ ಭೂತವನ್ನು ಓಡಿಸಿದ್ದರೂ, ಅವಳ ಮೈಗೆ ಪೆಟ್ಟು ತಗಲಿರಲಿಲ್ಲ ಎಂಬುದು ಮುಖ್ಯ ಕಾರಣವಾಗಿತ್ತು। ಆ ಮಹಿಳೆಯು ಸರಿಯಾಗಿ ನಂತರ ಜಯಪುರಕ್ಕೆ ಹೊರಟು ಹೋದಳು ಮತ್ತು ಆನಂದದಿಂದ ಜೀವನವನ್ನು ಕಳೆಯತೊಡಗಿದಳು । ಸಮಾಧಿಸ್ಥರಾದ ನಂತರವೂ ಮಹಾರಾಜರು ಪ್ರಭಾವ ತೋರಿಸುತ್ತಿದ್ದರು । ಒಮ್ಮೆ ಮಂದಿರದಲ್ಲಿ ಉತ್ಸವವು ನಡೆದಿತ್ತು । ಉತ್ಸವವು ಮುಗಿದ ನಂತರ ನಾಯಿಕ ನವರ್ಯಾ ಎಂಬವನು ಮಂಟಪದ ಹಗ್ಗ ಆದಿಗಳನ್ನು ಬಿಚ್ಚುತ್ತಿದ್ದನು, ಅಷ್ಟರಲ್ಲಿ ಒಂದು ಬಿದಿರಿನಗಳವು ಮೇಲಿಂದ ಬಿಚ್ಚಿ ನಾಯಿಕನ ತಲೆಯ ಮೇಲೆ ಬಿದ್ದಿತು। ಆದರೆ ಮಹಾರಾಜರ ಕೃಪಾದೃಷ್ಟಿಯಿಂದ ಅವನಿಗೆ ಪೆಟ್ಟಾಗಲಿಲ್ಲ। ಶೇಗಾಂವಿಯ ಕೃಷ್ಣಾಜಿ ಪಾಟೀಲನ ರಾಮಚಂದ್ರನೆಂಬ ಪುತ್ರನು ಮಹಾರಾಜ ಪರಮ ಭಕ್ತನಿದ್ದನು । ಒಂದು ದಿನ ಅವನ ಮನೆಗೆ ಮಹಾರಾಜರು ಗೋಸಾವಿಯ ರೂಪದಲ್ಲಿ ಮಧ್ಯಾನ್ಹದ ಸಮಯಕ್ಕ ಬಂದರು । ಮತ್ತು ಹೊರಗಿನಿಂದಲೇ ರಾಮಚಂದ್ರ ಪಾಟೀಲನಿಗೆ ಕರೆದು ನುಡಿದರು ನನಗೆ ಹಸಿವೆಯಾಗಿದೆ ಎಂದು । ನನಗೆ ತಿನ್ನಲು ಸಿಗಬಹುದೇ ? ಪಾಟೀಲನು ಭಾವಿಕನಾಗಿದ್ದನು । ಗೋಸಾವಿಯ ಕೂಗನ್ನು ಕೇಳಿ ಅವನು ಬಾಗಿಲಲ್ಲಿ ಬಂದನು । ಅವನು ಸರಿಯಾಗಿ ದಿಟ್ಟಿಸಿ ನೋಡಿದರೆ ಅವನಿಗೆ ಪುಣ್ಯರಾಶಿ ಸ್ವಾಮಿ ಗಜಾನನ ಮಹಾರಾಜರು ಗೋಸಾವಿಯ ರೂಪದಲ್ಲಿ ದಾರದಲ್ಲಿ ಬಂದಿರುವರು ಎಂಬುದು ತಿಳಿಯಿತು । ಅವನು ಗೋಸಾವಿಯ ಕೈಹಿಡಿದು ಒಳಗೆ ಕರೆ ತಂದನು । ಆಸನದ ಮೇಲೆ ಕೂಡ್ರಿಸಿ ಪಾದ ಪೂಜೆ ಮಾಡಿದನು । ನಾನು ಇಂದು ಇಲ್ಲಿ ನಿನಗೆ ಒಂದು ಮಹತ್ವದ ಮಾತನ್ನು ಹೇಳಲು ಬಂದಿರುವೆನ । ಆ ಮಾತನ್ನು ಸರಿಯಾಗಿ ಕೇಳು । ನಿನ್ನ ಮೇಲಿರುವ ಸಾಲವು ಸಮಯಕ್ಕೆ ಸರಿಯಾಗಿ ತೀರಿ ಹೋಗುವದು ಅದರ ಬಗ್ಗೆ ಚಿಂತಿಸಬೇಡ । ಗ್ರೀಷ್ಮ ಋತುವಿನಲ್ಲಿ ಗೋದಾವರಿ ನದಿಯೂ ಒಣಗಿ ಹೋಗುವದು । ಅದೇ ರೀತಿ ಇದು ಒಂದು ಸಾಮಾನ್ಯ ಮಾತು । ಶ್ರೀ ಹರಿಯ ಕೃಪೆಯಾದರೆ, ಸಂಪನ್ನತೆಯ ಮಳೆ ಬೀಳುವದು । ಯಾವ ಮನೆಯಲ್ಲಿ

ನನ್ನ ಎಂಜಲು ಬೀಳುವದೋ ಆ ಮನೆಯಲ್ಲಿ ಯಾವ ಕೊರತೆ ಉಂಟಾಗದು । ಆದ್ದರಿಂದ ಊಟದ ತಟ್ಟೆಯನ್ನು ತೆಗೆದುಕೊಂಡು ಬಾ । ಮತ್ತು ನಿನ್ನ ಇಚ್ಛೆಯಿದ್ದರೇ ನನಗೆ ಹೊದ್ದುಕೊಳ್ಳಲು ಒಂದು ಕಂಬಳಿಯನ್ನು ಕೊಡು । ಪೂಜೆ, ಅನ್ನ ಹಾಗೂ ದಕ್ಷಿಣೆಯನ್ನು ಕೊಟ್ಟರೇ, ಯಾಚಕನು ಪ್ರಸನ್ನನಾದರೆ ಆ ಗ್ರಹಸ್ಥನ ಮೇಲೆ ದೇವರ ಕೃಪೆಯಾಗುವದು ಎಂಬುದನ್ನು ಜ್ಞಾಪಕದಲ್ಲಿಡು । ಆದರೆ ಯಾವನಿಗೆ ಅದನ್ನು ಕೊಡುವಿರೋ ಆ ಯಾಚಕನು ಕೂಡಾ ವಿಶುದ್ಧ ಅಂತಃಕರಣದವನಿರುವದು ಅವಶ್ಯಕ, ಅಂದರೆ ಮಾತ್ರ ಆ ಚಮತ್ಕಾರವು ಸಾಧ್ಯ । ಪಾಟೀಲನು ತಟ್ಟೆಯನ್ನು ಬಡಿಸಿ ತಂದನು, ಮತ್ತು ಆ ಗೋಸಾವಿಯು ಆನಂದದಿಂದ ಉಂಡನು । ಪಾಟೀಲನು ದಕ್ಷಿಣೆಯ ರೂಪದಲ್ಲಿ ಕೊಟ್ಟ, ಐದು ರೂಪಾಯಿ ಮರಳಿಸಿ ಗೋಸಾವಿಯು ನುಡಿದನು, ನನಗೆ ಇದರ ಅವಶ್ಯಕತೆಯಿಲ್ಲ। ನೀನು ಗಜಾನನ ಮಹಾರಾಜರ ಮಠವನ್ನು ನೋಡಿಕೊಳ್ಳು ಎಂಬುದೇ ನನ್ನ ಇಚ್ಛೆ। ಇದೇ ನನ್ನ ದಕ್ಷಿಣೆ ಮತ್ತು ಅದನ್ನು ಪಡೆದುಕೊಳ್ಳಲು ನಾನು ಇಲ್ಲಿ ಬಂದಿರುವೆನು। ನನ್ನ ದಕ್ಷಿಣೆಯನ್ನು ನನಗೆ ಕೊಡು, ಆದ್ದರಿಂದ ಯಾವಾಗಲೂ ನಿನ್ನ ಕಲ್ಯಾಣವಾಗುವದು। ಸಮರ್ಥ ಸೇವೆಯ ದಕ್ಷಿಣೆಯನ್ನು ಕೊಟ್ಟು, ನನಗೆ ಸಮಾಧಾನ ಮಾಡು। ಏಕೆಂದರೆ ನಿನ್ನಂತಹ ಭಕ್ತ ಈ ಕಾರ್ಯಕ್ಕಾಗಿ ಬೇರೆ ಯಾರೂ ಕಂಡು ಬರುವದಿಲ್ಲ। ನಿನ್ನ ಪತ್ನಿಯು ಹಗಲೆಲ್ಲ ಬೇನೆ ಬೀಳುವಳು, ಅವಳು ನನಗೆ ದಕ್ಷಿಣೆ ಕೊಟ್ಟರೆ ಸರಿಯಾಗುವಳು। ಈಗ ನಿನ್ನ ಪುತ್ರನಿಗೆ ಕರೆ, ಅವನ ಕೊರಳಿನಲ್ಲಿ ಈ ತಾವೀಜನ್ನು ಕಟ್ಟುವೆನು। ಇನ್ನೂ ಮುಂದೆ ಅವನಿಗೆ ಭೂತ, ಪಿಶಾಚಿ ಆದಿಗಳ ಬಾಧೆ ಆಗುವದಿಲ್ಲ। ಏಕೆಂದರೆ ಈ ಮುಖ್ಯಸ್ಥನ ಭಾರ ಈ ಜಗತ್ತಿನಲ್ಲಿ ಬಹಳ ಕಠಿಣ, ಅದು ನೀರಿನ ಜೊತೆಗೆ ಜಗಳ ಮಾಡಿದಂತಿದೆ। ಹೇ ರಾಮಚಂದ್ರ ನಿನ್ನ ಪಾಟೀಲತನದ ಜವಾಬುದಾರಿಯೆಂದರೆ, ಜಂಭ ಮಾಡುವ ಮಾತು। ಆದರೆ ಈ ಅಧಿಕಾರವನ್ನು ನೀನು ಗೈರುಫಾಯದೇ ಮಾಡಲು ಉಪಯೋಗಿಸಬಾರದು । ಮನಸ್ಸಿನಲ್ಲಿ ಯಾರ ಬಗ್ಗೆ ದ್ವೇಷವಿಡಬಾರದು, ನೀತಿಯನ್ನು ಬಿಡಬಾರದು, ಮತ್ತು ಅರಸನ ವಿರುದ್ಧ ಬಂಡಾಯ ಮಾಡಬಾರದು । ಈ ದುಷ್ಟ ಮಾತುಗಳಿಂದ ದೂರವಿದ್ದರೆ, ಶ್ರೀ ಶ್ರೀನಿವಾಸನು ನಿಮಗೆ ಋಣಿಯಾಗುವನು । ನನ್ನ ಈ ಮಾತುಗಳನ್ನು ನಿಜವೆಂದು ತಿಳಿದು ಜ್ಞಾಪಕದಲ್ಲಿಡು । ಆದಾಯವನ್ನು ನೋಡಿ ಖರ್ಚು ಮಾಡು ಮತ್ತು ದಂಭಾಚಾರದಿಂದ ದೂರವಿರು । ಮತ್ತು ಸಾಧು ಸಂತರು ಮನೆಗೆ ಬಂದರೆ, ಅವರನ್ನು ಸಿಟ್ಟಿನಿಂದ ಹಿಂದೆ ಕಳುಹಿಸಬೇಡ । ಸಂತರ ಅಪಮಾನ ಮಾಡಿದರೆ ಈಶ್ವರನು, ಅಪ್ರಸನ್ನ ಹಾಗು ಕ್ರುದ್ಧನಾಗುವನು ಯ ಆದ್ದರಿಂದ ಸಂತಶರಣರ ಪ್ರತಿ ಪ್ರೀತಿ ಹಾಗೂ ಶ್ರದ್ಧೆ ಇಡು ।






ತಮ್ಮ ವಂಶದವರ ಕೀರ್ತಿಯನ್ನು ಉಳಿಸು। ಆಪ್ತೇಷ್ಟರ ಆದರ ಅತಿಥ್ಯವನ್ನು ಸಮಯಕ್ಕೆ ಅನುಸಾರವಾಗಿ ಮಾಡಬೇಕು। ಜನರಿಂದ ಕೆಲಸ ಮಾಡಿಕೊಳ್ಳುವಾಗ ಮೇಲಿಂದ ಕ್ರೋಧ ತೋರಿಸಿದರೂ, ಒಳಗಡೆ ದಯೆ ಹಾಗೂ ಪ್ರೇಮವಿರಬೇಕು, ಯಾವ ರೀತಿ ಹಲಸಿನ ಹಣ್ಣಿಗೆ ಹೊರಗಿನಿಂದ ಮುಳ್ಳುಗಳಿದ್ದರೂ, ಒಳಗೆ ಅದು ಸಿಹಿಯಾಗಿರುತ್ತದೆ । ನಾನು ಯಾವಾಗಲೂ ನಿನ್ನನ್ನು ರಕ್ಷಿಸುವೆನು ಎಂಬುದನ್ನು ಮರೆಯಬೇಡ । ಬಾಲಕನ ಕೈಯಲ್ಲಿ ತಾಬೀಜನ್ನು ಕಟ್ಟಿ ಗೋಸಾವಿ ಹೊರಗೆ ಹೋದನು । ಹೊರಗೆ ಹೋಗುತ್ತಲೆ ಅವನು ಅದೃಶ್ಯನಾದನು । ರಾಮಚಂದ್ರ ಪಾಟೀಲನು ಸಂಪೂರ್ಣ ದಿನ ಈ ಗೋಸಾವಿಯು ಯಾರಿರಬಹುದು ಎಂಬ ವಿಚಾರ ಮಾಡುತ್ತಿದ್ದನು। ಕೊನೆಗೆ ಸ್ವಯಂ ಗಜಾನನ ಮಹಾರಾಜರೆ ಗೋಸಾವಿಯ ರೂಪದಲ್ಲಿ, ಬಂದಿರಬಹುದು ಎಂಬುದರ ಬಗ್ಗೆ ಸಂಶಯ ಉಳಿಯಲಿಲ್ಲ। ರಾತ್ರಿ ಅವನ ಕನಸಿನಲ್ಲಿ ಬಂದು ಮೇಲೆ ಅವನ ಮನಸ್ಸಿನಲಲಿಯ ಸಂಶಯವು ದೂರವಾಯಿತು। ಹೀಗಿದೆ ಗಜಾನನ ಮಹಾರಾಜರ ಭಕ್ತವತ್ಸಲತೆ । ಶ್ರೀಗಜಾನನ ಚರಿತ್ರೆ ಪರಮ ಪವಿತ್ರ ಹಾಗೂ ತಾರಕ ಅವಶ್ಯವಿದೆ ಯ ಆದರೆ ಭಕ್ತನಿಗೆ ಅವರಲ್ಲಿ ಶ್ರದ್ಧೆಯಿರುವದು ಅವಶ್ಯಕ। ನಾನು ಈಗ ಈ ಗ್ರಂಥದ ಸಾರಾಂಶವನ್ನು ಹೇಳುವೆನು, ಅದನ್ನು ಶಾಂತಚಿತ್ತದಿಂದ ಕೇಳಿರಿ। ಒಳ್ಳೆಯ ಕಾರ್ಯದಲ್ಲಿ ತಡವೇಕೆ ? ಪ್ರಥಮ ಅಧ್ಯಾಯದಲ್ಲಿ ಮಂಗಳಾಚರಣ ಹಾಡಿ, ದೇವ – ಗುರುವಿಗೆ ವಂದಿಸಿದೆನು। ನಂತರ ಗಜಾನನ ಮಹಾರಾಜರ ಪೂರ್ವ ಚರಿತ್ರೆಯನ್ನು ಹೇಳಿದೆನು । ಮಾಘ ತಿಂಗಳಿನ ಸಪ್ತಮಿಗೆ ಸಮರ್ಥರು ದೇವಿದಾಸನ ಸದನದ ಬಳಿ ಶೇಗಾಂವಿನಲ್ಲಿ ಕಾಣಿಸಿದರು। ಬಂಕಟಲಾಲ ಹಾಗೂ ದಾಮೋದರರು ಚತುರರಾಗಿದ್ದರಿಂದ ಗಜಾನನ ಮಹಾರಾಜರಿಗೆ ಅರಿತರು । ಎರಡನೆಯ ಅಧ್ಯಾಯದ ಕಥೆ ಹೀಗಿದೆ । ಗೋವಿಂದ ಬುವಾರ ಕೀರ್ತನೆಗೆ ಮಹಾರಾಜರು ಬಂದು ಕುಳಿತರು । ಪೀತಾಂಬರ ಸಿಂಪಿಗನಿಗೆ ರಸ್ತೆಯ ಮೇಲೆ ಚಮತ್ಕಾರ ತೋರಿಸಿದರು । ನಂತರ ಮಹಾರಾಜರು ಬಂಕಟಲಾಲನ ಮನೆಗೆ ಹೋದರು । ಸಜ್ಜನರೆ ತೃತಿಯೋಧ್ಯಾಯದಲ್ಲಿ ಗೋಸಾವಿಯು ಸಮರ್ಥರಿಗೆ ಗಾಂಜಾ ಕುಡಿಸುವ ಹರಕೆ ಹೊತ್ತಿದ್ದನು। ಮಹಾರಾಜರು ಅವನ ಇಚ್ಛೆಯನ್ನು ಪೂರ್ಣ ಮಾಡಿದರು ಮತ್ತು ಅಂದಿನಿಂದ ಶೇಗಾಂವಿಯ ಮಠದಲ್ಲಿ ಗಾಂಜಾ ಕುಡಿಯುವ ಪದ್ಧತಿ ಆರಂಭವಾಯಿತು। ಮಹಾರಾಜರು ಪಾದ ತೀರ್ಥವನ್ನು ಕುಡಿಸಿ ಜಾನರಾಮ ದೇಶಮುಖನ ಗಂಡಾಂತರವನು ದೂರ ಮಾಡಿದರು। ಮೃತ್ಯುವಿನ ಪ್ರಕಾರಗಳ ಬಗ್ಗೆ ಮಾಹಿತಿ ಕೊಟ್ಟರು। ಮಹಾರಾಜರಿಂದ ದಾಂಭಿಕ ವಿಠೋಬಾನಿಗೆ ಶಿಕ್ಷೆ ದೊರಕಿತು । ನಾಲ್ಕನೆಯ ಅಧ್ಯಾಯದ ಕಥೆ ಈ ಪ್ರಕಾರವಿದೆ । ಅಕ್ಕ

ಸಾಲಿಗ ಜಾನಕಿರಾಮನು ಮಹಾರಾಜರ ಚಿಲುಮೆಗಾಗಿ ಬೆಂಕಿ ಕೊಡಲಿಲ್ಲ। ಆದ್ದರಿಂದ । ಹುಣಸೇ ಸಾರಲ್ಲಿ ಹುಳ
ಬೀಳುವದರಿಂದ ಬೇಯಿಸಿದ ಅನ್ನವು ವ್ಯರ್ಥವಾಯಿತು । ನಂತರ ಜಾನಕಿರಾಮನು ತಮ್ಮ ತಪ್ಪನ್ನು ತಿಳಿದುಕೊಂಡು
ಕ್ಷಮೆ ಬೇಡಿದನು । ಮಹಾರಾಜರು ಅವನ ಅಪರಾಧವನ್ನು ಕ್ಷಮಿಸಿ ಹುಣಸೆಸಾರವನ್ನು ಮೊದಲಿನಂತೆ ಮಾಡಿದರು ।
ಅಂದಿನಿಂದ ಜಾನಕಿರಾಮನು ಮಹಾರಾಜರ ಭಕ್ತನಾದನು । ಮಡಕೆಯಲ್ಲಿ ಎರಡು ಕಡಬನ್ನು ಇಟ್ಟಿದ್ದನ್ನು ಚಂದು
ಮುಕುಂದನಿಗೆ ಮಹಾರಾಜರು ತಿನ್ನಲು ಕೊಡುವಂತೆ ಹೇಳಿದರು । ಚಿಂಚೋಲಿಯ ಮಾಧವಿಗೆ ಯಮಲೋಕ
ತೋರಿಸಿ ಮಹಾರಾಜರು ಅವನಿಗೆ ಜನ್ಮ ಮೃತ್ಯುವಿನಿಂದ ಮುಕ್ತಗೊಳಿಸಿದರು । ಶಿಷ್ಯರಿಂದ ಬಲು ವಿಜೃಂಭಣೆಯಿಂದ
ವಸಂತ ಪೂಜೆಯನ್ನು ಮಾಡಿಸಿದರು । ಐದನೆಯ ಅಧ್ಯಾಯದಲ್ಲಿ ಮಹಾರಾಜರು ಪಿಂಪಳಗಾಂವಿಗೆ ಬಂದರು ಮತ್ತು
ಶಂಕರ ಮಂದಿರದಲ್ಲಿ ಮಹಾರಾಜರ ಪೂಜೆ ಮಾಡಿದರು ಮತ್ತು ಎರಡನೆಯ ದಿನ ಮಹಾರಾಜರನ್ನು ಆನಂದದಿಂದ
ಜನರು ಪಿಂಪಳಗಾಂವಿಗೆ ಕರೆದುಕೊಂಡು ಹೋದರು । ಬಂಕಟಲಾಲನಿಗೆ ಈ ವಿಷಯ ತಿಳಿದೊಡನೆ ಅವನು
ಮಹಾರಾಜರನ್ನು ಶೇಗಾಂವಿಗೆ ಮರಳಿಕೊಂಡು ಹೋಗಲು ಪಿಂಪಳಗಾಂವಿಗೆ ಬಂದನು। ಸಮರ್ಥರನ್ನು ತಮ್ಮ ಜೊತೆಗೆ
ಕರೆದುಕೊಂಡು ಹೋದನು । ಅಲ್ಲಿ ಕೆಲವು ದಿನ ತಂಗಿ ನಂತರ ಮಹಾರಾಜರು ಅಕೋಲಿನಲ್ಲಿ ಭಾಸ್ಕರನ ಉದ್ಧಾರ
ಮಾಡಲು ಹೋದರು । ಅನೇಕ ವರ್ಷಗಳಿಂದ ಬರಿದಾಗಿರುವ ಭಾವಿಯನ್ನು ಮಹಾರಾಜರು ತಮ್ಮ ಲೀಲೆಯಿಂದ
ಕ್ಷಣಮಾತ್ರದಲ್ಲಿಯೇ ನೀರಿನಿಂದ ತುಂಬಿಸಿದರು। ಮಹಾರಾಜರ ಬಗ್ಗೆ ಭಾಸ್ಕರನ ಮನಸ್ಸಿನಲ್ಲಿರುವ ಎಲ್ಲ ಸಂಶಯವನ್ನು
ಈ ಪ್ರಸಂಗದಿಂದ ದೂರ ಮಾಡಿ, ಅವನನ್ನು ತಮ್ಮ ಭಕ್ತನಾಗಿ ಪರಿವರ್ತಿಸಿ ಅವನನ್ನು ತಮ್ಮ ಜೊತೆಗೆ ಶೇಗಾಂವಿಗೆ
ತಂದರು ಈ ಕಥೆ ಐದನೆಯ ಅಧ್ಯಾಯದಲ್ಲಿದೆ। ಆರನೆಯ ಅಧ್ಯಾಯದಲ್ಲಿ ಕೂಡಾ ಹೀಗೆ ಕಥೆಯಿದೆ। ಬಂಕಟಲಾಲನು
ಮಹಾರಾಜರಿಗೆ ತೆನೆಯನ್ನು ತಿನ್ನಿಸಲು ತಮ್ಮ ಹೊಲಕ್ಕೆ ಕರೆದುಕೊಂಡು ಹೋದನು। ಹೊಗೆಯಿಂದ, ಹುಣಸೆ ಮರದ
ಜೇನು ಹುಳಗಳು ಕೆಳಗೆ ಕುಳಿತ ಜನರ ಮೇಲೆ ನುಗ್ಗಿದವು। ಹೆದರಿ ಜನರು ದಿಕ್ಕಾಪಾಲಾದರು। ಆದರೆ ಜೇನುಹುಳಗಳು
ಮಹಾರಾಜರಿಗೆ ಏನೂ ಮಾಡಲಿಲ್ಲ । ಈ ಪ್ರಸಂಗದಿಂದ ಮಹಾರಾಜರು ಬಂಟಕಲಾಲನ ಶಿಷ್ಯತ್ವದ ಪರೀಕ್ಷೆ
ಮಾಡಿದರು। ನರಸಿಂಗಜಿಗೆ ಭೆಟ್ಟಿಯಾಗಲು ಸ್ವಾಮಿ ಅಕೋಟಕ್ಕೆ ಹೋದರು। ನರಸಿಂಗಜಿ ಕೋತಶಾ ಅಲಿಯ ಶಿಷ್ಯರು। || 222 ||
ಕೆಲವು ದಿನ ಅಕೋಟದಲ್ಲಿದ್ದು, ತಮ್ಮ ಗುರುಬಂಧು ಎಂದು ತಿಳಿದು ನರಸಿಂಗಜಿಯ ಜೊತೆ ಮಾತುಕತೆ ಮಾಡಿದರು।



ಚಂದ್ರಭಾಗಾನದಿ ತೀರದ ಶಿವರನೆಂಬ ಗ್ರಾಮದಲ್ಲಿ ಹೋಗಿ ಬ್ರಜ ಭೂಷಣದ ಮೇಲೆ ಕೃಪೆ ಮಾಡಿದರು। ಶ್ರಾವಣ
ಮಾಸದಲ್ಲಿ ಹನುಮಂತನ ಗುಡಿಯ ಉತ್ಸವಕ್ಕಾಗಿ ಅಲ್ಲಿ ಇರಲು ಮಹಾರಾಜ ಬಂದರು। ಇಲ್ಲಿಗೆ ಆರನೆಯ ಅಧ್ಯಾಯವು
ಮುಗಿಯಿತು । ಶೇಗಾಂವಿಯ ಪಾಟೀಲನ ಅಣ್ಣ ತಮ್ಮಂದಿರು ಬಲಶಾಲಿ ಹಾಗೂ ಸೊಕ್ಕಿನವರಾಗಿದ್ದರಿಂದ ಮಹಾರಾಜ
ರನ್ನು ಕಾಡುತ್ತಿದ್ದರು। ಹರಿ ಪಾಟೀಲನ ಜೊತೆಗೆ ಕುಸ್ತಿ ಅಡಿ, ಎಲ್ಲರಿಗೆ ಮಲ್ಲವಿದ್ಯೆಯ ಪ್ರಚೀತಿ ತೋರಿಸಿದರು। ಕಬ್ಬಿನ
ಚಮತ್ಕಾರದಿಂದ ಪಾಟೀಲ ಬಂಧುಗಳ ಸೊಕ್ಕನ್ನು ಮುರಿದರು । ಖಂಡು ಕಡತಾಜಿ ಪಾಟೀಲನಿಗೆ ಭಕ್ಕಾ ಎಂಬ
ಪುತ್ರನನ್ನು ಕೊಟ್ಟು, ಬ್ರಾಹ್ಮಣರಿಗೆ ಪ್ರತಿ ವರ್ಷ ಮಾವಿನ ರಸದ ಭೋಜನವನ್ನು ತಿನ್ನಿಸುವ ವಚನ ಬೇಡಿಕೊಂಡರು।
ಈ ಕಥೆಯನ್ನು ಏಳನೆಯ ಅಧ್ಯಾಯದಲ್ಲಿ ಇದೇ ರೀತಿ ಕಥೆಗಳಿವೆ । ಪಾಟೀಲ – ದೇಶಮುಖರ ನಡುವೆ ವೈರವಿತ್ತು,
ಆದ್ದರಿಂದ ದೇಶಮುಖನ ಆಜ್ಞೆಯ ಮೇರೆಗೆ ಒಬ್ಬ ಹೊಲಯನು ಪಾಟೀಲನು ವಿರುದ್ಧ ಸರಕಾರದಲ್ಲಿ ಮುಕದ್ದಮೆ
ಮಾಡಿದನು । ಖಂಡು ಪಾಟೀಲನ ಮೇಲೆ ಆರೋಪ ಮಾಡಲಾಗಿತ್ತು। ಸಮರ್ಥ ಕೃಪೆಯಿಂದ ಖಂಡು ಪಾಟೀಲನು
ಆ ಮುಕದ್ದಮೆಯಿಂದ ಹೊರಬಿದ್ದನು । ತೇಲಂಗಿ ಬ್ರಾಹ್ಮಣರಿಗೆ ವೇದ ಗಾಯನ ಮಾಡಿ ತಮ್ಮ ಮಹಿಮೆಯನ್ನು
ಮಹಾರಾಜರು ತೋರಿಸಿದರು । ಕೃಷ್ಣಾಜಿ ಪಾಟೀಲನ ಮನೆಗೆ ಮಹಾರಾಜರು ಬಂದು, ನಂತರ ಶಿವ ಮಂದಿರದ
ಮಂಟಪಕ್ಕೆ ಚಪ್ಪರು ಹಾಕಿಸಿ ಇರತೊಡಗಿದರು । "ನೈನಂ ಛಿಂದಂತಿ" ಎಂಬ ಶ್ಲೋಕದ ಆಧಾರದಿಂದ ಬ್ರಹ್ಮಗಿರಿ
ಸಾಧುವಿನ ಸೊಕ್ಕನ್ನು ಮುರಿದರು । ಬೆಂಕಿ ಹತ್ತಿದ ಮಂಚದ ಮೇಲೆ ಶಾಂತ ಚಿತ್ತದಿಂದ ಕುಳಿತು ಮಹಾರಾಜರು ನಿಜ
ಸಂತನಿಗೆ ಬೆಂಕಿಯು ಸುಡುವದಿಲ್ಲ ಎಂದು ತೋರಿಸಿದರು । ಒಂಭತ್ತನೆಯ ಅಧ್ಯಾಯದ ಕಥೆಯು ಹೀಗಿದೆ ।
ಚಾಕಳಿಕರರ ತುಂಟ ಕುದುರೆಯನ್ನು ದಾರಿಗೆ ತಂದರು । ಬಾಳಾಪುರದ ಇಬ್ಬರು ಸಂತರಿಗೆ ಗಾಂಜಾದ ಹರಕೆಯ ಬಗ್ಗೆ
ಜ್ಞಾಪಕ ಮಾಡಿದರು । ದಾಸ ನವಮಿಯ ಉತ್ಸವದ ಸರಿ–ಸಮಯಕ್ಕೆ ಸಮರ್ಥರು ಬಾಳಾಪುರಕ್ಕೆ ಬಂದರು ಮತ್ತು
ಬಾಳಕೃಷ್ಣ ಕೃಷ್ಣನ ಕೈ ಹಿಡಿದು ಮನೆಯ ಒಳಗೆ ಬಂದರು । ಬಾಳಕೃಷ್ಣನಿಗೆ ಸಮರ್ಥ ರಾಮದಾಸ ಸ್ವಾಮಿಯ ದರ್ಶನ
ಮಾಡಿಸಿ, ರಾಮ ದಾಸ್ಯದ ಬಗ್ಗೆ ನಿಃಶಂಕ ಮಾಡಿದರು । ಹತ್ತನೆಯ ಅಧ್ಯಾಯದ ಕಥೆ ಬಲು ಸುಂದರ । ಇಲ್ಲಿ
ಬಾಳಾಭಾವುಗೆ ಜ್ಞಾನ ಪ್ರಾಪ್ತವಾಯಿತು । ಗಣೇಶ – ಅಪ್ಪಾ ಹಾಗೂ ಚಂದ್ರಾಬಾಯಿ ಪತಿ ಪತ್ನಿಗಳು ಶ್ರೀಗಜಾನನ || 223 ||
ಮಹಾರಾಜರ ಚರಣಗಳಲ್ಲಿ ಭಾವ ಭಕ್ತಿಯಿಂದ ತಮ್ಮ ಸಂಸಾರವನ್ನು ಸಮರ್ಪಿಸಿದರು । ಗಣೇಶ ದಾದಾ ಖಾಪರ್ಡೆಗೆ

ಮಹಾರಾಜರು ಆಶೀರ್ವದಿಸಿದರು। ಬಾಳಾಭಾವುಗೆ ಬಡೆದು ಅವನ ಪರೀಕ್ಷೆ ಮಾಡಿದರು। ಸುಕಲಾಲನ ತುಂಬ ಆಕಳು ಮಹಾರಾಜರ ಕೃಪೆಯಿಂದ ಶಾಂತವಾಯಿತು । ಘುಡೆಯ ದಾಂಭಿಕ ಭಿಕ್ತಿಯನ್ನು ಬಯಲು ಮಾಡಿದರು । ಹನ್ನೊಂದನೆ ಅಧ್ಯಾಯದಲ್ಲಿ ಭಾಸ್ಕರನಿಗೆ ನಾಯಿಯು ಕಚ್ಚಿತು। ಅವನನ್ನು ಜೊತೆಗೆ ಕರೆದುಕೊಂಡು ಮಹಾರಾಜರು ತ್ರೈಂಬಕೇಶ್ವರದ ಗೋಪಾಲದಾಸನಿಗೆ ಭೆಟ್ಟಿಯಾದರು । ಝ್ಯಾಮಸಿಂಗನ ಪ್ರಾರ್ಥನೆಯ ಅನುಸಾರ ಮಹಾರಾಜರು ಅಡಗಾಂವಿಗೆ ಬಂದರು। ಸಮಯಕ್ಕೆ ಅನುಸಾರವಾಗಿ ಭಾಸ್ಕರನು ಸ್ವರ್ಗಕ್ಕೆ ಹೋದನು। ಅವನ ದೇಹವನ್ನು ದ್ವಾರಕೇಶ್ವರದ ಸನ್ನಿಧ ಸತಿಬಾಯಿಯ ಹತ್ತಿರವಿಟ್ಟು ಸಮಾಧಿ ಕಟ್ಟಿಸಿದರು। ಕಾಗೆಗಳಿಗೆ ಈ ಸ್ಥಳಕ್ಕೆ ಬರದಂತೆ ಆಜ್ಞಾಪಿಸಿದರು। ಗಣುಜವರ್‍ಯಾಗೆ ಸುರಂಗದಿಂದ ಬದುಕಿಸಿದರು । ಶೇಠ ಬಚ್ಚುಲಾಲನ ಕಥೆ ಹನ್ನೆರಡನೆಯ ಅಧ್ಯಾಯದಲ್ಲಿದೆ । ಮಹಾರಾಜರು ವಿರಕ್ತ ಜೀವನದ ಪ್ರತಿಮೆಯಂತಿದ್ದರು । ಸಿಂಪಿಗ ಜಾತಿಯ ಪೀತಾಂಬರ ಎಂಬ ಭಕ್ತನು ಮಹಾರಾಜರು ಕೊಟ್ಟ ವಸ್ತ್ರವನ್ನು ಉಟ್ಟಿದ್ದನು । ಅವನು ಸ್ವಇಚ್ಛೆಯಿಂದ ಕೊಂಡೋಲಿ ಊರಿಗೆ ಬಂದನು । ಬಳಿರಾಮನ ಹೊಲದಲ್ಲಿ ಒಣ ಮಾವಿನ ಮರಕ್ಕೆ ಎಲೆ ಹಚ್ಚಿಸಿ ಮಹಾರಾಜು ಚಮತ್ಕಾರ ಮಾಡಿದರು । ನಂತರ ಜನರ ಇಚ್ಛೆಯಂತೆ ಪೀತಾಂಬರನು ಕೊಂಡೋಲಿಯಲ್ಲಿದ್ದು ಅಲ್ಲಿಯೇ ಸಮಾಧಿಸ್ಥನಾದನು । ಮಹಾರಾಜರ ಇಚ್ಛೆಯಂತೆ ಶೇಗಾಂವಿಯಲ್ಲಿ ಹೊಸ ಮಠವು ಸ್ಥಾಪಿಸಲ್ಪಟ್ಟಿತು। ಮಹಾರಾಜರು ಹಳೆಯ ಮಠದಿಂದ ಹೊರಟು, ಉಸುಕಿನ ಬಂಡಿಯ ಮೇಲೆ ಕುಳಿತು, ಹೊಸ ಮಠಕ್ಕೆ ಬಂದರು । ಝ್ಯಾಮಸಿಂಗನು, ಗಜಾನನ ಸ್ವಾಮಿಗೆ ಮುಂಡಗಾಂವಿಗೆ ಕೊಂಡು ಹೋದನು। ಅಲ್ಲಿ ಒಮ್ಮಿಂದೊಮ್ಮಲೇ ಮಳೆಯಿಂದ ಭಂಡಾರದಲ್ಲಿ (ಊಟದಲ್ಲಿ) ಅಡೆತಡೆಯಾಯಿತು । ಝ್ಯಾಮಸಿಂಗನು ತಮ್ಮ ಸಂಪತ್ತನ್ನು ಮಹಾರಾಜರ ಚರಣಗಳಲ್ಲಿ ಅರ್ಪಿಸಿದನು । ಶ್ರೀಕೃಪೆಯಿಂದ ಪುಂಡಲೀಕನ ಪ್ಲೇಗಿನ ಪೀಡೆ ದೂರಾಯಿತು । ಹದಿಮೂರನೆ ಅಧ್ಯಾಯದ ಕಥಾಭಾಗವು ಹೀಗೆದ । ಮಹಾರಾಜರು ಗಂಗಾಭಾರತಿಯ ಮಹಾರೋಗವನ್ನು ಗುಣಮಾಡಿದರು । ಸಮರ್ಥರ ನಿಜ ಕೃಪೆಯಿಂದ ಬಂಡುತಾತ್ಯಾನ ಭಾಗ್ಯವು ಉದಯವಾಯಿತು । ನಂತರ ಅವನಿಗೆ ಹೊಲದಲ್ಲಿ ಹಣವು ಸಿಕ್ಕು, ಅವನು ಸಾಲಮುಕ್ತನಾದನು । ಸೋಮವತಿ ಅಮವಾಸ್ಯೆಗೆ ಮಹಾರಾಜಭಕ್ತರು ನರ್ಮದಾ ಸ್ನಾನಕ್ಕೆ ಹೋದರು। ಆಗ ನಡು ಮಧ್ಯದಲ್ಲಿ ದೋಣಿಗೆ ತೂತು ಬಿದ್ದು, ನೀರು ಒಳಗೆ ಸೇರತೊಡಗಿತು, ಆಗ ನರ್ಮದಾ ಮಾತೆ ಅವರನ್ನು ಉಳಿಸಿದಳು । ವೀಳ್ಯದೆಲೆಯನ್ನು ಶಿಷ್ಯನ ಜೊತೆಗೆ ಮಾಧವನಾಥನಿಗೆ ಕಳುಹಿಸಿದರು । ಈ ಕಥೆ ಹದಿನಾಲ್ಕನೆಯ





ಅಧ್ಯಾಯದಲ್ಲಿದೆ । ಹದಿನೈದನೆಯ ಅಧ್ಯಾಯದಲ್ಲಿ ಶಿವಜಯಂತಿಯ ಮಹೋತ್ಸವದ ವರ್ಣನೆಯಿದೆ । ಅದಕ್ಕಾಗಿ ಲೋಕಮಾನ್ಯ ಬಾಳಗಂಗಾಧರ ಟಿಳಕರು ಅಕೋಲಾಗೆ ಬಂದರು। ಜೋಳದ ರೊಟ್ಟಿಯ ಪ್ರಸಾದವನ್ನು ಕೊಲ್ಹಟಕರರ ಜೊತೆಗೆ ಮಹಾರಾಜರು ಲೋಕಮಾನ್ಯರಿಗಾಗಿ ಮುಂಬೈಗೆ ಕಳುಹಿಸಿದರು। ಶ್ರೀಧರ ಗೋವಿಂದ ಕಾಳೆಗೆ ಮಹಾರಾಜ ಪರದೇಶಕ್ಕೆ ಹೋಗುವ ವಿಚಾರವನ್ನು ಬಿಟ್ಟು ಬಿಡುವಂತೆ ಉಪದೇಶಿಸಿದರು । ಏಕೆಂದರೆ ಎಲ್ಲವೂ ಇಲ್ಲಿದೆ । ಹದಿನಾರನೆಯ ಅಧ್ಯಾಯದಲ್ಲಿ ಪುಂಡಲೀಕನಿಗೆ ಮಹಾರಾಜರು ಕನಸಿನಲ್ಲಿ ಬಂದು ಅಂಜನಗಾಂವಿಗೆ ಹೋಗದಂತೆ ಹೇಳಿದರು । ಝ್ಯಾಮಸಿಂಗನ ಜೊತೆಗೆ ಪುಂಡಲೀಕನಿಗಾಗಿ ಪಾದುಕೆಗಳನ್ನು ಕಳುಹಿಸಿದರು । ಭಾವು ಕವರನ ರೊಟ್ಟಿ–ಪಲ್ಯೆಯನ್ನು ಮಹಾರಾಜರು ಆನಂದ ಚಿತ್ತದಿಂದ ತಿಂದು ಅವನ ಇಚ್ಛೆಯನ್ನು ಪೂರ್ಣಗೊಳಿಸಿದರು ತುಕಾರಮನ ಕಿವಿಯಿಂದ ಗುಂಡನ್ನು ತೆಗೆದ ಕಥೆ, ಹದಿನಾರನೆಯ ಅಧ್ಯಾಯದಲ್ಲಿದೆ। ಹದಿನೇಳನೆಯ ಅಧ್ಯಾಯದಲ್ಲಿ ಸುಂದರ ಕಥೆಗಳಿವೆ । ಮಲಕಾಪುರದ ವಿಷ್ಣುಸಾನ ಮನೆಗೆ ಹೋಗಲು ಅವರು ರೈಲಿನಿಂದ ಹೊರಟರು । ಅವರು ನಗ್ನರಾಗಿ ತಿರುಗಾಡುವರು ಎಂಬ ಆರೋಪ ಮಾಡಿ ಪೋಲಿಸನು ಕೇಸು ಮಾಡಿದನು। ಇದರ ಹಿಂದೆ ಸತ್ಪುರುಷರಿಗೆ ಕಷ್ಟ ಕೊಡುವದೇ ಕಾರಣವಾಗಿತ್ತು। ಹಿಂದೂ ಧರ್ಮದ ಬಗ್ಗೆ ಸರಿಯಾದ ಉಪದೇಶ ಕೊಟ್ಟು ಮಹಾತಾಬಷಾಗೆ ಪಂಜಾಬಿಗೆ ಕಳುಹಿಸಿದರು। ಬಾಪುರಾವನ ಪತ್ನಿಯ ಭಾನುಮತಿ ಪೀಡೆಯನ್ನು ದೂರಗೊಳಿಸಿದರು। ಅಕೋಟ ಊರಿನ ಬಾವಿಯಲ್ಲಿ ಮಹಾರಾಜರು ಗಂಗಾ ಭಾಗಿರಥಿಯ ದರ್ಶನ ಮಾಡಿಸಿದರು । ಹದಿನೆಂಟನೆಯ ಅಧ್ಯಾಯದಲ್ಲಿ ಬಾಯಜಾಳ ಕಥೆಯಿದೆ। ಕವರ ಡಾಕ್ಟರನ ಹುಣ್ಣಿನ ಕಥೆ ಈ ಅಧ್ಯಾಯದಲ್ಲಿದೆ। ಕವಠೆ ಬಹಾದೂರನ ಯಾತ್ರಿಕನು ಪ್ಲೇಗಿನಿಂದ ಪೀಡಿತನಿದ್ದನು । ಮಹಾರಾಜರು ಕ್ಷಣ ಮಾತ್ರದಲ್ಲಿ ಅವನಿಗೆ ಸಹಿ ಮಾಡಿದರು । ಸತ್ತ ನಾಯಿಯನ್ನು ಜೀವಿತಗೊಳಿಸಿ, ಕರ್ಮಠ ಬ್ರಾಹ್ಮಣನ ಅಭಿಮಾನವನ್ನು ಕೊನೆಗೊಳಿಸಿದರು । ಹತ್ತೊಂಬತ್ತನೆಯ ಅಧ್ಯಾಯದಲ್ಲಿ ಕಾಶಿನಾಥ ಪಂತನ ಮೇಲೆ ಆನಂದಿತರಾಗಿ ಮಹಾರಾಜರು ಆಶೀರ್ವಾದ ಕೊಟ್ಟರು। ಗೋಪಾಳ ಮುಕುಂದ ಬುಟಿಯು ಮಹಾರಾಜರನ್ನು ನಾಗಪುರಕ್ಕೆ ತಂದನು । ಮಹಾರಾಜರು ತಮ್ಮ ಮನೆಯಲ್ಲಿಯೇ ಸದೈವ ಇರಬೇಕೆಂಬ ಇಚ್ಛೆಯಿತ್ತು। ಆದರೆ ಹರಿ ಪಾಟೀಲ ಮಹಾರಾಜರಿಗೆ ಶೇಗಾಂವಿಗೆ ಮರಳಿ ಕರೆ ತಂದನು । ಧಾರ ಕಲ್ಯಾಣದ ರಂಗನಾಥ ಸಾಧು, ಮಹಾರಾಜರಿಗೆ ಭೆಟ್ಟಿಯಾಗಲು ಶೇಗಾಂವಿಗೆ ಬಂದರು । ಹೀಗೆ ಅನೇಕರು ಯಾವಾಗಲೂ ಬಂದು ಹೋಗುತ್ತಿದ್ದರು।

ಶ್ರೀವಾಸುದೇವಾನಂದ ಸರಸ್ವತಿ, ಕರ್ಮಮಾರ್ಗದ ಸಾಕ್ಷಾತ್ ಮೂರ್ತಿ, ಇಬ್ಬರೂ ದೃಷ್ಟಿ ಭೆಟ್ಟಿಯಿಂದಲೇ ಆನಂದಿತರಾದರು ಬಾಳಾಭಾವುನ ಮನಸ್ಸಿನಲ್ಲಿ ಸಂಶಯ ಉಂಟಾದಾಗ, ಮಹಾರಾಜರು ಉಪದೇಶ ಮಾಡಿ ಸಂಶಯ ದೂರ ಮಾಡಿದರು । ಕತ್ತೆಗಳಿಂದ ಹೊಲದ ರಕ್ಷಣೆ ಮಾಡಿದರು । ಸಮರ್ಥರಿಗೆ ಬಡೆದದ್ದರಿಂದ ನಾರಾಯಣ ಹವಾಲದಾರನ ಮೃತ್ಯು ಆಯಿತು । ಗಜಾನನ ಮಹಾರಾಜರ ಕೃಪೆಯಿಂದ ಜಾಖಡೆಯ ಮದುವೆಯಾಯಿತು । ಕಪಿಲಧಾರೆಯಲ್ಲ ನಿರ್ಮೋಣಕರರಿಗೆ ಮಹಾರಾಜರ ದರ್ಶನ ಕೊಟ್ಟರು । ತುಕಾರಾಮನು ತಮ್ಮ ಪುತ್ರನಾರಾಯಣನಿಗೆ ಮಠದಲ್ಲಿ ಸೇವೆ ಮಾಡಲು ಮಹಾರಾಜರಿಗೆ ಅರ್ಪಿಸಿದನು । ಪಂಢರಪುರಕ್ಕೆ ಹೋಗಿ ಪಾಂಡುರಂಗನ ಅನುಜ್ಞೆಯನ್ನು ಪಡೆದು ಮಹಾರಾಜರು ಶೇಗಾಂವಿಗೆ ಮರಳಿದರು । ನಂತರ ಭಾದ್ರಪದ ತಿಂಗಳಿನ ಋಷಿ ಪಂಚಮಿಯ ದಿನ ಈ ಆಧುನಿಕ ಯುಗದ ಋಷಿಯು ಶೇಗಾಂವಿಯಲ್ಲಿ ಸಮಾಧಿಸ್ಥನಾದನು । ಇಪ್ಪತ್ತನೆಯ ಅಧ್ಯಾಯದಲ್ಲಿ ಮಹಾರಾಜರ ಶರೀರವು ವಿಸರ್ಜಿತವಾದ ನಂತರವೂ ಕೂಡಾ, ಶ್ರೀ ಸಮಾಧಿಸ್ಥರಾದ ನಂತರ ಮಾಡಿದ ಚಮತ್ಕಾರಗಳ ವರ್ಣನೆಯಿದೆ । ಅವರ ಚೈತನ್ನ ಪ್ರಭೆಯು ಇಂದಿಗೂ ಶೇಗಾಂವಿಯಲ್ಲಿದೆ, ಎಂಬುದರ ಪ್ರಮಾಣವು ಇಂದಿಗೂ ಭಕ್ತರಿಗೆ ದೊರಕುತ್ತಿದೆ । ಯಾವ ಭಾವಿಕ ಭಕ್ತರು ಮಹಾರಾಜರ ಬಗ್ಗೆ ಶ್ರದ್ಧೆ ಇಡುವರೋ, ಅವರಿಗೆ ಮಹಾರಾಜರು ದರ್ಶನ ಕೊಡುವರು ಮತ್ತು ಅವರ ಇಚ್ಛೆಯನ್ನು ಪೂರ್ಣಗೊಳಿಸುವರು । ಈ ಇಪ್ಪತ್ತೊಂದನೆಯ ಅಧ್ಯಾಯವು ಎಲ್ಲ ಅಧ್ಯಾಯಗಳ ಕಲಶ ಹಾಗು ಎಲ್ಲ ಕಥೆಗಳ ವರ್ಣನೆಗಳ ಪ್ರಮಾಣವು ಇಂದಿಗೂ ಬರುವದು, ಆದ್ದರಿಂದ ಈ ಅಧ್ಯಾಯಕ್ಕೆ ಈ ಗ್ರಂಥದ ಸಾರಾಂಶವೆನ್ನಲಾಗಿದೆ । ಜನರು ಕೊಟ್ಟ ಆರ್ಥಿಕ ಸಹಾಯದಿಂದ, ಸಮಾಧಿ ಮಂದಿರದ ಭವ್ಯ ವಾಸ್ತುವು ಸಾಕಾರವಾಗಿದೆ । ಚಂದಾ ಕೂಡಿಸುವ ಕಾರ್ಯವನ್ನು ಎಲ್ಲ ಭಕ್ತರು ಆನಂದದಿಂದ ಮಾಡಿದರು । ಇಂತಹ ಸುಂದರ ಹಾಗೂ ವಿಶಾಲ ಮಂದಿರವು ಎಲ್ಲಿಯೂ ಕಾಣಿಸುವದಿಲ್ಲ । ಮಂದಿರದ ಸುತ್ತಮುತ್ತಲು ಧರ್ಮಶಾಲೆಯನ್ನು ಕಟ್ಟಿಸುವದರಿಂದ ಭಕ್ತರಿಗೆ ಉಪಯೋಗವಾಯಿತು । ಈ ಭವ್ಯ ಮಂದಿರದ ನಿರ್ಮಾಣದಲ್ಲಿ ಸಹಾಯ ಮಾಡಿದ ಸಾವಿರಾರು ಜನರ ಹೆಸರುಗಳನ್ನು ಬರೆದರೆ ಈ ಗ್ರಂಥದ ವಿಸ್ತಾರವು ದೊಡ್ಡದಾಗುವದು । ಅವರಲ್ಲಿರುವ ಪ್ರಮುಖ ಹೆಸರುಗಳು ಹೀಗಿವೆ । – ಕುಕಾಜಿಯ ಪುತ್ರ, ಹೆಸರು ಹರಿ ಪಾಟೀಲ । ಸಾಂಗವಿ ಊರಿನ ಬನಾಜಿ । ಉಮರಿಯ ಗಣಾಜಿ । ಬಟವಾಡಿಯ ಮೆಸಾಜಿ । ಲಾಡೆಗಾಂವಿಯ ಗಂಗಾರಾಮ । ಭಾಗು, ನಂದು, ಗುಜಾಬಾಯಿ । ಅಕೋಲಾದ ಬನಾಬಾಯಿ







– ಸುಕದೇವ ಪಾಟೀಲನ ತಾಯಿ । ಈ ಭಕ್ತರು ಸಾವಿರಾರು ರೂಪಾಯಿ ಕೊಟ್ಟರು । ಪಾಟೀಲ ರಾಮಚಂದ್ರ ಕೃಷ್ಣಾಜಿ ದತ್ತು ಭಿಕಾಜಿ । ಪಳಸಖೇಡದ ಸುಖದೇವ । ಶೇಗಾಂವಿಯ ಮಾರ್ತಂಡ ಗಣಪತಿ । ಬಾಲಚಂದನ ರತನಲಾಲ । ಪಂಚಗವ್ಹಾಣದ ದತ್ತುಲಾಲ । ಅದೇ ಊರಿನ ಕಿಸನಲಾಲ । ಟಾಕಲಿಯ ಅಂಬರಸಿಂಗ । ಕಿಸನ ಬೆಲಮಂಡಳಿಕರ । ವಿಠೋಬಾ ಪಾಟೀಲ ಚಾವರೆಕರ । ಹಸನಾಪೂರದ ಗಂಗಾರಾಮ । ಇವರೆಲ್ಲರೂ ಮಹಾರಾಜರ ಪ್ರತಿ ದಢ ಭಕ್ತಿ ಇರುವದರಿಂದ ಮುಕ್ತ ಹಸ್ತದಿಂದ ದಾನ ಮಾಡಿದರು ಅದರಿಂದ ಮಠ ಹಾಗೂ ಸಮಾಧಿ ಮಂದಿರವು ನಿರ್ಮಾಣವಾಯಿತು । ಉಗ್ರಾಣ, ಕಚೇರಿ, ಅಡಿಗೆ ಮನೆ ಆದಿಗಳು ಮಂದಿರದ ಹತ್ತಿ ಇವೆ । ಜನರಿಂದ ಕೂಡಿಸಿದ ಹಣವು ಮಂದಿರದ ನಿರ್ಮಾಣದಲ್ಲಿಯೇ ಮುಗಿಯಿತು । ಇನ್ನೂ ಬಹಳ ಕೆಲಸವು ಉಳಿದಿತ್ತು । ಆದ್ದರಿಂದ ಹಣವನ್ನು ಕೂಡಿಸಲು ಒಂದು ಆಣೆ ಚಂದಾ ಕೂಡಿಸುತ್ತಿದ್ದರು । ಅದರ ಉಪಯೋಗವನ್ನು ಧಾರ್ಮಿಕ ಕಾರ್ಯಗಳಿಗೆ ಮಾಡಲಾಗುವದು । ಆದ್ದರಿಂದ ರೈತರಿಗೆ ಅದನ್ನು ಕೊಡಲು ವಿರೋಧವಿರಲಿಲ್ಲ । ಮಾರುಕಟ್ಟೆಗೆ ರೈತರು ಕೊಂಡು ಹೋಗುವ ಪ್ರತಿಯೊಂದು ಬಂಡಿಯ ಹಿಂದೆ ಅರ್ಧ ಆಣೆ ವಸೂಲು ಮಾಡುತ್ತಿದ್ದರು । ಎಲ್ಲರಿಗೆ ಮಹಾರಾಜರ ಬಗ್ಗೆ ನಿಷ್ಠೆ ಇರುವದರಿಂದ, ಆನಂದದಿಂದ ಎಲ್ಲರೂ ಹಣ ಕೊಡುತ್ತಿದ್ದರು । ಸಮಾಧಿಯ ಮುಂದೆ ಅನೇಕ ಯಜ್ಞಗಳು ನಡೆಯುತ್ತಿದ್ದವು । ಅವುಗಳಲ್ಲಿ ನಾಲ್ಕು ಎಲ್ಲರಿಗೆ ಗೊತ್ತಿವೆ । ಕಿಸನಲಾಲ ಸೇಠಜಿಯು ಬ್ರಾಹ್ಮಣರಿಂದ ಶತಚಂಡಿಯ ಅನುಷ್ಠಾನ ಮಾಡಿಸಿದನು । ಈ ಶತಚಂಡಿ ಅನುಷ್ಠಾನದ ವಿಧಿಯು ಬಲು ಕಠಿಣ । ಜಗದಂಬಾ ಕಾಲಿಕಾ ಮಾತೆಗೆ ಈ ಅನುಷ್ಠಾನದಲ್ಲಿ ಏನೇ ಕೊರತೆ ಇದ್ದರೆ ಅದರ ಫಲವು ವಿಪರೀತವಾಗುತ್ತದೆ । ಏಕೆಂದರೆ ಕಾಮ್ಯ ಅನುಷ್ಠಾನಗಳಲ್ಲಿ ಯಾವಾಗಲೂ ಭಯವಿರುತ್ತದೆ । ಕಿಸನಲಾಲನ ತಂದೆ ಬಂಕಟಲಾಲ । ಅವನು ಮೊದಲಿನಿಂದಲೇ ಮಾಹಾರಾಜರ ಪರಮಭಕ್ತನಿದ್ದನು । ಶತಚಂಡಿ ಅನುಷ್ಠಾನದ ಪೂರ್ಣಾಹುತಿಯ ದಿನ ಬಂಕಟಲಾಲ ಶರೀರದಲ್ಲಿ ವ್ಯಾಧಿ ಉಂಟಾಯಿತು । ಅವನು ಕೊನೆಯುಸಿರೆಳೆಯುತ್ತಿದ್ದನು । ಈ ವಿಘ್ನವನ್ನು ನೋಡಿ ಕಿಸನಲಾಲ ಮತ್ತು ಅವನ ಪರಿವಾರದವರು ಹೆದರಿದರು । ಈ ಶಕಚಂಡಿಯ ಅನುಷ್ಠಾನ ಮಾಡುವಾಗ ಈ ವಿಘ್ನವು ಹೇಗೆ ಉಂಟಾಯಿತು ? ಎಂದು ಯೋಚಿಸ ತೊಡಗಿದರು । ಆದರೆ ಬಂಕಟಲಾಲನು ಪುತ್ರನಿಗೆ ಹೇಳಿದನು ನನ್ನ ಬಗ್ಗೆ ಚಿಂತೆ ಮಾಡಬೇಡ । ನನ್ನನ್ನು ಕಾಪಾಡುವರು ಸಮಾಧಿಯಲ್ಲಿರುವರು । ಅವರು ನನ್ನನ್ನು ರಕ್ಷಿಸುವರು, ನೀನು ಚಿಂತಿಸಬೇಡ । ಪೂರ್ಣಾಹುತಿಯ ಕಾರ್ಯವು ಶಾಸ್ತ್ರಶುದ್ಧ

ರೀತಿಯಿಂದ ಮಾಡಿರಿ । ಸ್ವಾಮಿ ಗಜಾನನ ಮಹಾರಾಜರು ಈ ಮಂಗಲ ಪ್ರಸಂಗದಲ್ಲಿ ವಿಘ್ನ ಬರದಂತೆ ನೋಡಿಕಳ್ಳುವರು, ಈ ಮಾತಿನಲ್ಲಿ ಶ್ರದ್ಧೆ ಇಡಿರಿ । ಭಕ್ತರನ್ನು ರಕ್ಷಿಸಲು ಮಹಾರಾಜರು ಇಲ್ಲಿ ಕುಳಿತರುವರು । ಬಂಕಟಲಾಲನ ಮಾತು ಸತ್ಯವಾಯಿತು । ಅವನು ಕೆಲವು ದಿನಗಳಲ್ಲಿಯೇ ವ್ಯಾಧಿ ಮುಕ್ತನಾದನು । ಈ ಶತಚಂಡಿಯ ಅನುಷ್ಠಾನದಿಂದ ಒಬ್ಬ ಸ್ತ್ರೀಯ ಭೂತಬಾಧೆ ದೂರವಾಯಿತು । ಬನಾಜಿ ತಿಡಕೆ ಸಾಂಗವಿಕರನು ಸ್ವಾಹಾಕಾರ ಮಾಡಿದನು । ಕಸುರ್ಖ್ಯಾದ ಗುಜಾಬಾಯಿ ಮತ್ತು ಚಾಪಡಗಾಂವಿನ ಶ್ಯಾಮರಾವನ ಪುತ್ರ ವಾಮನ ಆದಿ ಇಬ್ಬರೂ ಮಹಾರಾಜರ ಸಮಾಧಿಯ ಮುಂದೆ ಯಜ್ಞ ಮಾಡಿದರು । ಇದೇ ರೀತಿ ಅನೇಕ ಧಾರ್ಮಿಕ ಕೃತ್ಯಗಳು ಸಮಾಧಿಯ ಮುಂದೆ ನಡೆದವು । ನಿಜವಾಗಿ ಗಜಾನನ ಮಹಾರಾಜರು ಸಾಕ್ಷಾತ್ಕಾರಿ ಯೋಗಿರಾಜರು । ಎಲ್ಲಿಯವರೆಗೆ ಜನರು ನಿಷ್ಠಾವಂತರಿದ್ದರೋ ಅಲ್ಲಿಯವರೆಗೆ ವರ್ಹಾಡ ಪ್ರಾಂತದಲ್ಲಿ ಸುಖ ಸಮೃದ್ಧಿ ಇತ್ತು। ಆದರೆ ದೇವರ ಮೇಲಿನ ನಿಷ್ಠೆ ಕಡಿಮೆಯಾಗಿದ್ದರಿಂದ ಜನರಿಗೆ ವಿಪತ್ತಿ ಉಂಟಾಯಿತು; ಮತ್ತು ದುರ್ದೈವವು ವರ್ಹಾಡ ಪ್ರಾಂತದ ಕೊರಳಿನಲ್ಲಿ ದಾರಿದ್ರ್ಯದ ಮಾಲೆಯನ್ನು ಹಾಕಿತು; ಮತ್ತು ಭೂಮಾತೆಯು ಹೆಚ್ಚು ಧಾನ್ಯವನ್ನು ಕೊಡುವದನ್ನು ನಿಲ್ಲಿಸಿದಳು । ಸಂಪೂರ್ಣ ವರ್ಹಾಡ ಪ್ರಾಂತದಲ್ಲಿ ಹೊಸ ಕಾಲವು ಬಂದಿತು । ವರ್ಹಾಡ ಪ್ರಾಂತದ ಸ್ಥಿತಿ ಮಹಾರಾಜರಿಂದ ನೋಡಲಾಗದೆ, ಅವರು ತಮ್ಮನ್ನು ನೀರಿನಲ್ಲಿ ಮುಳುಗಿಸಿದರು । ಮೂವತ್ತು ಫೂಟು ಆಳ ಅಗೆದ ನಂತರ ನೀರು ಕಾಣಿಸುತ್ತಿತ್ತು। ಮಹಾರಾಜರಿಗೆ ಸಿಟ್ಟು ಬಂದಿದೆ, ಮತ್ತು ಎಲ್ಲ ಕಡೆಗೆ ನೀರನ್ನು ಮಾಡಿರುವರು ಎಂದು ಕಾಣುತ್ತಿತ್ತು। ವರ್ಹಾಡ ಪ್ರಾಂತದ ಜನತೆ ಮೊದಲಿನಂತೆ ಸುಖ ಸಮೃದ್ಧಿಯನ್ನು ಬೇಡುತ್ತಿದ್ದರೆ, ಎಲ್ಲರಿಗೆ ಶ್ರೀ ಗಜಾನನ ಮಹಾರಾಜರ ಪ್ರತಿ ಮೊದಲಿನಂತೆ ನಿಷ್ಠೆ ಇಟ್ಟರೆ, ಆನಂದದಿಂದ ನಿದ್ದೆ ಮಾಡಬಹುದು । ಒಂದು ವೇಳೆ ಹೀಗೆ ಮಾಡದಿದ್ದರೆ ವರ್ಹಾಡ ಪ್ರಾಂತದ ಸ್ಥಿತಿಯು ಇನ್ನೂ ಕೆಡುವದು । ಈ ಮಾತಿನ ಬಗ್ಗೆ ಜನರು ವಿಚಾರ ಮಾಡಬೇಕು । ಆದ್ದರಿಂದ ಗಜಾನನ ಪಾದಪದ್ಮಗಳಲ್ಲಿ ನಿರಂತರ ಶ್ರದ್ಧೆ ಇಟ್ಟು ಸುಖದ ಅನುಭವ ಮಾಡಿರಿ । ಈ ಮಾತಿನಲ್ಲಿ ಯಾರಿಗೂ ಸಂಶಯವಿರಬಾರದು । ಈ ಗಜಾನನ ರೂಪಿ ನೆಲದಲ್ಲಿ ಬೀಜ ಬಿತ್ತಿದರೆ, ಅದು ಇಮ್ಮಡಿಯಾಗಿ ತಮಗೆ ಹಿಂದಕ್ಕೆ ಸಿಗುವದು । ಕಲ್ಲಿನ ಮೇಲೆ ಬೀಜ ಬಿತ್ತಿ, ಏನೂ ಪ್ರಯೋಜನವಿಲ್ಲ ಎಂಬುದನ್ನು ಮರೆಯದಿರಿ । ಯಾವ ಭೂ ಭಾಗದಲ್ಲಿ ಸಂತ ಸೇವೆಯ ಬಗ್ಗೆ ರುಚಿ ಇರುವದಿಲ್ಲವೋ, ಅಲ್ಲಿ ಅಕಾಲವು ನಿಶ್ಚಿತವಾಗಿ ಬೀಳುವದು, ಎಂಬುದನ್ನು ಜ್ಞಾಪಕದಲ್ಲಿಡಿ । ಮನಸ್ಸುರೂಪಿ






ಕಿಂಡಿಯಿಂದ ಧರ್ಮರೂಪಿ ಶ್ರದ್ಧೆಯು ಹೊರಟು ಹೋದರೆ ವ್ಯಸನಗಳ ರಾಕ್ಷಸನು ಅಲ್ಲಿ ಮನೆ ಮಾಡುವನು । ಭಕ್ತಿಯು ಶುದ್ಧ ಅಂಗನೆಯಾದರೆ, ಅಭಕ್ತಿಯ ವಾರಾಂಗನೆ ! ಅಭಕ್ತಿಯಿಂದ ಇಲ್ಲಿಯವರೆಗೆ ಯಾರದೂ ಒಳ್ಳೆಯದಾಗಿಲ್ಲ । ಆದ್ದರಿಂದ ನೀತಿಯ ಕೈ ಹಿಡಿದು, ಧರ್ಮ, ಭಗವಂತನಿಗೆ ಎಂದಿಗೂ ಬಿಡಬಾರದು । ಯಾರಿಗೂ ಶತ್ರು ಎಂದು ತಿಳಿಯದೇ, ಎಲ್ಲರಿಗೂ ತಮ್ಮಂದಿರೆಂದು ತಿಳಿದು ಒಳ್ಳೆಯ ವರ್ತನೆ ಮಾಡಬೇಕು । ಆಗ ಶಕ್ತಿಯು ಹೆಚ್ಚಾಗುವದು । ಒಂದು ವೇಳೆ ಜನರು ಶುದ್ಧಾಚರಣದಿಂದ ಇದ್ದರೆ, ವರ್ಹಾಡ ಪ್ರಾಂತಕ್ಕೆ ಒಳ್ಳೆಯ ದಿನಗಳು ಬರುವವು, ಎಂಬುದನ್ನು ಮರೆಯದಿರಿ । ಕೊನೆಯ ಪಕ್ಷ ವರ್ಷದಲ್ಲಿ ಒಂದು ಸಲ ಶೇಗಾಂವಿಗೆ ಬಂದು ಮಹಾರಾಜರ ದರ್ಶನ ಪಡೆಯಬೇಕು। ವರ್ಷದಲ್ಲಿ ಒಂದು ಸಲ ಶ್ರೀ ಗಜಾನನ ಮಹಾರಾಜರ ಚರಿತ್ರೆಯ ಪಾರಾಯಣ ಮಾಡಬೇಕು । ಈ ಇಪ್ಪತ್ತೊಂದು ಅಧ್ಯಾಯಗಳ ಶ್ರೀ ಗಜಾನನ ವಿಜಯ ಎಂಬ ಗ್ರಂಥರೂಪಿ ಇಪ್ಪತ್ತೊಂದು ಮೋದಕಗಳನ್ನು ಪ್ರಸಾದವಾಗಿ ಮಹಾರಾಜರಿಗೆ ಅರ್ಪಿಸಬೇಕು । ಅಥವಾ ಇಪ್ಪತ್ತೊಂದು ಅಧ್ಯಾಯಗಳ ಪಾರಾಯಣ ಮಾಡಿ, ಇಪ್ಪತ್ತೊಂದು ಕರಕಿಯನ್ನು ಮಹಾರಾಜರ ಚರಣಗಳಲ್ಲಿ ಸಮರ್ಪಿಸಿ । ಸದ್ ಭಾವದಿಂದ ಅದನ್ನು ಚತುರ್ಥಿಯ ದಿನ ತಿಳಿದು, ಆ ಪ್ರೇಮರೂಪಿ ಚಂದ್ರನ ಉದಯ ಮಾಡಬಹುದು । ಹೇ ಸಜ್ಜನರೆ, ಈ ಗ್ರಂಥದ ಪ್ರತಿ ಅಕ್ಷರವನ್ನು ಕರಕಿಯೆಂದು ತಿಳಿದು, ಮತ್ತು ಶಬ್ದದ ಅರ್ಥವನ್ನು ಮೋದಕವೆಂದು ತಿಳಿಯಿರಿ । ಅದನ್ನು ಶ್ರೀ ಗಜಾನನ ಮಹಾರಾಜರಿಗೆ ಅರ್ಪಿಸಿ ಪಾರಾಯಣ ರೂಪಿ ಪುಣ್ಯಾಹವಾಚನವನ್ನು ಮಾಡಿರಿ । ಈ ಶುಭ ಕಾರ್ಯಕ್ಕೆ ತಡ ಮಾಡದಿರಿ । ಈ ಗ್ರಂಥವನ್ನು ಕಲ್ಪಿತ ಕಥೆ ಅಥವಾ ಉಪನ್ಯಾಸವೆಂದು ತಿಳಿಯದಿರಿ । ಅವುಗಳು ಮಹಾರಾಜರ ಲೀಲೆಗಳು । ಇವುಗಳ ಬಗ್ಗೆ ಯಾರಿಗೆ ಸಂದೇಹ ಬಂದರೆ ಅವನು ಅವಶ್ಯವಾಗಿ ನಾಶಹೊಂದುವನು । ಶ್ರೀ ಗಜಾನನ ಸ್ವಾಮಿ ಚರಿತ್ರೆಯನ್ನು ಯಾರು ನಿಯಮಿತವಾಗಿ ಓದುವರೋ, ಅವರಿಗೆ ಮಹಾರಾಜರ ಕೃಪೆಯಿಂದ ಫಲಪ್ರಾಪ್ತಿಯಾಗುವದು । ಈ ಗಜಾನನ ಚರಿತ್ರೆಯು ಭಾಗಿರಥಿಯಂತೆ, ಕಥೆಗಳು ನೀರಾಗಿದ್ದರೆ, ಶ್ಲೋಕಗಳು ನೀರಿನ ಮೇಲಿನ ತರಂಗಗಳಂತೆ । ಈ ಸ್ವಾಮಿ ಚರಿತ್ರೆಯು ಕಲ್ಪವೃಕ್ಷ ಹಾಗೂ ಅಧ್ಯಾಯಗಳು ಟೊಂಗೆಗಳಂತೆ । ಪದ್ಯ ರಚನೆಯು ವೃಕ್ಷದ ಚಿಗುರಿನಂತಿದೆ । ಯಾರು ಈ ಗ್ರಂಥದಲ್ಲಿ ದೃಢ ವಿಶ್ವಾಸವಿಡುವರೋ ಅವರಿಗೆ ಸ್ವಾಮಿಗಳು ವಿಪತ್ತಿಯಿಂದ ದೂರ ಮಾಡಿ, ಪ್ರಸನ್ನರಾಗುವರು । ಈ ಗ್ರಂಥಕ್ಕೆ ಚಿಂತಾಮಣಿಯೆಂದು ತಿಳಿಯಿರಿ । ಇದರಿಂದ ಇಚ್ಛೆಗಳು ಪೂರ್ಣವಾಗುವವು । ಇದರ ಮೇಲೆ ನಿತ್ಯಶ್ರದ್ಧೆ ಇರಬೇಕು ।


ಎಲ್ಲಿ ಗಜಾನನ ಚರಿತ್ರೆಯ ಪಠಣವಾಗುವದೋ, ಅಲ್ಲಿ ಲಕ್ಷ್ಮಿಯು ಸದೈವ ವಾಸಿಸುವಳು । ದರಿದ್ರಿಗೆ ಧನಲಾಭವಾಗುವದು, ಮತ್ತು ರೋಗಿಯು ನಿರೋಗಿಯಾಗುವನು । ಯಾರಿಗೆ ಪುತ್ರರಿಲ್ಲವೋ, ಅವರಿಗೆ ಪುತ್ರನಾಗುವನು । ಅವನಿಗೆ ನಿಷ್ಕಪಟ ಮಿತ್ರನು ಸಿಗುವನು । ಈ ಗ್ರಂಥವನ್ನು ಓದುವವನಿಗೆ ಚಿಂದೆ ಇರಲಾರದು । ದಶಮಿ, ಏಕಾದಶಿ, ಮತ್ತು ದ್ವಾದಶಿಗೆ ಯಾರು ಗ್ರಂಥವನ್ನು ಓದುವನೋ, ಅವನು ಗಜಾನನ ಕೃಪೆಯಿಂದ ಭಾಗ್ಯವಂತನಾಗುವನು । ಯಾರು ಗುರು ಗ್ರಂಥವನ್ನು ಓದುವನೋ, ಅವನು ಗಜಾನನ ಕೃಪೆಯಿಂದ ಭಾಗ್ಯವಂತನಾಗುವನು । ಯಾರು ಗುರು ಪುಷ್ಯದ ಪವಿತ್ರದಿನ ಶುಚಿರ್ಭೂತನಾಗಿ ಒಂದು ಸ್ಥಳದಲ್ಲಿ ಕುಳಿತು ಈ ಗ್ರಂಥವನ್ನು ಓದುವಲ್ಲಿ, ಅವನ ಎಲ್ಲ ಇಚ್ಛೆಗಳು ಪೂರ್ಣವಾಗುವವು । ಎಲ್ಲಿ ಈ ಗ್ರಂಥವು ಪೂಜೆಯಲ್ಲಿರುವದೋ, ಅಲ್ಲಿ ಭೂತ ಭಾದೆ, ಹಾಗೂ ಬ್ರಹ್ಮಸಂಬಂಧದ ಕಷ್ಟಗಳು ಉಂಟಾಗುವದಿಲ್ಲ। ಯಾರು ಭಾವಿಕರೂ, ಅವರಿಗೆ ಇದರ ಪ್ರತ್ಯಯ ಉಂಟಾಗುವದು । ಕುಟಿಲ, ಹಾಗೂ ದುಷ್ಟ, ಜನರಿಗೆ ಎಲ್ಲಿಂದ ಪ್ರಚೀತಿ ಬರುವದು ಸಾಧ್ಯ? ಮಾನಸ ಸರೋವರವು ರಾಜಹಂಸಕ್ಕಾಗಿದೆ, ಅದೇ ರೀತಿ ೯ ಸ್ವಾಮಿ ಚರಿತ್ರೆಯು ಸಂತ ಸಜ್ಜನರಿಗಾಗಿ ಮಾನಸ ಸರೋವರವಿದೆ। ಹಿಂದಿನ ಕಾಲದಲ್ಲಿ ಜ್ಞಾನೇಶ್ವರ ಮಹಾರಾಜ, ಮೀರಾ, ನರಸಿ ಮೆಹತಾ, ಕಬೀರ, ನಾಮದೇವ, ಸಾವತಾ ಮಾಳಿ, ಚೋಖಾ ಮಹಾರ, ಗೋರಾ ಕುಂಭಾರ, ಬೋಧಲಾ, ಮತ್ತು ದಾಮಾಜಿಪಂತ, ಉಂಬರಖೇಡಿಯ ಏಕನಾಥ । ಅಮಳನೇರದ ಸಖಾರಾಮ । ದೇವ ಮಾಮಲೇದಾರ, ಯಶವಂತ । ಹಾಗೂ ಮಾಣಿಕ ಪ್ರಭು । ಅದೇ ರೀತಿಯಲ್ಲಿ ವರ್ಹಾಡ ಪ್ರಾಂತದಲ್ಲಿ ಸದ್ಗುರುನಾಥ ಗಜಾನನ ಸ್ವಾಮಿಗಳು । ಇವರೆಲ್ಲರಲ್ಲಿ ಯಾವ ಅಂತರವಿಲ್ಲ । ಶ್ರೀ ಗಜಾನನ ಪಾದಪದ್ಮಗಳಲ್ಲಿ ಪ್ರೀತಿ ಇಡಿರಿ ಎಂದು ಭಾವಿಕರಲ್ಲಿ ಪ್ರಾರ್ಥನೆ । ಅಂದರೆ ಜನ್ಮ ಮೃತ್ಯುವಿನ ಸುತ್ತುಗಳಿಂದ ಮುಕ್ತನಾಗುವನು । ಈ ಕಠಿಣ ಭವಸಾಗರವನ್ನು ದಾಟಿ ತಾವು ದೂರ ಹೋಗುವಿರಿ । ಹೇ ಸ್ವಾಮಿ ದಯಾಘನ । ದಾಸಗಣುಮೇಲೆ ಕೃಪೆ ಮಾಡಿರಿ । ಮತ್ತು ಅವನ ಯಾತನೆ ಹಾಗೂ ವಿಪತ್ತಿಗಳಿಂದ, ಅವನನ್ನು ಉಳಿಸಿರಿ । ನಾನು ನಿನ್ನ ಹೊಗಳುಭಟ್ಟ । ನನಗೆ ಸರಿ ದಾರಿಯನ್ನು ತೋರಿಸು । ನನ್ನ ಮನಸ್ಸಿನಿಂದ ದುರ್ವಾಸನೆಗಳನ್ನು ಓಡಿಸು । ಆಮರಣ ನಿನ್ನ ಸೇವೆಯಾಗಲಿ । ಸಂತ ಚರಣಗಳಲ್ಲಿ ಪ್ರೇಮವಿರಲಿ । ಶ್ರೀ ಗೋದಾತೀರದಲ್ಲಿ ಅಕ್ಷಯವಾಸವಾಗಲಿ । ನನಗೆ ಯಾಚನೆ ಮಾಡುವ ಸ್ಥಿತಿಯನ್ನು ತರಬೇಡಿರಿ । ಹೇ ಸಮರ್ಥ ದಾಸಗಣುವಿನ ಬಗ್ಗೆ ಆತ್ಮೀಯತೆಯನ್ನು ತೋರಿಸಿರಿ ।





ಶ್ರೀ ಗಜಾನನ ಮಹಾರಾಜರ ದೇಹ ತ್ಯಾಗ ಸ್ಥಳ, ಗಾದಿ ಮತ್ತು ಪಾದುಕೆಗಳು





ಶ್ರೀಗಳವರ ಗಜ ಮತ್ತು ಅಶ್ವ

ನಾನು ಸಕಲ ಸಂತರ ಚರಣಗಳ ಧೂಳು। ನನಗೆ ತಮ್ಮವನೆಂದು ನಂಬಿರಿ ಎಂದು ಈ ದಾಸಗಣುವಿನ ಪ್ರಾರ್ಥನೆ। ಹೇ ಸ್ವಾಮಿ ಗಜಾನನ ಯಾವ ರೀತಿ ಮನಸ್ಸಿನಲ್ಲಿ ಪ್ರೇರಣೆ ಉಂಟಾಗಿದೆ, ಅದೇ ರೀತಿ ನಾನು ಈ ಚರಿತ್ರೆಯನ್ನು ಹಾಡಿರುವೆನು । ಶೇಗಾಂವಿಯ ಮಠದಲ್ಲಿ ಕೆಲವು ಕಾಗದಗಳಿದ್ದವು । ಅವುಗಳನ್ನು ರತನಸಾ ನನಗೆ ತಂದು ತೋರಿಸಿದನು। ಅವುಗಳ ಆಧಾರದ ಮೇಲೆ ಈ ಚರಿತ್ರೆಯನ್ನು ಬರೆದಿರುವೆನು। ಇದರಲ್ಲಿ ಕಾಲ್ಪನಿಕ ಭಾಗವು ಇಲ್ಲ। ಒಂದು ವೇಳೆ ಇದರಲ್ಲಿ ಕೊರತೆ ಇದ್ದರೆ, ಅದಕ್ಕೆ ನಾನು ಜವಾಬುದಾರನಿಲ್ಲ। ಆದರೂ ಯಾವ ಕೊರತೆ ಇದ್ದರೂ ಹೇ ಗಜಾನನ ಸ್ವಾಮಿ, ನನಗೆ ಕ್ಷಮಿಸಿರಿ ಎಂದು ಪ್ರಾರ್ಥನೆ। ಶಕೆ ಹದಿನೆಂಟು ನೂರಾ ಅರವತ್ತು ಒಂದು ಪ್ರಮಾಥಿ ನಾಮ ಸಂವತ್ಸರದ ಚೈತ್ರ ಮಾಸದ ಪ್ರತಿಪದೆಗೆ ಶೇಗಾಂವಿಯಲ್ಲಿ ಈ ಗ್ರಂಥವು ಕಲಶದ ಮೇಲೆ ತಲುಪಿತು, ಯಾವುದನ್ನು ಗಜಾನನ ಮಹಾರಾಜರು ನನ್ನಿಂದ ಪೂರ್ಣಗೊಳಿಸಿದರು। ಸ್ವಸ್ತಿಶ್ರೀ ದಾಸಗಣು ವಿರಚಿತ ಈ ಶ್ರೀ ಗಜಾನನ ವಿಜಯ ಎಂಬ ಗ್ರಂಥವು ಭಾವಿಕರಿಗೆ ಭವಸಿಂಧುವನ್ನು ದಾಟಲು ನೌಕೆಯಾಗಲಿ।

॥ ಶುಭಂ ಭವತು ॥ ಶ್ರೀ ಹರಿಹರಾರ್ಪಣಮಸ್ತು॥